

— सत्यमेव जयते —

17/1/55

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರ : ಶ್ರೀ. ಎಸ್. ಬಿ. ಪಾಟೀಲ

ಬಿಡಿ ಪ್ರತಿ ೬ ಆಣೆ ｜ ಜನೇವರಿ ೧೯೫೫ ｜ ವಾ. ಚ. ರೂ. ೪-೦-೦

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೀರಗಾಂವಕರ, ಬಿ. ಎಸ್ ಸಿ., (ಆನರ್ಸ) ಬಿ. ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು:

ಶ್ರೀ. ಸಿ ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೪೪	ಜನೆವರಿ ೧೯೫೫	ಸಂಚಿಕೆ ೮

ಪರಿವಿಡಿ

೧. ಸಂಪಾದಕೀಯ ೧
೨. ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ
(೧ನೇ ಪ್ರಕರಣ)—ಶ್ರೀ. ಶಿಂತ್ರಿ ಬಸಪ್ಪನವರು ೫
೩. ಹೊಸ ಪಾಠ್ಯಕ್ರಮದಲ್ಲಿಯ ಹಿಂದೀಯ ಸ್ಥಾನ ಅನು : ಶ್ರೀ ಗುರುನಾಥ ಜೋಶಿ ೯
೪. ಶರಾವತಿಯಿಂದ ತುಂಗಭದ್ರೆಗೆ ಶ್ರೀ. ಆಯ್. ಎಸ್. ಬಿದರಿ ೧೨
೫. 'ಜ್ಞಾನೇಶ್ವರಿ' ಮರಾಠಿ ಗ್ರಂಥದಲ್ಲಿ ಕನ್ನಡ ಶಬ್ದ .... ಅನು: ಶ್ರೀ ತಟ್ಟಿ ಎಸ್. ಆರ್. ೧೬
೬. ಪ್ರಾಥಮಿಕ ಶಿಕ್ಷಣದಲ್ಲಿ ಶಾರೀರಿಕ ಶಿಕ್ಷಣದ ಮಹತ್ವ ಶ್ರೀ. ಎಸ್. ಎಸ್. ಬಿನ್ನಾಳ ೧೮
೭. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೦
ಗಂ. ಟ್ರೇ ಕಾ. ದ ಶಿಕ್ಷಕ ವಿದ್ಯಾರ್ಥಿಗಳ ಹಳ್ಳಿಯ ವಾಸ್ತವ್ಯದ ವರದಿ ೨೨
ಅಲ್ಪಾವಧಿ ನೇಯಿಗೆ ತರಬೇತಿ ವರ್ಗ ೨೩
ಹಾಯಸ್ಕೂಲ ಮತ್ತು ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆ ಬೆಳಗಾಂವ ೨೪
ರಾಷ್ಟ್ರೀಯ ಕ್ರೀಡಾ ಮಹೋತ್ಸವ, ಕಾರವಾರ ೨೫
ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ, ೧೯೫೫ (ಧಾರವಾಡ ಜಿಲ್ಲೆ) ೨೬
ಬಹುಮಾನ ವಿತರಣ ಸಮಾರಂಭ ೨೭

17/1/55

ಸಂಪಾದಕೀಯ

ಸುಸ್ಮರಣೀಯ ೧೯೫೪

೧೯೫೪ ರಲ್ಲಿ ಸಂಭವಿಸಿದ ಅಂತರರಾಷ್ಟ್ರೀಯ ಸಂಗತಿಗಳ ಸಿಂಹಾವಲೋಕನವನ್ನು ಮಾಡಿದಾಗ ವರುಷವು ಮುಗಿಯುತ್ತ ಬಂದಂತೆ ಆರ್ಥಿಕ ಹಾಗು ರಾಜಕೀಯ ರಂಗಗಳಲ್ಲಿ ಶುಭಾಶಯದ ಲಕ್ಷಣಗಳು ಗೋಚರವಾಗಹತ್ತಿದವೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ವರುಷದ ಪ್ರಾರಂಭದಲ್ಲಿ ಇಂಡೋಚಾಯಿನಾದಲ್ಲಿದ್ದ ಬಿಕ್ಕಟ್ಟು ಕೊನೆಗೆ ಇಲ್ಲದಾಯಿತು. ಕೋರಿಯಾದ ಒಪ್ಪಂದವು ಹೆಚ್ಚು ಅಡಚಣಿಗಳನ್ನು ತಂದೊಡ್ಡುವಂತೆ ಕಾಣಿಸಿತ್ತು. ರಶಿಯಾ ಹಾಗು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಯ ಅಭ್ಯಂತರಗಳು ಹೆಚ್ಚು ಬೆಳೆದು ಮತ್ತೊಂದು ಯುದ್ಧದ ಭಯವನ್ನೂ ಹುಟ್ಟಿಸಿದ್ದವು. ಪಾಕಿಸ್ತಾನ ಹಾಗು ಸಂಯುಕ್ತಸಂಸ್ಥಾನಗಳ ನಡುವಿನ ಸೈನಿಕ ಸಹಾಯದ ಒಪ್ಪಂದದಿಂದ ಪಾಕಿಸ್ತಾನ–ಹಿಂದುಸ್ತಾನಗಳ ಸಂಬಂಧಗಳಲ್ಲಿ ಕಾಠಿಣ್ಯವು ಪ್ರಬಲವಾಗುವ ಲಕ್ಷಣಗಳೂ ಇದ್ದವು. ಭಾರತದಲ್ಲಿ ಆಹಾರದ ಸಮಸ್ಯೆಯು ಇನ್ನೂ ಹಾಗೆಯೇ ಉಳಿದಿತ್ತು. ಆದರೆ ಸುದೈವದಿಂದ ವರುಷಾರಂಭದಲ್ಲಿದ್ದ ವಿಷಮ ಪರಿಸ್ಥಿತಿಯು ವರುಷಾಂತ್ಯಕ್ಕೆ ಉಳಿಯದೆ ಎಲ್ಲವೂ ಅನುಕೂಲವಾಗಿಯೇ ಪರಿಣಮಿಸಿದ್ದರಿಂದ ೧೯೫೪ ನಮ್ಮ ಸ್ಮೃತಿಪಥದಲ್ಲಿ ಸುಸ್ಮರಣೀಯವಾಗಿ ಉಳಿಯುವದು. ಸ್ಥೂಲಮಾನದಿಂದ ನೋಡಿದರೆ ಕಳೆದ ೨೫ ವರುಷಗಳಲ್ಲಿ ಪ್ರತ್ಯಕ್ಷ ಯುದ್ಧವಿಲ್ಲದ ವೇಳೆ ಇದೇ ಮೊಟ್ಟಮೊದಲು. ಹಿಂದಿನ ಯಾವ ವರುಷದಲ್ಲಿಯೂ ಪ್ರಮುಖ ರಾಷ್ಟ್ರಗಳ ಮುಖಂಡರು ಗಡುಚಾದ ಸಮಸ್ಯೆಗಳ ಪರಿಹಾರದ ಶೋಧನೆಗಾಗಿ ಸಮಾಲೋಚನೆ ಮಾಡಲು ಇಷ್ಟೊಂದು ಆಶಾದಾಯಕ ವಾತಾವರಣವು ಇರಲಿಲ್ಲ. ಇಂತಹ ಅನುಕೂಲ ಪರಿಸ್ಥಿತಿಯಲ್ಲಿ ಹೊಸ ವರುಷದಲ್ಲಿ ಕಾಲಿಟ್ಟಿದ್ದೇವೆ.

೧೯೫೫ರ ಆಶೆ-ಆಕಾಂಕ್ಷೆಗಳು

ಮುಂದಿನ ೧೨ ತಿಂಗಳುಗಳಲ್ಲಿ ವಿಶ್ವದಲ್ಲೆಲ್ಲ ಶಾಂತಿ-ಸುಖಗಳು ನೆಲೆಗೊಳ್ಳಲೆಂದು ಆಶಿಸುವದು ಸಹಜವಿದೆ. ಪೌರ್ವಾತ್ಯ ಹಾಗು ಪಾಶ್ಚಿಮಾತ್ಯ ರಾಷ್ಟ್ರಗಳ ನಡುವೆ ತಾತ್ಪೂರ್ತಿಕವಾಗಿಯಾದರೂ ಪರಸ್ಪರ ತಿಳುವಳಿಕೆಯಾಗುವದು ಅತ್ಯವಶ್ಯವಿದೆ. ಏನೇ ಆಗಲಿ ವಿಶ್ವ-ಶಾಂತಿಯನ್ನು ಸ್ಥಾಪಿಸುವ ಹಟವನ್ನು ಪ್ರತಿಯೊಂದು ಪ್ರಬಲ ರಾಷ್ಟ್ರವು ಹಿಡಿದರೆ ಎಷ್ಟೋ ಜಟಿಲ ಪ್ರಶ್ನೆಗಳು ಹಗುರಾಗುವವು. ಆ್ಯಟಂ ಬಾಂಬಿನ ಅಂತರರಾಷ್ಟ್ರೀಯ ನಿಯಂತ್ರಣಕ್ಕೆ ಒಪ್ಪುವದು, ಸಹಜೀವನ ತತ್ವವನ್ನು ಮನ್ನಿಸುವದು ಇವೆರಡು ಸಮಸ್ಯೆಗಳನ್ನು ಬಿಡಿಸಲು ವಿಶ್ವದ ನಾಯಕರು ಮುಂದೆ ಬರಬೇಕು. ವಿಶ್ವದ ಭವಿಷ್ಯವನ್ನೇ ನಿರ್ಧರಿಸುವ ಶಕ್ತಿ-ಯುಕ್ತಿ-ಸಾಮರ್ಥ್ಯಗಳುಳ್ಳ ಮಹಾಮುತ್ಸದ್ದಿಗಳ ಹೃದಯ-ಮನಸ್ಸುಗಳಲ್ಲಿ ನಿಜವಾದ ಪರಿವರ್ತನೆಯಾದರೆ ಯಾವದು ತಾನೇ ಅಸಾಧ್ಯ? ಭಾರತದ ಬಗ್ಗೆ ಹೇಳುವದಾದರೆ ಎಲ್ಲ ಕಡೆಗೂ ಆಶಾಕಿರಣಗಳು ಮೂಡುತ್ತಲಿವೆ. ಬರುವ ವರುಷದಲ್ಲಿ

ಇಂಡೋ-ಪಾಕ ಸಂಬಂಧಗಳಲ್ಲಿ ಚಿರ-ಸ್ನೇಹ ನೆಲೆಗೊಳ್ಳಲು ಬಲವಾದ ಲಕ್ಷಣಗಳು ಕಾಣಿಸತೊಡಗಿವೆ. ದ್ವಿತೀಯ ಪಂಚವಾರ್ಷಿಕ ಯೋಜನೆಯು ನಿಶ್ಚಿತ ಸ್ವರೂಪಕ್ಕೆ ಬರುವದಾಗಿ ಭರವಸೆ ಇದೆ. ಅತಿವೃಷ್ಟಿ ಅನಾವೃಷ್ಟಿ ಇವೇ ಮೊದಲಾದ ಅನಾಹುತಗಳು ಸಂಭವಿಸಲಿಕ್ಕಿಲ್ಲವೆಂಬ ಆಶೆಯೂ ಇದೆ. ಕಳೆದ ವರುಷ ಇಡೀ ಜಗತ್ತಿನಲ್ಲಿಯೇ ಮಿಗಿಲಾದ ಘನತೆಯನ್ನು ಪಡೆದ ನಮ್ಮ ಪ್ರಧಾನ ಮಂತ್ರಿಗಳಾದ ಶ್ರೀ ನೆಹರೂರವರ ನೇತೃತ್ವದಲ್ಲಿ ಭಾರತವು ವಿಶ್ವ-ಶಾಂತಿಸ್ಥಾಪನೆಯ ಮುಖಂಡತ್ವವನ್ನು ಯಶಸ್ವಿಯಾಗಿ ವಹಿಸಲೆಂದು ಹಾರೈಸುತ್ತೇವೆ.

ಮಾರ್ಶಲ್ ಟಿಟೋರವರ ಭಾರತ ಸಂದರ್ಶನ

ಯುಗೋಸ್ಲಾವದ ಅಧ್ಯಕ್ಷರಾದ ಮಾರ್ಶಲ್ ಟಿಟೋರವರು ಕಳೆದ ತಿಂಗಳ ಮಧ್ಯದಲ್ಲಿ ಭಾರತಕ್ಕೆ ಆಗಮಿಸಿದರು. ವಿವಿಧ ಆಂತರಿಕ ಮತ್ತು ವಿದೇಶ ಧೋರಣೆಯ ಸಮಸ್ಯೆಗಳ ಬಗ್ಗೆ ಪ್ರತ್ಯಕ್ಷ ಭೆಟ್ಟಿಯಾಗಿ ವಿಚಾರವಿನಿಮಯ ನಡೆಸುವದರಿಂದ ಉಭಯರಾಷ್ಟ್ರಗಳಲ್ಲಿ ಸಹಕಾರ ಬೆಳೆದು ಸಮಸ್ಯೆಗಳ ಪರಿಹಾರಕ್ಕೆ ಮಾತ್ರವಲ್ಲದೆ ಜಗತ್ತಿನ ರಾಷ್ಟ್ರಗಳಲ್ಲಿಯೂ ಸಹಕಾರ ಬೆಳೆದು ವಿಶ್ವ-ಶಾಂತಿ ಸ್ಥಾಪನೆಗೆ ಸಹಾಯವಾಗುವದು. ಈ ದೃಷ್ಟಿಯಿಂದ ಅವರ ಸಂದರ್ಶನವು ಬಹಳ ಮಹತ್ವದ್ದಾಗಿದೆ. ಚೀನ-ಭಾರತಗಳ ಪ್ರಧಾನ ಮಂತ್ರಿಗಳ ''ಪಂಚಶೀಲ''ದ ಪ್ರಕಟನಾದ ಕೆಲವೇ ದಿವಸಗಳಲ್ಲಿ ಮಾರ್ಶಲ್ ಟಿಟೋರವರು ಭಾರತಕ್ಕೆ ಸಂದರ್ಶನವಿತ್ತಿರುವದು ಇನ್ನೂ ಹೆಚ್ಚಿನ ಮಹತ್ವಕ್ಕೆ ಕಾರಣವಾಗಿದೆ. ಅವರು ಭಾರತದ ಆಮಂತ್ರಣವನ್ನು ಸ್ವೀಕರಿಸಿ ಇಲ್ಲಿಗೆ ಬಂದಿರುವದು ಉಭಯ ರಾಷ್ಟ್ರಗಳ ಸ್ನೇಹ ಬಾಂಧವ್ಯದ ಅಡಿಗಲ್ಲಾಗಿದೆ. ಅವರು ದಿಲ್ಲಿಗೆ ತಲುಪಿ ದೊಡನೆಯೇ ಭಾರತಕ್ಕೆ ಕೊಟ್ಟ ಸಂದೇಶ ಎಲ್ಲರನ್ನೂ ಆಕರ್ಷಿಸಿದೆ. ಭಾರತವು ಶಾಂತಿಪ್ರಿಯ ರಾಷ್ಟ್ರವೆಂದೂ ಉಚ್ಚನೈತಿಕ ಗುಣಗಳಿಂದ ಯುಕ್ತವಾದದ್ದೆಂದೂ ಜಗತ್ತೆಲ್ಲ ಅರಿತಿದೆ. ಭಾರತೀಯರು ತಮ್ಮ ಸ್ವಾರ್ಥಸಾಧನೆಗಾಗಿ ತಮ್ಮ ಇಡೀ ಇತಿಹಾಸದಲ್ಲಿಯೇ ಎಂದೂ ಎರಡನೆಯವರ ರಕ್ತ ಇಲ್ಲವೆ ಕಣ್ಣೀರನ್ನು ಸುರಿಸಿಲ್ಲವೆಂಬ ಬಗ್ಗೆ ಅಭಿಮಾನ ಪಡುವದು ಯಥಾರ್ಥವಾಗಿದೆಯೆಂಬ ಅಭಿಪ್ರಾಯವನ್ನಿತ್ತರು. ಐದುಸಾವಿರ ವರುಷಗಳಿಗಿಂತಲೂ ಹೆಚ್ಚು ಪ್ರಾಚೀನತೆಯುಳ್ಳ ನಮ್ಮ ದೇಶದ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳ ಮುಖಂಡರು ಈ ಪ್ರಕಾರ ಅಭಿಪ್ರಾಯಪಡುತ್ತಿರುವದು ಪ್ರತಿಯೊಬ್ಬ ಭಾರತೀಯನಿಗೆ ಹೆಮ್ಮೆಯೆನಿಸದಿರದು. ಇಂಥ ಉಜ್ವಲ ಪರಂಪರೆಯುಳ್ಳ ಭಾರತ ದೇಶವು ತನ್ನ ಅಮೋಘವಾದ ನೈತಿಕಬಲದಿಂದ ವಿಶ್ವಶಾಂತಿಗಾಗಿ ಪ್ರಯತ್ನಿಸುತ್ತಿರುವದರಲ್ಲಿ ಏನಾಶ್ಚರ್ಯ ? ಮಾರ್ಶಲ ಟಿಟೋ ಹಾಗು ಪ್ರಧಾನ ಮಂತ್ರಿ ಶ್ರೀ ನೆಹರೂರವರ ಸಂಯುಕ್ತ ಹೇಳಿಕೆಯಲ್ಲಿ ಅಡಕವಾದ ಅಂಶಗಳು ಜಗತ್ತಿನ ಮೈತ್ರೈಕ್ಯವನ್ನೂ, ಯುದ್ಧನಿಷೇದ ಪ್ರವೃತ್ತಿಯನ್ನೂ ಮತ್ತು ಜಾಗತಿಕ ಸಮಸ್ಯೆಗಳನ್ನೂ ಪರಸ್ಪರ ಸಹಕಾರ ಮತ್ತು ಒಪ್ಪಂದದಿಂದ ಬಿಡಿಸಬೇಕೆನ್ನುವ ಮನೋವೃತ್ತಿಯನ್ನೂ ವ್ಯಕ್ತ ಮಾಡುತ್ತವೆ. ಮಾರ್ಶಲ್ ಟಿಟೋ ಹಾಗು ಅವರ ಪರಿವಾರದವರಿಗೆ ಭಾರತ ಸಂಚಾರ ಸರ್ವಸುಖಮಯವಾಗಲಿ.

ಶೈಕ್ಷಣಿಕ ಸಭೆಗಳು ಹಾಗೂ ತಜ್ಞರ ಅಭಿಪ್ರಾಯಗಳು

ಸಾಮಾನ್ಯವಾಗಿ ಡಿಸೆಂಬರ ತಿಂಗಳಲ್ಲಿ ಅಖಿಲ ಭಾರತೀಯ ಸಭೆ-ಸಮ್ಮೇಲನ-ಸಮಾರಂಭಗಳ ಸುಗ್ಗಿಯೇ ಸುಗ್ಗಿ. ವಿಜ್ಞಾನ, ಚರಿತ್ರೆ, ಶಿಕ್ಷಣ ಮುಂತಾದ ಬೌದ್ಧಿಕ ಮಹಾಸಭೆಗಳು ಈ ತಿಂಗಳಲ್ಲಿ ನಡೆಯುವವು. ತಜ್ಞರಾದ ಅಧ್ಯಕ್ಷ-ಉದ್ಘಾಟಕರಿಂದ ಹೊರಬಂದ ಮುತ್ತಿನಂತಹ ಮಾತುಗಳು ನಮಗೆ ಮಾರ್ಗದರ್ಶನ ಮಾಡುತ್ತಿವೆ. ಮುಖ್ಯ ಮಂತ್ರಿಗಳಾದ ಶ್ರೀ ನೆಹರೂರವರು ದಿನಾಂಕ ೨೪-೧೨-೫೪ ರಂದು ಶಾಂತಿನಿಕೇತನದಲ್ಲಿ ವಿಶ್ವಭಾರತಿ-ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಭಾಷಣ ಮಾಡುತ್ತ ಭಾರತದ ನಾನಾಭಾಗದ ವಿದ್ಯಾರ್ಥಿಗಳು ಇಲ್ಲಿ ಸಹಸ್ರಾವಧಿ ವರುಷ ಬದುಕಿಕೊಂಡು ಬಂದ ಭಾರತದ ಸಂಸ್ಕೃತಿಯನ್ನು ಅಭ್ಯಸಿಸಿ ಭಾರತದ ಐಕ್ಯವನ್ನು ಬೆಳೆಸುತ್ತಿದ್ದಾರೆ. ಬೇರೆ ಕಡೆಗಳಲ್ಲಿ ಶಿಕ್ಷಕರೂ ವಿದ್ಯಾರ್ಥಿಗಳೂ ಪರಸ್ಪರ ಶತ್ರುಗಳೆಂದು

ಸಂಪಾದಕೀಯ

ಭಾವಿಸುವದು ತಮಗೆ ಆಶ್ಚರ್ಯವನ್ನುಂಟು ಮಾಡಿದೆಯೆಂದೂ, ಕಾರಖಾನೆಗಳಲ್ಲಿ ಕೆಲಸಗಾರರು ಮಾಡುವಂತೆ ವಿದ್ಯಾರ್ಥಿಗಳು ಹರತಾಳ ಸಂಪುಗಳನ್ನು ನಡೆಸುವದು ವಿಷಾದಕರವಾಗಿದೆಯೆಂದೂ ಹೇಳಿ ಅಂಥ ಪರಿಸ್ಥಿತಿಯಲ್ಲಿ ಶಿಕ್ಷಣವು ಪ್ರಗತಿಹೊಂದಲಾರದೆಂದು ಸ್ಪಷ್ಟಮಾಡಿದರು. ಭಾರತದ ಪ್ರಾಚೀನ ಪರಂಪರೆಯಂತೆ ಶಿಕ್ಷಕರು ಹಾಗು ವಿದ್ಯಾರ್ಥಿಗಳಲ್ಲಿ ಸಂಬಂಧವಿರದಿದ್ದರೆ ಶಿಕ್ಷಣವು ಪ್ರಗತಿಯಾಗುವ ಬದಲು ಕುಂಠಿತವಾಗುತ್ತದೆಂದು ತಮ್ಮ ಅಭಿಪ್ರಾಯವನ್ನಿತ್ತರು.

ದಿನಾಂಕ ೨೫-೧೨-೫೧ ರಂದು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಮೊರಾರಜಿ ದೇಸಾಯಿಯವರು ಅಹಮ್ಮದಾಬಾದದ ಮಾಧ್ಯಮಿಕ ಶಿಕ್ಷಕರ ತರಬೇತಿ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣದಲ್ಲಿ ಶಿಕ್ಷಕರ ಬಗ್ಗೆ ಕೆಲವು ಮಾರ್ಮಿಕ ಮಾತುಗಳನ್ನು ಹೇಳಿರುವರು. ಜೀವನದ ಬೇರೆ ರಂಗಗಳಲ್ಲಿರುವವರ ಗಳಿಕೆಯೊಂದಿಗೆ ಶಿಕ್ಷಕರು ತಮ್ಮ ಗಳಿಕೆಯನ್ನು ತುಲನೆಮಾಡಬಾರದು. ಏಕೆಂದರೆ ಮನುಷ್ಯನ ಯೋಗ್ಯತೆಯನ್ನು ಅಳೆಯುವದು ಆತನ ಗಳಿಕೆಯಲ್ಲ. ಶಿಕ್ಷಕರಿಗೆ ಜೀವನವನ್ನು ಬಡತನದ ಭವಣೆ ಬರುವದು ನಿಜ. ಆದರೆ ಅವರು ಅದನ್ನೇ ಕೂಗಾಡುತ್ತ ಹೊರಟರೆ ಆತ್ಮವಿಶ್ವಾಸವಿಲ್ಲದ ಜನಾಂಗವನ್ನು ಸಿದ್ಧಗೊಳಿಸುತ್ತಾರೆ. ಸ್ವಂತದ ತ್ಯಾಗದಿಂದ ಉಳಿದವರಲ್ಲಿ ಉತ್ಸಾಹ ಸ್ಫೂರ್ತಿಗಳನ್ನು ತುಂಬುವದರಲ್ಲಿಯೇ ಘನತೆಯಿದೆ. ಈ ನಿಟ್ಟಿನಲ್ಲಿ ರಾಷ್ಟ್ರವು ಶಿಕ್ಷಕರಿಗೆ ಹೆಚ್ಚಾಗಿ ಗೌರವ ಕೊಡುತ್ತಿದ್ದರೆ ಶಿಕ್ಷಕರು ಆ ಬಗ್ಗೆ ಪ್ರಯತ್ನ ಪಡಬೇಕು ಎಂದು ಒಳ್ಳೇ ಕಳಕಳಿಯಿಂದ ಹೇಳಿದರು.

ದಿನಾಂಕ ೨೮-೧೨-೫೪ ರಂದು ಬಿಹಾರದ ರಾಜ್ಯಪಾಲರಾದ ಶ್ರೀ ಆರ್. ಆರ್. ದಿವಾಕರರು ಪಾಟಣಾದಲ್ಲಿ ಕೂಡಿದ ಅಖಿಲಭಾರತದ ಶೈಕ್ಷಣಿಕ ಪರಿಷತ್ತನ್ನು ಉದ್ಘಾಟಿಸುವಾಗ ಶಿಕ್ಷಣ ರಂಗದಲ್ಲಿ ಇತ್ತೀಚೆಗೆ ಮಜದೂರ ಸಂಘದ ಮನೋಭಾವನೆಯು ಕಂಡುಬರುತ್ತಿರುವದು ದುರ್ದೈವದ ಸಂಗತಿಯೆಂದು ಹೇಳಿದರು. ಶಿಕ್ಷಕರು ಹಾಗು ವಿದ್ಯಾರ್ಥಿಗಳು ಈ ಸಂಘಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ವ್ಯಾಸಂಗ ಕ್ಷೇತ್ರದಲ್ಲಿ ಇದಕ್ಕೆಲ್ಲ ಸ್ಥಳವಿರುವದಿಲ್ಲ. ಜ್ಞಾನಮಂದಿರವನ್ನು ಈ ಅನಿಷ್ಟದಿಂದ ಪಾರುಮಾಡಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕಾಗಿದೆಯೆಂದು ಸೂಚಿಸಿದರು. ಮಾನವನ ದೇಹ, ಮನಸ್ಸು, ಬುದ್ಧಿ, ಭಾವನೆ ಹಾಗು ಆತ್ಮಗಳ ಬೆಳವಣಿಗೆಗೆ ಅವಕಾಶ ನೀಡುವ ಮತ್ತು ಈ ಬೆಳವಣಿಗೆಯು ಸಮಾಜಕ್ಕೆ ಉಪಯುಕ್ತವಾಗುವಂತೆ ಮಾಡುವ ಶಿಕ್ಷಣವೇ ನಿಜವಾದ ಶಿಕ್ಷಣವೆಂದು ತಮ್ಮ ಅಭಿಪ್ರಾಯವನ್ನಿತ್ತರು.

ಅದೇ ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದ ಡಾ. ಆರ್. ಪಿ. ಪರಾಂಜಪೆಯವರು ತಮ್ಮ ಭಾಷಣದಲ್ಲಿ ಶಿಕ್ಷಕರು ಹಾಗು ವಿದ್ಯಾರ್ಥಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಿದರು. ಉತ್ತಮ ರೀತಿಯಿಂದ ಕೆಲಸ ಮಾಡುವ ಶಿಕ್ಷಕರು ಬೇಕಾಗಿದ್ದಾರೆ. ಅವರನ್ನು ಒಳ್ಳೇ ರೀತಿಯಿಂದ ನಡೆಸಿಕೊಳ್ಳಬೇಕು. ಶಿಕ್ಷಕರಾದರೂ ಹೊಣೆಗಾರಿಕೆಯಿಂದ ಕೆಲಸ ಮಾಡಬೇಕು. ತಮ್ಮ ನೌಕರಿಯನ್ನು ಉಳಿಸಿಕೊಳ್ಳಲು ಅವಶ್ಯವಿರುವ ಕನಿಷ್ಠ ಪ್ರಮಾಣದ ಕೆಲಸ ಮಾಡುವ ಕೂಲಿಕಾರನ ದೃಷ್ಟಿ ಅವರಿಲ್ಲರಬಾರದು. ಅವರು ಶಿಕ್ಷಣವೊಂದು ಸತ್ಕಾರ್ಯವೆಂದು ಬಗೆದು ಮನಸ್ಸಾಕ್ಷಿಯಾಗಿ ದುಡಿಯಬೇಕು. ತಮ್ಮ ಶಾಲೆಯಲ್ಲಿಯ ಕೆಲಸವಲ್ಲದೆ ಅವರು ವಿದ್ಯಾರ್ಥಿಗಳ ಬೌದ್ಧಿಕ ಹಾಗು ಮಾನಸಿಕ ವಿಕಾಸದ ಕಡೆಗೂ ಲಕ್ಷಕೊಡಬೇಕು. ವಿದ್ಯಾರ್ಥಿಯು ಶಿಕ್ಷಕನನ್ನು ಮಾರ್ಗದರ್ಶಕ, ಮಿತ್ರ ಹಾಗು ತತ್ವಜ್ಞಾನಿಯೆಂದು ಭಾವಿಸಬೇಕು. ಇಂದು ದೇಶದ ಶೈಕ್ಷಣಿಕ ಜೀವನದಲ್ಲಿ ಖಾಸಗಿ ಟ್ಯೂಶನ್ ವರ್ಗಗಳು ಮತ್ತು ಕೋಚಿಂಗ ತರಗತಿಗಳೆಂಬ ಅನಿಷ್ಟಗಳು ತಲೆಯೆತ್ತಿವೆ. ಶಾಲೆಗಳಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಅಭ್ಯಾಸ ಮಾಡುತ್ತಿಲ್ಲ ಇಲ್ಲವೆ ಶಿಕ್ಷಕರು ಸರಿಯಾಗಿ ಕಲಿಸುತ್ತಿಲ್ಲ ಎಂದು ಇದರ ಅರ್ಥವಾಗುವದು. ಇದು ಶಿಕ್ಷಕರ ವೃತ್ತಿಗೆ ಶೋಭಿಸುವದಿಲ್ಲ. ವಿದ್ಯಾರ್ಥಿಗಳ ವೃಂದದಲ್ಲಿ ಇಂದು ಶಿಸ್ತಿನ ಅಭಾವವಾಗುತ್ತಿರುವದು. ಯುವಕರ ಪೀಳಿಗೆಯು ರಾಷ್ಟ್ರದ ಹೊಣೆಗಾರ ನಾಗರಿಕರೂ ಹಾಗು ಸೊತ್ತು

ಪ್ರಾಥಮಿಕ ಶಿಕ್ಷಣ

ಆಗಬೇಕಾದರೆ ಅವರ ಪರಿಸ್ಥಿತಿ ಸುಧಾರಿಸಬೇಕು. ವಿದ್ಯಾರ್ಥಿಗಳನ್ನು ಒಳ್ಳೇ ಮಾರ್ಗಕ್ಕೆ ಹಚ್ಚುವದು ಶಿಕ್ಷಕರ ವಿಶೇಷ ಕರ್ತವ್ಯವಾಗಿದೆಯೆಂಬ ಮನನೀಯ ಹಿತನುಡಿಗಳನ್ನು ಆಡಿ ಶಿಕ್ಷಕರಿಗೆ ಎಚ್ಚರಿಕೆಯನ್ನು ಕೊಟ್ಟರು.

ಸಬರಕಾಂತದಲ್ಲಿ ಪ್ರಾಥಮಿಕ ಶಿಕ್ಷಕರ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿ ಶಿಕ್ಷಣ ಮಂತ್ರಿಗಳಾದ ಶ್ರೀ. ದಿನಕರರಾವ ದೇಸಾಯಿಯವರು ಪ್ರಾಥಮಿಕ ಶಿಕ್ಷಣದಲ್ಲಿ ಈ ವರುಷದ ಧೋರಣೆಯ ಬಗ್ಗೆ ವಿವರಿಸುತ್ತ ೫೦೦ ಜನಸಂಖ್ಯೆಗಿಂತ ಕಡಿಮೆ ಜನಸಂಖ್ಯೆಯನ್ನು ಪಡೆದಿರುವ ಹಳ್ಳಿಗಳಲ್ಲಿ ಶಿಕ್ಷಣ ಸವಲತ್ತನ್ನೊದಗಿಸಲು ಶೀಘ್ರದಲ್ಲಿಯೇ ಗ್ರುಪ್ ಶಾಲೆಗಳನ್ನು ತೆಗೆಯಲಾಗುವದೆಂದೂ ಮುಂಬಯಿ ರಾಜ್ಯವು ಶಿಕ್ಷಣಕ್ಕೆ ಭಾರತ ಪ್ರಜಾರಾಜ್ಯದ ಬೇರೆ ಯಾವದೇ ರಾಜ್ಯವು ಮೀಸಲಿಟ್ಟಿರುವದಕ್ಕಿಂತ ಹೆಚ್ಚು ಶೇಕಡಾ ಪ್ರಮಾಣದ ಹಣವನ್ನು ವೆಚ್ಚ ಮಾಡುತ್ತಿದೆಯೆಂದೂ ಹೇಳಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಹೊಸಶಾಲೆಗಳನ್ನು ಸ್ಥಾಪಿಸುವದರಲ್ಲಿ ಸರಕಾರದೊಡನೆ ಸಹಕರಿಸಲು ಹೆಚ್ಚೆಚ್ಚು ಹಳ್ಳಿಗಳು ಮುಂದೆ ಬರುತ್ತಿವೆಯೆಂದು ತಿಳಿಸಿದರು. ಶಿಕ್ಷಕರ ವೇತನ ಪ್ರಮಾಣ, ನೌಕರಿ ನಿಯಮಗಳು ಹಾಗು ಅವರ ಆರ್ಥಿಕ ಸಮಸ್ಯೆಗಳನ್ನು ಪರಿಶೀಲಿಸಿದಾಗ ಮುಂಬಯಿ ರಾಜ್ಯದ ಪ್ರಾಥಮಿಕ ಶಿಕ್ಷಕರು ಭಾರತದ ಇನ್ನಾವದೇ ರಾಜ್ಯದ ಪ್ರಾಥಮಿಕ ಶಿಕ್ಷಕರಿಗಿಂತ ಕಡಿಮೆ ವೇತನವನ್ನು ಪಡೆಯುತ್ತಿಲ್ಲವೆಂಬದು ವ್ಯಕ್ತಪಡುತ್ತದೆ. ಆದರೂ ಸರಕಾರವು ಶಿಕ್ಷಕರ ಅಗತ್ಯಗಳನ್ನು ಸಹಾನುಭೂತಿಯಿಂದ ಮನಗಂಡಿದೆ. ದೇಶದ ಆರ್ಥಿಕ ಪರಿಸ್ಥಿತಿಯು ಸುಧಾರಿಸಿದಂತೆ ಶಿಕ್ಷಕರ ಜೀವನ ಪರಿಸ್ಥಿತಿಯು ಉತಮ ಗೊಳ್ಳುವದು. ಸರಕಾರವು ಹಲವು ಹಣಕಾಸಿನ ಬಾಬುಗಳಿಗೆ ಗಮನ ಕೊಡಬೇಕಾಗಿರುವದರಿಂದ ಶಿಕ್ಷಕರ ಎಲ್ಲ ಬೇಡಿಕೆಗಳನ್ನೂ ಈ ಕೂಡಲೆ ಸಲ್ಲಿಸಲು ಅದಕ್ಕೆ ಸಾಧ್ಯವಾಗದು. ಆದರೆ ಶಿಕ್ಷಕರು ತಮ್ಮ ಅಭ್ಯಾಸವನ್ನು ಉಪೇಕ್ಷಿಸದೆ ತಾಳ್ಮೆ ಹಾಗು ಉತ್ಸಾಹಗಳಿಂದ ತಮ್ಮ ಕರ್ತವ್ಯವನ್ನು ನೆರವೇರಿಸಬೇಕೆಂದು ಶಿಕ್ಷಕರನ್ನು ಕೇಳಿಕೊಂಡರು.

ಸ್ತುತ್ಯ ಉಪಕ್ರಮ

ಹುಬ್ಬಳ್ಳಿಯ ಮುನಸಿಪಲ್ ಸ್ಕೂಲಬೋರ್ಡಿನವರು ತಮ್ಮ ಆಡಳಿತದಲ್ಲಿರುವ ಶಾಲೆಗಳಲ್ಲಿ ಪ್ರತಿ ವರುಷ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ಎಲ್ಲಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಸಾಗುವ ಶಾಲೆಗೆ ಕರ್ನಾಟಕ ವಿಶ್ವವಿದ್ಯಾಲಯ ಉಪಕುಲಪತಿಗಳಾದ ರ್‍ಯಾಂಗ್ಲರ ಡಿ. ಸಿ. ಪಾವಟೆಯವರ ಹೆಸರಿನಿಂದ ಶೀಲ್ಡನ್ನು ಕೊಡಬೇಕೆಂದು ಮಾಡಿರುವ ಉಪಕ್ರಮವು ಸ್ವಾಗತಾರ್ಹವಾಗಿದೆ. ಇದರಿಂದ ಶಿಕ್ಷಕರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಹೊಸ ಹುರುಪು ಹುಮ್ಮಸುಗಳು ಹುಟ್ಟಿ ಹೆಚ್ಚೆಚ್ಚು ವಿದ್ಯಾರ್ಥಿಗಳು ಪಾಸಾಗಿ ತಮ್ಮ ಶಾಲೆಗಳಿಗೂ ಗುರುಗಳಿಗೂ ಕೀರ್ತಿ ತರುವದರಲ್ಲಿ ಸಂದೇಹವಿಲ್ಲ. ಪ್ರತಿಯೊಂದು ಬೋರ್ಡಿನವರು ಈ ಪ್ರಕಾರದ ಸವಲತ್ತುಗಳನ್ನು ಕಲ್ಪಿಸಿ ಶಿಕ್ಷಕರ ಕೆಲಸದಲ್ಲಿ ಉತ್ಸಾಹ ಹೆಚ್ಚಾಗುವಂತೆ ಮಾಡಿದರೆ ಅದೆಷ್ಟೋ ಒಳ್ಳೇದೆಂದು ಬೇರೆ ಹೇಳಬೇಕಾಗಿಲ್ಲ. ಇಂಥ ಪಾರಿತೋಷಕಗಳನ್ನು ಧಾರವಾಡ ಜಿಲ್ಲಾ ಸ್ಕೂಲ ಬೋರ್ಡಿನವರು ಪ್ರತಿವರುಷ ಕೊಡಹತ್ತಿದ್ದಾರೆ.

ಶಿಕ್ಷಣ ಮಂತ್ರಿಗಳ ಸಂದರ್ಶನ

ಇದೇ ಗುರುವಾರ ದಿನಾಂಕ ೧೩ರಂದು ಶಿಕ್ಷಣ ಮಂತ್ರಿಗಳಾದ ಶ್ರೀ ದಿನಕರರಾವ ದೇಸಾಯಿಯವರು ತಮ್ಮ ಸಂಸ್ಥೆಗೆ ಸಂದರ್ಶನ ಕೊಟ್ಟು ಅದೇ ದಿನ ಕನ್ನಡ ಭಾಷಾಭೂಷಣರೂ ಮೊದಲನೆಯ ಪ್ರಿನ್ಸಿಪಾಲರೂ ಆದ ಕೈ. ವಾ. ಡೆಪ್ಯೂಟಿ ಚೆನ್ನಬಸವಪ್ಪನವರ ಭಾವಚಿತ್ರದ ಅನಾವರಣವನ್ನು ನೆರವೇರಿಸುವರು. ಈ ಸಮಾರಂಭದ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಹೆಚ್ಚು ಬರೆಯುವೆವು. ಡೆಪ್ಯೂಟಿ ಚೆನ್ನಬಸವಪ್ಪನವರ ವ್ಯಕ್ತಿತ್ವ ಹಾಗು ಅವರ ಸೇವೆಗಳ ಬಗ್ಗೆ ಲೇಖನಗಳು ಬಂದರೆ ಅವುಗಳನ್ನು ಸಹ ಮುಂದಿನ ಸಂಚಿಕೆಯಲ್ಲಿ ಸೇರ್ಪಡಿಸುವೆವು.

ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ

(ಲೇಖಾಂಕ ೨)

ಅನುವಾದಕರು:— ಶ್ರೀ. ಶಿಂತ್ರಿ ಬಸಪ್ಪನವರು. ಬಿ. ಎ., ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್ಸ್‌ಪೆಕ್ಟರ, ದಕ್ಷಿಣಭಾಗ, ಧಾರವಾಡ.

೧ನೆಯ ಪ್ರಕರಣ

ಶಿಕ್ಷಕ

ನಮ್ಮ ದೇಶದಲ್ಲಿ ಶಿಕ್ಷಕನಿಗೆ ವೈಯಕ್ತಿಕವಾಗಿ ಅವ-ನಲ್ಲಿರತಕ್ಕ ಹಲವು ಆದರ್ಶ ಶೀಲ-ಗುಣಾದಿಗಳ ಸಲುವಾಗಿ ಗೌರವಾದರಗಳನ್ನು ಸಲ್ಲಿಸುವ ಪರಂಪರೆಯು ಎಂದಿನಿಂದಲೋ ಸಾಗಿ ಬಂದಿದೆ. ಆ ಗೌರವಾದರಗಳನ್ನು ಹೊಂದುವ ಅರ್ಹತೆಯನ್ನು ಪಡೆಯಲು ತನ್ನ ಕೈಯಲ್ಲಿ ಕಲಿಯುವ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ಹಾಗೂ ತನ್ನ ಕರ್ತವ್ಯವನ್ನು ಪೂರೈಸುವದರಲ್ಲಿ ಸಮಾಧಾನವನ್ನು ಹೊಂದಲು ಅವಶ್ಯವಾಗಿ ಬೇಕಾಗುವ ಗುಣಗಳಾವವು ಮತ್ತು ಯೋಗ್ಯತೆಗಳಾವವು ಎಂಬುದನ್ನು ಕಂಡುಹಿಡಿದು ಅವುಗಳನ್ನೆಲ್ಲ ಸಂಪಾದಿಸಲು ಹೆಣಗಾಡಬೇಕಲ್ಲವೇ ?

ವೃತ್ತಿಯ ಮೇಲೆ ಪ್ರೇಮ

"ನಾನು ಶಿಕ್ಷಕನಾಗಲು ಅರ್ಹನು, ಶಿಕ್ಷಕನಾಗಿಯೇ ತೀರುವೆನು" ಎಂಬ ಉತ್ಕಟೇಚ್ಛೆಯು ಇಲ್ಲದ ಹೊರತು ಯಾರೂ ಶಿಕ್ಷಕರಾಗುವ ಗೋಜಿಗೆ ಹೋಗಬಾರದು. ಶಿಕ್ಷಕನು ರಾಷ್ಟ್ರವನ್ನು ಕಟ್ಟುವ ಶಿಲ್ಪಿಯು. ಬೇರಾವ ನೌಕರಿಯು ಸಿಗಲಿಲ್ಲವೆಂದೋ ಇಲ್ಲವೆ ಉಪಜೀವನವನ್ನು ಸಾಗಿಸಬೇಕೆಂಬ ಉದ್ದೇಶದಿಂದಲೋ ಶಿಕ್ಷಕನಾಗಲು ಬಯಸಿದರೆ, ಆ ವೃತ್ತಿಗೆ ಅಗತ್ಯವಾಗಿ ಬೇಕಾಗುವ ಹುರುಪುಹುಮ್ಮಸುಗಳೂ ಅಭಿರುಚಿ—ಆಸಕ್ತಿಗಳೂ ಆತನಲ್ಲಿ ತಲೆದೋರಲಾರವು. ಅವು ಆತನಲ್ಲಿ ಉದಯಿಸದಿದ್ದರೆ, ಯಶಸ್ಸು ಸಿಗುವ ಮಾತು ದೂರೇ ಉಳಿಯಿತು. ಬೇಸರಿಕೆಯಿಲ್ಲದೆ ತಾಳ್ಮೆಯಿಂದ ಆ ವೃತ್ತಿಯಲ್ಲಿ ಕೆಲಸ ಮಾಡುವ ಆವಶ್ಯಕತೆಯಿದೆ. ಆದುದರಿಂದ, ಹುರುಪು-ಹುಮ್ಮಸುಗಳೂ ಅಭಿರುಚಿ-ಆಸಕ್ತಿಗಳೂ ಆತನಲ್ಲಿ ಮೈದೋರದಿದ್ದರೆ, ಆತನು ಮಕ್ಕಳನ್ನು ಹುರಿದುಂಬಿಸಲಾರ, ಅವರಿಗೆ ಸಹಾಯಕನಾಗಲಾರ, ಹಾಗೂ ಅವರನ್ನು ಬುದ್ಧಿವಂತರನ್ನಾಗಿಯೂ ಒಳ್ಳೆಯ ಮೈಕಟ್ಟುಳ್ಳವರನ್ನಾಗಿಯೂ ಮಾಡಲಾರ.

ಧ್ಯೇಯದ ಮೇಲೆ ಕಣ್ಣು

ತನ್ನ ಕೆಲಸದ ಉದ್ದೇಶದ ಬಗೆಗೆ ನಿಚ್ಚಳವಾದ ಅರಿವು ಆತನಿಗಿರಬೇಕು. ಶಿಕ್ಷಣದ ಗೊತ್ತುಗುರಿಗಳು ಹಲವರಿಂದ ಹಲವು ತೆರನಾಗಿ ಪ್ರತಿಪಾದಿಸಲ್ಪಟ್ಟಿವೆ. ಶಿಕ್ಷಣದ ಧ್ಯೇಯವು ಹಲವರು ಜ್ಞಾನ-ಪಾಂಡಿತ್ಯಗಳ ಸಂಪಾದನೆಯೆಂದೂ, ಹಲವರು ಪ್ರಜಾಪ್ರಭುತ್ವದಲ್ಲಿರಲು ಅರ್ಹರನ್ನಾಗಿ ಮಾಡುವುದೆಂದೂ, ಹಲವರು ಶೀಲ-ಸ್ವಭಾವಗಳ ಸಂವರ್ಧನೆಯೆಂದೂ, ಹಲವರು ಸರ್ವಾಂಗ ಸುಂದರ ವಿಕಾಸವೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಶಿಕ್ಷಕನು ಅವುಗಳನ್ನೆಲ್ಲ ಮನದಂದು ಸಾಲೆಯಲ್ಲಿಯ ತನ್ನ ನಿತ್ಯ ವ್ಯವಹಾರದಲ್ಲಿ ಅವುಗಳನ್ನು ಹೇಗೆ ಕಾರ್ಯರೂಪಕ್ಕೆ ತರಬೇಕೆಂಬುದನ್ನು ಚನ್ನಾಗಿ

ತಿಳಕೊಳ್ಳುವದೊಳಿತು. ಮುಂದೆ ಬರಲಿರುವ ಸಾಮಾಜಿಕ ಪರಿಸ್ಥಿತಿಯು ಯಾವ ಪ್ರಕಾರದ್ದಾಗುವದು, ಅದಕ್ಕೆ ಒಗ್ಗುವಂತೆ ಮಕ್ಕಳು ಹೇಗೆ ತಯಾರಾಗಬೇಕು, ಮಗುವಿನ ವ್ಯಕ್ತಿತ್ವವನ್ನು ರೂಪುಗೊಳಿಸಲು ಸಾಲೆಯಲ್ಲಿಯ ಸಾಂಘಿಕ ಹಾಗೂ ವೈಯಕ್ತಿಕ ಚಟುವಟಿಕೆಗಳು ಹೇಗೆ ಸಹಾಯವನ್ನು ನೀಡಬಲ್ಲವು, ಇವೆಲ್ಲವು ಶಿಕ್ಷಕನಿಗೆ ಮಹತ್ವದ ವಿಷಯಗಳಲ್ಲವೇ ? ಹಿಂದಿನ ತನ್ನ ಅನುಭವಗಳಿಂದ ಸ್ಫೂರ್ತಿಯನ್ನು ಪಡೆಯಬೇಕು, ಮುಂದಿನ ಧ್ಯೇಯ-ಧೋರಣಗಳ ಮೇಲೆ ಅರ್ಥಾತ್ ಮಕ್ಕಳ ಆಗು-ಹೋಗುಗಳ ಮೇಲೆ ಕಣ್ಣಿಟ್ಟಿರಬೇಕು.

ಉತ್ತಮ ಆರೋಗ್ಯ

ಅಂಗಹೀನತ್ವ-ಅಂಗದೌರ್ಬಲ್ಯಗಳಿಲ್ಲದೆ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ಚನ್ನಾಗಿ ಕಾಯ್ದುಕೊಂಡಿರುವದು ಪ್ರತಿ ಮಾನವನಿಗೆ ಮಹತ್ವದ ವಿಷಯ; ವಿಶೇಷತಃ ಶಿಕ್ಷಕನಿಗೆ ಅದರ ಮಹತ್ವವು ಅಪ್ಟಿಷ್ಟಲ್ಲ. ಯಾಕಂದರೆ, ವೈಯಕ್ತಿಕ ಪ್ರಭಾವ, ಉದ್ಯೋಗಶೀಲತೆ, ಉಲ್ಹಾಸವೃತ್ತಿ, ಕೆಲಸ ಮಾಡುವ ಉತ್ಸುಕತೆ, ಇವುಗಳನ್ನೆಲ್ಲ ಪ್ರದರ್ಶಿಸಬಲ್ಲವನಿರಬೇಕು. ಅನ್ನೊಂಬು ಯೋಗ್ಯತೆಯು ಇಲ್ಲದಿದ್ದರೆ, ಆತನಿಗೆ ಶಿಕ್ಷಕವೃತ್ತಿಯು ಮುಳ್ಳಿನ ಹಾಸಿಗೆಯಂತಾಗಿ ಶಿಸ್ತನ್ನು ಕಾಪಾಡುವದು ಶಕ್ಯವೇ ಆಗುವದಿಲ್ಲ. ಮಕ್ಕಳಗೂಡ ಇರತಕ್ಕ ಆವನ ಸಂಬಂಧವು ಕೆಟ್ಟು ಆತನ ಮನಸ್ಸಿಗೆ ವ್ಯಥೆಯೂ ದುಃಖವೂ ಹೇಳತೀರದಷ್ಟಾಗುವದುಂಟು. ಶಿಕ್ಷಕನಲ್ಲಿಯ ಉಲ್ಹಾಸವೃತ್ತಿಯು ಒಮ್ಮೆ ಹೊರಟಿದ್ದು ಹೋಯಿತೆಂದರೆ, ಮಕ್ಕಳ ಮಾನಸಿಕ ಆರೋಗ್ಯಕ್ಕೆ ಬಲವಾದ ಆಘಾತವಾಗುವ ಭಯವಿದೆ. ಮಕ್ಕಳಿಗೆ ಆದರ್ಶರಾಗಿರುವವರೆಂದರೆ ಮನೆಯಲ್ಲಿ ತಂದೆ-ತಾಯಿಗಳು, ಸಾಲೆಯಲ್ಲಿ ಗುರೂಜಿಯು. ಆದುದರಿಂದ, ಸಾಲೆಯಲ್ಲಿಯ ಪ್ರತಿಯೊಂದು ಚಟುವಟಿಕೆಯಲ್ಲಿ ಆತನು ತಪ್ಪದೇ ಆದರ್ಶನಾಗಿಯೇ ಉಳಿಯಬೇಕು.

ಶೀಲ–ಸ್ವಭಾವಗಳು

ಮಗುವಿನ ಶೀಲಸಂವರ್ಧನೆಯೇ ಸಾಲೆಯ ಮುಖ್ಯ ಉದ್ದೇಶಗಳಲ್ಲೊಂದಾಗಿದೆ. ನಡತೆಯ ಮಾದರಿಗಳನ್ನು ಮಕ್ಕಳ ಮುಂದೆ ಇಟ್ಟು ಅವರು ಅವುಗಳ ಬಗೆಗೆ ಸಾರಾಸಾರ ವಿಚಾರ ಮಾಡಲು ಶಕ್ತರಾಗಬೇಕು ಮತ್ತು ಚಲೋ ಆದರ್ಶಗಳನ್ನೇ ಎತ್ತಿಕೊಳ್ಳುವ ಉತ್ಕಟೇಚ್ಛೆಯು ಅವರಲ್ಲಿ ಆವಿರ್ಭವಿಸಬೇಕು. ಮಕ್ಕಳ ಶೀಲಸಂವರ್ಧನೆಯ ಕಾರ್ಯದಲ್ಲಿ ನುಡಿಗಿಂತ ನಡೆ ಲೇಸು. ನಡೆದು ತೋರಿಸಲು ಯಾರಿಗೆ ಮನಸ್ಸಿಲ್ಲವೋ ಇಲ್ಲವೆ ಶಕ್ಯವಿಲ್ಲವೋ ಅವರು ಶಿಕ್ಷಕರ ವೃತ್ತಿಗೆ ಹಣಿಕಿ ಹಾಕಬಾರದು. ಚಿಕ್ಕಮಕ್ಕಳು ಮನೆಯಲ್ಲಿಯ ತಂದೆ-ತಾಯಿಗಳಿಗಿಂತ ಸಾಲೆಯಲ್ಲಿಯ ಗುರೂಜಿಯವರನ್ನು ಹೆಚ್ಚಾಗಿ ಅನುಕರಣ ಮಾಡುವದುಂಟು. ನಡತೆಯ ಬಗೆಗೆ ಹೇಳುವ ಉಪದೇಶಕ್ಕಿಂತ ಶಿಕ್ಷಕನು ಮಾಡಿ ನಡೆಸಿ ತೋರಿಸುವದಕ್ಕೆ ಹೆಚ್ಚು ಬೆಲೆಯಿದೆ, ಮನ್ನಣೆಯಿದೆ. ಒಬ್ಬ ವ್ಯಕ್ತಿಯ ಸ್ವಭಾವದ ಬಗೆಗೆ ಮಾತನಾಡುವಾಗ, ಹಲವು ಸದ್ದಿಷ್ಟಪಡಿಸಿದ ನಿಯಮ ನಿರ್ಬಂಧಗಳಿಗನುಸರಿಸಿ ಆತನು ನಡೆಯುತ್ತಾನೋ ಇಲ್ಲವೋ ಎಂಬ ಸಂಕುಚಿತ ದೃಷ್ಟಿಯಿಂದ ನೋಡದೆ ಆತನು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಹೇಗೆ ವರ್ತಿಸುತ್ತಾನೆಂಬುದನ್ನು ವಿಶಾಲ ದೃಷ್ಟಿಯಿಂದ ನೋಡುತ್ತೇವೆ.

ಚಿತ್ತಾಕರ್ಷಕ ರೀತಿ-ನೀತಿಗಳು ಹಾಗೂ ಹುಲುಸಾದ ವ್ಯಕ್ತಿತ್ವ

ವ್ಯಕ್ತಿತ್ವವು ಪ್ರತಿಯೊಬ್ಬನ ಗುಣಗಳನ್ನು ಹಾಗೂ ಕೃತಿಗಳನ್ನು ಅವಲಂಬಿಸಿದೆ. ಪ್ರತಿಯೊಬ್ಬನಿಗೆ ತನ್ನದೇ ಆದ ವ್ಯಕ್ತಿತ್ವವಿದೆಯಾದರೂ ಪ್ರಿಯಕರವಾದ ನಡೆ-ನುಡಿಗಳು ಇಲ್ಲವೆ ಪರಿಪೂರ್ಣತೆಯನ್ನು ಹೊಂದಿದ ವ್ಯಕ್ತಿತ್ವವು ಇರುವದು ಅಪರೂಪ. ಹಲವರು ತಮ್ಮ ಸಮಾಧಾನ ವೃತ್ತಿ, ವಿನೋದ ಸ್ವಭಾವ, ಸಹಕಾರ, ಪ್ರಾಮಾಣಿಕತೆ, ಕುಶಾಗ್ರತೆ, ಸ್ಪಷ್ಟ ಮಾತುಗಾರಿಕೆ ಮೊದಲಾದ ಗುಣಗಳಿಂದ ಜನರನ್ನು ತಮ್ಮ ಕಡೆಗೆ ಆಕರ್ಷಿಸುವದುಂಟು. ಜನರನ್ನು ಆಕರ್ಷಿಸುವ ಗುಣಗಳೇ ಹಲವರಲ್ಲಿ ಇಲ್ಲದಿರುವದು ಕಂಡುಬರುತ್ತಿದೆ. ಗುರು-ಶಿಷ್ಯರ ನಡುವೆ ಇರಬೇಕಾದ ಸಂಬಂಧವನ್ನು ಇಟ್ಟುಕೊಳ್ಳುವದರ ಮೇಲೆಯೇ ಕಲಿಸುವಿಕೆಯ ಯಶವು ಅವಲಂಬಿಸಿದೆ. ಗುರೂಜಿಯು ಮಕ್ಕಳ ಭಕ್ತಿ

ವಿಶ್ವಾಸಗಳಿಗೆ ಪಾತ್ರನಾಗಿ ಅವರನ್ನು ಆಕರ್ಷಿಸುವಂತಹವನಿರಬೇಕು. ಮಕ್ಕಳ ಭಕ್ತಿ-ವಿಶ್ವಾಸಗಳಿಗೆ ಪಾತ್ರನಾದವನಲ್ಲಿ ಆತ್ಮನಿಶ್ವಾಸವು ಬೇರೂರಿ ಆತನಿಗೆ ಸುಖವನ್ನೂ ಯಶವನ್ನೂ ತಂದು ಕೊಡುತ್ತಿದೆ. ಸೊಕ್ಕಿನ ಸ್ವಭಾವ, ಬಿರುಸು ಮಾತು, ಅಸ್ತವ್ಯಸ್ತ ಪೋಷಾಕು, ಮೊದಲಾದ ಅಸಹ್ಯ ನಡತೆಗಳು ಶಿಕ್ಷಕನು ಎಷ್ಟೇ ಕುಶಲನೂ ಪಂಡಿತನೂ ಇದ್ದಾಗ್ಯೂ ಆತನಿಗೆ ಶ್ರೇಯಸ್ಸನ್ನು ತಂದು ಕೊಡಲಾರವು.

ವ್ಯಕ್ತಿತ್ವವನ್ನು ರೂಪುಗೊಳಿಸುವದು ನಮ್ಮ ಕೈಯಲ್ಲಿದೆ. ನಾವು ತಿದ್ದಿ ತೀಡಿಕೊಂಡಂತೆ ನಮ್ಮ ವ್ಯಕ್ತಿತ್ವವು ತಯಾರಾಗುತ್ತಿದೆ. ಹಾಗಾದರೆ ಅದನ್ನು ತಿದ್ದಿ ತೀಡಿ ಸುಧಾರಿಸಿಕೊಳ್ಳಲು ಅಲ್ಪಮಟ್ಟಿಗೆ ಶಕ್ಯವಿದೆಯೆಂದಂತಾಯಿತು. ಸೊಕ್ಕಿನ ನಡತೆ, ಬಿರುಸು ಮಾತು, ಅಸಹ್ಯ ಪೋಷಾಕು, ಇವೆಲ್ಲ ಆನುವಂಶಿಕವಲ್ಲ, ನಾವೇ ಮಾಡಿಕೊಂಡಂತಹವು. ತನ್ನಲ್ಲಿ ಅವುದಾದರೊಂದು ಅಸಹ್ಯ ನಡತೆಯು ಸೇರಿರುವದೋ ಹೇಗೆಂಬುದನ್ನು ಶಿಕ್ಷಕನು ಆಗಾಗ ತನ್ನನ್ನು ತಾನು ಪರೀಕ್ಷಿಸಿ ನೋಡಿಕೊಳ್ಳುವದೊಳಿತು. ತನ್ನ ವ್ಯಕ್ತಿತ್ವವನ್ನು ರಚಿಸಿಕೊಳ್ಳಲು ತನ್ನನ್ನು ತಾನು ಪರೀಕ್ಷಿಸಿಕೊಂಡರಷ್ಟೇ ಸಾಲದು. ತುಂಬು ವ್ಯಕ್ತಿತ್ವ ಹಾಗೂ ಸಂತೋಷದಾಯಕ ನಡೆನುಡಿಗಳುಳ್ಳವರ ಸಂಗಡ ಸ್ನೇಹ-ಸಂಪರ್ಕ ಬೆಳೆಯಿಸಿ ಅವರು ಅವುಗಳನ್ನು ಹೇಗೆ ಗಳಿಸಿಕೊಂಡರೆಂಬುದರ ಗುಟ್ಟನ್ನು ತಿಳಕೊಳ್ಳಲು ಪ್ರಯತ್ನಿಸಬೇಕು. ಆ ದಿಶೆಯಲ್ಲಿ ಆಳವಾಗಿ ಅಭ್ಯಾಸ ಮಾಡಿದುದರ ಪರಿಣಾಮವಾಗಿ ಕೆಳಗೆ ಕೊಟ್ಟಂತಹವುಗಳು ಮುಖ್ಯವಾಗಿವೆಯೆಂದು ಕಂಡುಬಂದಿದೆ:—

(೧) ಸಹಾನುಭೂತಿ
(೨) ವೈಯಕ್ತಿಕ ಅಚ್ಚು-ಕಟ್ಟುತನ
(೩) ವಿನೋದ ಸ್ವಭಾವ
(೪) ಕಳಕಳಿ, ಕಕ್ಕುಲತೆ
(೫) ಆನಂದ ವೃತ್ತಿ
(೬) ಉತ್ಸಾಹ
(೭) ಪಾಂಡಿತ್ಯ
(೮) ಆರೋಗ್ಯ
(೯) ನ್ಯಾಯಶೀಲತೆ
(೧೦) ಗಾಂಭೀರ್ಯ
(೧೧) ಮುಂದಾಳುತನ

ಈ ಗುಣಗಳು ಶಿಕ್ಷಕ-ಶಿಕ್ಷಕಿಯರೆಲ್ಲರಲ್ಲಿರುವದು ಲೇಸು. ಅವುಗಳನ್ನೆಲ್ಲ ಸಂಪೂರ್ಣವಾಗಿ ಅಳವಡಿಸಿಕೊಳ್ಳುವದು ಒಂದು ವೇಳೆ ಶಕ್ಯವಾಗಲಿಕ್ಕಿಲ್ಲ. ಆದಾಗ್ಯೂ, ಆ ದಿಶೆಯಲ್ಲಿ ಹೆಣಗಾಡಿ ತಮ್ಮ ವೈಯಕ್ತಿಕ ವಿಕಾಸವನ್ನು ಹೆಚ್ಚಿಸಿಕೊಳ್ಳುವದು ಇಷ್ಟವಿದೆಯಷ್ಟೆ. ಹಳ್ಳಿಗಾಡಿನಲ್ಲಿ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನು ಪ್ರತ್ಯೇಕವಾದ ಹೆಚ್ಚಿನ ಹೊಣೆಯನ್ನು ಹೊತ್ತುಕೊಂಡು ಕೆಲಸ ಮಾಡಬೇಕಾಗುವದರಿಂದ ಶಿಕ್ಷಕವೃತ್ತಿಯ ಬಗೆಗಿನ ಹಲವು ಮುಖ್ಯ ಲಕ್ಷಣಗಳನ್ನು ದಿನಾಲು ಬಳಿಕೆಯಲ್ಲಿ ತಂದು ಅವುಗಳನ್ನು ತನ್ನಲ್ಲಿ ಅರಗಿಸಿಕೊಳ್ಳಲು ಪ್ರಯತ್ನಿಸಬೇಕು.

(೧) ವಿಕಾಸವನ್ನು ಹೊಂದುವ ಸಾಮರ್ಥ್ಯ

ಶಿಕ್ಷಕನು ದಿನದಿನಕ್ಕೆ ವಿಕಾಸವನ್ನು ಹೊಂದಲು ಉತ್ಸುಕತೆಯುಳ್ಳವನಿರಬೇಕು. ಶಿಕ್ಷಣವು ಕಾಲ ಕಾಲಕ್ಕೆ ಬದಲಾಗುತ್ತಿರುವದರಿಂದ ಆ ಬದಲಾವಣೆಗಳನ್ನು ಅರಿತುಕೊಳ್ಳಲು ಹಾತೊರೆಯುವವನಿರಬೇಕು. ಅವುಗಳನ್ನು ಅರಿತು ಅರಗಿಸಿಕೊಂಡರೆ, ಮಕ್ಕಳಿಗೆ ಹುರಿದುಂಬಿಸಿ ಹೊಸ ಸಂಗತಿಗಳನ್ನು ಕಲಿಯಲು ಪ್ರೋತ್ಸಾಹಿಸಬಲ್ಲನು. ಶಿಕ್ಷಕನು ಯಾವಾಗಲೂ ವಿದ್ಯಾರ್ಥಿಯಾಗಿ ಹೊಸ ಸಂಗತಿಗಳನ್ನು ಕಲಿಯುತ್ತಿರಬೇಕು. ಯಾಕಂದರೆ, ವಿಷಯಸಂಗ್ರಹವಿಲ್ಲದ ಶಿಕ್ಷಕನು ಕಲಿಸುವ ಬಗೆ ಹೇಗೆ? ಜ್ಞಾನವಿಕಾಸವನ್ನು ಹೊಂದಲು ಬಯಸುವದಾದರೆ, ಹೊಸ ವಿಚಾರಗಳನ್ನು ಚನ್ನಾಗಿ ಅರಿತುಕೊಳ್ಳುವ ಆತುರತೆ ಆತನಲ್ಲಿ ಉದಯಿಸಬೇಕು. ಆ ಮೇಲೆ ಆ ವಿಚಾರಗಳನ್ನು ಕೃತಿಗಳಿಸುವ ಎದೆಗಾರಿಕೆ ಉತ್ಸುಕತೆಗಳು ಅವನಲ್ಲಿ ತಲೆದೋರಬೇಕು. ಈ ದೃಷ್ಟಿಯಿಂದ ವಿಚಾರಮಾಡಿ ನೋಡಿದರೆ, ಮಕ್ಕಳಷ್ಟೇ ವಿದ್ಯಾರ್ಥಿಗಳಲ್ಲ, ಶಿಕ್ಷಕನೂ ವಿದ್ಯಾರ್ಥಿಯಾಗಿದ್ದಾನೆ.

ಪ್ರಗತಿಪರನಾಗಬೇಕೆಂಬ ಆತುರತೆಯು ಸಣ್ಣ ಹಳ್ಳಿಯ ಶಾಲೆಯಲ್ಲಿ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನಿಗೆ ಹೇಳತೀರದಷ್ಟು ಮಹತ್ವದ್ದಿದೆ. ಯಾಕಂದರೆ, ಅಲ್ಲಿ ಸುಶಿಕ್ಷಿತರು ಸಿಗುವದು ಅಪರೂಪ ಮತ್ತು ಮುಂಜಾನೆಯಿಂದ ಸಂಜೆಯ ವರೆಗೆ ಆತನ ವೇಳೆಯೆಲ್ಲ ಚಿಕ್ಕಮಕ್ಕಳ ಸಹವಾಸದಲ್ಲಿಯೂ ನಿರಕ್ಷರಿಗಳಾದ

ತಿಳಕೊಳ್ಳುವದೊಳಿತು. ಮುಂದೆ ಬರಲಿರುವ ಸಾಮಾಜಿಕ ಪರಿಸ್ಥಿತಿಯು ಯಾವ ಪ್ರಕಾರದ್ದಾಗುವದು, ಅದಕ್ಕೆ ಒಗ್ಗುವಂತೆ ಮಕ್ಕಳು ಹೇಗೆ ತಯಾರಾಗಬೇಕು, ಮಗುವಿನ ವ್ಯಕ್ತಿತ್ವವನ್ನು ರೂಪುಗೊಳಿಸಲು ಸಾಲೆಯಲ್ಲಿಯ ಸಾಂಘಿಕ ಹಾಗೂ ವೈಯಕ್ತಿಕ ಚಟುವಟಿಕೆಗಳು ಹೇಗೆ ಸಹಾಯವನ್ನು ನೀಡಬಲ್ಲವು, ಇವೆಲ್ಲವು ಶಿಕ್ಷಕನಿಗೆ ಮಹತ್ವದ ವಿಷಯಗಳಲ್ಲವೇ ? ಹಿಂದಿನ ತನ್ನ ಅನುಭವಗಳಿಂದ ಸ್ಫೂರ್ತಿಯನ್ನು ಪಡೆಯಬೇಕು, ಮುಂದಿನ ಧ್ಯೇಯ-ಧೋರಣಗಳ ಮೇಲೆ ಅರ್ಥಾತ್ ಮಕ್ಕಳ ಆಗು-ಹೋಗುಗಳ ಮೇಲೆ ಕಣ್ಣಿಟ್ಟಿರಬೇಕು.

ಉತ್ತಮ ಆರೋಗ್ಯ

ಅಂಗಹೀನತ್ವ-ಅಂಗದೌರ್ಬಲ್ಯಗಳಿಲ್ಲದೆ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ಚನ್ನಾಗಿ ಕಾಯ್ದುಕೊಂಡಿರುವದು ಪ್ರತಿ ಮಾನವನಿಗೆ ಮಹತ್ವದ ವಿಷಯ; ವಿಶೇಷತಃ ಶಿಕ್ಷಕನಿಗೆ ಅದರ ಮಹತ್ವವು ಅಷ್ಟಿಷ್ಟಲ್ಲ. ಯಾಕಂದರೆ, ವೈಯಕ್ತಿಕ ಪ್ರಭಾವ, ಉದ್ಯೋಗಶೀಲತೆ, ಉಲ್ಹಾಸವೃತ್ತಿ, ಕೆಲಸ ಮಾಡುವ ಉತ್ಸುಕತೆ, ಇವುಗಳನ್ನೆಲ್ಲ ಪ್ರದರ್ಶಿಸಬಲ್ಲವನಿರಬೇಕು. ಅಷ್ಟೊಂದು ಯೋಗ್ಯತೆಯು ಇಲ್ಲದಿದ್ದರೆ, ಆತನಿಗೆ ಶಿಕ್ಷಕವೃತ್ತಿಯು ಮುಳ್ಳಿನ ಹಾಸಿಗೆಯಂತಾಗಿ ಶಿಸ್ತನ್ನು ಕಾಪಾಡುವದು ಶಕ್ಯವೇ ಆಗುವದಿಲ್ಲ. ಮಕ್ಕಳಗೂಡ ಇರತಕ್ಕ ಅವನ ಸಂಬಂಧವು ಕೆಟ್ಟು ಆತನ ಮನಸ್ಸಿಗೆ ವ್ಯಥೆಯೂ ದುಃಖವೂ ಹೇಳತೀರದಷ್ಟಾಗುವದುಂಟು. ಶಿಕ್ಷಕನಲ್ಲಿಯ ಉಲ್ಹಾಸವೃತ್ತಿಯು ಒಮ್ಮೆ ಹೊರಟಿದ್ದು ಹೋಯಿತೆಂದರೆ, ಮಕ್ಕಳ ಮಾನಸಿಕ ಆರೋಗ್ಯಕ್ಕೆ ಬಲವಾದ ಆಘಾತವಾಗುವ ಭಯವಿದೆ. ಮಕ್ಕಳಿಗೆ ಆದರ್ಶರಾಗಿರುವವರೆಂದರೆ ಮನೆಯಲ್ಲಿ ತಂದೆ-ತಾಯಿಗಳು, ಸಾಲೆಯಲ್ಲಿ ಗುರೂಜಿಯು. ಆದುದರಿಂದ, ಸಾಲೆಯಲ್ಲಿಯ ಪ್ರತಿಯೊಂದು ಚಟುವಟಿಕೆಯಲ್ಲಿ ಆತನು ತಪ್ಪದೇ ಆದರ್ಶನಾಗಿಯೇ ಉಳಿಯಬೇಕು.

ಶೀಲ–ಸ್ವಭಾವಗಳು

ಮಗುವಿನ ಶೀಲಸಂವರ್ಧನೆಯೇ ಸಾಲೆಯ ಮುಖ್ಯ ಉದ್ದೇಶಗಳಲ್ಲೊಂದಾಗಿದೆ. ನಡತೆಯ ಮಾದರಿಗಳನ್ನು ಮಕ್ಕಳ ಮುಂದೆ ಇಟ್ಟು ಅವರು ಅವುಗಳ ಬಗೆಗೆ ಸಾರಾಸಾರ ವಿಚಾರ ಮಾಡಲು ಶಕ್ತರಾಗಬೇಕು ಮತ್ತು ಚಲೋ ಆದರ್ಶಗಳನ್ನೇ ಎತ್ತಿಕೊಳ್ಳುವ ಉತ್ಕಟೇಚ್ಛೆಯು ಅವರಲ್ಲಿ ಆವಿರ್ಭವಿಸಬೇಕು. ಮಕ್ಕಳ ಶೀಲಸಂವರ್ಧನೆಯ ಕಾರ್ಯದಲ್ಲಿ ನುಡಿಗಿಂತ ನಡೆ ಲೇಸು. ನಡೆದು ತೋರಿಸಲು ಯಾರಿಗೆ ಮನಸ್ಸಿಲ್ಲವೋ ಇಲ್ಲವೆ ಶಕ್ಯವಿಲ್ಲವೋ ಅವರು ಶಿಕ್ಷಕರ ವೃತ್ತಿಗೆ ಹಣಿಕಿ ಹಾಕಬಾರದು. ಚಿಕ್ಕಮಕ್ಕಳು ಮನೆಯಲ್ಲಿಯ ತಂದೆ-ತಾಯಿಗಳಿಗಿಂತ ಸಾಲೆಯಲ್ಲಿಯ ಗುರೂಜಿಯವರನ್ನು ಹೆಚ್ಚಾಗಿ ಅನುಕರಣ ಮಾಡುವದುಂಟು. ನಡತೆಯ ಬಗೆಗೆ ಹೇಳುವ ಉಪದೇಶಕ್ಕಿಂತ ಶಿಕ್ಷಕನು ಮಾಡಿ ನಡೆಸಿ ತೋರಿಸುವದಕ್ಕೆ ಹೆಚ್ಚು ಬೆಲೆಯಿದೆ, ಮನ್ನಣೆಯಿದೆ. ಒಬ್ಬ ವ್ಯಕ್ತಿಯ ಸ್ವಭಾವದ ಬಗೆಗೆ ಮಾತನಾಡುವಾಗ, ಹಲವು ಸಿದ್ಧಪಡಿಸಿದ ನಿಯಮ ನಿರ್ಬಂಧಗಳಿಗನುಸರಿಸಿ ಆತನು ನಡೆಯುತ್ತಾನೋ ಇಲ್ಲವೋ ಎಂಬ ಸಂಕುಚಿತ ದೃಷ್ಟಿಯಿಂದ ನೋಡದೆ ಆತನು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಹೇಗೆ ವರ್ತಿಸುತ್ತಾನೆಂಬುದನ್ನು ವಿಶಾಲ ದೃಷ್ಟಿಯಿಂದ ನೋಡುತ್ತೇವೆ.

ಚಿತ್ತಾಕರ್ಷಕ ರೀತಿ-ನೀತಿಗಳು ಹಾಗೂ ಹುಲುಸಾದ ವ್ಯಕ್ತಿತ್ವ

ವ್ಯಕ್ತಿತ್ವವು ಪ್ರತಿಯೊಬ್ಬನ ಗುಣಗಳನ್ನು ಹಾಗೂ ಕೃತಿಗಳನ್ನು ಅವಲಂಬಿಸಿದೆ. ಪ್ರತಿಯೊಬ್ಬನಿಗೆ ತನ್ನದೇ ಆದ ವ್ಯಕ್ತಿತ್ವವಿದೆಯಾದರೂ ಪ್ರಿಯಕರವಾದ ನಡೆನುಡಿಗಳು ಇಲ್ಲವೆ ಪರಿಪೂರ್ಣತೆಯನ್ನು ಹೊಂದಿದ ವ್ಯಕ್ತಿತ್ವವು ಇರುವದು ಅಪರೂಪ. ಹಲವರು ತಮ್ಮ ಸಮಾಧಾನ ವೃತ್ತಿ, ವಿನೋದ ಸ್ವಭಾವ, ಸಹಕಾರ, ಪ್ರಾಮಾಣಿಕತೆ, ಕುಶಾಗ್ರತೆ, ಸ್ಪಷ್ಟ ಮಾತುಗಾರಿಕೆ ಮೊದಲಾದ ಗುಣಗಳಿಂದ ಜನರನ್ನು ತಮ್ಮ ಕಡೆಗೆ ಆಕರ್ಷಿಸುವದುಂಟು. ಜನರನ್ನು ಆಕರ್ಷಿಸುವ ಗುಣಗಳೇ ಹಲವರಲ್ಲಿ ಇಲ್ಲದಿರುವದು ಕಂಡುಬರುತ್ತಿದೆ. ಗುರು-ಶಿಷ್ಯರ ನಡುವೆ ಇರಬೇಕಾದ ಸಂಬಂಧವನ್ನು ಇಟ್ಟುಕೊಳ್ಳುವದರ ಮೇಲೆಯೇ ಕಲಿಸುವಿಕೆಯ ಯಶವು ಅವಲಂಬಿಸಿದೆ. ಗುರೂಜಿಯು ಮಕ್ಕಳ ಭಕ್ತಿ

ವಿಶ್ವಾಸಗಳಿಗೆ ಪಾತ್ರನಾಗಿ ಅವರನ್ನು ಆಕರ್ಷಿಸುವಂತಹವನಿರಬೇಕು. ಮಕ್ಕಳ ಭಕ್ತಿ-ವಿಶ್ವಾಸಗಳಿಗೆ ಪಾತ್ರನಾದವನಲ್ಲಿ ಆತ್ಮವಿಶ್ವಾಸವು ಬೇರೂರಿ ಆತನಿಗೆ ಸುಖವನ್ನೂ ಯಶವನ್ನೂ ತಂದು ಕೊಡುತ್ತಿದೆ. ಸೊಕ್ಕಿನ ಸ್ವಭಾವ, ಬಿರುಸು ಮಾತು, ಅಸ್ತವ್ಯಸ್ತ ಪೋಷಾಕು, ಮೊದಲಾದ ಅಸಹ್ಯ ನಡತೆಗಳು ಶಿಕ್ಷಕನು ಎಷ್ಟೇ ಕುಶಲನೂ ಪಂಡಿತನೂ ಇದ್ದಾಗ್ಯೂ ಆತನಿಗೆ ಶ್ರೇಯಸ್ಸನ್ನು ತಂದು ಕೊಡಲಾರವು.

ವ್ಯಕ್ತಿತ್ವವನ್ನು ರೂಪುಗೊಳಿಸುವದು ನಮ್ಮ ಕೈಯಲ್ಲಿದೆ. ನಾವು ತಿದ್ದಿ ತೀಡಿಕೊಂಡಂತೆ ನಮ್ಮ ವ್ಯಕ್ತಿತ್ವವು ತಯಾರಾಗುತ್ತಿದೆ. ಹಾಗಾದರೆ ಅದನ್ನು ತಿದ್ದಿ ತೀಡಿ ಸುಧಾರಿಸಿಕೊಳ್ಳಲು ಅಲ್ಪಮಟ್ಟಿಗೆ ಶಕ್ಯವಿದೆಯೆಂದಂತಾಯಿತು. ಸೊಕ್ಕಿನ ನಡತೆ, ಬಿರುಸು ಮಾತು, ಅಸಹ್ಯ ಪೋಷಾಕು, ಇವೆಲ್ಲ ಅನುವಂಶಿಕವಲ್ಲ, ನಾವೇ ಮಾಡಿಕೊಂಡಂತಹವು. ತನ್ನಲ್ಲಿ ಆವುದಾದರೊಂದು ಅಸಹ್ಯ ನಡತೆಯು ಸೇರಿರುವದೋ ಹೇಗೆಂಬುದನ್ನು ಶಿಕ್ಷಕನು ಆಗಾಗ ತನ್ನನ್ನು ತಾನು ಪರೀಕ್ಷಿಸಿ ನೋಡಿಕೊಳ್ಳುವದೊಳಿತು. ತನ್ನ ವ್ಯಕ್ತಿತ್ವವನ್ನು ರಚಿಸಿಕೊಳ್ಳಲು ತನ್ನನ್ನು ತಾನು ಪರೀಕ್ಷಿಸಿಕೊಂಡರಷ್ಟೇ ಸಾಲದು. ತುಂಬು ವ್ಯಕ್ತಿತ್ವ ಹಾಗೂ ಸಂತೋಷದಾಯಕ ನಡೆನುಡಿಗಳುಳ್ಳವರ ಸಂಗಡ ಸ್ನೇಹ-ಸಂಪರ್ಕ ಬೆಳೆಯಿಸಿ ಅವರು ಅವುಗಳನ್ನು ಹೇಗೆ ಗಳಿಸಿಕೊಂಡರೆಂಬುದರ ಗುಟ್ಟನ್ನು ತಿಳಕೊಳ್ಳಲು ಪ್ರಯತ್ನಿಸಬೇಕು. ಆ ದಿಶೆಯಲ್ಲಿ ಆಳವಾಗಿ ಅಭ್ಯಾಸ ಮಾಡಿದುದರ ಪರಿಣಾಮವಾಗಿ ಕೆಳಗೆ ಕೊಟ್ಟಂತಹವುಗಳು ಮುಖ್ಯವಾಗಿವೆಯೆಂದು ಕಂಡುಬಂದಿದೆ:—

(೧) ಸಹಾನುಭೂತಿ	(೬) ಉತ್ಸಾಹ
(೨) ವೈಯಕ್ತಿಕ ಅಚ್ಚುಕಟ್ಟುತನ	(೭) ಪಾಂಡಿತ್ಯ
(೩) ವಿನೋದ ಸ್ವಭಾವ	(೮) ಆರೋಗ್ಯ
(೪) ಕಳಕಳಿ, ಕಕ್ಕುಲತೆ	(೯) ನ್ಯಾಯಶೀಲತೆ
(೫) ಆನಂದ ವೃತ್ತಿ	(೧೦) ಗಾಂಭೀರ್ಯ
	(೧೧) ಮುಂದಾಳುತನ

ಈ ಗುಣಗಳು ಶಿಕ್ಷಕ-ಶಿಕ್ಷಿಕೆಯರೆಲ್ಲರಲ್ಲಿರುವದು ಲೇಸು. ಅವುಗಳನ್ನೆಲ್ಲ ಸಂಪೂರ್ಣವಾಗಿ ಅಳವಡಿಸಿಕೊಳ್ಳುವದು ಒಂದು ವೇಳೆ ಶಕ್ಯವಾಗಲಿಕ್ಕಿಲ್ಲ. ಆದಾಗ್ಯೂ, ಆ ದಿಶೆಯಲ್ಲಿ ಹೆಣಗಾಡಿ ತಮ್ಮ ವೈಯಕ್ತಿಕ ವಿಕಾಸವನ್ನು ಹೆಚ್ಚಿಸಿಕೊಳ್ಳುವದು ಇಷ್ಟವಿದೆಯಷ್ಟೆ. ಹಳ್ಳಿಗಾಡಿನಲ್ಲಿ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನು ಪ್ರತ್ಯೇಕವಾದ ಹೆಚ್ಚಿನ ಹೊಣೆಯನ್ನು ಹೊತ್ತುಕೊಂಡು ಕೆಲಸ ಮಾಡಬೇಕಾಗುವದರಿಂದ ಶಿಕ್ಷಕವೃತ್ತಿಯ ಬಗೆಗಿನ ಹಲವು ಮುಖ್ಯ ಲಕ್ಷಣಗಳನ್ನು ದಿನಾಲು ಬಳಿಕೆಯಲ್ಲಿ ತಂದು ಅವುಗಳನ್ನು ತನ್ನಲ್ಲಿ ಅರಗಿಸಿಕೊಳ್ಳಲು ಪ್ರಯತ್ನಿಸಬೇಕು.

(೧) ವಿಕಾಸವನ್ನು ಹೊಂದುವ ಸಾಮರ್ಥ್ಯ

ಶಿಕ್ಷಕನು ದಿನದಿನಕ್ಕೆ ವಿಕಾಸವನ್ನು ಹೊಂದಲು ಉತ್ಸುಕತೆಯುಳ್ಳವನಿರಬೇಕು. ಶಿಕ್ಷಣವು ಕಾಲ ಕಾಲಕ್ಕೆ ಬದಲಾಗುತ್ತಿರುವದರಿಂದ ಆ ಬದಲಾವಣೆಗಳನ್ನು ಅರಿತುಕೊಳ್ಳಲು ಹಾತೊರೆಯುವವನಿರಬೇಕು. ಅವುಗಳನ್ನು ಅರಿತು ಅರಗಿಸಿಕೊಂಡರೆ, ಮಕ್ಕಳಿಗೆ ಹುರಿದುಂಬಿಸಿ ಹೊಸ ಸಂಗತಿಗಳನ್ನು ಕಲಿಯಲು ಪ್ರೋತ್ಸಾಹಿಸಬಲ್ಲನು. ಶಿಕ್ಷಕನು ಯಾವಾಗಲೂ ವಿದ್ಯಾರ್ಥಿಯಾಗಿ ಹೊಸ ಸಂಗತಿಗಳನ್ನು ಕಲಿಯುತ್ತಿರಬೇಕು. ಯಾಕಂದರೆ, ವಿಷಯಸಂಗ್ರಹವಿಲ್ಲದ ಶಿಕ್ಷಕನು ಕಲಿಸುವ ಬಗೆ ಹೇಗೆ? ಜ್ಞಾನವಿಕಾಸವನ್ನು ಹೊಂದಲು ಬಯಸುವದಾದರೆ, ಹೊಸ ವಿಚಾರಗಳನ್ನು ಚನ್ನಾಗಿ ಅರಿತುಕೊಳ್ಳುವ ಆತುರತೆ ಆತನಲ್ಲಿ ಉದಯಿಸಬೇಕು. ಆ ಮೇಲೆ ಆ ವಿಚಾರಗಳನ್ನು ಕೃತಿಗಳಿಸುವ ಎದೆಗಾರಿಕೆ ಉತ್ಸುಕತೆಗಳು ಅವನಲ್ಲಿ ತಲೆದೋರಬೇಕು. ಈ ದೃಷ್ಟಿಯಿಂದ ವಿಚಾರಮಾಡಿ ನೋಡಿದರೆ, ಮಕ್ಕಳಷ್ಟೇ ವಿದ್ಯಾರ್ಥಿಗಳಲ್ಲ, ಶಿಕ್ಷಕನೂ ವಿದ್ಯಾರ್ಥಿಯಾಗಿದ್ದಾನೆ.

ಪ್ರಗತಿಪರನಾಗಬೇಕೆಂಬ ಆತುರತೆಯು ಸಣ್ಣ ಹಳ್ಳಿಯ ಸಾಲೆಯಲ್ಲಿ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನಿಗೆ ಹೇಳತೀರದಷ್ಟು ಮಹತ್ವದ್ದಿದೆ. ಯಾಕಂದರೆ, ಅಲ್ಲಿ ಸುಶಿಕ್ಷಿತರು ಸಿಗುವದು ಅಪರೂಪ ಮತ್ತು ಮುಂಜಾನೆಯಿಂದ ಸಂಜೆಯ ವರೆಗೆ ಆತನ ವೇಳೆಯೆಲ್ಲ ಚಿಕ್ಕಮಕ್ಕಳ ಸಹವಾಸದಲ್ಲಿಯೂ ನಿರಕ್ಷರಿಗಳಾದ

ತಿಳಕೊಳ್ಳುವದೊಳಿತು. ಮುಂದೆ ಬರಲಿರುವ ಸಾಮಾಜಿಕ ಪರಿಸ್ಥಿತಿಯು ಯಾವ ಪ್ರಕಾರದ್ದಾಗುವದು, ಅದಕ್ಕೆ ಒಗ್ಗುವಂತೆ ಮಕ್ಕಳು ಹೇಗೆ ತಯಾರಾಗಬೇಕು, ಮಗುವಿನ ವ್ಯಕ್ತಿತ್ವವನ್ನು ರೂಪುಗೊಳಿಸಲು ಸಾಲೆಯಲ್ಲಿಯ ಸಾಂಘಿಕ ಹಾಗೂ ವೈಯಕ್ತಿಕ ಚಟುವಟಿಕೆಗಳು ಹೇಗೆ ಸಹಾಯವನ್ನು ನೀಡಬಲ್ಲವು, ಇವೆಲ್ಲವು ಶಿಕ್ಷಕನಿಗೆ ಮಹತ್ವದ ವಿಷಯಗಳಲ್ಲವೇ ? ಹಿಂದಿನ ತನ್ನ ಅನುಭವಗಳಿಂದ ಸ್ಫೂರ್ತಿಯನ್ನು ಪಡೆಯಬೇಕು, ಮುಂದಿನ ಧ್ಯೇಯ-ಧೋರಣಗಳ ಮೇಲೆ ಅರ್ಥಾತ್ ಮಕ್ಕಳ ಆಗು-ಹೋಗುಗಳ ಮೇಲೆ ಕಂಣಿಟ್ಟಿರಬೇಕು.

ಉತ್ತಮ ಆರೋಗ್ಯ

ಅಂಗಹೀನತ್ವ-ಅಂಗದೌರ್ಬಲ್ಯಗಳಿಲ್ಲದೆ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ಚೆನ್ನಾಗಿ ಕಾಯ್ದುಕೊಂಡಿರುವದು ಪ್ರತಿ ಮಾನವನಿಗೆ ಮಹತ್ವದ ವಿಷಯ; ವಿಶೇಷತಃ ಶಿಕ್ಷಕನಿಗೆ ಅದರ ಮಹತ್ವವು ಅಷ್ಟಿಷ್ಟಲ್ಲ. ಯಾಕೆಂದರೆ, ವೈಯಕ್ತಿಕ ಪ್ರಭಾವ, ಉದ್ಯೋಗಶೀಲತೆ, ಉಲ್ಹಾಸವೃತ್ತಿ, ಕೆಲಸ ಮಾಡುವ ಉತ್ಸುಕತೆ, ಇವುಗಳನ್ನೆಲ್ಲ ಪ್ರದರ್ಶಿಸಬಲ್ಲವನಿರಬೇಕು. ಅಷ್ಟೊಂದು ಯೋಗ್ಯತೆಯು ಇಲ್ಲದಿದ್ದರೆ, ಆತನಿಗೆ ಶಿಕ್ಷಕವೃತ್ತಿಯು ಮುಳ್ಳಿನ ಹಾಸಿಗೆಯಂತಾಗಿ ಶಿಸ್ತನ್ನು ಕಾಪಾಡುವದು ಶಕ್ಯವೇ ಆಗುವದಿಲ್ಲ. ಮಕ್ಕಳಗೂಡ ಇರತಕ್ಕ ಆವನ ಸಂಬಂಧವು ಕೆಟ್ಟು ಆತನ ಮನಸ್ಸಿಗೆ ವ್ಯಥೆಯೂ ದುಃಖವೂ ಹೇಳತೀರದಷ್ಟಾಗುವದುಂಟು. ಶಿಕ್ಷಕನಲ್ಲಿಯ ಉಲ್ಹಾಸವೃತ್ತಿಯು ಒಮ್ಮೆ ಹೊರಟಿದ್ದು ಹೋಯಿತೆಂದರೆ, ಮಕ್ಕಳ ಮಾನಸಿಕ ಆರೋಗ್ಯಕ್ಕೆ ಬಲವಾದ ಆಘಾತವಾಗುವ ಭಯವಿದೆ. ಮಕ್ಕಳಿಗೆ ಆದರ್ಶರಾಗಿರುವವರೆಂದರೆ ಮನೆಯಲ್ಲಿ ತಂದೆ-ತಾಯಿಗಳು, ಸಾಲೆಯಲ್ಲಿ ಗುರೂಜಿಯು. ಆದುದರಿಂದ, ಸಾಲೆಯಲ್ಲಿಯ ಪ್ರತಿಯೊಂದು ಚಟುವಟಿಕೆಯಲ್ಲಿ ಆತನು ತಪ್ಪದೇ ಆದರ್ಶನಾಗಿಯೇ ಉಳಿಯಬೇಕು.

ಶೀಲ–ಸ್ವಭಾವಗಳು

ಮಗುವಿನ ಶೀಲಸಂವರ್ಧನೆಯೇ ಸಾಲೆಯ ಮುಖ್ಯ ಉದ್ದೇಶಗಳಲ್ಲೊಂದಾಗಿದೆ. ನಡತೆಯ ಮಾದರಿಗಳನ್ನು ಮಕ್ಕಳ ಮುಂದೆ ಇಟ್ಟು ಅವರು ಅವುಗಳ ಬಗೆಗೆ ಸಾರಾಸಾರ ವಿಚಾರ ಮಾಡಲು ಶಕ್ತರಾಗಬೇಕು ಮತ್ತು ಚಲೋ ಆದರ್ಶಗಳನ್ನೇ ಎತ್ತಿಕೊಳ್ಳುವ ಉತ್ಕಟೇಚ್ಛೆಯು ಅವರಲ್ಲಿ ಆವಿರ್ಭವಿಸಬೇಕು. ಮಕ್ಕಳ ಶೀಲಸಂವರ್ಧನೆಯ ಕಾರ್ಯದಲ್ಲಿ ನುಡಿಗಿಂತ ನಡೆ ಲೇಸು. ನಡೆದು ತೋರಿಸಲು ಯಾರಿಗೆ ಮನಸ್ಸಿಲ್ಲವೋ ಇಲ್ಲವೆ ಶಕ್ಯವಿಲ್ಲವೋ ಅವರು ಶಿಕ್ಷಕರ ವೃತ್ತಿಗೆ ಹಣಿಕಿ ಹಾಕಬಾರದು. ಚಿಕ್ಕಮಕ್ಕಳು ಮನೆಯಲ್ಲಿಯ ತಂದೆ-ತಾಯಿಗಳಿಗಿಂತ ಸಾಲೆಯಲ್ಲಿಯ ಗುರೂಜಿಯವರನ್ನು ಹೆಚ್ಚಾಗಿ ಅನುಕರಣ ಮಾಡುವದುಂಟು. ನಡತೆಯ ಬಗೆಗೆ ಹೇಳುವ ಉಪದೇಶಕ್ಕಿಂತ ಶಿಕ್ಷಕನು ಮಾಡಿ ನಡೆಸಿ ತೋರಿಸುವದಕ್ಕೆ ಹೆಚ್ಚು ಬೆಲೆಯಿದೆ, ಮನ್ನಣೆಯಿದೆ. ಒಬ್ಬ ವ್ಯಕ್ತಿಯ ಸ್ವಭಾವದ ಬಗೆಗೆ ಮಾತನಾಡುವಾಗ, ಹಲವು ನಿರ್ದಿಷ್ಟಪಡಿಸಿದ ನಿಯಮ ನಿರ್ಬಂಧಗಳಿಗನುಸರಿಸಿ ಆತನು ನಡೆಯುತ್ತಾನೋ ಇಲ್ಲವೋ ಎಂಬ ಸಂಕುಚಿತ ದೃಷ್ಟಿಯಿಂದ ನೋಡದೆ ಆತನು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಹೇಗೆ ವರ್ತಿಸುತ್ತಾನೆಂಬುದನ್ನು ವಿಶಾಲ ದೃಷ್ಟಿಯಿಂದ ನೋಡುತ್ತೇವೆ.

ಚಿತ್ತಾಕರ್ಷಕ ರೀತಿ-ನೀತಿಗಳು ಹಾಗೂ ಹುಲುಸಾದ ವ್ಯಕ್ತಿತ್ವ

ವ್ಯಕ್ತಿತ್ವವು ಪ್ರತಿಯೊಬ್ಬನ ಗುಣಗಳನ್ನು ಹಾಗೂ ಕೃತಿಗಳನ್ನು ಅವಲಂಬಿಸಿದೆ. ಪ್ರತಿಯೊಬ್ಬನಿಗೆ ತನ್ನದೇ ಆದ ವ್ಯಕ್ತಿತ್ವವಿದೆಯಾದರೂ ಪ್ರಿಯಕರವಾದ ನಡೆ-ನುಡಿಗಳು ಇಲ್ಲವೆ ಪರಿಪೂರ್ಣತೆಯನ್ನು ಹೊಂದಿದ ವ್ಯಕ್ತಿತ್ವವು ಇರುವದು ಅಪರೂಪ. ಹಲವರು ತಮ್ಮ ಸಮಾಧಾನ ವೃತ್ತಿ, ವಿನೋದ ಸ್ವಭಾವ, ಸಹಕಾರ, ಪ್ರಾಮಾಣಿಕತೆ, ಕುಶಾಗ್ರತೆ, ಸ್ಪಷ್ಟ ಮಾತುಗಾರಿಕೆ ಮೊದಲಾದ ಗುಣಗಳಿಂದ ಜನರನ್ನು ತಮ್ಮ ಕಡೆಗೆ ಆಕರ್ಷಿಸುವದುಂಟು. ಜನರನ್ನು ಆಕರ್ಷಿಸುವ ಗುಣಗಳೇ ಹಲವರಲ್ಲಿ ಇಲ್ಲದಿರುವದು ಕಂಡುಬರುತ್ತಿದೆ. ಗುರು-ಶಿಷ್ಯರ ನಡುವೆ ಇರಬೇಕಾದ ಸಂಬಂಧವನ್ನು ಇಟ್ಟುಕೊಳ್ಳುವದರ ಮೇಲೆಯೇ ಕಲಿಸುವಿಕೆಯ ಯಶವು ಅವಲಂಬಿಸಿದೆ. ಗುರೂಜಿಯು ಮಕ್ಕಳ ಭಕ್ತಿ

ವಿಶ್ವಾಸಗಳಿಗೆ ಪಾತ್ರನಾಗಿ ಅವರನ್ನು ಆಕರ್ಷಿಸುವಂತಹ ವನಿರಬೇಕು. ಮಕ್ಕಳ ಭಕ್ತಿ-ವಿಶ್ವಾಸಗಳಿಗೆ ಪಾತ್ರನಾದವನಲ್ಲಿ ಆತ್ಮವಿಶ್ವಾಸವು ಬೇರೂರಿ ಆತನಿಗೆ ಸುಖವನ್ನೂ ಯಶವನ್ನೂ ತಂದು ಕೊಡುತ್ತಿದೆ. ಸೊಕ್ಕಿನ ಸ್ವಭಾವ, ಬಿರುಸು ಮಾತು, ಅಸ್ತವ್ಯಸ್ತ ಪೋಷಾಕು, ಮೊದಲಾದ ಅಸಹ್ಯ ನಡತೆಗಳು ಶಿಕ್ಷಕನು ಎಷ್ಟೇ ಕುಶಲನೂ ಪಂಡಿತನೂ ಇದ್ದಾಗ್ಯೂ ಆತನಿಗೆ ಶ್ರೇಯಸ್ಸನ್ನು ತಂದು ಕೊಡಲಾರವು.

ವ್ಯಕ್ತಿತ್ವವನ್ನು ರೂಪುಗೊಳಿಸುವದು ನಮ್ಮ ಕೈಯಲ್ಲಿದೆ. ನಾವು ತಿದ್ದಿ ತೀಡಿಕೊಂಡಂತೆ ನಮ್ಮ ವ್ಯಕ್ತಿತ್ವವು ತಯಾರಾಗುತ್ತಿದೆ. ಹಾಗಾದರೆ ಅದನ್ನು ತಿದ್ದಿ ತೀಡಿ ಸುಧಾರಿಸಿಕೊಳ್ಳಲು ಅಲ್ಪಸ್ವಲ್ಪಕ್ಕೆ ಶಕ್ಯವಿದೆಯೆಂದಂತಾಯಿತು. ಸೊಕ್ಕಿನ ನಡತೆ, ಬಿರುಸು ಮಾತು, ಅಸಹ್ಯ ಪೋಷಾಕು, ಇವೆಲ್ಲ ಆನುವಂಶಿಕವಲ್ಲ, ನಾವೇ ಮಾಡಿಕೊಂಡಂತಹವು. ತನ್ನಲ್ಲಿ ಅವುದಾದರೊಂದು ಅಸಹ್ಯ ನಡತೆಯು ಸೇರಿರುವದೋ ಹೇಗೆಂಬುದನ್ನು ಶಿಕ್ಷಕನು ಆಗಾಗ ತನ್ನನ್ನು ತಾನು ಪರೀಕ್ಷಿಸಿ ನೋಡಿಕೊಳ್ಳುವದೊಳಿತು. ತನ್ನ ವ್ಯಕ್ತಿತ್ವವನ್ನು ರಚಿಸಿಕೊಳ್ಳಲು ತನ್ನನ್ನು ತಾನು ಪರೀಕ್ಷಿಸಿಕೊಂಡರಷ್ಟೇ ಸಾಲದು. ತುಂಬು ವ್ಯಕ್ತಿತ್ವ ಹಾಗೂ ಸಂತೋಷದಾಯಕ ನಡೆನುಡಿಗಳುಳ್ಳವರ ಸಂಗಡ ಸ್ನೇಹ-ಸಂಪರ್ಕ ಬೆಳೆಯಿಸಿ ಅವರು ಅವುಗಳನ್ನು ಹೇಗೆ ಗಳಿಸಿಕೊಂಡರೆಂಬುದರ ಗುಟ್ಟನ್ನು ತಿಳಕೊಳ್ಳಲು ಪ್ರಯತ್ನಿಸಬೇಕು. ಆ ದಿಶೆಯಲ್ಲಿ ಆಳವಾಗಿ ಅಭ್ಯಾಸ ಮಾಡಿದುದರ ಪರಿಣಾಮವಾಗಿ ಕೆಳಗೆ ಕೊಟ್ಟಂತಹವುಗಳು ಮುಖ್ಯವಾಗಿವೆಯೆಂದು ಕಂಡುಬಂದಿದೆ:—

(೧) ಸಹಾನುಭೂತಿ	(೬) ಉತ್ಸಾಹ
(೨) ವೈಯಕ್ತಿಕ ಅಚ್ಚುಕಟ್ಟುತನ	(೭) ಪಾಂಡಿತ್ಯ
(೩) ವಿನೋದ ಸ್ವಭಾವ	(೮) ಆರೋಗ್ಯ
(೪) ಕಳಕಳಿ, ಕಕ್ಕುಲತೆ	(೯) ನ್ಯಾಯಶೀಲತೆ
(೫) ಆನಂದ ವೃತ್ತಿ	(೧೦) ಗಾಂಭೀರ್ಯ
	(೧೧) ಮುಂದಾಳುತನ

ಈ ಗುಣಗಳು ಶಿಕ್ಷಕ-ಶಿಕ್ಷಿಕೆಯರೆಲ್ಲರಲ್ಲಿರುವದು ಲೇಸು. ಅವುಗಳನ್ನೆಲ್ಲ ಸಂಪೂರ್ಣವಾಗಿ ಅಳವಡಿಸಿಕೊಳ್ಳುವದು ಒಂದು ವೇಳೆ ಶಕ್ಯವಾಗಲಿಕ್ಕಿಲ್ಲ. ಅದಾಗ್ಯೂ, ಆ ದಿಶೆಯಲ್ಲಿ ಹೆಣಗಾಡಿ ತಮ್ಮ ವೈಯಕ್ತಿಕ ವಿಕಾಸವನ್ನು ಹೆಚ್ಚಿಸಿಕೊಳ್ಳುವದು ಇಷ್ಟವಿದೆಯಷ್ಟೆ. ಹಳ್ಳಿಗಾಡಿನಲ್ಲಿ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನು ಪ್ರತ್ಯೇಕವಾದ ಹೆಚ್ಚಿನ ಹೊಣೆಯನ್ನು ಹೊತ್ತುಕೊಂಡು ಕೆಲಸ ಮಾಡಬೇಕಾಗುವದರಿಂದ ಶಿಕ್ಷಕವೃತ್ತಿಯ ಬಗೆಗಿನ ಹಲವು ಮುಖ್ಯ ಲಕ್ಷಣಗಳನ್ನು ದಿನಾಲು ಬಳಿಕೆಯಲ್ಲಿ ತಂದು ಅವುಗಳನ್ನು ತನ್ನಲ್ಲಿ ಅರಗಿಸಿಕೊಳ್ಳಲು ಪ್ರಯತ್ನಿಸಬೇಕು.

(೧) ವಿಕಾಸವನ್ನು ಹೊಂದುವ ಸಾಮರ್ಥ್ಯ

ಶಿಕ್ಷಕನು ದಿನದಿನಕ್ಕೆ ವಿಕಾಸವನ್ನು ಹೊಂದಲು ಉತ್ಸುಕತೆಯುಳ್ಳವನಿರಬೇಕು. ಶಿಕ್ಷಣವು ಕಾಲ ಕಾಲಕ್ಕೆ ಬದಲಾಗುತ್ತಿರುವದರಿಂದ ಆ ಬದಲಾವಣೆಗಳನ್ನು ಅರಿತುಕೊಳ್ಳಲು ಹಾತೊರೆಯುವವನಿರಬೇಕು. ಅವುಗಳನ್ನು ಅರಿತು ಅರಗಿಸಿಕೊಂಡರೆ, ಮಕ್ಕಳಿಗೆ ಹುರಿದುಂಬಿಸಿ ಹೊಸ ಸಂಗತಿಗಳನ್ನು ಕಲಿಯಲು ಪ್ರೋತ್ಸಾಹಿಸಬಲ್ಲನು. ಶಿಕ್ಷಕನು ಯಾವಾಗಲೂ ವಿದ್ಯಾರ್ಥಿಯಾಗಿ ಹೊಸ ಸಂಗತಿಗಳನ್ನು ಕಲಿಯುತ್ತಿರಬೇಕು. ಯಾಕಂದರೆ, ವಿಷಯಸಂಗ್ರಹವಿಲ್ಲದ ಶಿಕ್ಷಕನು ಕಲಿಸುವ ಬಗೆ ಹೇಗೆ? ಜ್ಞಾನವಿಕಾಸವನ್ನು ಹೊಂದಲು ಬಯಸುವದಾದರೆ, ಹೊಸ ವಿಚಾರಗಳನ್ನು ಚನ್ನಾಗಿ ಅರಿತುಕೊಳ್ಳುವ ಆತುರತೆ ಆತನಲ್ಲಿ ಉದಯಿಸಬೇಕು. ಆ ಮೇಲೆ ಆ ವಿಚಾರಗಳನ್ನು ಕೃತಿಗಳಿಸುವ ಎದೆಗಾರಿಕೆ ಉತ್ಸುಕತೆಗಳು ಅವನಲ್ಲಿ ತಲೆದೋರಬೇಕು. ಈ ದೃಷ್ಟಿಯಿಂದ ವಿಚಾರಮಾಡಿ ನೋಡಿದರೆ, ಮಕ್ಕಳಷ್ಟೇ ವಿದ್ಯಾರ್ಥಿಗಳಲ್ಲ, ಶಿಕ್ಷಕನೂ ವಿದ್ಯಾರ್ಥಿಯಾಗಿದ್ದಾನೆ.

ಪ್ರಗತಿಪರನಾಗಬೇಕೆಂಬ ಆತುರತೆಯು ಸಂಜೆ ಹಳ್ಳಿಯ ಸಾಲೆಯಲ್ಲಿ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನಿಗೆ ಹೇಳತೀರದಷ್ಟು ಮಹತ್ವದ್ದಿದೆ. ಯಾಕಂದರೆ, ಅಲ್ಲಿ ಸುಶಿಕ್ಷಿತರು ಸಿಗುವದು ಅಪರೂಪ ಮತ್ತು ಮುಂಜಾನೆಯಿಂದ ಸಂಜೆಯ ವರೆಗೆ ಆತನ ವೇಳೆಯೆಲ್ಲ ಚಿಕ್ಕಮಕ್ಕಳ ಸಹವಾಸದಲ್ಲಿಯೂ ನಿರಕ್ಷರಿಗಳಾದ

ಹಳ್ಳಿಗರ ಸಂಪರ್ಕದಲ್ಲಿಯೂ ವ್ಯಯವಾಗುತ್ತಿದೆ. ಹೆಚ್ಚಿನ ವಿಚಾರಗಳ ವಿನಿಮಯಕ್ಕೆ ಅಲ್ಲಿ ಆಸ್ಪದವೇ ಸಿಕ್ಕುವದಿಲ್ಲ. ಆದುದರಿಂದ, ವಿಕಾಸವನ್ನು ಹೊಂದೇ ತೀರಬೇಕೆಂಬ ತನ್ನ ಹಂಬಲವು ಹಿಂಗದಂತೆ ಮುನ್ನೆಚ್ಚರಿಕೆಯನ್ನು ವಹಿಸದಿದ್ದರೆ, ಅವನ ಪ್ರಗತಿಯು ಸ್ಥಗಿತವಾಗುವ ಭಯವಿದೆ. ಸಾಲೆಯಲ್ಲಿ ಕಲಿಸುವಾಗ ಮಕ್ಕಳ ಬುದ್ಧಿ ಮಟ್ಟಕ್ಕೆ ಬಂದು ನಿಲ್ಲಬೇಕಾಗುತ್ತಿದೆಯೆಂಬ ಮಾತು ನಿಜವಿದ್ದಾಗ್ಯೂ, ಆತನು ಸಾಲೆಯಲ್ಲಿಯೂ ಹಳ್ಳಿಗರಲ್ಲಿಯೂ ಮುಂದಾಳುತನದ ಹೊಣೆಯನ್ನು ಹೊರುವ ಯೋಗ್ಯತೆಯನ್ನು ಪಡೆಯಲು ಆತನು ಮುಂಜಾಗ್ರತೆಯನ್ನು ತಕ್ಕೊಳ್ಳುವದು ಲೇಸು. ತನ್ನ ವೃತ್ತಿಯಲ್ಲಿಯೂ ಸಮಾಜದಲ್ಲಿಯೂ ತಲೆದೋರುವ ಮಾರ್ಪಾಟುಗಳನ್ನು ಎಲ್ಲರಕಿಂತ ಮೊದಲು ಗ್ರಹಣ ಮಾಡಿಕೊಂಡಿಟ್ಟಿರಬೇಕು. ಅದರಲ್ಲಿ ಎಂದೂ ಹಿಂದೆ ಬೀಳಬಾರದು. ಶಿಕ್ಷಕನಾಗಿ ಕಾಯಂ ಆದ ಮೇಲೆ ತನ್ನ ಕಲಿಯುವಿಕೆಯು ಮುಗಿಯಿತೆಂಬ ಭಾವನೆಯಿಂದ ಪ್ರಗತಿಪರನಾಗಲು ಹಂಬಲಿಸದೆ ನಿಂತಲ್ಲೇ ನಿಂತು ಬಿಡುವದುಂಟು. ಇದು ನಿಜಕ್ಕೂ ವಿಷಾದ ಪಡತಕ್ಕ ಸಂಗತಿಯು! ತನ್ನ ಕೈಯಲ್ಲಿ ಕಲಿಯುವ ಮಕ್ಕಳಿಗೆ ಹುರಿದುಂಬಿಸಿ ಹೊಸ ಹೊಸ ವಿಷಯಗಳ ಜ್ಞಾನವನ್ನು ಮಾಡಿಕೊಡುವ ಹೊಣೆಯನ್ನು ಹೊತ್ತಂತಹ ಶಿಕ್ಷಕನು ಪ್ರಗತಿಶೀಲನಾಗದೆ ಹಿಂದುಳಿಯುವದು ಇಷ್ಟವೇ? ಆತನು ಎರಡು ತೆರನಾಗಿ ತನ್ನನ್ನು ತಾನೇ ತಿದ್ದಿ ತೀಡಿಕೊಳ್ಳಬಲ್ಲನು. ಮೊದಲನೆಯದು, ಶಿಕ್ಷಣ ಕ್ಷೇತ್ರದಲ್ಲಿ ಕಾಲಕಾಲಕ್ಕೆ ತೈದೋರುವ ಮಾರ್ಪಾಟುಗಳನ್ನೂ ಸುಧಾರಿಸಿದ ಕಲಿಸುವ ಬಗೆಗಳನ್ನೂ ಹೊಸ ವಿಷಯಗಳನ್ನೂ ಅಮೌಲ್ಯವಾದ ಉಪಕರಣಗಳನ್ನೂ ಆತನು ಅರಿತುಕೊಳ್ಳಬೇಕು. ಎರಡನೆಯದು, ಹೊರಗಿನ ಜಗತ್ತಿನಲ್ಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ, ಔದ್ಯೋಗಿಕ ಮೊದಲಾದ ಕ್ಷೇತ್ರಗಳಲ್ಲಿ ಆಗಾಗ ಸಂಭವಿಸುವ ಸಂಗತಿಗಳನ್ನು ಓದಿಕೊಂಡು ಶಿಕ್ಷಣದ ದೃಷ್ಟಿಯಿಂದ ಅವುಗಳಿಗಿರುವ ಮಹತ್ವವನ್ನು ಮನನ ಮಾಡಿಕೊಳ್ಳಬೇಕು. ಯಾಕಂದರೆ, ಇವೆಲ್ಲವುಗಳ ಜ್ಞಾನವು ಸಾಕಷ್ಟಾಗಿತ್ತೆಂದರೆ, ಆತನು ಆ ಸಂಗತಿಗಳ ಬಗೆಗೆ ಮಕ್ಕಳಗೂಡ ಚರ್ಚಿಮಾಡಿ ಅವುಗಳಿಂದ ಅವರ ಜೀವನದ ಮೇಲಾಗುವ ಪರಿಣಾಮವನ್ನು ಮತ್ತು ಸಾಲೆಗೂ ಹೊರಗಿನ ಜಗತ್ತಿಗೂ ಇರುವ ಸಂಬಂಧವನ್ನು ತೋರಿಸಿಕೊಡಲು ಸಮರ್ಥನಾಗುವನು. ಸಂಣ ಹಳ್ಳಿಗಳ ಸಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕನಿಗೆ ತನ್ನ ವಿಕಾಸವನ್ನು ಮಾಡಿಕೊಳ್ಳಲು ಪ್ರಸಂಗಗಳು ತೀರ ಕಡಿಮೆಯೆಂಬ ಮಾತು ನಿಜವಿದೆ. ಆದಾಗ್ಯೂ, ತನ್ನನ್ನು ತಾನು ಸುಧಾರಿಸಿಕೊಳ್ಳಲು ಮಾರ್ಗಗಳಿವೆ. ತನ್ನ ಕೈಗೆ ಸಿಕ್ಕ ದೈನಿಕ ಸಾಪ್ತಾಹಿಕ ಮಾಸಿಕ ಪತ್ರಿಕೆಗಳನ್ನು ಇಲ್ಲವೆ ಪುಸ್ತಕಗಳನ್ನು ಓದಿಕೊಳ್ಳುವನು; ಗ್ರುಪ್ ಸಮ್ಮೇಲನಗಳಲ್ಲಿ ಭಾಗವಹಿಸಿ ಉಳಿದ ಶಿಕ್ಷಕರ ಅನುಭವವನ್ನು ಪಡೆಯುವನು; ಸಮೀಪವಿದ್ದ ಟ್ರೇನಿಂಗ ಸಂಸ್ಥೆಯನ್ನು ಸಂದರ್ಶಿಸಿ ಕಲಿಸುವ ಹೊಸ ಪದ್ಧತಿಗಳನ್ನು ಕಲಿಯುವನು; ಸಾಮಾಜಿಕ ಉತ್ಸವಗಳಲ್ಲೆಲ್ಲ ಭಾಗವಹಿಸಿ ಅವುಗಳ ವೈಶಿಷ್ಟ್ಯಗಳನ್ನೆಲ್ಲ ಅಭ್ಯಸಿಸುವನು. ಹೀಗೆ ಮಾಡುವದರಿಂದ ಆತನಲ್ಲಿ ಆತ್ಮವಿಶ್ವಾಸವು ಬೇರೂರಿ ಇಲ್ಲದ ಉತ್ಸುಕತೆಯನ್ನು ಹುಟ್ಟಿಸಿ ಆತನಿಗೆ ಬಡತಿಯನ್ನು ತಂದು ಕೊಡುವದುಂಟು. ಸಂಣ ಹಳ್ಳಿಗಳ ಸಾಲೆಗಳಲ್ಲಿ ಕೆಲಸ ಮಾಡುವ ಶಿಕ್ಷಕ–ಶಿಕ್ಷಿಕೆಯರಿಗೆಲ್ಲ ಮೇಲೆ ಹೇಳಿದ ಅನುಕೂಲತೆಗಳನ್ನೆಲ್ಲ ಒದಗಿಸಿ ಕೊಡುವದು ಶಿಕ್ಷಣ ಖಾತೆಯ ಮುಖ್ಯ ಕರ್ತವ್ಯವಾಗಿದೆ. ಈ ದಿಶೆಯಲ್ಲಿ ಖರ್ಚಾದ ದುಡ್ಡು ಲಾಭದಾಯಕವಾದೊಂದು ಉದ್ದಿಮೆಯಲ್ಲಿ ತೊಡಗಿಸಿದ ಹಣದಂತಿದೆ.

(ಮುಂದುವರಿಯುವದು)

ಹೊಸ ಪಾಠ್ಯಕ್ರಮದಲ್ಲಿ ಹಿಂದೀಯಸ್ಥಾನ

ಲೇಖಕರು : ಶ್ರೀ. ಗಣೇಶ ಪ್ರಸಾದ ಸಿಂಹ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಒಂದನೆಯದಾಗಿ, ಹಿಂದೀಯ ವ್ಯಾವಹಾರಿಕ ಶಬ್ದಾವಲಿಯನ್ನು ಸ್ವಾಭಾವಿಕವಾಗಿ ಹೆಚ್ಚಿಸುವದು ಅಗತ್ಯವಾಗಿದೆ. ಈ ಕಾರ್ಯವು ಒಂದು ದಿನದ ಅಥವಾ ಒಂದು ವರ್ಷದ ಕಾರ್ಯವಲ್ಲ. ಕೆಲವರು ವಿದ್ವಾಂಸರು ಸಂಸ್ಕೃತದಿಂದ ಕಠಿಣ ಶಬ್ದಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ಸರಿಯಾಗಿದ್ದರೂ ಸದ್ಯದ ಹಿಂದೀಯು ಪಚನ ಮಾಡಿಕೊಳ್ಳುವಷ್ಟನ್ನು ಮಾತ್ರ ತೆಗೆದುಕೊಳ್ಳುವದರ ಕಡೆಗೆ ಲಕ್ಷ್ಯಗೊಡಬೇಕು. ಭಾರತದ ಅನ್ಯ ಪ್ರಚಲಿತ ಸುವಿಕಸಿತ ಭಾಷೆಗಳಿಂದ ಉಪಯುಕ್ತ ಶಬ್ದಗಳನ್ನು ತೆಗೆದುಕೊಳ್ಳಲು ನಾವು ಹಿಂದು-ಮುಂದು ನೋಡಬಾರದು. ಶಾಸನ ಹಾಗೂ ವಿಜ್ಞಾನ ಸಂಬಂಧದ ಶಬ್ದಗಳ ಕೊರತೆಯೂ ಇದೆ. ನೇಪಾಳೀ, ಮರಾಠೀ, ಹಾಗು ಇತರ ದಕ್ಷಿಣ ಭಾರತದ ಭಾಷೆಗಳಿಂದ ಶಾಸನಸಂಬಂಧದ ಶಬ್ದಗಳು ದೊರೆಯಬಹುದು. ಛತ್ರಪತಿ ಶಿವಾಜಿಯ ಕಾಲದಿಂದ ಪೇಶವಾ ವರೆಗೆ ಮರಾಠಾ ಶಾಸನ ವ್ಯವಸ್ಥೆ ಮತ್ತು ಮೈಸೂರಿನ ಶಾಸನ ವ್ಯವಸ್ಥೆಯು ಭಾರತೀಯ ಭಾಷೆಯಲ್ಲೇ ಆಗುತ್ತಿತ್ತು. ವಿಜ್ಞಾನದ ಬೆಳವಣಿಗೆ ಇಂಗ್ಲೀಷರ ಕಾಲದಲ್ಲಿ ಆಯಿತು. ಬಂಗಾಲ, ಮದ್ರಾಸ, ಮುಂಬಯಿ ಪ್ರದೇಶಗಳು ಮೊದಲು ಇಂಗ್ಲಿಷರ ಸಂಪರ್ಕದಲ್ಲಿ ಬಂದುದರಿಂದ ಈ ಪ್ರದೇಶದ ಭಾಷೆಗಳಲ್ಲಿ ವಿಜ್ಞಾನದ ಶಬ್ದಗಳು ದೊರೆಯಬಹುದು. ಸಾವಕಾಶವಾಗಿ ಈ ಶಬ್ದಗಳನ್ನು ಆಯ್ದುಕೊಂಡು ಅವುಗಳ ಜಾದಿಯನ್ನು ವರ್ಗವಾರ ಸಿದ್ಧಗೊಳಿಸಬೇಕು. ನಂತರ ವರ್ಗವಾರ ಪಾಠಗಳನ್ನು ತಯಾರಿಸುವಾಗ ಅವನ್ನು ಉಪಯೋಗಿಸಿ ಕತೆ, ಇತರ ವಿಷಯಗಳನ್ನು ಪರಿಣಾಮಕಾರಿಯಾಗಿ ಇಟ್ಟರೆ ವಿದ್ಯಾರ್ಥಿಗಳು ಭಾಷೆ, ಸಂಸ್ಕೃತಿ, ಭೂಗೋಲ ಮುಂತಾದವುಗಳನ್ನು ಒಟ್ಟಿಗೆ ಕಲಿಯಬಹುದು. ಮುಖ್ಯ ಪಠ್ಯ ಪುಸ್ತಕಗಳಲ್ಲಿ ಇಂಥ ಒಂದೆರಡು ಪಾಠಗಳು ಇರುವುದು ಉಚಿತವಾದುದು. ಆದರೆ ಈ ಕಾರ್ಯವು ಸಾವಕಾಶವಾಗಿಯೂ ಬಹು ಎಚ್ಚರದಿಂದಲೂ ಸಾಗಬೇಕು.

ಎರಡನೆಯದಾಗಿ, ಹಿಂದೀ ಹಾಗೂ ಇತರ ಭಾಷೆಗಳಲ್ಲಿಯ ವಿರಾಮ ಚಿಹ್ನಗಳನ್ನು ಕುರಿತು ವಿಚಾರ ಮಾಡಬೇಕಾದುದು ಆವಶ್ಯಕವಿದೆ. ಬಹುತರವಾಗಿ ಸಮಸ್ತ ಭಾರತೀಯ ಭಾಷೆಗಳಲ್ಲಿ ಇಂಗ್ಲೀಷದಲ್ಲಿ ಪ್ರಯೋಗಿಸಲ್ಪಡುವ ವಿರಾಮಚಿಹ್ನಗಳೇ ಇವೆ. ಪ್ರತಿಯೊಂದು ಭಾಷೆಯ ಪ್ರವಾಹ ಹಾಗು ಆರೋಹ ಅವರೋಹಗಳು ಭೌಗೋಲಿಕ ಪರಿಸ್ಥಿತಿಯನ್ನು ಅನುಸರಿಸಿ ವಿಕಸಿತವಾಗಿವೆಯೆಂಬುದನ್ನು ಮೇಲೆ ಹೇಳಲಾಗಿದೆ. ಆದುದರಿಂದ ಇಂಗ್ಲೀಷದ ವಿರಾಮ ಚಿಹ್ನಗಳನ್ನೇ ಹಿಂದೀಯ ಮೇಲೆ ಹೇರುವದು ಸ್ವಾಭಾವಿಕವಾಗಲಾರದು. ಕವಿಗಳ, ಲೇಖಕರ, ಭಾಷಣಕಾರರ ಮೇಲೆ ಈ ಪದ್ಧತಿಯು ಕೆಟ್ಟ ಪರಿಣಾಮ ಮಾಡಲಾರದು. ಆದರೆ ಚಿಕ್ಕ ಮಕ್ಕಳ ಪಠನ ಪ್ರವಾಹಕ್ಕೆ ಇದರಿಂದ ಪೆಟ್ಟು ಬೀಳಬಹುದು. ವಿದ್ಯಾರ್ಥಿಗಳು ಓದುವಾಗ ವಿಶೇಷವಾಗಿ 'ಆ '.........'ಊಂ' ಎಂದು ಓದುವದಕ್ಕೆ ಅವರ ಭಾಷೆಯಲ್ಲಿ ಪೂರ್ಣವಿರಾಮ ಚಿಹ್ನಗಳು ಅವರಿಗೆ ಬೇಕಾದಂತೆ ಇಲ್ಲದಿರುವದೇ ಕಾರಣವಾಗಿದೆ. ಈ ಬಗ್ಗೆಯೂ ಗಡಿಬಿಡಿಮಾಡದೆ ಶಿಕ್ಷಣಜ್ಞರೂ ವಿದ್ವಾಂಸರೂ ಒಂದೆಡೆ ಸೇರಿ ಕೂಲಂಕಷವಾಗಿ ವಿಚಾರ ಮಾಡಿ, ಅಗತ್ಯ ಬಿದ್ದಂತೆ ವಿರಾಮ ಚಿಹ್ನಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡುವದೂ ಯೋಗ್ಯವೆನಿಸಿದೆ. ಪ್ರಾಥಮಿಕ, ಮಾಧ್ಯಮಿಕ ಶಾಲೆಗಳ ಪಠ್ಯಪುಸ್ತಕಗಳಲ್ಲಿ ಇವುಗಳ ಸರಿಯಾದ ಉಪಯೋಗವು ಆಗುವುದು ಅಗತ್ಯದ್ದಾಗಿದೆ.

ಮೂರನೆಯದಾಗಿ, ನಾವು ಲಿಪಿಯ ಸಂಬಂಧವಾಗಿಯೂ ಗಮನ ಕೊಡಬೇಕಾದುದು ಅಗತ್ಯವಾಗಿದೆ, ಎಚ್ಚರ ವಹಿಸಬೇಕಾಗಿದೆ. ಇಂಗ್ಲೀಷ ಹಾಗು ಉರ್ದೂದ ಸಂಪರ್ಕದಿಂದ ಹಿಂದೀ ಲಿಪಿಯ-ದೇವ ನಾಗರಿಯ ಬರೆಹ ತೀರ ತಿರಸ್ಕೃತವಾಗಿದೆ. ಇಂಗ್ಲೀಷ ನಿಬ್ಬಿನಿಂದ ಹಿಂದೀಯನ್ನು ವಿದ್ಯಾರ್ಥಿಗಳು ಬರೆಯುತ್ತಾರೆ. ಒತ್ತರವಾಗಿ ಬರೆಯಲು ಸ್ಪರ್ಧಿಸುವದರಿಂದ ಅಕ್ಷರಗಳು ಕೆಟ್ಟು ಹೋಗುತ್ತವೆ. ದೇವನಾಗರಿ ಲಿಪಿಯ ವಿಕಾಸವು ದೇವತೆಗಳ ಪೂಜೆಗಾಗಿ ಸಿದ್ಧಗೊಳಿಸಿದ ಬೇರೆ ಬೇರೆ ಪ್ರಕಾರಗಳ ವೇದಿಕೆಗಳ ಆಧಾರದಿಂದಾಗಿದೆ. ದೇವನಾಗರಿಯ ಲಿಪಿಯನ್ನು ಎಷ್ಟು ಎಚ್ಚರದಿಂದ ಮತ್ತು ತತ್ಪರತೆಯಿಂದ ಬರೆಯಲಾಗುವುದೋ ಅಷ್ಟೇ ಅದರ ಉಪಯುಕ್ತತೆಯೂ ಹೆಚ್ಚುವದು. ಆದ್ದರಿಂದ ಸುಂದರ ಮತ್ತು ಶುದ್ಧ ಬರೆಹದ ಕಡೆಗೆ ವಿಶೇಷ ಲಕ್ಷ್ಯವನ್ನು ಕೊಡಬೇಕಾಗಿದೆ.

ನಾಲ್ಕನೆಯದಾಗಿ, ಭಾಷೆಯ ರೂಪದ ಕಡೆಗೂ ಗಮನಕೊಡಬೇಕಾಗಿದೆ. ಹಿಂದೀ ಮಾತೃಭಾಷೆಯೂ ಆಗಿದೆ, ರಾಷ್ಟ್ರಭಾಷೆಯೂ ಆಗಿವೆ. ಹಿಂದೀಯಲ್ಲಿ ಪ್ರಾದೇಶಿಕ ಹಾಗು ಸ್ಥಾನಿಕ 'ಮಾತು-ನುಡಿ' ಗಳು ತುಂಬಿವೆ. ಈ ಮಾತುಗಳು ಹರಹರದಾರಿಗೂ ಬದಲಾಗುತ್ತವೆಂದು ಹೇಳುತ್ತಾರೆ. ಈ ತೊಂದರೆಯನ್ನು ಎದುರಿಸಬೇಕಾಗಿದೆ. ಈ ದೃಷ್ಟಿಯಿಂದ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಶಿಕ್ಷಕರ ಹೊಣೆಯು ಗುರುತರವಾಗಿದೆ. ವಿದ್ಯಾರ್ಥಿಯು ಭಾವ ಪ್ರಕಾಶನವನ್ನು ತನ್ನ ಮಾತಿನಲ್ಲಿ ಮಾಡುವದು ಖಂಡಿತ. ಅವನನ್ನು ಹಾಗೆ ಮಾಡಗೊಡದಿದ್ದರೆ ಶಿಕ್ಷಣವೂ ಸಂಸ್ಕಾರವೂ ಅಸಂಭವವಾಗುವವು. ವಿದ್ಯಾರ್ಥಿಯ ಭಾವ ವಿಕಾಸವೇ ಆಗಲಿಕ್ಕಿಲ್ಲ. ಆದ್ದರಿಂದ ಅಧ್ಯಾಪಕರು ವಿದ್ಯಾರ್ಥಿಗೆ ತನ್ನ ಮನೆಯ ಮಾತಿನಲ್ಲಿಯೇ ಮೊದಲು ಭಾವ ವ್ಯಕ್ತ ಮಾಡಗೊಡಬೇಕು. ಮತ್ತು ತಾವು ಶುದ್ಧ ಭಾಷೆಯಲ್ಲಿಯೇ ಉತ್ತರ ಕೊಡಬೇಕು ಹಾಗು ಕಲಿಸಬೇಕು. ಆಗಾಗ್ಗೆ ಮನೆತನದ ಮಾತುಗಳಿಗೆ ಅಭಿನಯ, ವಾದವಿವಾದ, ಸಮಾಚಾರ ವಿತರಣಗಳ ಪ್ರಸಂಗಗಳಲ್ಲಿ ಎಡೆಯನ್ನು ಕೊಡಬೇಕು. ಹೀಗೆ ಮಾಡುವದರಿಂದ ಬಾಲಕನು ತನ್ನ ಮಾತಿನ ಮುಖಾಂತರವೇ ಸಾವಕಾಶವಾಗಿ ಶುದ್ಧ ಭಾಷೆಯನ್ನೂ ಸಾಹಿತ್ಯಿಕ ಭಾಷೆಯನ್ನೂ ಗ್ರಹಿಸುತ್ತ ಹೋಗುವನು. ಹಳ್ಳಿಯ ಶಾಲೆಗಳಲ್ಲಿ ಕೃಷಿ ಸಂಬಂಧವಾಗಿ, ಪಟ್ಟಣದ ಪಾಠಶಾಲೆಗಳಲ್ಲಿ ನಗರದ ಉದ್ಯೋಗಗಳ ಸಂಬಂಧವಾಗಿ ಸರಳ ವಿಷಯಗಳನ್ನು ವಾದವಿವಾದಕ್ಕಾಗಿ ತೆಗೆದುಕೊಳ್ಳಬೇಕು, ಒಂದು ವರ್ಗವನ್ನು 'ವಾದಿ' 'ಪ್ರತಿವಾದಿ' ವರ್ಗಗಳಲ್ಲಿ ಹಂಚಬೇಕು ಮತ್ತು ಒಂದು ವರ್ಗವು ಮನೆಯ ಮಾತಿನಲ್ಲಿ, ಇನ್ನೊಂದು ವರ್ಗವು ಶುದ್ಧ ಭಾಷೆಯಲ್ಲಿ ತನ್ನ ವಿಚಾರವನ್ನು ವ್ಯಕ್ತಮಾಡಬೇಕೆಂದು ಹೇಳಬೇಕು. ಮತ್ತೊಂದು ಪ್ರಸಂಗದಲ್ಲಿ ಈ ಕ್ರಮವನ್ನು ಬದಲು ಮಾಡಬೇಕು. ಸಾಧ್ಯವಿದ್ದಷ್ಟು ಶುದ್ಧ ಭಾಷೆಯಲ್ಲಿಯೇ ಲೇಖನ-ಕಾರ್ಯವನ್ನು ಮಾಡಿಸಬೇಕು.

ಐದನೆಯದಾಗಿ, ವ್ಯಾಕರಣ ಸಂಬಂಧವಾಗಿರುವ ಸಮಸ್ಯೆಯನ್ನು ಬಿಡಿಸುವದು ಅಗತ್ಯವಿದೆ. ಈಗಿನ ಕಾಲದಲ್ಲಿ ಕೆಲವರು ಕವಿಗಳು, ಲೇಖಕರು ತಮ್ಮ ಕೃತಿಗಳಲ್ಲಿ ವ್ಯಾಕರಣ ನಿಯಮಗಳಿಗೆ ಕಟ್ಟು ಬೀಳದಿರುವುದರಲ್ಲಿಯೇ ತಮ್ಮ ಗೌರವವೆಂದು ತಿಳಿದುಕೊಂಡಿದ್ದಾರೆ. ಕಾಶಿಯ ಅಕ್ಕಪಕ್ಕದ ಪ್ರದೇಶದಲ್ಲಿ, ಭೋಜಪುರಿಯಲ್ಲಿ 'ने' ಪೂರ್ಣ ಬಹಿಷ್ಕೃತವಾಗಿದೆ. ಕೆಲವರಂತೂ ಹೀಗೆ ಮಾತನಾಡುತ್ತಾರೆ. :— वह कहा कि मैं जाऊंगा। ಇನ್ನೊಂದು ಸಮಸ್ಯೆ ಲಿಂಗದ್ದು. ಕೆಲವರು ಕೆಲಕೆಲವು ಆಧುನಿಕ ಶಬ್ದಗಳು ಸ್ತ್ರೀಲಿಂಗವೆಂದು ಭಾವಿಸಿ ಆ ರೀತಿಯಲ್ಲಿ ಬಳಸುತ್ತಿದ್ದಾರೆ. जाड़ा, कर ಶಬ್ದಗಳನ್ನು ಸ್ತ್ರೀಲಿಂಗದಂತೆ ಪ್ರಯೋಗಿಸುತ್ತಿರುವುದು ಕಂಡು ಬಂದಿದೆ. ಭಾರತೀಯ ಭಾಷೆಗಳಲ್ಲಿ 'ಲಿಂಗಾನುಶಾಸನ' ದ ಪರಿಸ್ಥಿತಿಯು ವಿಚಿತ್ರ ಇದೆ. ಇದು ಹೋಗಬೇಕಾದರೆ ಪ್ರಾರಂಭದಿಂದ ಶಬ್ದಗಳ ಕೋಷ್ಟಕಗಳನ್ನು ಮಾಡಿಸಿ, ರೋಚಕವಾಗುವಂತೆ ಕಲಿಸುವದು ಉಚಿತವಾದುದು.

ಆರನೆಯದಾಗಿ, ಪಾಠಗಳ ಆಯ್ಕೆಯೂ ಎಚ್ಚರದಿಂದಾಗಬೇಕು. ಗದ್ಯ-ಪದ್ಯದ ಪಾಠಗಳು ನಮ್ಮ ಸಂಸ್ಕೃತಿ ಮತ್ತು ಅವಶ್ಯಕತೆಗಳಿಗೆ ಅನುಸಾರವಾಗಿರಬೇಕು. ಇದರಲ್ಲಿ ಗಡಿಬಿಡಿ ಮಾಡಿದರೆ ಅರ್ಥಕ್ಕೆ ಅನರ್ಥ

ವಾಗುವದು. ಮಾತೃಭಾಷೆ ಹಿಂದೀಯ ಸ್ತರವನ್ನು ಎತ್ತರಿಸುವದಕ್ಕಾಗಿ ಅತ್ಯಂತ ಕಠಿಣ ಶಬ್ದಗಳನ್ನು ತುಂಬುವದು ವಿಹಿತವಲ್ಲ. ಆಯಾ ಕ್ಷೇತ್ರದ ವೀರ ಪುರುಷರ, ಸ್ತ್ರೀಯರ ಚರಿತ್ರೆಗಳೂ ಇತರ ವಿಷಯಗಳೂ ಪುಸ್ತಕಗಳಲ್ಲಿ ಅಡಕವಾಗಿರಬೇಕು. ಪಾಠಗಳ ಕೊನೆಯಲ್ಲಿ ಯೋಗ್ಯ ಅಭ್ಯಸನಗಳು, ವ್ಯಾಕರಣದ ವಿಷಯಕ ಅಭ್ಯಸನಗಳೂ ಇರಬೇಕು. ಪ್ರಬಂಧ ರಚನೆಯ ಕಡೆಗೂ ಲಕ್ಷ್ಯಗೊಡಬೇಕು. ಕವಿತೆಗಳಲ್ಲಿ ಜಾನಪದ ಗೀತಗಳ ಸಮಾವೇಶವೂ ಆಗಬೇಕು. ಮನೆ ಮತ್ತು ಪಾಠಶಾಲೆಗಳು ಹತ್ತಿರ ಬರುವ ರೀತಿಯಲ್ಲಿ ಪಾಠಗಳ ಆಯ್ಕೆ ಆಗುವುದು ಉಚಿತವಾದುದು.

ಏಳನೆಯದಾಗಿ, ಹಿಂದೀ ಮಾತೃಭಾಷಾ ಪರೀಕ್ಷಾ ಪದ್ಧತಿಯನ್ನು ಕುರಿತು ವಿಚಾರಮಾಡುವುದೂ ಅಗತ್ಯವಿದೆ. ಎಂಟನೆಯ ವರ್ಗದ ವರೆಗೂ ಮೇಲಿನ ವರ್ಗಗಳ ಪರೀಕ್ಷಾ ಪದ್ಧತಿಯೇ ಪ್ರಚಾರದಲ್ಲಿದೆ. ಪರೀಕ್ಷೆಯಲ್ಲಿ ಅರ್ಥ, ಭಾವಾರ್ಥ, ಶಬ್ದ ಪ್ರಯೋಗ ಹಾಗು ಅರ್ಥ, ಒಂದೆರಡು ಕತೆ, ನಿಬಂಧ ಮುಂತಾದವುಗಳ ಬಗ್ಗೆ ಪ್ರಶ್ನೆ ಕೇಳಲಾಗುತ್ತಿದೆ. ಮೌಖಿಕ ಪರೀಕ್ಷೆಯು ಕೆಳಗಿನ ವರ್ಗಗಳಲ್ಲಿಯೂ ಇದ್ದಂತೆ ಇಲ್ಲ. ಅಧ್ಯಾಪಕರು ವಿದ್ಯಾರ್ಥಿಗಳ ಕೆಲವೇ ವಿಷಯಗಳ ವಿಷಯಾಂಗಗಳ ಪರೀಕ್ಷೆಯ ಕಡೆಗೆ ಲಕ್ಷ್ಯಗೊಡುತ್ತಾರೆ. 'ಭಾಷಣ' ದ ಸ್ವಾಭಾವಿಕ ವಿಕಾಸಕ್ಕೆ ಪ್ರೋತ್ಸಾಹವಿಲ್ಲ. ಕೆಲವು ಪ್ರಸಂಗಗಳಲ್ಲಿ ಅಭಿನಯ, ವಾದ ವಿವಾದಗಳು ಜರುಗಿದರೆ ಅವುಗಳ ಪರಿಣಾಮಣ ವಾರ್ಷಿಕಪರೀಕ್ಷೆಯ ಮೇಲೆ ಆಗುವುದಿಲ್ಲ. ಆದ್ದರಿಂದ ಕವಿತೆ ಪಾಠ ಮಾಡುವುದು, ಜಾನಪದ ಗೀತ ಅನ್ನುವದು, ಒಳ್ಳೆಯ ವಾಚನ, ವ್ಯಾಖ್ಯಾನ ಮುಂತಾದವುಗಳನ್ನು ಗಮನಕ್ಕೆ ತಂದುಕೊಂಡು ಎಂಟನೆಯ ಇಯತ್ತೆಯ ವರೆಗೆ ಮೌಖಿಕ ಪರೀಕ್ಷೆಯನ್ನು ಅವಶ್ಯವಾಗಿ ತೆಗೆದುಕೊಳ್ಳುವ ಯೋಜನೆಯಿರಬೇಕು.

ಕೊನೆಯದಾಗಿ, ಹಿಂದೀ ಅಧ್ಯಾಪಕರ ವಿಷಯವಾಗಿ ಕೆಲವು ವಿಚಾರಗಳನ್ನು ಹೇಳುವುದು ಅಪ್ರಾಸಂಗಿಕವಾಗಲಿಕ್ಕಿಲ್ಲ. ಹಿಂದೀ ಅಧ್ಯಾಪಕರ ಹೊಣೆಯು ಹೆಚ್ಚಿದೆ. ಟ್ರೇನಿಂಗ ಹೊಂದಿದವರು ಈ ಕ್ಷೇತ್ರದಲ್ಲಿ ಬರತೊಡಗಿರುವದು ಆನಂದದ ಸಂಗತಿ. ಅಧ್ಯಾಪಕರು ಕರ್ತವ್ಯನಿಷ್ಠರಾಗಬೇಕಾದುದು ಅವಶ್ಯಕ. ಮಕ್ಕಳಲ್ಲಿ ಅನುಕರಣ ಪ್ರವೃತ್ತಿ ಹೆಚ್ಚು ಇರುತ್ತದೆ. ಅಧ್ಯಾಪಕರದ-ವ್ಯಕ್ತಿತ್ವದ ಪ್ರಭಾವವು ಮಕ್ಕಳ ಮೇಲೆ ಪಾಠ್ಯ ಪುಸ್ತಕಗಳಿಗಿಂತ ಹೆಚ್ಚು ಬೀಳುತ್ತದೆ. ಆದ್ದರಿಂದ ಹಿಂದೀ ಅಧ್ಯಾಪಕರು ಭಾರತದ ಮಸ್ತಕವು ಉನ್ನತವಾಗಿರುವಂತೆ ಮಾಡುವದಕ್ಕಾಗಿ ತಮ್ಮ ವ್ಯಕ್ತಿತ್ವವನ್ನು ಅಧ್ಯಯನ, ಅಧ್ಯಾಪನ, ವ್ಯವಹಾರ, ಉಪಚಾರದಿಂದ ಹೆಚ್ಚಿಸಿಕೊಳ್ಳಬೇಕು. ಹಾಗಿಲ್ಲದೆ ಹೋದರೆ ಹರಿಶ್ಚಂದ್ರ, ಶಿವಾಜಿ, ದ್ರೋಣ, ಭೀಷ್ಮ, ಸಾವಿತ್ರಿ, ಪ್ರತಾಪಸಿಂಹ, ಅಶೋಕ ಮುಂತಾದವರ ಪಾಠಗಳನ್ನು ಪ್ರಭಾವಿಯಾಗಿ ಹೇಗೆ ಕಲಿಸಬಲ್ಲರು! ಅಧ್ಯಾಪಕರ ಅಧ್ಯಯನವು 'ಸ್ವಾಂತಃ ಸುಖಾಯ' (ತನ್ನ ಸುಖಕ್ಕಾಗಿ) ಮಾತ್ರ ಆಗಿರದೆ ವಿದಾರ್ಥಿಗಳ ಕಲ್ಯಾಣಕ್ಕಾಗಿಯೂ ಇದೆ ಎಂಬುದನ್ನು ಮರೆಯಬಾರದು. ತಮ್ಮ ಅಧ್ಯಯನದ ಫಲವನ್ನು ವಿದ್ಯಾರ್ಥಿಗಳಿಗೂ ಒದಗಿಸಬೇಕು. ಭಾಷಾ ಶಿಕ್ಷಣ ಪದ್ಧತಿಯಲ್ಲಿರುವ ಎಡರುಗಳನ್ನು ದೂರಮಾಡಿ ದೊರೆತ ಸಾಮುಗ್ರಿಯಿಂದ ಪಾಠವನ್ನು ಸಾಗಿಸಬೇಕು. ವಿದ್ಯಾರ್ಥಿಗಳು ಅಷ್ಟೊಂದು ಚುರುಕಾಗದಿದ್ದರೂ ಹತಾಶರಾಗದೆ, ಅವರೊಡನೆ ಸಹಾನುಭೂತಿಯಿಂದ ವರ್ತಿಸಿ ಅವರಿಗೆ ಪಾಠ ಹೇಳಿದರೆ, ಅವರೂ ನಿರಾಶರಾಗುವುದಿಲ್ಲ. ಈ ದೃಷ್ಟಿಯನ್ನು ಇಟ್ಟುಕೊಂಡು ಹಿಂದೀ ಅಧ್ಯಾಪಕರು ಮುಂದುವರಿದರೆ ಅವರು ತಮ್ಮ ಹೊಣೆಯನ್ನು ನೆರವೇರಿಸಿದಂತಾಗುವದು.

ಅನುವಾದಕರು :— **ಗುರುನಾಥ ಜೋಶಿ.**

(**ಟಿಪ್ಪಣಿ**: — ಈ ಲೇಖನದಲ್ಲಿ ಅಡಕವಾಗಿರುವ ಅನೇಕ ವಿಷಯಗಳು ಕನ್ನಡ ಭಾಷೆಗೂ, ಕನ್ನಡ ಶಿಕ್ಷಕರಿಗೂ ಅನ್ವಯಿಸುತ್ತವೆ, ಆದುದರಿಂದ ಕನ್ನಡ ಕಲಿಸುವ ಅಧ್ಯಾಪಕರೂ ಈ ಲೇಖನದ ಉಪಯೋಗ ಮಾಡಿಕೊಳ್ಳಬೇಕಾಗಿ ಬಿನ್ನಹ.—ಅನುವಾದಕ)

ಶರಾವತಿಯಿಂದ ತುಂಗಭದ್ರೆಗೆ

ಲೇಖಕರು : ಶ್ರೀ. ಆಯ್. ಎಸ್. ಬಿದರಿ ಟ್ರೇನಿಂಗ ಕಾಲೇಜ ಧಾರವಾಡ.

'ಚಿನ್ನದ ನಾಡಿದು ಮೈಸೂರು
ಗಂಧದ ಬೀಡಿದು ಮೈಸೂರು'

ಇತ್ಯಾದಿಯಾಗಿ ಮೈಸೂರಿನ ಬಗೆಗೆ ಕವಿವರರೋರ್ವರು ಹಾಡಿದ ಈ ಮಾತಿನ ಜೊತೆಗೆ ''ಅಂದದ ಆಗರ ಮೈಸೂರು'' ಎಂಬ ಉಕ್ತಿಯನ್ನು ಸೇರಿಸಿದರೆ ಮೈಸೂರಿನ ಕುಂದಣಕ್ಕೆ ಸುಗಂಧವನ್ನು ಬೆರಿಸಿದಂತಾಗುವದಿಲ್ಲವೇ? ಕೋಲಾರದ ಚಿನ್ನದ ಕಣಿಗಳಿಂದ ಚಿನ್ನದ ನಾಡೆಂಬ ಬಿರುದನ್ನು ಧರಿಸಿದ ಮೈಸೂರು, ಗಂಧದ ಗಿಡಗಳಿಂದ ಕೂಡಿದ ಆರಣ್ಯ ಸಂಪತ್ತಿನಿಂದ, ಗಂಧದೆಣ್ಣೆಯ ಕಾರಖಾನೆಗಳಿಂದ ಗಂಧದ ಕಟ್ಟಿಗೆಯ ಕೆತ್ತನೆಯ ಕೆಲಸಗಳಿಂದ, ಕಲಾಕುಸುರಿನಿಂದ, ಹಾಗೂ ಗಂಧದ ಸಾಬೂಣನ್ನು ತಯಾರಿಸುವ ಆಲಯಗಳಿಂದ ಗಂಧದ ಬೀಡೆಂದು ಅಗ್ಗಳಿಕೆಯನ್ನು ಪಡೆದಿದೆ. ಇದೇ ಬಗೆಯಾಗಿ ಮೈಸೂರು ಹೆಚ್ಚಾಗಿ ನಿಸರ್ಗ ಸೌಂದರ್ಯದ ಆಗರವೂ ಆಗಿದೆ. ಆಷ್ಟೇಕೆ ಸೌಂದರ್ಯಲಕ್ಷ್ಮಿಯು ತನ್ನ ಸೌಂದರ್ಯ ಪ್ರದರ್ಶನಕ್ಕಾಗಿ ನಿಸರ್ಗಲಲನೆಯಾಗಿ ಭೂಲೋಕಕ್ಕೆ ಇಳಿದು ಬಂದಿರುವಳೆಂಬಂತೆ ಭಾಸವಾಗದಿರದು ಶರಾವತಿಯಿಂದ ತುಂಗಭದ್ರೆಯ ವರೆಗೆ ಮೈಸೂರು ಸೀಮೆಯಲ್ಲಿ ಪ್ರವಾಸಮಾಡಿದ ಯಾತ್ರಿಕರಿಗೆ. ಈ ಪ್ರವಾಸವು ಹೆಚ್ಚಾಗಿ ಶಿವಮೊಗ್ಗಾ ಜಿಲ್ಹೆಯಲ್ಲಿ; ಕೆಲವುಟ್ಟಿಗೆ ಚಿತ್ರದುರ್ಗ ಜಿಲ್ಹೆಯಲ್ಲಿ ಆಗುವದು. ಮುಗಿಲನ್ನು ಮುದ್ದಿಡುವ ಗಿಡಮರಗಳಿಂದ, ಬಿದಿರು ಮೆಳೆಗಳಿಂದ, ಸಣ್ಣ-ದೊಡ್ಡ ಕಂಟಿಗಳಿಂದ, ಗಿಡಗಳಿಗೆ ಸುತ್ತಿದ ಹಲವಾರು ತರದ ಬಳ್ಳಿಗಳಿಂದ ದಟ್ಟವಾದ ಕಾಡು ಯಾತ್ರಿಕರ ಕಣ್ಣಿಗೆ ಹಬ್ಬದೂಟವನ್ನು ಉಣಿಸಿದರೆ, ಕಾಡಿನ'' ಗಿಡಗಂಟಿಯ ಕೊರಳೊಳಗಿಂದ'' ಹೊರಡುವ ಗಿಳಿ, ಗೊರವಂಕ, ಕೋಗಿಲೆ, ಕಾಜಾಣ ಮೊದಲಾದ ಹಕ್ಕಿಗಳ ಚಿಲಿಪಿಲಿ ರವವು ಕಿವಿಗೆ ಮಂಗಲ ನಿನಾದವನ್ನು ತರುವುದು. ಜೀವನದಲ್ಲಿ ಸಿಹಿ-ಕಹಿ ಇರುವಂತೆ ಸೌಂದರ್ಯದ ಆಗರವಾದ ಈ ಕಾಡಿನಲ್ಲಿ ಮಂಗಲ ನಿನಾದದೊಂದಿಗೆ ಕೆಲವು ಕ್ರೂರ ಮೃಗಗಳ ಭೀಕರ ಸ್ವರವೂ ಕೇಳಿ ಬರುವದುಂಟು. ಚಳಿಗೆ ನಡುಗದೆ, ಬಿಸಿಲಿಗೆ ಬಾಡದೆ, ಮಳೆಗೆ ಕೊಳೆಯದೆ ಸದಾವ ಕಾಲವೂ ಅದೇ ತೆರನಾಗಿ, ಆಷ್ಟೇ ರೂಪವತಿಯಾಗಿ, ಅಂತೆಯೇ ಆಕರ್ಷಿತಳಾಗಿ, ಪರಿಶೋಭಿತಳಾಗಿರುವ ಈ ವನಶ್ರೀಯ ಮುದ್ದುಗುವರಿಯರಲ್ಲಿ ಅತ್ಯಂತ ಲಾವಣ್ಯವತಿಯೇ ಚಿಕ್ಕವಳಾದ ಶರಾವತಿ. ಘೋರಾರಣ್ಯದ ಮಧ್ಯದಲ್ಲಿ ಅಂದರೆ ಸಹ್ಯಾದ್ರಿಯ ಶಿಖರವೊಂದರಲ್ಲಿ ಜನಿಸಿದ ಶರಾವತಿಯು ಹುಟ್ಟಿದಂದಿನಿಂದ ತಾಯಿ ನಿಸರ್ಗದೇವಿಯ ಲಾಲನೆ-ಪಾಲನೆಯನ್ನೂ ಯೌವನದವರೆಗೂ ಅಲ್ಲ- ಪತಿದೇವನಾದ ಸಾಗರನನ್ನು ಸೇರುವ ವರೆಗೂ ಹೊಂದಿರುವಳಲ್ಲ! ಇದಕ್ಕೇನೆನ್ನಬೇಕು? ಚಿಕ್ಕಮಗಳೆಂದು ತನ್ನ ಅಳಿಯನಲ್ಲಿಗೆ ಆಕೆಯನ್ನು ಕರೆದುಕೊಂಡು ಹೊರಟಿರುವಳೆಂದು ಕರೆಯಬೇಕೋ ಇಲ್ಲವೆ ಪತಿಗೃಹಕ್ಕೆ ತಾಯಿಯನ್ನು ಬಿಡಲಾರದ ಮಗಳ ಮಾತೃ ಭಕ್ತಿಯೆನ್ನಬೇಕೊ? ಮಾತೃ ಭಕ್ತಿಯೆಂಬುದೇ ನಿಜವಾದರೆ ಇಷ್ಟು ರಭಸದಿಂದ ಈ ಶರಾವತಿಯು ಗಂಡನಲ್ಲಿಗೆ ಧಾವಿಸುತ್ತಿರುವುದೇಕೆ? ಬಂಡೆಯಿಂದ ಬಂಡೆಗೆ ನೆಗೆಯುತ್ತಿರುವುದೇಕೆ? ದಾರಿಯಲ್ಲಿಯ ಗಿಡಮರಗಳನ್ನು ಬೇರು ಸಹಿತ ಉರುಳಿಸುತ್ತಿರುವುದೇಕೆ? ಆ ಜೋಗದ ಪತ್ತಿರ ಕಾಲುಜಾರಿ, ಜೋಲಿ ತಪ್ಪಿ ಸುಮಾರು ೯೦೦ ಅಡಿ ಆಳವಾದ ಕೊಳ್ಳದಲ್ಲಿ ಬೀಳುತ್ತಿರುವುದೇಕೆ? ಬಿದ್ದು ಪೆಟ್ಟು ಚೇತರಿಸಿಕೊಂಡು ಭೋರ್ಗರೆದು ಧಾವಿಸುತ್ತಿರುವುದೇಕೆ? ಇದೆಲ್ಲವೂ ಶರಾವತಿಯ ಪತಿಭಕ್ತಿ ಪಾರಾಯಣದ, ಪಾತಿವ್ರತ್ಯದ ಲಕ್ಷಣಗಳಲ್ಲದೆ ಮತ್ತೇನು? ಅದಕ್ಕೆಂತಲೇ ಜಗಚ್ಚಕ್ಷುವಾದ ಆ ಭಾಸ್ಕರನು ಈಕೆಗೆ ಸಪ್ತ

ಖಚಿತವಾದ ಮಣಿ ಹಾರವನ್ನು ತೊಡಿಸಿರುವನಲ್ಲವೇ? ಮಗಳಿಗೆ ದೃಷ್ಟಿಯಾದೀತೆಂದು ಸೃಷ್ಟಿಕರ್ತನು ಮಂಜಿನ ಮುಸುಕನ್ನು ಆಗಾಗ ತೆಳುವಾಗಿ, ಆಗಾಗ ದಟ್ಟವಾಗಿ ಹೊದಿಸಿರುವನಲ್ಲವೇ? ಮಂಜಿನ ಮುಸುಕು ಸೂರ್ಯನಾರಾಯಣನಿಂದ ಸರಿಸಲ್ಪಟ್ಟಾಗ ಒಂದು ಬಗೆಯಾದ ಅಂದದಿಂದ ಕಾಣುವ ನೀನು ಆ ಮುಸುಕು ಆವರಿಸಲ್ಪಟ್ಟಾಗ ಇನ್ನೊಂದು ಬಗೆಯ ಅಂದದಿಂದ ಕಾಣಿಸುವೆಯಲ್ಲ! ಹಗಲಿನಲ್ಲಿ ಒಂದು ರೀತಿಯಾಗಿ ಕಂಡರೆ ಬೆಳದಿಂಗಳಿನ ರಾತ್ರಿಯಲ್ಲಿ ಇನ್ನೊಂದು ಬಗೆಯಾಗಿ ಕಾಣುವಿ. ಒಂದು ಸ್ಥಳದಿಂದ ನೋಡಿದ ನಿನ್ನ ಆ ರೂಪರಾಶಿಯು ಮತ್ತೊಂದು ಸ್ಥಳದಿಂದ ಮತ್ತೊಂದು ತರನಾಗಿ ಗೋಚರಿಸುವದು. ದೂರ-ಸನಿಹದಿಂದ ನಿನ್ನ ದರುಶನಕ್ಕೆ ಬರುವ ಸೌಂದರ್ಯೋಪಾಸಕರಿಗೆ ಅವರವರ ದೃಷ್ಟಿಕೋನದಂತೆ ನೀನು ನಿನ್ನ ರೂಪ ತೋರಿಸುವಿ. ವಿಜ್ಞಾನಿಗಳಿಗೆ ಅಪಾರ ವಿದ್ಯುಚ್ಛಕ್ತಿಯ ಖನಿಯಾಗಿ, ಕವಿಗಳಿಗೆ ಕಾವ್ಯದ ಝರಿಯಾಗಿ, ಸಾಹಿತಿಗಳಿಗೆ ಸ್ಫೂರ್ತಿಯ ಸೆಲೆಯಾಗಿ, ರಸಿಕರಿಗೆ ಸರಸದ ಸರೋವರವಾಗಿ, ವಿರಾಮ ಹೊಂದಲು ಬಂದವರಿಗೆ ವಿರಮಿಸುವ ಸ್ಥಳವಾಗಿ, ದಂಪತಿಗಳಿಗೆ ಆದರ್ಶ ದಾಂಪತ್ಯದ ಕುರುಹಾಗಿ. ಹೀಗೆ ಹಲವು ಬಗೆಯ ಜನರಿಗೆ ಹಲವು ಬಗೆಯಾಗಿ ನೀನು ಗೋಚರಿಸುತ್ತಿರುವೆಯಲ್ಲ! ಧನ್ಯ ಶರಾವತಿ! ನಿನ್ನ ಅಪಾರ, ಅಗಮ್ಯ, ಅಗಣಿತ, ಅಸಾದೃಶ ಮಹಿಮೆಯನ್ನು ಎಷ್ಟೆಂದು ವರ್ಣಿಸಲಿ. ನಿನ್ನ ಈ ಅಲೌಕಿಕ ಸೌಂದರ್ಯ, ಉಪಮಾತೀತ ಮಾತೃಪ್ರೇಮ, ಅಸಾಧಾರಣವಾದ ಪತಿ-ಭಕ್ತಿ, ಅಸಂಖ್ಯ ತೆರನಾದ ಗೋಚರತೆ—ಇವೆಲ್ಲವುಗಳಿಂದ ನಾಡನ್ನು ಪುನೀತವನ್ನಾಗಿ ಮಾಡಿವೆ. ನಾಡವರು ನಿನ್ನ ಮಹಿಮೆಯನ್ನು ಹಾಡಿ ತಣಿಯದು, ನಿಚ್ಚಲುಚಿತವ ಮಾಡಿ ತಣಿಯುರು.

ಜೋಗದ ಸಮೀಪದಲ್ಲಿಯೇ ವಿದ್ಯುತ್ ಶಕ್ತಿಯನ್ನು ಜನಿಸುವ ಕಾರ್ಖಾನೆ ''ಮಹಾತ್ಮಾ ಗಾಂಧಿ ಹೈಡ್ರೋ ಇಲೆಕ್ಟ್ರಿಕ್ ವರ್ಕ್ಸ'' ಎಂಬ ಹೆಸರಿನಿಂದ ಸ್ಥಾಪಿತವಾಗಿದೆ. ಕರ್ನಾಟಕದಲ್ಲಿಯೇ ದೊಡ್ಡದಾದ ವಿದ್ಯುತ್ತಿನ ಕಾರ್ಯಾಗಾರ. ಮುಂಬಯಿ ರಾಜ್ಯಕ್ಕೂ ಈ ವರ್ಷದಿಂದ ಅಲ್ಲಿಂದಲೇ ವಿದ್ಯುತ್ ದೊರಕುವ ಏರ್ಪಾಟಾಗಿದೆ. ಧಾರವಾಡ ಜಿಲ್ಲೆಯ ರಾಣೇಬೆನ್ನೂರು, ಬ್ಯಾಡಿಗಿ, ಹಾವೇರಿ ನಗರಗಳು ಈಗಾಗಲೇ ಇಲ್ಲಿಯ ವಿದ್ಯುತ್ತಿನಿಂದ ಬೆಳಗಹತ್ತಿವೆ. ಕೆಲದಿನಗಳಲ್ಲಿ ಉತ್ತರ ಕರ್ನಾಟಕದಲ್ಲಿಯ ಉದ್ದಿಮೆಯ ಕಾರ್ಖಾನೆಗಳೂ ಬೆಳಗಬಹುದೆಂಬ ಭರವಸೆಯೂ ಇದೆ.

ಶರಾವತಿ ನದಿಯು ನೀರನ್ನೇ ಈ ವಿದ್ಯುತ್ತಿನ ಉತ್ಪಾದನೆಗೆ ಬಳಸಿಕೊಂಡಿದ್ದರೂ ಶರಾವತಿ ದಭಧಭೆಯ ಸೌಂದರ್ಯಕ್ಕೆ ಚ್ಯುತಿ ಬಂದಿಲ್ಲ. ಆ ರೀತಿಯಾಗಿ ಯೋಜನೆಯನ್ನೇ ಮಾಡಲಾಗಿದೆ. ಜೋಗದಿಂದ ಶರಾವತಿಯ ಸಂಗಡ ಹಿಂದಕ್ಕೆ ನಡೆದರೆ ಸುಮಾರು ೨೪ ಮೈಲುಗಳಂತರದಲ್ಲಿ ಮಡೇನೂರ ಎಂಬ ಹಳ್ಳಿಯ ಹತ್ತಿರ ಒಂದು ಅಣೆಕಟ್ಟನ್ನು ಕಟ್ಟಲಾಗಿದೆ. ಇಲ್ಲಿ ಸ್ವಾಭಾವಿಕವಾಗಿ ಕಟ್ಟ ಇದ್ದಂತೆಯೇ ಇದೆ. ಆದರೆ ಕೃತ್ರಿಮ ಕಟ್ಟನ್ನು ಹಾಕಲಾಗಿದೆ. ಯಾವಾಗಲೂ ಸುಮಾರು ೭೫ ಫೂಟು ನೀರು ನಿಲ್ಲುವ ಯೋಜನೆಯಿದ್ದಂತೆ ತೋರುತ್ತದೆ. ಅಣೆಕಟ್ಟಿನ ಗೋಡೆಯ ಹಿಂದೆ ತಮ್ಮಿಂದ ತಾವೇ ನಡೆಯುವ ಹನ್ನೊಂದು ಸಾಯಫನ್‌ಗಳು ಇರುತ್ತವೆ. ನೀರು ಹೆಚ್ಚಿಗೆ ಬಂದರೆ ಈ ಸಾಯಫನ್ನುಗಳಿಂದ ನೀರು ಹೊರಗೆ ಹೋಗುತ್ತದೆಯಂತೆ. ಇವುಗಳಿಂದ ಮುಖ್ಯ ಗೋಡೆಗೂ ಧಕ್ಕೆಯಾಗುವದಿಲ್ಲ. ನೀರನ್ನು ಬಿಡಲಿಕ್ಕೆ ಕೆಲವು ಬಾಗಿಲುಗಳಿದ್ದು, ಬಾಗಿಲುಗಳನ್ನು ತೆರೆಯಲಿಕ್ಕೆ, ಮುಚ್ಚಲಿಕ್ಕೆ ಒಂದು ಯಂತ್ರವನ್ನೇ ಇಡಲಾಗಿದೆ. ಈ ಮಡೇನೂರ ಅಣೆಕಟ್ಟಿಗೆ ಹಿರೇ ಭಾಸ್ಕರ ಅಣೆಕಟ್ಟು ಎಂದೂ ಕರೆಯುವರು.

ಮಡೇನೂರಿನಲ್ಲಿ ಶರಾವತಿಯ ದರ್ಶನವು ಕೊನೆಯದಾಗುವದು. ಅಲ್ಲಿಂದ ಮತ್ತೆ ಘೋರಾರಣ್ಯವನ್ನು ಕೊರೆದು ಅಲ್ಲಲ್ಲಿ ಕಂಡು ಬರುವ ಸಣ್ಣ-ಸಣ್ಣ ಹಳ್ಳಿಗಳನ್ನು ದಾಟುತ್ತ ಸುಮಾರು ಹದಿನೆಂಟು ಮೈಲು ಕ್ರಮಿಸಿದರೆ ನಿಸರ್ಗದೇವಿಯ ಚೆಲುವ ಕೈಗನ್ನಡಿಯಂತೆ ಹೊಳೆಯುವ ಸಾಗರ ಪಟ್ಟಣವು ಕಾಣಿಸುವದು. ಇದು ಶಿವಮೊಗ್ಗಾ ಜಿಲ್ಲೆಯಲ್ಲಿಯ ಒಂದು ತಾಲೂಕಿನ ಸ್ಥಳ. ಸುತ್ತಲೂ ಸೃಷ್ಟಿ ಸೌಂದರ್ಯ. ಹೊರವಲಯವು ತೆಂಗು-ಕೊಂಗುಗಳಿಂದ ಚೆಂದ ಕಾಣುತ್ತಿದ್ದರೆ ಒಳ ವಲಯವು ಅಂದವಾದ ಗೋಪುರಗಳಿಂದ, ಮನೆಗಳಿಂದ, ಅಂಗಡಿ

ಶರಾವತಿಯಿಂದ ತುಂಗಭದ್ರೆಗೆ

ಲೇಖಕರು : ಶ್ರೀ. ಆಯ್. ಎಸ್. ಬಿದರಿ ಟ್ರೇನಿಂಗ ಕಾಲೇಜ ಧಾರವಾಡ.

'ಚಿನ್ನದ ನಾಡಿದು ಮೈಸೂರು
ಗಂಧದ ಬೀಡಿದು ಮೈಸೂರು'

ಇತ್ಯಾದಿಯಾಗಿ ಮೈಸೂರಿನ ಬಗೆಗೆ ಕವಿವರರೋರ್ವರು ಹಾಡಿದ ಈ ಮಾತಿನ ಜೊತೆಗೆ ''ಅಂದದ ಆಗರ ಮೈಸೂರು„ ಎಂಬ ಉಕ್ತಿಯನ್ನು ಸೇರಿಸಿದರೆ ಮೈಸೂರಿನ ಕುಂದಣಕ್ಕೆ ಸುಗಂಧವನ್ನು ಬೆರಿಸಿದಂತಾಗುವದಿಲ್ಲವೇ? ಕೋಲಾರದ ಚಿನ್ನದ ಕಣಿಗಳಿಂದ ಚಿನ್ನದ ನಾಡೆಂಬ ಬಿರುದನ್ನು ಧರಿಸಿದ ಮೈಸೂರು, ಗಂಧದ ಗಿಡಗಳಿಂದ ಕೂಡಿದ ಅರಣ್ಯ ಸಂಪತ್ತಿನಿಂದ, ಗಂಧ ದೆಣ್ಣೆಯ ಕಾರಖಾನೆಗಳಿಂದ ಗಂಧದ ಕಟ್ಟಿಗೆಯ ಕೆತ್ತನೆಯ ಕೆಲಸಗಳಿಂದ, ಕಲಾಕುಸುರಿನಿಂದ, ಹಾಗೂ ಗಂಧದ ಸಾಬೂಣನ್ನು ತಯಾರಿಸುವ ಆಲಯಗಳಿಂದ ಗಂಧದ ಬೀಡೆಂದು ಅಗ್ಗಳಿಕೆಯನ್ನು ಪಡೆದಿದೆ. ಇದೇ ಬಗೆಯಾಗಿ ಮೈಸೂರು ಹೆಚ್ಚಾಗಿ ನಿಸರ್ಗ ಸೌಂದರ್ಯದ ಆಗರವೂ ಆಗಿದೆ. ಅಷ್ಟೇಕೆ ಸೌಂದರ್ಯಲಕ್ಷ್ಮಿಯು ತನ್ನ ಸೌಂದರ್ಯ ಪ್ರದರ್ಶನಕ್ಕಾಗಿ ನಿಸರ್ಗಲಲನೆಯಾಗಿ ಭೂಲೋಕಕ್ಕೆ ಇಳಿದು ಬಂದಿರುವಳೆಂಬಂತೆ ಭಾಸವಾಗದಿರದು ಶರಾವತಿಯಿಂದ ತುಂಗಭದ್ರೆಯ ವರೆಗೆ ಮೈಸೂರು ಸೀಮೆಯಲ್ಲಿ ಪ್ರವಾಸಮಾಡಿದ ಯಾತ್ರಿಕರಿಗೆ. ಈ ಪ್ರವಾಸವು ಹೆಚ್ಚಾಗಿ ಶಿವಮೊಗ್ಗಾ ಜಿಲ್ಹೆಯಲ್ಲಿ; ಕೆಲ ಮಟ್ಟಿಗೆ ಚಿತ್ರದುರ್ಗ ಜಿಲ್ಹೆಯಲ್ಲಿ ಆಗುವದು. ಮುಗಿಲನ್ನು ಮುದ್ದಿಡುವ ಗಿಡಮರಗಳಿಂದ, ಬಿದಿರು ಮೆಳೆಗಳಿಂದ, ಸಣ್ಣ-ದೊಡ್ಡ ಕಂಟಿಗಳಿಂದ, ಗಿಡಗಳಿಗೆ ಸುತ್ತಿದ ಹಲವಾರು ತರದ ಬಳ್ಳಿಗಳಿಂದ ದಟ್ಟವಾದ ಕಾಡು ಯಾತ್ರಿಕರ ಕಣ್ಣಿಗೆ ಹಬ್ಬದೂಟವನ್ನು ಉಣಿಸಿದರೆ, ಕಾಡಿನ'' ಗಿಡಗಂಟೆಯ ಕೊರಳೊಳಗಿಂದ'' ಹೊರಡುವ ಗಿಳಿ, ಗೊರವಂಕ, ಕೋಗಿಲೆ, ಕಾಜಾಣ ಮೊದಲಾದ ಹಕ್ಕಿಗಳ ಚಿಲಿಪಿಲಿ ರವವು ಕಿವಿಗೆ ಮಂಗಲ ನಿನಾದವನ್ನು ತರುವುದು. ಜೀವನದಲ್ಲಿ ಸಿಹಿ-ಕಹಿ ಇರುವಂತೆ ಸೌಂದರ್ಯದ ಆಗರವಾದ ಈ ಕಾಡಿನಲ್ಲಿ ಮಂಗಲ ನಿನಾದದೊಂದಿಗೆ ಕೆಲವು ಕ್ರೂರ ಮೃಗಗಳ ಭೀಕರ ಸ್ವರವೂ ಕೇಳಿ ಬರುವುದುಂಟು. ಚಳಿಗೆ ನಡುಗದೆ, ಬಿಸಿಲಿಗೆ ಬಾಡದೆ, ಮಳೆಗೆ ಕೊಳೆಯದೆ ಸದಾವ ಕಾಲವೂ ಅದೇ ತೆರನಾಗಿ, ಅಷ್ಟೇ ರೂಪವತಿಯಾಗಿ, ಅಂತೆಯೇ ಆಕರ್ಷಿತಳಾಗಿ, ಪರಿಶೋಭಿತಳಾಗಿರುವ ಈ ವನಶ್ರೀಯ ಮುದ್ದುಗುವರಿಯರಲ್ಲಿ ಅತ್ಯಂತ ಲಾವಣ್ಯವತಿಯೇ ಚಿಕ್ಕವಳಾದ ಶರಾವತಿ. ಘೋರಾರಣ್ಯದ ಮಧ್ಯದಲ್ಲಿ ಅಂದರೆ ಸಹ್ಯಾದ್ರಿಯ ಶಿಖರವೊಂದರಲ್ಲಿ ಜನಿಸಿದ ಶರಾವತಿಯು ಹುಟ್ಟಿದಂದಿನಿಂದ ತಾಯಿ ನಿಸರ್ಗ ದೇವಿಯ ಲಾಲನೆ-ಪಾಲನೆಯನ್ನೂ ಯೌವನದವರೆಗೂ ಅಲ್ಲ- ಪತಿದೇವನಾದ ಸಾಗರನನ್ನು ಸೇರುವ ವರೆಗೂ ಹೊಂದಿರುವಳಲ್ಲ! ಇದಕ್ಕೇನೆನ್ನಬೇಕು? ಚಿಕ್ಕಮಗಳೆಂದು ತನ್ನ ಅಳಿಯನಲ್ಲಿಗೆ ಆಕೆಯನ್ನು ಕರೆದುಕೊಂಡು ಹೊರಟಿರುವಳೆಂದು ಕರೆಯಬೇಕೋ ಇಲ್ಲವೆ ಪತಿಗೃಹಕ್ಕೆ ತಾಯಿಯನ್ನು ಬಿಡಲಾರದ ಮಗಳ ಮಾತೃ ಭಕ್ತಿಯೆನ್ನಬೇಕೊ? ಮಾತೃ ಭಕ್ತಿಯೆಂಬುದೇ ನಿಜವಾದರೆ ಇಷ್ಟು ರಭಸದಿಂದ ಈ ಶರಾವತಿಯು ಗಂಡನಲ್ಲಿಗೆ ಧಾವಿಸುತ್ತಿರುವುದೇಕೆ? ಬಂಡೆಯಿಂದ ಬಂಡೆಗೆ ನೆಗೆಯುತ್ತಿರುವುದೇಕೆ? ದಾರಿಯಲ್ಲಿಯ ಗಿಡಮರಗಳನ್ನು ಬೇರುಸಹಿತ ಉರುಳಿಸುತ್ತಿರುವುದೇಕೆ? ಆ ಜೋಗದ ಹತ್ತಿರ ಕಾಲುಜಾರಿ, ಜೋಲಿ ತಪ್ಪಿ ಸುಮಾರು ೯೦೦ ಅಡಿ ಆಳವಾದ ಕೊಳ್ಳದಲ್ಲಿ ಬೀಳುತ್ತಿರುವುದೇಕೆ? ಬಿದ್ದು ಮತ್ತೆ ಚೇತರಿಸಿಕೊಂಡು ಭೋರ್ಗರೆದು ಧಾವಿಸುತ್ತಿರುವುದೇಕೆ? ಇದೆಲ್ಲವೂ ಶರಾವತಿಯ ಪತಿಭಕ್ತಿ ಪಾರಾಯಣದ, ಪಾತಿವ್ರತ್ಯದ ಲಕ್ಷಣಗಳಲ್ಲದೆ ಮತ್ತೇನು? ಅದಕ್ಕೆಂತಲೇ ಜಗಚ್ಚಕ್ಷುವಾದ ಆ ಭಾಸ್ಕರನು ಈಕೆಗೆ ಸಪ್ತ

ಂಚಿತವಾದ ಮಣಿ ಹಾರವನ್ನು ತೊಡಿಸಿರುವನಲ್ಲವೇ ? ಮಗಳಿಗೆ ದೃಷ್ಟಿಯಾದೀತೆಂದು ಸೃಷ್ಟಿಕರ್ತನು ಮಂಜಿನ ಮುಸುಕನ್ನು ಆಗಾಗ ತೆಳುವಾಗಿ, ಆಗಾಗ ದಟ್ಟವಾಗಿ ಹೊದಿಸಿರುವನಲ್ಲವೇ ? ಮಂಜಿನ ಮುಸುಕು ಸೂರ್ಯ ನಾರಾಯಣನಿಂದ ಓಸರಿಸಲ್ಪಟ್ಟಾಗ ಒಂದು ಬಗೆಯಾದ ಅಂದದಿಂದ ಕಾಣುವ ನೀನು ಆ ಮುಸುಕು ಆವರಿಸಲ್ಪಟ್ಟಾಗ ಇನ್ನೊಂದು ಬಗೆಯ ಅಂದದಿಂದ ಕಾಣಿಸುವೆಯಲ್ಲ! ಹಗಲಿನಲ್ಲಿ ಒಂದು ರೀತಿಯಾಗಿ ಕಂಡರೆ ಬೆಳದಿಂಗಳಿನ ರಾತ್ರಿಯಲ್ಲಿ ಇನ್ನೊಂದು ಬಗೆಯಾಗಿ ಕಾಣುವಿ. ಒಂದು ಸ್ಥಳದಿಂದ ನೋಡಿದ ನಿನ್ನ ಆ ರೂಪರಾಶಿಯು ಮತ್ತೊಂದು ಸ್ಥಳದಿಂದ ಮತ್ತೊಂದು ತೆರನಾಗಿ ಗೋಚರಿಸುವದು. ದೂರ-ಸನಿಹದಿಂದ ನಿನ್ನ ದರುಶನಕ್ಕೆ ಬರುವ ಸೌಂದರ್ಯೋಪಾಸಕರಿಗೆ ಅವರವರ ದೃಷ್ಟಿಕೋನದಂತೆ ನೀನು ನಿನ್ನ ರೂಪ ತೋರಿಸುವಿ. ವಿಜ್ಞಾನಿಗಳಿಗೆ ಅಪಾರ ವಿದ್ಯುಚ್ಛಕ್ತಿಯ ಖನಿಯಾಗಿ, ಕವಿಗಳಿಗೆ ಕಾವ್ಯದ ಝರಿಯಾಗಿ, ಸಾಹಿತಿಗಳಿಗೆ ಸ್ಫೂರ್ತಿಯ ಸೆಲೆಯಾಗಿ, ರಸಿಕರಿಗೆ ಸರಸದ ಸರೋವರವಾಗಿ, ವಿರಾಮ ಹೊಂದಲು ಬಂದವರಿಗೆ ವಿರಮಿಸುವ ಸ್ಥಳವಾಗಿ, ದಂಪತಿಗಳಿಗೆ ಆದರ್ಶ ದಾಂಪತ್ಯದ ಕುರುಹಾಗಿ-ಹೀಗೆ ಹಲವು ಬಗೆಯ ಜನರಿಗೆ ಹಲವು ಬಗೆಯಾಗಿ ನೀನು ಗೋಚರಿಸುತ್ತಿರುವೆಯಲ್ಲ! ಧನ್ಯ ಶರಾವತಿ! ನಿನ್ನ ಅಪಾರ, ಅಗಮ್ಯ, ಅಗಣಿತ, ಅಸಾದೃಶ ಮಹಿಮೆಯನ್ನು ಎಷ್ಟೊಂದು ವರ್ಣಿಸಲಿ. ನಿನ್ನ ಈ ಅಲೌಕಿಕ ಸೌಂದರ್ಯ, ಉಪಮಾತೀತ ಮಾತೃಪ್ರೇಮ, ಅಸಾಧಾರಣವಾದ ಪತಿ-ಭಕ್ತಿ, ಅಸಂಖ್ಯ ತೆರನಾದ ಗೋಚರತೆ—ಇವೆಲ್ಲವುಗಳಿಂದ ನಾಡನ್ನು ಪುನೀತವನ್ನಾಗಿ ಮಾಡಿದೆ. ನಾಡವರು ನಿನ್ನ ಮಹಿಮೆಯನ್ನು ಹಾಡಿ ತಣಿಯದು, ನಿಶ್ಚಲುಚಿತವ ಮಾಡಿ ತಣಿಯುರು.

ಜೋಗದ ಸಮೀಪದಲ್ಲಿಯೇ ವಿದ್ಯುತ್ ಶಕ್ತಿಯನ್ನು ಜನಿಸುವ ಕಾರ್ಖಾನೆ ''ಮಹಾತ್ಮಾ ಗಾಂಧಿ ಹೈಡ್ರೋ ಇಲೆಕ್ಟ್ರಿಕ್ ವರ್ಕ್ಸ್'' ಎಂಬ ಹೆಸರಿನಿಂದ ಸ್ಥಾಪಿತವಾಗಿದೆ. ಕರ್ನಾಟಕದಲ್ಲಿಯೇ ದೊಡ್ಡದಾದ ವಿದ್ಯುತ್ತಿನ ಕಾರ್ಯಾಗಾರ. ಮುಂಬಯಿ ರಾಜ್ಯಕ್ಕೂ ಈ ವರ್ಷದಿಂದ ಅಲ್ಲಿಂದಲೇ ವಿದ್ಯುತ್ ದೊರಕುವ ಏರ್ಪಾಟಾಗಿದೆ. ಧಾರವಾಡ ಜಿಲ್ಲೆಯ ರಾಣೇಬೆನ್ನೂರು, ಬ್ಯಾಡಗಿ, ಹಾವೇರಿ ನಗರಗಳು ಈಗಾಗಲೇ ಇಲ್ಲಿಯ ವಿದ್ಯುತ್ತಿನಿಂದ ಬೆಳಗಹತ್ತಿವೆ. ಕೆಲದಿನಗಳಲ್ಲಿ ಉತ್ತರ ಕರ್ನಾಟಕದಲ್ಲಿಯ ಉದ್ದಿಮೆಯ ಕಾರ್ಖಾನೆಗಳೂ ಬೆಳಗ ಬಹುದೆಂಬ ಭರವಸೆಯೂ ಇದೆ.

ಶರಾವತಿ ನದಿಯ ನೀರನ್ನೇ ಈ ವಿದ್ಯುತ್ತಿನ ಉತ್ಪಾದನೆಗೆ ಬಳಸಿಕೊಂಡಿದ್ದರೂ ಶರಾವತಿ ಜಲಧಾರೆಯ ಸೌಂದರ್ಯಕ್ಕೆ ಚ್ಯುತಿ ಬಂದಿಲ್ಲ. ಆ ರೀತಿಯಾಗಿ ಯೋಜನೆಯನ್ನೇ ಮಾಡಲಾಗಿದೆ. ಜೋಗದಿಂದ ಶರಾವತಿಯ ಸಂಗಡ ಹಿಂದಕ್ಕೆ ನಡೆದರೆ ಸುಮಾರು ೨೪ ಮೈಲುಗಳಂತರದಲ್ಲಿ ಮಡೇನೂರ ಎಂಬ ಹಳ್ಳಿಯ ಹತ್ತಿರ ಒಂದು ಅಣೆಕಟ್ಟನ್ನು ಕಟ್ಟಲಾಗಿದೆ. ಇಲ್ಲಿ ಸ್ವಾಭಾವಿಕವಾಗಿ ಕಟ್ಟೆ ಇದ್ದಂತೆಯೇ ಇದೆ. ಆದರೆ ಕೃತ್ರಿಮ ಕಟ್ಟನ್ನು ಹಾಕಲಾಗಿದೆ. ಯಾವಾಗಲೂ ಸುಮಾರು ೭೫ ಫೂಟು ನೀರು ನಿಲ್ಲುವ ಯೋಜನೆಯಿದ್ದಂತೆ ತೋರುತ್ತದೆ. ಅಣೆಕಟ್ಟಿನ ಗೋಡೆಯ ಹಿಂದೆ ತಮ್ಮಿಂದ ತಾವೇ ನಡೆಯುವ ಹನ್ನೊಂದು ಸಾಯಫನ್‌ಗಳು ಇರುತ್ತವೆ. ನೀರು ಹೆಚ್ಚಿಗೆ ಬಂದರೆ ಈ ಸಾಯಫನ್ನುಗಳಿಂದ ನೀರು ಹೊರಗೆ ಹೋಗುತ್ತದೆಯಂತೆ. ಇವುಗಳಿಂದ ಮುಖ್ಯ ಗೋಡೆಗೂ ಧಕ್ಕೆಯಾಗುವದಿಲ್ಲ. ನೀರನ್ನು ಬಿಡಲಿಕ್ಕೆ ಕೆಲವು ಬಾಗಿಲುಗಳಿದ್ದು, ಬಾಗಿಲುಗಳನ್ನು ತೆರೆಯಲಿಕ್ಕೆ, ಮುಚ್ಚಲಿಕ್ಕೆ ಒಂದು ಯಂತ್ರವನ್ನೇ ಇಡಲಾಗಿದೆ. ಈ ಮಡೇನೂರ ಅಣೆಕಟ್ಟಿಗೆ ಹಿರೇ ಭಾಸ್ಕರ ಅಣೆಕಟ್ಟು ಎಂದೂ ಕರೆಯುವರು.

ಮಡೇನೂರಿನಲ್ಲಿ ಶರಾವತಿಯ ದರ್ಶನವು ಕೊನೆಯದಾಗುವದು. ಅಲ್ಲಿಂದ ಮತ್ತೆ ಘೋರಾರಣ್ಯವನ್ನು ಕೊರೆದು ಅಲ್ಲಲ್ಲಿ ಕಂಡು ಬರುವ ಸಣ್ಣ-ಸಣ್ಣ ಹಳ್ಳಿಗಳನ್ನು ದಾಟುತ್ತ ಸುಮಾರು ಹದಿನೆಂಟು ಮೈಲು ಕ್ರಮಿಸಿದರೆ ನಿಸರ್ಗದೇವಿಯ ಚೆಲುವ ಕೈಗನ್ನಡಿಯಂತೆ ಹೊಳೆಯುವ ಸಾಗರ ಪಟ್ಟಣವು ಕಾಣಿಸುವದು. ಇದು ಶಿವಮೊಗ್ಗಾ ಜಿಲ್ಲೆಯಲ್ಲಿಯ ಒಂದು ತಾಲೂಕಿನ ಸ್ಥಳ. ಸುತ್ತಲೂ ಸೃಷ್ಟಿ ಸೌಂದರ್ಯ. ಹೊರವಲಯವು ತೆಂಗು-ಕೊಂಗುಗಳಿಂದ ಚೆಂದ ಕಾಣುತ್ತಿದ್ದರೆ ಒಳ ವಲಯವು ಅಂದವಾದ ಗೋಪುರಗಳಿಂದ, ಮನೆಗಳಿಂದ, ಅಂಗಡಿ

ಗಳಿಂದ ಶೋಭಿಸುತ್ತಿದೆ. ಇದು ವ್ಯಾಪಾರದ ಸ್ಥಳವೂ ಆಹುದು. ಉತ್ತರ ಕರ್ನಾಟಕದ ಸಂಪರ್ಕವನ್ನು ಇಲ್ಲಿ ಕಾಣಬಹುದು. ಗಂಧದ ಒಡವೆಗಳು ಇಲ್ಲಿ ದೊರೆಯುತ್ತವೆ. ಇದು ವರದಾ ನದಿಯ ದಂಡೆಯ ಮೇಲಿದೆ. ಉಗಿಬಂಡಿಯ ನಿಲ್ದಾಣವೂ ಇದಕ್ಕುಂಟು.

ಸಾಗರದಿಂದ ಶಿವಮೊಗ್ಗೆ, ಜಿಲ್ಲೆಯ ಸ್ಥಳ; ಎರಡು ನಿಲ್ದಾಣಗಳು. ಈ ಶಿವಮುಗ್ಗಿಯಲ್ಲಿ ಕಡ್ಡಿಪೆಟ್ಟಿಗೆಯ ಕಾರ್ಖಾನೆಯು ಮಹತ್ವದ್ದು, ಕೆಲವರ್ಷಗಳ ಹಿಂದೆ ಕನ್ನಡ ಸಾಹಿತ್ಯ ಸಮ್ಮೇಲನವಾದ ಸ್ಥಳ ಈ ಶಿವಮುಗ್ಗಿ. ತುಂಗಾ ನದಿಯ ದಂಡೆಯ ಮೇಲೆ ಮೆರೆಯುತ್ತಿರುವ ಈ ಪಟ್ಟಣವು ಕಾವ್ಯರ್ಷಿ ಪುಟ್ಟಪ್ಪನವರ ಅನೇಕ ಗ್ರಂಥಗಳನ್ನೂ ಪ್ರಕಟಿಸಿದ ಕಾವ್ಯಾಲಯದ ಸ್ಥಾನ.

ಶಿವಮುಗ್ಗಿಯಿಂದ ಭದ್ರಾವತಿಗೆ; ತುಂಗೆಯಿಂದ ಭದ್ರೆಗೆ-ಶರಾವತಿ, ವರದೆ, ತುಂಗೆ, ಭದ್ರೆ—ಎಲ್ಲರೂ ತಾಯಿ ಸಹ್ಯಾದ್ರಿಯ ಪ್ರೀತಿಯ ಕುವರಿಯರು. ಒಬ್ಬರಿಗಿಂತಲೂ ಇನ್ನೊಬ್ಬರು ಸುಂದರಿಯರು; ಲೋಕಪಾವನೆಯರು; ದಕ್ಷಿಣದ ತ್ರಿಪಥಗೆಯಂತಿದ್ದವರು. ಥೆಮ್ಸ ನದಿ ದಂಡೆಯ ಮೇಲಿನ ಲಂಡನ ಶಹರದಂತೆ ಭದ್ರೆಯ ಇಕ್ಕೆಲಗಳಲ್ಲಿಯೂ ಭದ್ರಾವತಿಯು ಹಬ್ಬಿದೆ. ನಯನ ಮನೋಹರವಾಗಿದೆ. ಶಹರದ ಎರಡೂ ಭಾಗಗಳನ್ನು ಜೋಡಿಸುವ ಭದ್ರೆಯ ಎರಡು ಕೈಗಳೆನ್ನುವಂತೆ ಎರಡು ಸೇತುವೆಗಳು ನಿಂತಿವೆ, ರೇಲ್ವೆ ನಿಲ್ದಾಣದ ದಕ್ಷಿಣ ಬದಿಗೆ ಮೂರು ದೊಡ್ಡ ಕಾರ್ಖಾನೆಗಳಿವೆ. ಈ ಬದಿಯಲ್ಲಿ ಹೆಚ್ಚಾಗಿ ಕೂಲಿಕಾರರ ವಸತಿಯೇ ಇದೆ. ಭದ್ರಾವತಿಯು ಈ ಕಾರ್ಖಾನೆಗಳಿಂದ ಇಡಿಯ ಹಿಂದುಸ್ಥಾನದಲ್ಲಿಯೇ ವಿಖ್ಯಾತಿಯನ್ನು ಪಡೆದಿದೆ. ಕಬ್ಬಿಣ-ಉಕ್ಕಿನ ಕಾರ್ಖಾನೆ, ಸಿಮೆಂಟಿನ ಕಾರ್ಖಾನೆ, ಕಾಗದದ ಕಾರ್ಖಾನೆ— ಈ ಮೂರುಗಳು ಮೈಸೂರು ಸರ್ಕಾರದಿಂದ ನಡೆಸಲ್ಪಡುತ್ತವೆಂದು ತಿಳಿಯುತ್ತದೆ. ಇವುಗಳಲ್ಲಿ ಕಬ್ಬಿಣ ಕಾರ್ಖಾನೆ ಅತಿ ದೊಡ್ಡದು. ಸುಮಾರು ೬,೦೦೦ ಕೂಲಿಕಾರರು ೯೦೦ ಗುಮಾಸ್ತೆಯರು ೬೦ ಜನ ಆಫೀಸರರು ಕೆಲಸ ಮಾಡುತ್ತಿರುವ ಕಾರ್ಖಾನೆಯೆಂದು ಸುದ್ದಿಯಿದೆ. ಸುಮಾರು ೩೨ ಮೈಲಿನ ದೂರದ ಖನಿಯೊಂದರಿಂದ ಕಬ್ಬಿಣದ ಅದುರುಗಳನ್ನು ತಂದು ಈ ಕಾರ್ಖಾನೆಯಲ್ಲಿ ಶುದ್ಧ ಕಬ್ಬಿಣವನ್ನು, ಮುಂದೆ ಉಕ್ಕನ್ನು ತಯಾರಿಸಿ ಅದರಿಂದ ಬಳಿಕ ರೇಲ್ವೆಗೆ, ಇಮಾರತಿಗಳಿಗೆ ಹಾಗೂ ಮನೆತನಕ್ಕೆ ಬೇಕಾಗುವ ವಸ್ತುಗಳನ್ನು ತಯಾರಿಸುವದನ್ನು ಇಲ್ಲಿ ನೋಡಬಹುದು. ಸಂದರ್ಶಕರಿಗೆ ದಿನಾಲು ಎರಡು ಸಲ ಒಳಗೆ ಬಿಡುವರು.-ಮುಂಜಾನೆ ೯–೩೦ ಘಂಟೆಗೆ ಒಮ್ಮೆ; ಸಾಯಂಕಾಲ ೫ ಘಂಟೆಗೆ ಇನ್ನೊಮ್ಮೆ ಕಬ್ಬಿಣದ ಅದುರನ್ನು ಸಾದಾ ಕುಲುಮೆಯಲ್ಲಿ ಕರಗಿಸುವರು. ಅದು ಕರಗಿ ರಸವಾಗುವದರೊಳಗಾಗಿ ಹೊರಗೆ, ತೋಟದಲ್ಲಿ ಮಡಿಗಳನ್ನು ಕಟ್ಟುವಂತೆ, ಕುಲುಮೆಯ ಮುಂಭಾಗದಲ್ಲಿ ಮಡಿ ಕಟ್ಟುವರು; ರಸವು ಹರಿದು ಬರುವದಕ್ಕೆ ಕಾಲುವೆ ತೋಡುವರು. ರಸವು ಆಯಿತೆಂದು ತಿಳಿದ ಕೂಡಲೇ ಮುಸಿಯ ಬಾಗಿಲನ್ನು ತೆರೆಯುವರು, ಕೂಡಲೇ ಭೂಗರ್ಭದಿಂದ ಲಾವ್ಹಾರಸವು ಹೊರಚಿಮ್ಮುವಂತೆ ತಪ್ತ ಕಬ್ಬಿಣದ ಕೆಂಪು ರಸವು ಬೆಂಕಿಯೇ ಹರಿದು ಬರುವುದೆನ್ನುವಂತೆ ಕಾಲುವೆ ಗುಂಟ ಹರಿದು ಬರುವದು. ಹೀಗೆ ಹರಿದು ಬರುತ್ತಿರುವ ರಸದನ್ನು ಅಲ್ಲಲ್ಲಿ ಮಣ್ಣು ಸರಿಸಿ ತಯಾರಿಸಿದ ಮಡಿಗಳಲ್ಲಿ ಬಿಡುವರು, ಅದು ಅಲ್ಲಿಯೇ ಆರಿ ಗಟ್ಟಿಯಯಗುವದು. ಸಾದಾ ರೀತಿಯಿಂದ ಹೀಗೆ ಕಬ್ಬಿಣ ತಯಾರಿಸಿದರೆ ವಿದ್ಯುತ್ ಶಕ್ತಿಯಿಂದ ಆದರನ್ನು ಕರಗಿಸಿ ಕಬ್ಬಿಣ ತಯಾರಿಸುವದನ್ನು ಈ ಕಾರ್ಖಾನೆಯಲ್ಲಿ ಕಾಣಬಹುದು. ಹೀಗೆ ತಯಾರಿಸಿದ ಕಬ್ಬಿಣವನ್ನು ನುತ್ತೆ ಕಾಯಿಸಿ ಬೇರೆ ಬೇರೆ ಸಾಮಾನುಗಳನ್ನು ತಯಾರಿಸುವರು. ಹೀಗೆ ಸಳಿ, ಪಟ್ಟಿ ಹಳಿ, ಮೊಳೆ-ಮೊದಲಾದ ಹಲವಾರು ಸಾಮಾನುಗಳನ್ನು ತಯಾರಿಸುವದನ್ನು ನೋಡುವದಂತೂ ಆಶ್ಚರ್ಯ ಹಾಗೂ ಅದ್ಭುತದ ಸಂಗತಿಯಾಗಿದೆ. ನುರಿತ ಹಾವುಗಾರನು ಹಾವುಗಳನ್ನು ಆಡಿಸುವಂತೆ, ಚಿಕ್ಕ ಮಕ್ಕಳು ಹಗ್ಗಮೊಡನೆ ಆಟವಾಡಿದಂತೆ ಇಲ್ಲಿ ಕಾರ್ಯಮಾಡುವರು ಕಾಯ್ದ ಕಬ್ಬಿಣದಿಂದ ಬೇಕಾದ ಸಾಮಾನುಗಳನ್ನು ತಯಾರಿಸುವರು. ಕಬ್ಬಿಣ—ಉಕ್ಕು ಇವು ತಮ್ಮ ಕಾಠಿಣ್ಯವನ್ನು ಕಳೆದುಕೊಂಡು ಬೆಣ್ಣೆಗಿಂತಲೂ ಮೃದುವಾಗಿ ವರ್ತಿಸುವದನ್ನು ಇಲ್ಲಿ ನೋಡಬಹುದು. ಮಾನವನ ಬುದ್ಧಿ ಶಕ್ತಿಯು ಎಂತಹ ಕಾಠಿಣ್ಯವನ್ನು ಅತ್ಯಂತ ಮೃದುತ್ವಕ್ಕೆ ತಿರುಗಿಸ ಬಲ್ಲದು ! ಎಂತಹ ಕ್ರೌರ್ಯವನ್ನು

ಅತ್ಯಂತ ಕಾರುಣ್ಯಕ್ಕೆ ಇಳಿಸ ಬಲ್ಲುದು !

ಕಬ್ಬಿಣದ ಕಾರ್ಖಾನೆಯ ಬಳಿಯಲ್ಲಿಯೇ ಸಿಮೆಂಟಿನ ಕಾರ್ಖಾನೆ ಇದೆ. ಒಂದು ತರದ ಕಲ್ಲನ್ನು ಪುಡಿಮಾಡುವ ಅದರಲ್ಲಿ ಎರೆಮಣ್ಣು ಬೆರೆಯಿಸುವ ಹೀಗೆ ಸಿಮೆಂಟ ತಯಾರಿಸುವ ವಿವಿಧ ಮೆಟ್ಟಿಲುಗಳನ್ನು ಇಲ್ಲಿ ತಿಳಿದುಕೊಳ್ಳಬಹುದಾಗಿವೆ. ದೊಡ್ಡ ದೊಡ್ಡ ಯಂತ್ರಗಳು ಯಂತ್ರಗಳಂತೆಯೇ ಯಾಂತ್ರಿಕರಾದ ಸಣ್ಣ-ದೊಡ್ಡ ಕೂಲಿಕಾರರು ಎಲ್ಲ ಅದ್ಭುತರಮ್ಯವಾಗಿದೆ. ಇಲ್ಲಿಂದ ಸುಮಾರು ೬ ಫರ್ಲಾಂಗಿನ ಅಂತರದಲ್ಲಿ ಕಾಗದದ ಕಾರ್ಖಾನೆಯಿದೆ. ಇಲ್ಲಿ ಹೆಚ್ಚು-ಕಡಿಮೆ ೧೫೦೦ ಜನರು ದುಡಿಯುತ್ತಿರುವರೆಂದು ತಿಳಿಯುತ್ತದೆ. ಒಣಗಿದ ಬಿದಿರುಗಳನ್ನು ಯಂತ್ರದ ಬಾಯಲ್ಲಿ ಕೊಟ್ಟು ಪುಡಿಮಾಡಿ ಆ ಪುಡಿಯಲ್ಲಿ ಒಂದು ತರದ ರಸಾಯನವನ್ನು ಬಿಟ್ಟು ಹದಗೊಳಿಸಿ ಶುದ್ಧೀಕರಿಸಿ ಬಳಿಕ ನಿರುಪಯುಕ್ತ ಅರಿವೆಯ ಚಿಂದಿಯನ್ನು ಕುದಿಸಿ ಶುದ್ಧೀಕರಿಸಿ ಮುಂದೆ ಇವೆರಡನ್ನೂ ಮಿಶ್ರಮಾಡಿ ಇತ್ಯಾದಿ ಕ್ರಮಗಳಿಂದ ಕಾಗದ ತಯಾರಿಸುವದೊಂದು ನೋಡತಕ್ಕದ್ದಾಗಿವೆ. ಮೈಸೂರಿನ ಕಾಗದವೆಂದರೆ ಎಲ್ಲರಿಗೂ ಅಚ್ಚು-ಮೆಚ್ಚು. ಮೈಸೂರು ಈ ಎಲ್ಲ ಕಾರ್ಖಾನೆಗಳಿಂದ ಹಿಂದುಸ್ಥಾನದಲ್ಲಿ ಮಾದರಿಯ ಮೈಸೂರು ಆಗಿದೆಯೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈ ಮಾದರಿಯತ್ವಕ್ಕೆ ಇನ್ನೂ ಹಲವಾರು ಕಾರಣಗಳಿರಬಹುದು, ಇರಲಿ.

ಭದ್ರಾವತಿಯಿಂದ ಸೂಳೆಕೆರೆ ಸುಮಾರು ೩೨ ಮೈಲು ಆಗಬಹುದು; ೨೧ ಮೈಲು ಚೆನ್ನಗಿರಿ; ಅಲ್ಲಿಂದ ತುಸು ಹೆಚ್ಚು-ಕಡಿಮೆ ೧೧ ಮೈಲು, ಸ್ವಾಭಾವಿಕವಾದ ಒಡ್ಡುಗಳಿದ್ದಂತೆ ಮೂರೂ ದಿಕ್ಕಿಗೆ ಗುಡ್ಡಗಳು —ಪೂರ್ವಕ್ಕೆ ಏರು ಅದ ಭೂಮಿ. ಇದೇನು ಸೃಷ್ಟಿ ದೇವತೆಯ ಕೈಗನ್ನಡಿಯೋ, ಮೈಸೂರಿನ ಸೌಂದರ್ಯಲಕ್ಷ್ಮಿಯು ಜಲಕೇಳಿಗಾಗಿ ನಿರ್ಮಿಸಿದ ಸರೋವರವೋ, ಮೈಸೂರಿನ ಜನತೆಗೆ ಸಾಕಷ್ಟು ಆಹಾರವನ್ನೊದಗಿಸಬೇಕೆಂದು ನೀರಾವರಿಗಾಗಿ ಸೃಷ್ಟಿಕರ್ತನು ಸೃಷ್ಟಿಸಿದ ನೀರಿನಾಗರವೋ, ಬಾಣಕವಿಯು ಬಣ್ಣಿಸಿದ ಅಂದಿನ ಅಚ್ಛೋದ ಸರೋವರವೊ ತಿಳಿಯದಾಗಿದೆ. ದೃಷ್ಟಿ ಹರಿಯುವ ವರೆಗೂ ನೀರೆನೀರು. ಮಹಾಪೂರದಲ್ಲಿಯ ಹೊಳೆಯಂತೆ ಇಲ್ಲಿಯೂ ತೆರೆಗಳೇಳುತ್ತವೆ. ಚೆನ್ನಗಿರಿಯಿಂದ ದಾವಣಗೇರಿಗೆ ಹೋಗುವ ದಾರಿಯು ಈ ಕೆರೆಯನ್ನು ಬಳಸಿ ಹೋಗುತ್ತದೆ. ಅದಕ್ಕೆ ಎರಡು ತೂಂಬುಗಳೂ ಉಂಟು; ಅವುಗಳಿಂದ ಭೂಮಿಗೆ ನೀರು ಬಿಡುವರು. ಈ ಕೆರೆಯ ಸುತ್ತಳತೆಯು ೪೮ ಮೈಲು ಇದೆಯೆಂದು ಗೊತ್ತಾಗುತ್ತದೆ. ಮೈಸೂರಿನಲ್ಲಿ ತೀರ ಪುರಾತನ ನೀರಾವರಿಯ ಕೆರೆಯೆಂದರೆ ಇದುವೆ ಆಗಿತ್ತೆಂದೂ ವಿಜ್ಞಾನದ ಪ್ರಗತಿಯಾದಂತೆ ಕನ್ನಂಬಾಡಿ ಮೊದಲಾದವುಗಳು ಕಟ್ಟಲ್ಪಟ್ಟವೆಂದೂ ಹೇಳುತ್ತಾರೆ. ಅಂತೂ ಸೂಳೆಕೆರೆಯು ಅದ್ಭುತ ಕೆರೆಯಾಗಿದೆ.

ಸೂಳೆಕೆರೆಯಿಂದ ದಾವಣಗೆರೆ. ಆಗಲೇ ವನಶ್ರೀಯು ದೂರ ಸರಿಯುವಳು. ತೆಂಗು-ಕೊಂಗುಗಳು ಮರೆಯಾಗುವವು. ಬೈಲು ಭೂಮಿಯು ಸಮೀಪಿಸಿದ ಲಕ್ಷಣಗಳು ಕಾಣಬರುವವು. ಭತ್ತದ ಬೆಳೆಯ ಬದಲು ಹೊಲಗಳಲ್ಲಿ ಜೋಳ, ಸಜ್ಜೆ, ಮೊದಲಾದ ಬೆಳವಲದ ಬೆಳೆಗಳು ಕಾಣಿಸಿಕೊಳ್ಳುವವು, ವನಶ್ರೀಯ ಸೌಂದರ್ಯವನ್ನು ಸವಿದ ರಸಿಕನಿಗೆ ಬಯಲು ಭೂಮಿಯು ಉಪ್ಪಿನಕಾಯಿಯಂತೆ ರುಚಿಸುವದು. ದಾವಣಗೇರೆಯು ಸಿಟಿಯೆಂದೂ ಖ್ಯಾತಿವೆತ್ತಿದೆ. ಧರ್ಮವಂತ ರಾಜೇನಹಳ್ಳಿಯವರ ಛತ್ರ ಸಾಮಾನ್ಯ ಪ್ರವಾಸಿಕರಿಗೂ ಮುಕ್ತವಿದೆ. ಬಡವರಾದ ವಧೂವರರಿಗೂ ಲಗ್ನದ ಏರ್ಪಾಟನ್ನು ಮಾಡುವ ವ್ಯವಸ್ಥೆಯನ್ನು ಇಟ್ಟುಕೊಂಡಿದೆ. ಕರ್ನಾಟಕದ ದೊಡ್ಡ ದೊಡ್ಡ ಹೆಸರಾಂತ ಸಭೆಗಳಿಗೆ, ಪರಿಷತ್ತುಗಳ ಅಧಿವೇಶನಗಳ ಸ್ಥಳವೂ ಆಗಿದೆ. ಶಯನ ಮನೋಹರವಾದ ಇಮಾರತುಗಳು, ಹಲವು ಶಿಕ್ಷಣಾಲಯಗಳು ಮೊದಲಾದವುಗಳಿಂದ ದಾವಣಗೆರೆಯು ಮಹತ್ವದ ಶಹರವಾಗಿದೆ; ಹಾಗೂ ಮೈಸೂರಿನ ಗಡಿಯಲ್ಲಿರುವದರಿಂದ ಇದು ಉತ್ತರ ಕರ್ನಾಟಕದ ಸಂಸ್ಕೃತಿಗಳ ಸಮ್ಮಿಲನವನ್ನು ಒಳಗೊಂಡಿದೆ, ವ್ಯಾಪಾರದ ಪಡಮೂಲೆಯಾಗಿದೆ, ಸೌಂದರ್ಯದ ಬೀಡಾಗಿದೆ, ವಿಲಾಸಾಸ್ಪದವಾಗಿದೆ. ದಾವಣಗೆರೆಯಿಂದ ಹರಿಹರ ! ಅಲ್ಲಿಯೇ ತುಂಗೆ-ಭದ್ರೆ—ಈ ಅಕ್ಕ ತಂಗಿಯರು ಒಂದೇ ದೇಹಿಗಳಾಗಿ, ಒಂದೇ ಹೃದಯಿಗಳಾಗಿ ಒಬ್ಬರಲ್ಲೊಬ್ಬರು ಬೆರೆತು ಪ್ರವಹಿಸುತ್ತಿರುವರು. ಮೈಸೂರು-ಧಾರವಾಡಗಳನ್ನು ಆಲಂಗಿಸಲೋಸುಗ ತುಂಗಭದ್ರೆಯ ಎರಡು ಹಸ್ತಗಳು ಆ ಎರಡು ಸೇತುವೆಗಳು. ಅಂತೂ ತುಂಗಭದ್ರೆ, ಹರಿಹರ-ಹರಿಹರೇಶ್ವರನ—ಹರಿಹರ. ಇಂತು ಶರಾವತಿಯಿಂದ ತುಂಗಭದ್ರೆಗೆ.

'ಜ್ಞಾನೇಶ್ವರೀ' ಮರಾಠಿ ಗ್ರಂಥದಲ್ಲಿ ಕನ್ನಡ ಶಬ್ದ

ಲೇಖಕರು: **ಡಾ. ಮು. ಗ. ಪಾನಸೆ**

ಅನುವಾದಕರು: **ಶ್ರೀ. ತಟ್ಟಿ ಶಾಮರಾಯರು, ಧಾರವಾಡ.**

ಜ್ಞಾನೇಶ್ವರನ ಪೂರ್ವದಲ್ಲಿ ೨೦೦, ೩೦೦ ವರ್ಷಗಳ ವರೆಗೆ ಮಹಾರಾಷ್ಟ್ರದಲ್ಲಿ ಕನ್ನಡ ಮಾತನಾಡುವವರ ರಾಜ್ಯಾಡಳಿತವಿದ್ದುದರಿಂದ ಆ ಕಾಲದ ಮರಾಠಿ ಭಾಷೆಯ ಮೇಲೆ ಸ್ವಲ್ಪ ಹೆಚ್ಚು ಕಡಿಮೆ ಕನ್ನಡದ ಪ್ರಭಾವವು ಉಂಟಾದುದು ಅಪರಿಹಾರ್ಯವಾಗಿತ್ತು. ಇದಲ್ಲದೆ "ಶ್ರೋತೃಗಳ ಕಡೆಗೆ ಅವರಷ್ಟು (ಜ್ಞಾನೇಶ್ವರರಷ್ಟು) ಆಸ್ಥೆಯಿಂದ ಮತ್ತು ಸೂಕ್ಷ್ಮವಾಗಿ ಲಕ್ಷ್ಯವನ್ನು ಪೂರೆಯಿಸುವ ಬೇರೊಬ್ಬ ಗ್ರಂಥಕಾರನು ಮರಾಠಿ ಸಾಹಿತ್ಯದಲ್ಲಿಯಂತೂ ಆಗಿಲ್ಲ, ಶ್ರೋತೃಗಳು ಬೇಡುವದನ್ನು ಗಮನಿಸಿ ಅವರು ಅನೇಕಸಾರೆ ವಿವಿಧ ರೀತಿಯಿಂದ ವಿಷಯವನ್ನು ವಿಸ್ತರಿಸುವರು; ಆದರೆ ವಿವೇಚನೆಯ ಭರದಲ್ಲಿಯೂ ಶ್ರೋತೃಗಳ ಲಕ್ಷ್ಯವು ತಪ್ಪಿಹೋಗುವದೆಂದು ಎನಿಸಿದ ಕೂಡಲೆ ಅವರು ಕೇಳುವವರ ಚಿತ್ತವೃತ್ತಿಯನ್ನು ಸ್ಥಿರಗೊಳಿಸುವದಕ್ಕಾಗಿ ಪ್ರಯತ್ನಿಸುವರು" ಈ ವಸ್ತುಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟರೆ ಜ್ಞಾನೇಶ್ವರನ ಭಾಷೆಯ ಮೇಲೆ ತತ್ಕಾಲೀನ ಭಾಷಾ ವ್ಯವಹಾರದ ವರ್ಚಸ್ಸು ಬೀಳುವದು ಸ್ವಾಭಾವಿಕವಾದದ್ದು. ರಾಜಭಾಷೆಯಾದ ಕನ್ನಡದ ಪ್ರಭಾವವು ಮರಾಠೀ ವ್ಯಾಕರಣದ ಮೇಲೆ ಸಹ ಹೇಗಾಯಿತು ಎಂಬದರ ಸ್ಥೂಲವಾದ ಚರ್ಚೆಯನ್ನು ಪ್ರಾ. ಜಾಗಿರದಾರರು[೧] ಮಾಡಿದ್ದು ಕೈ. ಪ್ರಾ. ಚಿಂ. ನೀ. ಜೋಶಿಯವರು[೨] ಜ್ಞಾನೇಶ್ವರಿಯಲ್ಲಿ ಇದ್ದಕ್ಕಿದ್ದಹಾಗೆ ಉಪಯೋಗಿಸಿದ ಕೆಲವು ಕನ್ನಡ ಶಬ್ದಗಳನ್ನು ತೋರಿಸಿದ್ದಾರೆ. ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ 'ಜ್ಞಾನೇಶ್ವರಿ'ಯಲ್ಲಿ ಕನ್ನಡದ ಪ್ರಭಾವವು ಹೆಚ್ಚಾಗಿ ಇದ್ದುದು ಕಂಡುಬರುವದು ಈ ಸಂದರ್ಭದಲ್ಲಿ. ಶಬ್ದಗಳು ಕನ್ನಡದವು ಇದ್ದುದರ ಬಗೆಗೆ ನೋಡಿದೊಡನೆ ಸಂಶಯವು ಎಷ್ಟೆಷ್ಟೊ ಬರದಂತಹ "ಹರಿಮೇಖಲಾ" ಎಂಬ ಶಬ್ದದ ಚರ್ಚೆಯು ಉದ್ಬೋಧಕವಾಗಬಹುದು.

ವಸ್ತುತಃ "ಹರಿಮೇಖಲಾ" ಎಂಬ ಶಬ್ದವು ಸಂಸ್ಕೃತ ಸಾಮಾಜಿಕ ಪದವು. ಅದರೆ ಅದರ ಉಲ್ಲೇಖವು "ಶಬ್ದಕಲ್ಪದ್ರುಮ" "ಸೆಂಟ್ ಪೀಟರ್ಸ್‌ಬರ್ಗ" "ಮೋನಿಯರ ವಿಲ್ಯಮ್ಸ್" ಮುಂತಾದ ಯಾವ ಸಂಸ್ಕೃತ ಕೋಶದಲ್ಲಿಯೂ ದೊರೆಯುವದಿಲ್ಲ. ಸಂಸ್ಕೃತ ಕೋಶಗಳನ್ನು ನಿರ್ಮಿಸುವದಕ್ಕೆ ಉಪಯೋಗಿಸಿದ ಸಂಸ್ಕೃತ ವಾಙ್ಮಯದಲ್ಲಿ ಈ ಶಬ್ದವು ಎಲ್ಲಿಯೂ ಕಾಣದೇ ಹೋದುದೇ ಇದಕ್ಕೆ ಕಾರಣವಾಗಿರಬೇಕು.

ಮೋಸ ಇಲ್ಲವೆ ಕಣ್‌ಮಸಕು ಈ ಅರ್ಥದಲ್ಲಿ "ಹರಿಮೇಖಲಾ" ಶಬ್ದವು ಜ್ಞಾನೇಶ್ವರಿಯ 'ಪುರೋ-ಷೋತ್ತಮಯೋಗ' ಎಂಬ ೧೫ ನೆಯ ಅಧ್ಯಾಯದಲ್ಲಿ "ನ ರೂಪಮಸ್ಯೇಹ ತಥೋಪಲಭ್ಯತೇ—" ಈ ಶ್ಲೋಕದ (ಭಗವದ್ಗೀತೆಯ) ಟೀಕೆಯಲ್ಲಿ ಬರುವದು. ಆ ಮರಾಠಿ ಪದ್ಯಗಳು ಹೀಗಿವೆ :

ನಾನಾ ರಂಗೀ ಗಜಬಜೆ। ಜೈಸೆ ಇಂದ್ರಧನುಷ್ಯ ದೇಖಿಜೆ॥
ತೈಸಾ ನೇಣತಯಾ ಆಪಜೆ। ಆಹೇ ಐಸಾ ॥೨೪೦॥
ಐಸೇನಿ ಸ್ಥಿತೀಚಿಯೇ ವೇಳೇ। ಭುಲವೀ ಅಜ್ಞಾನಾಚೀ-
ಡೋಳೇ।
ಲಾಘವೀ ಹರಿಮೇಖಳೇ। ಲೋಕು ಜೈಸಾ ॥೨೪೧॥

೧. ಆರ್. ವಿ. ಜಾಗೀರದಾರರ "ಹಳೆ ಮರಾಠಿಯ ಮೇಲೆ ಕನ್ನಡದ ಪ್ರಭಾವ" ಎಂಬ ಇಂಗ್ಲಿಷಿನಲ್ಲಿಯ ಲೇಖ— ಭಾಂಡಾರಕರ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಪತ್ರಿಕೆ ೧೧.

೨. ಚಿಂ. ನೀ. ಜೋಶಿ:– ಮರಾಠೀ ದ್ರಾವಿಡೀ ಸಂಬಂಧ ಮತ್ತು ಜ್ಞಾನೇಶ್ವರಿಯಲ್ಲಿಯ ದ್ರಾವಿಡೀ ಶಬ್ದಗಳು— ವಿವಿಧ ಜ್ಞಾನವಿಸ್ತಾರ, ೧೯೩೪.

ಅರ್ಥ: ಯಾವ ರೀತಿಯಲ್ಲಿ ಇಂದ್ರಧನುಸ್ಸುವು ತರ ತರದ ಬಣ್ಣಗಳಿಂದ ದಟ್ಟನೆ ಇಡುಗಿರುವದೋ ಆ ರೀತಿಯಾಗಿ, ತಿಳಿಯದ ಮನುಷ್ಯನಿಗೆ ಈಶ್ವರನು ಮೂರ್ತಸ್ವರೂಪಿಯಾಗಿರುವನೆಂದು ಭಾಸವಾಗುವದು. ಈ ಪರಿಯ ಮನಃಸ್ಥಿತಿಯಲ್ಲಿದ್ದಾಗ ಕೈಚಳಕ ಮಾಡುವ ಮನುಷ್ಯನು ನೆರೆಯಲ್ಲಿದ್ದ ಜನರಿಗೆ ಕಣ್ಮಸುಕು ಮಾಡಿ ಅವರನ್ನು ವಂಚಿಸುವ ಹಾಗೆ ಈಶ್ವರನು ಅಜ್ಞಾನಿಯ ಕಣ್ಗಳಿಗೆ ಮಾಯೆಯನ್ನೆಸಗುವನು.

ಜ್ಞಾನೇಶ್ವರಿಯ ಎಲ್ಲ ಸಂಪಾದಕರೂ 'ಹರಿಮೇಖಲಾ' ಎಂಬ ಸಮುಸ್ತ ಪದವನ್ನು "ಹರಿ" ಮತ್ತು "ಮೇಖಲಾ" ಎಂದು ಬಿಡಿಸಿದ್ದು ಕಂಡುಬರುವದು. 'ಹರಿ' = ಹರಣಮಾಡು, ಮೋಸಮಾಡು ಎಂಬ ಕ್ರಿಯಾಪದದ ತೃತೀಯ ಪುರುಷದ ಏಕವಚನದವೆಂದೂ, "ಮೇಖಲಾ" ಶಬ್ದದ ಅರ್ಥವನ್ನು ನಟವೇಷ, ಸೋಗು ಎಂದೇ ಬಹುತರವಾಗಿ ಹಿಡಿದಿದ್ದಾರೆ. ಮಾಡಗಾಂವಕರ ಎಂಬ ಟೀಕಾಕಾರರು 'ಮೇಖಲಾ' ಎಂಬದಕ್ಕೆ 'ಕಪನೀ' ಎಂದರ್ಥಮಾಡಿ ಜ್ಞಾನೇಶ್ವರೀ ಭಾಷೆಯಲ್ಲಿ ಅದನ್ನು 'ವಸ್ತ್ರ' ಎಂದು ಅರ್ಥ ಮಾಡಿದ್ದಾರೆ. ಈ ರೀತಿಯಾಗಿ ಅರ್ಥ ಹಚ್ಚುವದಕ್ಕೆ ಮೇಲೆ ಹೇಳಿದಂತೆ ಮರಾಠಿಯ ಉತ್ಪತ್ತಿಗೆ ಕಾರಣವಾದ ಸಂಸ್ಕೃತ, ಪ್ರಾಕೃತ ಮತ್ತು ಅಪಭ್ರಂಶದ ವಾಙ್ಮಯದಲ್ಲಿ ಎಲ್ಲಿಯೂ ಈ ಶಬ್ದದ ಅಸ್ತಿತ್ವವಿಲ್ಲದೇ ಹೋದುದೂ, ಮುಂದೆ ಎಲ್ಲಿಯಾದರೂ ಒಂದೆರಡೆಡೆಯಲ್ಲಿ ಬಂದಿದ್ದರೂ ಅತಿ ಸೂಕ್ಷ್ಮವಾಗಿ ಹುಡುಕಿದ ಹೊರತು ಸಿಕ್ಕುವಂತೆ ಇರದೆ ಇದ್ದುದೂ ಕಾರಣವಾಗಿದೆ. ಆದಕಾರಣ 'ಹರಿ ಮೇಖಲಾ' ಎಂಬ ಪದದಿಂದ ಯಾವ ಅರ್ಥಬೋಧವೂ ಆಗದೆ ಹೋದದ್ದು ಸ್ವಾಭಾವಿಕವಾಗಿದೆ.

ಸಮುಸ್ತಪದದಲ್ಲಿಯು 'ಹರಿ' = ಇಂದ್ರ, ಮತ್ತು ಮೇಖಲಾ = ಟೊಂಕಕ್ಕೆ ಸುತ್ತುವ ಪಟ್ಟಿ, ಸುತ್ತು; 'ಇಂದ್ರನ ಟೊಂಕದ ಪಟ್ಟಿ' ಎಂದರೆ ಇಂದ್ರಧನುಸ್ಸು. ಕಣ್ಣುಗಳನ್ನು ಮೋಸಗೊಳಿಸುವ ಕಣ್ಣಮುಸುಕೇ. 'ಮೇಖಲೆ'ಯ ಅರ್ಥವನ್ನು 'ಬಲಿ' ಎಂದು ತೆಗೆದುಕೊಂಡರೆ 'ಹರಿಮೇಖಲೆ'ಯ ಅರ್ಥವು "ಇಂದ್ರಜಾಲ" 'ಕಣ್ಮುಸುಕ' ಎಂದಾಗುವದು.

ಕರ್ನಾಟಕ ವಿದ್ಯಾಪೀಠದಲ್ಲಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ. ತೀ.ನಂ. ಶ್ರೀಕಂಠಯ್ಯನವರು ನನಗೆ ಕೊಟ್ಟ ಮಾಹಿತಿಯ ಪ್ರಕಾರ 'ಹರಿಮೇಖಳೆ' ಎಂಬ ಶಬ್ದವು ಕನ್ನಡ ವಾಙ್ಮಯದಲ್ಲಿ ಕುಮಾರವ್ಯಾಸನ ಭಾರತದಲ್ಲಿ ಅನೇಕ ಕಡೆಗೆ ಬರುತ್ತಿದ್ದು ಅದರ ಅರ್ಥವು 'ಕಣ್ ಮುಸುಕು' ಎಂದೇ ಇದೆ. ಕುಮಾರವ್ಯಾಸನ ಭಾರತದಲ್ಲಿಯ ಕರ್ಣಪರ್ವದಲ್ಲಿ ಒಂದು ಪ್ರಸಂಗದಲ್ಲಿ ಅಶ್ವತ್ಥಾಮನು ಭೀಮನ ಮೇಲೆ ಅತ್ಯಂತ ಕುಶಲತೆಯಿಂದ ಮಾಡಿದ ಬಾಣಗಳ ಮಳೆಯಿಂದ ಆಕಾಶವಾವುದು ಭೂಮಿ ಯಾವದು ಇದು ತಿಳಿಯದಂತಾಯಿತು. ಆಗ ಭೀಮನು ಅಶ್ವತ್ಥಾಮನಿಗೆ ಒಂದು ಮಾತಿನ ಏಟು ಕೊಡುವನು :

ಎಲೆಲೆ ಹಾರುವನೇಕೆ ಹರಿಮೇಖಳೆಯ ಖೇಳಕೆಯೇಕೆ
ಪಡಿಮುದ್ದಳೆಯ ಬಡಿಕರ ಬಿಂಕಮೇಳವವಿಲ್ಲಲಾ
ನಿನಗೆ।ಲ.೩.೨೨

ಅರ್ಥ : ಭಲೆ! ಹಾರುವನೊಬ್ಬನು ಈ ಕಣ್ಮುಸುಕಿನ ಆಟವನ್ನು ಹೂಡಿದ್ದಾನೆ. ಆದರೆ ಆತನಿಗೆ ಬಿಂಕದಿಂದ ಡೊಳ್ಳುಬಡಿಯುವವರ ಸಂಗತಿಯೊಂದೇ ಕಡಿಮೆಯಿದೆ.

'ಹರಿಮೇಖಲೆಯ' ಅರ್ಥ ಮೋಸ ಅಥವಾ ಕಣ್ ಮುಸುಕು ಎಂಬದು ಕೇಶಿರಾಜನು (ಇ. ಸ. ೧೨೬೦ ಸುಮಾರು) ಬರೆದ "ಶಬ್ದಮಣಿ ದರ್ಪಣ"ವೆಂಬ ವಿಭಾಗದಲ್ಲಿ ಕೊಟ್ಟ "ಹರಿಮೇಖಲೆ= ಇಂದ್ರಜಾಲಂ" ಎಂಬ ವಾಕ್ಯದಿಂದಲೇ ಸಿದ್ಧವಾಗುವದು.

ಜ್ಞಾನೇಶ್ವರಿಗೆ ೩೦ ವರ್ಷಗಳ ಹಿಂದೆ ಬರೆಯಲ್ಪಟ್ಟ ಹರಿಮೇಖಲಾ ಎಂಬದರ ಉಲ್ಲೇಖವಿದು. ಎಂದ ಮೇಲೆ ಇದುವರೆಗೂ ಗೊತ್ತಿರದ 'ಹರಿಮೇಖಲಾ' ಶಬ್ದವು ಕನ್ನಡದಿಂದ ಜ್ಞಾನೇಶ್ವರಿಯ ಮರಾಠಿಯಲ್ಲಿ ಬಂದಿತು ಎಂಬದು ಸ್ಪಷ್ಟವಿದೆ.

ಸಿದ್ಧೇಶ್ವರ ಶಾಸ್ತ್ರೀ ಚಿತ್ರಾವ ಇವರ ಷಷ್ಟ್ಯಬ್ದಿ ಪೂರ್ತಿಯ ಅಭಿನಂದನ ಗ್ರಂಥದಲ್ಲಿನ ಡಾ. ಮು. ಗ. ಪಾನಸೆಯವರ ಲೇಖನದ ಅನುವಾದ—

"ಪ್ರಾಥಮಿಕ ಶಿಕ್ಷಣದಲ್ಲಿ ಶಾರೀರಿಕ ಶಿಕ್ಷಣದ ಮಹತ್ವ"

ಲೇಖಕರು : ಎಸ್. ಎಸ್. ಬಿನ್ನಾಳ ಉಪಗುರು ಕ. ಗಂ. ಶಾಲಾ, ಕಣಗಿನಹಾಳ ತಾ|| ಗದಗ.

ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣವು ಒಂದು ಮುಖ್ಯ ವಿಷಯವೆಂದು ಬೇರೆ ಹೇಳಬೇಕಾಗಿಲ್ಲ. ಎಲ್ಲ ಸಂಪತ್ತುಗಳಲ್ಲಿ ಶಾರೀರಿಕ ಸಂಪತ್ತು ಮಿಗಿಲಾದದ್ದೆಂದು ನಾಣ್ಣುಡಿಯು ಸಹ ಇದೆ. ಬಾಲಕರ ಶಾರೀರಿಕ ಸಂಪತ್ತು ಬೆಳೆದರೆ ಅದರ ಜೊತೆಗೂ ಬೌದ್ಧಿಕಸಂಪತ್ತು ಸಹಜವಾಗಿ ಹೆಚ್ಚುತ್ತದೆ. ಶಾರೀರಿಕ ಶಿಕ್ಷಣವೆಂದರೆ ಬಾಲಕರ ಬುದ್ಧಿಬೆಳವಣಿಗೆಗೆ ಸೂಜಿಗಲ್ಲು ಇದ್ದಹಾಗೆ.

ಬಾಲಕರ ಎಲ್ಲ ಪ್ರವೃತ್ತಿಗಳಲ್ಲಿ ಆಟದ ಪ್ರವೃತ್ತಿಯು ನೈಸರ್ಗಿಕವಾಗಿ ಬಂದದ್ದರಿಂದ ಅದನ್ನು ಪುನರಾವೃತ್ತಿಗೊಳಿಸುತ್ತ ದೃಢೀಕರಿಸುವದು ಮಾತ್ರ ಶಿಕ್ಷಕನ ಸಂಪೂರ್ಣ ಹೊಣೆಯಾಗಿದೆ. ಈ ಹೊಣೆಗಾರಿಕೆಯು ಶಿಕ್ಷಕರಿಗೆ ಅಷ್ಟೊಂದು ಶ್ರಮ ದಾಯಕವು ಆಗುವದಿಲ್ಲವೆಂದು ನನ್ನ ಊಹೆ. ಯಾಕಂದರೆ ಈ ಪ್ರವೃತ್ತಿಯು ಸಹಜವಾಗಿ ತನ್ನಿಂದ ತಾನೆ ಬಂದಿರುತ್ತದೆ. ಅದನ್ನು ಹೊಸದಾಗಿ ಮಾಡಬೇಕಾದರೆ ಮಾತ್ರ ಶ್ರಮವಾಗುತ್ತಿತ್ತು— ಆದರೆ ಅದರ ಒಲವಿನತ್ತಡೆಯೇ ವ್ಯಕ್ತಿತ್ವವು ಮಾತ್ರ ವಿಕಾಸವಾಗುವಂತೆ ಬಾಲಕರಲ್ಲಿ ಪ್ರತಿಬಿಂಬಿಸಬೇಕು. ಹಾಗೂ ಶಾರೀರಿಕ ಬೆಳವಣಿಗೆಯು ಹೆಚ್ಚಾದಂತೆ ಅದರ ಜೊತೆಗೆ ಮಾನಸಿಕ ಬೆಳವಣಿಗೆಯು ತಾನಾಗಿಯೇ ಬೆಳೆಯಹತ್ತುವದು. ಮಾನಸಿಕ ಬೆಳವಣಿಗೆಯು ಬೆಳೆಯಹತ್ತಿತೆಂದರೆ ಬಾಲಕನಲ್ಲಿ ಬೌದ್ಧಿಕ ಬೆಳವಣಿಗೆಯು ಅಧಿಕವಾಗುತ್ತ ಹೋಗುತ್ತದೆ. ಅಂತೆಯೇ ಬಾಲಕರ ಬುದ್ಧಿಬೆಳವಣಿಗೆಗೆ ಶಾರೀರಿಕ ಶಿಕ್ಷಣವು ಸೂಜಿಗಲ್ಲು ಇದ್ದಹಾಗೆ ಎಂದು ಮೇಲೆ ಹೇಳಿದೆ.

ಒಂದು ಸರಪಳಿಗೆ ಒಂದಕ್ಕೊಂದು ಗೊಣಸು ಹೇಗೆ ಸಂಬಂಧಪಟ್ಟಿರುತ್ತವೆಯೋ ಹಾಗೆಯೇ ಪ್ರಾಥಮಿಕ ಶಿಕ್ಷಣದಲ್ಲಿ ಶಾರೀರಿಕ ಶಿಕ್ಷಣವು ಸರಪಳಿಯ ಗೊಣಸಿನಂತೆ ಸಂಬಂಧಪಟ್ಟಿದ್ದಾಗಿರುತ್ತದೆ.

ಶಾರೀರಿಕ ಶಿಕ್ಷಣದ ನಿರ್ಮಾಣದಿಂದ ಬಾಲಕರಿಗೆ ದೇಹ, ಬುದ್ಧಿ, ಭಾವ, ಆತ್ಮ ಇವೆಲ್ಲ ವಿಕಾಸಗಳು ಪರಿಪಕ್ವ ಹೊಂದುತ್ತವೆ. ಇವೆಲ್ಲವುಗಳು ಪರಿಪಕ್ವ ಹೊಂದಿದವೆಂದು ಶಿಕ್ಷಕನಿಗೆ ಕಂಡು ಬಂದಾಗ ಮಾತ್ರ ಶಾರೀರಿಕ ಶಿಕ್ಷಣದ ಗುರಿಯು ಮಾತ್ರ ಸಾಧಿಸಿದೆ ಎಂದು ತಿಳಿಯತಕ್ಕದ್ದು. ಆದರೆ ಮಕ್ಕಳಿಗೆ ಆಟಕ್ಕೆ ಮಾತ್ರ ಸ್ವತಂತ್ರವನ್ನು ಕೊಡಬೇಕು. ಆಟ ಒಂದು ವಿಷಯವನ್ನು ಬಿಟ್ಟು, ಉಳಿದೆಲ್ಲ ವಿಷಯಗಳಲ್ಲಿ ಬಾಲಕರಿಗೆ ಆಟದಷ್ಟು, ಹೆಚ್ಚಾಗಿ ಸ್ವಾತಂತ್ರ್ಯ ವಿರುವದಿಲ್ಲ ಅವುಗಳನ್ನು ಶಾಲೆಯ ಪ್ರಾರಂಭದ ವೇಳೆಯಿಂದ ಕಡೆಯ ವೇಳೆಯ ವರೆಗೆ, ಹೆಚ್ಚಾಗಿ ಸ್ವಾತಂತ್ರವಿಲ್ಲದಲೆ, ಕಲಿತು ಬೇಜಾರಗೊಂಡಿರುತ್ತಾರೆ.

ಆದಕ್ಕಾಗಿಯೇ ಶಾಲೆಯ ಬಿಡುವಿನ ಕಡೆಯ ಅವಧಿಯಲ್ಲಿ ಸ್ವತಂತ್ರವಾದ ಶಾರೀರಿಕ ಚಟುವಟಿಕೆಯ ಅವಧಿಯನ್ನು ಶಿಕ್ಷಣತಜ್ಞರು ನಿಯಾಮಕ ಮಾಡಿದ್ದಾರೆ. ಅಂದರೆ ಅವರ ಬೇಜಾರವೆಲ್ಲವೂ ಹೋಗಿ ಹೊಸ ಹುರುಪು ಬರುತ್ತದಲ್ಲದೆ ಅವರ ಮನಸ್ಸು ಸ್ವಚ್ಛವಾಗುತ್ತದೆ. ಹುರುಪು ಇಮ್ಮಡಿಗೊಳ್ಳುತ್ತದೆ. ಅಲ್ಲದೆ, ಶಾಲೆಯಲ್ಲಿ ನಡೆದ ಎಲ್ಲ ವಿಷಯಗಳು ದೃಢೀಕರಿಸಲ್ಪಡುತ್ತವೆ. ಅನುಭವಿಕ ಶಿಕ್ಷಣತಜ್ಞರ ಅನುಮತಿಯಂತೆ ಗಡುಚಾದ ವಿಷಯವನ್ನು ಬಾಲಕರಿಗೆ ತಿಳಿಸಿ ಹೇಳಿದ ನಂತರ ಅವರಿಗೆ ವಿಶ್ರಾಂತಿ ದೊರೆತರೆ ಹಿಂದೆ ಆದ ವಿಷಯವು ವಿಶ್ರಾಂತಿಯಿಂದ ಅಧಿಕವಾಗಿ ಮನನವಾಗುತ್ತದೆ ಎಂಬ ಉದಾಹರಣೆಯು ಮೇರೆಗೆ ಶಾಲೆಯ ಪ್ರಾರಂಭದ ಅವಧಿಯಿಂದ ಕಡೆಯ ಅವಧಿಯ ವರೆಗೆ ಸಾಗಿದ ಎಲ್ಲ ವಿಷಯಗಳಿಗೆ ಶಾರೀರಿಕ ಅವಧಿಯ ವಿಶ್ರಾಂತಿಯಂತೆಯಾಗಿ ವಿಷಯಗಳೂ ಮನನವಾಗುತ್ತವೆ.

ಅಂತೆಯೇ ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೪ ನೆಯ ಇಯತ್ತೆವರೆಗೆ ೫ನೆಯ ಇಯತ್ತೆಯಿಂದ ೭ನೆಯ ಇಯತ್ತೆ ವರೆಗೆ ಅನುಕ್ರಮವಾಗಿ ಎರಡು ಗುಂಪುಗಳನ್ನಾಗಿ

ಪ್ರಾಥಮಿಕ ಶಿಕ್ಷಣದಲ್ಲಿ ಶಾರೀರಿಕ ಶಿಕ್ಷಣದ ಮಹತ್ವ

ಹೂಡಿ ಆಯಾ ವರ್ಗದ ಬಾಲಕರ ಪ್ರಗತಿಗೆ ಅನುಸರಿಸಿ ಕೆಳಗಿನ ವರ್ಗದ ಬಾಲಕರಿಗೆ ಬೇರೆ ಮೇಲಿನ ವರ್ಗದ ಬಾಲಕರಿಗೆ ಬೇರೆಯಾಗುವಂತೆ ಅನುಭವಿಕ ಶಿಕ್ಷಣ ತಜ್ಞರು ಆಟದಲ್ಲಿಯೂ ಸಹ ಭಾಗಗಳನ್ನು ಮಾಡಿದ್ದಾರೆ. ಅವು ಯಾವವು ಎಂಬುದನ್ನು ಮಾತ್ರ ಶಿಕ್ಷಕರಿಗೆ ಹೆಚ್ಚಾಗಿ ವಿವರಿಸಿ ಹೇಳಬೇಕಾಗಿಲ್ಲ. ಅವುಗಳ ಸಂಗತಿಯು ಎಲ್ಲ ಶಿಕ್ಷಕರಿಗೂ ಗೊತ್ತಿರಲಿಕ್ಕೆ ಸಾಕು.

ಕಿಂಡರಗಾರ್ಟನ ಪದ್ಧತಿಯಂತೆ ಆಟದಿಂದಲೇ ಪಾಠ ಎಂಬದನ್ನು ಅನುಸರಿಸಲು ಕೆಳಗಿನ ವರ್ಗದ ಬಾಲಕರಿಗಾಗಿ ಮಾತ್ರ ಶಿಕ್ಷಕರು ಹೆಚ್ಚಾಗಿ ಪ್ರಯತ್ನಿಸತಕ್ಕದ್ದು. ಅಂದರೆ ಆಯಾ ವರ್ಗದ ಬಾಲಕರಿಗೆ ಅನುಸರಿಸಿ ಆಟದಲ್ಲಿ ಪ್ರಗತಿಯನ್ನು ಸಾಧಿಸಿದರೆ ಅದರ ಜೊತೆಗೆ ದೈಹಿಕ, ಮಾನಸಿಕ ಬೆಳವಣಿಗೆಯು ತಾನಾಗಿಯೇ ಅತ್ಯುತ್ತಮವಾಗಿ ಸಾಧಿಸುತ್ತದೆ. ಇನ್ನು ಆಟಗಳಲ್ಲಿ ಮಾತ್ರ ಸಾಂಘಿಕ ಜೀವನದ ಆಟ, ವೈಯಕ್ತಿಕ ಆಟ ಎಂದು ಅ+ಬ ವಾಗಿ ಎರಡು ಗುಂಪುಗಳು ಅವೆ. ಸಾಂಘಿಕ ಜೀವನದ ಆಟದಿಂದ ಬಾಲಕರ ವ್ಯಕ್ತಿತ್ವವನ್ನು ಅಳತೆಗೋಲಿನಿಂದ ಅಳೆಯಲಿಕ್ಕೂ ಮಿಕ್ಕುವಂತಹದ್ದಾಗುತ್ತದೆ. ಹಾಗೂ ಬಾಲಕರಲ್ಲಿ ಶಿಸ್ತು, ಸತ್ಯ, ತಾಳ್ಮೆ ಅಲ್ಲದೆ ಧೈರ್ಯ, ಕರ್ತವ್ಯದಕ್ಷತೆ, ಸ್ವಾವಲಂಬನ ಮತ್ತು ಸಹಬಂಧುಗಳಲ್ಲಿಯೂ ಒಡನಾಡಿಗಳಲ್ಲಿಯೂ ಅತ್ಯುತ್ತಮವಾದ ಪ್ರೀತಿ, ವಿಶ್ವಾಸ, ಸಹಕಾರ ಮುಂತಾದ ಉತ್ತಮ ಗುಣಗಳು ಬೆಳೆಯುತ್ತವೆ. ಅದಕ್ಕಾಗಿಯೇ ಆರೋಗ್ಯವು ಬಲಪಡುತ್ತಿದೆಂದು ಮನನೀಯವಾಗಿ ಹೇಳಬಹುದು. ಅದಕ್ಕಾಗಿ, ಪ್ರಾಥಮಿಕ ಶಿಕ್ಷಣದಲ್ಲಿ ಶಾರೀರಿಕ ಶಿಕ್ಷಣದ ಮಹತ್ವವು ಅತ್ಯುಪಯುಕ್ತವೆಂದು ಹೇಳಲು ಪ್ರಶಂಸನೀಯವಾಗಿದೆ. ಶಾರೀರಿಕ ಶಿಕ್ಷಣದ ಅಭಿರುಚಿಯಿಂದ, ಬಾಲಕರಲ್ಲಿ ವಿಶ್ವಬಾಂಧವ್ಯ, ವಿಶ್ವಶಾಂತಿ ಇವೆಲ್ಲವುಗಳು ಒಡಮೂಡಿ ಅವರ ಜೀವನೋದ್ಧಾರಕ್ಕೆ ಸ್ವಾವಲಂಬಿಯಾಗಿ ಬದುಕುವದರಲ್ಲಿ ಸಂದೇಹವಿಲ್ಲ. ಅಂದಿನ ಇಂದಿನ ನಮ್ಮ ದುರ್ದಶೆಗಳು ದೂರಾಗಿ ಆದರ್ಶ ಸಮಾಜವನ್ನು ಅಭಿಮಾನದಿಂದ ನಿರ್ಮಾಣ ಮಾಡಲು ಶಾರೀರಿಕ ಶಿಕ್ಷಣವೇ ಶಿಕ್ಷಣರಂಗದಲ್ಲಿ ಅತಿ ಮಹತ್ವದ ಗುರಿಯಾಗಿದೆ. ಇವೆಲ್ಲವುಗಳು ಪ್ರಾಥಮಿಕ ಶಿಕ್ಷಣ ರಂಗದಲ್ಲಿ ಅತಿ ಮಹತ್ವದ ಗುರಿಯಾಗಿದೆ. ಇವೆಲ್ಲವುಗಳು ಪ್ರಾಥಮಿಕಶಿಕ್ಷಣರಂಗದಲ್ಲಿ ಅಜರಾಮರವಾಗಿ ನೆಲೆವೂರಿಸಲು. ಕಳಕಳಿಯಾದ ಮೂಲಕ ಸರಕಾರವು ಲಕ್ಷಿಸದೇ ವೊದಲಿಗೇನೇ ಶಿಕ್ಷಕರಿಗೆ ಶಾರೀರಿಕ ತರಬೇತಿಯನ್ನು ಆವಶ್ಯಕಯುಕ್ತವಾಗಿ ಮಾಡಿಸಿದೆ, ಮಾಡಿಸಹತ್ತಿದೆ, ಮಾಡಿಸುತ್ತಿದೆ ಅದಕ್ಕಾಗಿಯೇ ಬಹಳ ಹಣವನ್ನು ಖರ್ಚು ಮಾಡಿದ್ದಾಗಿದೆ

ಅಂತೆಯೇ ಈ ಪ್ರಕಾರ ಈಗಿನ ಈ ನಮ್ಮ ಸರಕಾರವು ಪ್ರಾಥಮಿಕ ಶಿಕ್ಷಣಕ್ಕೆ ಅಗಣಿತವಾಗಿ ಹಣವನ್ನು ವೆಚ್ಚ ಮಾಡಿದ್ದಾಗಿದೆ ಎಂದು ಮೇಲೆ ವಿವರಿಸಿದೆ. ಹಾಗೂ ಅತ್ಯಕ್ತಿಂತವಾಗಿ ಪ್ರಾಥಮಿಕ ಶಿಕ್ಷಕರಿಗೂ ಸಹ ಮನಗೊಟ್ಟು ಲಕ್ಷಪೂರೈಸಿದ್ದು ಅವು ಅಷ್ಟೊಂದು ನಿಚ್ಚಳವಾಗಿವೆ. ಬಿಚ್ಚಿ ಬೇರೆ ಹೇಳಬೇಕಾಗಿಲ್ಲ.

ಅದಕ್ಕಾಗಿಯೇ ಶಾರೀರಿಕ ಶಿಕ್ಷಣವು ಫಲಶ್ರುತಿಯಾಗಲೇ ಬೇಕಾಗಿದೆಂಬ ಅಪೂರ್ವ ಆಕಾಂಕ್ಷೆಯು ಸ್ವಾಗತಾರ್ಹವಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಅಚ್ಚಳಿಯದ ಹೊಸಯುಗ ಆರಂಭವಾಗುವ ಶುಭಚಿಹ್ನ ತಲೆದೋರುವದೆಂಬ ಅಲ್ಲಿ ಉಲ್ಲೇಖವಿದ್ದದ್ದು ಮನನೀಯವಾಗಿದೆ ಮತ್ತು ನಮ್ಮ ಸರಕಾರವು ಅಂತಃಕರುಣದಿಂದ ಶಿಕ್ಷಣರಂಗದಲ್ಲಿ ಮಾಡಿದ ಫಲಶೃತಿಯು ಅಂತಃಕರುಣದ ಪ್ರಾಮಾಣಿಕತೆಯು ಸೊಲ್ಲು ತುಂಬುತ್ತಿರುವದೆಂಬ ಸಂಗತಿಯು ಅತಿ ಮಹತ್ವದ ಮುನ್ನುಡಿಯ ಸೌಹಾರ್ದ ಪೀಠಿಕೆ ಎಂದು ಭಾವಿಸಲಡ್ಡಿಯಿಲ್ಲ. ಅಂದರೆ ಸರಕಾರದಿಂದ ಶಾರೀರಿಕ ಶಿಕ್ಷಣಕ್ಕೆ ದೊರೆತ ಸುಪರಿಣಾಮವನ್ನು ಸಂಪೂರ್ಣವಾಗಿ ಅಸಮಂಜಸವೆಂದು ಶಿಕ್ಷಕರು ಎಂದೂ ಕಡೆಗಾಣಿಸಲಾಗದು.

ಅಸಂದಿಗ್ಧವಾಗಿಯೇ ತಮ್ಮ ಮನೋಗತವನ್ನು ಶಿಕ್ಷಣದೇಳ್ಗೆಗಾಗಿಯೇ ಅಂದಿನ, ಇಂದಿನ, ಮುಂದಿನ ನಿರ್ಣಯಕ್ಕೆ ಯಾವಾಗಲೂ ಕಂಕಣಬದ್ಧರಾಗಲು ಅಪೂರ್ವವಾಗಿ ಕಂಕಣಬದ್ಧರನ್ನಾಗಿ ಮಾಡಲು ಸೂಕ್ಷ್ಮ ಅವಸ್ಥೆಯಿಂದಲೇ ಅಪೂರ್ವವಾಗುವಂತೆ ಮನೋವೃತ್ತಿಯಿಂದ ಶಾರೀರಿಕ ಶಿಕ್ಷಣದಲ್ಲಿ ಬಾಲಕರಿಗೆ ಅತ್ಯೊನ್ನತವಾಗಿ ಸೇವೆಸಲ್ಲಿಸತಕ್ಕದ್ದು. ಇದಕ್ಕೆ ಮಾತ್ರ ಶಿಕ್ಷಕರು ಎಂದೂ ತಪ್ಪತಕ್ಕದ್ದಲ್ಲ. ಅಂದರೆ ಮಾತ್ರ ಇಂದಿನ ಬಾಲಕರು ನಾಳಿನ ನಾಗರಿಕರೂ, ಅತ್ಯುತ್ತಮ ರಾಷ್ಟ್ರ ಸುಧಾರಕರೂ ಆಗುವದರಲ್ಲಿ ಸಂದೇಹವಿಲ್ಲ.

— [illegible]

ಪ್ರಾಥಮಿಕ ಶಿಕ್ಷಣ ಪ್ರಪಂಚ

ಧಾರವಾಡ — ಇಲ್ಲಿಯ ಬಾಸೆಲ್ ಮಿಶನ್ ಟ್ರೇನಿಂಗ ಕಾಲೇಜದ ಎಲ್ಲ ಶಿಕ್ಷಕ-ವಿದ್ಯಾರ್ಥಿಗಳು ತಾ - ೭ - ೧೨ - ೧೯೫೪ ರಿಂದ ತಾ ೧೬ - ೧೨ - ೧೯೫೪ರ ವರೆಗೆ ಇಲ್ಲಿಂದ ೭ ಮೈಲುಗಳ ಅಂತರದಲ್ಲಿರುವ ಅಮ್ಮಿನಭಾವಿಯಲ್ಲಿ ಶಿಬಿರವನ್ನಿಟ್ಟು ಪ್ರತಿನಿತ್ಯ ಅನೇಕ ಸಾಮಾಜಿಕ ಕಾರ್ಯಕಲಾಪಗಳಲ್ಲಿ ಉತ್ಸಾಹದಿಂದ ದುಡಿದರು. ವಿಶೇಷವಾಗಿ ಶ್ರಮದಾನ ಮಾಡಿ ಕಟ್ಟಿದಂಥ ಅಲ್ಲಿಯ ಹೆಣ್ಣುಮಕ್ಕಳ ಸಾಲೆಯ ಆವಾರದ ಹಿಂಬದಿಯ ಗೋಡೆಯು ಈ ಶಿಬಿರದ ಶಿಕ್ಷಕರ ಕಾರ್ಯ ಸಾಮರ್ಥ್ಯದ ಕುರುಹಾಗಿದೆ. ರಾತ್ರಿ ವಿನೋದಾವಳಿ, ನಾಟಕಗಳಿಂದ ಹಳ್ಳಿಗರನ್ನು ಆನಂದಗೊಳಿಸುತ್ತಿದ್ದರು. "ಪುರುಷ ವಧು" "ಕಾಶಿಯಾತ್ರೆ" ಮತ್ತು "ರಾಗಣ್ಣನ ರಥ" ಎಂಬ ಏಕಾಂಕ ನಾಟಕಗಳನ್ನು ಅಭಿನಯಿಸಿದರು. ಅಲ್ಲಿಯ ಆಟಗಾರರೊಂದಿಗೆ ಹುತುತು ಪಂದ್ಯಾಟದಲ್ಲಿ ಸ್ಪರ್ಧಿಸಿ ವಿಜಯಿಗಳಾದರು. ಅವರ ಈ ಕಾರ್ಯಕ್ರಮಗಳಿಗೆ ಸ್ಥಳಿಕ ಪ್ರತಿಷ್ಠಿತ [illegible]ಳಾದ ಶ್ರೀ ಪಂಪಾವತಿ ದೇಸಾಯಿಯವರೂ ಊರಿನ ನಾಗರಿಕರೂ ಸಹಕಾರ ನೀಡಿದರು.

ಅಬ್ಬಿಗೇರಿ — ದಿನಾಂಕ ೧೧ ರಿಂದ ದಿನಾಂಕ ೧೬ - ೧೨ - ೧೯೫೪ರ ವರೆಗೆ ಈ ಶಾಲೆಯ ವಿದ್ಯಾರ್ಥಿಗಳು ಹುಬ್ಬಳ್ಳಿ, ಧಾರವಾಡಗಳಲ್ಲಿರುವ ಶೈಕ್ಷಣಿಕ ಸ್ಥಳಗಳನ್ನು ನೋಡಿಬಂದರು.

ಅಗಡಿ — ದಿವಂಗತ ಸರದಾರ ವಲ್ಲಭಭಾಯಿ ಪಟೇಲರ ಪುಣ್ಯತಿಥಿಯನ್ನು ಇಲ್ಲಿಯ ಜೀ. ಶಿ. ಸಾಲೆಯಲ್ಲಿ ಆಚರಿಸಲಾಯಿತು.

ಬಬಲೇಶ್ವರ — ಮುಂಬಯಿ ರಾಜ್ಯಪಾಲರಾಗಿದ್ದ ಶ್ರೀ. ಗಿರಜಾಶಂಕರ ವಾಜಪೇಯವರ ನಿಧನದ ಬಗ್ಗೆ ಸಭೆ ಸೇರಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು.

ಚಣವಿಕುರವಿನಕೊಪ್ಪ — ಮುಂಬಯಿ ರಾಜ್ಯಪಾಲರಾಗಿದ್ದ ಶ್ರೀ. ವಾಜಪೇಯವರ ನಿಧನದ ಬಗ್ಗೆ ಇಲ್ಲಿಯ ಕ. ಗಂ. ಸಾಲೆಯಲ್ಲಿ ದುಃಖ ಸೂಚಕ ಸಭೆ ಸೇರಿತ್ತು. ಶಿಕ್ಷಕರೂ-ಬಾಲಕರೂ ಕೂಡಿ ಅರ್ಧಫರ್ಲಾಂಗ ದಾರಿ ದುರಸ್ತ ಮಾಡಿದರು.

ಶಾರೀರಿಕ ಶಿಕ್ಷಣ ದಿನಾಚರಣೆಯು ಆಲದಗೇರಿ, ತಿವರಮೆಳ್ಳಿಹಳ್ಳಿ, ಹಲಸೂರ ಹಳಗೆಜೂಗ ಬರ್ಗಿ, ಅಗಡಿ, ಹುಯಿಲಗೊಳ, ಸೊರಟೂರ, ಗ್ರಾಮಗಳ ಸಾಲೆಗಳಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ತಿವರಮೆಳ್ಳಿಹಳ್ಳಿ, ಹಲಸೂರ, ಮನಗೋಳಿ, ಹುಯಿಲಗೋಳ, ನಂದವಾಡಿಗಿ, ಕೋಟೂರ, ಹಿರೇನರ್ತಿ, ಅಲದಗೇರಿ, ಸಿದ್ದಾಪೂರ, ಕುಂದಗೋಳ, ಹಿರೇಮೊರಬ, ಕಟಗೇರಿ, ಬೇವೂರ, ಸಂಪಗಾವ, ಸೊರಟೂರ ಈ ಗ್ರಾಮಗಳ ಸಾಲೆಗಳಲ್ಲಿ ದಿನಾಂಕ ೧ - ೧೨ - ೧೯೫೪ ರಂದು ಸಮಾಜ ಶಿಕ್ಷಣ ದಿನಾಚರಣೆಯು ಯಶಸ್ವಿಯಾಗಿ ಆಚರಿಸಲ್ಪಟ್ಟಿತು.

ಹಿರೇಬೆಂಡಿಗೇರಿ — ಇಲ್ಲಿಯ ಗ್ರುಪ್ ಪಂದ್ಯಾಟವು ಶಿಗ್ಗಾಂವ ತಾಲೂಕ ಮಾಮಲೇದಾರರ ಹಿರಿಯತನದಲ್ಲಿ ಯಶಸ್ವಿಯಾಗಿ ಜರುಗಿತು. ಪಂದ್ಯಾಟದಲ್ಲಿ ಭಾಗವಹಿಸಿದ ಎಲ್ಲ ಶಾಲೆಗಳ ಬಾಲಕರಿಗೂ, ಶಿಕ್ಷಕರಿಗೂ ಊರವರು ಪುಕ್ಕಟೆಯಾಗಿ ಊಟದ ವ್ಯವಸ್ಥೆ ಮಾಡಿದ್ದರು.

ಜಮಖಂಡಿ — ಇಲ್ಲಿಯ ಟ್ರೇನಿಂಗ ಕಾಲೇಜದಲ್ಲಿ ೬-೧೨-೫೪ರಂದು ಮುಂಜಾನೆ ಮುಂಬಯಿ ರಾಜ್ಯಪಾಲರಾದ ಶ್ರೀ ವಾಜಪೇಯವರ ನಿಧನದ ಬಗ್ಗೆ ದುಃಖ ಸೂಚಕ ಸಭೆಸೇರಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ದಿನಾಂಕ ೧-೧[illegible]-೫೪ ರಂದು ಸಮಾಜ ಶಿಕ್ಷಣ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರಿ. ಗುಡಿಸಾಗರ ಅವರು ಈ ಎರಡೂ ಸಭೆಗಳ ಅಧ್ಯಕ್ಷತೆ ವಹಿಸಿದ್ದರು.

ದಿನಾಂಕ ೨-೧೨-೫೪ ರಂದು ಶಾರೀರಿಕ ಶಿಕ್ಷಣ ದಿನಾಚರಣೆಯು ಜರುಗಿತು. ಪ್ರತಿಷ್ಠಿತ ಗೃಹಸ್ಥರೂ, ಅಧಿಕಾರಸ್ಥರೂ ಉಪಸ್ಥಿತರಿದ್ದರು.

ಹುಲೇಕಲ್ — ಇಲ್ಲಿಯ ಶಾಲಾ ಬಾಲಕರೂ, ಶಿಕ್ಷಕರೂ, ೫-೧೨-೫೪ ರಂದು ಬನವಾಸಿಪ್ರವಾಸ ಕೈಕೊಂಡರು.

ಗುಡಗೇರಿ — ಗ್ರೂಪ್ ಪಂದ್ಯಾಟವು ಶ್ರೀ. ಆರ್. ಜಿ. ಹಿರೇಗೌಡರ ವಕೀಲರು ಇವರ ಹಿರಿತನದಲ್ಲಿ ಯಶಸ್ವಿಯಾಗಿ ೫-೧೨-೫೪ ರಂದು ಸಾಂಗವಾಯಿತು.

ಅಣಜಿ — ದಿನಾಂಕ ೪-೧೨-೫೪ ರಂದು ಅಣಜಿ ಮತ್ತು ಹಿರೇಬ್ಯಾರ ಶಾಲೆಗಳಲ್ಲಿ ಅಂತರ್ ಶಾಲಾ ಪಂದ್ಯಾಟವು ಜರುಗಿತು.

ರೊಟ್ಟಿಗವಾಡ — ಮೇಲಿನ ಇಯತ್ತೆಗಳ ಮಕ್ಕಳು ದಿನಾಂಕ ೭,೮-೧೨-೫೪ ರಂದು ಧಾರವಾಡಕ್ಕೆ ಶೈಕ್ಷಣಿಕ ಪ್ರವಾಸ ಕೈಕೊಂಡರು.

ಶೇರಗಾಂವ — ಇಲ್ಲಿಯ ಎ. ಬಿ. ಸಾಲೆಯ ಮೇಲಿನ ವರ್ಗದ ವಿದ್ಯಾರ್ಥಿಗಳು "ಭಾಲಚಂದ್ರ" ಎಂಬ ನಾಟಕವನ್ನು ಆಡಿದರು.

ಬಂಕಾಪುರ — ದಿನಾಂಕ ೨೮-೧೧-೫೪ ರಂದು ಸನ್ಮಾನ್ಯ ಶ್ರೀ. ಜಿ. ವ್ಹಿ. ಹಳ್ಳಿಕೇರಿ ಎಂ.ಎಲ್.ಎ. ಅವರ ಹಿರಿಯತನದಲ್ಲಿ ಗ್ರೂಪ್ ಪಂದ್ಯಾಟವು ನೆರವೇರಿತು.

ಹಲಗೇರಿ — ಈ ಊರಲ್ಲಿ ೨೮-೧೧-೫೪ ರಂದು ಗ್ರೂಪ್ ಪಂದ್ಯಾಟವು ವಿಜೃಂಭಣೆಯಿಂದ ನಡೆಯಿತು.

ಬ್ಯಾಡಗಿ — ೨೮-೧೧-೫೪ ರಂದು ಗ್ರೂಪ್ ಪಂದ್ಯಾಟವು ನಡೆಯಿತು

ಮುರನಾಳ — ಇಲ್ಲಿಯ ಜೀವನ ಶಿಕ್ಷಣ ಸಾಲೆಯ ವಿದ್ಯಾರ್ಥಿಗಳು ತಾಲೂಕಾ ಪಂದ್ಯಾಟದಲ್ಲಿ ಭಾಗವಹಿಸಿ ಶ್ರೀ. ಮುರನಾಳ ಅವರು ಇಟ್ಟ ಚಾಂಪಿಯನ್ ಶೀಲ್ಡನ್ನು ಪಡೆದರು.

ನಾಗಂತೂರ — ದಿನಾಂಕ ೧೯-೧೨-೫೪ ರಂದು ಕಾನಡಾ ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಶ್ರೀ. ರಾ. ರು. ಕುಪ್ಪಸದ ಅವರು ಅ. ಡೆ. ಎ. ಇ. ರಾದ ಶ್ರೀ. ಹೆರ್ಲೇಕರ, ಶ್ರೀ. ಭಟ್ಟ ಮತ್ತು ಶ್ರೀ. ಕಿನ್ನರಕರ ಅವರೊಂದಿಗೆ ಚತುರ್ಮುಖ ಬಸ್ತಿಗೆ ಶೈಕ್ಷಣಿಕ ಪ್ರವಾಸ ಕೈಕೊಂಡು ನಾಗಂತೂರ ಸಾಲೆಯನ್ನು ಸಂದರ್ಶಿಸಿದರು.

ಹಿಪ್ಪರಗಿ — ಜಮಖಂಡಿ ಟ್ರೇ. ಕಾ. ದ ೧ ನೆಯ 'ಅ' ವರ್ಗದ ಶಿ. ವಿ. ಗಳು ಅಧ್ಯಾಪಕರಾದ ಶ್ರೀ. ಅಡಕಿ ಮತ್ತು ಶ್ರೀ. ಎಸ್. ಕೆ. ಕುಲಕರ್ಣಿ ಅವರ ನೇತೃತ್ವದಲ್ಲಿ ೧೮-೧೨-೫೪ ರಿಂದ ೨೪-೧೨-೫೪ ರ ವರೆಗೆ ಗ್ರಾಮಸೇವಾ ಶಿಬಿರವನ್ನು ಕೈಕೊಂಡರು. ಪ್ರಾರ್ಥನೆ, ಗ್ರಾಮಸ್ವಚ್ಛತೆ ಗೊಬ್ಬರ ಕುಣಿ ತೋಡುವದು, ಅಗಸೆಯ ದುರಸ್ತಿ, ಸಾಂಘಿಕ ಆಟಗಳು, ಮೌನ ಕವಾಯಿ, ಮನರಂಜನೆಯ ಕಾರ್ಯಕ್ರಮಗಳು ಗ್ರಾಮಸ್ಥರ, ಶಾಲೆಯ ಬಾಲಕರ ಹಾಗೂ ಗುರುಗಳ ಸಹಾಯದಿಂದ ಜರುಗಿದವು.

ಕರ್ನಾಟಕ ವಿಶ್ವವಿದ್ಯಾಲಯ

ಹುಬ್ಬಳ್ಳಿಯ ಕ. ಗಂ. ೨ ನೆಯ ನಂಬರ ಶಾಲೆಯ ಬಾಲಕರ ಹಾಗೂ ಶಿಕ್ಷಕರ ಸ್ತುತ್ಯ ದೇಣಿಗೆ

ಹುಬ್ಬಳ್ಳಿಯ ಪ್ರಾಥಮಿಕ ಕನ್ನಡ ಗಂಡುಮಕ್ಕಳ ೨ ನೆಯ ನಂಬರ ಶಾಲೆಯ ೭೬ನೆಯ ವರ್ಧಂತಿ ಸಮಾರಂಭದ ಸಮಯದಲ್ಲಿ ಆ ಶಾಲೆಯ ಬಾಲಕರು ಪ್ರತಿಯೊಬ್ಬರು ೧ ಬಿಲ್ಲಿ ಯಂತೆ ಒಟ್ಟು ರೂ. ೧೭-೧೨-೦ ಹಾಗೂ ಶಿಕ್ಷಕರು ರೂ. ೨೫-೪-೦ ಹಣವನ್ನು ಮುಖ್ಯಾಧ್ಯಾಪಕರಾದ ಶ್ರೀ. ಗುಗ್ಗರಿಯವರ ಮುಖಾಂತರ ವಿಶ್ವವಿದ್ಯಾಲಯದ ನಿಧಿಗೆ ಸಮರ್ಪಿಸಿದ್ದು ವಿಶ್ವವಿದ್ಯಾಲಯವು ಅವರೆಲ್ಲರಿಗೆ ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವರ್ಧಂತಿ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀಮಾನ್ ಡಿ. ಸಿ. ಪಾವಟೆಯವರ ಹಸ್ತದಲ್ಲಿ ಈ ಕಾಣಿಕೆಯ ಹಮ್ಮಿಣಿಯನ್ನು ಅರ್ಪಿಸಲಾಯಿತು ಎಂದು ವಿಶ್ವವಿದ್ಯಾಲಯದ ರಜಿಸ್ಟ್ರಾರರು ತಿಳಿಸುತ್ತಾರೆ.

.ಕ. ಗಂ. ಸರಕಾರೀ ಟ್ರೇ. ಕಾ. ದ ಶಿಕ್ಷಕ-ವಿದ್ಯಾರ್ಥಿಗಳ

ಹಳ್ಳಿಯ ವಾಸ್ತವ್ಯದ ವರದಿ

ದಿನಾಂಕ ೫-೧೨-೧೯೫೪ ರಿಂದ ೧೩-೧೨-೧೯೫೪

ಹಾವನೂರ — ಇಲ್ಲಿ ೧ನೆಯ ವರ್ಷ ‘ಅ’ ವರ್ಗದ ಶಿಕ್ಷಕ—ವಿದ್ಯಾರ್ಥಿಗಳು ಇಬ್ಬರು ಶಿಕ್ಷಕರ ಮೇಲ್ವಿಚಾರಣೆಯಲ್ಲಿ ವಾಸಮಾಡಿದ್ದರು. ಉಳಿದುಕೊಳ್ಳಲಿಕ್ಕೆ ಹಾಗೂ ಅಡಿಗೆಗೆ ಕೊಟ್ಟ ಮನೆಗಳ ಸುತ್ತಲಿನ ಸ್ಥಳದ ಸ್ವಚ್ಛತೆ, ಕಸ ಕಡ್ಡಿ ಚೆಲ್ಲಲಿಕ್ಕೆ ಒಂದು ಕುಣಿ, ಮತ್ತು ಮೂತ್ರಖಾನೆಯನ್ನು ತೋಡುವದು, ಕ. ಗಂ. ಸಾಲೆಯ ಆವಾರದಲ್ಲಿದ್ದ ಹಾಳುಬಿದ್ದ ಬಾವಿಯನ್ನು ಸುಮಾರು ೧೫ ಫೂಟು ಅಗಿದು, ನೀರು ಕೆಡವಿದ್ದು ಅಲ್ಲಿಂದ ಹೊರಟ ಕೆಸರು-ಕಲ್ಲುಗಳಿಂದ ಸುಮಾರು ೭೦ ಫೂಟು ಉದ್ದ ೪ ಫೂಟು ಎತ್ತರ ೧½ ಫೂಟು ದಪ್ಪ ಗೋಡೆಯನ್ನು [illegible] ಸಾಲೆಯ ಹಿಂಬದಿಯ ಆವಾರದ ಸುತ್ತಲೂ ಕಟ್ಟಿ ಸಾಲೆಗೆ ಕೈತೋಟ ಮಾಡಿಕೊಳ್ಳಲಿಕ್ಕೆ ಅನುಕೂಲ ಮಾಡಿಕೊಟ್ಟದ್ದು ಇತ್ಯಾದಿ ಕೆಲಸಗಳನ್ನು ಮಾಡಿದರು. ಇದಲ್ಲದೆ ಹರಿಜನ ಕೇರಿಯ ಸಫಾಯಿ, ಸಾರ್ವಜನಿಕ ಸಭಾಸ್ಥಳದ ಸ್ವಚ್ಛತೆ ಮಾಡಿದರು. ಸುತ್ತಲಿನ ನೋಡತಕ್ಕ ಸ್ಥಳಗಳಿಗೆ ಪ್ರವಾಸ ಕೈಕೊಂಡರು. ವಿನೋದಾವಳಿ ಮಾಡಿದರು.

ಸಂಗೂರ — ಇಲ್ಲಿ ೧ ನೆಯ ವರ್ಷ ‘ಬ’ ವರ್ಗದವರು ವಸತಿಮಾಡಿದ್ದರು. ಇಲ್ಲಿಯೂ ಇಬ್ಬರು ಶಿಕ್ಷಕರು ಮೇಲ್ವಿಚಾರಕರಿದ್ದರು. ಶ್ರೀ ಕಲ್ಮೇಶ್ವರ ಮತ್ತು ಬಸವೇಶ್ವರ ದೇವಸ್ಥಾನಗಳ ರಿಪೇರಿಮಾಡಿದರು. ಹೊಳೆಗೆ ಪಾವಟಿಗೆಗಳನ್ನು ತಯಾರಿಸಿದರು. ೨ ಫರ್ಲಾಂಗ ದಾರಿಯನ್ನು ರಚಿಸಿದರು. ದೇವಿಹೊಸೂರದ ಪ್ರವಾಸ ಮಾಡಿದರು. ಅನೇಕ ಮನರಂಜನೆಯ ಕಾರ್ಯಕ್ರಮಗಳನ್ನು ಜರುಗಿಸಿದರು.

ದೇವಗಿರಿ — ಇಲ್ಲಿ ೧ನೆಯ ವರ್ಷ ‘ಕ’ ವರ್ಗದವರು ಇಬ್ಬರು ಅಧ್ಯಾಪಕರ ನೇತೃತ್ವದಲ್ಲಿ ವಾಸ ಮಾಡಿ ದೊಡ್ಡ ಹೊಂಡದಲ್ಲಿಯ ಕಸ ಕಡ್ಡಿ ತೆಗೆದದ್ದು, ಇಂಗು ಬಚ್ಚಲ ತಯಾರಿಸಿದ್ದು, ಒಡ್ಡರಗೇರಿ ಹರಿಜನಕೇರಿಗಳ ಸ್ವಚ್ಛತೆ, ಕನ್ಯಾಸಾಲೆಗೆ ಮೂತ್ರಗುಂಡಿ ತೆಗೆದದ್ದು, ಬಸವಣ್ಣದೇವರ ಗುಡಿಯ ಸುತ್ತಲೂ ಮಣ್ಣು ಹರವಿದ್ದು ಕ. ಗಂ. ಸಾಲೆಯ ಆವಾರದ ಗೋಡೆಯ ರಿಪೇರಿ ಇತ್ಯಾದಿ ಕೆಲಸಗಳನ್ನು ಮಾಡಿದರು. ದೇವಿಹೊಸೂರ ಒಕ್ಕಲತನದ ಫಾರ್ಮಿಗೆ ಪ್ರವಾಸ ಕೈಕೊಂಡರು. ದಿನಾಲು ಮಕ್ಕಳೊಡನೆ ಆಟನಡೆಯುತ್ತಿದ್ದವು. ವಿವಿಧ ವಿನೋದಾವಳಿಗಳು ಜರುಗುತ್ತಿದ್ದವು.

ಹೊಸರಿತ್ತಿ — ಇಲ್ಲಿ ೨ ನೆಯ ವರ್ಷದ ‘ಅ’ ವರ್ಗದವರು ಇಬ್ಬರು ಶಿಕ್ಷಕರ ಮಾರ್ಗದರ್ಶನದಲ್ಲಿ ವಾಸಮಾಡಿ ಗಾಂಧಿ ಆಶ್ರಮದ ಹಿಂದೆ ಬಚ್ಚಲು ಹಾಗು ಒಂದು ಗೊಬ್ಬರ ಕುಣಿ ತೋಡಿದರು. ಕ. ಗಂ. ಸಾಲೆಯ ಕಂಪೌಂಡ ಗೋಡೆ ಕಟ್ಟಿದರು. ಕೈತೋಟದ ಜಾಗೆಯಲ್ಲಿಯ ಕಸ ತೆಗೆದರು; ಹೊಸ ಶಾಲಾ ಕಟ್ಟಡದಲ್ಲಿಯ ೪ ಮಣ್ಣಿನ ಗುಂಪಿಗಳನ್ನು ಕಿತ್ತು ಒಂದೆಡೆ ಕೂಡಿಸಿದರು ಸಾರ್ವಜನಿಕರ ಸಲುವಾಗಿ ಹೊಸ ಮೂತ್ರಿ ರಚಿಸಿದರು. ಕನ್ಯಾ ಸಾಲೆಯ ಮೂತ್ರಿಗೋಡೆಯನ್ನು ಕಟ್ಟಿದರು; ಗೊಬ್ಬರ ಕುಣಿ ತೋಡಿ ತುಂಬುವ ಕ್ರಮ ತೋರಿಸಿದರು; ಗಳಗನಾಥಕ್ಕೆ ಪ್ರವಾಸ ಕೈ ಕೊಂಡರು. ‘ಮನಸ್ಸಿಲ್ಲದ ಮದುವೆ’ ಎಂಬ ಏಕಾಂಕ ನಾಟಕ ಆಡಿದರು.

ಗುತ್ತಲ— ಇಲ್ಲಿ ೨ ನೆಯ ವರ್ಷ ‘ಬ’ ವರ್ಗದವರು ಬಿಡಾರ ಮಾಡಿದ್ದರು; ಇಬ್ಬರು ಅಧ್ಯಾಪಕರು ಮೇಲ್ವಿಚಾರಕರಿದ್ದರು. ಎಲ್ಲ ದೇವಸ್ಥಾನಗಳ ಹಾಗೂ ಮಸೀದೆಗಳ ಸ್ವಚ್ಛತೆಯ ಕಾರ್ಯಮಾಡಿದರು. ಹರಿಜನ ಕೇರಿಯ ಸಫಾಯಿ ಕೈಕೊಂಡರು. ಕ. ಗಂ. ಸಾಲೆಯ ಬಿದ್ದ ೨೫ ಫೂಟು ಉದ್ದ ೪ ಫೂಟು ಎತ್ತರ ಗೋಡೆ ಕಟ್ಟಿದರು. ಕನ್ಯಾಸಾಲೆಯ ಎಡಬಲ ಮಗ್ಗಲಿಗೆ ದಂಟಿನ ಗೋಡೆ ಕಟ್ಟಿ ಅಲ್ಲಿ ನೂಲಲಿಕ್ಕೆ ಬರುವಂತೆ ಮಾಡಿದರು. ವ್ಯಾಯಾಮ ಪ್ರದರ್ಶನದ ಕಟ್ಟೆಯನ್ನು ಕಟ್ಟಿದರು. ಒಡ್ಡರ ಕೇರಿಯ ಸ್ವಚ್ಛತೆಯ ಕೆಲಸವಾಯಿತು. ಕುರಿ ಸಂಗೋಪನಾ ಕೇಂದ್ರಕ್ಕೆ ಭೆಟ್ಟಿಯನ್ನಿತ್ತರು. ಚೌಡದಾನಪುರ, ಮೈಲಾರ, ಕುರವತ್ತಿ, ಹೊಳಲು, ಹರಳಹಳ್ಳಿ, ಗಳಲ್ಲಿಯ ದೇವಸ್ಥಾನಗಳನ್ನು ಸಂದರ್ಶಿಸಿದರು. ಗಳಗನಾಥಕ್ಕೂ ಪ್ರವಾಸಮಾಡಿದರು. ‘ನಾವ್ ಒಂದು’ ಎಂಬ ಏಕಾಂಕ ನಾಟಕವನ್ನು ಪ್ರದರ್ಶಿಸಿದರು.

ಮೇಲ್ಕಾಣಿಸಿದ ಎಲ್ಲ ಹಳ್ಳಿಗಳ ಜನರು, ಅಲ್ಲಿಯ ಶಿಕ್ಷಕ-ಶಿಕ್ಷಿಕೆಯರು ಹಾಗೂ ಸಾಲೆಯ ಮಕ್ಕಳು ಶಿಬಿರದವರಿಗೆ ಅವರ ಕಾರ್ಯಗಳಲ್ಲಿ ಸಹಾಯ ಸಹಕಾರ ನೀಡಿದರು.

ಆಯ್. ಎಸ್. ಬಿದರಿ

ಅಲ್ಪಾವಧಿ ನೇಯಿಗೆ ತರಬೇತಿ ವರ್ಗ, ಧಾರವಾಡ

ಪ್ರಾಥಮಿಕ ಶಿಕ್ಷಕರಿಗೆ ನೇಯಿಗೆ ತರಬೇತಿ ಕೊಡುವ ಉದ್ದೇಶದಿಂದ ಧಾರವಾಡ ಸರಕಾರಿ ಗಂ. ಮ. ಟ್ರೇ ಕಾಲೇಜದಲ್ಲಿ ೬ ತಿಂಗಳ ಅಲ್ಪಾವಧಿ ತರಬೇತಿ ವರ್ಗವು ದಿ. ೧೫-೫-೫೪ ರಂದು ಪ್ರಾರಂಭವಾಗಿ ದಿ. ೧೩-೧೧-೫೪ಕ್ಕೆ ಮುಕ್ತಾಯವಾಯಿತು. ಬೇರೆ ಬೇರೆ ಜಿಲ್ಹೆಗಳ ೩೪ ಜನ ಶಿಕ್ಷಕರೂ, ೬ ಜನ ಶಿಕ್ಷಕಿಯರೂ ಹೀಗೆ ೪೦ ಜನ ಶಿಕ್ಷಕ ಶಿಕ್ಷಕಿಯರು ಶಿಕ್ಷಣಪಡೆದರು. ತರಬೇತಿ ವರ್ಗದ ದೈನಂದಿನ ಕಾರ್ಯಕ್ರಮವು ಪ್ರಾತಃಕಾಲದ ೫-೩೦ ಗಂಟೆಯಿಂದ ಪ್ರಾರಂಭವಾಗಿ ರಾತ್ರಿ ೧೦ ಘಂಟೆಗೆ ಮುಕ್ತಾಯವಾಗುತ್ತಿತ್ತು.

ತರಬೇತಿಯ ಅವಧಿಯಲ್ಲಿ ೧೯೫ ಪೌಂಡ ಹತ್ತಿಯನ್ನು ಉಪಯೋಗಿಸಿ ೫೭ ಪೌಂ. ನೂಲನ್ನು ತೆಗೆಯಲಾಗಿದೆಯಲ್ಲದೆ ೨೬ ಪೌಂ. ನೂಲನ್ನು ಕೊಂಡು ನೇಯ್ಗೆ ಕಾರ್ಯಕ್ಕಾಗಿ ಉಪಯೋಗಿಸಲಾಯಿತು. ನೇಯ್ಗೆಯಲ್ಲಿ ವಿವಿಧತೆಗೆ ಸಾಕಷ್ಟು ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ನವಾರಪಟ್ಟಿ, ಶರ್ಟಿಂಗ, ಡಿಝಾಯಿನ್ ಶರ್ಟಿಂಗ, ಕೋಟಿಂಗ, ಆಸನ ಟಾವೆಲ್ಲ ಮುಂತಾದ ಬಗೆಬಗೆಯ ಬಟ್ಟೆಗಳನ್ನು ತಯಾರಿಸಲಾಯಿತು. ನೇಯ್ದ ಒಟ್ಟು ಬಟ್ಟೆಯ ಅಳತೆಯು ೮೩೦ ವಾರ ಆಗಿದ್ದು ಪ್ರತಿಯೊಬ್ಬ ಸದಸ್ಯನು ತನ್ನ ಪಾಲಿನ ೨೦ ವಾರ ಅರಿವೆಗಿಂತಲೂ ಹೆಚ್ಚಾಗಿ ನೇಯ್ದಿರುವನು. ನೂಲಿಗೆ ಬಣ್ಣ ಹಾಕುವ ವಿಧಾನವು ಪ್ರತ್ಯಕ್ಷ ಪ್ರಯೋಗದಿಂದ ಕಲಿಸಲಾಯಿತು. ಒಬ್ಬ ವಿದ್ಯಾರ್ಥಿಯ ಸರಾಸರಿ ಲಾಭವು ರೂ. ೨೩-೦-೬ ಆದೆ.

ನೂಲುವ ಹಾಗೂ ನೇಗೆಯ ತಾತ್ವಿಕ ಶಿಕ್ಷಣವು ಪೂರ್ಣವಾಗಿ ಕೊಡಲ್ಪಟ್ಟಿತಲ್ಲದೆ ಸಾಧನಗಳ ಚಿಕ್ಕ-ಪುಟ್ಟ ರಿಪೇರಿ ಮಾಡುವ ಕೆಲಸವೂ ಕಲಿಸಲ್ಪಟ್ಟಿತು. ಬೇಸಿಕ್ ಶಿಕ್ಷಣದ ಇತಿಹಾಸ, ಅದರ ಬೆಳವಣಿಗೆ ಉಳಿದ ಶಿಕ್ಷಣ ಪದ್ಧತಿಗಳಿಗಿಂತ ಅದಕ್ಕಿರುವ ವೈಶಿಷ್ಟ್ಯ, ಸಂಬಂಧೀಕರಣ ತತ್ವ ಮೊದಲಾದ ಶೈಕ್ಷಣಿಕ-ಜ್ಞಾನವೂ ಕೊಡಲ್ಪಟ್ಟಿತು. ೬ ಸಮವಾಯ ಪಾಠಗಳ ನಿರೀಕ್ಷಣೆ ಮತ್ತು ವಿಮರ್ಶೆಗಳೂ ಸಹ ಜರುಗಿದವು.

ಈ ಅವಧಿಯಲ್ಲಿ ೭ ಚಿಕ್ಕ ಪ್ರವಾಸಗಳು ಜರುಗಿದವಲ್ಲದೆ ಶ್ರೇಷ್ಠಶಿಕ್ಷಣ ತಜ್ಞರೂ ಹಿರಿಯ ಅಧಿಕಾರಿಗಳೂ ಮತ್ತು ಸಮಾಜ ಸೇವಾಧುರೀಣರನ್ನೊಳಗೊಂಡ ೨೦ ಜನರ ಉಪನ್ಯಾಸಗಳು ನೆರವೇರಿದವು. ವರ್ಗವನ್ನು ರಾಜ್ಯದ ಹಿರಿಅಧಿಕಾರಿಗಳೂ, ಮಾನ್ಯ ಉಪಮಂತ್ರಿ ಶ್ರೀಮತಿ ಇಂದುಮತಿ ಶೇಟ ಅವರೂ ಸಂದರ್ಶಿಸಿದರು. ಅಲ್ಲದೆ ಮೆ॥ ಇನಸ್ಪೆಕ್ಟರ ಸಾಹೇಬ, ಧಾರವಾಡ ಅವರೂ ಸಹ ಮೇಲಿಂದ ಮೇಲೆ ಭೆಟ್ಟಿಯನ್ನಿತ್ತರು.

ಚರಖಾ ಜಯಂತಿಯ ಅಂಗವಾಗಿ ವಸ್ತ್ರಯಜ್ಞವು ಸಾಂಗವಾಯಿತು. ೧೦ ವಾರ ಅರಿವೆಯನ್ನು ತಯಾರಿಸಿ ೨೫ ಟೊಪ್ಪಿಗೆಗಳನ್ನು ಹೊಲಿಸಿ ಬಡ ಹರಿಜನ ವಿದ್ಯಾರ್ಥಿಗಳಿಗೆ ಮಾನ್ಯ ಮುಖ್ಯ ಮಂತ್ರಿ ಮೊರಾರಜಿಯವರ ಅಮೃತ ಹಸ್ತದಿಂದ ಕೊಡಿಸಲಾಯಿತು. ಇದಕ್ಕೆ ಬೇಕಾದ ೧೩ ಪೌಂ. ಹತ್ತಿಯನ್ನು ವಿದ್ಯಾರ್ಥಿಗಳೇ ಕೊಂಡಿದ್ದರಲ್ಲದೆ ಎಲ್ಲ ಕೆಲಸವನ್ನು ತಾವೇ ಸ್ವಸಂತೋಷದಿಂದ ನಿರ್ವಹಿಸಿದರು. ಬಿಹಾರ ಪರಿಹಾರ ನಿಧಿಗೆ ವರ್ಗದ ವತಿಯಿಂದ ಮುಕ್ತಹಸ್ತದಿಂದ ಸಹಾಯಸಲ್ಲಿಸಲಾಯಿತು.

ಪ್ರಜಾಪ್ರಭುತ್ವದ ನಿಯಮಕ್ಕನುಸರಿಸಿ ವರ್ಗದ ಸಾಮೂಹಿಕ ಕಾರ್ಯವು ವಿದ್ಯಾರ್ಥಿವಿದ್ಯಾರ್ಥಿನಿಯರಿಂದ ಆರಿಸಲ್ಪಟ್ಟ ಮಂತ್ರಿಮಂಡಳದಿಂದ ನಡೆಯುತ್ತಿತ್ತು. ಈ ಅವಧಿಯಲ್ಲಿ ಇಂಥ ೭ ಮಂತ್ರಿಮಂಡಲಗಳು ಕಾರ್ಯ ಮಾಡಿದವು. ಸಾಮೂಹಿಕ ಕಾರ್ಯನಿರ್ವಹಣೆಗಾಗಿ ಸೇವಾ ಗುಂಪುಗಳನ್ನು ಮಾಡಲಾಗಿತ್ತು. ಪ್ರತಿಯೊಂದು ಗುಂಪಿನ ಕಾರ್ಯವು ವಾರಕ್ಕೊಮ್ಮೆ ಬದಲಾಗುತ್ತಿತ್ತು. ಸಫಾಯಿ, ನೀರು ತುಂಬುವದು ಪ್ರಸಾದ ಬಡಿಸುವದು, ಪೇಟೆಯ ಕಾರ್ಯ ಇತ್ಯಾದಿ ಕಾರ್ಯಕ್ರಮಗಳು ನಿರ್ವಂಚನೆಯಿಂದ ಜರುಗಿದವು.

ಪ್ರಾಥಮಿಕ ಶಿಕ್ಷಣ

ಊಟದ ವಿಷಯವಾಗಿ ಪ್ರತ್ಯೇಕ ಬೋರ್ಡಿಂಗಿನ ವ್ಯವಸ್ಥೆಯನ್ನು ಮಾಡಲಾಗಿತ್ತು. ಅದರ ಆಡಳಿತೆಯು ಸದಸ್ಯರಿಂದಲೇ ನಡೆಯಿಸಲ್ಪಡುತ್ತಿತ್ತು. ಒಂದು ತಿಂಗಳಿನ ಒಬ್ಬ ಸದಸ್ಯನ ಸರಾಸರಿ ಖರ್ಚು [illegible] ರೂ. ಬಂದಿದೆ.

೧. ಧಾರವಾಡ ಭಾಗದ ಸ್ಕೌಟ್ಸ ಆರ್ಗನಾಯಝರ ಶ್ರೀಯುತ ಶಿಗ್ಗಾಂವ ೨. ಟ್ರೇ. ಕಾ. ದ. ಪ್ರಾಧ್ಯಾಪಕ ಶ್ರೀಯುತ ಎಸ್. ಬಿ. ಪಾಟೀಲ ೩. ಶ್ರೀ ಪಾಸಣ್ಣವರ ೪. ಶ್ರೀ. ಮಾಳಗಿ ಈ ನಾಲ್ವರು ವರ್ಗದ ಅಧ್ಯಾಪಕರಾಗಿದ್ದರು ಮತ್ತು ಇದರ ಮೇಲ್ವಿಚಾರಣೆಯು ಪ್ರಿನ್ಸಿಪಾಲ ಸರಕಾರಿ ಗ. ಮ. ಟ್ರೇ. ಕಾ. ಧಾರವಾಡ ಇವರ ಕಡೆಗೆ ಇತ್ತು.

ತರಬೇತಿ ವರ್ಗದ ಪೂರ್ಣಾವಧಿಯು ಕೊನೆಗೊಂಡ ನಂತರ ವರ್ಗದ ಮುಕ್ತಾಯ ಸಮಾರಂಭವು, ಧಾರವಾಡ ಜಿಲ್ಹೆಯ ಶಿಕ್ಷಣಾಧಿಕಾರಿಗಳೂ, ಜೀವನಶಿಕ್ಷಣ ತಜ್ಞರೂ ಆದ ಮಾನ್ಯ ತೇರಗಾಂವಕರ ಅವರಿಂದ ಜರುಗಿ ವಿದ್ಯಾರ್ಥಿಗಳಿಗೆಪ್ರಶಸ್ತಿ ಪತ್ರಗಳು ಕೊಡಲ್ಪಟ್ಟವು.

ಎಸ್. ಬಿ. ಪಾಟೀಲ

—ಹಾಯಸ್ಕೂಲ ಮತ್ತು ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆ ಬೆಳಗಾಂವ—

ಬೆಳಗಾಂವ ಜಿಲ್ಹೆಯಲ್ಲಿ ೧೯೫೫ ರಲ್ಲಿ ನಡೆಯುವ ಹಾಯಸ್ಕೂಲ ಮತ್ತು ಮಿಡಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಗಳ ಬಗ್ಗೆ ಈ ಆಫೀಸಿನ ದಿನಾಂಕ ೩-೧೨-೧೯೫೪ರ ಎಸ್-೩ (ಎಫ್. ಜಿ.) ೬೭೯೧-೬೪೯೦ ಕ್ಕೆ ತಿದ್ದುಪಡಿ

೧. ೬ (ಕ) ವಯೋಮಿತಿ :— “ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಸಂಬಧ ೧-೩-೧೯೫೫ಕ್ಕೆ ....ವಯಸ್ಸು ಇದರ ಬದಲು ೧-೬-೧೯೫೫ ಕ್ಕೆ ಅರ್ಜಿದಾರನ ವಯಸ್ಸು ಕೆಳಗೆಕೊಟ್ಟ ವಯಸ್ಸನ್ನು ಮಿರಕೂಡದೆಂದು” ದಯವಿಟ್ಟು ಓದಿರಿ! ಮತ್ತು “ಹಿಂದುಳಿದ ವರ್ಗದ ಹೆಣ್ಣು—ಮಕ್ಕಳ ಸಂಭಂದ ಶಿಕ್ಷಣ ಖಾತೆಯ ಡೈರೆಕ್ಟರ, ಪುಣೆ ಇವರ ಅನುಮತಿಯ ಪ್ರಕಾರ ವಯೋಮಿತಿ-ಯನ್ನು ಒಂದು ವರ್ಷದವರೆಗೆ ಸಡಿಲಿಸಬಹುದು.” ಎಂದು ಕೂಡಿಸಿರಿ.

“ಈ ವಿಷಯವು ಸರಕಾರದವರ ವಿಚಾರಣೆಯಲ್ಲಿರುವದರಿಂದ ೧-೬-೧೯೫೫ ಕ್ಕೆ ಕೆಳಗೆ ಕೊಟ್ಟ ವಯೋಮಿತಿಯನ್ನು ಮೀರಿದ ಹಿಂದುಳಿದ ವರ್ಗದಲ್ಲಿದ ಅರ್ಜಿದಾರರು ಸಹ ತಮ್ಮ ಅರ್ಜಿ-ಗಳನ್ನು ಕಳಿಸಬಹುದು.”

೨. ೭ ಇದನ್ನು ೭ (ಅ) ಎಂದು ಓದಿರಿ! ಮತ್ತು “ಈ ನಿಯಮವು ಸರಕಾರೀ ಮುಕ್ತದ್ವಾರವಿರುವ ಯೋಗ್ಯತಾ ಸ್ಕಾಲರಶಿಪ್ಪುಗಳಿಗೆ ಮಾತ್ರ ಅನ್ವಯಿಸುತ್ತದೆ.” ಎಂದು ಕೂಡಿಸಿರಿ.

೩. ೭ (ಬ) ವನ್ನು ಕೆಳಗೆ ಕಾಣಿಸಿದಂತೆ ಸೇರಿಸಿರಿ :—

“(ಅ) ಒಂದು ವರ್ಷಕ್ಕೆ ೨೦೦/-ರೂಪಾಯಿ ಇಲ್ಲವೆ ಅದಕ್ಕಿಂತ ಹೆಚ್ಚು ಉತ್ಪನ್ನದ ಮೇಲಿನ ಕರವನ್ನಾಗಲಿ ಇಲ್ಲವೆ ಹಪ್ತೆಯನ್ನಾಗಲಿ ಕೊಡುತ್ತಿರುವ ಅಥವಾ ಉತ್ಪನ್ನದ ಮೇಲಿನಕರ ಮತ್ತು ಭೂಮಿಯ ಹಪ್ತೆ ಇವೆರಡೂ ಕೂಡಿ ೨೦೦/- ರೂಪಾಯಿ ಇಲ್ಲವೆ ಹೆಚ್ಚಿಗೆ ಆಗುತ್ತಿರುವ ತಂದೆ ತಾಯಿಗಳ ಇಲ್ಲವೆ ಪಾಲಕರ ಹಿಂದುಳಿದ ವರ್ಗದ ವಿದ್ಯಾರ್ಥಿಯು ಹಿಂದುಳಿದ ವರ್ಗದ ವಿಶಿಷ್ಟ ಸ್ಕಾಲರಶಿಪ್ಪುಗಳಿಗೆ ಪಾತ್ರನಾಗುವದಿಲ್ಲ.”

ನಂ. ಎಸ್. ೩. (ಎಫ್. ಜಿ.) ೭೪೬೩ ೭೫೪೦
ದಿನಾಂಕ. ೧೩-೧೨-೧೯೫೪

ಸಹಿ - ಎಸ್. ಡಿ. ಥಿಟೆ
ಎಜ್ಯುಕೇಶನಲ್ ಇನಸ್ಪೆಕ್ಟರ,
ಬೆಳಗಾಂವ, ಅವರ ಪರವಾಗಿ

—ರಾಷ್ಟ್ರೀಯ ಕ್ರೀಡಾ ಮಹೋತ್ಸವ ಕಾರವಾರ—

ಕಾರವಾರ ಜಿಲ್ಹೆಯ ರಾಷ್ಟ್ರೀಯ ಕ್ರೀಡಾ ಮಹೋತ್ಸವವು ದಿನಾಂಕ ೧೦-೧೨-೧೯೫೪ ರಂದು ಆ ಜಿಲ್ಹೆಯ ಕಲೆಕ್ಟರರಾದ ಶ್ರೀ ಎಸ್. ವಿ. ಕುಲಕರ್ಣಿ ಆಯ್. ಎ. ಎಸ್. ಅವರಿಂದ ಉದ್ಘಾಟಿಸಲ್ಪಟ್ಟಿತು. ನಿರ್ಣಾಯಕ ಆಟಗಳು ಮತ್ತು ಬಹುಮಾನ ವಿತರಣ ಸಮಾರಂಭವು ದಿನಾಂಕ ೧೨-೧೨-೧೯೫೪ ರಂದು ಶ್ರೀಮತಿ ಶಾಂತಾಬಾಯಿ ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರವಾರ ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ ಶ್ರೀ ಆರ್. ಆರ್. ಕುಪ್ಪಸದ ಅವರು ಸ್ವಾಗತ ಸಮಿತಿಯ ಚೇರಮನ್‌ರಾಗಿದ್ದರು. ಅವರು ಪೋಲೀಸ ಹೆಡ್‌ಕ್ವಾರ್ಟರ ಮೈದಾನದಲ್ಲಿ ನೆರೆದ ಮಹನೀಯರನ್ನೂ, ಮಹಿಳೆಯರನ್ನೂ ಸ್ವಾಗತಿಸಿದರು. ೧೯೫೪ ನೆಯ ಜನೆವರಿ ೨೬ಕ್ಕೆ ಜಿಲ್ಹಾತಳಹದಿಯ ಮೇಲೆ ಕೊನೆಯ ಪಂದ್ಯಾಟಗಳನ್ನು ಜರುಗಿಸಲಿಕ್ಕೆ ಆಗದ್ದಕ್ಕೆ ಸಬಲ ಕಾರಣಗಳನ್ನು ಕೊಟ್ಟರು. ಪಂದ್ಯಾಟಗಳನ್ನು ನಡೆಸುವದಕ್ಕಾಗಿ ಜಿಲ್ಹಾ, ತಾಲೂಕಾ ಹಾಗೂ ಗ್ರುಪ್ ಕಮಿಟಿಗಳನ್ನು ನೇಮಿಸಲಾಗಿತ್ತೆಂದೂ ಹೇಳಿದರು. ತಾಲೂಕಾ ಮಟ್ಟದಲ್ಲಿ ೧, ೨, ೩ ನಂಬರು ಪಡೆದ ಸ್ಪರ್ಧೆಗಾರರು ಜಿಲ್ಹಾಮಟ್ಟದ ಆಟಗಳಲ್ಲಿ ಭಾಗವಹಿಸಲು ಯೋಗ್ಯರಾಗುವರು. ಇಡೀ ಜಿಲ್ಹೆಯಿಂದ ಒಟ್ಟು ೨೦೪ ಬಾಲಕರೂ ೧೨೦ ಬಾಲಿಕೆಯರೂ ಒಟ್ಟು ೩೨೪ ಸ್ಪರ್ಧೆಗಾರರು ಜಿಲ್ಹಾಮಟ್ಟದ ಆಟಗಳಲ್ಲಿ ಭಾಗವಹಿಸಿದ್ದರು. ಹೊರಗಿನಿಂದ ಬಂದ ಸ್ಪರ್ಧೆಗಾರರಿಗೆ ಸ್ಥಳಿಕ ಸಾಲೆಗಳಲ್ಲಿ ಉಳಿದುಕೊಳ್ಳುವ ಹಾಗೂ ಉಚಿತವಾಗಿ ಊಟ ಹಾಗೂ ಫಲಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಪಂದ್ಯಾಟಗಳಲ್ಲಿ ಸಾಲೆಯ ಮಕ್ಕಳನ್ನುಳಿದು ಹೊರಗಿನವರು ಕೇವಲ ೧೧ ಜನರು ಭಾಗವಹಿಸಿದ್ದರು. ವಿವಿಧ ಪಂದ್ಯಾಟಗಳಲ್ಲಿ ವೀರಾಗ್ರಣಿಗಳೆಂದು ಆರಲ್ಪಟ್ಟ ಸ್ಪರ್ಧೆಗಾರರ ಹೆಸರುಗಳು ಕೆಳಗೆ ಅವೆ.—

(೧) ಹಿರಿಯ ಬಾಲಕರು...........	(೧) ಕುಮಾರ ವಿ. ಪಿ. ಪ್ರಭು	ಭಟಕಳ
(೨) ಹಿರಿಯ ಬಾಲಿಕೆಯರು....	(೨) ಕುಮಾರಿ ಮಿತ್ರಾ ಪಿ. ನಾಯಿಕ	ಕಾರವಾರ
(೩) ಕಿರಿಯ ಬಾಲಕರು...........	(೩) ಕುಮಾರ ಜಿ. ಆರ್. ನಾಯಿಕ	ಕಾರವಾರ
	,, ಜಿ. ವಿ. ಪವಾರ	,,
	,, ಇ. ಎ. ಹೆಗಡೆ	ಕುಮಟಾ
(೪) ಕಿರಿಯ ಬಾಲಿಕೆಯರು.....	(೪) ಕುಮಾರಿ ಸೀತಾ ಹನುಮಣ್ಣಾ ನಾಯಿಕ	ಕುಮಟಾ

ವಿಜಯಿಗಳಾದ ಗುಂಪುಗಳು

(೧) ಹಿರಿಯ ಬಾಲಕರು

ಹುತುತು........ ಅಂಕೋಲಾ

ವ್ಹಾಲಿಬಾಲ.... ಅಂಕೋಲಾ

(೩) ಕಿರಿಯ ಬಾಲಿಕೆಯರು

ಖೋಖೋ....... ಕಾರವಾರ

ಲಂಗಡಿ............ ಕಾರವಾರ

(೨) ಕಿರಿಯ ಬಾಲಕರು

ಖೋಖೋ........ ಕಾರವಾರ

ಹುತುತು........ ಅಂಕೋಲಾ

ವ್ಹಾಲಿಬಾಲ........... ಹೊನ್ನಾವರ

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ, ೧೯೫೫ (ಧಾರವಾಡ ಜಿಲ್ಲೆ)

ಸುಧಾರಿಸಿದ ಅಭ್ಯಾಸಪತ್ರಿಕೆಯನ್ವಯ ಪ್ರಾ. ಶಾ. ಪ್ರ. ಪರೀಕ್ಷೆಯು ಸೋಮವಾರ ದಿನಾಂಕ ೧೧—೪—೧೯೫೫ರಿಂದ ಶುಕ್ರವಾರ ದಿನಾಂಕ ೧೫—೪—೧೯೫೫ರ ವರೆಗೆ ಧಾರವಾಡ ಜಿಲ್ಲೆಯಲ್ಲಿ ಕೆಳಗೆ ತೋರಿಸಲಾದ ಕೇಂದ್ರಗಳಲ್ಲಿ ಜರಗುವದು.

ಅ. ನಂ.	ಕೇಂದ್ರಗಳು	ಪರೀಕ್ಷಾ-ಕಮಿಟಿಯ ಅಧ್ಯಕ್ಷರು
೧.	ಧಾರವಾಡ	ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.
೨.	ಹುಬ್ಬಳ್ಳಿ	ಹೆಡ್ ಮಿಸ್ಟ್ರೆಸ್, ಎ. ಕೆ. ಗರ್ಲ್ಸ್ ಹಾಯ-ಸ್ಕೂಲ, ಧಾರವಾಡ
೩.	ಗದಗ ಮುಖ್ಯ ಕೇಂದ್ರ ಶಿರಹಟ್ಟಿ ಉಪ ಕೇಂದ್ರ ರೋಣ...... ,, ನರಗುಂದ...... ,,	.... ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ
೪.	ಹಾವೇರಿ ಮುಖ್ಯಕೇಂದ್ರ ಸವಣೂರ ಉಪಕೇಂದ್ರ ರಾಣೇಬೆನ್ನೂರ ,,	.... ಪ್ರಿನ್ಸಿಪಾಲ, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ
೫.	ಬೇಸಿಕ್ ಪ್ರಾ. ಶಾ. ಪ್ರ. ಪರೀಕ್ಷೆ, ಧಾರವಾಡ ಮುಖ್ಯ ಕೇಂದ್ರ ಬೇಸಿಕ್ ಪ್ರಾ. ಶಾ. ಪ್ರ. ಪರೀಕ್ಷೆ, ಹಾವೇರಿ ಉಪಕೇಂದ್ರ	ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ

ಈ ಪರೀಕ್ಷೆಗೆ ಕೂಡ್ರಲಿಕ್ಕೆ ಅರ್ಹತೆಯನ್ನು ಪಡೆಯಲು ಉಮೇದವಾರರು ಕೆಳಗಿನ ಕರಾರುಗಳನ್ನು ಪೂರೈಸಬೇಕಾಗುವದು:—

೧) ಉಮೇದವಾರರು ಪರೀಕ್ಷೆಗೆ ಕೂಡ್ರಬಯಸುವ ಕೇಂದ್ರವಿರುವ ಜಿಲ್ಲೆಯಲ್ಲಿ ೬ ತಿಂಗಳ ವಾಸವಾಗಿರಲೇಬೇಕು. ಹೆಣ್ಣುಮಕ್ಕಳಿಗೆ ಇದು ಅನ್ವಯಿಸುವದಿಲ್ಲ.

೨) ಉಮೇದವಾರರು ಮನ್ನಣೆ ಪಡೆದ ಪ್ರಾಥಮಿಕ ಇಲ್ಲವೆ ಮಾಧ್ಯಮಿಕ ಶಾಲೆಯ ೭ನೆಯ ಇಯತ್ತೆಯಲ್ಲಿ ೧೨೦ ದಿನಗಳ ಹಾಜರಿ ತುಂಬಿರಲಿಕ್ಕೇ ಬೇಕು.

ಸೂಚನೆ:— ವಿಶೇಷ ಸಂದರ್ಭಗಳಲ್ಲಿ ೧-೪-೫೫ರಂದು ೨೦ ವರ್ಷ ಮೀರಬಹುದಾದ ಇಲ್ಲವೆ ಈಗಾಗಲೇ ಮೀರಿದ ಗಂಡುಮಕ್ಕಳು ಹಾಗು ೧೬ ವರ್ಷ ಮೀರಬಹುದಾದ ಅಥವಾ ೧೬ ವರ್ಷ ಮೀರಿದ ಹೆಣ್ಣುಮಕ್ಕಳು ಉಮೇದವಾರರು ಮಾ। ಎಜ್ಯುಕೇಶನಲ್ ಇನಸ್ಪೆಕ್ಟರರ ಪರವಾನಿಗೆ ಪಡೆದುಕೊಂಡಲ್ಲಿ ೧೨೦ ದಿನಗಳ ಹಾಜರಿ ತುಂಬುವ ಅವಶ್ಯಕತೆ ಇಲ್ಲ.

೩. ಹಳೆಯ ಇಲ್ಲವೆ ಹೊಸ ಅಭ್ಯಾಸ-ಪತ್ರಿಕೆಯ ಪ್ರಕಾರ ಈ ಮೊದಲೇ ಜರುಗಿದ ಪ್ರಾ. ಶಾ. ಪ್ರ. ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಉಮೇದವಾರರು ಯಾವದೇ ಶಾಲೆಯಲ್ಲಿ ೧೨೦ ದಿನಗಳ ಹಾಜರಿ ತುಂಬುವ ಅವಶ್ಯಕತೆ ಇಲ್ಲ.

೪. ಮನ್ನಣೆ ಪಡೆದ ಮಾಧ್ಯಮಿಕ ಶಾಲೆಯಲ್ಲಿ ೮ ನೆಯ ಇಲ್ಲವೆ ಮೇಲಿನ ವರ್ಗಗಳಲ್ಲಿ ಪರೀಕ್ಷೆಗೆ ಕೂಡ್ರಬಯಸುವ ವರ್ಷದಲ್ಲಿ ಅಭ್ಯಾಸ ಮಾಡುತ್ತಿದ್ದ ಅಥವಾ ೮ ನೆಯ ಇಲ್ಲವೆ ಮೇಲಿನ ವರ್ಗಗಳಿಂದ ಈ ಮೊದಲೇ ಶಾಲೆಯನ್ನು ಬಿಟ್ಟ ಉಮೇದವಾರರಿಗೆ, ಬೇರೆ ಯಾವದೇ ಕಾರಣಗಳಿಂದ ಅನರ್ಹರಿರದಿದ್ದರೆ, ಪರೀಕ್ಷೆಗೆ ಕೂಡ್ರಲು ಬರುವದು. ಇಂಥ ಉಮೇದವಾರರು ತಾವು ಅಭ್ಯಸಿಸಿದ ಮಾಧ್ಯಮಿಕ ಶಾಲೆಯ ಮುಖ್ಯಾಧ್ಯಾಪಕರ ಪ್ರಮಾಣಪತ್ರವನ್ನು (ಸರ್ಟಿಫಿಕೇಟವನ್ನು) ಪರೀಕ್ಷೆಯ ಪ್ರವೇಶದ ಅರ್ಜಿಯ ಜೊತೆಗೆ ಹಚ್ಚತಕ್ಕದ್ದು.

ಬಹುಮಾನ ವಿತರಣ ಸಮಾರಂಭ

೮ ನೆಯ ಹಾಗು ಮೇಲಿನ ವರ್ಗಗಳಿಂದ ಪರೀಕ್ಷೆಗೆ ಕೂಡ್ರುವ ಉಮೇದವಾರರಿಗೆ ೧೫೧ ದಿನಗಳ ಹಾಜರಿಯ ಕರಾರು ಅನ್ವಯಿಸುವದಿಲ್ಲ.

ಪ್ರವೇಶದ ಅರ್ಜಿಗಳನ್ನು ಸಂಬಂಧಪಟ್ಟ ಕೇಂದ್ರಗಳ ಅಧ್ಯಕ್ಷರಿಂದ ಪ್ರತ್ಯಕ್ಷವಾಗಿ [illegible] ಮುಖಾಂತರ ದೊರಕಿಸಬಹುದು.

ಪರೀಕ್ಷೆಯ ಪ್ರವೇಶದ ಬಗ್ಗೆ ಮಾಡಿಕೊಳ್ಳುವ ಅರ್ಜಿಗಳು ಹಾಗು ಅವಶ್ಯಕ ಪ್ರವೇಶಧನ ಸಂಬಂಧಪಟ್ಟ ಪರೀಕ್ಷಾ ಕಮಿಟಿಯ ಅಧ್ಯಕ್ಷರಿಗೆ ದಿನಾಂಕ ೧೦-೨-೧೯೫೬ರಂದು ಇಲ್ಲವೆ ಮುಂಚಿತವಾಗಿ ತಲುಪಲೇಬೇಕು. ಯಾವದೇ ಕಾರಣದಿಂದ ನಿರ್ದಿಷ್ಟಪಡಿಸಲಾದ ತಾರೀಖಿನ ನಂತರ ಅರ್ಜಿಗಳನ್ನಾಗಲಿ ಪ್ರವೇಶಧನವನ್ನಾಗಲಿ ಸ್ವೀಕರಿಸಲಾಗುವದಿಲ್ಲ. ಆದರೆ ಬೇಸಿಕ್ ಪ್ರಾ. ಶಾ. ಪ್ರ. ಪರೀಕ್ಷೆಯ ಪ್ರವೇಶಕ್ಕಾಗಿ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ತಾರೀಖು ೧೦-೧-೧೯೫೬.

ಹಿಂದುಳಿದ ವರ್ಗದವರಲ್ಲದ ಉಮೇದವಾರರಿಗೆ ಪ್ರವೇಶಧನ ರೂ. ೩|- ಹಿಂದುಳಿದ ವರ್ಗದ ಉಮೇದವಾರರಿಗೆ ಪ್ರವೇಶಧನ ರೂ. ೧|-. ಒಕ್ಕಲತನ ಬಲಪಿನ ಶಾಲೆಗಳಿಂದ ಹಾಗು ಒಕ್ಕಲತನ [illegible] ವನ್ನು ಆರಂಭ ಮಾಡಲ್ಪಟ್ಟ ಶಾಲೆಗಳಿಂದ ಪರೀಕ್ಷೆಗೆ ಕೂಡ್ರುವ ಉಮೇದವಾರರು ಧಾರವಾಡ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು. ಉರ್ದು, ಮರಾಠಿ ಮತ್ತು ಇತರ ಪ್ರಾದೇಶಿಕ ಭಾಷೆಗಳಿಗೆ ಕೂಡ್ರುವ ಉಮೇದವಾರರ ಪರೀಕ್ಷೆ ಮೇಲೆ ತೋರಿಸಲಾದ ಕೇಂದ್ರಗಳಲ್ಲಿ ನಡೆಯುವದು.

ಎ. ಇ. ರ ಕಚೇರಿ,
ಧಾರವಾಡ, ೨೯-೧೨-೫೫

[illegible]
ವಿದ್ಯಾಧಿಕಾರಿಗಳು ಅಧ್ಯಕ್ಷರು, ಧಾರವಾಡ

ಬಹುಮಾನ ವಿತರಣ ಸಮಾರಂಭ

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ (೧೯೫೪) ಯಲ್ಲಿ ಮೇಲ್ಪಂಕ್ತಿಯನ್ನು ಪಡೆದ [illegible] ವಿದ್ಯಾರ್ಥಿಗಳಿಗೆ ಹಾಗು ಅವರಿಗೆ ಕಲಿಸಿದ ಶಿಕ್ಷಕರಿಗೆ ಧಾರವಾಡ ಜಿಲ್ಲಾ ಸ್ಕೂಲ ಬೋರ್ಡಿನಿಂದ [illegible] ಪಾರಿತೋಷಕಗಳನ್ನು ಹಂಚಿದ ಸಮಾರಂಭದ ವರದಿ :-

[illegible] ದಿ. ೨೪-೧೨-೧೯೫೪ ರಂದು [illegible] ಧಾರವಾಡ [illegible] ಟ್ರೇನಿಂಗ ಕಾಲೇಜಿನ [illegible] ಶ್ರೀ [illegible] ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ (೧೯೫೪) ಮೇಲ್ಪಂಕ್ತಿಯನ್ನು ಪಡೆದ [illegible] ವಿದ್ಯಾರ್ಥಿಗಳಿಗೆ ಹಾಗು ಅವರಿಗೆ ಕಲಿಸಿದ ಗುರುಗಳಿಗೆ ಜಿಲ್ಲಾ ಬೋರ್ಡಿನಿಂದ [illegible] ವಿತರಣ ಸಮಾರಂಭವು [illegible] ಈ ಸಮಾರಂಭಕ್ಕೆ [illegible] ಸಮಾರಂಭಕ್ಕೆ ಸ್ಕೂಲಬೋರ್ಡಿನ ಸದಸ್ಯರು ಧಾರವಾಡದ ಪ್ರತಿಷ್ಠಿತ ನಾಗರಿಕರು [illegible] ಪ್ರಾಥಮಿಕ ಶಿಕ್ಷಕರು ಹಾಗು ವಿದ್ಯಾರ್ಥಿಗಳು [illegible] ಶಾಲೆಯ ಬಾಲಿಕೆಯರಿಂದ ಪ್ರಾರ್ಥನೆ [illegible] ಶ್ರೀ [illegible] ಧಾರವಾಡ ಇವರು [illegible] ಕೊಟ್ಟರು. ಈ ಸಮಾರಂಭದ [illegible] ಶ್ರೀ [illegible] ಇವರು [illegible] ಶ್ರೀ [illegible] ಇವರು [illegible] ಅವರ [illegible] ಪಾರಿತೋಷಕಗಳನ್ನು [illegible] ವಿದ್ಯಾರ್ಥಿಗಳು [illegible] ಪಾರಿತೋಷಕಗಳನ್ನು ಹಂಚಿದರು.

ಕೆಳಗೆ ಕಾಣಿಸಿದ ವಿದ್ಯಾರ್ಥಿಗಳೂ ಶಿಕ್ಷಕರೂ ಪಾರಿತೋಷಕಗಳನ್ನು ಪಡೆದರು:—

ಅ. ನ.	ವಿದ್ಯಾರ್ಥಿ ಹೆಸರು	ಗುರುಗಳ ಹೆಸರು	ಹುದ್ದೆ	ಗುಣಗಳು	ಊರು	ಬಹುಮಾನ ಪಡೆದ ರೂ. ಗಳು
(೧)	ಕು. ಸರ್ವೇಶ್ವರ. ಹ. ಪೂಜಾರ	ಶ್ರೀ. ಉ. ಫ. ಚಿಕ್ಕಪ್ಪನವರ	ಅ. ಮಾ	೫೧೧/೭೦೦	ಅಕ್ಕಿಆಲೂರ ತಾಲೂಕ:— ಹಾನಗಲ್ಲ	೫೦-೦-೦ ೫೦-೦-೦
(೨)	ಕು. ನಾಗಪ್ಪ ಚನಬಸಪ್ಪ ಮಲ್ಲನಗೌಡರ	ಶ್ರೀ. ಸಿ. ಬಿ. ಕೋಟಿ	ಹೆ. ಮಾ. ಕ. ಗಂ. ಶಾ.	೧೮೫/೨೦೦	ಕುರುಬಕೊಂಡ ತಾಲೂಕ:— ಹಾವೇರಿ	೨೫-೦-೦ ೨೫-೦-೦
(೩)	ಶಿದ್ದಣ್ಣ ಬಸವಣ್ಣೆಪ್ಪ ಖೊದಾನಪೂರ	ಶ್ರೀ. ಎಸ್. ಡಿ. ಭೋಸಲೆ	ಅ. ಮಾ.	೧೪೮/೨೦೦	ಅಳಣಾವರ ತಾಲೂಕ:— ಧಾರವಾಡ	೨೫-೦-೦ ೨೫-೦-೦

ಈ ಸಂದರ್ಭದಲ್ಲಿ ಡಾ. ಕರ್ಕಿಯವರು ಮಾಡಿದ ಭಾಷಣದ ಸಾರವು ಕೆಳಗಿನಂತಿದೆ:—

ಈ ಸಮಾರಂಭಕ್ಕೆ ತಮ್ಮನ್ನು ಮುಖ್ಯ ಅತಿಥಿಗಳೆಂದು ಬರಮಾಡಿಕೊಂಡದ್ದಕ್ಕೆ ತಮ್ಮ ಆನಂದವನ್ನು ವ್ಯಕ್ತಪಡಿಸಿದರಲ್ಲದೆ, ತಮ್ಮ ಬಗೆಗೆ ತೋರಿಸಿದ ಪ್ರೇಮವಿಶ್ವಾಸಗಳಿಗಾಗಿ ತಾವು ಭಾಗ್ಯಶಾಲಿಗಳೆಂದು ತಿಳಿಸಿದರು. ಮುಂದುವರಿದ ಶಿಕ್ಷಣವೆಂದರೆ ಕೇವಲ ಬುದ್ಧಿವಿಕಾಸವಲ್ಲ. ಆದರೆ ಮಕ್ಕಳ ಶೀಲ ಸ್ವಭಾವವನ್ನು ತಿದ್ದಿ ಸುಸಂಸ್ಕೃತರನ್ನಾಗಿ ಮಾಡುವದೇ ಅತಿ ಮುಖ್ಯವಾಗಿದೆಯೆಂದು ಹೇಳಿದರು. ಅದಕ್ಕಾಗಿ ಮಕ್ಕಳಿಗೆ ಒಳ್ಳೆಯ ವಾತಾವರಣವನ್ನು ಕಲ್ಪಿಸಿ ಕೊಡಬೇಕೆಂದು ಹೇಳಿ ಈಗ ಹಿಂದಿನ ನಮ್ಮ ಸಂಸ್ಕೃತಿಯು ಮತ್ತೆ ಪ್ರಸ್ಥಾಪಿಸುತ್ತಿರುವದು ಶುಭಲಕ್ಷಣವಾಗಿದೆಯೆಂದರು. ಪಾರಿತೋಷಕಗಳನ್ನು ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಹಂಚುವ ಇಂಥ ಯೋಜನೆಗಳು ಪ್ರಸಂಶನೀಯವಾಗಿದ್ದು ಅವರಿಗೆ ಬಹಳೇ ಪ್ರಚೋದನೀಯವಾಗಬಲ್ಲವು ಕೇವಲ ಪಾರಿತೋಷಕಗಳೆಂದರೆ ಕೇವಲ ರೂಪಾಯಿ ಆಣೆ ಪೈಗಳಲ್ಲಿ ಆಗದೆ ಗುಣವನರಸಿ ಕಂಡು ಕೊಂಡಾಡುವದೇ ಆಗಿದೆ. ಶಿಕ್ಷಣದ ತಳಹದಿಯಾದ ಪ್ರಾಥಮಿಕ ಶಿಕ್ಷಣದ ಪ್ರಗತಿಯೇ ಮುಖ್ಯವಾಗಿದೆ. ಇಂದು ಪ್ರತಿಯೊಬ್ಬರೂ ಭಾರತಕ್ಕೆ ತನ್ನ ಸೇವೆಯನ್ನು ಸಲ್ಲಿಸಬೇಕಾಗಿದೆ. ಪ್ರತಿಯೊಬ್ಬ ಬಾಲಕನು ಬುದ್ಧಿಯನ್ನೂ ಮನೋವ್ಯಾಕುಲತೆಯನ್ನು ಸಂಪ್ರೀತಿಯನ್ನು ಬೆಳೆಸಿಕೊಳ್ಳಬೇಕಾಗಿದೆ ಅಂದರೆ ಬಾಲಕರು ಎತ್ತರವಾಗಿ ಅಗಲವಾಗಿ ಮತ್ತು ಆಳವಾಗಿ ಬೆಳೆಯಬೇಕೆಂಬುದೇ ನಮ್ಮ ಶಿಕ್ಷಣದ ಗುರಿಯಾಗಬೇಕು. ಎಲ್ಲರೂ ನನ್ನವರೆಂಬ ಆತ್ಮೀಯತೆಯ ಭಾವನೆಯು ಶಿಕ್ಷಣದಿಂದ ಒಡಮೂಡಬೇಕು. ಅಂದರೆ ಎಲ್ಲರಿಗಾಗಿ ನಾವೇನು ಮಾಡಬಹುದೆಂಬುದು ತಾನಾಗಿಯೇ ಹೊಳೆಯುವದು. ಈ ದಿಶೆಯಲ್ಲಿ ಶಿಕ್ಷಕರೂ ತಮ್ಮ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿದಲ್ಲಿ ಜನಸೇವೆಯನ್ನೂ ದೇಶ ಸೇವೆಯನ್ನೂ ಮಾಡಿದಂತಾಗುವದು. ಮುಂದುವರಿದು ಗುರುಶಿಷ್ಯರ ಪರಸ್ಪರ ಸಂಬಂಧದ ಬಗೆಗೆ ಮಾತನಾಡುತ್ತ ಮಾಡುವ ಆವಿಂಗೆ ಉಣುವಸರುವಿನಂತಾಗಬೇಕೆಂದು ಹೇಳಿ ತಮ್ಮ ಮಾತು ಮುಗಿಸಿದರು.

ಅಧ್ಯಕ್ಷಸ್ಥಾನದಿಂದ ಶ್ರೀ. ಸಿ. ಕೆ. ಕುಲಕರ್ಣಿಯವರು ಮಾತನಾಡುತ್ತ ಶಿಕ್ಷಕರೂ ವಿದ್ಯಾರ್ಥಿಗಳೂ ತಮ್ಮ ಪಾಲಿನ ಕರ್ತವ್ಯವನ್ನು ಮಾಡಿ ರಾಷ್ಟ್ರನಿರ್ಮಾಣದ ಕಾರ್ಯದಲ್ಲಿ ನೆರವಾಗಬೇಕೆಂದು ಕೇಳಿಕೊಂಡರು. ಕೊನೆಗೆ ಮುಖ್ಯ ಅತಿಥಿಗಳಿಗೂ ಅಧ್ಯಕ್ಷರಿಗೂ ಮಾಲಾರ್ಪಣೆಯಾದನಂತರ ಶ್ರೀಮತಿ ಸಿದ್ದಮ್ಮ ಢವಳಗಿ ಅ. ಎ. ಓ. ಅವರು ಎಲ್ಲರ ಆಭಾರವನ್ನು ಮನ್ನಿಸಿದರು. ರಾಷ್ಟ್ರಗೀತೆಯಾದ ನಂತರ ಸಮಾರಂಭವು ಯಶಸ್ವಿಯಾಗಿ ಮುಕ್ತಾಯವಾಯಿತು.

ಹುಬ್ಬಳ್ಳಿ:— ಇಲ್ಲಿಯ ಕ. ಗಂ. ೨ನೆಯ ನಂಬರ ಸಾಲೆಯ ವರ್ಧಂತಿ ಉತ್ಸವವು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ರ್‍ಯಾಂಗ್ಲರ ಡಿ. ಸಿ. ಪಾವಟೆ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಅವರು ತಮ್ಮ ಭಾಷಣದಲ್ಲಿ— "ಮಕ್ಕಳಿರ ನಲ್ಲಿ ದೇವನಿರುತ್ತಾನೆ. ದೇವನಿದ್ದಲ್ಲಿ ದೇವಸ್ಥಾನ. ಚಿಕ್ಕಮಕ್ಕಳಲ್ಲಿ ತ್ಯಾಗ, ದೇಶಪ್ರೇಮ, ಸತ್ಯ, ಶಿಸ್ತು, ಸಂಘಟನೆ ಮೊದಲಾದವು ಬೇರೂರುವಂತೆ ಶಿಕ್ಷಣದಲ್ಲಿ ಅಸ್ತಿಭಾರ ಹಾಕಬೇಕು. ಶಿಕ್ಷಕರು ಅನುಭವಶಾಲಿಗಳೂ, ತರಬೇತಿ ಹೊಂದಿದವರೂ ಆಗಿರಬೇಕು" ಮುಂತಾಗಿ ಹೇಳಿದರು. ಈ ವರ್ಧಂತಿ ಉತ್ಸವದ ಸ್ಮಾರಕಾರ್ಥವಾಗಿ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ನಗರದ ಯಾವ ಸಾಲೆಯ ಪರಿಣಾಮವು ಉತ್ತಮವಾಗುವದೋ ಆ ಸಾಲೆಗೆ ರೋಲಿಂಗ ಶೀಲ್ಡನ್ನು ಕೊಡಲು ನಗರ ಪ್ರಾಥಮಿಕ ಶಿಕ್ಷಣ ಮಂಡಲವು ತೀರ್ಮಾನಿಸಿದ್ದು ಅದಕ್ಕೆ ರ್‍ಯಾಂಗ್ಲರ ಡಿ. ಸಿ. ಪಾವಟೆ ರೋಲಿಂಗ ಶೀಲ್ಡ ಎಂದು ಕರೆಯುವದೆಂದು ಸಭೆಯಲ್ಲಿ ಬಿತ್ತರಿಸಲಾಯಿತು.

— ಕ. ಗಂ. ಸರಕಾರಿ ಟ್ರೇ. ಕಾ. ಧಾರವಾಡ —

೧೯೫೪ ನೆಯ ಅಕ್ಟೋಬರ ತಿಂಗಳಲ್ಲಿ ಜರುಗಿದ ಡ್ರಾಯಿಂಗ ಗ್ರೇಡ ಪರೀಕ್ಷೆಯ ಪರಿಣಾಮವು ಕೆಳಗಿನಂತೆ ಅದೆ:—

		ಕುಳಿತವರು	ಪಾಸಾದವರು
(೧)	ಎಲಿಮೆಂಟರಿ ಗ್ರೇಡ	೩೪	೩೧
(೨)	ಇಂಟರಮಿಜಿಯೇಟ ಗ್ರೇಡ	೧೯	೧೫

— ಪ್ರಕಟನೆ —

೧೯೫೪ ನೆಯ ಫೆಬ್ರುವರಿಯಲ್ಲಿ ನಡೆಯುವ ಸ್ಕಾಲರ-ಶಿಪ್ಪ ಪರೀಕ್ಷೆಗಳಿಗೆ ಸಂಬಂಧಿಸಿದ ಈ ಆಫೀಸಿನ ದಿನಾಂಕ ೯-೧೨-೧೯೫೪ ರ ಪ್ರಕಟನೆಯ ನಂ. ಎ| ಎಫ್| ೪೦೧-೪೮೯೮ ನೆಯದಕ್ಕೆ ತಿದ್ದುಪಡಿ.

(೧) ೧೯೫೫ರ ಮುಕ್ತದ್ವಾರವಿರುವ ಹಾಯಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಗೆ ೨೪ ಸ್ಕಾಲರಶಿಪ್ಪುಗಳು ಮತ್ತು ಮಿಡಲ್ ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಗೆ ೨೫ ಸ್ಕಾಲರಶಿಪ್ಪುಗಳು ಇರುತ್ತವೆ; ಆದರೆ ಪ್ರಕಟ-ನೆಯಲ್ಲಿ ತೋರಿಸಿದಂತೆ ಅನುಕ್ರಮವಾಗಿ ೭೮ ಮತ್ತು ೨೯ ಇರುವದಿಲ್ಲ.

(೨) ಪ್ಯಾರಾ ೧ ರ ಕಲಮು (ಬ) ಮಿಡಲ್ ಸ್ಕೂಲುಗಳಲ್ಲಿ ಮತ್ತು ಹಾಯಸ್ಕೂಲುಗಳಲ್ಲಿ ಮುಕ್ತದ್ವಾರವಿರುವ ಸರಕಾರಿ ಸ್ಕಾಲರಶಿಪ್ಪುಗಳ ವಿಷಯದಲ್ಲಿ ಮಾತ್ರ ಅದು ಅನ್ವಯಿಸುತ್ತದೆ; ಆದರೆ ಮಿಡಲ್ ಸ್ಕೂಲು ಹಾಗೂ ಹಾಯಸ್ಕೂಲುಗಳಲ್ಲಿಯ ಹಿಂದುಳಿದ ವರ್ಗದ ಸ್ಕಾಲರಶಿಪ್ಪುಗಳ ವಿಷಯದಲ್ಲಿ ಅಲ್ಲ.

ನಂ. ಎ| ಎಫ್|೪೦೧-೪೧೩೩
ಧಾರವಾಡ-೧೧-೧೨-೧೯೫೪

ಕೆ. ಬಿ. ತೇರಗಾಂವಕರ
ಎಜ್ಯುಕೇಶನಲ್
ಇನಸ್ಪೆಕ್ಟರ, ಧಾರವಾಡ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ
ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧-೧೨-೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಙಿರ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

RegdNo B.5375

ಹೊರಬಿದ್ದಿದೆ !

ಬೆಳಕು ಕಂಡಿದೆ !!

೩ನೆಯ ಆವೃತ್ತಿ

ಶೈಕ್ಷಣಿಕ ಮನೋವಿಜ್ಞಾನ

ಪುಟ ೩೦೦

ಬರೆದವರು : ಡಾ| ವಿ. ಕೊ. ಜವಳಿ, M. Ed. Ph. D. M. A. (ಕೋಲಂಬಿಯಾ)

ಬೆಲೆ: ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಕೈದೀವಿಗೆ ! ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೧೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಅಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಪುಟ ೨೮೦

ಮೂಲ ಶಿಕ್ಷಣ

ಬೆಲೆ: ೩-೮-೦

ಲೇಖಕರು : ಶ್ರೀ. ಮ. ಗು. ಹಂಡಶ್ರೀಳ, ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಪುಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೆ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಅಕಳವಾಡಿ ಬುಕ್ ಡಿಪೋ, ಧಾರವಾಡ

Printed by M.A. Kamat, B.Sc. at Jai Hind Art Press Dharwar. Edited and Published by S. P. Patil B. M. Shintri S. R Tatti, & Smti. P. A. Bhaskar. at the Kannada Prathamik Shikshan Office, Govt. Training College for Men, Dharwar.

ಪ್ರಾಥಮಿಕ ಶಿಕ್ಷಣ

ಕನ್ನಡ ಭಾಷಾಭೂಷಣ ಡೆಪ್ಯುಟಿ ಚೆನ್ನಬಸಪ್ಪನವರು
ಮೊದಲನೆಯ ಪ್ರಿನ್ಸಿಪಾಲರು

☆

ಫೆಬ್ರುವರಿ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೇರಗಾಂವಕರ, ಬಿ. ಎಸ್ ಸಿ., (ಆನರ್ಸ) ಬಿ. ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ. ಬಿ. ಎಂ. ಶಿಂತ್ರಿ, ಬಿ. ಎ. ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗೂ ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೪	ಫೆಬ್ರುವರಿ ೧೯೫೫	ಸಂಚಿಕೆ ೯

ಪರಿವಿಡಿ

೧. ಸಂಪಾದಕೀಯ ೨
೨. ಸ್ವಾಗತ ಭಾಷಣ ೫
೩. ಸಂದೇಶಗಳು ೮
೪. ಶಿಕ್ಷಣ ಮಂತ್ರಿ ಮಾನ್ಯ ಶ್ರೀ ದಿನಕರರಾವ ದೇಸಾಯಿಯವರ ಭಾಷಣ ೧೨
೫. ಮಾನ್ಯ ಶ್ರೀ ಕೆ. ಎಸ್. ಪಾಟೀಲರ ಭಾಷಣ ೧೩
೬. ಲಿಂಗೈಕ್ಯ ಡೆಪ್ಯುಟಿ ಚೆನ್ನಬಸಪ್ಪನವರು—ಶ್ರೀ. ಶಿಂತ್ರಿ ಬಸಪ್ಪನವರು ೧೪
೭. ಕಳೆದು ಹೋದ [illegible]—ಶ್ರೀ. ಹೆಗ್ಗಡೆ ಎಸ್. ಎಸ್. ೧೯
೮. ವೃತ್ತಿಶಿಕ್ಷಣದ ಮೂಲದಲ್ಲಿರುವ ಮಾನಸಶಾಸ್ತ್ರದ ತತ್ವಗಳು—ಶ್ರೀ. ಜಿ. ಎಸ್. ಗಲಗಲಿ ೨೦
೯. ಸಮವಾಯ ಪಾಠದ ಟಿಪ್ಪಣಿ—ಶ್ರೀ. ವ್ಹಿ. ಎ. ಉಮರಾಣಿ ೨೫
೧೦. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೯

ಪ್ರಕಟಣೆಗಳು—೧೧, ೩೩. ಪ್ರಾ. ಶಾ. ಪ್ರ. ಪರೀಕ್ಷೆಯ—ಕಾರ್ಯಕ್ರಮ—೨೩.

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಕ್ಕೆ ಶಿಕ್ಷಣ ಮಂತ್ರಿಗಳ ಸಂದರ್ಶನ

ದಿನಾಂಕ : ೧೩—.—೧೯೫೫

17/2/55

೧. ಕಾಲೇಜದ ಮೂಲೋದ್ಯೋಗದ ಚಟುವಟಿಕೆಗಳನ್ನು ನಿರೀಕ್ಷಿಸಿ ಪ್ರಾರ್ಥನಾ ಮಂದಿರದ ಕಡೆಗೆ ಬರುತ್ತಿರುವಾಗ ತೆಗೆದ ಚಿತ್ರ.

೨. ಕಾಲೇಜದ ಪ್ರಾರ್ಥನಾ ಮಂದಿರದಲ್ಲಿ ವ್ಯಾಸಪೀಠದ ಮೇಲೆ ಶಿಕ್ಷಣ ಉಪಮಂತ್ರಿ ಶ್ರೀಮತಿ ಇಂದುಮತಿ ಶೇಟ, ರ್‍ಯಾಂಗ್ಲರ ಡಿ.ಸಿ. ಪಾವಟೆ, ಶಿಕ್ಷಣಮಂತ್ರಿ ಶ್ರೀ. ದಿನಕರರಾವ ದೇಸಾಯಿ ಹಾಗು ಒಕ್ಕಲತನ ಮತ್ತು ಅರಣ್ಯ ಖಾತೆಗಳ ಉಪಮಂತ್ರಿ ಶ್ರೀ. ಕೆ. ಎಫ್. ಪಾಟೀಲರವರು ಉಪಸ್ಥಿತರಿರುವರು.

೩. ಪ್ರಾಯೋಗಿಕ ಶಾಲೆಯ ಬಾಲಕರ ಮೂಲೋದ್ಯೋಗದ ಚಟುವಟಿಕೆಗಳನ್ನು ನಿರೀಕ್ಷಿಸಿ ಹೊರಗೆ ಬರುತ್ತಿರುವಾಗ ತೆಗೆದ ಚಿತ್ರ.

ಸಂಪಾದಕೀಯ

ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಗಳ ಕರ್ನಾಟಕ ಸಂಚಾರ

ಮಾನ್ಯ ಶ್ರೀ ದಿನಕರರಾವ ದೇಸಾಯಿಯವರು ಜನೇವರಿ ತಿಂಗಳ ದಿನಾಂಕ ೧೨ ರಿಂದ ೨೦ರ ವರೆಗೆ ಕರ್ನಾಟಕದಲ್ಲಿ ಸಂಚರಿಸಿ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಭೆಟ್ಟಿಕೊಟ್ಟು ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಸರಕಾರದ ಧೋರಣೆಯನ್ನು ವಿವರಿಸಿದರು. ಅವರೊಡನೆ ಶಿಕ್ಷಣ ಖಾತೆಯ ಉಪಮಂತ್ರಿಗಳಾದ ಶ್ರೀಮತಿ ಇಂದುಮತಿ ಸೇಟರೂ ಸಂಚರಿಸಿದರು. ಮಂತ್ರಿಗಳು ದಿನಾಂಕ ೧೩ ರಂದು ಮುಂಜಾನೆ ಬೆಳಗಾವಿಗೆ ಆಗಮಿಸಿ ಅಲ್ಲಿ ಆರ್. ಪಿ. ಡಿ. ಕಾಲೇಜದ ಸ್ನೇಹಸಮ್ಮೇಲನದ ಅಧ್ಯಕ್ಷತೆಯನ್ನು ವಹಿಸಿ ಭಾರತದಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಲಕ್ಷ್ಯಕೊಡಬೇಕಾಗಿದೆಯೆಂದೂ ಶಿಕ್ಷಣದ ಪ್ರಗತಿಗೆ ಶಿಕ್ಷಕ-ವಿದ್ಯಾರ್ಥಿಗಳಲ್ಲಿ ನಿಕಟ ಸಂಪರ್ಕವಿರುವದು ಅತ್ಯವಶ್ಯವೆಂದು ಹೇಳಿದರು. ಮೂರು ಗಂಟೆಗೆ ಧಾರವಾಡಕ್ಕೆ ಬರಬೇಕಾಗಿದ್ದ ಮಂತ್ರಿಗಳಿಗೆ ತಡವಾದದ್ದರಿಂದ ೫-೩೦ ಕ್ಕೆ ಧಾರವಾಡಕ್ಕೆ ತಲುಪಿ ನಮ್ಮ ಕಾಲೇಜದಲ್ಲಿಯ ಕಾರ್ಯಕ್ರಮಕ್ಕೆ ಉಪಸ್ಥಿತರಾದರು. ಇದೇ ಸಂಚಿಕೆಯಲ್ಲಿ ಈ ಕಾರ್ಯಕ್ರಮದ ಹೆಚ್ಚಿನ ವಿವರಗಳು ಕೊಡಲ್ಪಟ್ಟಿವೆ.

ದಿನಾಂಕ ೧೪ ರಂದು ಮುಂಜಾನೆ ಕರ್ನಾಟಕ ಕಾಲೇಜದ ಭೌತ ವಿಜ್ಞಾನಕಟ್ಟಡದ ಪ್ರಾರಂಭೋತ್ಸವದ ಅಧ್ಯಕ್ಷತೆಯನ್ನು ವಹಿಸಿ ಕರ್ನಾಟಕವು ವಿಜ್ಞಾನಕ್ಕೆ ತನ್ನದೇ ಆದ ಕಾಣಿಕೆಯನ್ನು ಸಲ್ಲಿಸುವ ಕಾಲವು ಸಮೀಪಿಸಿದೆಯೆಂದೂ ಸದರೀ ಹೊಸ ಕಟ್ಟಡವು ಉಚ್ಚ ಶಿಕ್ಷಣದ ದೇಗುಲವಾಗಲೆಂದೂ ಹಾರೈಸಿದರು. ಆ ಮೇಲೆ ಅವರು ಹುಬ್ಬಳ್ಳಿಗೆ ದಯಮಾಡಿಸಿ ಅಲ್ಲಿಯ ಕಾಡಸಿದ್ಧೇಶ್ವರ ಕಾಲೇಜದ ಸ್ನೇಹ ಸಮ್ಮೇಲನದಲ್ಲಿ ಮುಖ್ಯ ಅತಿಥಿಗಳಾಗಿ ಮಾತಾಡುತ್ತ ಗುರುಕುಲ, ವಿದ್ಯಾಶಿಬಿರಗಳನ್ನು ನಡೆಸಿ ಜ್ಞಾನ ಸಂಗ್ರಹ ಹಾಗು ಜ್ಞಾನ ದಾನಗಳನ್ನು ಮಾಡಬೇಕೆಂದೂ ವಿದ್ಯಾರ್ಥಿಗಳು ತಮ್ಮ ಸುತ್ತುಮುತ್ತು ನಡೆದಿರುವ ಸಮಾಜ ವಿಕಾಸ ಕಾರ್ಯಗಳಲ್ಲಿ ಭಾಗವಹಿಸಿ ತಮ್ಮ ಆತ್ಮವಿಕಾಸವನ್ನು ಸಾಧಿಸಬೇಕೆಂದೂ ಪ್ರತಿಪಾದಿಸಿದರು. ಅದಾದನಂತರ ಭೂಮರಡ್ಡಿ ಎಂಜಿನಿಯರಿಂಗ ಕಾಲೇಜದ ವಸತಿಗೃಹದ ಶಂಕುಸ್ಥಾಪನೆಯನ್ನು ನೆರವೇರಿಸುತ್ತ ನಿರುದ್ಯೋಗವನ್ನು ಹೊಡೆದೋಡಿಸಲಿಕ್ಕೂ ಔದ್ಯೋಗೀಕರಣವನ್ನು ಸಾಧಿಸಲಿಕ್ಕೂ ಸಾರ್ವಜನಿಕರು ಇಂಥ ಸಂಸ್ಥೆಗಳಿಗೆ ಉದಾರ ಹಸ್ತದಿಂದ ಪ್ರೋತ್ಸಾಹ ನೀಡಬೇಕೆಂದು ವಿನಂತಿಸಿದರು.

ಮಧ್ಯಾಹ್ನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಮುಖ್ಯ ಕಟ್ಟಡದ ಶಂಕುಸ್ಥಾಪನೆಯ ಸಮಾರಂಭದಲ್ಲಿ ಹಿರಿಯತನವಹಿಸಿ ಜಂಗಮರ ಮಂತ್ರಘೋಷಣೆಯ ಶುಭ ಮುಹೂರ್ತದಲ್ಲಿ ಅಡಿಗಲ್ಲನ್ನಿರಿಸಿ ಸರ್ವಾಂಗೀಣ

ಪ್ರಾಥಮಿಕ ಶಿಕ್ಷಣ

ಪ್ರಗತಿಯೇ ಶಿಕ್ಷಣದ ಗುರಿಯೆಂದೂ ರಾಷ್ಟ್ರ ಭಾಷೆಯ ಮೂಲಕ ದೇಶದ ಒಕ್ಕಟ್ಟನ್ನು ಬೆಳೆಸಬೇಕೆಂದೂ ಹೇಳಿ ಕರ್ನಾಟಕ ವಿಶ್ವವಿದ್ಯಾಲಯವು ಈಗಿನ ಉಪಕುಲಪತಿಗಳ ನೇತೃತ್ವದಲ್ಲಿ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವಂತಾಗಲೆಂದು ಹಾರೈಸಿದರು. ಅದೇ ದಿನ ಸಂಜೆಗೆ ಕಾರವಾರಕ್ಕೆ ಪ್ರಯಾಣ ಬೆಳೆಸಿ ಅಲ್ಲಿಯ ಸರಕಾರಿ ಟ್ರೇನಿಂಗ ಕಾಲೇಜದ ಚಟುವಟಿಕೆಗಳಲ್ಲಿ ಭಾಗವಹಿಸಿದರು. ಮರುದಿನ ಬೆಳಗ್ಗೆ ಕಾರವಾರ ಹಾಗು ಮಾಜಾಳಿಯಲ್ಲಿಯ ಶಿಕ್ಷಣಸಂಸ್ಥೆಗಳಿಗೆ ಭೆಟ್ಟಿಯಿತ್ತರು. ಕಾರವಾರ ಜಿಲ್ಹೆಯ ಸ್ಕೂಲಬೋರ್ಡಿನ ಹೊಸಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿ ಸ್ಕೂಲಬೋರ್ಡಿನವರು ಅರ್ಪಿಸಿದ ಮಾನಪತ್ರಕ್ಕೆ ಉತ್ತರಕೊಡುತ್ತ ಅತಿ ಸಣ್ಣ ಹಳ್ಳಿಗಳಲ್ಲಿಯೂ ಶಿಕ್ಷಣಪ್ರಸಾರವಾಗುವದು ಅತ್ಯವಶ್ಯವೆಂದು ಹೇಳಿದರು. ಈ ಪ್ರಕಾರ ಮಂತ್ರಿದ್ವಯರು ಕರ್ನಾಟಕದ ಮೂರು ಜಿಲ್ಹೆಗಳಲ್ಲಿ ಸಂಚರಿಸಿ ಶಿಕ್ಷಣಕ್ಷೇತ್ರದಲ್ಲಿ ದುಡಿಯುತ್ತಿರುವ ವಿವಿಧ ಸಂಸ್ಥೆಗಳಿಗೂ ಸಂಚಾಲಕರಿಗೂ ಸೂಕ್ತಸಲಹೆಗಳನ್ನು ಕೊಟ್ಟು ಮಾರ್ಗದರ್ಶನ ಮಾಡಿದರು. ಮಾನ್ಯ ಮಂತ್ರಿಗಳು ತಮ್ಮ ದೀರ್ಘ ಲೇಖನದಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಾರ್ವಜನಿಕ ಶಿಕ್ಷಣಕ್ಕೆ ಸಿಗಬಹುದಾದ ಸ್ಥಾನವನ್ನು ವಿವರಿಸಿದ್ದಾರೆ. ಸಂವಿಧಾನದ ಧೋರಣೆಯಂತೆ ಗೊತ್ತುಪಡಿಸಿದ ಅವಧಿಯಲ್ಲಿ ೬ ರಿಂದ ೧೪ ವರ್ಷಗಳವರೆಗಿನ ಎಲ್ಲ ಮಕ್ಕಳಿಗೆ ಉಚಿತ ಹಾಗು ಕಡ್ಡಾಯದ ಶಿಕ್ಷಣವು ದೊರೆಯುವಂತೆ ಮುಂಬಯಿ ಸರಕಾರವು ಎಡೆಬಿಡದೆ ಯತ್ನಿಸುವದೆಂದು ಉಲ್ಲೇಖಿಸಿರುವರು.

ಪ್ರಾಥಮಿಕ ಶಿಕ್ಷಣದ ಬಗ್ಗೆ ಹಿರಿಯ ಮುಖಂಡರ ಅಭಿಪ್ರಾಯಗಳು

ಸತ್ಯಮೂರ್ತಿ ನಗರದಲ್ಲಿ ಕೂಡಿದ ಕಾಂಗ್ರೆಸ್ಸಿನ ೬೧ ನೆಯ ಅಧಿವೇಶನದಲ್ಲಿ ಶಿಕ್ಷಣ ಸಂಬಂಧದ ಗೊತ್ತುವಳಿಯ ಮೇಲೆ ಮಾತಾಡುತ್ತ ಶ್ರೀ. ನೆಹರೂರವರು ಜೀವನ ಶಿಕ್ಷಣದಲ್ಲಿ ಮಗುವಿಗೆ ೭ ರಿಂದ ೧೪ನೆಯ ವಯಸ್ಸಿನ ವರೆಗೆ ಶಿಕ್ಷಣ ದೊರೆಯಬೇಕೆಂದೂ ಮಗುವಿಗೆ ಏನಾದರೊಂದು ಉತ್ಪಾದಕ ಉದ್ಯೋಗ ಮಾಡುವ ಯೋಗ್ಯ ಹಿನ್ನೆಲೆ ಬೇಕಾಗಿದೆಯೆಂದೂ ಹೇಳಿದರು. ಜೀವನ ಶಿಕ್ಷಣ ಪದ್ಧತಿಗೆ ಆಧುನಿಕ ಶಿಕ್ಷಣ ತಜ್ಞರು ಒಪ್ಪಿರುವರು. ಕೆಲವರು ಅದರಿಂದ ಮಕ್ಕಳು ಅನಾಗರಿಕ ಸ್ಥಿತಿಗಿಳಿಯುವರೆಂದು ತಿಳಿದಿರುವದು ಆಶ್ಚರ್ಯಕರವೆಂದೂ ಹೇಳಿದರು. ದಿನಾಂಕ ೨೨-೧-೫೫ ರಂದು ದಕ್ಷಿಣ ಭಾರತದ ಶಿಕ್ಷಣ ಟ್ರಸ್ಟದವರು ಮದ್ರಾಸದಲ್ಲಿ ಪ್ರಾರಂಭಿಸುವ ಮಹಿಳೆಯರ ಕಾಲೇಜದ ಅಡಿಗಲ್ಲನ್ನು ಇರಿಸುವಾಗ ಶ್ರೀ. ನೆಹರೂರವರು ಭಾಷಣಮಾಡುತ್ತ ಪ್ರತಿಯೊಬ್ಬರಿಗೂ ಪ್ರತಿಯೊಂದು ಘಟ್ಟದಲ್ಲಿಯೂ ಶಿಕ್ಷಣದ ವ್ಯವಸ್ಥೆ ಮಾಡುವದು ಸರಕಾರದ ಕರ್ತವ್ಯವೆಂದು ಸಾರಿದರು. ಮನುಷ್ಯನು ಬೆಳವಣಿಗೆಯನ್ನು ಹೊಂದುವಂತೆ ಶಿಕ್ಷಣದಲ್ಲಿ ಸಾಂಸ್ಕೃತಿಕ ಅಂಶವೂ ಬೇಕು; ಅದೇ ರೀತಿ ಶಿಕ್ಷಣದಲ್ಲಿ ಉತ್ಪಾದನೆಗೂ ಸ್ಥಾನ ಸಿಗಬೇಕು. ಪ್ರತಿಯೊಬ್ಬನು ಉತ್ಪಾದಕನೂ ಒಳ್ಳೆಯ ನಾಗರಿಕನೂ ಆಗಬೇಕು. ಕಡಿಮೆ ದುಡಿದರೆ ಸಮಾಜದಲ್ಲಿ ಹೆಚ್ಚಿನ ಸ್ಥಾನವಿದೆಯೆಂಬ ಭ್ರಮೆ ಮಾಯವಾಗಬೇಕೆಂಬ ತಮ್ಮ ಆಶೆಯನ್ನು ವ್ಯಕ್ತ ಮಾಡಿದರು.

ನಮ್ಮ ದೇಶದ ಹಿರಿಯ ಮುತ್ಸದ್ದಿಗಳಾದ ರಾಜಾಜಿಯವರು ಆಗಾಗ್ಗೆ ಹೊಸ ವಿಚಾರಗಳನ್ನು ಸೂಚಿಸುವದರಲ್ಲಿ ಪ್ರಖ್ಯಾತಿ ಪಡೆದಿದ್ದಾರೆ. ಇತ್ತೀಚೆಗೆ ಶಿಕ್ಷಣ ಕ್ಷೇತ್ರದಲ್ಲಿಯೂ ಸಹ ತಮ್ಮ ಹಲಕೆಲವು ಅಭಿಪ್ರಾಯಗಳನ್ನು ವ್ಯಕ್ತಮಾಡಿರುವರು. ಹಿಂದುಳಿದವರ ಹಾಗೂ ಮುಂದುವರಿದವರ ಶಿಕ್ಷಣವು ಕೂಡಿಯೇ ಸಾಗುವದು ಯೋಗ್ಯವಲ್ಲವೆಂದು ಅವರು ಹೇಳಿದಂತೆ ಕಾಣುತ್ತದೆ. ಅವೆರಡೂ ಬೇರೆ ಬೇರೆಯಾಗಿ ಸಾಗುವದು ವಿಹಿತವೆಂದು ಅವರ ಅಭಿಪ್ರಾಯ ಇದ್ದಂತೆ ತೋರುತ್ತದೆ. ಅಖಿಲ ಭಾರತ ಮಕ್ಕಳ ಶಿಕ್ಷಣ ಪರಿಷತ್ತಿಗೆ ಕಳಿಸಿದ ತಮ್ಮ ಸಂದೇಶದಲ್ಲಿ ರೈತರ ಮನೆಗಳಲ್ಲಿ ಹಳೇ ಪದ್ಧತಿಯ ಬಾಲಿಕೆಯರಿಗೆ ದೊರೆಯುತ್ತಿರುವ ಶಿಕ್ಷಣವೇ ಚಿಕ್ಕಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ಪದ್ಧತಿಯಾಗಿದೆಯೆಂದು ರಾಜಾಜಿಯವರು ಬರೆದಂತೆ ಕಾಣುತ್ತದೆ.

ಹೊಂಟಿಸರಿ ಹಾಗೂ ವರ್ಧಾ ಪದ್ಧತಿಗಳ ಯೋಗ್ಯ ಜೋಡಣೆಯೇ ಅತ್ಯುತ್ತಮ ಪದ್ಧತಿಯಾಗಬಹುದೆಂದೂ ಅದನ್ನು ನಮ್ಮ ಹಳೆಯ ಪದ್ಧತಿಯ ಹುಡುಗಿಯರಿಗೆ ಅವರ ತಾಯಂದಿರು ಕೊಡುತ್ತಿರುವ ಶಿಕ್ಷಣದಿಂದ ಅರಿತು ಕೊಳ್ಳಬಹುದೆಂದೂ ಅವರು ಸೂಚಿಸಿದಂತೆ ಕಾಣುತ್ತವೆ. ಇಂತಹ ವಿಚಾರಗಳನ್ನು ಶಿಕ್ಷಕರಾದ ನಾವು ಕೂಲಂಕಷವಾಗಿ ಅಭ್ಯಸಿಸುವದು ಒಳ್ಳೇಯದು.

ಪ್ರಜಾರಾಜ್ಯ ದಿನೋತ್ಸವ

ಬುಧವಾರ ದಿನಾಂಕ ೨೬ – ೧ – ೫೫ ರಂದು ಭಾರತ ಪ್ರಜಾರಾಜ್ಯದ ೫ ನೆಯ ವಾರ್ಷಿಕೋತ್ಸವವು ದೇಶದಲ್ಲೆಲ್ಲ ಒಳ್ಳೇಯ ವೈಭವದಿಂದ ಆಚರಿಸಲ್ಪಟ್ಟಿತು. ಆ ದಿನ ಎಲ್ಲ ಕಡೆಗೂ ಹಳ್ಳಿಗಳಲ್ಲಿಯೂ ನಗರಗಳಲ್ಲಿಯೂ ಉತ್ಸಾಹ ಸಡಗರಗಳು ಒಡೆದು ಕಾಣುತ್ತಿದ್ದವು. ಪ್ರಾತಃಕಾಲದಿಂದ ಮಧ್ಯರಾತ್ರಿಯವರೆಗೆ ಚಟುವಟಿಕೆಗಳು ಒಂದೇ ಸವನೆ ನಡೆದವು. ಪ್ರಭಾತ ಫೇರಿ, ಧ್ವಜವಂದನೆ, ಪೋಲಿಸ-ಪರೇಡ. ಸಾರ್ವತ್ರಿಕ ಮೆರವಣಿಗೆ ಅನ್ನಸಂತರ್ಪಣೆ, ವಿವಿಧ ವಿನೋದಾವಳಿ, ಕುಸ್ತಿಮೊದಲಾದ ಪಂದ್ಯಾಟಗಳು ದೀಪೋತ್ಸವಗಳು ಹಾಗೂ ನಾಟಕಗಳು ಅಂದಿನ ಕಾರ್ಯಕ್ರಮದ ಮುಖ್ಯಭಾಗಗಳಾಗಿದ್ದವು. ಅಂದು ರಾಷ್ಟ್ರಪತಿಗಳು ಶುಭ ಸಂದೇಶವನ್ನು ಕೊಡುತ್ತ ರಾಜ್ಯದ ಪ್ರತಿಯೊಬ್ಬ ನಾಗರಿಕನಿಗೆ ಸಮಾನ ಹಕ್ಕುಗಳೂ ಸಮಾನ ಅವಕಾಶಗಳೂ ದೊರೆಯಬೇಕೆಂದೂ ಪ್ರತಿಯೊಬ್ಬನು ತನ್ನ ಕರ್ತವ್ಯವನ್ನು ಮಾಡಬೇಕೆಂದೂ ಜನತೆಯು ಬಯಸುತ್ತಿದೆಯೆಂದು ಹೇಳಿದರು.

ಹುತಾತ್ಮರ ದಿನಾಚರಣೆ

ಜನೇವರಿ ೩೦ ನೆಯ ದಿನಾಂಕವು ರಾಷ್ಟ್ರಪಿತ ಮಹಾತ್ಮಾಜಿಯವರ ಪುಣ್ಯಸ್ಮರಣೆಯ ದಿನ. ಅಂದು ಹುತಾತ್ಮರ ದಿನವೆಂದು ಮತ್ತು ೧೧ ಘಂಟೆಗೆ ಎರಡು ನಿಮಿಷಗಳವರೆಗೆ ಮೌನದಿಂದ ಎದ್ದು ನಿಂತು ಹುತಾತ್ಮರ ಪುಣ್ಯಸ್ಮರಣೆಯನ್ನು ಮಾಡಬೇಕೆಂದು ಭಾರತ ಸರಕಾರವು ಸೂಚಿಸಿತ್ತು. ಭಾರತೀಯರಿಗೆ ಇಂಗ್ಲೀಷರಿಂದ ಸ್ವಾತಂತ್ರ್ಯವು ಸುಲಭವಾಗಿಯೇ ದೊರೆಯಿತೆಂಬ ತಪ್ಪು ಕಲ್ಪನೆ ಕೆಲವರಲ್ಲಿ ಇತ್ತು. ೧೮೫೭ ರಿಂದ ೧೯೪೭ರ ವರೆಗಿನ ಇತಿಹಾಸವನ್ನು ಚೆನ್ನಾಗಿ ಓದಿದವರಿಗೆ ಸ್ವಾತಂತ್ರ್ಯದ ಹೋರಾಟದಲ್ಲಿ ಅಸಂಖ್ಯಾತ ಭಾರತೀಯರು ಲಾಠಿ ಪೆಟ್ಟುಗಳನ್ನೂ ಗುಂಡಿನೇಟುಗಳನ್ನೂ ಕಾರಾಗೃಹವಾಸವನ್ನೂ ಬಂಧುಬಳಗದವರ ಅಗಲುವಿಕೆಯನ್ನೂ ಆಸ್ತಿಪಾಸ್ತಿಗಳ ನಾಶವನ್ನೂ ಸ್ವಸಂತೋಷದಿಂದಲೂ ಹಸನ್ಮುಖದಿಂದಲೂ ಸಹಿಸಿದರೆಂಬುದನ್ನು ಸ್ಪಷ್ಟವಾಗಿ ತಿಳಿಯುತ್ತದೆ. ತನ್ನ ಸರ್ವಸ್ವವನ್ನು ತ್ಯಾಗಮಾಡಿ ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ ೩೬ ಕೋಟಿ ಜನರಿಗೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾವೀರರಿಗೆ ಭಾರತೀಯರು ತಾ|| ೩೦ರಂದು ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು. ಕಿತ್ತೂರ ಚನ್ನಮ್ಮಾಜಿ ಹಾಗೂ ಝಾಂಸಿ ಲಕ್ಷ್ಮೀಬಾಯಿಯವರನ್ನು ಮೊದಲು ಮಾಡಿ ನೇತಾಜಿ ಸುಭಾಷಚಂದ್ರ ಬೋಸರ ವರೆಗಿನ ಹುತಾತ್ಮರು ಸಹಿಸಿದ ಅಪಾರವಾದ ಕಷ್ಟನಷ್ಟಗಳ ಅರಿವು ನಮಗಿನ್ನೂ ಆಗಬೇಕಾಗಿದೆ. ಅವರು ಇಂದು ನಮ್ಮೊಡನೆ ಇಲ್ಲದಿದ್ದರೂ ಅವರ ದಿವ್ಯಜ್ಯೋತಿಯು ನಮಗೆ ಬೆಳಕನ್ನೀಯುತ್ತದೆ

ಮುಂಬಯಿ ರಾಜ್ಯದ ಹೊಸ ರಾಜ್ಯಪಾಲರು.

ಕೆಲವು ದಿನಗಳ ಹಿಂದೆ ನಿಧನಹೊಂದಿದ ಮುಂಬಯಿ ರಾಜ್ಯದ ರಾಜ್ಯಪಾಲರಾದ ಸರ್ ಗಿರಿಜಾಶಂಕರ ವಾಜಪೇಯಿಯವರ ಸ್ಥಳದಲ್ಲಿ ಶ್ರೀ ಹರಿ ಕೃಷ್ಣ ಮೆಹತಾಬರು ನೇಮಿಸಲ್ಪಟ್ಟಿದ್ದಾರೆ ಅವರು ತಮ್ಮ ಅಧಿಕಾರವನ್ನು ಈಗ ತಾತ್ಪೂರ್ತಿಕವಾಗಿ ನೇಮಿಸಲ್ಪಟ್ಟ ಶ್ರೀ. ಮಂಗಲದಾಸ ಪಕ್ವಾಸಾ ಇವರಿಂದ ಮುಂದಿನ ತಿಂಗಳ ದಿನಾಂಕ ೨ ರಂದು ಸ್ವೀಕರಿಸುತ್ತಾರೆಂದು ತಿಳಿಯುತ್ತದೆ. ನಮ್ಮ ಹೊಸ ರಾಜ್ಯಪಾಲರಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತೇವೆ.

ಸ್ವಾಗತ ಭಾಷಣ

[ದಿನಾಂಕ ೧೩-೧-೧೯೫೫ ರಂದು ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಆ ಕಾಲೇಜದ ಪ್ರಥಮ ಪ್ರಿನ್ಸಿಪಾಲರಾದ ಕೈ. ವಾ. ಡೆಪ್ಯೂಟಿ ಚೆನ್ನಬಸವಪ್ಪನವರ ಭಾವಚಿತ್ರದ ಅನಾವರಣವನ್ನು ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಗಳಾದ ಶ್ರೀ. ದಿನಕರರಾವ ದೇಸಾಯಿ ಅವರು ನೆರವೇರಿಸಿದ ಸಮಯದಲ್ಲಿ ಕಾಲೇಜದ ಪ್ರಿನ್ಸಿಪಾಲರು ಮಾಡಿದ ಸ್ವಾಗತ ಭಾಷಣವನ್ನು ಇಲ್ಲಿ ಕೊಡಲಾಗಿದೆ. ಪ್ರ. ಸಂ.]

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ರ್‍ಯಾಂಗ್ಲರ ಡಿ. ಸಿ. ಪಾವಟೆಯವರು, ಶಿಕ್ಷಣ ಖಾತೆಯ ಉಪಮಂತ್ರಿಗಳಾದ ಶ್ರೀಮತಿ ಇಂದುಮತಿ ಶೇಟರೂ, ಒಕ್ಕಲತನ ಹಾಗು ಅರಣ್ಯಖಾತೆಗಳ ಉಪಮಂತ್ರಿಗಳಾದ ಶ್ರೀ. ಕೆ. ಎಫ್. ಪಾಟೀಲರೂ ಹಾಗೂ ಪ್ರಮುಖ ನಾಗರಿಕರೂ ಸಭೆಯಲ್ಲಿ ಉಪಸ್ಥಿತರಿದ್ದರು.

ಸನ್ಮಾನ್ಯ ಶಿಕ್ಷಣ ಮಂತ್ರಿಗಳೇ, ಹಾಗೂ ಬಂಧು-ಭಗಿನಿಯರೇ,

ಕರ್ನಾಟಕದ ಹಿರಿಯ ಸಂಸ್ಥೆಯಾದ ಈ ನಮ್ಮ ಕಾಲೇಜಕ್ಕೆ ಇಂದಿನ ಶುಭ ಪ್ರಸಂಗದಲ್ಲಿ ಭಾಗವಹಿಸಲು ಆಗಮಿಸಿದ ತಮ್ಮೆಲ್ಲರಿಗೆ ಹಾರ್ದಿಕ ಸ್ವಾಗತ ನೀಡಲು ಇಲ್ಲಿಯ ಶಿಕ್ಷಕ - ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ತುಂಬಾ ಆನಂದವೆನಿಸುತ್ತದೆ. ಈ ಸಂಸ್ಥೆಯ ಮೊದಲನೆಯ ಪ್ರಿನ್ಸಿಪಾಲರಾದ ಡೆಪ್ಯೂಟಿ ಚೆನ್ನಬಸವಪ್ಪನವರ ಭಾವಚಿತ್ರದ ಅನಾವರಣವು ಈ ಸಂಸ್ಥೆಯ ಇತಿಹಾಸದಲ್ಲಿಯೇ ಸುವರ್ಣಾಕ್ಷರಗಳಿಂದ ಬರೆದಿಡತಕ್ಕ ಸಂಗತಿಯಾಗಿದೆ. ಈ ಅನಾವರಣವನ್ನು ನಮ್ಮ ರಾಜ್ಯದ ಮಾನ್ಯ ಶಿಕ್ಷಣ ಮಂತ್ರಿಗಳು ನೆರವೇರಿಸಲು ಒಪ್ಪಿ ಇಲ್ಲಿಗೆ ದಯಮಾಡಿಸಿದ್ದುದು ನಮಗೆಲ್ಲರಿಗೆ ಹೆಚ್ಚಿನ ಹರ್ಷವನ್ನೂ, ಅಭಿಮಾನವನ್ನೂ ಉಂಟು ಮಾಡಿದೆ. ಸಂಸ್ಥೆಯ ಪರವಾಗಿ ಮಾನ್ಯ ಮಂತ್ರಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಶುಭ ಪ್ರಸಂಗಕ್ಕೆ ಉಪಮಂತ್ರಿಗಳು ಸಹ ದಯಮಾಡಿ ಆಗಮಿಸಿದ್ದಕ್ಕೆ ಅವರಿಗೂ ನಮ್ಮ ಹಾರ್ದಿಕ ಸ್ವಾಗತ.

ಶಿಕ್ಷಣಾಭಿಮಾನಿಗಳೇ, ಒಂದು ಶತಮಾನದ ವರೆಗೆ ಕರ್ನಾಟಕಕ್ಕೆ ಆದರಣೀಯ ಸೇವೆ ಸಲ್ಲಿಸಿದ ಈ ಮಹಾಸಂಸ್ಥೆಗೆ ಇಷ್ಟು ಉಜ್ವಲವಾದ ದೀರ್ಘಾಯುಷ್ಯ ಬಂದುದು ಕೈ. ವಾ. ಡೆಪ್ಯೂಟಿ ಚೆನ್ನಬಸವಪ್ಪನವರು ಪಟ್ಟ ಪರಿಶ್ರಮವೇ ಕಾರಣ. ನಮ್ಮ ಈ ಕಾಲೇಜು ೧೮೫೭ ರಲ್ಲಿ ಸ್ಥಾಪಿಸಲ್ಪಟ್ಟಿತೆಂದೂ ಡೆಪ್ಯೂಟಿ ಚೆನ್ನಬಸವಪ್ಪನವರು ಇದರ ಮುಖ್ಯಾಧ್ಯಾಪಕರಾಗಿದ್ದರೆಂದೂ ತಿಳಿಯುತ್ತಿದೆ. ಆರಂಭದಲ್ಲಿ ೯ ವಿದ್ಯಾರ್ಥಿಗಳಿದ್ದರೆಂದೂ ಇಡೀ ಜಿಲ್ಹೆಯಲ್ಲಿ ಕನ್ನಡ ಸಾಲೆಗಳು ೧೨ ಮಾತ್ರ ಇದ್ದವೆಂದೂ ಆಗಿನ ಪರಿಸ್ಥಿಯು ಕನ್ನಡದ ಬೆಳವಣಿಗೆಗೆ ಅನಾನುಕೂಲವಾಗಿತ್ತೆಂದೂ ಕಂಡು ಬರುತ್ತದೆ. ಕರ್ನಾಟಕದ ಆಗಿನ ಅಜ್ಞಾನ-ಅಂಧಃಕಾರಗಳ ನೈಜ ಸ್ಥಿತಿಯನ್ನರಿತರೆ ಮಾತ್ರ ಚೆನ್ನಬಸವಪ್ಪನವರ ಮಹತ್ಕಾರ್ಯದ ಘನತೆಯು ಹೊಳೆಯದೆ ಇರದು. ಇದೇ ಶಹರದ ಸಾಮಾನ್ಯ ಮನೆತನವೊಂದರಲ್ಲಿ ೧೮೩೩ ರಲ್ಲಿ ಹುಟ್ಟಿದ ಚೆನ್ನಬಸವಪ್ಪನವರು ಚಿಕ್ಕಂದಿನಲ್ಲಿ ತಂದೆಯನ್ನು ಕಳೆದುಕೊಂಡು ತಾಯಿಯ ನೆರವಿನಿಂದ ಪ್ರಾಥಮಿಕ ಶಿಕ್ಷಣವನ್ನು

ಮುಗಿಸಿ ಮಾಧ್ಯಮಿಕ ಶಿಕ್ಷಣಕ್ಕಾಗಿ ಪುಣೆಗೆ ನಡೆಯುತ್ತ ಹೋಗಿ ಎಂಜನಿಯರಿಂಗ ಕಾಲೇಜದ ಪದವೀಧರರಾಗಿ ಅಲ್ಲಿಯೇ ಕೆಲವು ಕಾಲ ಪ್ರೊಫೆಸರರಾಗಿ ದುಡಿದು ಧಾರವಾಡಕ್ಕೆ ಮರಳಿ ಬಂದು ವಿದ್ಯಾಖಾತೆಯನ್ನು ಸೇರಿ ಆಗ "ನಾರ್ಮಲ್ ಕ್ಲಾಸ" ಎಂಬ ಹೆಸರಿನಿಂದ ಸ್ಥಾಪಿತವಾದ ಈ ಕಾಲೇಜದ ಮುಖ್ಯಾಧ್ಯಾಪಕರಾದರು. ೨೨–೨೩ರ ತಾರುಣ್ಯಾವಸ್ಥೆಯಲ್ಲಿಯೇ ಕನ್ನಡ ಸಾಲೆಗಳನ್ನು ಸ್ಥಾಪಿಸುವ, ಕನ್ನಡ ಪುಸ್ತಕಗಳನ್ನು ರಚಿಸುವ, ಹಳ್ಳಿಗಳಲ್ಲಿ ವಿದ್ಯಾಪ್ರಸಾರವನ್ನು ಮಾಡುವ ಪವಿತ್ರ ಕಾರ್ಯವನ್ನು ಕೈಕೊಂಡು ಜಯಶೀಲರಾದರು. ಈ ಕಾಲೇಜು ೧೮೬೫ರಲ್ಲಿ ಬೆಳಗಾಂವಿಗೆ ಸ್ಥಳಾಂತರ ಹೊಂದಲು ಚೆನ್ನಬಸವಪ್ಪನವರು ಆ ಜಿಲ್ಹೆಯ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ನೇಮಿಸಲ್ಪಟ್ಟರು. ಶಾಲೆಗಳಿಗೆ ಭೆಟ್ಟಿಕೊಟ್ಟು ಶಿಕ್ಷಕರಿಗೆ ತರಬೇತಿಹೊಂದಲು ಉಪದೇಶಿಸಿದರ ಪರಿಣಾಮವಾಗಿ ಕಾಲೇಜದ ವಿದ್ಯಾರ್ಥಿಗಳ ಸಂಖ್ಯೆಯು ಬೆಳೆಯಲು ಚೆನ್ನಬಸವಪ್ಪನವರು ಮುಖ್ಯಾಧ್ಯಾಪಕರಾಗಿ ಮತ್ತೆ ನಿಯಮಿಸಲ್ಪಟ್ಟರು. ಈ ಸಂಸ್ಥೆಯನ್ನು ಇನ್ನೂ ಊರ್ಜಿತಾವಸ್ಥೆಗೆ ಒಯ್ಯಬೇಕೆಂಬ ಸದಿಚ್ಛೆಯಿಂದ ಅವಿಶ್ರಾಂತವಾಗಿ ದುಡಿದದ್ದರ ಫಲವಾಗಿ ೧೮೬೭ರಲ್ಲಿ ಈ ಸಂಸ್ಥೆಯು ಕಾಲೇಜದ ದರ್ಜೆಗೆ ಏರಿತು ಮತ್ತು ಚೆನ್ನಬಸವಪ್ಪನವರು ಮೊದಲನೆಯ ಪ್ರಿನ್ಸಿಪಾಲರಾದರು. ಆ ಕಾಲಕ್ಕೆ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿದ್ದ ರಸೆಲ್ ಸಾಹೇಬರು ಕನ್ನಡದ ಮುನ್ನಡೆಗೆ ಚೆನ್ನಬಸವಪ್ಪನವರೇ ಯೋಗ್ಯರೆಂದು ಅವರನ್ನು ಪುನಃ ಡೆಪ್ಯೂಟಿ ಇನಸ್ಪೆಕ್ಟರರೆಂದು ನೇಮಿಸಿದರು. ಚೆನ್ನಬಸವಪ್ಪನವರು ತಮ್ಮ ಅಧಿಕಾರದ ಬಲವನ್ನೂ, ಮೇಲಧಿಕಾರಿಗಳ ಪ್ರೇಮವನ್ನೂ, ವಾಕ್ಪಟುತ್ವವನ್ನೂ, ವ್ಯಕ್ತಿತ್ವದ ಪ್ರಭಾವವನ್ನೂ ಹಾಗು ಸೈಜವಾದ ಉತ್ಸಾಹವನ್ನೂ ಕಾಲೇಜದ ಉತ್ಕರ್ಷೆಗೂ ಕನ್ನಡ ಪ್ರಚಾರಕ್ಕೂ ಯಥೇಚ್ಛವಾಗಿ ಉಪಯೋಗಿಸಿದರು. ಶ್ರೀಮಂತಿಕೆಯ ಜೀವನವನ್ನು ಸಹಜವಾಗಿ ಸಾಗಿಸಬಹುದಾಗಿತ್ತಾದರೂ ಚೆನ್ನಬಸವಪ್ಪನವರು ಅದೆಲ್ಲವನ್ನು ಬಿಟ್ಟುಕೊಟ್ಟು ಈ ಸಂಸ್ಥೆಗೆ ದೀರ್ಘಾಯುಷ್ಯದ ಭದ್ರ ತಳಹದಿಯನ್ನು ಹಾಕುವದಕ್ಕಾಗಿಯೂ, ಕನ್ನಡಸಾಲೆಗಳನ್ನು ಹೆಚ್ಚಿಸುವದಕ್ಕಾಗಿಯೂ ಕನ್ನಡ ಗ್ರಂಥಗಳನ್ನು ರಚಿಸುವದಕ್ಕಾಗಿಯೂ ಕನ್ನಡದ ಅಭ್ಯುದಯಕ್ಕಾಗಿ ಶರೀರದ ಸೌಖ್ಯವನ್ನೂ ಶ್ರಮವನ್ನೂ ಗಣಿಸದೆ ದುಡಿದರು. ಕೇವಲ ೧೫ ಸಾಲೆಗಳಿದ್ದ ಈ ಜಿಲ್ಹೆಯಲ್ಲಿ "ಅವರ ಮರಣದ ಕಾಲಕ್ಕೆ ೩೮೧ ಸಾಲೆಗಳಾಗಿದ್ದವು." ಕನ್ನಡ ಬೆಳವಣಿಗೆಯ ಕಾರ್ಯದಲ್ಲಿ ತೊಡಗಿದಾಗ ಅವರಿಗೆ "ಉಪವಾಸವು ಊಟವಾಗಿತ್ತು" "ಬಿಸಲು ಬೆಳ್ದಿಂಗಳಾಗಿತ್ತು" 'ಕಾಯಕವೇ ಕೈಲಾಸ'ವೆಂಬುದು ಅವರ ಜೀವನ ಸೂತ್ರವಾಗಿತ್ತು.

ರಸೆಲ್ ಸಾಹೇಬರು ರಜೆಯ ಮೇಲೆ ಹೋದಾಗೆಲ್ಲ ಚೆನ್ನಬಸವಪ್ಪನವರೇ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ಕೆಲಸಮಾಡುತ್ತಿದ್ದರು. ಅವರಲ್ಲಿ ಜನಾಕರ್ಷಣ ಶಕ್ತಿಯು ಬಹಳವಿತ್ತು. ಹೀಗಿದ್ದ ಚೆನ್ನಬಸವಪ್ಪನವರು ನಾಡಿನ ದುರ್ದೈವದಿಂದ ತಮ್ಮ ೪೭ನೆಯ ವಯಸ್ಸಿನಲ್ಲಿಯೇ ಅಂದರೆ ೧೮೮೧ ಜನೇವರಿ ೪ನೆಯ ದಿನ 'ಕೈಲಾಸವಾಸಿಯಾದರು.' ಬಾಲ್ಯಾವಸ್ಥೆಯಲ್ಲಿದ್ದ ಈ ಸಂಸ್ಥೆಯನ್ನು ಪೋಷಿಸಿ, ರಕ್ಷಿಸಿ, ಬೆಳಸಿ ದೊಡ್ಡದನ್ನಾಗಿ ಮಾಡಿ ನಾಡು–ನುಡಿ ಸೇವೆಯಿಂದ ಜನತೆಗೆ ಮಹದುಪಕಾರಗೈದ ಈ ಮಹಾಪುರುಷನ ಭಾವಚಿತ್ರವು ಇಲ್ಲಿಯ ಅಧ್ಯಾಪಕರಿಗೂ ಮತ್ತು ಶಿಕ್ಷಕ ವಿದ್ಯಾರ್ಥಿಗಳಿಗೂ ಸ್ಫೂರ್ತಿಯನ್ನೀಯಲೆಂಬ ಉದ್ದೇಶದಿಂದಲೂ ಅವರ ಮಹದುಪಕಾರವನ್ನು ಸ್ಮರಿಸುವ ಪವಿತ್ರ ಭಾವನೆಯಿಂದಲೂ ಅವರ ಭಾವಚಿತ್ರವನ್ನು ಈ ಸಭಾಮಂದಿರದಲ್ಲಿ ಅಲಂಕರಿಸುವ ವಿಚಾರ ಬಂದಾಗ ನಮ್ಮ ಮಿತ್ರರಾದ ಶ್ರೀ. ಬಿ. ಎಸ್. ಗೌಡರ, ಲ್ಯಾಂಡ ಅ್ಯಕ್ವಿಜಿಶನ್ ಆಫೀಸರ, ಧಾರವಾಡ ಇವರು ಈ ಭಾವಚಿತ್ರವನ್ನು ಕಾಣಿಕೆಯಾಗಿ ಕೊಡಲು ಸ್ವಯಂ ಸ್ಫೂರ್ತಿಯಿಂದ ಮುಂದೆ ಬಂದದ್ದರಿಂದ ನಮಗೆ ಅತ್ಯಾನಂದವಾಯಿತು.

ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬರಲು ಮಾನ್ಯ ಶಿಕ್ಷಣ ಮಂತ್ರಿಗಳವರು ಸಮ್ಮತಿಸಿದ್ದುದು ನಮ್ಮೆಲ್ಲರ ಸೌಭಾಗ್ಯ. ೧೦೦ ವರ್ಷಗಳ ಹಿಂದೆಯೇ ಪ್ರತಿಯೊಂದು ಹಳ್ಳಿಗೂ ಶಾಲೆ ಇರಲೇಬೇಕೆಂಬ ಡೆಪ್ಯೂಟಿ ಚೆನ್ನಬಸವಪ್ಪನವರ ಕನಸು ಇಂದಿನ ಮುಖ್ಯ ಅತಿಥಿಗಳಾದ ಶಿಕ್ಷಣ ಮಂತ್ರಿಗಳ ಆಡಳಿತದಲ್ಲಿ ನನಸಾಯಿತು. ಮೊನ್ನೆ ಮೊನ್ನೆ ಸಬರಕಾಂತಾದ ಪ್ರಾಥಮಿಕ

ಶಿಕ್ಷಕರ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿ ಮಂತ್ರಿವರ್ಯರು ಈ ವರ್ಷದಲ್ಲಿ ಪ್ರತಿಯೊಂದು ಹಳ್ಳಿಗೂ ಶೈಕ್ಷಣಿಕ ಸೌಕರ್ಯವನ್ನು ಒದಗಿಸುವ ನಿರ್ಧಾರವನ್ನು ಸರಕಾರವು ಕೈಕೊಂಡಿದೆಯೆಂದು ಹೇಳಿ ನಮ್ಮ ರಾಜ್ಯವು ಉಳಿದ ರಾಜ್ಯಗಳಿಗಿಂತ ಒಂದು ಹೆಜ್ಜೆಯನ್ನು ಮುಂದಿಟ್ಟಿದೆಂಬುದನ್ನು ಸುಸ್ಪಷ್ಟಮಾಡಿರುವರು. ಜನತೆಯು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವದರಲ್ಲಿ ಯಾವ ಆಶ್ಚರ್ಯವೂ ಇಲ್ಲ ಈ ದೃಷ್ಟಿಯಿಂದ ಇಂದಿನ ಸಮಾರಂಭಕ್ಕೆ ನಮ್ಮ ಮಂತ್ರಿವರ್ಯರು ಅಧ್ಯಕ್ಷತೆ ವಹಿಸುವದು ದೈವೀಸಂಕಲ್ಪವೆಂದು ತಿಳಿಯಬಹುದು.

ಬಂಧು ಭಗಿನಿಯರೇ, ಇನ್ನೇನೂ ಹೆಚ್ಚಿಗೆ ಹೇಳಬಯಸುವದಿಲ್ಲ. ಜುಲೈತಿಂಗಳಾಂತ್ಯಕ್ಕೆ ಶಿಕ್ಷಣದ ಡೆಪ್ಯೂಟಿ ಮಂತ್ರಿಗಳಾದ ಶ್ರೀಮತಿ ಇಂದುಮತಿ ಸೇಟರವರು ನಮ್ಮ ಸಂಸ್ಥೆಯನ್ನು ಸಂದರ್ಶಿಸಿ ವನಮಹೋತ್ಸವದ ಪ್ರಾರಂಭೋತ್ಸವವನ್ನು ಮಾಡಿ ಒಂದು ಗಿಡವನ್ನು ಹಚ್ಚಿದರು. ಅದು ಒಳ್ಳೇ ಭರದಿಂದ ಬೆಳೆಯಹತ್ತಿದೆಯೆಂದು ಅವರಿಗೆ ಸಂತೋಷಪೂರ್ವಕವಾಗಿ ತಿಳಿಸುತ್ತೇನೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಅಕ್ಟೋಬರ ೨ ರಂದು ಇಲ್ಲಿಗೆ ದಯ ಮಾಡಿಸಿ ಮಹಾತ್ಮಾ ಗಾಂಧಿಯವರ ಜಯಂತ್ಯೋತ್ಸವವನ್ನು ಇದೇ ಮಂದಿರದಲ್ಲಿಯೇ ಉದ್ಘಾಟಿಸಿದರು. ಅದರಂತೆ ತಾವೂ ಇಂದಿನ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬರಲು ದಯ ತೋರಿಸಿರುವಿರಿ. ಈ ಪ್ರಕಾರ ನಾವು ಇಲ್ಲಿ ನಡೆಸುತ್ತಿರುವ ಅಲ್ಪ ಕಾರ್ಯವನ್ನು ನೋಡಲೋಸುಗ ತಾವೆಲ್ಲ ನಮ್ಮ ಸಂಸ್ಥೆಗೆ ಭೆಟ್ಟಿ ಕೊಟ್ಟಿರುವದು ಈ ವರ್ಷದ ವೈಶಿಷ್ಟ್ಯ. ಇದೇ ನಮ್ಮ ಭಾಗ್ಯ. ಕೊನೆಯದಾಗಿ ಈ ಸಂಸ್ಥೆಯನ್ನು ಪೋಷಿಸಿ ಬೆಳೆಸಿ ಒಂದು ಶತಮಾನದ ವರೆಗೆ ಅವ್ಯಾಹತವಾಗಿ ಕನ್ನಡ-ನಾಡು ನುಡಿಗಳ ಸೇವೆ ಮಾಡಿದ ಇನ್ನುಳಿದ ಪ್ರಿನ್ಸಿಪಾಲರಾದ ಭುಜಂಗರಾವ ಹುಯಿಲಗೋಳ, ವೆಂಕಟ ರಂಗೋ ಕಟ್ಟಿ, ಕರಂದೀಕರರೂ, ದಿ. ಬ. ಕೊದ್ದ; ರಾ. ಬ. ಜೋಶಿ, ಮಹಿಷಿ, ಪೆರೂರ, ದೇಶಪಾಂಡೆ, ರಾ. ಸಾ. ಮುಗದಾಳ ಹಾಗು ಆಪತ್ತುಕಾಲ ಬಂದಾಗ ತಮ್ಮ ನೆರವನ್ನು ನೀಡಿದ ಸರ್. ಎಸ್. ಟಿ. ಕಂಬಳಿ ಹಾಗೂ ವಿಶ್ವನಾಥ ಜೋಗ ಇವರೆಲ್ಲರ ಉಪಕಾರವನ್ನು ಒಳ್ಳೇ ಅಭಿಮಾನದಿಂದ ಸ್ಮರಿಸಿ ತಾವೆಲ್ಲರೂ ಇಷ್ಟು ಹೊತ್ತಿನವರೆಗೆ ಶಾಂತಚಿತ್ತದಿಂದ ಕೇಳಿದ ಬಗ್ಗೆ ತಮ್ಮ ಉಪಕಾರವನ್ನು ನೆನಿಸಿ ಈ ವರದಿಯನ್ನು ಮುಗಿಸುತ್ತೇನೆ.

ಅಪೂರ್ವ ಯಶಸ್ಸು

ಹುಕ್ಕೇರಿ ತಾಲೂಕಿನ ಮದಿಹಳ್ಳಿ ಕನ್ನಡ ಗಂಡು ಮಕ್ಕಳ ಶಾಲೆಯ ಉಪಶಿಕ್ಷಕರಾದ ಶ್ರೀಯುತ ರಾಮಚಂದ್ರ ಗೋವಿಂದಪ್ಪ ಸಂಕ್ರಿ ಅವರು ೧೯೫೪ ನೆಯ ಅಕ್ಟೋಬರದಲ್ಲಿ ಜರುಗಿದ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ಇಡೀ ಮುಂಬಯಿ ರಾಜ್ಯಕ್ಕೆ ೧೫ ನೆಯ ನಂಬರವನ್ನು ಪಡೆದದ್ದು ಪ್ರಾಥಮಿಕ ಶಿಕ್ಷಕವೃಂದಕ್ಕೆ ತುಂಬಾ ಭೂಷಣಾಸ್ಪದವಾದುದಾಗಿರುವದು. ಇವರು ಹುಕ್ಕೇರಿಯ ಕಾಡಸಿದ್ಧೇಶ್ವರ ಹಾಯಸ್ಕೂಲಿನಿಂದ ಪರೀಕ್ಷೆಗೆ ಕುಳಿತಿದ್ದರು.

ಸಂದೇಶಗಳು

(ಕನ್ನಡ ಭಾಷಾ-ಭೂಷಣರೂ ಮೊದಲನೆಯ ಪ್ರಿನ್ಸಿಪಾಲರೂ ಆದ ಕೈ. ವಾ. ಡೆಪ್ಯೂಟಿ ಚೆನ್ನಬಸವಪ್ಪನವರ ಭಾವಚಿತ್ರದ ಅನಾವರಣವು ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಗಳಾದ ಸನ್ಮಾನ್ಯ ಶ್ರೀ ದಿನಕರರಾವ ದೇಸಾಯಿ ಇವರ ಹಸ್ತದಿಂದ ದಿನಾಂಕ ೧೩-೧- ೧೯೫೫ ರಂದು ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ನೆರವೇರಿತು. ಈ ಶುಭ ಪ್ರಸಂಗಕ್ಕೆ ಯಶಸ್ಸನ್ನು ಕೋರಿ ಬಂದ ಸಂದೇಶಗಳಲ್ಲಿ ಕೆಲವನ್ನು ಆಯ್ದು ಇಲ್ಲಿ ಸಂಗ್ರಹಿಸಿ ಕೊಟ್ಟಲಾಗಿದೆ.) ಪ್ರ. ಸಂ.

" ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಏಳಿಗೆಗೆ ತರಲು ದೂರ ದೃಷ್ಟಿಯಿಂದ ಪ್ರಾರಂಭಿಸಿದ ಚೆನ್ನಬಸವಪ್ಪನವರು ನಿಜವಾಗಿಯೂ ಮಹಾಪುರುಷರು. ನಿಮ್ಮ ಸಂಸ್ಥೆಯು ತರುಣಾವಸ್ಥೆಯಲ್ಲಿದ್ದಾಗ ಆದನ್ನು ರಕ್ಷಿಸಿ ಬೆಳೆಸಿದ ಕೀರ್ತಿ ಅವರದೇ. ಅವರ ಚರಿತ್ರೆಯು ನಿಜವಾಗಿಯೂ ಬೋಧಪ್ರದವಾಗಿದೆ. ಆಗಿನ ಕಾಲದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಅವರಷ್ಟು ಸೇವೆ ಸಲ್ಲಿಸಿದವರು ಮತ್ತೊಬ್ಬರಿಲ್ಲ. ಅಂಥ ಮಹನೀಯರ ಭಾವಚಿತ್ರವು ನಿಮ್ಮ ಸಂಸ್ಥೆಯಲ್ಲಿರುವದು ಯಥಾಯೋಗ್ಯ. ಶಿಕ್ಷಣ ಮಂತ್ರಿಗಳಿಂದ ಅನಾವರಣ ನಡೆಯುವದು ಒಳ್ಳೇ ಸಂತೋಷದ ಮಾತು. ನಿಮ್ಮ ಸಮಾರಂಭಕ್ಕೆ ಪೂರ್ಣ ಯಶ ದೊರೆಯಲಿ."

ಎಸ್. ಟಿ. ಕಂಬಳಿ
ಹಿಂದಿನ ಶಿಕ್ಷಣ ಮಂತ್ರಿಗಳು,
(ಮುಂಬಯಿ ರಾಜ್ಯ), ಹುಬ್ಬಳ್ಳಿ.

" ಕೈ. ವಾ. ಚೆನ್ನಬಸವಪ್ಪನವರು ಕನ್ನಡ ಭಾಷೆಗೆ ಸಲ್ಲಿಸಿದ ಸೇವೆಯು ಅಪಾರವಾಗಿದೆ. ಆ ಬಗ್ಗೆ ನಾವೆಲ್ಲರೂ ಕೃತಜ್ಞರಾಗಿದ್ದೇವೆ."

ದತ್ತಾತ್ರೇಯ ಕರಮರಕರ
ವಾಣಿಜ್ಯ ಮಂತ್ರಿ (ಕೇಂದ್ರ ಸರಕಾರ)

"ಅವರು ತಮ್ಮ ಜನ್ಮಭೂಮಿಯ ಪುನರುಜ್ಜೀವನಕ್ಕಾಗಿ ಅಮೋಘ ಸೇವೆಯನ್ನು ಸಲ್ಲಿಸಿದರು. ಕಳೆದ ಶತಮಾನದ ಮಧ್ಯದಲ್ಲಿ ಕರ್ನಾಟಕದ ಸಾಂಸ್ಕೃತಿಕ ಏಳಿಗೆಯ ಅಡಿಗಲ್ಲನ್ನಿಟ್ಟರು. ಅವರು ವಿದ್ವಾಂಸರೂ ಪ್ರಸಿದ್ಧ ಗಣಿತ-ಶಾಸ್ತ್ರಜ್ಞರೂ ಮತ್ತು ಕನ್ನಡ ಲೇಖಕರೂ ಇದ್ದರು. ಅವರು ಸೇವೆ ಸಲ್ಲಿಸಿದಲ್ಲೆಲ್ಲ ಕನ್ನಡ ಸಾಲೆಗಳನ್ನು ಸ್ಥಾಪಿಸಿದರು. ಆಗ " ನಾರ್ಮಲ್ ಸ್ಕೂಲ್ " ವೆಂದು ಕರೆಯಲ್ಪಟ್ಟ ಈ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಮೂಲ ಗುರುಗಳಾಗಿದ್ದರು. ಪ್ರಾಥಮಿಕ ಶಾಲೆಗಳಿಗಾಗಿ ಪಠ್ಯಪುಸ್ತಕಗಳನ್ನು ಬರೆದರು. ಜಾತಿ-ಮತ-ಪಂಥಗಳ ಭೇದ-ಭಾವ ಗಣಿಸದೆ, ಪಾಂಡಿತ್ಯವಿದ್ದವರಿಗೆ ಉತ್ತೇಜನ ಕೊಟ್ಟರು. ಅವರು ನಿಜವಾದ ದೇಶಾಭಿಮಾನಿಗಳಿದ್ದು ಮತ್ತು ಕರ್ನಾಟಕದಲ್ಲಿ ಜೀವನ ಕಳೆ ತುಂಬಿದರು. ಸುಮಾರು ೭೫ ವರ್ಷಗಳ

ಹಿಂದೆ, ದೇಶದಲ್ಲಿ ಕಾರ್ಗತ್ತಲೆ ಪಸರಿಸಿದಾಗ ಈ ಪ್ರಕಾರ ಕಾರ್ಯಮಾಡಿದರು. ಈ ಪ್ರತಿಭಾವಂತ ವ್ಯಕ್ತಿಯ ಜೀವನ ಚರಿತ್ರೆಗಾಗಿ ಸಂಗತಿಗಳನ್ನು ಕಲೆ ಹಾಕಿದವರಲ್ಲಿ ನಾನೊಬ್ಬನಾದುದರಿಂದ ಅವರ ಬಗೆಗೆ ನನ್ನ ಆದರವು ಮೇಲಿನಂತಿದೆ. ಧಾರವಾಡದ ಟ್ರೇನಿಂಗ ಕಾಲೇಜದಲ್ಲಿ ಅವರ ಭಾವಚಿತ್ರದ ಅನಾವರಣ ಸಮಾರಂಭವನ್ನು ಏರ್ಪಡಿಸಿರುವ ಸಂಘಟಕರನ್ನು ನಾನು ಅಭಿನಂದಿಸುತ್ತೇನೆ."

ಫ. ಗು. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ.
ವಿಜಯಪೂರ.

" ಕರ್ನಾಟಕದಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಉಳಿಸಿದವರೂ ಬೆಳೆಸಿದವರೂ, ಉಜ್ವಲ ಕನ್ನಡ ಕುಲ ಹಾಗೂ ನೆಲಗಳ ಅಭಿಮಾನಿಗಳೂ ಉತ್ತಮೋತ್ತಮ ಶಿಕ್ಷಣ ವೇತ್ತರೂ ಪರಮ ಸತ್ಯಸಂಧರೂ, ತಮ್ಮ ನಿರ್ಮಲ ಜೀವನದಿಂದ ತಮ್ಮ ಮೇಲ್ಪಟ್ಟ ಅಧಿಕಾರಿಗಳ ಪ್ರೀತಿಗೌರವಗಳಿಗೆ ಪಾತ್ರರಾಗಿದ್ದವರೂ, ಪರಮ ಉದಾರಿಗಳೂ, ಕರ್ಮ ಯೋಗಿಗಳೂ, ಧಾರವಾಡ ಟ್ರೇನಿಂಗ ಕಾಲೇಜದ ಮೊದಲನೆಯ ಪ್ರಿನ್ಸಿಪಾಲರೂ ಆದ ಕೈ. ವಾ. ಡೆಪ್ಯೂಟಿ ಚೆನ್ನಬಸವಪ್ಪನವರ ಭಾವ ಚಿತ್ರವು ತಮ್ಮ ಕಾಲೇಜಿನಲ್ಲಿ ಓದಿ ಬುದ್ಧಿವಂತರಾಗುವ ವಿದ್ಯಾರ್ಥಿಗಳಿಗೆ ದಿವ್ಯತಮ ಜೀವನ ಸ್ಫೂರ್ತಿಯನ್ನು ಉಂಟು ಮಾಡಲಿ."

ಬಿ. ಶಿವಮೂರ್ತಿ ಶಾಸ್ತ್ರಿ
ಸಂಪಾದಕರು, ಶರಣ ಸಾಹಿತ್ಯ, ಬೆಂಗಳೂರ.

" ಧಾರವಾಡದ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಪ್ರಥಮ ಪ್ರಿನ್ಸಿಪಾಲರೆಂದು ನೇಮಕ ಹೊಂದಿ ಸುಮಾರು ಒಂದು ಶತಮಾನದನಂತರ ವಿಲಂಬವಾಗಿಯಾದರೂ ಸಾರ್ವಜನಿಕವಾಗಿ ಅವರ ಜೀವನ-ಕಾರ್ಯವನ್ನು ನಾವು ಸ್ತುತಿಸುತ್ತೇವೆ. ಇಂಥ ಕಾರ್ಯಕ್ರಮವನ್ನು ಏರ್ಪಡಿಸಿದ್ದುದಕ್ಕಾಗಿ ಪ್ರಿನ್ಸಿಪಾಲರನ್ನೂ ಅವರ ಅಧ್ಯಾಪಕವರ್ಗದವರನ್ನೂ ನಾನು ಅಭಿನಂದಿಸುತ್ತೇನೆ."

ಸರದಾರ ದಿವಾಣ ಬಹಾದ್ದೂರ
ಎಸ್. ಜೆ. ದೇಶಮುಖ (ಅಲಮೇಲ)
ವಿಜಯಪೂರ.

ಧಾರವಾಡದ ಗಂಡು ಮಕ್ಕಳ ಕನ್ನಡ ಟ್ರೇನಿಂಗ ಕಾಲೇಜದ ಪ್ರಥಮ ಪ್ರಿನ್ಸಿಪಾಲರಾದ ಕೈ. ವಾ. ಡೆಪ್ಯೂಟಿ ಚೆನ್ನಬಸವಪ್ಪನವರ ಹೆಸರು ಕನ್ನಡ ನಾಡಿನ ಮನೆಮಾತಾಗಿದೆ. ಮತ್ತು ಗತಿಸಿದ ಶಿಕ್ಷಣ ತಜ್ಞರ ನೆನಪಿಗೆ ಮನ್ನಣೆಯನ್ನೀಯಲು ಸುಸಂಧಿಯನ್ನು ಕಲ್ಪಿಸಿಕೊಟ್ಟ ಈ ಸಮಾರಂಭದ ಸಂಘಟಕರು ಎಲ್ಲರಿಂದಲೂ ಸ್ತುತಿಗೆ ಪಾತ್ರರಾಗಿರುವರು."

ಆರ್. ಎಸ್. ಮಹಾಂತಸೆಟ್ಟಿ,
ಚೇಅರಮನ್, ವ್ಯವಸ್ಥಾಪಕ ಮಂಡಳ,
ಕೆ. ಎಲ್. ಇ. ಸೋಸಾಯಿಟಿ, ಬೆಳಗಾಂವ

"ಕರ್ನಾಟಕದ ಶಿಕ್ಷಕ-ವಿದ್ಯಾರ್ಥಿಗಳಿಗೆಲ್ಲ ಕೈ. ವಾ. ಡೆಪ್ಯುಟಿ ಚೆನ್ನಬಸವಪ್ಪನವರ ಜೀವನವು ಮಾರ್ಗದರ್ಶಕವಾಗುವದರಲ್ಲಿ ಸಂದೇಹವಿಲ್ಲ. ಕಾರ್ಯಕ್ರಮವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಜಯದೇವಿಬಾಯಿ ಲಿಗಾಡೆ,

ಸೊಲ್ಲಾಪೂರ.

"ಕನ್ನಡ ನಾಡಿನ ಮಹಾಪುರುಷರಲ್ಲಿ ಗಣ್ಯರಾದ ಕೈ. ವಾ. ಡೆಪ್ಯುಟಿ ಚೆನ್ನಬಸವಪ್ಪನವರ ಭಾವ ಚಿತ್ರದ ಅನಾವರಣ ಸಮಾರಂಭವು ಯಶಸ್ವಿಯಾಗಲೆಂದು ಹಾರೈಸುತ್ತೇನೆ."

ಅರವಿಂದ ಜೋಶಿ

ಕೆ. ಎಸ್. ಎಸ್. ಕನ್ನಡ ಟ್ರೇನಿಂಗ ಕಾಲೇಜ,

ಬೆಳಗಾಂವ

"ಶಿಕ್ಷಣ ಕೇಂದ್ರದಲ್ಲಿ ದುಡಿದ ಈ ಮಹನೀಯರ ಸೇವೆ ಅಷ್ಟಿಷ್ಟಲ್ಲ. ನಿಮ್ಮ ತರಬೇತಿ ಶಿಕ್ಷಣಾಲಯದಲ್ಲಿ ಅವರ ಭಾವ ಚಿತ್ರ ಇಡುವದು ಸ್ತುತ್ಯವಾದುದು. ನಿಮ್ಮ ಸಮಾರಂಭವು ಎಲ್ಲ ರೀತಿಯಿಂದಲೂ ಯಶಸ್ವಿಯಾಗಲೆಂದು ಕೋರುತ್ತೇನೆ."

ಸಿ. ವಿ. ಜೇವೂರ

ಜಿಲ್ಹಾ ಶಿಕ್ಷಣಾಧಿಕಾರಿ, ಬೆಳಗಾಂವ

"ಗುರುವಾರ ದಿನಾಂಕ ೧೩-೧-೫೫ರಂದು ವರ್ತಮಾನಪತ್ರವನ್ನು ಓದಿದಾಗ ಕೀರ್ತಿಶೇಷ ಡೆಪ್ಯುಟಿ ಚೆನ್ನಬಸವಪ್ಪನವರ ಭಾವಚಿತ್ರದ ಅನಾವರಣದ ಸಮಾರಂಭವು ಮುಂಬೈ ರಾಜ್ಯದ ಶಿಕ್ಷಣ ಮಂತ್ರಿ ದಿನಕರರಾವರವರ ಹಿರಿತನದಲ್ಲಿ ೩-೪೫ಕ್ಕೆ ಜರುಗುವದೆಂದು ತಿಳಿದೆ. ಆ ಸಮಾರಂಭದಲ್ಲಿ ಉಪಸ್ಥಿತನಿರುವುದು ಕರ್ತವ್ಯವೆಂದು ತಿಳಿದು ಕೂಡಲೇ ಹುಬ್ಬಳ್ಳಿ ಬಸ್ ಸ್ಟೇಶನಕ್ಕೆ ಧಾವಿಸಿ ಬಂದೆ. ಗಡಿಯಾರದಲ್ಲಿ ೩ ಹೊಡೆಯಲಿಕ್ಕೆ ಇನ್ನೂ ಸ್ವಲ್ಪ ಅವಧಿ. ಬಸ್ಸಿನವರನ್ನು ಕೇಳಲು ಬಸ್ಸು ಧಾರವಾಡವನ್ನು ತಲುಪಲು ೫೦ ಮಿನಿಟುಗಳು ತಗಲುವುದೆಂದು ಹೇಳಿದರು. ಆಗ ನಿರಾಶೆಯಿಂದ ಹಿಂದಿರುಗಿದೆ. ಆದರೆ ಸಮಾರಂಭವು ಸಂಜೆ ೬ ಗಂಟೆಗೆ ಜರುಗಿತೆಂದು ಕೇಳಿದಾಗ ಹೃದಯಕ್ಕೆ ಇನ್ನಷ್ಟು ಅಸಮಾಧಾನವೆನಿಸಿತು. ಡೆಪ್ಯುಟಿ ಚೆನ್ನಬಸವಪ್ಪನವರು ಕನ್ನಡಕ್ಕಾಗಿ ಸೇವೆ ಸಲ್ಲಿಸಿದ ಕಾಲ, ಅವರು ಆ ಬಗ್ಗೆ ವಹಿಸಿದ ಶ್ರಮ, ಅವರು ಕಂಡುಕೊಂಡ ಕರ್ನಾಟಕದ ದರ್ಶನ ಇವೆಲ್ಲವುಗಳನ್ನು ಮನಸ್ಸಿನಲ್ಲಿ ತಂದರೆ ಅವರ ಪ್ರಭಾವಶಾಲಿ ವ್ಯಕ್ತಿತ್ವವನ್ನು ಇಂದಿನ ತಕ್ಕಡಿಯಲ್ಲಿ ತೂಗಿ ನೋಡಲಿಕ್ಕೆ ಬಾರದು. ಅಂತಹ ಮಹಾಪುರುಷರ ಸ್ಮೃತಿ ದಿನವನ್ನು ೭೫ ವರುಷಗಳ ನಂತರವಾದರೂ ಮಾಡಿದರಲ್ಲಾ ಎಂದು ಉಪಮಂತ್ರಿಗಳಾದ ಶ್ರೀ. ಕೆ. ಎಫ್. ಪಾಟೀಲರವರು ಹೇಳಿದುದರಲ್ಲಿ ಔಚಿತ್ಯ ತುಂಬಿದೆ. ಇಂತಹ ಶುಭ ಪ್ರಸಂಗದಲ್ಲಿ ಹಾಜರಿರುವದಕ್ಕೆ ಹೃದಯ ಹಾರೈಸಿದ್ದರೂ, ಹರಕೆ ಕೈಗೂಡಲಿಲ್ಲವೆಂದು ಕೆಡಕೆನಿಸಿ ಅಂತೆಯೇ ಮಾರನೇ ದಿನ ನಾನೊಬ್ಬನೇ ಬಂದು ಭಾವಚಿತ್ರದ ಕೆಳಗೆ ಸ್ವಲ್ಪ ಹೊತ್ತು ಕುಳಿತ ಸಾಂತ್ವನ ಮಾಡಿಕೊಂಡು ತಿರುಗಿದೆ. ಈ ಭಾವಚಿತ್ರವು ಶಿಕ್ಷಕ ಹಾಗೂ ವಿದ್ಯಾರ್ಥಿ-ವೃಂದಕ್ಕೆ ಸ್ಫೂರ್ತಿದಾಯಕವಾಗಲೆಂದು ದೇವರಲ್ಲಿ ಬೇಡುವೆ.

—ಸ. ಪ. ಗಾಂವಕರ

ಇವುಗಳಲ್ಲದೆ ಕೆಳಗಿನ ಮಹನೀಯರಿಂದಲೂ ಸಂದೇಶಗಳು ಬಂದಿವೆ :—

(೧) ಶ್ರೀ. ರಾ. ರು. ಕುಪ್ಪಸದ, ಜಿಲ್ಲಾ ಶಿಕ್ಷಣಾಧಿಕಾರಿಗಳು, ಕಾರವಾರ.

(೨) ಶ್ರೀ. ಜಿ. ಎ. ಜಂಬಗಿ, ಹೆಡ್‌ಮಾಸ್ತರ, ಬಸವೇಶ್ವರ ಮಾಧ್ಯಮಿಕ ಶಾಲೆ, ಬಾಗಲಕೋಟೆ.

(೩) ಪ್ರಾ. ಕೆ. ಜಿ. ಕುಂದಣಗಾರ, ಆರ್. ಪಿ. ಡಿ. ಕಾಲೇಜ, ಬೆಳಗಾಂವ.

(೪) ಶ್ರೀ. ಎಮ್. ಎಸ್. ಹಳ್ಳೂರ, ಪ್ರಿನ್ಸಿಪಾಲ, ಸಂಗಮೇಶ್ವರ ಕಾಲೇಜ, ಸೊಲ್ಲಾಪೂರ

(೫) ಶ್ರೀ. ವ್ಹಿ. ಬಿ. ಶೀಗೀಹಳ್ಳಿ, ನಿವೃತ್ತ ಶಾಲಾ ಅಧಿಕಾರಿಗಳ ರವರು.

ಸಂಗ್ರಾಹಕರು—ಅನುವಾದಕರು:

ವಿ. ಅಂ. ಉಮರಾಣಿ

— ಪ್ರಕಟನೆ —

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

(೧೯೫೪ ನೆಯ ಡಿಸೆಂಬರ ಸಂಚಿಕೆಯಲ್ಲಿ ೨೭ ನೆಯ ಪುಟದ ಮೇಲೆ ಪ್ರಕಟಿಸಲಾದ ವಿಶೇಷ ಶುದ್ಧಿಯ ಸ್ಪಷ್ಟೀಕರಣ)

ಬೆಳಗಾಂವ ಜಿಲ್ಲೆಯಲ್ಲಿ ಪ್ರಾದೇಶಿಕ ಭಾಷೆ ಇಲ್ಲವೆ ಭಾಷೆಗಳನ್ನು ನಿರ್ಧರಿಸುವ ಪ್ರಶ್ನೆಯನ್ನು ಮುಂಬಯಿ ಸರಕಾರದವರು ಕೆಲವು ಕಾಲ ಮುಂದೂಡಿದ್ದರಿಂದ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಅಭ್ಯಾಸ ಪತ್ರಿಕೆಯ ೧ ನೆಯ ಸದರಿನಲ್ಲಿಯ ೩ ನೆಯ ಪೇಪರ (ಅಂದರೆ "ಸ್ಥಾನಿಕ ಪ್ರಾದೇಶಿಕ ಭಾಷೆ"ಯ ಪೇಪರ) ಬಗ್ಗೆ ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಇವರಿಂದ 'ಕನ್ನಡ ಪ್ರಾಥಮಿಕ ಶಿಕ್ಷಣ'ದಲ್ಲಿ ಪ್ರಕಟಿಸಲಾದ ಮತ್ತು ಈ ಆಫೀಸಿನ ದಿನಾಂಕ ೨೯-೧೦-೧೯೫೪ ನೆಯ ನಂ S೬೨-(G) ೨೫೯-D ಪತ್ರದಲ್ಲಿಯ ಹುಕುಮುಗಳು ಬೆಳಗಾವ ಜಿಲ್ಲೆಯ ಉಮೇದವಾರರಿಗೆ ಮಾತ್ರ ಸಂಬಂಧಿಸಿರುವವು. ಕರ್ನಾಟಕದಲ್ಲಿಯ ಉಳಿದ ಜಿಲ್ಲೆಗಳು ಬೆಳಗಾವ ಜಿಲ್ಲೆಯ ಶ್ರೇಣಿಯಲ್ಲಿ ಬರುವದಿಲ್ಲ ಮತ್ತು ಮೇಲೆ ನಮೂದಿಸಲಾದ ಹುಕುಮುಗಳು ಕರ್ನಾಟಕದ ಉಳಿದ ಮೂರು ಜಿಲ್ಲೆಗಳಿಂದ ಪರೀಕ್ಷೆಗೆ ಕೂಡ್ರುವ ಉಮೇದವಾರರಿಗೆ ಅನ್ವಯಿಸುವದಿಲ್ಲ. ಈ ವಿಷಯದಲ್ಲಿ ದಿನಾಂಕ ೮-೬-೧೯೫೩ ರಂದು ನಂ S-೬೨ (G) -೨೫೯-D ದಲ್ಲಿ ಹೊರಡಿಸಿದ ಹುಕುಮುಗಳಲ್ಲಿ ಯಾವದೇ ಬದಲಾವಣೆ ಇಲ್ಲ. ಈ ಸಂಬಂಧದಲ್ಲಿ ಶಿಕ್ಷಣಾಧಿಕಾರಿ, ಧಾರವಾಡ ಕಾರವಾರ ಮತ್ತು ವಿಜಾಪೂರ ಇವರಿಗೆ ಜಿಲ್ಲಾ ಶಿಕ್ಷಣಾಧಿಕಾರಿ, ಬೆಳಗಾಂವ ಇವರು ನಿಜ ಪರಿಸ್ಥಿತಿಯನ್ನು ಸ್ಪಷ್ಟೀಕರಿಸಲು ಬರೆದ ದಿನಾಂಕ ೨೪-೧೨-೧೯೫೪ರ ನಂ. ೧೮/PSC/ REG—೨೮೪ನೆಯ ಪತ್ರವನ್ನು ನೋಡಿರಿ.

ನಂ. S ೬೨ (G)—೨೫೯—D
ಪೂನಾ, ೧೩-೧-೧೯೫೫

ಸಹಿ — X X X
ಡಾಯರೆಕ್ಟರ ಆಫ ಎಜ್ಯುಕೇಶನ್ ಇವರ ಪರವಾಗಿ

ಶಿಕ್ಷಣ ಮಂತ್ರಿ ಶ್ರೀ. ದಿನಕರರಾವ ದೇಸಾಯಿ ಇವರ ಭಾಷಣ

" ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಗುರುಗಳೇ, ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೇ ಹಾಗೂ ಬಂಧು ಭಗಿನಿಯರೇ,

ಕೈ. ವಾ. ಡೆಪ್ಯುಟಿ ಚೆನ್ನಬಸವಪ್ಪನವರಂಥ ಒಬ್ಬ ಮಹಾಪುರುಷರ ಭಾವಚಿತ್ರವನ್ನು ಅನಾವರಣ ಮಾಡುವಂಥ ಅಮೌಲ್ಯ ಪ್ರಸಂಗಕ್ಕೆ ಆಮಂತ್ರಣ ಕೊಟ್ಟಿದ್ದಕ್ಕಾಗಿ ನನಗೆ ಸಂತೋಷವೆನಿಸುತ್ತದೆ. ನಾನು ಚೆನ್ನಬಸವಪ್ಪನವರನ್ನು ಪ್ರತ್ಯಕ್ಷ ಕಂಡಿರದಿದ್ದರೂ ಅವರ ಬಗ್ಗೆ ಎಷ್ಟೋ ಕೇಳಿ ಮತ್ತು ಓದಿ ಪರಿಚಯ ಮಾಡಿಕೊಂಡಿರುವೆ. ಅವರೊಬ್ಬ ಮಹಾಪುರುಷರು. ಈಗ ೧೦೦ ವರ್ಷಗಳ ಹಿಂದೆ ಕನ್ನಡ ದೇಶದ ಈ ಭಾಗವು ಪೇಶ್ವೆಯರ ಆಳಿಕೆಗೆ ಒಳಪಟ್ಟಿತ್ತು. ಅವರ ಆಳಿಕೆ ಕೊನೆಗೊಂಡಾಗ ಅದರ ಪ್ರಭಾವದಿಂದಾಗಿ ಈ ಭಾಗದಲ್ಲಿ ಮರಾಠಿ ಭಾಷೆಯ ಪ್ರಾಬಲ್ಯವು ಹೆಚ್ಚಾಗಿತ್ತೆಂದು ನಾನು ಕೇಳಿದ್ದೇನೆ. ಆ ಸಮಯದಲ್ಲಿ ಕನ್ನಡ ಶಿಕ್ಷಣಕ್ಕೆ ಸಾಕಷ್ಟು ಸೌಲಭ್ಯಗಳೇ ಇದ್ದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕನ್ನಡಕ್ಕೆ ಅವರ ಸ್ಥಾನವನ್ನು ಕಲ್ಪಿಸಿ ಕೊಡಲು ಪ್ರಯತ್ನಪಟ್ಟ ಶ್ರೇಯಸ್ಸು ಚೆನ್ನಬಸವಪ್ಪನವರದೇ. ಆಗಿನ ಆಳರಸರ ವಿಶ್ವಾಸಕ್ಕೆ ಪಾತ್ರರಾಗಿ ಕನ್ನಡವನ್ನು ಪುನರುಜ್ಜೀವನ ಗೊಳಿಸಿದವರಲ್ಲಿ ಅವರೇ ಮೊದಲಿಗರೆಂದು ಹೇಳಬಹುದು. ಅವರು ಬಡಕುಟುಂಬದಲ್ಲಿ ಜನಿಸಿದರು. ಸ್ವಸಾಮರ್ಥ್ಯ ಹಾಗೂ ಸ್ವಪ್ರಯತ್ನದಿಂದ ವಿದ್ಯೆಕಲಿತು ಎಂಜನಿಯರರಾದರು. ಅವರು ಎಂಜನಿಯರ ಪದಪೀಠರರಾದರೂ ಹಣಗಳಿಸುವ ಮಾರ್ಗಬಿಟ್ಟು ಯಾವ ಆರ್ಥಿಕ ಪ್ರಯೋಜನವಿಲ್ಲದ ಶಿಕ್ಷಣರಂಗಕ್ಕೆ ಪ್ರವೇಶಿಸಿದ್ದು ಆಶ್ಚರ್ಯವೇ ! ಇದ ಅವರ ಅತಿಶಯವಾದ ತ್ಯಾಗಬುದ್ಧಿಯ ಪ್ರತೀಕ. ಅವರು ಹೇರಳ ಹಣ ಗಳಿಸಬಹುದಿತ್ತು ಮತ್ತು ಸುಖ ಜೀವನ ಸಾಗಿಸ ಬಹುದಿತ್ತು. ಆದನ್ನೆಲ್ಲವನ್ನು ತೊರೆದು, ಅವರು ಕನ್ನಡಭಾಷೆಯ ಉದ್ಧಾರಕ್ಕಾಗಿ ಶಿಕ್ಷಣ ಕ್ಷೇತ್ರಕ್ಕಿಳಿದರು. ತಮ್ಮ ವ್ಯಕ್ತಿತ್ವದಿಂದ ಹೆಚ್ಚು ಹೆಚ್ಚು ಕನ್ನಡ ಶಾಲೆಗಳನ್ನು ಸ್ಥಾಪಿಸಿದರು. ಪ್ರಾರಂಭದಲ್ಲಿ ೧೨ ಶಾಲೆಗಳಿದ್ದ ಈ ಜಿಲ್ಲೆಯಲ್ಲಿ ೪೦೦ ಶಾಲೆಗಳನ್ನು ಸ್ಥಾಪಿಸಿದರೆಂದರೆ ಇವರೊಬ್ಬ ಅದ್ಭುತ ಶಕ್ತಿಶಾಲಿಗಳೆಂದೇ ಹೇಳಬೇಕು.

ಕನ್ನಡ ಭಾಷೆಯ ಉದ್ಧಾರ ಮಾಡಿದ ಮಹಾಪುರುಷರು ಅವರು. ಅವರು ಕೇವಲ ಕನ್ನಡ ಶಿಕ್ಷಣದ ಸಂಸ್ಥಾಪಕರಲ್ಲ. ಆದರೆ ಕನ್ನಡ ಭಾಷೆಯ ಸಂಸ್ಥಾಪಕರೂ ಹೌದು. ಅವರು ಆಗಿಹೋಗದೆ ಇದ್ದರೆ ಕನ್ನಡವು ಕಣ್ಮರೆಯಾಗಬಹುದಿತ್ತು. ಆಗ ಕನ್ನಡ ಶಿಕ್ಷಣದ ಸೌಕರ್ಯವಿಲ್ಲದುದೇ ಕಾರಣ. ಕನ್ನಡ ಜ್ಞಾನಕ್ಕಾಗಿ ಇಷ್ಟೊಂದು ಸೇವೆ ಸಲ್ಲಿಸಿದಂಥ ಈ ಕಾಲೇಜದ ಪ್ರಥಮ ಪ್ರಿನ್ಸಿಪಾಲರಾದ ಈ ಮಹಾಪುರುಷನ ಸವಿಸ್ಮೃತಿಗಾಗಿ ನೀವು ಈಗ ಈ ಫೋಟೋವನ್ನು ಇಲ್ಲಿ ಇರಿಸಿದ್ದೀರಿ. ರಾಷ್ಟ್ರದ ಇತಿಹಾಸವು ಮಹಾಪುರುಷರ ಜೀವನದ ಸುತ್ತಲೂ ಹೆಣೆಯಲ್ಪಟ್ಟಿದೆ. ದೊಡ್ಡವರ ಇತಿಹಾಸವೇ ರಾಷ್ಟ್ರದ ಇತಿಹಾಸ. ದೊಡ್ಡವರನ್ನು ಗೌರವಿಸಿದಾಗಲೇ ನಾವು ದೊಡ್ಡವರಾಗ ಬಲ್ಲೆವು. ಅವರು ನಟ್ಟ ಸಸಿಯನ್ನು ನೀವು ಬೆಳೆಸಬೇಕು. ಅವರ ಭಾವಚಿತ್ರದಿಂದ ಸ್ಫೂರ್ತಿಗೊಂಡು ಅವರ ಜೀವನ ನೆನಪು ಮಾಡಿಕೊಂಡು ಶಿಕ್ಷಣದ ಪ್ರಸಾರಕ್ಕೆ ನೀವೆಲ್ಲ ಶ್ರಮಿಸಬೇಕು. ಶಿಕ್ಷಕರು ರಾಷ್ಟ್ರವನ್ನು ಕಟ್ಟುವವರು; ಅವರ ಕೈಯಲ್ಲಿಯೇ ರಾಷ್ಟ್ರದ ಭವಿತವ್ಯವಿದೆ. ದಿವಂಗತ ಚೆನ್ನಬಸವಪ್ಪನವರು ಮಾಡಿದ ಕೆಲಸವನ್ನು ಮುಂದುವರೆಸಿರಿ. ನಿಷ್ಠೆ ಶ್ರದ್ಧೆಯಿಂದ ಕೆಲಸ ಮಾಡಿದರೆ ಎಲ್ಲವೂ ಸಾಧ್ಯ. "

ಸಂಗ್ರಹಿಸಿದವರು:— ಶ್ರೀ. ಎ. ಉಮರಾಣಿ.

ಮಾನ್ಯ ಶ್ರೀ. ಕೆ. ಎಸ್. ಪಾಟೀಲ

ಇವರ ಭಾಷಣ

ಮಾನ್ಯ ದಿನಕರ ಭಾಯಿಯವರೇ ಹಾಗೂ ಶಿಕ್ಷಕರೇ,

"ಕೈ. ವಾ. ಡೆಪ್ಯೂಟಿ ಚೆನ್ನಬಸವಪ್ಪನವರ ಬಗೆಗೆ ನನಗಿರುವ ಪೂಜ್ಯಭಾವನೆಯೇ ನನ್ನನ್ನು ಇಲ್ಲಿಗೆ ತಂದಿತು ಮತ್ತು ಅವರಲ್ಲಿರುವ ಶ್ರದ್ಧೆಯೇ ಅವರ ಸಮಕಾಲೀನ ಅನೇಕ ವಯೋವೃದ್ಧರ ಆಗಮನಕ್ಕೆ ಕಾರಣವಾಗಿದೆ. ಅವರ ಜೀವನ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದು. ಅವರ ಜೀವನದ ಬಗ್ಗೆ ಇಂದಿನ ಬಾಲಕರು, ಶಿಕ್ಷಕರು ಅರಿತುಕೊಳ್ಳುವದು ಉಚಿತ-ಅಂತೆಯೇ ನಾನು ೧೯೩೯—೧೯೪೨ ರಲ್ಲಿ ಜಿಲ್ಲಾ ಸ್ಕೂಲ ಬೋರ್ಡದ ಚೇರಮನ್‌ನಿದ್ದಾಗ ಡೆಪ್ಯೂಟಿ ಚೆನ್ನಬಸವಪ್ಪನವರ ಚರಿತ್ರೆಯಿಲ್ಲದ ಒಂದೂ ಪಠ್ಯಪುಸ್ತಕಕ್ಕೆ ಮಂಜೂರಿ ಕೊಡುತ್ತಿದ್ದಿಲ್ಲ. ಅವರ ಜೀವನ ಚರಿತ್ರೆಯಿಲ್ಲದ ಪಠ್ಯ-ಪುಸ್ತಕ ಅಪೂರ್ಣವೆಂದೇ ಭಾವಿಸುತ್ತಿದ್ದೆ. ಕಳೆದ ೭೦ ವರ್ಷಗಳಲ್ಲಿ ಅವರಿಗೆ ಸಲ್ಲಿಸಬೇಕಾದ ಗೌರವವನ್ನು ನಾವು ಕನ್ನಡಿಗರು ಸಲ್ಲಿಸಿಲ್ಲ. ಸಲ್ಲಿಸುತ್ತಿರುವದು ಇದೇ ಮೊದಲಸಲವಾಗಿದೆ. ಈ ಸಮಾರಂಭವೇ ಮೊದಲ ಹೆಜ್ಜೆಯೆಂದು ಹೇಳಬಹುದು. ಮಾನ್ಯಮಂತ್ರಿಗಳು ಇದೀಗ ತಮಗೆ ಹೇಳಿದಂತೆ ಕನ್ನಡವು ಅಳಿದು ಹೋಗಬಹುದಾಗಿದ್ದ ಕಾಲದಲ್ಲಿ ಅವರು ಕನ್ನಡ ಭಾಷೆಯ ಮತ್ತು ಕನ್ನಡ ಕುಲದ ಉದ್ಧಾರ ಮಾಡಿದರು. ಕಳೆದ ಶತಮಾನದ ಕೊನೆಯ ಭಾಗದಲ್ಲಿ ಬಾಳಿ ಬದುಕಿದ ಈ ಮಹನೀಯರ ಜೀವನದ ಬಗ್ಗೆ ಸಾಕಷ್ಟು ವಿವರಗಳು ಲಭ್ಯವಿಲ್ಲದಿರುವದು ಒಂದು ದುರ್ದೈವವೇಸರಿ. "ಅವರ ಜೀವನದಿಂದ ನೀವು ವಿದ್ಯಾರ್ಥಿಗಳೆಲ್ಲರೂ ಸ್ಫೂರ್ತಿ ತಂದುಕೊಳ್ಳಿರಿ."

ಸಂಗ್ರಹಿಸಿದವರು:— ಶ್ರೀ ವ್ಹಿ. ಎ. ಉಮರಾಣಿ.

ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಹಳ್ಳಿಯ ಶಿಬಿರ

(೧೮-೧-೫೫ ರಿಂದ ೨೪-೧-೫೫)

ಈ ಕಾಲೇಜದ ೨ ನೆಯ ವರ್ಷದ ಶಿಕ್ಷಕ-ವಿದ್ಯಾರ್ಥಿನಿಯರು ಧಾರವಾಡ ತಾಲೂಕಿನ ಅಮ್ಮಿನಭಾವಿಯಲ್ಲಿ ಮೇಲ್ಕಾಣಿಸಿದ ಅವಧಿಯಲ್ಲಿ ವಾಸವಾಗಿದ್ದರು. ವಿಧಾಯಕ ಕಾರ್ಯಗಳನ್ನು ಕೈಕೊಂಡು ಅಲ್ಲಿಯ ಕನ್ಯಾಸಾಲೆಯ ಆವಾರದ ಗೋಡೆಯ ದುರಸ್ತಿ ಮಾಡಿದರು. ಊರಲ್ಲಿಯ ಹೆಣ್ಣು ಮಕ್ಕಳಿಗೆ ಕಸೂತಿ, ಹೆಣಿಗೆ, ಹಳೆಯ ಅರಿವೆ ಹೊಲಿಯುವದು, ಸ್ವಚ್ಛತೆ, ಶಿಶುಸಂಗೋಪನ ಇತ್ಯಾದಿಗಳ ಬಗೆಗೆ ಮಾಹಿತಿ ಮಾಡಿಕೊಟ್ಟರು. ದಿನಾಂಕ ೨೪-೧-೫೫ ರಂದು ಧಾರವಾಡ ಜಿಲ್ಹೆಯ ಎ. ಎಸ್. ಓ. ಅವರಾದ ಶ್ರೀ. ಪರೀಖ ಅವರ ಅಧ್ಯಕ್ಷತೆಯಲ್ಲಿ ಮುಕ್ತಾಯ ಸಮಾರಂಭವು ನಡೆಯಿತು. ಒಂದು ವಾರದಲ್ಲಿ ಮಾಡಿದ ಸೂಜಿಗೆಲಸದ ಪ್ರದರ್ಶನವನ್ನು ಆ ಗ್ರಾಮದ ನಿವಾಸಿಗಳಾದ ಶ್ರೀಮತಿ ಅಂಬಾಬಾಯಿ ದೇಸಾಯಿ ಅವರ ಹಸ್ತದಿಂದ ಉದ್ಘಾಟಿಸಲಾಯಿತು. ಶ್ರಮದಾನಯಜ್ಞದ ಉದ್ಘಾಟನೆಯು ಶ್ರೀಮತಿ ಅಕ್ಕಾತಾಯಿ ಬಡಿಗೇರ ಅವರಿಂದ ನಡೆಯಿತು. ಮನರಂಜನೆಯ ಕಾರ್ಯಕ್ರಮಗಳನ್ನೂ, ಮಾಯಾಲಾಂದ್ರದಿಂದ ಚಿತ್ರಗಳನ್ನು ತೋರಿಸುವದನ್ನೂ ಇಡಲಾಗಿತ್ತು. ಶಿಬಿರವು ಉದ್ಬೋಧಕವಾಗಿತ್ತು; ಕಲ್ಯಾಣ ರಾಷ್ಟ್ರದ ನಿರ್ಮಾಣದ ದಾರಿಯನ್ನು ತೋರಿಸಿಕೊಟ್ಟಿತು. ಹಳ್ಳಿಯ ಹೆಣ್ಣು ಮಕ್ಕಳು ಒಳ್ಳೇ ಆಸ್ಥೆಯಿಂದ ಶಿಬಿರದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಶಿ. ವಿ. ನಿಯರಿಗೆ ಹಳ್ಳಿಯವರೊಂದಿಗೆ ಸಮರಸವಾಗಿ ಬೆರೆಯುವ ಪಾಠ ಕಲಿಸಿತು. ಶ್ರೀ ಜಿ. ಎಸ್. ಗಲಗಲಿ ಹಾಗೂ ಕು. ಮಹಿಷಿ ಇವರು ಈ ಶಿಬಿರದ ಸಂಚಾಲಕರಿದ್ದರು. ಲೇಡಿ ಸುಪರಿಂಟೆಂಡೆಂಟ ಶ್ರೀಮತಿ ಭಾಸ್ಕರ ಅವರು ಸಂದರ್ಶನವಿತ್ತು ಉಪಯುಕ್ತ ಸಲಹೆಸೂಚನೆ ನೀಡಿದರು.

ಲಿಂಗೈಕ್ಯ ಡೆಪ್ಯೂಟಿ ಚೆನ್ನಬಸವಪ್ಪನವರು
(ಟ್ರೇನಿಂಗ ಕಾಲೇಜದ ಪ್ರಪ್ರಥಮ ಪ್ರಿನ್ಸಿಪಾಲರು)

ಲೇಖಕರು:— ಶ್ರೀ. ಶಿಂತ್ರಿ ಬಸಪ್ಪನವರು. ಬಿ. ಎ., ಬಿ.ಟಿ.

ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಪ್ರಸ್ತಾವನೆ.

ಅವರ ಪೂರ್ಣ ಹೆಸರು ಶ್ರೀ. ಚೆನ್ನಬಸವಪ್ಪ ಬಸಲಿಂಗಪ್ಪ ಧಾರವಾಡ ಎಂದು ಇದೆ. ಆದರೆ, ಅವರು ಬಹಳ ದಿನಗಳ ವರೆಗೆ ಅಂದರೆ ೧೮೬೯ ರಿಂದ ೧೮೮೧ ರ ವರೆಗೆ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರೆಂದು ಕೆಲಸ ಮಾಡಿದರಾದುದರಿಂದ ಜನರೆಲ್ಲ ಅವರನ್ನು ಡೆಪ್ಯೂಟಿ ಚೆನ್ನಬಸವಪ್ಪನವರೆಂದೇ ಕರೆಯುವ ವಾಡಿಕೆಯಿತ್ತು. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಅವರಷ್ಟು ಜನಪ್ರಿಯ ಅಧಿಕಾರಿಗಳು ಬೇರೊಬ್ಬರು ಆವ ಖಾತೆಯಲ್ಲಿಯೂ ಆಗಿರಲಿಲ್ಲ. ಕನ್ನಡಿಗರ ಹಾಗೂ ಕನ್ನಡ ಭಾಷೆಯ ಏಳ್ಗೆಯ ಬಗೆಗೆ ಅವರು ಅಹೋರಾತ್ರಿ ನಿಃಸ್ವಾರ್ಥಬುದ್ಧಿಯಿಂದ ಹೆಣಗಾಡಿದುದೇ ಅವರ ಲೋಕಪ್ರಿಯತೆಯ ಮೂಲ ಕಾರಣವಾಗಿದೆ. ಆಗ ಅವರು ವಹಿಸಿದ ಪಾತ್ರವನ್ನರಿಯುವದಾದರೆ, ಆಗಿನ ಕಾಲದ ಕರ್ನಾಟಕದ ಪರಿಸ್ಥಿತಿಯನ್ನವಲೋಕಿಸುವದೊಳಿತು. ಕರ್ನಾಟಕವು ಶೈಕ್ಷಣಿಕ ದೃಷ್ಟಿಯಿಂದ ಆಗ ಬಹಳ ಹಿಂದುಳಿದಿತ್ತು. ಈಗಿನ ಮುಂಬಯಿ ರಾಜ್ಯದಲ್ಲಿಯ ದಕ್ಷಿಣ ಭಾಗವು ಅಂದರೆ ಉತ್ತರ ಕರ್ನಾಟಕವು ೧೮೧೮ ನೆಯ ಇಸವಿಯ ವರೆಗೆ ಪೇಶವೆಯವರ ಆಳಿಕೆಗೆ ಒಳಪಟ್ಟಿತ್ತಷ್ಟೇ. ಆ ಮೇಲೆ ಅದು ಬ್ರಿಟಿಶರ ರಾಜ್ಯದಲ್ಲಿ ಸೇರ್ಪಡೆಯಾಯಿತು. ಆಗ ಅಲ್ಲೊಂದು ಇಲ್ಲೊಂದು ಅಯ್ಯನವರ ಮಠಗಳಲ್ಲಿ ಗುರುಕುಲ ಪದ್ಧತಿಯ ಶಾಲೆಗಳಿದ್ದವು. ಜಾತಿ-ಧರ್ಮ-ಕುಲ-ಗೋತ್ರಗಳನ್ನೆಣಿಸದೆ ಶಾಲೆಗೆ ಬಂದ ಮಕ್ಕಳಿಗೆಲ್ಲ ಅಯ್ಯನವರು ವಿದ್ಯಾದಾನ ಮಾಡುತ್ತಿದ್ದರು. ಈಗ "ಸಾಲಿಮಠ" ಎಂದು ಎಷ್ಟೋ ಜನರ ಅಡ್ಡಹೆಸರಿರುವುದೇ ಈ ಮಾತಿಗೆ ಸಾಕ್ಷಿಯಾಗಿದೆ. ಬಹುತರವಾಗಿ ಅವರು ಹಳೆಗನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ನುರಿತವರಿರುತ್ತಿದ್ದರಲ್ಲದೆ ಮರಾಠಿ ಭಾಷೆಯನ್ನು ಅರಿತವರಿರುತ್ತಿದ್ದರು. ಯಾಕಂದರೆ, ಪೇಶವೆಯವರ ಆಳಿಕೆಯ ಪ್ರಭಾವದಿಂದ ಆಗಿನ ಶಿಕ್ಷಣದ ಮಾಧ್ಯಮವು ಮರಾಠಿಯೇ ಆಗಿರುತ್ತಿತ್ತು. ಹೋದ ಶತಮಾನದಲ್ಲಿ ನಮ್ಮ ದೇಶದಲ್ಲೆಲ್ಲ ಅದೆಷ್ಟೋ ಸುಧಾರಕರೂ ಶಿಕ್ಷಣತಜ್ಞರೂ ಉದಯಿಸಿದರು. ಶ್ರೀ. ಚೆನ್ನಬಸವಪ್ಪ ಬಸಲಿಂಗಪ್ಪ ಧಾರವಾಡರವರು ಅವರಲ್ಲೊಬ್ಬರು. ನಿರ್ಜೀವವಾಗಿದ್ದ ಕನ್ನಡ ಭಾಷೆಯಲ್ಲಿ ಆಗ ಜೀವಕಳೆಯನ್ನು ತುಂಬಿ ಅದನ್ನು ಪುನರುಜ್ಜೀವನಗೊಳಿಸಿದವರು ಅವರೇ. ಈಗಿನ ನಮ್ಮಲ್ಲಿಯ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಉಗಮವು ೧೮೫೭ರಲ್ಲಾಗಿದೆ. ಅದರ ಪ್ರಥಮ ಪ್ರಿನ್ಸಿಪಾಲರು ಶ್ರೀ. ಚೆನ್ನಬಸವಪ್ಪನವರೇ ಆಗಿದ್ದರು. ನಮಗೆ ದೊರೆತ ವಿವರಗಳಿಂದ ಅಂತಹವರ ವ್ಯಕ್ತಿ ಪರಿಚಯವನ್ನು ನಮ್ಮ ಓದುಗರಿಗೆ ಮಾಡಿ ಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಧಾರವಾಡ ಹಾಗೂ ಬೆಳಗಾವಿ ಜಿಲ್ಹೆಗಳ ಗ್ಯಾಝೆಟಿಯರದಿಂದಲೂ ಕನ್ನಡ ಪ್ರಾಥಮಿಕ ಶಿಕ್ಷಣದ ರಿಕಾರ್ಡುಗಳಿಂದಲೂ ಶಿವಾನುಭವ ಗ್ರಂಥಮಾಲೆಯಿಂದಲೂ ನಮಗೆ ವಿವರಗಳು ದೊರೆತಿವೆ. ಆಯಾ ಪತ್ರಿಕೆಗಳಿಗೆಲ್ಲ ನಾವು ಋಣಿಯಾಗಿರುವೆವು.

ಬಾಲ್ಯ ಮತ್ತು ಶಿಕ್ಷಣ

ಬೆಳಗಾವಿ ಜಿಲ್ಹೆಯೊಳಗೆ ತಾಲೂಕಿನ ಸ್ಥಳವಾದ ಗೋಕಾವಿಯು ಅವರ ಮನೆತನದ ಮೂಲಸ್ಥಾನವು.

ಅವರ ತಂದೆ ಶ್ರೀ ಬಸಲಿಂಗಪ್ಪನವರು ವ್ಯಾಪಾರಕ್ಕೋಸ್ಕರ ಧಾರವಾಡಕ್ಕೆ ಬಂದು ಅಲ್ಲಿಯೇ ತಳವೂರಿದರು. ಅವರ ತಾಯಿಯವರ ಹೆಸರು ಶ್ರೀಮತಿ ತಿಪ್ಪವ್ವ. ಆ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳಿದ್ದರು. ಅವರಿಬ್ಬರ ಹೆಸರು ಚೆನ್ನಬಸವಪ್ಪ ಎಂದು ಇದ್ದುದರಿಂದ ಹಿರಿಯನಿಗೆ ದೊಡ್ಡ ಚೆನ್ನಬಸವಪ್ಪ ಕಿರಿಯನಿಗೆ ಸಣ್ಣ ಚೆನ್ನಬಸವಪ್ಪ ಎಂದು ಕರೆಯುತ್ತಿದ್ದರು. ಕಿರಿಯರಾದ ಶ್ರೀ. ಚೆನ್ನಬಸವಪ್ಪನವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಕೆಲಸ ಮಾಡಿ ನಿವೃತ್ತಿಯನ್ನು ಹೊಂದಿದರು. ಹಿರಿಯವರಾದ ಹಾಗೂ ನಮ್ಮ ಕಥಾನಾಯಕರಾದ ಶ್ರೀ ಚೆನ್ನಬಸವಪ್ಪನವರು ಧಾರವಾಡದಲ್ಲಿ ೧೮೩೪ ನೆಯ ಇಸವಿಯಲ್ಲಿ ಜನ್ಮ ತಾಳಿದರು. ಅವರು ಆರು ವರ್ಷದ ಮಗುವಿದ್ದಾಗ ಅವರ ತಂದೆಯವರು ಲಿಂಗದೊಳಗಾದರು. ಆ ಮೇಲೆ ಮನೆತನದ ಭಾರವೆಲ್ಲ ಅವರ ತಾಯಿಯವರ ಮೇಲೆ ಬಿತ್ತು ಆಗ ಅವರ ತಾಯಿಯವರಿಂದ ಹೊರಹೊಮ್ಮಿದ ಎದೆಗಾರಿಕೆಯು ನಿಜಕ್ಕೂ ಹೊಗಳತಕ್ಕಂತಹದಿದೆ. ತಮ್ಮ ಪತಿಯ ಮರಣದ ತರುವಾಯ ನಾಲ್ಕೂ ಕಡೆಯಿಂದ ಬಂದಡರಿದ ಎಡರು ತೊಡರುಗಳನ್ನು ಧೈರ್ಯದಿಂದ ಎದುರಿಸಿ ಅವುಗಳನ್ನೆಲ್ಲ ಒಂದೊಂದನ್ನಾಗಿ ನೀಗಿ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ನಿರ್ಧಾರವನ್ನು ಕೈಕೊಂಡರು. ಶ್ರೀಯುತರು ಧಾರವಾಡದಲ್ಲಿ ಶ್ರೀಶಿವರುದ್ರಯ್ಯನವರಿಂದ ಮಠದಲ್ಲಿ ನಡಿಸಲ್ಪಡುತ್ತಿದ್ದ ಹಳೆಯ ಪದ್ಧತಿಯ ಶಾಲೆಗೆ ಸೇರ್ಪಡೆಯಾದರು. ತುಂಟತನಕ್ಕೂ ಕಿಡಿಗೇಡಿತನಕ್ಕೂ ಅವರು ಶಾಲೆಯಲ್ಲಿಯೂ ಮನೆಯಲ್ಲಿಯೂ ಓಣಿಯಲ್ಲಿಯೂ ಹೆಸರಾಗಿದ್ದರು. ಅವರ ತುಂಟತನಕ್ಕೆ ಗುರುಗಳು ಬೇಸತ್ತಿದ್ದರೂ ಅವರ ಚುರುಕು ಬುದ್ಧಿಗೆ ಬಹಳಷ್ಟು ಮೆಚ್ಚಿದ್ದರು. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಮೇಲೆ ಇಂಗ್ಲೀಷವನ್ನು ಕಲಿಯಬೇಕೆಂಬ [illegible] ಅವರಮನಸ್ಸಿನಲ್ಲುದಯಿಸಿತು. ಆಗ ಇಂಗ್ಲೀಷವನ್ನು ಕಲಿಯಲು ಮುಂಬಯಿ ಇಲ್ಲವೆ ಪುಣೆ ಪಟ್ಟಣಕ್ಕೆ ನಡೆದು ಹೋಗಬೇಕಾಗುತ್ತಿತ್ತು. ಒಂದು ದಿನ ಊಟಕ್ಕೆ ಕುಳಿತಾಗ ಪುಣೆ ಪಟ್ಟಣಕ್ಕೆ ಹೋಗಿ ಇಂಗ್ಲೀಷವನ್ನು ಕಲಿಯಬೇಕೆಂಬ ತಮ್ಮ ಅಭಿಲಾಷೆಯನ್ನು ತಮ್ಮ ತಾಯಿಗೆ ವ್ಯಕ್ತಪಡಿಸಿದರು.

ಆದರೆ ಅವರ ತಾಯಿಯು ಮಗನ ಮಾತನ್ನು ಅಷ್ಟೊಂದು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಅದೇ ದಿನ ರಾತ್ರಿ ತಮ್ಮ ತಾಯಿಗೆ ನಿದ್ದೆ ಹತ್ತಿದ ಕೂಡಲೇ ತಾಯಿಯ ಪೆಟ್ಟಿಗೆಯಲ್ಲಿದ್ದ ೩ ರೂಪಾಯಿ ೧೦ ಆಣೆಗಳನ್ನು ತಕ್ಕೊಂಡು ಯಾರಿಗೂ ಹೇಳದೆ ಕೇಳದೆ ಪುಣೆಯ ಹಾದಿಯನ್ನು ಹಿಡಿದು ಒಬ್ಬಂಟಿಗರಾಗಿ ನಡೆದರು. ಹಾದಿಯಲ್ಲಿ ಗೋಕಾವಿಯು ಹತ್ತಿತು. ಅಲ್ಲಿದ್ದ ತಮ್ಮ ಕಕ್ಕಂದಿರನ್ನು ಸಹಾಯ ಮಾಡಲು ಕೇಳಿಕೊಂಡರು ಅವರು ಹಚ್ಚಿಕೊಳ್ಳಲಿಲ್ಲ. ಆದೇ ಊರಲ್ಲಿ ಅವರ ತಂದೆಯ ಹಳೆ ಮಿತ್ರರೂ ಶ್ರಿಮಂತರೂ ಆಗಿದ್ದ ಗೃಹಸ್ಥರೊಬ್ಬರು ಅವರಲ್ಲಿ ಉದಯಸಿದ್ದ ಜ್ಞಾನಾರ್ಜನೆಯ ಹಸಿವನ್ನು ನೋಡಿ ತುಂಬಾ ಆನಂದಪಟ್ಟು ಅವರಿಗೆ ೫೦ ರೂಪಾಯಿಗಳ ಸಹಾಯಧನವನ್ನಿತ್ತರು. ಆ ಹಣದ ಸಹಾಯದಿಂದ ಪಾದಚಾರಿಯಾಗಿ ಪುಣೆ ಪಟ್ಟಣವನ್ನು ಮುಟ್ಟಿದರು. ಆ ಪಟ್ಟಣದಲ್ಲಿ ಸುದೈವದಿಂದ ಅವರಿಗೆ ಶ್ರೀ. ಗೋವಿಂದರಾವ ಮೆಹೇಂದಳೆಕರ ಎಂಬ ಉದಾರ ಸ್ವಭಾವದ ಶ್ರೀಮಂತರ ಸಂಪರ್ಕವಾಯಿತು. ಅಲ್ಲಿ ಅವರು ಇರುವ ವರೆಗೆ ಆ ಸದ್‌ಗೃಹಸ್ಥರು ಅವರಿಗೆ ಅವ್ಯಾಹತವಾಗಿ ಸಹಾಯವನ್ನು ಸಲ್ಲಿಸಿದರು. ಇಂಗ್ಲೀಷ ಶಾಲೆಯೊಂದರಲ್ಲಿ ತಮ್ಮ ಹೆಸರನ್ನು ಹಚ್ಚಿಸಿ ಕೊಡಲೇ ತಮ್ಮ ತಾಯಿಯವರನ್ನು ತಮ್ಮಲ್ಲಿಗೆ ಕರೆಯಿಸಿಕೊಂಡರು. ಧಾರವಾಡಕ್ಕೆ ಮರಳುವ ವರೆಗೆ ಅಂದರೆ ೧೮೫೫ ರವರೆಗೆ ಇಬ್ಬರೂ ಅಲ್ಲಿಯೇ ಇದ್ದರು. ಹಾಯಸ್ಕೂಲದ ವಿದ್ಯಾಭ್ಯಾಸವು ಮುಗಿದ ಕೂಡಲೆ ಎಂಜಿನಿಯರಿಂಗ ಕಾಲೇಜವನ್ನು ಸೇರಿ ಕೊನೆಯ ಪರೀಕ್ಷೆಯನ್ನು ಮೇಲು ನಂಬರು ಪಡೆದು ಉತ್ತೀರ್ಣರಾದರು. ಅವರ ಕುಶಾಗ್ರ ಬುದ್ಧಿಗೆ ಮೆಚ್ಚಿ ಆ ಕಾಲೇಜದಲ್ಲಿ ಪ್ರಾಧ್ಯಾಪಕರೆಂದು ಅವರನ್ನು ತಾತ್ಪೂರ್ತಿಕವಾಗಿ ನೇಮಿಸಿಕೊಂಡರು. ವಿಲಾಯತಿಯಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೋಸ್ಕರ ಹಿಂದುಸ್ತಾನ ಸರಕಾರದವರು ನಮ್ಮ ದೇಶದಿಂದ ಒಟ್ಟು ಐದು ಜನ ಎಂಜಿನಿಯರಿಂಗ ಸ್ಕಾಲರರನ್ನು ಆರಿಸಿದ್ದರು. ಅವರಲ್ಲಿ ಶ್ರೀಯುತರೊಬ್ಬರಾಗಿದ್ದರು. ಆದರೆ ಸರಕಾರದವರ ಆ ವಿಚಾರವು ಕಾರ್ಯಗತವಾಗದೆ ಅಲ್ಲಿಗೇ ನಿಂತು ಬಿಟ್ಟಿತು.

ಸರಕಾರಿ ನವಕರಿ.

ಅವರು ಸನ್ ೧೮೫೫ ರಲ್ಲಿ ಧಾರವಾಡಕ್ಕೆ ಮರಳಿದ ರೆಂಬುದನ್ನು ಮೇಲೆ ಹೇಳಿದೆಯಷ್ಟೇ. ಕೂಡಲೆ ಅವರು ಪೋಲೀಸ್ ಖಾತೆಯಲ್ಲಿ ಸೇರ್ಪಡೆಯಾದರೂ ಸಹ ಅಲ್ಲಿ ಬಹಳ ದಿನಗಳ ವರೆಗೆ ಇರಲಿಲ್ಲ. ಅದನ್ನು ಬಿಟ್ಟುಗೊಟ್ಟು ಶಿಕ್ಷಣ ಖಾತೆಯನ್ನು ಸೇರಿದರು. ಧಾರವಾಡದಲ್ಲಿ ಸನ್ ೧೮೫೭ ರಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ "ನಾರ್ಮಲ್ ಕ್ಲಾಸ" (Normal Class) ಎಂಬ ಹೆಸರಿನ ಸಂಸ್ಥೆಯ ಹೆಡ್ ಮಾಸ್ತರರೆಂದು ಅವರ ನೇಮಣೂಕಿ ಯಾಯಿತೆಂಬಂತೆ ತೋರುತ್ತಿದೆ. ನಾರ್ಮಲ್ ಕ್ಲಾಸ ಅಂದರೆ ಶಿಕ್ಷಕರಿಗೆ ಶಿಕ್ಷಣದಲ್ಲಿ ತರಬೇತಿ ಕೊಡುವ ವರ್ಗವು. ಅದುವೇ ಈಗಿನ ನಮ್ಮಲ್ಲಿಯ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಉಗಮವು. ಆ ಕಾಲಕ್ಕೆ ಎಜ್ಯುಕೇಶನಲ್ ಇನಸ್ಪೆಕ್ಟರರ ಕಚೇರಿಯು ಬೆಳಗಾವಿ ಯಲ್ಲಿದ್ದುದರಿಂದ ಆ ಕ್ಲಾಸು ಮುಂದೆ ಸನ್ ೧೮೬೦ರಲ್ಲಿ ಬೆಳಗಾವಿಗೆ ಸ್ಥಳಾಂತರಿಸಲ್ಪಟ್ಟಿತು. ಮುಂದಿನ ವರುಷ ಅಂದರೆ ೧೮೬೧ ರಲ್ಲಿ ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಲೆಗಳ ಮೇಲೆ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರೆಂದು ನೇಮಕವನ್ನು ಹೊಂದಿದರು. ಅವರ ಕಚೇರಿಯು ಬೆಳಗಾವಿಯಲ್ಲಿಯೇ ಇಡಲ್ಪಟ್ಟಿತ್ತು. ಸನ್ ೧೮೬೪ ನೆಯ ಇಸವಿಯ ಸುಮಾರಿಗೆ ಅವರು ಪುನಃ ಆ ನಾರ್ಮಲ್ ಕ್ಲಾಸಿನ ಹೆಡ್ ಮಾಸ್ತರರೆಂದು ನಿಯಮಿ ಸಲ್ಪಟ್ಟಂತೆ ತೋರುತ್ತಿದೆ. ಮುಂದೆ ಸನ್ ೧೮೬೬ ರಲ್ಲಿ ಸರಕಾರದವರು ಆ ಕ್ಲಾಸನ್ನು ಪೂರ್ಣ ದರ್ಜೆಯ ಟ್ರೇನಿಂಗ ಕಾಲೇಜವನ್ನಾಗಿ ಮಾಡಿ ಹೆಡ್ ಮಾಸ್ತರರಿಗೆ ಪ್ರಿನ್ಸಿಪಾಲರೆಂಬ ನಾಮಕರಣ ಮಾಡಿದರು. ಆದುದ ರಿಂದ ಶ್ರೀ. ಚೆನ್ನಬಸವಪ್ಪನವರು ಈಗಿನ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಪ್ರಥಮ ಪ್ರಿನ್ಸಿಪಾಲರೆಂದು ಅವರ ಹೆಸರು ಆ ಸಂಸ್ಥೆಯ ಇತಿ ಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ಇದು ನಿಜಕ್ಕೂ ಕನ್ನಡಿಗರೆಲ್ಲರಿಗೆ ಅಭಿಮಾನ ಪಡತಕ್ಕ ಸಂಗ ತಿಯು. ಮುಂದಿನ ವರುಷ ಅಂದರೆ ೧೮೬೭ ರಲ್ಲಿ ಅವರು ಬೆಳಗಾವಿಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ರೆಂದು ಪುನಃ ನೇಮಿಸಲ್ಪಟ್ಟು ಅಲ್ಲಿ ೧[illegible]ರ ವರೆಗೆ ಕೆಲಸ ಮಾಡಿದರು. ೧೮೬೯ ರಲ್ಲಿ ಧಾರವಾಡದ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರೆಂದು ವರ್ಗಾಯಿಸಲ್ಪಟ್ಟು ಅಲ್ಲಿ ಕೊನೆಯ ಉಸಿರಿನ ವರೆಗೆ ಸೇವೆ ಸಲ್ಲಿಸಿದರು. ದಿನಾಂಕ ೪-೧-೧೮೮೧ ರಂದು ಇಹಲೋಕ ಯಾತ್ರೆ ಯನ್ನು ಮುಗಿಸಿ ಲಿಂಗೈಕ್ಯರಾದರು. ಆಗ ಅವರು ೪೭ ವರ್ಷದ ಪ್ರಾಯದವರಿದ್ದರು. ಧಾರವಾಡದಲ್ಲಿ ಆಗ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿದ್ದ ಶ್ರೀ. ರಸೆಲ್ ಸಾಹೇಬರವರು ಒಂದೆರಡು ಸಲ ದೀರ್ಘಾ ವಧಿಯ ರಜೆಯನ್ನು ತಕ್ಕೊಂಡು ವಿಲಾಯತಿಗೆ ಹೋದಾಗ ಶ್ರೀಯುತರು ಆ ಹುದ್ದೆಯಲ್ಲಿ ತಾತ್ಪೂರ್ತಿಕ ವಾಗಿ ಆ ರಜೆಯ ಅವಧಿಗಳಲ್ಲಿ ನಿಯಮಿಸಲ್ಪಟ್ಟಿದ್ದರು.

ಡೆಪ್ಯೂಟಿ ಹುದ್ದೆಯಲ್ಲಿಯ ಸೇವೆ.

ಅವರು ವಿಶ್ರಾಂತಿಯಿಲ್ಲದೆ ದುಡಿಯುವವರು. ಶಿಕ್ಷಕ-ರಿಗೆ ಮಾರ್ಗದರ್ಶನ ಮಾಡುತ್ತ ಅವರ ಕೆಲಸದ ಮೇಲ್ವಿಚಾರಣೆ ಮಾಡುವದಕ್ಕೋಸ್ಕರ ಅವರು ಬಿಟ್ಟೂ ಬಿಡದೆ ಜಿಲ್ಹೆಯ ತುಂಬೆಲ್ಲ ಪ್ರವಾಸ ಮಾಡುತ್ತಿದ್ದರು. ಶಿಕ್ಷಕರು ಅವರಿಗೆ ಅಂಜಿ ನಡುಗುತ್ತಿದ್ದರೂ ಸಹ ಅವರು ಯಾರಿಗೂ ಅಪಾಯ ಮಾಡಲಿಲ್ಲ. ಕಳಕಳಿಯಿಂದ ಕೆಲಸ ಮಾಡಿದವರಿಗೆ ಪ್ರೋತ್ಸಾಹಿಸುತ್ತಿದ್ದರು. ತಪ್ಪು ಮಾಡಿದ ಶಿಕ್ಷಕರು ತಮ್ಮ ತಪ್ಪನ್ನು ಒಪ್ಪಿಕೊಂಡರೆ ಕೂಡಲೇ ಅವರನ್ನು ಕ್ಷಮಿಸುತ್ತಿದ್ದರು. ನಿಷ್ಪಕ್ಷಪಾತತನಕ್ಕಂತೂ ಅವರು ಹೆಸರಾಗಿದ್ದರು. ಅವರ ಖಾಸ ತಮ್ಮಂದಿರು ಅವರ ಕೈಕೆಳಗೆ ಕನ್ನಡ ಸಾಲೆಯ ಶಿಕ್ಷಕರಾಗಿದ್ದರು. ಅವರ ಯೋಗ್ಯತೆಗಿಂತ ಹೆ[illegible] ಸ್ಥಳವನ್ನು ಅವರಿಗೆ ಕೊಡಲಿಲ್ಲ. ಶಿಕ್ಷಕವರ್ಗಕ್ಕೆಲ್ಲ ಅವರು ಒಳ್ಳೇ ಪ್ರಿಯ ರಾಗಿದ್ದರು. ಅವರ ಮೇಲಿನ ಅಧಿಕಾರಿಯಾಗಿದ್ದ ಶ್ರೀ. ರಸೆಲ್ ಸಾಹೇಬರವರು ಅವರನ್ನು ಯಾವಾಗಲೂ ಗೌರವಾದರಗಳಿಂದ ಕಾಣುತ್ತಿದ್ದರು. ಫಿರ್ತಿಯ ಮೇಲಿ-ದ್ದಾಗ ಪ್ರತಿಯೊಂದು ಹಳ್ಳಿಯಲ್ಲಿ ಸಭೆಗೂಡಿಸಿ ಮಕ್ಕ-ಳನ್ನು ಸಾಲೆಗೆ ಕಳುಹಲು ಹಳ್ಳಿಗರ ಮನವೊಲಿಸುತ್ತಿದ್ದರು. ಭಾಷಣ ಮಾಡುವ ಕಲೆಯು ಅವರಿಗೆ ದೇವ ದತ್ತವಾಗಿತ್ತು. ಗಂಭೀರ ಧ್ವನಿ, ಮನೋಹರವಾದ ವ್ಯಕ್ತಿ-ತ್ವಗಳಿಂದ ಅವರ ಮಾತುಗಾರಿಕೆಗೆ ಮತ್ತಿಷ್ಟು ಕಳೆ ಬರುತ್ತಿತ್ತು. ಆದುದರಿಂದ, ಅವರ ವ್ಯಾಖ್ಯಾನಗಳು

ಹಳ್ಳಿಗರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುತ್ತಿದ್ದುದು ಅಷ್ಟಿಷ್ಟಲ್ಲ. ಅಗತ್ಯವಿದ್ದಲ್ಲೆಲ್ಲ ಹೊಸ-ದಾಗಿ ಕನ್ನಡ ಸಾಲೆಗಳನ್ನು ತೆರೆದರು. ಮಕ್ಕಳ ಹಾಜರಿಯು ಭರದಿಂದ ಏರಲಿಕ್ಕೆಹತ್ತಿತು. ಸುದೈವದಿಂದ ಅವರ ಮೇಲಧಿಕಾರಿಯಾಗಿದ್ದ ಶ್ರೀ ರಸೆಲ್ ಸಾಹೇಬರವರು ಮಕ್ಕಳಿಗೆ ಶಿಕ್ಷಣವು ತಾಯ್ನುಡಿಯ ಮುಖಾಂತರ ಸಿಗಬೇಕು, ತಾಯ್ನುಡಿಗೆ ಪ್ರಾಮುಖ್ಯತೆಯಿರಬೇಕು ಎಂಬ ತತ್ತ್ವಕ್ಕೆ ಅಂಟಿಕೊಂಡಿದ್ದರಾದುದರಿಂದ ಶ್ರೀ. ಚೆನ್ನಬಸವಪ್ಪನವರು ಪ್ರಾಥಮಿಕ ಶಿಕ್ಷಣ ಪ್ರಸಾರಕ್ಕೋಸ್ಕರ ಅಹೋರಾತ್ರಿ ನಡೆಯಿಸಿದ್ದ ಭಗೀರಥ ಪ್ರಯತ್ನಗಳಿಗೆಲ್ಲ ತಮ್ಮ ಹಾರ್ದಿಕ ಬೆಂಬಲವನ್ನು ಕೊಟ್ಟರು. ೧೮೫೫–೫೬ ನೆಯ ಸಾಲಿನಲ್ಲಿ ಬೆಳಗಾಂವಿ, ವಿಜಾಪುರ ಮತ್ತು ಧಾರವಾಡ ಜಿಲ್ಹೆಗಳಲ್ಲಿ ಕನ್ನಡ ಸಾಲೆಗಳ ಒಟ್ಟು ಸಂಖ್ಯೆಯು ಅನುಕ್ರಮವಾಗಿ ೧೩, ೯ ಮತ್ತು ೧೨ ಇತ್ತು. ಅದೇ ಸಂಖ್ಯೆಯು ೧೮೮೨ ರಲ್ಲಿ ಅನುಕ್ರಮವಾಗಿ ೧೭೭, ೧೫೦ ಮತ್ತು ೩೪೧ ಕ್ಕೆ ಏರಿತು. ಧಾರವಾಡ ಜಿಲ್ಹೆಯ ಸಂಖ್ಯೆಯು ಎಲ್ಲಕ್ಕೂ ಹೆಚ್ಚು ಏರಿತು. ಯಾಕೆಂದರೆ, ಶ್ರೀ. ಚೆನ್ನಬಸವಪ್ಪನವರು ಆ ಜಿಲ್ಹೆಯಲ್ಲಿ ಡೆಪ್ಯೂಟಿ ಕೆಲಸವನ್ನು ಅವ್ಯಾಹತವಾಗಿ ೧೮೬೯ ರಿಂದ ೧೮೮೧ ವರೆಗೆ ಮಾಡಿದ್ದರು. ಅಂದಿನಿಂದ ಆ ಜಿಲ್ಹೆಯ ಪ್ರಾಥಮಿಕ ಶಿಕ್ಷಣ ತನ್ನ ಮುಂದಡಿಯನ್ನು ಕಾಯ್ದುಕೊಂಡು ಬಂದಿದೆ.

ಕನ್ನಡ ಭಾಷೆಗೆ ಸಲ್ಲಿಸಿದ ಕಾಣಿಕೆ

ಅವರ ತಾಯ್ನುಡಿ ಕನ್ನಡ. ಪುಣೆಯಲ್ಲಿ ಬಹಳ ವರ್ಷಗಳವರೆಗಿದ್ದುದರಿಂದ ಮರಾಠಿ ಭಾಷೆಯು ಅವರಿಗೆ ಚನ್ನಾಗಿ ಬರುತ್ತಿತ್ತು. ಕನ್ನಡದ ಬಗೆಗೆ ಜನರಲ್ಲಿ ಮನೆ ಮಾಡಿಕೊಂಡಿದ್ದ ಅನಾದರ ವೃತ್ತಿಯು ಅವರ ಮನಸ್ಸಿಗೆ ಬಹಳ ನೋವನ್ನುಂಟು ಮಾಡಿತು. ಐತಿಹಾಸಿಕ ಕಾರಣಗಳಿಗೋಸ್ಕರ ಮರಾಠಿ ಭಾಷೆಯು ಸಾರ್ವಜನಿಕ ಜೀವನದ ಎಲ್ಲ ರಂಗಗಳಲ್ಲಿ ಪ್ರಮುಖ ಸ್ಥಾನವನ್ನಾಕ್ರಮಿಸಿತ್ತು. ಆಗಿನ ದೊಡ್ಡದೊಡ್ಡ ಅಧಿಕಾರಸ್ಥರೆಲ್ಲ ಮರಾಠಿಗರೇ ಆಗಿದ್ದರು. ವ್ಯಾಪಾರಸ್ಥರೆಲ್ಲ ತಮ್ಮ ವ್ಯವಹಾರಗಳನ್ನೂ ಲೆಕ್ಕ ಪತ್ರಗಳನ್ನೂ ಮರಾಠಿಯಲ್ಲಿಯೇ ಸಾಗಿಸುತ್ತಿದ್ದರು. ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಮರಾಠಿಯನ್ನು ಕಲಿಯಲು ಹುರಿದುಂಬಿಸುತ್ತಿದ್ದರು. ಸಾರಾಂಶವೇನಂದರೆ, ಕನ್ನಡಿಗರಿಗೆ ತಾವು ಕನ್ನಡಿಗರೆಂಬ ಅರಿವೇ ಇದ್ದಿಲ್ಲ ಸುತ್ತಲೂ ಆವರಿಸಿದ್ದ ನಿರುತ್ತೇಜಕ ಪರಿಸ್ಥಿತಿಯನ್ನೂ ಕನ್ನಡಕ್ಕೆ ಪ್ರಾಪ್ತವಾದ ಗಂಡಾಂತರವನ್ನೂ ಮನದಂದು ಹೆಚ್ಚೆಚ್ಚು ಕನ್ನಡ ಸಾಲೆಗಳನ್ನು ತೆರೆದು ಶಿಕ್ಷಣವೆಲ್ಲ ಕನ್ನಡದಲ್ಲಿಯೇ ಸಾಗಬೇಕೆಂಬ ನಿಯಮವನ್ನು ಮಾಡಿದರು. ಕನ್ನಡವು ಬರುತಿದ್ದರೂ ಸಹ ಮರಾಠಿಯಲ್ಲಿ ಮಾತನಾಡಲು ಹವಣಿಸುವವರನ್ನು ಕೂಡಲೆ ನಿರ್ಬಂಧಿಸಿ ಕನ್ನಡದಲ್ಲಿ ಮಾತನಾಡಲು ಹೇಳುತ್ತಿದ್ದರು. ಆಗಿನ ಕನ್ನಡ ಶಿಕ್ಷಕರಿಗೆ ಮೋಡಿ ಲಿಪಿಯಲ್ಲಿ ಸಹಿ ಮಾಡುವ ಚಟವಿತ್ತು ಅವರಿಗೆಲ್ಲ ಕನ್ನಡದಲ್ಲಿಯೇ ಸಹಿ ಮಾಡಬೇಕೆಂದು ಕಟ್ಟಾಜ್ಞೆಯನ್ನು ಕೊಟ್ಟರು. ಕನ್ನಡ ಶಾಲೆಗಳಲ್ಲಿ ಅಂಕಿ-ಮಗ್ಗಿಗಳನ್ನು ಆಗ ಮರಾಠಿಯಲ್ಲಿ ಕಲಿಸುತ್ತಿದ್ದರು. ಅವುಗಳನ್ನು ಕನ್ನಡದಲ್ಲಿಯೇ ಕಲಿಸಬೇಕೆಂಬ ಒತ್ತಾಯವನ್ನು ಹೇರಿದರು. ಜನರಲ್ಲಿ ಕನ್ನಡದ ಬಗೆಗೆ ಪ್ರೇಮವೂ ಆಸಕ್ತಿಯೂ ಹುಟ್ಟುವಂತೆ ಮಾಡಿದರು. ಕನ್ನಡ ಸಾಲೆಗಳಲ್ಲಿ ಪಠ್ಯಪುಸ್ತಕಗಳ ಕೊರತೆಯಿತ್ತು. ಅದನ್ನು ನೀಗುವದಕ್ಕಾಗಿ ದೊಡ್ಡ ದೊಡ್ಡ ಪಂಡಿತರನ್ನೂ ಬರೆಹಗಾರರನ್ನೂ ಕಲೆ ಹಾಕಿ ಅವರ ಕಡೆಯಿಂದ ಪಠ್ಯ ಹಾಗೂ ಪಠ್ಯೇತರ ಹೊತ್ತಿಗೆಗಳನ್ನು ಬರೆಯಿಸಿದರು. ತಾವೂ ಗಣಿತವನ್ನು ಕುರಿತು ಎರಡು ಪಠ್ಯ ಪುಸ್ತಕಗಳನ್ನು ಬರೆದಿದ್ದಾರೆ. ಆ ಪಂಡಿತರನ್ನೂ ಬರೆಹಗಾರರನ್ನೂ ಹಾಯಸ್ಕೂಲುಗಳಲ್ಲಿಯ ಹಾಗೂ ಟ್ರೇನಿಂಗ ಕಾಲೇಜದಲ್ಲಿಯ ಅಸಿಸ್ಟಂಟ ಮಾಸ್ತರ ಜಾಗೆಗಳಿಗೆ ಸಿಫಾರಸು ಮಾಡಿ ನೇಮಣೂಕಿ ಮಾಡಿಸುತ್ತಿದ್ದರು. ಅವರಲ್ಲಿ ಹಲವರನ್ನು ಇಲ್ಲಿ ಉದಾಹರಿಸಬಹುದು :— ಶ್ರೀ. ಗಂಗಾಧರ ಮಡಿವಾಳೇಶ್ವರ ತುರಮರಿ, ಶ್ರೀ. ವೆಂಕಟ ರಂಗೋ ಕಟ್ಟಿ, ಶ್ರೀ. ಶಾಂತವೀರ ರಾಚಿದೇವ ಕಿತ್ತೂರ, ಶ್ರೀ. ಶೇಷೋ ರಾಮಚಂದ್ರ ಚುರಮರಿ, ಶ್ರೀ. ವೀರಭದ್ರ ಮಡಿವಾಳೇಶ್ವರಪ್ಪ ಪಂಡಿತ, ಶ್ರೀ. ಭುಜಂಗರಾವ ಹುಯಿಲಗೋಳ, ಶ್ರೀ. ಪಾಂಡುರಂಗ ಚಿಂತಾಮಣಿ ಪೇಟಕರ ಮುಂತಾದವರು. ಅವರಿಗೆ ರೆವ್ಹರಂಡ ಝಿಗ್ಲರ ಎಂಬ ಹೆಸರಿನ ಪಾದ್ರಿ ಸಾಹೇಬರ ಸಂಪರ್ಕವಾಗಿ ಅವರಿಗೆ ಇಂಗ್ಲೀಷ ಕನ್ನಡ ನಿಘಂಟನ್ನು ಬರೆಯಲು ಪ್ರೋತ್ಸಾಹಿಸಿದರು.

ಆಗ ಕನ್ನಡದಲ್ಲಿ ಅಚ್ಚು ಹಾಕುವ ಯಂತ್ರಗಳಿರಲಿಲ್ಲ. ಆದಕ್ಕೋಸ್ಕರ ಜನರನ್ನು ಹುಡುಕಿ ಹುರಿದುಂಬಿಸಿ ಅಚ್ಚು ಹಾಕುವ ಯಂತ್ರಗಳನ್ನಿಡಿಸಿದರು. ಈ ಪ್ರಕಾರ ೩೫ ವರ್ಷಗಳ ವರೆಗೆ ನಿಃಸ್ವಾರ್ಥ ಬುದ್ಧಿಯಿಂದ ಕನ್ನಡಕ್ಕೂ ಕರ್ನಾಟಕಕ್ಕೂ ಹೇಳತೀರದಷ್ಟು ಸೇವೆಯನ್ನು ಸಲ್ಲಿಸಿ ಕನ್ನಡ ನುಡಿಯ ಪುನರುಜ್ಜೀವನದ ಜನಕರಾಗಿ ಅವರಿಗೋಸುಗ ಭವ್ಯವಾದ ತಳಹದಿಯನ್ನು ಹಾಕಿಟ್ಟರು. ಕನ್ನಡಿಗರು ಅವರ ಅಮೌಲ್ಯ ಸೇವೆಯನ್ನು ಮರೆಯುವದೆಂತು ?

ಕೊನೆಯ ಮಾತು

ಹೋದ ತಿಂಗಳು ೧೩ನೆಯ ದಿನಾಂಕ ಅವರ ಭಾವಚಿತ್ರದ ಅನಾವರಣ ಸಮಾರಂಭವು ಟ್ರೇನಿಂಗ ಕಾಲೇಜದ ಪ್ರಾರ್ಥನಾ ಮಂದಿರದಲ್ಲಿ ನಮ್ಮ ರಾಜ್ಯದ ಶಿಕ್ಷಣ ಮಂತ್ರಿಗಳಾದ ಸನ್ಮಾನ್ಯ ದಿನಕರರಾವ ದೇಸಾಯಿಯವರ ಅಮೃತ ಹಸ್ತದಿಂದ ವಿಜೃಂಭಣೆಯಿಂದ ಜರುಗಿತಷ್ಟೇ. ಆ ಸಂಸ್ಥೆಯ ಪ್ರಪ್ರಥಮ ಪ್ರಿನ್ಸಿಪಾಲರ ಭಾವಚಿತ್ರವನ್ನು ಪ್ರಾರ್ಥನಾ ಮಂದಿರದಲ್ಲಿಟ್ಟು ಗೌರವಿಸುವದು ಆ ಸಂಸ್ಥೆಗೊಂದು ಹೆಮ್ಮೆಯ ಮಾತು. ಹಾಗೆ ಮಾಡಿದ್ದಕ್ಕಾಗಿ ಅದು ಅಭಿನಂದನಾರ್ಹವಿದೆ. ಅವರಂತೆ ಸ್ಥಳಿಕ ಸಂಸ್ಥೆಯೊಂದು ಅವರ ಹೆಸರನ್ನು ಈ ಮೊದಲೇ ಶಾಶ್ವತಗೊಳಿಸಿದೆ. ಅದರ ಹೆಸರನ್ನು ಇಲ್ಲಿ ಉಲ್ಲೇಖಿಸಿದರೆ ಅದು ಅಪ್ರಸ್ತುತವಾಗಲಾರದೆಂದು ನಮ್ಮ ನಂಬುಗೆ. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಉಪಸಂಸ್ಥೆಯಾದ ಸಾಹಿತ್ಯ ಸಮಿತಿಯು ಕನ್ನಡ ಸಾಹಿತ್ಯಕ್ಕೆ ಅವರು ಸಲ್ಲಿಸಿದ ಅಪಾರವಾದ ಸೇವೆಯನ್ನು ಮನದಂದು ಅವರ ಹೆಸರನ್ನು ಸ್ಮಾರಕಗೊಳಿಸಲು ಲಿಂಗಾಯತ ನಗರ ಭವನದಲ್ಲಿಯ ತನ್ನ ಲಾಯಬ್ರರಿಗೆ "ಡೆಪ್ಯೂಟಿ ಚೆನ್ನಬಸವಪ್ಪ ಲಾಯಬ್ರರಿ" ಎಂದು ನಾಮಕರಣ ಮಾಡಿದೆ.

ಅವರು ಆದರ್ಶ ಶಿಕ್ಷಕರೂ ಅಹುದು ; ಪ್ರತಿಭಾವಂತ ಗಣಿತಜ್ಞರೂ ಅಹುದು; ಸಾರ್ವಜನಿಕಕಾರ್ಯಕರ್ತರೂ ಅಹುದು; ಸುಧಾರಕರೂ ಅಹುದು; ಉತ್ತರ ಕರ್ನಾಟಕದ ಆಧುನಿಕ ಪ್ರಪ್ರಥಮ ಶಿಕ್ಷಣ ತಜ್ಞರೂ ಅಹುದು; ನಾಮಾಂಕಿತ ವಾಗ್ಮಿಗಳೂ ಅಹುದು; ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಪ್ರಥಮ ಪ್ರಿನ್ಸಿಪಾಲರೂ ಅಹುದು. ಇಂತಪ್ಪ ಶ್ರೀ. ಚೆನ್ನಬಸವಪ್ಪನವರ ಆತ್ಮಕ್ಕೆ ದೇವರು ಚಿರಶಾಂತಿಯನ್ನೀಯಲಿ !

—: ಸುದ್ದಿ :—

ಭೋಜ (ಚಿಕ್ಕೋಡಿ):– ದಿನಾಂಕ ೧-೨-೧೯೫೫– ಈ ಊರಲ್ಲಿ ಗಂಡುಮಕ್ಕಳ ಸಲುವಾಗಿ ಲೋ. ಬೋ. ದವರ ಸಹಾಯದಿಂದ ಊರವರು ೨೨ ಕೋಣೆಗಳುಳ್ಳ ಭವ್ಯ ಸುಂದರವಾದ ಶಾಲಾಕಟ್ಟಡವನ್ನು ಕಟ್ಟಿಸಿ ಕೊಟ್ಟರು. ಇದಕ್ಕಾಗಿ ೭೫ ಸಾವಿರ ರೂ. ಗಳು ಖರ್ಚಾಗಿದ್ದು ಲೋ. ಬೋ. ದವರು ೩೫ ಸಾವಿರ ರೂ. ಗಳನ್ನೂ ಊರವರು ೪೦ ಸಾವಿರ ರೂ. ಗಳನ್ನು ಕೊಟ್ಟಿದ್ದಾರೆ. ಸದರೀ ಇಮಾರತಿಯ ಉದ್ಘಾಟನೆಯ ಸಮಾರಂಭವು ದಿನಾಂಕ ೨೯-೧-೫೫ ನೆಯ ದಿವಸ ಪ್ರೆಸಿಡೆಂಟ ಸಾ॥ ಲೋ. ಬೋ. ಬೆಳಗಾವರವರ ಅಮೃತ ಹಸ್ತದಿಂದ ಜರುಗಿತು.

ಇದೇ ಕಟ್ಟಡದಲ್ಲಿ ಮೂರು ಸಾವಿರ ರೂ. ಗಳನ್ನು ಖರ್ಚುಮಾಡಿ ಒಂದು ಸುಂದರವಾದ ಭಾವಿಯನ್ನು ತೆಗೆಯಿಸಿ ಕಟ್ಟಿಸಿ ಕೊಟ್ಟು ಶ್ರೀ ನಿರಂಜನ ಸಿದ್ದಪ್ಪಾ ಅವಟಿ ಭೋಜ ಇವರು ನೀರಿನ ಅನುಕೂಲತೆಯನ್ನು ಮಾಡಿಕೊಟ್ಟಿದ್ದಾರೆ. ಈ ಭಾವಿಯ ಉದ್ಘಾಟನವು ಶ್ರೀ. ಬಿ. ವಾಯ್. ದೇಶಪಾಂಡೆ (ಅಣ್ಣುಗುರೂಜಿ) ಇವರ ಅಮೃತ ಹಸ್ತದಿಂದ ದಿನಾಂಕ ೨೯-೧-೫೫ ನೆಯ ದಿನ ಜರುಗಿತು.

ಈ ಕೆಲಸಗಳನ್ನು ಮಾಡಿಸಿಕೊಟ್ಟು ತಮ್ಮ ಊರಿನ ಶಿಕ್ಷಣದ ಸೌಕರ್ಯವನ್ನು ಮಾಡಿಸಿಕೊಟ್ಟಿದ್ದಕ್ಕಾಗಿ ಲೋ. ಬೋ. ದವರಿಗೂ ಊರಜನರಿಗೂ ಧನ್ಯವಾದಗಳನ್ನು ಶಾಲೆಯ ಮುಖ್ಯಾಧ್ಯಾಪಕರು ಅರ್ಪಿಸುತ್ತಾರೆ.

ಕಳೆದು ಹೋದ ೧೯೫೪ನೆಯ ಇಸ್ವಿ

ಲೇಖಕರು:— ಶ್ರೀ ಹೆಗ್ಗರ್ಣೆ ಸುಬ್ರಾಯ ಸುಬ್ರಾಯ ಭಟ್ಟ

ಮಾನವಜನ್ಮವನ್ನು ತಾಳಿ ಭೂಮಿಯ ಮೇಲೆ ಜನಿಸಿದವರಿಗೆ ಕಷ್ಟ-ಸುಖಗಳೂ, ದುಃಖ-ಸಂತೋಷಗಳೂ ಒಂದಿಲ್ಲೊಂದು ಬಗೆಯಾಗಿ ಬಂದೇ ಬರುತ್ತವೆ. ಪ್ರತ್ಯಕ್ಷ ದೇವನೇ ಜನ್ಮ ತಾಳಿ ಭೂಮಿಯ ಮೇಲೆ ಬಂದರೂ ಆತನಿಗೆ ಸಹ ಈ ಬವಣೆಯು ತಪ್ಪುವದಿಲ್ಲ. ಅಂದ ಮೇಲೆ ಮಿಕ್ಕವರ ಪಾಡೇನು ?

ಶ್ರೀಮಂತನೆಂದು ದುಃಖವು ಬಿಡುವದಿಲ್ಲ. ಬಡವನೆಂದು ಸುಖವು ಅವರನ್ನು ತ್ಯಜಿಸಲಾರದು, ಕಡೆಗಣಿಸಲಾರದು. ಸುಖವು ಬರುವಾಗ ಸುಖವು ಬರುತ್ತದೆ. ದುಃಖವು ಬರುವಾಗ ದುಃಖವು ಬರುತ್ತದೆ. ಹೀಗೆ ಮಾನವಸಂಸಾರದಲ್ಲಿ ಸುಖ, ದುಃಖಗಳು ಸಮಭಾಗಿಗಳಾಗಿರುತ್ತವೆ. ಇದರಂತೆ ಕಳೆದು ಹೋದ ೧೯೫೪ನೆಯ ಇಸವಿಯೂ ಒಂದು ಸುಖದ ಇಸ್ವಿಯಾಗಿತ್ತು.

ಮೊದಲು ಎಂದರೆ ೧೮೫೭ರಲ್ಲಿ ಭಾರತವು ಪರಪಂಕದಲ್ಲಿ ಕೊಳೆಯಿತು. ಆದರೆ ಗಾಲಿಯ ಹಲ್ಲುಗಳಂತಿದ್ದ ಕಾಲಚಕ್ರವು ಹೊರಳಿತು, ಕೆಸರಿನ ಹಲ್ಲುಗಳು ಕೆಳಗಾಗುತ್ತ ಬಂದವು. ಅದರಂತೆ ಗಾಂಧೀಜಿ, ಟಿಳಕ ಮೊದಲಾದವರ ಜನ್ಮವಾಯಿತು. ಅವರು ಎಳೆತನದಲ್ಲಿರುವಾಗಲೇ ಭಾರತಮಾತೆಯು ಅವರ ದೇಹದಲ್ಲಿ ಸ್ವಾತಂತ್ರ್ಯಬೀಜವನ್ನು ಬಿತ್ತಿದಳು. ಆ ಬೀಜಕ್ಕೆ ಸತ್ಯವಾದ ನೀರನ್ನು ಎರೆದು ಆ ಬೀಜವು ಸಸಿಯಾಗುವಂತೆ ಮಾಡಿದಳು.

ಆ ಮೇಲೆ ಅವರು ಬೆಳೆದಂತೆ ಅವರ ದೇಹದಲ್ಲಿದ್ದ ಸಸಿಯು ಬೆಳೆದು ಹೆಮ್ಮರವಾಯಿತು. ಆಗ ಅವರು ಬ್ರಿಟಿಶರು ಮಾಡಿದಂತೆ ಎಂದರೆ ವ್ಯಾಪಾರದಿಂದ ಪ್ರಬಲರಾಗಿ ರಾಷ್ಟ್ರವನ್ನೇ ಹಿಡಿದುಕೊಂಡಂತೆ ಗಾಂಧೀಜಿ ಮೊದಲಾದವರು ವಾಕ್ ಸ್ವಾತಂತ್ರ್ಯವನ್ನು ಬೇಡಿದರು. ಮುಂದೆ ಮುದ್ರಣಸ್ವಾತಂತ್ರ್ಯ, ಆ ಮೇಲೆ ಪತ್ರಿಕಾ ಸ್ವಾತಂತ್ರ್ಯ ಮೊದಲಾದವುಗಳನ್ನು ದೊರಕಿಸಿಕೊಂಡು ರಾಷ್ಟ್ರದ ಸ್ವಾತಂತ್ರ್ಯ ಸಿದ್ಧತೆಯನ್ನು ನಡೆಸಿದರು. ನೋಡಿಬಿಡಬೇಕೆಂದು ಜನರನ್ನು ಒಟ್ಟುಗೂಡಿಸಿದರು. ಗಾಂಧಿಯವರು ಹೇಳಿದ ಮಾತಿಗೆ ಬ್ರಿಟಿಶರು ಒಪ್ಪದಿದ್ದರೆ ಸತ್ಯಾಗ್ರಹ ಆರಂಭಿಸಿ ಬಿಡುತ್ತಿದ್ದರು. ಆ ಮೇಲೆ ಚಲೇಜಾವ್ ಚಳವಳಿಯನ್ನೇ ಆರಂಭಿಸಿದರು. ಈಗ ಮಾತ್ರ ಬ್ರಿಟಿಶರು ನಿರುಪಾಯರಾದರು. ಅವರ ಕಣ್ಣುಗಳು ಕೆಂಪಗಾದವು. ಒಂದು ಕಡೆ ಶಸ್ತ್ರಾಸ್ತ್ರಗಳಿಂದ ಸಿದ್ಧವಾದ ಬ್ರಿಟಿಶರು ಒಂದು ಕಡೆ ನಿಶ್ಶಸ್ತ್ರಧಾರಿಗಳಾದ ಬಡಭಾರತೀಯರು. ಕೊನೆಗೆ ಭಾರತಿಯರೇ ಗೆದ್ದರು.

ಆದರೇನು ? ಬೊಕ್ಕಸವೆಲ್ಲ ಬರಿದು. ಆಮೇಲೆ ೧೯೫೦ ನೇ ಜನೇವರಿ ೨೬ ರಂದು ಭಾರತವು ಸರ್ವಪ್ರಭುತ್ವ ಸಂಪನ್ನ ಪ್ರಜಾರಾಜ್ಯವೆಂದು ಸಾರಿತು ಆ ಮೇಲೆ ಶಿಕ್ಷಣ ಪ್ರಸಾರವನ್ನು ಮೊದಲು ಕೈ ಕೊಂಡರು. ಅದರಲ್ಲಿ ವರ್ಷದಿಂದ ವರ್ಷಕ್ಕೆ ಸುಧಾರಣೆಯಾಗುತ್ತಲಿದೆ. ಯುದ್ಧದ ಕಾಲಕ್ಕೆ ಧಾನ್ಯದ ಕೊರತೆಯಾಗಿ ಆಹಾರ ಸಿಗುವದಿಲ್ಲವೆಂದು ಕಂಟ್ರೋಲನ್ನು ಇಟ್ಟಿದ್ದರೂ ವರ್ಷೇ ವರ್ಷೇ, ಹೆಚ್ಚು ಧಾನ್ಯ ಬೆಳೆದು ೧೯೫೪ ರಲ್ಲಿ ಕಂಟ್ರೋಲವನ್ನು ತೆಗೆದು ಹಾಕಿದರು. ೧೯೫೪ರವರೆಗೆ ಕೆಲವು ವಯಸು ಹೋದ ಮಂತ್ರಿಗಳಿದ್ದರು. ಅವರಲ್ಲಿ ಕೆಲವರಿಗೆ ವಿಶ್ರಾಂತಿ ಬೇಕಾಗಿತ್ತೋ ಏನೋ ? ಅದರಿಂದ ಅವರು ೧೯೫೪ ರಲ್ಲಿ ಪರಲೋಕಿಗಳಾದರು. ಅವರ ಸ್ಥಳಕೆ ತಾತ್ಪೂರ್ತಿಕ ಅಧಿಕಾರಿಗಳನ್ನು ಈಗ ನಿಯಮಿಸಿದ್ದಾರೆ. ಎಷ್ಟೋ ಹಳೆಯ ರಸ್ತೆಗಳ ದುರಸ್ತಿ, ಶಾಲೆ, ಕಾಲೇಜುಗಳ ಸ್ಥಾಪನೆ ಹೊಳೆ, ಹಳ್ಳಗಳಿಗೆ ಪೂಲು ಕಟ್ಟುವ ಅಪ್ಪಣೆ ಮೊದಲಾದ ಸಾರ್ವಜನಿಕ ಕೆಲಸಗಳನ್ನು ಕೈಕೊಂಡಿದ್ದು ೧೯೫೪ನೇ ಇಸ್ವಿಯಲ್ಲಿಯೇ ಮತ್ತು ಒಕ್ಕಲುತನಕ್ಕೆ ನೀರಾವರೀ ಯೊಜನೆ ಮಾಡಿಸಿ ಆಯ್ದಾರು ವರ್ಷಗಳಿಂದ ಕಟ್ಟುತ್ತಿದ್ದ ಜಗತ್ತಿನಲ್ಲಿಯೇ ಎರಡನೆಯ ಸ್ಥಾನಪಡೆದ "ಬಾಕರಾ ನಾಂಗಲ್" ಕಾಲುವೆಯ ಸಮಾರಂಭವೂ ೧೯೫೪ ನೆಯ ಇಸವಿಯಲ್ಲಿಯೇ ಆಗಿದೆ

ಇಷ್ಟೆಲ್ಲ ಸುಧಾರಣೆಯು ಆದ ಇಸ್ವಿಯು ಹಿಂದೆ ಎಂದೂ ಆಗಿರಲಿಲ್ಲ. ಇನ್ನು ಮುಂದೆ ಆಗುವದನ್ನು ನಾವು ಕಾಣಲಾರೆವು. ಇನ್ನು ನಮ್ಮ ಜನ್ಮದಲ್ಲೇಕೆ ಜಗತ್ತು ನಾಶವಾಗುವ ವರೆಗೆ ಕಳೆದ ೫೪ ನೆಯ ಇಸವಿಯು ಎಂದೂ ಯಾರಿಗೂ ಯಾರ ಸಂಸಾರದಲ್ಲೂ ಸಿಗುವದಿಲ್ಲವೆಂದು ನಿಸ್ಸಂದೇಹದಿಂದ ಹೇಳಲಿಕ್ಕೆ ಯಾರ ಅಂತಕವೂ ಬರಲಿಲ್ಲ.

ಭೂಮಿಯು ತನ್ನಿಂದಗಲಿದ ಚಂದ್ರನನ್ನೂ ಮತ್ತೆ ಕೂಡಿಕೊಳ್ಳಬಹುದು. ಚಕೋರವೆಂಬ ಪಕ್ಷಿಯು ತನ್ನಿಂದಗಲಿದ ಚಂದ್ರನ ಬೆಳಕನ್ನು ಮತ್ತೆ ಕೂಡಿಕೊಳ್ಳಲಿಕ್ಕೆ ಬರುತ್ತದೆ. ಸೂರ್ಯಶಿಲೆಯು ತನ್ನಿಂದಗಲಿದ ಸೂರ್ಯನನ್ನು ಮತ್ತೆ ಕೂಡಿಕೊಳ್ಳಲು ಬರುತ್ತದೆ. ಚಂದ್ರಶಿಲೆಯು ತನ್ನಿಂದಗಲಿದ ಚಂದ್ರನನ್ನು ಮತ್ತೆ ೨೪ ತಾಸಿನಲ್ಲಿ ಕೂಡಿಕೊಳ್ಳುತ್ತದೆ. ಆದರೆ ಗತಿಸಿಹೋದ ೧೯೫೪ನೆಯ ಇಸ್ವಿಯನ್ನು ೨೪ ವರ್ಷದಲ್ಲೇಕೆ ೨೪ ಯುಗ ಕಳೆದರೂ ೧೯೫೪ ನೆಯ ಇಸ್ವಿಯು ಸಿಗುವದಿಲ್ಲ. ಮುತ್ತು ಕಳೆದರೆ ಅದರಂತಿದ್ದ ಅನೇಕ ಮುತ್ತುಗಳನ್ನು ಕೊಳ್ಳಬಹುದು. ಒಮ್ಮೆ ರೊಕ್ಕವು ಕಳೆದರೆ ಅದನ್ನು ನೈ ಮುರಿದು ದುಡಿದು ಗಳಿಸಬಹುದು ಆದರೆ ೫೪ನೆಯ ಇಸ್ವಿಯು ಸಿಗುವದಿಲ್ಲ. ಒಮ್ಮೆ ಸೃಷ್ಟಿ, ಸ್ಥಿತಿಗಳೆಲ್ಲ ವಿರುದ್ಧವಾದರೂ ಎಂದರೆ ಅಗ್ನಿಯು ತಣ್ಣಗಾದರೂ, ಚಂದ್ರನು ಬಿಸಿಯಾದರೂ, ಮೇರು ಪರ್ವತವು ಚಲಿಸಿದರೂ, ಸಮುದ್ರ ಬತ್ತಿದರೂ, ಶ್ರೀ ಶಕೆ ೧೮೭೬ ನೆಯ ಜಯನಾಮ ಸಂವತ್ಸರದ ೧೯೫೪ನೆಯ ಇಸವಿಯುವ ಮಾತ್ರ ಇನ್ನೆಂದೂ ಬರಲಾರದು.

ಹೀಗೆ ಎಲ್ಲರ ಮೆಚ್ಚುಗೆಯನ್ನು ಪಡೆದು ನಗುನಗುತ ಹೋದ ೫೪ ನೆಯ ಇಸ್ವಿಯನ್ನು ನಾವು ಆನಂದದಿಂದ ಬೀಳ್ಕೊಟ್ಟೆವು. ಈಗ ಆ ಇಸ್ವಿಯನ್ನು ನೆನಪು ಮಾಡಿದರೆ ಕಣ್ಣಾಶ್ರುಗಳು ಧಾರೆಯಾಗಿ ಉದುರಿಬೀಳುತ್ತವೆ ಆದರೇನು? ಗತಿಸಿಹೋಯಿತು. ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ. ಈಗ ಅದು ಕಳೆದುಹೋದರೂ ಆ ಇಸ್ವಿಯನ್ನು ಮನವಾರೆ ಹೊಗಳುತ್ತಲಾದರೂ ಇರೋಣವೆಂದು ನನ್ನ ಹೆಬ್ಬಯಕೆ.

ವೃತ್ತಿ ಶಿಕ್ಷಣದ ಮೂಲದಲ್ಲಿರುವ ಮಾನಸ ಶಾಸ್ತ್ರದ ತತ್ವಗಳು

ಲೇಖಕರು :— ಶ್ರೀ. ಜಿ. ಎಸ್ ಗಲಗಲಿ

ಕರ್ಮೇಂದ್ರಿಯ-ಜ್ಞಾನೇಂದ್ರಿಯಗಳೂ, ಮನಸ್ಸಿನ ವಿವಿಧ ಶಕ್ತಿಗಳೂ ಏಕಕಾಲಕ್ಕೆ ತೊಡಗುವದರಿಂದ, ಕೈಕೆಲಸವು ವ್ಯಕ್ತಿಯ ಎಲ್ಲ ಶಕ್ತಿಗಳ ಸಹಯೋಗವನ್ನು (Co-ordination) ಸಾಧಿಸುತ್ತದೆ. ಪರಿಸ್ಥಿತಿಯನ್ನು ತನ್ನ ಉಪಯೋಗಕ್ಕಾಗಿ ಮಾರ್ಪಡಿಸಿಕೊಳುವುದೇ ಎಲ್ಲ ಕೆಲಸದ ಗುರಿಯು. ಇದಕ್ಕೆ ಉಪಾಯವೆಂದರೆ, ಈ ಜಗತ್ತನ್ನು ನಿಯಂತ್ರಿಸುವ ನಿಸರ್ಗ ನಿಯಮಗಳಿಗೆ ವ್ಯಕ್ತಿಯು ತಾನು ಹೊಂದಿಕೊಳ್ಳುವುದಾಗಿದೆ. ಶಾರೀರಿಕ ಕೆಲಸವು ಈ ಎರಡನ್ನೂ ಸಾಧಿಸುವುದು. ಕೈಯ್ಯಾರೆ ಮುಟ್ಟಬಹುದಾದ ಮೂರ್ತ ವಸ್ತು

ಗಳನ್ನು ನಿರ್ಮಿಸುವದರಲ್ಲಿ ಬಾಲಕರು ಎಷ್ಟು ಆನಂದ ಪಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಕೆಲಸದಲ್ಲಿ ಆನಂದ ಪಡುತ್ತಿದ್ದಾಗ, ಶ್ರೀ - ವ್ಯಕ್ತಿಗಳು ಒಂದಿಲ್ಲೊಂದು ದಿಸೆಯಲ್ಲಿ ಪ್ರಗತಿ ಮಾಡಿರುತ್ತಿದ್ದಾನೆ ಎಂಬುದಕ್ಕೆ ಸಾಕಷ್ಟು ಸಾಕ್ಷಿ.

ಮಗುವಿನ ಸ್ವಯಂಸ್ಫೂರ್ತ ಚಟುವಟಿಕೆ ಅಥವಾ ಆಟವು ಎಲ್ಲ ಆಧುನಿಕ ಶಿಕ್ಷಣ ಪದ್ಧತಿಗಳ ಮೂಲದಲ್ಲಿದೆ. ರೂಸೋ, ಪೆಸ್ಟಾಲಾಯಿ, ಫ್ರೊಬೆಲ್, ಮೊಂಟೆಸೊರಿ, ಮೊದಲಾದ ಶಿಕ್ಷಣತಜ್ಞರು ಈ ಕ್ರೀಡಾ ತತ್ವವನ್ನೇ ತಮ್ಮ ಪದ್ಧತಿಗಳ ಕೇಂದ್ರದಲ್ಲಿರಿಸಿದ್ದಾರೆ. ಮನುಷ್ಯನ ಅನೇಕ ಕಾರ್ಯಗಳೆಲ್ಲ ಕ್ರೀಡಾಭಾವನೆಯಿಂದಲೇ ಸ್ಫುರಿತವಾಗುತ್ತವೆ ಹಾಗಾದರೆ ಕೆಲಸ ಹಾಗೂ ಕ್ರೀಡೆ ಇವುಗಳ ನಡುವಿನ ಅಂತರವೇನು? ಇದನ್ನು ಸಂಕ್ಷೇಪವಾಗಿ ಹೀಗೆ ಹೇಳಬಹುದು. ಇತರ ಯಾವ ಉದ್ದೇಶವನ್ನೂ ಸಾಧಿಸುವದಿರದೆ, ಚಟುವಟಿಕೆಗಾಗಿಯೇ ಸಾಗಿದ ಸ್ವಯಂಸ್ಫೂರ್ತ ಚಟುವಟಿಕೆಯು ಆಟವೆನಿಸುತ್ತದೆ. ಅದಕ್ಕೆ ಬೇರೊಂದು ಉದ್ದೇಶವಿದ್ದರೆ, ಅದು ಕೆಲಸ. ಆಟದಲ್ಲಿ ಆನಂದವಿರುತ್ತದೆ. ಕೆಲಸದಲ್ಲಿ ಅದು ಇರಲೇಬೇಕು ಎಂಬ ನಿಯಮವಿಲ್ಲ. ಆದರೆ ಕೌಶಲ್ಯಪೂರ್ವಕವಾಗಿ ನೆರವೇರಿಸಿದರೆ, ನಮ್ಮ ಜೀವನದ ಎಲ್ಲ ಕಾರ್ಯಗಳೂ ಲೀಲಾಮಾತ್ರವಾಗಿಯೇ ಸಾಗಬಲ್ಲವು. ಇದರ ಅರ್ಥವು ಗಂಭೀರ ಕಾರ್ಯಗಳನ್ನೆಲ್ಲ ಹಗುರಾದ ಮನೋರಂಜನೆಗಳಿಗೆ ಇಳಿಸಬೇಕು ಎಂದು ಅಲ್ಲ; ಆದರೆ ಕಠಿಣ ಹಾಗೂ ನಿರಸ ಕೆಲಸಗಳಲ್ಲಿಯೂ ಆನಂದಾಂಶವನ್ನು ತುಂಬಬೇಕು ಎಂದು ಆಗಿದೆ.

ಬಾಲಕನ ವ್ಯಕ್ತಿತ್ವ ಪೋಷಣೆಯಲ್ಲಿಯೇ ಶಿಕ್ಷಣದ ಗುರಿ. ಬೋಧ ವಿಷಯಗಳು, ಕಲಿಸುವ ಪದ್ಧತಿ, ಶಾಲೆಯ ಶಿಸ್ತು ಇವೆಲ್ಲವೂ ಅದಕ್ಕೇ ಸಹಾಯಕಾರಿಯಾಗಿರಬೇಕು, ಇದಕ್ಕೆಲ್ಲ ಅತ್ಯುತ್ತಮ ಸಾಧನವೆಂದರೆ ಆಟವು. ಆದ್ದರಿಂದ ನಮ್ಮ ಶಾಲೆಗಳಲ್ಲಿ ಬಾಲಕರು ಸ್ವೇಚ್ಛೆಯಿಂದ ಮಗ್ನನಾಗಬಹುದಾದ ಶಾರೀರಿಕ ಚಟುವಟಿಕೆಗಳು ಹೇರಳವಾಗಿದ್ದು, ಪುಸ್ತಕ ಮುಖಾಂತರ ಕಲಿಯುವದು ಆದಷ್ಟು ಕಡಿಮೆಯಾಗಿರಬೇಕು. ಪ್ರಸಿದ್ಧ ಶಿಕ್ಷಣ ತಜ್ಞರಾದ ಶ್ರೀ 'ನನ್ನ' ಇವರು ಹೇಳುವಂತೆ "ಕಲೆ ಕೈಗಾರಿಕೆ, ಭೌಗೋಲಿಕ ಹಾಗೂ ಶಾಸ್ತ್ರೀಯ ಸಂಶೋಧನೆ ಮೊದಲಾದವುಗಳು ರಚನಾತ್ಮಕ ಚಟುವಟಿಕೆಗಳಾಗಿದ್ದು, ಆಟದ ವಿಶೇಷಾಂಶಗಳನ್ನು ಒಳಗೊಂಡಿವೆ. ಅಂತೆಯೇ ವ್ಯಕ್ತಿತ್ವ ಪೋಷಣೆಗೆ ಸಹಾಯಕವಾಗಿವೆ."

ಕಾರ್ಯವನ್ನು ಕ್ರೀಡಾರೂಪವಾಗಿ ಪರಿಣಮಿಸಲು ಇನ್ನೊಂದು ಮಹತ್ವದ ಅಂಶವು ನಮಗೆ ಸಹಾಯಕಾರಿಯಾಗಿದೆ. ಅಂದರೆ ಆಸ್ಥೆ. ಇದು ಎಲ್ಲ ರಚನಾತ್ಮಕ ಚಟುವಟಿಕೆಗಳ ತಳಹದಿಯಾಗಿದೆ. ಶಿಕ್ಷಣವು ಆಸ್ಥೆಯ ಮೇಲೆಯೇ ಆಧಾರಿತವಾಗಿದ್ದು ಅದರ ಹೊರತು ಅಥವಾ ಅದರ ಆಚೆಗೆ ಯಾವದನ್ನು ಬೋಧಿಸಲು ಪ್ರಯತ್ನಿಸಕೂಡದು. ಈ ಸಂಸ್ಥೆಯೆಂಬುದು ಎರಡು ಪ್ರಕಾರದ್ದು. ಒಂದು ಸಹಜ ಮತ್ತೊಂದು ಪರಿಪಾಠಿತ. ಮನುಷ್ಯನ ಮೂಲ ಪ್ರವೃತ್ತಿಗಳೇ ಸಹಜವಾದ ಆಸ್ಥೆಯ ಉಗಮವಾಗಿವೆ. ಆದರೆ ಒಂದು ವಿಚಾರ ಅಥವಾ ಒಂದು ವಸ್ತು ಇಲ್ಲವೆ ಒಬ್ಬ ವ್ಯಕ್ತಿ ಇವುಗಳ ಸುತ್ತು ರಸಭಾವಗಳು ಸಂಘಟಿತವಾಗುತ್ತವೆ. ಆಗ ಇವೂ ಕೂಡ ಮನುಷ್ಯನ ಆಸ್ಥೆಯ ವಿಷಯಗಳಾಗಬಹುದು. ಇದು ಸಂಪಾದಿತ ಆಸ್ಥೆ. ಇವೆರಡರಲ್ಲಿ ಸಹಜ ಆಸ್ಥೆಯೇ ಬಲವತ್ತರವಾದದ್ದು. ಯಾಕೆಂದರೆ ಅದು ಸ್ವಾಭಾವಿಕವಾಗಿರುತ್ತದೆ. ಆದರೆ ಎಷ್ಟೋ ಸಲ ಸಹಜ ಆಸ್ಥೆಯಷ್ಟೇ ಸಂಪಾದಿತ ಆಸ್ಥೆಯೂ ಪ್ರಬಲವಾಗಿರುತ್ತದೆ. ಆದ್ಯ ಪ್ರವೃತ್ತಿ ರಸ, ಮನುಷ್ಯನ ಸಂಘಟಿತ ವ್ಯಕ್ತಿತ್ವ ಇವು ಉಗಮಸ್ಥಾನವಾದಂತೆ ಆಸ್ಥೆಯ ಸ್ವರೂಪವು ಹೆಚ್ಚು ಹೆಚ್ಚು ಉನ್ನತವಾಗುತ್ತ ಹೋಗುತ್ತದೆ, ಆದರೆ ಈ ಭಿನ್ನ ತರಗತಿಯ ಆಸ್ಥೆಗಳಿಗೆಲ್ಲ ಶಿಕ್ಷಣದಲ್ಲಿ ಸ್ಥಾನವಿದೆ. ಪ್ರಾರಂಭದಲ್ಲಿ ಮೂಲ ಪ್ರವೃತ್ತಿಗಳಿಗೆ ಸಂಬಂಧಪಟ್ಟ ಆಸ್ಥೆಯನ್ನಷ್ಟೇ ಬಳಸಿಕೊಳ್ಳಬೇಕು. ಯಾಕೆಂದರೆ ಚಿಕ್ಕ ಮಕ್ಕಳಲ್ಲಿ ರಸಗಳಾಗಲಿ, ವ್ಯಕ್ತಿತ್ವವಾಗಲಿ ಇನ್ನೂ ಸಂಘಟಿತವಾಗಿರುವದಿಲ್ಲ. ಆಗ ಗಾಳಿ ಗೋಪುರದಂತೆ ವಿಷಯಜ್ಞಾನವನ್ನು ಅವರಲ್ಲಿ ತುಂಬುವ ಗೊಡವೆಗೆ ಹೋಗದೆ ಅವರನ್ನು ಒಂದು ಪ್ರತ್ಯಕ್ಷ ಸನ್ನಿವೇಶವನ್ನು ಎದುರಿಸಲು ಬಿಟ್ಟು ಬಿಡಬೇಕು. ವಸ್ತುಗ-

ಳನ್ನು ಕೈಯಲ್ಲಿ ಹಿಡಿಯಲು ಕೊಡಬೇಕು. ಇದರಿಂದ ಅವರ ಮೂಲಪ್ರವೃತ್ತಿಗಳು ಕೆರಳುತ್ತವೆ. ಯಾವದೇ ಕೈಗಾರಿಕೆ ಇರಲಿ, ಅದು ಅವರ ರಚನಾತ್ಮಕ ಭಾವನೆಗಳನ್ನು ಉದ್ದೀಪಿಸುವದು. ಶಿಕ್ಷಕನು ಆಗ ಸಮಯಗಳನ್ನು ಉದ್ದೀಪಿಸುವದು. ಶಿಕ್ಷಕನು ಆಗ ಸಮಯ- ಮತ್ತು ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಜ್ಞಾನವನ್ನು ಸಮವೇತಗೊಳಿಸಬಲ್ಲನು.

ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಬಾಲಕರು ಆನಂದಪಡುತ್ತಾರೆ; ಮತ್ತು ವಿಚಾರಗಳು ಅವರ ಮನದಲ್ಲಿ ಯಾವಾಗಲೂ ಕೃತಿಗಳೊಂದಿಗೆ ಸಾಲಗ್ನವಾಗಿರುತ್ತವೆ. ಆದ್ದರಿಂದ ಈ ದಿಶೆಯಲ್ಲಿ ಅವರ ಶಿಕ್ಷಣಕ್ಕಾಗಿ ಸಾಮಗ್ರಿಯನ್ನು ಅವರ ಸುತ್ತುಮುತ್ತಲಿನ ಪರಿಸರದೊಳಗಿಂದಲೇ ಆರಿಸಿಕೊಳ್ಳತಕ್ಕದ್ದು. ಕಣ್ಣಾರೆ ಕಾಣಬಲ್ಲ ಕೈಯ್ಯಾರೆ ಮುಟ್ಟಬಲ್ಲ ವಸ್ತುಗಳು ಸಣ್ಣ ಪ್ರಮಾಣವಾದ ಉದ್ಯೋಗ-ವ್ಯವಸಾಯಗಳೂ ಕಲೆ ಕೈಗಾರಿಕೆಗಳೂ ಇವನ್ನು ಒದಗಿಸಬಲ್ಲವು. ಕೃತಿಯ ಮುಖಾಂತರವೇ ಅರಿತುಕೊಳ್ಳುವದು ಶೈಶವಾವಸ್ಥೆಯ ವೈಶಿಷ್ಟ್ಯವಾಗಿದೆ. ಆದ್ದರಿಂದ ಕೃತಿ ಹಾಗೂ ಜ್ಞಾನ ಇವುಗಳ ನಡುವಿನ ಈ ನಿಕಟ ಸಂಬಂಧವು ತಪ್ಪದಂತೆ ಈ ಚಟುವಟಿಕೆಗಳನ್ನು ಸಂಘಟಿಸಬೇಕು. ಇವು ಕೇವಲ ಶಿಕ್ಷಕನ ಆದೇಶದಂತೆ ಸಾಗಕೂಡದು. ಹಾಗೆ ಆದರೆ ಬಾಲಕರ ಮನಸ್ಸು ಯಾವ ಸಂಸ್ಕಾರವನ್ನೂ ಹೊಂದುವದಿಲ್ಲ. ಏನಾದರೂ ಲಾಭವಾಗುತ್ತಿದ್ದರೆ ಅದು ಕೇವಲ ಶಾರೀರಿಕ ಮಾತ್ರ. ಒಂದು ವಸ್ತುವನ್ನು ನಿರ್ಮಿಸಲು ಹೊರಟ ಬಾಲಕನಿಗೆ ನಿರ್ದಿಷ್ಟವಾದ ಒಂದು ಗುರಿ ಇರುತ್ತದೆ. ಅದನ್ನು ಮುಟ್ಟಲು ತಕ್ಕ ಉಪಾಯವನ್ನು ಯೋಜಿಸಲಿಕ್ಕೆ ಅವನಿಗೆ ಸ್ವಾತಂತ್ರ್ಯವಿರಬೇಕು. ಆಗ ಮಾತ್ರ ಅವನ ಸಮಗ್ರ ಮನಸ್ಸೆಲ್ಲ ಅದರಲ್ಲಿ ಮಗ್ನವಾಗುವದು. [illegible] ಅಡಚಣೆಗಳು ಬಂದರೆ ಅವನ್ನು [illegible] ಉಪಾಯವನ್ನು ತಾನಾಗಿಯೇ ಕಂಡುಕೊಂಡು [illegible] ಅನುಭವದಿಂದ ಬೌದ್ಧಿಕ [illegible] ಪಡೆಯುತ್ತಾನೆ.

ಈ ತರದ ಚಟುವಟಿಕೆಯು ಅವನ ಮನಃಶರೀರಗಳೆರಡನ್ನೂ ಸಂಪೂರ್ಣವಾಗಿ ವಿನಿಯೋಗಿಸುವದರಿಂದ ನಿಜವಾದ ಅರ್ಥದಲ್ಲಿ ಅದು ಅವನ ವೃತ್ತಿ ಅಥವಾ ವ್ಯವಸಾಯವಾಗುತ್ತದೆ. ಈಗ ಅವನು ತಾನು ಕೈಕೊಂಡ ಕಾರ್ಯದಲ್ಲಿ ಆಸ್ಥೆ ವಹಿಸುತ್ತಾನೆ. ಅರ್ಥಾತ್ ಸಂಪೂರ್ಣ ಲಕ್ಷ್ಯಗೊಡುತ್ತಾನೆ. ಅದು ವಿಚಲಿತವಾದರೆ ಅವನ ಕೆಲಸವು ಕೆಡುತ್ತದೆ. ಈ ತರದ ಕೆಲಸದಲ್ಲಿ ಆದ ತಪ್ಪುಗಳು ಸರಿಪಡಿಸುವ ಮಾರ್ಗವನ್ನು ತಾವಾಗಿಯೇ ಸೂಚಿಸುತ್ತವೆ. ಗಣಿತ ಭಾಷಾ ಮೊದಲಾದ ವಿಷಯಗಳಲ್ಲಾದ ಪ್ರಮಾದಗಳು ಸಹಜ ಅವನಿಗೆ ಕಂಡುಬರುವದಿಲ್ಲ. ಶಿಕ್ಷಕನು ಎತ್ತಿ ತೋರಿಸಿದಾಗಲೇ ಅವನ್ನು ಕಾಣುವನು. ಅರಿತ ಮೇಲೂ ಅವನ್ನು ಗಣನೆಗೆ ತರುವದಿಲ್ಲ. ಆದರೆ ಕೈ-ಕೆಲಸದಲ್ಲಿ ಮಾತ್ರ ಪರಿಸ್ಥಿತಿ ಬೇರೆ ಇರುವದು. ಅಲ್ಲಿ ಬಾಲಕನಿಗೆ ತನ್ನ ತಪ್ಪು ಒಮ್ಮೆಲೆ ಸ್ಪಷ್ಟವಾಗುವದು. ಅದನ್ನು ಯಾರೂ ತೋರಿಸಿಕೊಡುವ ಕಾರಣವೂ ಇಲ್ಲ, ಅದರ ಜೊತೆಗೆ ಅಸಮಾಧಾನವೂ ಉಂಟಾಗುವದು ಮುಂದಿನ ಸಲ ಹೆಚ್ಚು ಅವಧಾನವನ್ನು ಪೂರೈಸಲು ನಿಶ್ಚಯಿಸುವನು. ಹಸ್ತವ್ಯವಸಾಯದಲ್ಲಿ ತೊಡಗಿದಾಗ ನಿರೀಕ್ಷಣ, ವಿವೇಚನ, ಕಲ್ಪನಾ, ಊಹೆ ಹೀಗೆ ಮನಸ್ಸಿನ ಎಲ್ಲ ಉಚ್ಚ ಶಕ್ತಿಗಳೂ ಕೇಂದ್ರೀಕೃತವಾಗುತ್ತವೆ. ಮೇಲಾಗಿ, ಹಸ್ತವ್ಯವಸಾಯವು ಅಚ್ಚುಕಟ್ಟುತನ ಸಮರ್ಪಕತೆ (accuracy) ಸಾರಂಗಮನ (Thoruoghness) ಕೌಶಲ ಮೊದಲಾದ ಸದ್ಗುಣಗಳನ್ನೂ ಕಾರ್ಯದಲ್ಲಿ ಪ್ರಾಮಾಣಿಕತೆ, ಕೂಡಿ ಕೆಲಸ ಮಾಡೋಣ (groupwork) ಶ್ರಮಗೌರವ, ಮಿತವ್ಯಯ ಕಲ್ಪಕತೆ (originality), ಆತ್ಮವಿಮರ್ಶ (selfcriticism) ಮೊದಲಾದ ಒಳ್ಳೆಯ ಒಲವುಗಳನ್ನು ಪೋಷಿಸುತ್ತದೆ. ಇದೆಲ್ಲದರ ಪರಿಣಾಮವಾಗಿ ಬಾಲಕರ ಶಾರೀರಿಕ, ಮಾನಸಿಕ, ಸಾಮಾಜಿಕ ಹಾಗೂ ನೈತಿಕ ಉನ್ನತಿಯಾಗುತ್ತದೆ.

೧೯೫೫ ನೆಯ ಎಪ್ರಿಲದಲ್ಲಿ ಜರುಗಲಿರುವ ಗಂಡು ಮತ್ತು ಹೆಣ್ಣು ಮಕ್ಕಳ

ಸಾಮಾನ್ಯ ಪ್ರಾಥಮಿಕ ಶಾಲಾ ಪ್ರಮಾಣ-ಪತ್ರ ಪರೀಕ್ಷೆಯ

ಕಾರ್ಯಕ್ರಮ

ವಾರ ಮತ್ತು ದಿನಾಂಕ	ವೇಳೆ ಇಂದ–ವರೆಗೆ	ವಿಷಯ	ಗುಣಗಳು
ಸೋಮವಾರ ೧೧-೪-೧೯೫೫	೧೦–೩೦ ೧೧–೧೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರ ಹಾಜರಿ	
	೧೧–೩೦ ೨ – ೦	೧ನೆಯ ಸದರ:– ಪ್ರಾದೇಶಿಕ ಭಾಷೆ (೨ನೆಯ ಭಾಗವು: ಪ್ರಬಂಧ ಮತ್ತು ವ್ಯಾಕರಣ)	೧೦೦
	೩– ೦ ೬ – ೦	೪ ನೆಯ ಸದರ:– ವಿಜ್ಞಾನ (ಸಾಯನ್ಸ)	
		(i) ಶರೀರಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ, ಸಸ್ಯ ಮತ್ತು ಪ್ರಾಣಿಗಳ ಅಭ್ಯಾಸ ಮತ್ತು ಸಾಮಾನ್ಯ ಪ್ರಾಥಮಿಕ ವಿಜ್ಞಾನ– ಗಂಡು ಮಕ್ಕಳಿಗಾಗಿ (ಸಾಮಾನ್ಯ ಶಾಲೆಗಳು)	೧೦೦
		(ii) ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಹಾಗು ಗೃಹ ವಿಜ್ಞಾನ–ಹೆಣ್ಣು ಮಕ್ಕಳಿಗಾಗಿ– (ಸಾಮಾನ್ಯ ಶಾಲೆಗಳು)	೧೦೦
		(iii) ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಹಾಗು ಪ್ರಾಣಿಶಾಸ್ತ್ರ ಮತ್ತು ನೂಲುವ ಮತ್ತು ನೇಯಿಗೆಯ ಯಾಂತ್ರಿಕ ಜ್ಞಾನ ವನ್ನೊಳಗೊಂಡು ಸಾಮಾನ್ಯ ವಿಜ್ಞಾನ	೧೦೦
		(iv) ಶರೀರ ಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ, ಪ್ರಾಣಿ ಮತ್ತು ಸಸ್ಯಗಳ ಅಭ್ಯಾಸ ಹಾಗು ಕಟ್ಟಿಗೆಯ ಕೆಲಸಕ್ಕೆ ಸಂಬಂಧಿಸಿದ ಸಾಮಾನ್ಯ ವಿಜ್ಞಾನ	೧೦೦
		(v) ಕೃಷಿವಿಜ್ಞಾನ– (ಒಕ್ಕಲತನದ ಶಾಲೆಗಳ ಉಮೇದವಾರರಿಗಾಗಿ)	೧೦೦
ಮಂಗಳವಾರ ೧೨-೪-೧೯೫೫	೧೧–೦ ೨–೦	೨ ನೆಯ ಸದರ :— ಗಣಿತ (೧ನೆಯ ಭಾಗದ: ಅಂಕಗಣಿತ)	೧೦೦
	೩–೦ ೬–೦	೩ ನೆಯ ಸದರ:— ಇತಿಹಾಸ, ಭೂಗೋಲ ಮತ್ತು ಪೌರನೀತಿ	೧೦೦

(ಹಿಂದೆ ನೋಡಿರಿ)

ವಾರ ಮತ್ತು ದಿನಾಂಕ	ವೇಳೆ ಆರಂಭ–ವರೆಗೆ	ವಿಷಯ	ಗುಣಗಳು
ಬುಧವಾರ ೧೩-೪-೧೯೫೫	೧೧-೦ ೧-೦	೧ ನೆಯ ಸದರ: - **ಪ್ರಾದೇಶಿಕ ಭಾಷೆ** (೧ ನೆಯ ಕಾಗದ:— ಗದ್ಯ, ಪದ್ಯ ಮತ್ತು ವ್ಯಾಕರಣ)	೧೦೦
	೩-೦ ೬-೦	೨ ನೆಯ ಸದರ:— ಗಣಿತ (೨ ನೆಯ ಕಾಗದ:— ಭೂಮಿತಿ ಮತ್ತು ಜಮಾಖರ್ಚು	೧೦೦
ಗುರುವಾರ ೧೪-೪-೧೯೫೫	೧೧-೦ ೧-೦	೬ ನೆಯ ಸದರ:— (ಐಚ್ಛಿಕ) ಹಿಂದೀ	೧೦೦
	೩-೦ ೬-೦	೫ ನೆಯ ಸದರ:— ಸೂಜಿಗೆಲಸ, ಚಿತ್ರಕಲೆ (ಡ್ರಾಯಿಂಗ್), ಪ್ರಾಯೋಗಿಕ ಒಕ್ಕಲತನ ಮತ್ತು ನೂಲುವದು ಹಾಗೂ ನೇಯುವದು, ಕಟ್ಟಿಗೆಯ ಕೆಲಸ, ಹೊಲಿಗೆ.*	೧೦೦
ಶುಕ್ರವಾರ ೧೫-೪-೧೯೫೫	೧೧-೦ ೨-೦	೬ ನೆಯ ಸದರ:— (ಐಚ್ಛಿಕ) ಸಂಗೀತ ಕಾಗದ ಮತ್ತು ರಟ್ಟಿನ–ಕೆಲಸ, ಬೆತ್ತದ ಕೆಲಸ, ಮತ್ತು ಚರ್ಮದ ಕೆಲಸ	೧೦೦
	೩-೦ ೫-೦	೧ ನೆಯ ಸದರ:— ೩ ನೆಯ ಕಾಗದ † ಸ್ಥಾನಿಕ ಪ್ರಾದೇಶಿಕ ಭಾಷೆ	೫೦

ಸೂಚನೆ:— ಪರೀಕ್ಷೆಯ ಮೊದಲನೆಯ ದಿವಸ ಪರೀಕ್ಷೆ ಆರಂಭವಾಗುವದಕ್ಕಿಂತ ಒಂದು ತಾಸು ಮುಂಚಿತವಾಗಿ ಉಮೇದವಾರರು ಪರೀಕ್ಷಾ-ಮಂದಿರಗಳಲ್ಲಿ ಹಾಜರ ಇರತಕ್ಕದ್ದು.

*ಬೇಸಿಕ್ ಶಾಲೆಗಳಿಂದ ಪರೀಕ್ಷೆಗೆ ಕೂಡ್ರುವ ಉಮೇದವಾರರ ನೂಲುವದು ಮತ್ತು ನೇಯಿಗೆಯ ಪ್ರಾಯೋಗಿಕ ಪರೀಕ್ಷೆಯನ್ನು ಬರೆಹದ ಪರೀಕ್ಷೆಯ ಮೊದಲು ಅನುಕೂಲವಾದ ತಾರೀಖಿನ ದಿನ ಏರ್ಪಡಿಸಲಾಗುವದು.

† ಸ್ಥಾನಿಕ ಪ್ರಾದೇಶಿಕ ಭಾಷೆಯಲ್ಲದ ಮತ್ತೊಂದು ಪ್ರಾದೇಶಿಕ ಭಾಷೆಯ ಮುಖಾಂತರ ಶಿಕ್ಷಣ ಪಡೆಯುತ್ತಿರುವ ಮತ್ತು ಉರ್ದು ಪ್ರಾಥಮಿಕ ಶಾಲೆಗಳ ಉಮೇದವಾರರಿಗೆ ಕಡ್ಡಾಯ-ದ್ದಾಗಿರುವದು.

ಮುಂಬಯಿ, ಮುಂಬಯಿಯ ಉಪನಗರ ಜಿಲ್ಹೆಗಳು ಮತ್ತು ಭಾಷಾವಾರ ಪ್ರದೇಶಗಳ ಗಡಿಯ ಕ್ಷೇತ್ರಗಳಲ್ಲಿ ಮರಾಠಿ, ಗುಜರಾಥಿ ಮತ್ತು ಕನ್ನಡಗಳಲ್ಲಿ ಯಾವದೇ ಒಂದು ಪ್ರಾದೇಶಿಕ ಭಾಷೆಯ ಮುಖಾಂತರ ಶಿಕ್ಷಣ ಪಡೆಯುತ್ತಿರುವ ಉಮೇದವಾರರಿಗೆ ಐಚ್ಛಿಕವಾಗಿರುವದು.

ಜಿಲ್ಹಾ ಶಿಕ್ಷಣಾಧಿಕಾರಿಗಳ ಕಚೇರಿ, ಧಾರವಾಡ
ದಿನಾಂಕ: ೫-೧-೧೯೫೫

ಕೆ. ಬಿ. ತೇರಗಾಂವಕರ
ಜಿಲ್ಹಾ ಶಿಕ್ಷಣಾಧಿಕಾರಿ, ಧಾರವಾಡ

ಸಮವಾಯ ಪಾಠದ ಟಿಪ್ಪಣಿ

ಶಿಕ್ಷಕನ ಹೆಸರು:— ಶ್ರೀ. ವಿ. ಅಂ. ಉಮರಾಣಿ.
ಘಟುವಟಿಕೆ :— ಗಾಳಿಯ ಚಕ್ರವನ್ನು ತಯಾರಿಸುವದು
ಸಮನ್ವಯಿತ ವಿಷಯು:— ಭಾಷೆ .

ವರ್ಗ:— ೧ ನೆಯ ಇಯತ್ತೆ
ಹಾಜರ ಸಂಖ್ಯೆ:— ೨೪
ದಿನಾಂಕ:— .... ವೇಳೆ:— ೨೦ ಮಿನಿಟುಗಳು

ಅ. ನಂ.	ಮೆಟ್ಟುಗಳು ಹಾಗೂ ಅವುಗಳ ವಿವರ	ಆವಶ್ಯಕ ಸಂಗತಿಗಳು	ಕೆಲಸ ಮಾಡುವ ಕ್ರಮ	ಕರಿಹಲಗೆಯ ಬರಹ
೧	ಯೋಜನೆ:— (ಅ) ಪ್ರೇರಣೆ	೬-೭ ವರ್ಷದ ಚಿಕ್ಕಬಾಲಕರು ತಮ್ಮ ಆಟಿಗೆಯ ಸಾಮಾನುಗಳನ್ನು ಮತ್ತು ಮಂಟಪ ಇತ್ಯಾದಿಗಳನ್ನು ಶೃಂಗರಿಸಲು ಅವಶ್ಯವಿರುವ ಸಾಮಾನುಗಳನ್ನು ತಯಾರಿಸಬಲ್ಲರು. ಮುಖ್ಯವಾಗಿ ಮಣ್ಣಿನ ಮತ್ತು ಕಾಗದದ ಸಾಮಾನುಗಳನ್ನು ಮಾಡಬಲ್ಲರು. ಅವುಗಳಲ್ಲಿ ಗಾಳಿಯ ಚಕ್ರವು ಒಂದು. ಇದರಿಂದ ಚಿಕ್ಕ ಬಾಲಕರು ಆನಂದ ಪಡೆಯುವರು. ಮಂಟಪವನ್ನು ಶೃಂಗರಿಸುವರು. ಕಾರಣ ಗಾಳಿಯ ಚಕ್ರವನ್ನು ತಯಾರಿಸುವದು ಅವಶ್ಯ.	ಬಾಲಕರೇ, ಮುಂಬರುವ ಹುಣ್ಣಿವೆ ಯಾವುದು? ಆಗ ನೀವು ಏನನ್ನು ಮಾಡುವಿರಿ? ಕಾಮಣ್ಣನ ಮಂಟಪವನ್ನು ಶೃಂಗರಿಸಲು ಯಾವ ಯಾವ ಕಾಗದದ ಸಾಮಾನುಗಳನ್ನು ಉಪಯೋಗಿಸುವಿರಿ? ಅವುಗಳಲ್ಲಿ ಆನಂದವನ್ನು ಉಂಟು ಮಾಡುವ ವಸ್ತು ಯಾವುದು? ಗಾಳಿಯಿಂದ ತಿರುಗುವ ಆಟದ ಸಾಮಾನು ಯಾವುದು?	ಘ:- ಗಾಳಿಯ ಚಕ್ರವನ್ನು ತಯಾಸುವದು.
	(ಬ) ಕೆಲಸದ ಮುನ್ನೋಟ:—	ಗಾಳಿಯ ಚಕ್ರವನ್ನು ತಯಾರಿಸುವದರಲ್ಲಿ ಕೆಳಗಿನ ಉಪಕ್ರಿಯೆಗಳಿರುವವು:— (೧) ಮಡಿಚುವದು. (೨) ಗುರುತಿಸುವದು. (೩) ಕತ್ತರಿಸುವದು. (೪) ಮೂಲೆಗಳನ್ನು ಮಡಿಚಿ ಟಾಚನಿಯನ್ನು ಚುಚ್ಚುವದು.	ನಿಮಗೆ ಗಾಳಿಯ ಚಕ್ರವನ್ನು ತಯಾರಿಸಲು ಬರುತ್ತದೆಯೋ? ಅದನ್ನು ಹೇಗೆ ತಯಾರಿಸುವಿರಿ? [ಅವಶ್ಯಬಿದ್ದಲ್ಲಿ ಶಿಕ್ಷಕರು ಸರಿಯಾದ ಪದ್ಧತಿಯಿಂದ ತಯಾರಿಸಿ ಬಾಲಕರಿಗೆ ಉಪಕ್ರಿಯೆಗಳ ಕಲ್ಪನೆ ಮಾಡಿ ಕೊಡಬೇಕು.]	ಉಪಕ್ರಿಯೆಗಳು:— (೧) ಮಡಿಚುವದು. (೨) ಗುರುತಿಸುವದು. (೩) ಕತ್ತರಿಸುವದು. (೪) ಮೂಲೆಗಳನ್ನು ಮಡಿಚಿ ಟಾಚನಿ ಚುಚ್ಚುವದು.

ವಾರ ಮತ್ತು ದಿನಾಂಕ	ವೇಳೆ ಇಂದ–ವರೆಗೆ	ವಿಷಯ	ಗುಣಗಳು
ಬುಧವಾರ ೧೩-೪-೧೯೫೫	೧೧–೦ ೨–೦	೧ನೆಯ ಸದರ: - ಪ್ರಾದೇಶಿಕ ಭಾಷೆ (೧ ನೆಯ ಕಾಗದ:— ಗದ್ಯ, ಪದ್ಯ ಮತ್ತು ವ್ಯಾಕರಣ)	೧೦೦
	೩–೦ ೬–೦	೨ ನೆಯ ಸದರ:— ಗಣಿತ (೨ ನೆಯ ಕಾಗದ:— ಭೂಮಿತಿ ಮತ್ತು ಜಮಾಖರ್ಚು	೧೦೦
ಗುರುವಾರ ೧೪-೪-೧೯೫೫	೧೧–೦ ೨–೦	೬ ನೆಯ ಸದರ:— (ಐಚ್ಛಿಕ) ಹಿಂದೀ	೧೦೦
	೩–೦ ೬-೦	೫ ನೆಯ ಸದರ:— ಸೂಜಿಗೆಲಸ, ಚಿತ್ರಕಲೆ (ಡ್ರಾಯಿಂಗ್), ಪ್ರಾಯೋಗಿಕ ಒಕ್ಕಲತನ ಮತ್ತು ನೂಲುವದು ಹಾಗೂ ನೇಯುವದು, ಕಟ್ಟಿಗೆಯ ಕೆಲಸ, ಹೊಲಿಗೆ.*	೧೦೦
ಶುಕ್ರವಾರ ೧೫-೪-೧೯೫೫	೧೧-೦ ೨-೦	೬ ನೆಯ ಸದರ:— (ಐಚ್ಛಿಕ) ಸಂಗೀತ ಕಾಗದ ಮತ್ತು ರಟ್ಟಿನ–ಕೆಲಸ, ಚಿತ್ರದ ಕೆಲಸ, ಮತ್ತು ಚರ್ಮದ ಕೆಲಸ	೧೦೦
	೩-೦ ೫-೦	೧ ನೆಯ ಸದರ:— ೩ ನೆಯ ಕಾಗದ † ಸ್ಥಾನಿಕ ಪ್ರಾದೇಶಿಕ ಭಾಷೆ	೫೦

ಸೂಚನೆ:— ಪರೀಕ್ಷೆಯ ಮೊದಲನೆಯ ದಿವಸ ಪರೀಕ್ಷೆ ಆರಂಭವಾಗುವದಕ್ಕಿಂತ ಒಂದು ತಾಸು ಮುಂಚಿತವಾಗಿ ಉಮೇದವಾರರು ಪರೀಕ್ಷಾ-ಮಂದಿರಗಳಲ್ಲಿ ಹಾಜರ ಇರತಕ್ಕದ್ದು.

*ಬೇಸಿಕ್ ಶಾಲೆಗಳಿಂದ ಪರೀಕ್ಷೆಗೆ ಕೂಡ್ರುವ ಉಮೇದವಾರರ ನೂಲುವದು ಮತ್ತು ನೇಯುಗೆಯು ಪ್ರಾಯೋಗಿಕ ಪರೀಕ್ಷೆಯನ್ನು ಬರೆಹದ ಪರೀಕ್ಷೆಯ ಮೊದಲು ಅನುಕೂಲವಾದ ಕಾಲದಲ್ಲಿ ದಿನ ನಿರ್ಧರಿಸಲಾಗುವದು.

†ಸ್ಥಾನಿಕ ಪ್ರಾದೇಶಿಕ ಭಾಷೆಯುಲ್ಲದ ಮತ್ತೊಂದು ಪ್ರಾದೇಶಿಕ ಭಾಷೆಯ ಮುಖಾಂತರ ಶಿಕ್ಷಣ ಪಡೆಯುತ್ತಿರುವ ಮತ್ತು ಉರ್ದು ಪ್ರಾಥಮಿಕ ಶಾಲೆಗಳ ಉಮೇದವಾರರಿಗೆ ಕಡ್ಡಾಯ-ದ್ದಾಗಿರುವದು.

ಮುಂಬಯಿ, ಮುಂಬಯಿಯ ಉಪನಗರ ಜಿಲ್ಲೆಗಳು ಮತ್ತು ಭಾಷಾವಾರ ಪ್ರದೇಶಗಳ ಗಡಿಯ ಕ್ಷೇತ್ರಗಳಲ್ಲಿ ಮರಾಠಿ, ಗುಜರಾಥಿ ಮತ್ತು ಕನ್ನಡಗಳಲ್ಲಿ ಯಾವದೇ ಒಂದು ಪ್ರಾದೇಶಿಕ ಭಾಷೆಯ ಮುಖಾಂತರ ಶಿಕ್ಷಣ ಪಡೆಯುತ್ತಿರುವ ಉಮೇದವಾರರಿಗೆ ಐಚ್ಛಿಕವಾಗಿರುವದು.

ಜಿಲ್ಹಾ ಶಿಕ್ಷಣಾಧಿಕಾರಿಗಳ ಕಚೇರಿ, ಧಾರವಾಡ
ದಿನಾಂಕ: ೫-೧-೧೯೫೫

ಕೆ. ಬಿ. ತೇರಗಾಂವಕರ
ಜಿಲ್ಹಾ ಶಿಕ್ಷಣಾಧಿಕಾರಿ,
ಧಾರವಾಡ

ಸಮವಾಯ ಪಾಠದ ಟಿಪ್ಪಣಿ

ಶಿಕ್ಷಕನ ಹೆಸರು:— ಶ್ರೀ. ವಿ. ಅಂ. ಉಮರಾಣಿ.
ಚಟುವಟಿಕೆ :— ಗಾಳಿಯು ಚಕ್ರವನ್ನು ತಯಾರಿಸುವದು
ಸಮನ್ವಯಿತ ವಿಷಯ:— ಭಾಷೆ .

ವರ್ಗ:— ೧ ನೆಯ ಇಯತ್ತೆ
ಹಾಜರ ಸಂಖ್ಯೆ:— ೨೪
ದಿನಾಂಕ:— .... ವೇಳೆ:— ೬೦ ಮಿನಿಟುಗಳು

ಅ. ನಂ.	ಮೆಟ್ಟಿಗಳು ಹಾಗೂ ಅವುಗಳ ವಿವರ	ಆವಶ್ಯಕ ಸಂಗತಿಗಳು	ಕೆಲಸ ಮಾಡುವ ಕ್ರಮ	ಕರಿಹಲಗೆಯ ಬರೆಹ
೧	ಯೋಜನೆ:— (ಅ) ಪ್ರೇರಣೆ	೬-೭ ವರ್ಷದ ಚಿಕ್ಕಬಾಲಕರು ತಮ್ಮ ಆಟಿಗೆಯ ಸಾಮಾನುಗಳನ್ನು ಮತ್ತು ಮಂಟಪ ಇತ್ಯಾದಿಗಳನ್ನು ಶೃಂಗರಿಸಲು ಆವಶ್ಯವಿರುವ ಸಾಮಾನುಗಳನ್ನು ತಯಾರಿಸಬಲ್ಲರು. ಮುಖ್ಯವಾಗಿ ಮಣ್ಣಿನ ಮತ್ತು ಕಾಗದದ ಸಾಮಾನುಗಳನ್ನು ಮಾಡಬಲ್ಲರು. ಅವುಗಳಲ್ಲಿ ಗಾಳಿಯು ಚಕ್ರವು ಒಂದು. ಇದರಿಂದ ಚಿಕ್ಕ ಬಾಲಕರು ಆನಂದ ಪಡೆಯುವರು. ಮಂಟಪವನ್ನು ಶೃಂಗರಿಸುವರು. ಕಾರಣ ಗಾಳಿಯು ಚಕ್ರವನ್ನು ತಯಾರಿಸುವದು ಅವಶ್ಯ.	ಬಾಲಕರೇ, ಮುಂಬರುವ ಹುಣ್ಣಿವೆ ಯಾವುದು? ಆಗ ನೀವು ಏನನ್ನು ಮಾಡುವಿರಿ? ಕಾಮಣ್ಣನ ಮಂಟಪವನ್ನು ಶೃಂಗರಿಸಲು ಯಾವ ಯಾವ ಕಾಗದದ ಸಾಮಾನುಗಳನ್ನು ಉಪಯೋಗಿಸುವಿರಿ? ಅವುಗಳಲ್ಲಿ ಆನಂದವನ್ನು ಉಂಟು ಮಾಡುವ ವಸ್ತು ಯಾವುದು? ಗಾಳಿಯಿಂದ ತಿರುಗುವ ಆಟದ ಸಾಮಾನು ಯಾವುದು?	ಚ:- ಗಾಳಿಯು ಚಕ್ರವನ್ನು ತಯಾರಿಸುವದು.
	(ಬ) ಕೆಲಸದ ಮುನ್ನೋಟ:—	ಗಾಳಿಯು ಚಕ್ರವನ್ನು ತಯಾರಿಸುವದರಲ್ಲಿ ಕೆಳಗಿನ ಉಪಕ್ರಿಯೆಗಳಿರುವವು:— (೧) ಮಡಿಚುವದು. (೨) ಗುರುತಿಸುವದು. (೩) ಕತ್ತರಿಸುವದು. (೪) ಮೂಲೆಗಳನ್ನು ಮಡಿಚಿ ಟಾಚಣಿಯನ್ನು ಚುಚ್ಚುವದು.	ನಿಮಗೆ ಗಾಳಿಯು ಚಕ್ರವನ್ನು ತಯಾರಿಸಲು ಬರುತ್ತದೆಯೋ? ಅದನ್ನು ಹೇಗೆ ತಯಾರಿಸುವಿರಿ? [ಅವಶ್ಯಬಿದ್ದಲ್ಲಿ ಶಿಕ್ಷಕರು ಸರಿಯಾದ ಪದ್ಧತಿಯಿಂದ ತಯಾರಿಸಿ ಬಾಲಕರಿಗೆ ಉಪಕ್ರಿಯೆಗಳ ಕಲ್ಪನೆ ಮಾಡಿಕೊಡಬೇಕು.]	ಉಪಕ್ರಿಯೆಗಳು:— (೧) ಮಡಿಚುವದು. (೨) ಗುರುತಿಸುವದು. (೩) ಕತ್ತರಿಸುವದು. (೪) ಮೂಲೆಗಳನ್ನು ಮಡಿಚಿ ಟಾಚಣಿ ಚುಚ್ಚುವದು.

ಅ. ನಂ.	ಮೆಟ್ಟಿಗಳು ಹಾಗೂ ಅವುಗಳ ವಿವರ	ಆವಶ್ಯಕ ಸಂಗತಿಗಳು	ಕೆಲಸ ಮಾಡುವ ಕ್ರಮ	ಕರಿಹಲಗೆಯ ಬರಹ
೨	ಪೂರ್ವ ಸಿದ್ಧತೆ:— (ಅ) ಬೇಕಾದ ಸಾಧನಗಳ ಸಂಗ್ರಹ ಹಾಗೂ ಅವುಗಳ ಉಪಯೋಗ.	ಗಾಳಿಯ ಚಕ್ರವನ್ನು ತಯಾರಿಸಲು ಬೇಕಾದ ಸಾಧನಗಳು:— (೧) ಬಣ್ಣದ ಕಾಗದಗಳು ೨೪ (೪ ಬಣ್ಣದವು-ಕೂಡಿ) (೨) ಕತ್ತರಿ ೧೨ (೩) ಟಾಚಣಿ ೨೪ (೪) ಕಡ್ಡಿ ಇಲ್ಲವೆ ದಂಟು ೨೪ (೫) ದಪ್ಪ ಕಾಗದದ ಚಿಕ್ಕ ವರ್ತುಳಗಳು ೨೪ (ಬಿಲ್ಲೆಗಳು) (೬) ಇಂಚಪಟ್ಟಿ ೧೨ ಕಾಗದವು ಚೌರಸ ಆಕಾರದ್ದು ಇರಬೇಕು. ಅದರ ಉದ್ದ ಮತ್ತು ಅಗಲ ಇವುಗಳನ್ನು ಪ್ರಮಾಣಬದ್ಧವಾಗಿ ಬೆಳೆಯಿಸಿದರೆ ಆಕೃತಿಯಲ್ಲಿ ಹೆಚ್ಚು ಕಡಿಮೆಯಾಗುವದಿಲ್ಲ. ಕತ್ತರಿಯು ಕಾಗದವನ್ನು ಮೂಲೆಯಿಂದ ಕತ್ತರಿಸಲಿಕ್ಕೆ ಮತ್ತು ಟಾಚಣಿಯನ್ನು ಮಡಿಚಿದ ಮೂಲೆಗಳನ್ನು ಒಂದುಗೂಡಿಸಿ ದಂಟಿಗೆ ಚುಚ್ಚಲಿಕ್ಕೆ ಉಪಯೋಗ ಮಾಡುವದನ್ನು ತಿಳಿಯುವದು.	ಗಾಳಿಯ ಚಕ್ರವನ್ನು ತಯಾರಿಸಲು ಯಾವ ಯಾವ ಸಾಮಾನುಗಳು ಬೇಕು ? ಎಂಥ ಕಾಗದ ಬೇಕು ? ಕತ್ತರಿಸಲು ಏನು ಬೇಕು ? ಟಾಚಣಿಯನ್ನು ಏತಕ್ಕೆ ಚುಚ್ಚುವಿರಿ ? ಇತ್ಯಾದಿ. ಕಾಗದದ ಉದ್ದ ಮತ್ತು ಅಗಲ ಇವುಗಳಲ್ಲಿ ಹೆಚ್ಚು ಕಡಿಮೆ ಇದೆಯೇ ? ಒಂದು ಕಾಟಕೋನ ಚೌಕೋನವನ್ನು ತೋರಿಸಿ ಉದ್ದ ಮತ್ತು ಅಗಲಗಳ ಕಲ್ಪನೆ ಮಾಡಿಕೊಡುವದು. 'ಚೌರಸ ಮತ್ತು ಕಾಟಕೋನ ಚೌಕೋನ' ಇವುಗಳ ವ್ಯತ್ಯಾಸವನ್ನು ತಿಳಿ ಹೇಳುವದು.	ಸಾಧನಗಳು:— ಬಣ್ಣದ ಕಾಗದ, ಕತ್ತರಿ, ಟಾಚಣಿ, ದಂಟು, ಬಿಲ್ಲೆಗಳು, ಇಂಚಪಟ್ಟಿ.
	(ಬ) ಸಂಘಟನೆ	ಹಾಜರ ಇದ್ದ ಬಾಲಕರಲ್ಲಿ ೪ ಗುಂಪುಗಳನ್ನು ಮಾಡಿ ಒಂದೊಂದು ಗುಂಪಿಗೆ ಒಂದೊಂದು ಬಣ್ಣದ ಕಾಗದ ಕೊಡಬೇಕು. ಕಾಗದ ಹಾಗೂ ಉಳಿದ ಸಾಧನಗಳನ್ನು ಹಂಚಲು ಪ್ರತಿಯೊಂದು ಗುಂಪಿಗೊಬ್ಬರಂತೆ ಚುನಾಯಿಸಲ್ಪಟ್ಟ ವಿದ್ಯಾರ್ಥಿ ಇರಬೇಕು.	ಎಲ್ಲ ಸಾಧನಗಳನ್ನು ಮುಟ್ಟಿಸಲು ಯೋಗ್ಯವಾದ ಸಂಘಟನೆ ಮಾಡಬೇಕು. ಪ್ರತಿಯೊಂದನ್ನು ಒಬ್ಬೊಬ್ಬರಿಗೆ ಒಂದರಂತೆ ಕೊಡಬೇಕು. ಕತ್ತರಿ ಹಾಗೂ ಇಂಚಪಟ್ಟಿಯನ್ನು ಇಬ್ಬಿಬ್ಬರಲ್ಲಿ ಒಂದರಂತೆ ಹಂಚಬೇಕು.	(ಸಾಧನಗಳನ್ನು ಹಂಚುವವರ ಹೆಸರುಗಳನ್ನು ಬರೆಯ ಬೇಕು.)

೩ ಕಾರ್ಯ ನಿರ್ವಹಣ. (ಅ) ಶಿಕ್ಷಕರ ಮಾದರಿ ಕೃತಿ:—	ಚೌರಸಾಕಾರದ ಕಾಗದವನ್ನು ತೆಗೆದುಕೊಂಡು ಎದುರುಬದುರಿನ ಮೂಲೆಗಳನ್ನು ಕೂಡಿಸಿ ಮಡಿಚಿ ಮಧ್ಯಬಿಂದುವನ್ನು ಗುರ್ತಿಸುವದು. ಬಳಿಕ ಮಧ್ಯ ಬಿಂದುವಿನಿಂದ ತುಸು ಅಂತರದ ವರೆಗೆ ಮೂಲೆಯಿಂದ ಕತ್ತರಿಸಿ ಆ ಮೂಲೆಗಳನ್ನು ಒಂದು ಬಿಟ್ಟು ಮತ್ತೊಂದನ್ನು ಮಧ್ಯಬಿಂದುವಿನಲ್ಲಿ ಕೂಡಿಸಿ ಟಾಚನಿಯಲ್ಲಿ ಬಿಲ್ಲೆಯನ್ನು ಹಾಕಿ ಅದನ್ನು ಮಧ್ಯಬಿಂದುವಿನಲ್ಲಿ ಚುಚ್ಚಿ ದಂಟಿಗೆ ಚುಚ್ಚಬೇಕು.	ಶಿಕ್ಷಕರು ಮಾದರಿಗಾಗಿ ಒಮ್ಮೆ ಪೂರ್ಣ ಕೃತಿಯನ್ನು ಮಾಡಿ ತೋರಿಸುವದು. ಒಂದೊಂದು ಉಪಕೃತಿಯನ್ನು ಮಾಡಿ ತೋರಿಸಿ, ಏನು ಮಾಡಿದೆ? ಹೇಗೆ ಮಾಡಿದೆ? ಮುಂತಾದ ಪ್ರಶ್ನೆಗಳ ಸಹಾಯದಿಂದ ಹುಡುಗರ ಕಡೆಯಿಂದಲೇ ಕೇಳಿಕೊಳ್ಳಬೇಕು. ನಾನು ಕಾಗದವನ್ನು ಹೇಗೆ ಮಡಿಚಿದೆ? ಇತ್ಯಾದಿ.	
(ಬ) ನೆನಪಿನಲ್ಲಿಡತಕ್ಕ ಸಂಗತಿಗಳು	ನೆನಪಿನಲ್ಲಿಡತಕ್ಕ ಸಂಗತಿಗಳು:— (೧) ಮೂಲೆಗಳನ್ನು ಮಡಿಚುವಾಗ ಒಂದು ಬಿಟ್ಟು ಮತ್ತೊಂದು ಮೂಲೆಯನ್ನು ಮಧ್ಯಕ್ಕೆ ತರಬೇಕು. (೨) ಕಾಗದದ ಮೇಲೆ ನೆಂಗಿ (ಮಡಿಕೆ) ಬೀಳದಂತೆ ನೋಡಿಕೊಳ್ಳಬೇಕು. (೩) ಟಾಚನಿಯನ್ನು ಪೂರ್ಣ ಚುಚ್ಚಬಾರದು. (೪) ಮಧ್ಯದಲ್ಲಿ ತುಸು ಸ್ಥಳ ಬಿಡಬೇಕು.	ಕೃತಿಯು ನಡೆದಾಗ ಬಾಲಕರು ಗಮನಿಸಬೇಕಾದ ಸಂಗತಿಗಳನ್ನು ಶಿಕ್ಷಕರು ಅವರ ಲಕ್ಷ್ಯಕ್ಕೆ ತಂದು ಕೊಡಬೇಕು. ಈ ಸಂಗತಿಗಳನ್ನು ಹುಡುಗರ ಕಡೆಯಿಂದ ಹೇಳಿಸಬೇಕು.	ನೆನಪಿನಲ್ಲಿಡತಕ್ಕ ಸಂಗತಿಗಳು:— (ನಾಲ್ಕು ಬರೆಯತಕ್ಕದ್ದು)
(ಕ) ವೇಳೆಯ ಕಲ್ಪನೆ:—	ಕೃತಿಗೆ ಸುಮಾರು ೨೦ ನಿಮಿಷಗಳು ಬೇಕಾಗಬಹುದು.	ಬಾಲಕರೊಡನೆ ಚರ್ಚಿಸಿ ವೇಳೆಯನ್ನು ನಿರ್ದಿಷ್ಟಪಡಿಸುವದು.	೨೦ ನಿಮಿಷಗಳು.
(ಡ) ಮಕ್ಕಳ ಕೆಲಸ:—	ಸಂಘಟನೆಯಲ್ಲಿ ನಿರ್ದಿಷ್ಟಪಡಿಸಿದ ಬಾಲಕರಿಂದ ಸಾಧನಗಳನ್ನು ಹಂಚಲು ಹಚ್ಚಿ ಕೃತಿಯನ್ನು ಆರಂಭಿಸಲು ಹೇಳುವದು.	ಬಾಲಕರೊಡನೆ ಶಿಕ್ಷಕರೂ ಕೆಲಸವನ್ನು ಆರಂಭಿಸುವದು. ಮಕ್ಕಳು ಕೆಲಸದಲ್ಲಿ ತಪ್ಪಿದರೆ ಶಿಕ್ಷಕರು ಸಹಾಯ ಮಾಡಬೇಕು.	

ಅ. ನಂ	ಮಟ್ಟುಗಳು ಹಾಗೂ ಅವುಗಳ ವಿವರ	ಆವಶ್ಯಕ ಸಂಗತಿಗಳು	ಕೆಲಸ ಮಾಡುವ ಕ್ರಮ	ಕರಿಹಲಗೆಯ ಬರೆಹ
೪	ಪರಿಶೀಲನೆ:— (ಅ) ಕೆಲಸದ ಅಳತೆ.	ಬಾಲಕರು ಮುಗಿಸಿದ ಕೆಲಸವನ್ನು ಪರಿಶೀಲಿಸುವದು.	ಎಷ್ಟು ಜನರು ಮುಗಿಸಿರುವಿರಿ? ಒಟ್ಟು ಎಷ್ಟು ಗಾಳಿಯ ಚಕ್ರಗಳಾಗಿರುವವು? ಹೆಚ್ಚು ವೇಳೆ ಯಾರು ತೆಗೆದು ಕೊಂಡರು? ಇತ್ಯಾದಿ.	
	(ಬ) ಕಾರ್ಮಿಕ ತಪ್ಪುಗಳು.	ಸರಿಯಾದ ಗಾಳಿಯ ಚಕ್ರದ ಲಕ್ಷಣಗಳು:— (೧) ಗಾಳಿಬಿಟ್ಟಾಗ ಚನ್ನಾಗಿ ತಿರುಗಬೇಕು. (೨) ಕತ್ತರಿಸಿದ್ದು ಸರಿಯಾಗಿರಬೇಕು. (೩) ಮಡಿಕೆ ಬಿದ್ದಿರಬಾರದು. (೪) ಟಾಚನಿ ನಡುವೆ ಚುಚ್ಚಿರಬೇಕು.	ಈ ಎಲ್ಲ ಗಾಳಿಯ ಚಕ್ರಗಳಲ್ಲಿ ಯಾವುದು ಚನ್ನಾಗಿ ಆಗಿದೆ? ಚನ್ನಾಗಿ ಆಗಿದೆಯೆಂದು ಹೇಗೆ ಹೇಳುವಿರಿ? ಇದು ತಿರುಗಬೇಕಾದರೆ ಹೇಗಾಗಿರಬೇಕು? (ಅವಶ್ಯ ಕಂಡರೆ ಬಾಲಕರನ್ನು ಬಯಲಿಗೆ ಕರೆದುಕೊಂಡು ಬಂದು ಗಾಳಿಯ ಚಕ್ರ ತಿರುಗುವದನ್ನು ನಿರೀಕ್ಷಿಸಲು ಹೇಳುವದು.)	
		ಕೃತಿಯ ದೋಷಗಳನ್ನು ಬಾಲಕರಿಗೆ ತಿಳಿಸುವದು.	ಬಾಲಕರ ಕೃತಿಯಲ್ಲಿ ಆದ ತಪ್ಪುಗಳನ್ನು ಅವರ ಗಮನಕ್ಕೆ ತರುವದು.	
	(ಕ) ಅನಿರೀಕ್ಷಿತ ಘಟನೆಗಳು.		(ಅನಿರೀಕ್ಷಿತ ಘಟನೆ ಏನಾದರೂ ಸಂಭವಿಸಿದಲ್ಲಿ ಬಾಲಕರಿಂದ ಕೇಳಿಕೊಳ್ಳುವದು).	
	(ಖ) ದೃಢೀಕರಣ:—	ಇದು ಗಾಳಿಯ ಚಕ್ರ. ಇದು ನಾನು ಮಾಡಿದ ಗಾಳಿಯ ಚಕ್ರ. ಈ ಗಾಳಿಯ ಚಕ್ರವು ಸುಂದರವಾಗಿದೆ. ಈ ಗಾಳಿಯ ಚಕ್ರವು ಗರಗರನೆ ತಿರುಗುವದು. ನಮ್ಮ ಸುತ್ತುಮುತ್ತಲು ಹವೆ ಇದೆ. ಹವೆಯು ಕಾಣುವದಿಲ್ಲ, ಆದರೂ ಚಲಿಸುತ್ತದೆ. ಹವೆಯು ಬೀಸಿದರೆ ಗಾಳಿ ಎಂದು ಕರೆಯುವೆವು. ಗಾಳಿಯಲ್ಲಿ ಈ ಚಕ್ರವು ತಿರುಗುವದು.	ಶಿಕ್ಷಕರು ಬಾಲಕರಿಗೆ ಇಲ್ಲಿಯ ವರೆಗೆ ಮಾಡಿದ ಕೃತಿಯ ಬಗ್ಗೆ ಪ್ರಶ್ನೆಗಳನ್ನು ಕೇಳುವದು. ಇಂದು ನೀವೆಲ್ಲರೂ ಏನು ತಯಾರಿಸಿದಿರಿ? ಅವುಗಳನ್ನು ಗಾಳಿಯಲ್ಲಿ ಹಿಡಿದಾಗ ಏನಾದವು? ಇತ್ಯಾದಿ. ಇದರಲ್ಲಿ ಹವೆಯ ಬಗ್ಗೆ ಹೆಚ್ಚಿನ ಜ್ಞಾನ ಮಾಡಿ ಕೊಡುವದು. ಬಾಲಕರಿಂದ ಈ ಬರೆಹವನ್ನು ಓದಿಸುವದು.	(ಬರೆಹವನ್ನು ಕರಿಹಲಗೆಯ ಮೇಲೆ ಬರೆದುಕೊಂಡು ಬರಬೇಕು)

ಪ್ರಾಥಮಿಕ ಶಿಕ್ಷಣ ಪ್ರಪಂಚ

—: ಶಾಲಾ ಕಟ್ಟಡಗಳು :—

ಡಿಸೆಂಬರ ೧೯೫೪

ಅಮರಗೋಳ (ತಾ || ನವಲಗುಂದ) ೭. :— ಕೇಂದ್ರ ಸರಕಾರದ ವಾಣಿಜ್ಯಮಂತ್ರಿ ಶ್ರೀ. ದ. ಪ. ಕರಮರಕರರು ಶಾಲಾಕಟ್ಟಡದ ಅಡಿಗಲ್ಲನ್ನಿಟ್ಟರು.

ಗಳತಗಿ ೧೧ :—ಮಾನ್ಯ ಶಿಕ್ಷಣ ಮಂತ್ರಿಗಳಾದ ಶ್ರೀ. ದಿನಕರರಾವ ದೇಸಾಯಿಯವರ ಹಸ್ತದಿಂದ ಇಲ್ಲಿಯ ವಿದ್ಯಾಮಂದಿರದ ಉದ್ಘಾಟನೆಯು ನೆರವೇರಿತು. ಈ ಸಂದರ್ಭದಲ್ಲಿ

ಶ್ರಿ ವೇ. ಬಾ. ಪಾಟೀಲ, ೩ ಎಕರೆ; **ಶ್ರೀ. ಅ. ರಾ. ಪಾಟೀಲ**, ೩ ಎಕರೆ;

ಶ್ರೀ. ರಾ. ಭೋ. ಚೌಗಲೆ, ೨ ಎಕರೆ, **ಶ್ರೀ. ಕೃ. ಭಾ. ತೇಲವೇಕರ**, ೨ ಎಕರೆ;

ಈ ಪ್ರಕಾರ ಒಟ್ಟು ಹತ್ತು ಎಕರೆ ಭೂಮಿಯನ್ನು ಕೇಂದ್ರ ಶಾಲೆಯ ಸಲುವಾಗಿ ಕೊಡಲು ಒಪ್ಪಿಕೊಂಡರು.

ಹೂದನಗೇರಿ ೨೩ :— ಇಲ್ಲಿಯ ಶಾಲೆಯ ಉಪಯೋಗಕ್ಕಾಗಿ ದೊರೆತ ಕಟ್ಟಡದ ಉದ್ಘಾಟನೆಯು ಡಾ || ಬಿ. ಎಸ್. ಪೈ ಇವರಿಂದ ನಡೆಯಿತು.

ಯಂಭತ್ನಾಳ ೨೭ :— ಇಲ್ಲಿಯ ಶಾಲೆಯ ಕಟ್ಟಡಕ್ಕಾಗಿ ಶ್ರೀಯುತ **ಓ. ಪ. ಭೂಪಾಳಿ**ಯವರು ರೂ. ೭೫೦ ಹಾಗೂ ಊರ ಸಭ್ಯಗೃಹಸ್ಥರು ರೂ. ೨೫೦ ಕೊಡುವ ವಚನವಿತ್ತಿರುವರು.

ನಾಗನೂರ P. K. ೨೭ :— ಊರವರ ಸಹಕಾರದಿಂದ ಶಾಲೆಯ ಹಳೆಯ ಕಟ್ಟಡದ ಜೀರ್ಣೋದ್ಧಾರ ಮಾಡಲಾಯಿತು.

ಜಾನೇವರಿ ೧೯೫೫

ಪಾಳಾ ೬ :— ಶ್ರೀ ರಾ. ರು. ಕುಪ್ಪಸದ, ಜಿಲ್ಹಾ ಶಿಕ್ಷಣಾಧಿಕಾರಿ, ಕಾರವಾರ, ಇವರ ಹಸ್ತದಿಂದ ಇಲ್ಲಿಯ ಶಾಲೆಯ ಕಟ್ಟಡದ ಶಂಕುಸ್ಥಾಪನೆಯಾಯಿತು.

ನೆಲ್ಲಿಕೇರಿ ೧೫ :— ಮುಂಬಯಿರಾಜ್ಯದ ಶಿಕ್ಷಣ ಮಂತ್ರಿ ಶೀ. ದಿನಕರರಾವ ದೇಸಾಯಿ ಅವರು ಇಲ್ಲಿಯ ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯನ್ನು ನೇರವೇರಿಸಿದರು. ಉಪಮಂತ್ರಿ ಶ್ರೀ ಮತಿ ಇಂದುಮತಿ ಶೇಟ ಅವರೂ ಆಗಮಿಸಿದ್ದರು. ಮೂಲೋದ್ಯೋಗ ಪ್ರದರ್ಶನವನ್ನೂ ಉದ್ಘಾಟಿಸಿದರು.

ಹೂರ್ಕಬ್ಬನಹಳ್ಳಿ ೧೮ (ತಾ || ಬಾಗೇವಾಡಿ) :— ಹೊಸಶಾಲೆಯ ಇಮಾರತಿಗಾಗಿ ಊರವರು ರೂ. ೩೨೦೦ ಕೂಡಿಸಿದ್ದು, ಶ್ರೀ. ಮುರಗೆಪ್ಪ ಅಳ್ಳಿಗೆಯವರು ೨ ಎಕರೆ ಜಮೀನವನ್ನು ಭಕ್ಷಿಸಕೊಟ್ಟಿರುವರು.

—: ಪ್ರಜಾರಾಜ್ಯ ದಿನ :—

ಕೆಳಗಿನ ಸ್ಥಳಗಳಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ ೨೬-೧ ೧೯೫೫ರಂದು **ಪ್ರಜಾರಾಜ್ಯ ದಿನ**ವನ್ನು ನಗರ ಸಂಕೀರ್ತನೆ, ಧ್ವಜವಂದನೆ, ನೂಲುವ ಸ್ಪರ್ಧೆ ಮತ್ತು ವಿವಿಧ ವಿನೋದಾವಳಿಗಳೊಂದಿಗೆ ಊರ ಪ್ರಮುಖರ ಇಲ್ಲವೆ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಆಚರಿಸಲಾಯಿತು:—

ನಾಗೂರ ಮತ್ತು ಹಿರೇಮಳಗಾವಿ (ತಾ|| ಹುನಗುಂದ;) **ಅಗಡಿ; ಪಾರಿಶ್ವಾಡ; ಯಕ್ಕುಂಡಿ; ಹೆಬ್ಬಳ್ಳಿ; ಅಣ್ಣಿಗೇರಿ; ನಂದವಾಡಗಿ; ಡಂಬಳ; ಯರಗೊಪ್ಪ; ಭುಯಾರ (ತಾ|| ಇಂಡಿ); ಹಿರೇಕೊಡಗಲಿ; ಕುಂದರಗಿ;**

ಕೂಡಗಿ; ಉಪ್ಪಿಣಸಿ; ಹುಯಿಲಗೋಳ; ಅಜ್ಜೀಬಳ; (ತಾ|| ಶಿರ್ಶಿ) ಧೇವರಹಿಪ್ಪರಗಿ; ಸಾಲೊಟಗಿ ತೇರಗಾಂವ; ಬೇಲೂರ; ಯರೇಬೂದಿಹಾಳ; ಕೊಣ್ಣೂರ; ಸೊಂದಾ (ತಾ|| ಶಿರ್ಶಿ) ಬಬಲೇಶ್ವರ; ಬೊರಗಾಂವ; ತಲಿವೊರಬ; ಹೊಮ್ಮರಡಿ; ಸೊರಟೂರ; ಲಚ್ಯಾಣ ಟ್ರೇನಿಂಗ ಕಾಲೇಜ, ಲಚ್ಯಾಣ; ಅಮಲಝರಿ; ಲಕ್ಷ್ಮೇಶ್ವರ; ಹದಲಿ; ಖನಗಾವಿ; ಅಹಿರಸಂಗ; ಹೊರ್ತಿ; ಹೂಲಿಕಟ್ಟಿ; ದೇವನಾಳ; ರೋಣಿಹಾಳ; ನರೇಗಲ್ಲ; ಆಮರಗೊಳ; (ತಾ|| ನವಲಗುಂದ); ಕಲ್ಲೆದೇವರ,

ಈ ಸಂದರ್ಭದಲ್ಲಿ ಕೆಳಗೆತೋರಿಸಿದ ಊರವರು ಅವುಗಳ ಎದುರಿಗೆ ಕಾಣಿಸಿದ ಸಾಮಾನುಗಳನ್ನು ಶಾಲೆಯ ಉಪಯೋಗಕ್ಕಾಗಿ ಕೊಟ್ಟಿರುವ ಸಂಗತಿ ಸಂತೋಷದಾಯಕವಿರುತ್ತದೆ:—

ಊರಹೆಸರು	ಕೊಟ್ಟಸಾಮಾನು
ಸೊಂದಾ (ತಾ || ಶಿರ್ಶಿ)	ಒಂದು ಕೊಡ, ಒಂದು ತಂಬಿಗೆ ಮತ್ತು ಆಲ್ಲಿಯ ವಾಚನಾಲಯಕ್ಕೆ ರೂ. ೩೦ ಬೆಲೆ ಬಾಳುವ ಒಂದು ಕಪಾಟು.
ಸೊರಟೂರ (ತಾ || ಗದಗ)	ಭೂಮಿತಿಯ ಉಪಕರಣಗಳು, ಎರಡು ಹಿತ್ತಾಳಿಯ ತುತೂರಿ ಒಂದು ಕಂದೀಲು, ಒಂದು ಗುಡಾರ, ಒಂದು ಬೆಂಚು; ಕೊಡ, ತಾಟು, ಹಿತ್ತಾಳಿ ಟಾಕಿ, ಒಂದು ಥರ್ಮಾಮಿಟರ, ಒಂದು ಕಾಟಾ ಮತ್ತು ಹೋಕಾಯಂತ್ರ.
ಹಿರೇಮುಳಗಾವಿ (ತಾ|| ಹನಗುಂದ)	ಒಂದು ಘಂಟೆ ೧೦ ರೂ. ಬೆಲೆಯುಳ್ಳ ಕನ್ನಡಿ ಮತ್ತು ರೂ. ೧೦ಯ ರಾಷ್ಟ್ರಧ್ವಜ.

—: ಶೈಕ್ಷಣಿಕ ಪ್ರವಾಸಗಳು :—

[೧೫-೧೨-೫೪ ರಿಂದ ೩೦-೧ ೧೯೫೫ರ ವರೆಗೆ]

ಕೆಳಗೆ ತೋರಿಸಲಾದ ಗ್ರಾಮಗಳಲ್ಲಿಯ ಶಾಲಾ ಬಾಲ-ಬಾಲಕೆಯರು ಬಾದಾಮಿ, ವಿಜಯಪೂರ ಹಂಪಿ ಮುಂತಾದ ಸ್ಥಾನಗಳಿಗೆ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡಿದ್ದರು.

ಅತ್ತಿಗೇರಿ, ವಿಜಯಪೂರ, ಕಿನ್ನರ, ಸವದತ್ತಿ, ಸಾಲವಾಡಗಿ, ಹದಲಿ, ಛಬ್ಬಿ, ಚಸಚಣ, ಶಲವಡಿ, ಸಾಸ್ವಿಹಳ್ಳಿ, ಎರೇಬೂದಿಹಾಳ, ಕುಂದರಗಿ, ಚಿಕ್ಕಮಾಗಿ, ತಾಳಿಕೋಟೆ, ಹೂವಿನಹಳ್ಳಿ, ಮುಂತಾದವುಗಳು.

—: ಪಂದ್ಯಾಟಗಳು :—

ಡಿಸೆಂಬರ ೧೯೫೪

ಛಂಡಿವಾಡ ೧೫ :— ಹುಬ್ಬಳ್ಳಿ ತಾಲೂಕ ಪ್ರಾಥಮಿಕ ಶಾಲಾ ಗ್ರೂಪ್ ಪಂದ್ಯಾಟದಲ್ಲಿ ಇಲ್ಲಿಯ ಶಾಲೆಗೆ ೧೭ ಮೆಡ್ಲ್ಯೋಲೆ ಹಾಗು ೭ ಪದಕಗಳು ದೊರಕಿರುವವು.

ಶಿಶವಳ್ಳಿ ೧೭, ೧೮:— ಹಾನಗಲ್ಲ ತಾಲೂಕ ಪಂದ್ಯಾಟದಲ್ಲಿ ಇಲ್ಲಿಯ ಕ. ಗಂ. ಶಾಲೆಯ "ವೀರಾಗ್ರಣಿಶಾಲೆ" ಎಂದು ಸಂಚಾರಿ ಥಾಲನ್ನು ಪಡೆದಿದೆ. ಕುಮಾರ ರಾಮಚಂದ್ರ ಅಗಡಿ, "ವೀರಬಾಲಕ"ನೆಂದು ಗಣಿಸಲ್ಪಟ್ಟನು.

ಶಿರಗಂಬಿ ೨೦ :— ರಟ್ಟಿಹಳ್ಳಿ ವಿಭಾಗದ ಪಂದ್ಯಾಟಕೂಟದಲ್ಲಿ ಕ. ಗಂ. ಶಾಲೆ ಮಾಸೂರ ಮತ್ತು ಕ. ಹೆ. ಶಾಲೆ, ರಟ್ಟೀಹಳ್ಳಿ "ವೀರಾಗ್ರಣಿಶಾಲೆ," ಗಳೆಂದು ನಿರ್ಣಯವಾಯಿತು.

ಹುನಕುಂಟಿ ೨೪ :— ಇಲ್ಲಿಯ ಶಾಲಾ ಮಕ್ಕಳು ತಾಲೂಕಾ ಪಂದ್ಯಾಟದಲ್ಲಿ ಉತ್ತಮ ಜಯ ಪಡೆದದ್ದಕ್ಕಾಗಿ ಊರವರು ಮೆರವಣಿಗೆಯಿಂದ ಸ್ವಾಗತ ಮಾಡಿದರು.

ಜಾನೇವರಿ, ೧೯೫೫

ಇಂಡಿ ೯ :— ಈ ತಾಲೂಕಿನ ಪ್ರಾಥಮಿಕ ಶಾಲೆಗಳ ಪಂದ್ಯಾಟಗಳ ಸಮ್ಮೇಲನವು ಶ್ರೀ. ಸಿ. ಎಸ್. ಬೆನ್ನೂರ

ಜಿಲ್ಹಾ ಶಿಕ್ಷಣಾಧಿಕಾರಿ, ವಿಜಯಪೂರ, ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಮ್ಮೇಲನದ ಉದ್ಘಾಟನೆಯನ್ನು ಶ್ರೀ. ಹಳ್ಳಿಕೇರಿ ಗುದ್ಲೆಪ್ಪನವರು ಮಾಡಿದರು. ಮನರಂಜನೆಯ ಕಾರ್ಯಕ್ರಮಗಳ ಉದ್ಘಾಟನೆಯನ್ನು ಶ್ರೀ. ಎಸ್. ಎಮ್. ವಾಲಿ, ಪ್ರೊಜೆಕ್ಟ ಆಫೀಸರರು ಮಾಡಿದರು.

ಹಳ್ಳಿಕೇರಿ ೯:— ಇಲ್ಲಿಯ ಕ. ಗಂ. ಶಾಲೆಯು ಗದಗ ತಾಲೂಕ ಪಂದ್ಯಾಟದಲ್ಲಿ "ವೀರಾಗ್ರಣಿ ಶಾಲೆ" ಯೆಂದು ಸಾರಲ್ಪಟ್ಟಿತು.

ಶಿರಗುಪ್ಪಿ ೯೧೦ :— ಶ್ರೀಮತಿ ಜೆನ್ನಿಡ್ . ಇವರ ಅಧ್ಯಕ್ಷತೆಯಲ್ಲಿ ಜರುಗಿದ ಹುಬ್ಬಳ್ಳಿ ತಾಲೂಕ ಮತ್ತು ಕುಂದಗೋಳ ಮಹಾಲ ಪ್ರಾಥಮಿಕ ಶಾಲೆಗಳ ಪಂದ್ಯಾಟಗಳಲ್ಲಿ ಇಲ್ಲಿಯ ಕ. ಗಂ. ಶಾಲೆ 'ವೀರಾಗ್ರಣಿ ಶಾಲೆ' ಎಂದು ನಿರ್ಧರಿಸಲಾಯಿತು. ಕುಮಾರ ಚ. ವೀ. ಕೊಡ್ಲಿ ಇವನು "ಪಂದ್ಯಾಟವೀರ" ನೆಂದು ಬಹುಮಾನ ಪಡೆದನು.

ಬಬಲೇಶ್ವರ ೨೬: — ತಾಲೂಕ ಪಂದ್ಯಾಟವಲ್ಲಿ ೯ ವರ್ಷದ ಕು. ಗಂಗವ್ವಾ ಗು. ಬಿಳ್ಳೂರ ವೀರಾಗ್ರಣಿ ಕಪ್ಪು ಪಡೆದಿರುವಳು. ಇಲ್ಲಿಯ ಶಾಲೆಗಳು ೧೫ ಪ್ರಮಾಣ ಪತ್ರ, ೧೦ ಪದಕ ಹಾಗು ೧ ಕಪ್ಪು ದೊರಕಿಸಿರುವವು.

ಗದಗ ೨೬ :— ಕನ್ನಡ ಸೆಂಟ್ರಲ್ ಸ್ಕೂಲಿನಲ್ಲಿ ನಗರ ಸಭೆಯ ಎಲ್ಲ ಶಾಲಾ ಬಾಲಕ-ಬಾಲಿಕೆಯರ ವಾರ್ಷಿಕ ಪಂದ್ಯಾಟದಲ್ಲಿ ಜಯಶಾಲಿಯಾದವರಿಗೆ ನಗರ ಸಭೆಯ ಅಧ್ಯಕ್ಷ ಶ್ರೀ. ಗುರುನಾಥಸಾ ಕಬಾಡಿ ಯವರ ಹಿರಿಯತನದಲ್ಲಿ ಬಹುಮಾನಗಳನ್ನು ಹಂಚಲಾಯಿತು. ೧೩ ಶಾಲೆಗಳಿಗೆ ಬೆಳ್ಳಿಯ ಕಂಡಕಗಳನ್ನು ಬಾಲಕರಿಗೆ ೩೬೦ ಪುಸ್ತಕಗಳನ್ನು ಕೊಡಲಾಯಿತು.

ಖನಗಾವಿ ೨೬ :— ಗೋಕಾಕ ತಾಲೂಕ ಕ್ರೀಡಾ ಸಮ್ಮೇಲನದಲ್ಲಿ ಇಲ್ಲಿಯ ಶಾಲೆಯ ಮಕ್ಕಳು ಕುಂಟಾಟ ಖೋ ಆಟಗಳಲ್ಲಿ 'ವೀರಾಗ್ರಣಿ' ಗಳೆಂದು ಹೆಸರಾಗಿ ೨ ರೊಲಿಂಗ ಕಪ್ಪುಗಳನ್ನು ಪಡೆದರು.

ಧಾರವಾಡ ೨ :— ಧಾರವಾಡ ಜಿಲ್ಹೆಯ ಪ್ರಾಥಮಿಕ ಶಾಲೆಗಳ ದ್ವಿತೀಯ ಪಂದ್ಯಾಟವು ೧೯೫೫ ಫೆಬ್ರುವರಿ ೨ ಮತ್ತು ೩ ನೆಯ ದಿನಾಂಕಗಳಲ್ಲಿ ಕೃಷಿ ಮಹಾವಿದ್ಯಾಲಯದ ಪ್ರಿ. ಎಸ್. ಡಬ್ಲ್ಯೂ. ಮೆಣಸಿನಕಾಯಿ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ಪಾರಿತೋಷಕ ಪಡೆದವರ ವಿವರ :—

ಪಂದ್ಯಾಟದ ವೀರರು :—	(೧) ಚನ್ನಪ್ಪ ವೀ. ಕೊಡ್ಲಿ. (ಶಿರಗುಪ್ಪಿ) (೨) ಬಸವಣ್ಣೆಪ್ಪ ದ್ಯಾಮಣ್ಣನವರ (ಶಿಗ್ಗಾಂವಿ) (೩) ಹನುಮಂತಪ್ಪ ಭಂಡೀವಡ್ಡರ (ಹಲಗೇರಿ)
ವೀರಾಗ್ರಣಿ ಶಾಲೆಗಳು :—	ಮೇಲಿನ ಪ್ರಾಥಮಿಕ ಶಾಲೆಗಳಲ್ಲಿ ನಿಡಗುಂದಿ ಕ. ಗಂ. ಶಾಲೆ, ರೋಣ; ಕೆಳಗಿನ ಪ್ರಾಥಮಿಕ ಶಾಲೆಗಳಲ್ಲಿ ಕೋಟೂರ ಕ. ಗಂ. ಶಾಲೆ, ಧಾರವಾಡ; ಪುಡಕಲಕಟ್ಟಿ ಕ. ಗಂ. ಶಾಲೆ, ಧಾರವಾಡ.
ಪಂದ್ಯಾಟ ವೀರೆಯರು :—	ಸಿದ್ಧಲಿಂಗವ್ವ ಬಿದರಿ (ರಟ್ಟಿಹಳ್ಳಿ) ಶಾಂತಾ ಬೆಳಗಿನಮಠ (ರಾಣೆಬೆನ್ನೂರ)
ವೀರಾಗ್ರಣಿ ಶಾಲೆಗಳು:—	ಮೇಲಿನ ಪ್ರಾಥಮಿಕ ಶಾಲೆಗಳಲ್ಲಿ ಸವಣೂರ ಕ. ಹೆ. ಶಾಲೆ, ಶಿಗ್ಗಾಂವ; ಕೆಳಗಿನ ಪ್ರಾಥಮಿಕ ಶಾಲೆಗಳಲ್ಲಿ ಶಿರ್ಲಾಪೂರ ಕ. ಹೆ. ಶಾಲೆ, ನವಲಗುಂದ; ನಗರಸಭೆಯ ಕ. ಹೆ. ಶಾಲೆ, ನಂ ೫, ಧಾರವಾಡ.

RegdNo B 5375

ಹೊರಬಿದ್ದಿದೆ ! ಬೆಳಕು ಕಂಡಿದೆ !!

೨ನೆಯ ಆವೃತ್ತಿ | **ಶೈಕ್ಷಣಿಕ ಮನೋವಿಜ್ಞಾನ** | ಪುಟ ೩೦೦

ಬರೆದವರು : ಡಾ| ವಿ. ಕೃ. ಜನಳಿ, M. Ed. Ph. D. M. A. (ಕೋಲಂಬಿಯಾ)

ಬೆಲೆ: ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಕೈದೀವಿಗೆ ! ಶೈಕ್ಷಣಿಕ ಅಭ್ಯಾಸಪತ್ರಿಕೆಯು ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಪುಟ ೨೮೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು : ಶ್ರೀ. ಮ. ಗು. ಹಂಚ್ರಾಳ, ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೆ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ.

ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ

Printed by M.A. Kamat, B. Sc. at Jai Hind Art Press Dharwar. Edited and Published by S. P. Patil B. M. Shintri, S. R. Tatti, & Smti. P. A. Bhaskar. at the Kannada Prathamik Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ. ಎಸ್. ಟಿ. ಪಾಟೀಲ

ಮುಂಬಯಿ ರಾಜ್ಯದ ಹೊಸ ರಾಜ್ಯಪಾಲರು

ಬಿಡಿಪ್ರತಿ ೦-೬-೦ | ಮಾರ್ಚ ೧೯೫೫ | ವಾ. ಚಂದಾ ೪-೦-೦

ಕನ್ನಡ ರಕ್ಷಾಮಣಿ

(ಡೆಪ್ಯೂಟಿ ಚೆನ್ನಬಸಪ್ಪನವರು)

ಕನ್ನಡಕೆ ನವ್ಯ ಮನ್ವಂತರವ ತೆರೆದಿತ್ತು
ಬನ್ನಬಡುತಿಹ ನುಡಿಗೆ ಜೀವ ಕಳೆಯನ್ನಿತ್ತು

"ಚೆನ್ನಬಸವಪ್ಪ" ಓ! ಎಂಥ ಚನ್ನದ ಪೆಸರ್!
ಕನ್ನಡಮ್ಮನ ಬಾಳ್ಕೆಗಾಯ್ತು ಜೀವದುಸಿರ್.

ಕನ್ನಡಕೆ ಕಣ್ಣಾಗಿ ನವ ಕಾರಣಿಕನಾಗಿ
ನಿನ್ನಾತ್ಮ ದೀಪ್ತಿಯಿಂ ಕತ್ತಲೆಯ ನೀಗಿ

ಹೆತ್ತ ನಾಡಿಗೆ ಬೆಳಗ ನೆತ್ತಿರ್ದ, ಕುಲದೀಪ!
ನಿನ್ನ ಸಾಹಸ ತ್ಯಾಗ ಸೇವೆಗಳೆ ಧೂಪ!

ಕನ್ನಡದ ಗುರುಕುಲಕೆ ನೀನಾದೆ ನಾಡೋಜ
ಬೀರಿ ಚೈತನ್ಯಮಂ ತೋರಿ ನಿಜತೇಜಮಂ

ಕನ್ನಡದ ಪುಣ್ಯವೇ ಮೈದಾಳಿದಂತಾಗಿ
ಹೊನ್ನಮಳೆಗರೆಸಿ ನೆಲ ಚಲುವು ಚನ್ನಾಗಿ

ಬನ್ನ ಬಡುತಿಹ ನಿನ್ನ ಕನ್ನಡದ ಪಸುಳೆಯಂ
ಹರಸು ಮೇಲ್ಕೆತ್ತಿ ನಿಜ ಸ್ಫೂರ್ತಿಯಂ ಜ್ಯೋತಿಯಂ!

—ಎಸ್. ಡಿ. ಇಂಚಲ
ಪ್ರಾಚಾರ್ಯರು
ಜ. ಗು. ಕನ್ನಡ ಟ್ರೇನಿಂಗ ಕಾಲೇಜ
ಹುಬ್ಬಳ್ಳಿ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ತೇರಗಾಂವಕರ, ಬಿ. ಎಸ್ ಸಿ., (ಆನರ್ಸ) ಬಿ. ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹಸಂಪಾದಕರು

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ. ಬಿ. ಎಂ. ಶಿಂತ್ರಿ, ಬಿ. ಎ. ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ. ಎಸ್. ಆರ್. ಶೆಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೪೪	ಮಾರ್ಚ ೧೯೫೫	ಸಂಚಿಕೆ ೧೦

ಪರಿವಿಡಿ

೧. ಸಂಪಾದಕೀಯ ೨

೨. ಶ್ರೀ. ಹರಿ ಕೃಷ್ಣ ಮಹಶಾಬರವರು : ಶ್ರೀ. ಶಿಂತ್ರಿ ಬಸಪ್ಪನವರು ೫

೩. ಸಣ್ಣ ಮಕ್ಕಳಿಗೆ ವ್ಯಾಕರಣವನ್ನು ಕಲಿಸುವ ಬಗೆ : ಶ್ರೀ. ಎಸ್. ಆರ್. ಶೆಟ್ಟಿ ೮

೪. ವರ್ಗದ ಶಿಸ್ತು ಕಾಯುವದೆಂತು ? : ಶ್ರೀ. ಎಸ್. ಎಂ. ಹಳ್ಳಿಕೇರಿ ೧೦

೫. ನತ್ತು ಮತ್ತು ಮೂಗುತಿ : ಶ್ರೀ. ಬಿ. ಎಸ್. ಗದ್ದಗೀಮಠ ೧೫

೬. ಹಳ್ಳಿಗಾಡಿನಲ್ಲಿಯ ಸಣ್ಣ ಸಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ
ಸ್ಪೆಪಿಡಿ (ಲೇಖಾಂಕ ೩) : ಶ್ರೀ. ಶಿಂತ್ರಿ ಬಸಪ್ಪನವರು ೧೯

೭. ಸಮಾಜ ವಿಕಾಸ ಕೇಂದ್ರಗಳು : ಶ್ರೀ. ಫ. ಚ. ಉಣಕಲ್ಲ ೨೫

೮. ಕನ್ನಡ ರಕ್ಷಾಮಣಿ (ಕವಿತೆ) : ಶ್ರೀ. ಎಸ್. ಡಿ. ಇಂಚಲ .... ಕವ್ಹರ ೨

೯. ಕೈ. ಡೆಪ್ಯುಟಿ ಚೆನ್ನಬಸವಪ್ಪನವರು (ಕವಿತೆ) : ಶ್ರೀ. ಗುರುಲಿಂಗ ಕಾಪಸೆ .... ಕವ್ಹರ ೩

೧೦. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೬

ಮುಖಪೃಷ್ಠದ ಪಡಿಯಚ್ಚು :— ಶ್ರೀ. ಹರಿ ಕೃಷ್ಣ ಮಹಶಾಬರವರು.

ಸಂಪಾದಕೀಯ

ಹೊಸ ರಾಜ್ಯಪಾಲರಿಗೆ ಹೃತ್ಪೂರ್ವಕ ಸ್ವಾಗತ

ನಮ್ಮ ರಾಜ್ಯದ ಹೊಸ ರಾಜ್ಯಪಾಲರಾದ ಶ್ರೀ ಹರಿ ಕೃಷ್ಣ ಮಹತಾಬ ಅವರು ಬುಧವಾರ ದಿನಾಂಕ ೨-೩-೧೯೫೫ ರಂದು ತಮ್ಮ ಅಧಿಕಾರವನ್ನು ಸ್ವೀಕರಿಸಿದರು. ಭಾರತವು ಸ್ವತಂತ್ರವಾದನಂತರ ನಮ್ಮ ರಾಜ್ಯಕ್ಕೆ ಸ್ಥಿರರೀತಿಯಿಂದ ನೇಮಿಸಲ್ಪಟ್ಟ ರಾಜ್ಯಪಾಲರಲ್ಲಿ ಶ್ರೀ ಮಹತಾಬರು ಮೂರನೆಯವರು. ಇವರು ಓರಿಸಾ ರಾಜ್ಯದವರಿದ್ದು ನುರಿತ ಪತ್ರಿಕೋದ್ಯಮಿಗಳೆಂದೂ ಬಲ್ಲಿದ ಸಾಹಿತಿಗಳೆಂದೂ ಖ್ಯಾತಿವೆತ್ತಿದ್ದಾರೆ. ರಾಜಕಾರಣದಲ್ಲಿ ಅವೆಷ್ಟೋ ಅನುಭವ ಅವರಿಗಿದೆ. ಸ್ವಾತಂತ್ರ್ಯದ ನಂತರ ತಮ್ಮ ರಾಜ್ಯದ ಮೊದಲನೆಯ ಮುಖ್ಯ ಮಂತ್ರಿಗಳಾಗಿಯೂ ಆ ಮೇಲೆ ಕೇಂದ್ರ ಸರಕಾರದ ಮಂತ್ರಿಗಳಾಗಿಯೂ ಕೆಲಸ ಮಾಡಿದ್ದಾರೆ. ತದನಂತರ ಭಾರತದ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸೆಕ್ರೆಟರಿ ಜನರಲ್ಲರಾಗಿ ಅಖಿಲ ಭಾರತೀಯ ರಾಜಕಾರಣದ ಪರಿಚಯವನ್ನೂ ಮಾಡಿಕೊಂಡಿದ್ದಾರೆ. ಓರಿಸಾದ ಅನಭಿಷಿಕ್ತ ಚಕ್ರವರ್ತಿಯೂ ದಕ್ಷ ಆಡಳಿತಗಾರರೂ ಹಾಗು ರಾಜಕಾರಣ ಪಟುಗಳೂ ಆದ ಶ್ರೀ ಮಹತಾಬರ ಆಳಿಕೆಯು ಸುಸೂತ್ರವಾಗಿ ಸಾಗುವದರಲ್ಲಿ ಆಶ್ಚರ್ಯವೇನೂ ಇಲ್ಲ. ಅವರಿಗೆ ನಮ್ಮ ರಾಜ್ಯದಲ್ಲಿ ಸುಖಶ್ರೀಯಸ್ಸುಗಳೆರಷ್ಟೂ ದೊರಕಲೆಂದು ಹಾರೈಸಿ ನಮ್ಮ ಪತ್ರಿಕೆಯು ಹೃತ್ಪೂರ್ವಕ ಸ್ವಾಗತವನ್ನೀಯುತ್ತದೆ.

ಡಾಕ್ಟರ (ಕುಮಾರಿ) ಹೆಲೆನ್ ಕೆಲ್ಲರರ ಭಾರತ ಸಂಚಾರ

“ಒಂದೊಮ್ಮೆ ಕತ್ತಲೆ ನಿಶ್ಶಬ್ದತೆಗಳನ್ನೇ ಅರಿತ ನನ್ನ ಜೀವನಕ್ಕೆ ಭೂತ ಭವಿಷ್ಯತ್ತುಗಳೆರಡೂ ಇದ್ದಿಲ್ಲ” ಹೀಗೆಂದು ಉದ್ಗಾರ ತೆಗೆದ ಡಾ. ಹೆಲೆನ್ ಕೆಲ್ಲರರು ಇಂದು ತಮ್ಮ ಬೌದ್ಧಿಕ ಶಕ್ತಿಯಿಂದ ವಿಶ್ವವನ್ನೇ ಚಕಿತಗೊಳಿಸಿದ್ದಾರೆ. ಕುರುಡಿಯೂ ಕಿವುಡಿಯೂ ಕೆಲವು ಕಾಲ ಮೂಕಳೂ ಸಹ ಆದ ಈ ಶ್ರೇಷ್ಠ ಮಹಿಳೆ ಸಾಮಾನ್ಯರಿಗಿಂತ ಹಲವಾರು ಪಟ್ಟು ಹೆಚ್ಚು ಗ್ರಂಥಗಳನ್ನು ಓದಿದ್ದಾಳೆ. ಎಂಟು ಹತ್ತು ಅಮೌಲ್ಯವಾದ ಗ್ರಂಥಗಳನ್ನು ರಚಿಸಿದ್ದಾಳೆ. ವಿಶ್ವದ ಎಲ್ಲಕಡೆಗೂ ಇರುವ ದುರ್ದೈವಿಗಳಾದ ಕುರುಡರ ಕಿವುಡರ ಹಾಗು ಮೂಕರ ಬೌದ್ಧಿಕ ಹಾಗು ಆರ್ಥಿಕ ಅಸಹಾಯಕ ಪರಿಸ್ಥಿತಿಯ ಪರಿಹಾರಕ್ಕಾಗಿ ತನ್ನ ಇಡೀ ಜೀವನವನ್ನೇ ಅರ್ಪಿಸಿ ಅವಳು ಅವರಿಗೆಲ್ಲ ಅಧಿದೇವತೆಯಾಗಿದ್ದಾಳೆ. ಪೌರ್ವಾತ್ಯ ದೇಶಗಳಲ್ಲಿ ಈ ಸಮಸ್ಯೆಯ ನಿವಾರಣೆಗಾಗಿ ಕೈಕೊಂಡ ಸೌಕರ್ಯಗಳನ್ನು ಪರಿಶೀಲಿಸುವದಕ್ಕೆಂದೂ ಕುರುಡರ ಶೈಕ್ಷಣಿಕ, ಸಾಮಾಜಿಕ ಹಾಗು ಇತರ ಅವಶ್ಯಕತೆಗಳ ಬಗ್ಗೆ ಭಾಷಣಗಳನ್ನು ಮಾಡಿ ಜನಸಾಮಾನ್ಯರ ಅಂತಃಕರಣವನ್ನು ಕೆರಳಿಸುವದಕ್ಕೆಂದೂ ಅವರು

ಪೌರ್ವಾತ್ಯ ದೇಶಗಳ ಸಂದರ್ಶನವನ್ನು ಕೈಕೊಂಡು ಈಗ ಭಾರತವಲ್ಲಿ ಸಂಚರಿಸುತ್ತಿದ್ದಾರೆ. ಕಣ್ಣುಗಳಿಗೆ ಕಾಣಿಸದಿದ್ದರೂ ಕಿವಿಗಳಿಗೆ ಕೇಳಿಸದಿದ್ದರೂ ಸಹ ತಮ್ಮ ಅತ್ಯದ್ಭುತ ಸಾಹಸದಿಂದಲೂ, ಆತ್ಮಬಲದಿಂದಲೂ, ದೃಢನಿಶ್ಚಯದಿಂದಲೂ ತಮಗೆ ಒದಗಿದ ಮಹಾ ಎಡರುಗಳನ್ನು ಮೀರಿ ವಿಶ್ವದಲ್ಲಿರುವ ಕೋಟ್ಯಾವಧಿ ಕುರುಡರ ಉದ್ಧಾರಕ್ಕಾಗಿ ಅವಿಶ್ರಾಂತಿಯಿಂದ ದುಡಿಯುತ್ತಿರುವ ಈ ಮಹಾಮಹಿಳೆಗೆ ಮೆಚ್ಚದವರಾರು ? ಹೊಗಳದವರಾರು ? ಅವಳ ಉಪಕಾರವನ್ನು ಸ್ಮರಿಸದವರಾರು ? ಸಮಾಜೋದ್ಧಾರದ ಪವಿತ್ರಕಾರ್ಯವನ್ನು ಕೈಕೊಂಡು ಅದರಲ್ಲಿ ಯಶಸ್ಸನ್ನು ಗಳಿಸಿ ಮಾನವ ಕಲ್ಯಾಣವನ್ನು ಸಾಧಿಸಿದ ಜಗತ್ತಿನ ಕೆಲವೇ ವ್ಯಕ್ತಿಗಳಲ್ಲಿ ಇವರು ಅಗ್ರಗಣ್ಯರು. ಡಾ. ಕೆಲ್ಲರರು ಅಮೇರಿಕಾದವರಿದ್ದು ೧೮೮೦ ರಲ್ಲಿ ಅಲಬಾಮಾದಲ್ಲಿ ಜನಿಸಿದರು. ೧೯ ತಿಂಗಳ ಕೂಸಿದ್ದಾಗಲೇ ಸ್ಕಾರ್ಲೆಟ ಜ್ವರದ ಪರಿಣಾಮವಾಗಿ ಕಣ್ಣುಗಳೂ ಕಿವಿಗಳೂ ಹೋದವು. ಕೆಲವುಕಾಲ ಬಾಯಿಯೂ ಹೋಯಿತು. ಹೀಗಾಗಿ ಕೂಸಿನ ತಂದೆತಾಯಿಗಳಿಗೆ ಅತೀವ ಖೇದವುಂಟಾಯಿತು. ಅವರು ಅವಳ ಸಲುವಾಗಿ ತಮಗೆ ಸಾಧ್ಯವಿದ್ದುದೆಲ್ಲವನ್ನೂ ಮಾಡಿದರು. ಕೊನೆಗೆ ಕುಮಾರಿ ಆ್ಯನ್ ಸುಲಿವನ್ನರ ಭೆಟ್ಟಿಯಾಗಿ ಅವಳಿಗೆ ತಮ್ಮ ಏಳು ವರ್ಷದ ಮಗಳನ್ನು ಒಪ್ಪಿಸಿದರು. ಗುರುವು ಶಿಷ್ಯಳ ಉದ್ಧಾರಕ್ಕಾಗಿ, ಶಿಷ್ಯಳು ಗುರುವಿನ ಕೀರ್ತಿಗಾಗಿ ಪ್ರಯತ್ನಿಸಿದಂತಾಯಿತು. ಆವರಿಬ್ಬರ ದೀರ್ಘಪ್ರಯತ್ನದ ಫಲವಾಗಿ ಕುಮಾರಿ ಕೆಲ್ಲರರು ಬೆರಳಿನ ಸ್ಪರ್ಶ ಹಾಗೂ ಬ್ರೇಲ್ ಪದ್ಧತಿಗಳ ಸಹಾಯದಿಂದ ಓದಲಿಕ್ಕೂ, ಮಾತಾಡಲಿಕ್ಕೂ ಟಾಯಿಪ ಮಾಡಲಿಕ್ಕೂ ಕಲಿತರಲ್ಲದೆ ತಮ್ಮ ೨೦ ನೆಯ ವಯಸ್ಸಿನಲ್ಲಿ ರೆಡ್-ಕ್ಲಿಫ್ ಕಾಲೇಜವನ್ನು ಸೇರಿ ಮುಂದೆ ನಾಲ್ಕು ವರ್ಷಗಳಲ್ಲಿ ಬಿ. ಎ. ಪದವಿಯನ್ನು ಪಡೆದು ಜಗತ್ತಿನ ದೃಷ್ಟಿಯನ್ನೆಳೆದರು. ಆ ಮೇಲೆ ಮೆಸಾಚುಸೆಟ್ಸ್ ರಾಜ್ಯದಲ್ಲಿ ಕುರುಡರ ಸಲುವಾಗಿ ನಿರ್ಮಿಸಿದ ಸಮಿತಿಯಲ್ಲಿ ಕಾರ್ಯಮಾಡಿದರು. ಕುರುಡರಿಗಾಗಿ ಸ್ಥಾಪಿಸಲ್ಪಟ್ಟ ಅಮೇರಿಕನ್ ಸಂಸ್ಥೆಗೆ ಹತ್ತು ಲಕ್ಷ ಡಾಲರುಗಳ ನಿಧಿಯನ್ನು ಕೂಡಿಸಿಕೊಟ್ಟರು. ಇಷ್ಟರೊಳಗಾಗಿ ಉತ್ತಮ ಬರಹಗಾರರೆಂದೂ, ವಾಕ್ಪಟುಗಳೆಂದೂ ಅವರ ಕೀರ್ತಿಯು ವಿಶ್ವದ ನಾಲ್ಕುಕಡೆಗೂ ಹಬ್ಬಿತು. ಅವರ ಬರಹದಲ್ಲಿ ಕಾವ್ಯರಸವೂ ವರ್ಣವೈವಿಧ್ಯವೂ ತುಂಬಿದಂತೆ ಸುತ್ತಲಿನ ಸೌಂದರ್ಯದಲ್ಲಿಯ ಅವರ ತೀಕ್ಷ್ಣವಾದ ಆಸ್ಥೆ ಹೊರಚಿಮ್ಮುತ್ತಿದೆ. ಅವರು ಉಳಿದ ಭಾಷೆಗಳ ಪರಿಚಯವನ್ನೂ ಮಾಡಿಕೊಂಡಿದ್ದಾರೆ. ಈ ವೀರಾಗ್ರಣಿಯು ತನುಮನಧನದಿಂದಲೂ ತ್ರಿಕರಣಶುದ್ಧಿಯಿಂದಲೂ ಅಂಗಹೀನರ—ವಿಶೇಷವಾಗಿ ಕುರುಡರ ಉದ್ಧಾರದ ಪರಮ ಪವಿತ್ರ ಕಾರ್ಯವನ್ನೇ ತಮ್ಮ ಜೀವನದ ಸೂತ್ರವನ್ನಾಗಿ ಮಾಡಿಕೊಂಡಿದ್ದಾಳೆ. ಅದೇ ಅವಳ ಜೀವನದ ಸಾರ್ಥಕತೆ. ಅವರ ಸಂಚಾರವು ಸುಖಮಯವಾಗಲೆಂಬುದೇ ನಮ್ಮ ಪ್ರಾರ್ಥನೆ.

ಸ್ವತಂತ್ರ ಭಾರತದ ಶಿಕ್ಷಣದ ಬಗ್ಗೆ ಹಿತೈಷಿಗಳ ವಿಚಾರಗಳು

ಪ್ರಪಂಚದ ೨ನೆಯ ಯುದ್ಧವು ಮುಗಿದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತನಂತರ, ವರ್ಧಾ ಶಿಕ್ಷಣವೇ ರಾಷ್ಟ್ರೀಯ ಶಿಕ್ಷಣವೆಂಬ ಧೋರಣೆಯು ಅಧಿಕೃತವಾಗಿ ಕಾರ್ಯರಂಗಕ್ಕಿಳಿದ ಬಳಿಕ ಜನಸಾಮಾನ್ಯರು ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚು ಆಸ್ಥೆಯನ್ನು ತೋರಿಸಹತ್ತಿರುವರು. ಇದು ಶುಭಲಕ್ಷಣವೆಂದೇ ಹೇಳಬೇಕಲ್ಲವೆ ? ಪದವೀದಾನ, ಪಾರಿತೋಷಕ ವಿತರಣ, ಪಂದ್ಯಾಟಕೂಟ, ಸ್ನೇಹಸಮ್ಮೇಲನ ಇವೇ ಮುಂತಾದ ಶೈಕ್ಷಣಿಕ ಸಭೆ-ಸಮಾರಂಭಗಳಲ್ಲಿ ತಜ್ಞರೂ ಹಿತೈಷಿಗಳೂ ತಮ್ಮ ವಿಚಾರಗಳನ್ನು ಜನರ ಮುಂದಿಡುತ್ತಿದ್ದಾರೆ. ಸ್ವತಂತ್ರ ಭಾರತದ ಶಿಕ್ಷಣ ಸಮಸ್ಯೆಯನ್ನು ಬೇರೆ ಬೇರೆ ಜನರು ಬೇರೆ ಬೇರೆ ದೃಷ್ಟಿಯಿಂದ ನೋಡಹತ್ತಿದ್ದಾರೆ. ಬ್ರಿಟಿಶರ ಕಾಲದಿಂದ ಬಂದ ಸದ್ಯದ ಶಿಕ್ಷಣ ಪದ್ಧತಿಯಿಂದ ನಿರುದ್ಯೋಗತೆ ಬೆಳೆಯುವದೆಂಬ ಕಾರಣದಿಂದ ಅದನ್ನು ತೀರ ಖಂಡಿಸಿ ಅದರಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕೆಂಬ ಅಭಿಪ್ರಾಯ ಒತ್ತಟ್ಟಿಗಿದ್ದರೆ,

ಅನೇ ಶಿಕ್ಷಣವು ದಾದಾಭಾಯಿ ನವರೋಜಿ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಠಾಕೂರ, ಮಹಾತ್ಮಾ ಗಾಂಧಿ, ಅರವಿಂದ ಘೋಷ, ಜವಾಹರಲಾಲ ನೆಹರು ಮುಂತಾದ ಮಾನವರತ್ನಗಳನ್ನು ಒದಗಿಸಿದ್ದಲ್ಲದೆ ನಮ್ಮ ರಾಷ್ಟ್ರದ ಸ್ವಾತಂತ್ರ್ಯದ ಸಾಧನೆಗೆ ಬಹುಮಟ್ಟಿಗೆ ಸಹಾಯ ಮಾಡಿದೆಯೆಂದು ಹೇಳಿ ನವಭಾರತದ ಆಶೋತ್ತರಗಳಿಗನುಗುಣವಾದ ಹಲಕೆಲವು ಬದಲಾವಣೆ ಮಾಡಿದರೆ ಸಾಕು, ಉದ್ಯೋಗವನ್ನು ಕಲ್ಪಿಸುವದೇ ಶಿಕ್ಷಣದ ಗುರಿಯಾಗಬಾರದೆಂಬ ಅಭಿಪ್ರಾಯ ಮತ್ತೊಂದು ಕಡೆಗೆ.

ಕೆಲವರು ಶಿಕ್ಷಣದ ಆಡಳಿತದಲ್ಲಿ ಸಂಪೂರ್ಣ ಬದಲಾವಣೆ ಅವಶ್ಯವಿದೆಯೆಂದೂ ಶಿಕ್ಷಣದ ಪೂರ್ಣ ಹೊಣೆಯನ್ನು ಜನತೆಗೆ ಬಿಡಬೇಕೆಂದೂ ಸೂಚಿಸಿದರೆ ಇನ್ನೂ ಕೆಲವರು ಹಾಗೆ ಮಾಡದೆ ಅಭ್ಯಾಸದ ವಿಷಯಗಳಲ್ಲಿಯೂ ಕಲಿಸುವ ರೀತಿ-ನೀತಿಗಳಲ್ಲಿಯೂ ತಕ್ಕ ಬದಲಾವಣೆಗಳನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಶಿಕ್ಷಣದ ಗುರಿಗಳಲ್ಲಿ ಬೌದ್ಧಿಕ ವಿಕಾಸಕ್ಕೆ ಮಹತ್ವದ ಸ್ಥಾನವಿರಬೇಕೆಂದು ಪ್ರತಿಪಾದಿಸುವವರೂ ಇದ್ದಾರೆ. ಶಿಕ್ಷಣರಂಗದಲ್ಲಿ ಸಾಂಸ್ಕೃತಿಕ ಹಾಗು ಸಾಮಾಜಿಕ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿರಬೇಕೆಂಬ ಸೊಲ್ಲೂ ಒಂದು ಕಡೆ. ಆತ್ಮಸಾಕ್ಷಾತ್ಕಾರವು ಶಿಕ್ಷಣದ ಮುಖ್ಯ ಗುರಿಯಾದರೆ ಮಾತ್ರ ಮಗುವಿಗೆ ತಾನು ಯಾರು ಎಂಬುದು ಅರಿವಿನ ಕಲ್ಪನೆಯಾಗಿ ಸುಸಂಪನ್ನವಾದ ಸಮಾಜದ ರಚನೆಗೆ ಶಿಕ್ಷಣವೇ ತಳಹದಿಯಾಗುವದೆಂಬ ವಿಚಾರದ ಪುರಸ್ಕರ್ತರೂ ಇದ್ದಾರೆ. ಒಟ್ಟಿನಲ್ಲಿ ಭಿನ್ನಾಭಿಪ್ರಾಯಗಳ ಬಿರುಗಾಳಿಯಿಂದಲೂ, ಸೂಚನೆಗಳ ಸುರಿಮಳೆಯಿಂದಲೂ ಜನಸಾಮಾನ್ಯರ ವಿಚಾರಸಾಗರದಲ್ಲಿ ತರಂಗಗಳು ಎದ್ದಿವೆ. ೧೪ ವರ್ಷಗಳೊಳಗಿನ ಎಲ್ಲ ಮಕ್ಕಳಿಗೆ ೧೦ ವರ್ಷದ ಅವಧಿಯಲ್ಲಿ ಪುಕ್ಕಟೆ ಹಾಗು ಕಡ್ಡಾಯವಾದ ಶಿಕ್ಷಣವನ್ನು ಕೊಡಲಿಕ್ಕೆ ರಾಜ್ಯಸರಕಾರಗಳು ಪ್ರಯತ್ನಿಸಬೇಕೆಂದು ಭಾರತದ ರಾಜ್ಯಘಟನೆಯಲ್ಲಿ ವಿಧಿಸಲ್ಪಟ್ಟಿದೆ. ಆದಷ್ಟು ತೀವ್ರದಲ್ಲಿಯೇ ರಾಷ್ಟ್ರದಾದ್ಯಂತ ಹಬ್ಬಿದ ನಿರಕ್ಷರತೆಯನ್ನು ಹೊಡೆದೋಡಿಸುವದು ಸರಕಾರದ ಧ್ಯೇಯವಾಗಿದೆ. ಭಾರತದಲ್ಲಿ ಪ್ರಜಾಪ್ರಭುತ್ವದ ವಿಚಾರಗಳು ನೆಲೆಗೊಳ್ಳಲು ಅನುಕೂಲವಾಗುವಂತೆ ಶಿಕ್ಷಣದಲ್ಲಿ ಮಾರ್ಪಾಟುಗಳು ನಡೆಯಬೇಕಾಗಿವೆ. ಹೀಗಾಗಿ ಸ್ವತಂತ್ರಭಾರತದ ಶಿಕ್ಷಣಕ್ಕೆ ಹೆಚ್ಚಿನ ಹೊಣೆ ಬಂದಿದೆ. ಜನಜೀವನದ ಮಟ್ಟವನ್ನು ಎತ್ತರಿಸಲಿಕ್ಕೂ ತೀವ್ರಗತಿಯಿಂದ ಹೆಚ್ಚುತ್ತಿರುವ ಜನಸಂಖ್ಯೆಯ ಬೇಡಿಕೆಗಳನ್ನು ಪೂರೈಸಲಿಕ್ಕೂ ಅಗತ್ಯವಾದ ಔದ್ಯೋಗಿಕ ಹಾಗು ಅಭಿವೃದ್ಧಿಗಳ ಯೋಜನೆಗಳನ್ನು ಶಿಕ್ಷಣವೇ ತೋರಿಸಬೇಕಾಗಿದೆ. ಹಳ್ಳಿ ಪಟ್ಟಣಗಳ ನಡುವಿರುವ ಈಗಿನ ಮಹದಂತರವನ್ನು ಹೋಗಲಾಡಿಸುವದು, ಸ್ತ್ರೀಯರ ಸ್ಥಾನಮಾನಗಳ ರಕ್ಷಣೆ, ಹಿಂದುಳಿದವರ ಕಲ್ಯಾಣ, ಜಾತ್ಯಾಂಧತೆಯ ನಿರ್ಮೂಲನೆ, ಭಾಷಾಸಮಸ್ಯೆಗಳ ಪರಿಹಾರ, ಲಲಿತ ಕಲೆಗಳ ಪೋಷಣೆ ಇವೆಲ್ಲ ಸಮಸ್ಯೆಗಳಿಗೆ ಸಮರ್ಪಕವಾದ ಉತ್ತರವನ್ನು ಸ್ವತಂತ್ರಭಾರತದ ಶಿಕ್ಷಣವೇ ಕೊಡಬೇಕಾಗಿದೆ.

ಬಾಲರಕ್ಷಣ ಸಪ್ತಾಹ

ಈ ತಿಂಗಳ ಮೊದಲನೆಯ ವಾರದಲ್ಲಿ ಬಾಲರಕ್ಷಣ ಸಪ್ತಾಹವು ಆಚರಿಸಲ್ಪಟ್ಟಿತು. ಪ್ರೊಬೇಶನ್ ಮತ್ತು ಆಪ್ತರಕ್ಷಕರ ಸಂಸ್ಥೆಯ ಸದಸ್ಯರು, ಗೌರವ ಕಾರ್ಯದರ್ಶಿಗಳು ಹಾಗೂ ಅದರ ಮುಖ್ಯಾಧಿಕಾರಿಗಳು ಸಭೆಗಳನ್ನು ಜರುಗಿಸಿ ಸಂಸ್ಥೆಯ ಅವಶ್ಯಕತೆ, ಬಾಲರಕ್ಷಣ ಕಾರ್ಯದಲ್ಲಿ ತಂದೆ-ತಾಯಿಗಳ ಹಾಗೂ ಸಮಾಜದ ಹೊಣೆಗಳು ಮೊದಲಾದವುಗಳ ಬಗ್ಗೆ ಪರಿಣಾಮಕರ ಭಾಷಣ ಮಾಡಿದರು. ಸುತ್ತಲಿನ ಪರಿಸ್ಥಿತಿ ಹಾಗು ಆರ್ಥಿಕ ದುಸ್ಥಿತಿಯಿಂದ ಮಕ್ಕಳು ತಪ್ಪು ಹಾದಿಯನ್ನು ಹಿಡಿದು ಸಮಾಜ ಕಂಟಕರಾಗುತ್ತಾರೆ. ಮಕ್ಕಳು ರಾಷ್ಟ್ರದ ಜೀವಾಳ. ಮಕ್ಕಳ ಉನ್ನತಿಯು ಮನೆ, ಶಾಲೆ, ಸಮಾಜಗಳನ್ನು ಅವಲಂಬಿಸಿದೆ. ಸಮಾಜ ಘಾತುಕ ಪ್ರವೃತ್ತಿಯುಳ್ಳ ಮಕ್ಕಳನ್ನು ತಿದ್ದಿ ರಕ್ಷಿಸಬೇಕು. ಮಕ್ಕಳು ತಂದೆ-ತಾಯಿಗಳ ಸ್ವತ್ತು. ರಾಷ್ಟ್ರದ ಸಂಪತ್ತು. ಇವನ್ನು ಅರಿತಷ್ಟು ಸುಖ, ಮರೆತಷ್ಟು ದುಃಖ.

ಶ್ರೀ. ಹರೆ ಕೃಷ್ಣ ಮಹತಾಬ

[ಮುಂಬಯಿ ರಾಜ್ಯದ ನೂತನ ಗವ್ಹರ್ನರರು]

ಲೇಖಕರು: ಶ್ರೀ ಸಿಂತ್ರಿ ಬಸಪ್ಪನವರು ಬಿ. ಎ. ಬಿ. ಟಿ.,
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್ಸ್ಪೆಕ್ಟರ, ದಕ್ಷಿಣಭಾಗ, ಧಾರವಾಡ ಹಾಗೂ
ಗೌರವ ಕಾರ್ಯದರ್ಶಿ ಮತ್ತು ಲಾಯಿಬ್ರೇರಿಯನ್ ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

ಮೊದಲ ಮಾತು

ನಮ್ಮ ರಾಜ್ಯದ ಹಿಂದಿನ ರಾಜ್ಯಪಾಲರಾದ ಶ್ರೀ ಗಿರಿಜಾ ಶಂಕರ ವಾಜಪೇಯಿಯವರು ದಿನಾಂಕ ೫-೧೨-೧೯೫೪ ರಂದು ನಿಧನ ಹೊಂದಿದ ಬಗೆಗೆ "ಕನ್ನಡ ಪ್ರಾಥಮಿಕ ಶಿಕ್ಷಣ"ವು ಆ ತಿಂಗಳ ಸಂಚಿಕೆಯಲ್ಲಿ ಕಂಬನಿ ಸುರಿಸಿದುದನ್ನು ಓದುಗರು ಮರೆತಿರಲಿಕ್ಕಿಲ್ಲವಷ್ಟೇ. ಅವರ ಸ್ಥಳದಲ್ಲಿ ಶ್ರೀ ಮಂಗಲದಾಸ ಪಕ್ವಾಸಾರವರು ತಾತ್ಪೂರ್ತಿಕವಾಗಿ ಕೆಲಸ ಮಾಡಬೇಕೆಂದು ರಾಷ್ಟ್ರಾಧ್ಯಕ್ಷರಿಂದ ನಿಯಮಿಸಲ್ಪಟ್ಟಿದ್ದರು. ಕೆಲ ದಿನಗಳ ಹಿಂದೆ ರಾಷ್ಟ್ರಪತಿ ಭವನದಿಂದ ಹೊಸದೊಂದು ಆಜ್ಞೆಯು ಹೊರಟಿದೆ. ಒಂದಾನೊಂದು ಕಾಲದಲ್ಲಿ ಓರಿಸಾ ಪ್ರಾಂತದ ಮುಖ್ಯ ಮಂತ್ರಿಗಳೂ, ಕೆಲ ಕಾಲ ಕೇಂದ್ರ ಸರಕಾರದಲ್ಲಿ ವಾಣಿಜ್ಯ ಮತ್ತು ಉದ್ಯಮ ಶಾಖೆಯ ಮಂತ್ರಿಗಳೂ ಆಗಿದ್ದ ಶ್ರೀ ಹರೆಕೃಷ್ಣ ಮಹತಾಬರವರು ನಮ್ಮ ರಾಜ್ಯದ ರಾಜ್ಯಪಾಲರೆಂದು ನಿಯಮಿಸಲ್ಪಟ್ಟಿದ್ದಾರೆ. ಅವರು ಇದೇ ತಿಂಗಳು ದಿನಾಂಕ ೨ ರಂದು ಪ್ರತಿಜ್ಞಾವಿಧಿಯನ್ನು ಪೂರೈಸಿ ಅಧಿಕಾರವನ್ನು ವಹಿಸಿಕೊಂಡರು. ಅವರ ಬಗೆಗೆ ಅಲ್ಪ ಪರಿಚಯವು ನಮ್ಮ ಓದುಗರಿಗಿರುವದು ಲೇಸಲ್ಲವೇ ? ಆ ಸದುದ್ದೇಶದಿಂದ ನಮಗೆ ಅಲ್ಲಲ್ಲಿ ದೊರೆತ ವಿವರಗಳನ್ನು ಸಂಗ್ರಹಿಸಿ ಸುಸಂಬದ್ಧವಾಗಿ ಹೊಂದಿಸಿ ಈ ಪುಟ್ಟ ಲೇಖವೊಂದನ್ನು ಬರೆಯಲಾಗಿದೆ. ಇದರ ಸಂಪೂರ್ಣ ಲಾಭವನ್ನು ಶಿಕ್ಷಕ-ಶಿಕ್ಷಕಿಯರೂ ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ತಕ್ಕೊಳ್ಳುವರೆಂದು ಹಾರೈಸುತ್ತೇವೆ.

ಬಾಲ್ಯ ಹಾಗೂ ಶಿಕ್ಷಣ

ಓರಿಸಾ ಪ್ರಾಂತದಲ್ಲಿ ಬಾಲಾಸೋರ ಎಂಬದೊಂದು ಜಿಲ್ಹೆಯಿದೆ. ಆ ಜಿಲ್ಹೆಯಲ್ಲಿ ಅಗರಪಾರಾ ಎಂಬದೊಂದು ದೊಡ್ಡ ಗ್ರಾಮದಲ್ಲಿ ಮಹತಾಬರವರ ಮನೆತನವು ಸುಪ್ರಸಿದ್ಧವಿದೆ. ಅವರ ತಂದೆಯವರು ಶ್ರೀ ಜಗನ್ನಾಥರವರು. ಶ್ರೀ ಹರೆಕೃಷ್ಣರವರು ೧೮೯೯ನೆಯ ಇಸವಿ ನವಂಬರ ತಿಂಗಳು ದಿನಾಂಕ ೨೧ ರಂದು ಸ್ವಗ್ರಾಮದಲ್ಲಿ ಜನಿಸಿದರು. ಅವರ ಪ್ರಾಥಮಿಕ ಶಿಕ್ಷಣವೆಲ್ಲ ಸ್ವಗ್ರಾಮದಲ್ಲಿ ಜರುಗಿತೆಂಬಂತೆ ತೋರುತ್ತದೆ. ಬಾಲಾಸೋರದಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿಕೊಂಡು ಉಚ್ಚಶಿಕ್ಷಣಕ್ಕಾಗಿ ಕಟಕ ಪಟ್ಟಣದಲ್ಲಿಯ ರೇವ್ಹನ್‌ಶಾ ಕಾಲೇಜ (Ravenshaw College) ವನ್ನು ಸೇರಿದರು. ೧೯೨೦ ರಲ್ಲಿ ಸುಭದ್ರಾದೇವಿಯವರೊಡನೆ ಅವರ ವಿವಾಹವು ಜರುಗಿತು. ಆಗ ಅವರು ೨೧ ವರ್ಷದ ಪ್ರಾಯದವರಿದ್ದರು.

ಸ್ವಾತಂತ್ರ್ಯ ಸಂಗ್ರಾಮ

ಮಹಾತ್ಮರಿಂದ ಹೂಡಲ್ಪಟ್ಟ ಅಸಹಕಾರ ಚಳವಳಿಯಲ್ಲಿ ೧೯೨೧ ರಲ್ಲಿ ಮೊತ್ತ ಮೊದಲು ಭಾಗ ವಹಿಸಿದರು. ಅಂದಿನಿಂದ ಇಲ್ಲಿಯ ವರೆಗೆ ಅವರು ಕಾಂಗ್ರೆಸದ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಮಾಡಿದ್ದಾರೆ. ೧೯೩೦ ರಲ್ಲಿ ತಮ್ಮ ಪ್ರಾಂತದಲ್ಲಿಯ ಇಂಚೂರಿ ಎಂಬಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಸಂಘಟಿಸಿದರು. ಅದಕ್ಕೋಸ್ಕರ ಅವರು ಒಂದೂವರೆ ವರ್ಷಗಳ ವರೆಗೆ ಕಾರಾಗೃಹ

ವಾಸವನ್ನು ಭೋಗಿಸಿದರು. ಕಾಂಗ್ರೆಸು ಹೂಡಿದ 'ಅಸಹಕಾರ,' 'ಕಾಯದೆಭಂಗ,' 'ಹಿಂದುಸ್ತಾನವನ್ನು ಬಿಟ್ಟು ತೊಲಗಿರಿ' ಮೊದಲಾದ ಎಲ್ಲ ಚಳವಳಿಗಳಲ್ಲಿ ಭಾಗವಹಿಸಿ ಎಷ್ಟೋ ಸಲ ಸೆರೆಮನೆಯನ್ನು ಕಂಡು ಬಂದಿದ್ದಾರೆ.

ರಾಜಕೀಯ ರಂಗ

ಬಾಲಾಸೋರ ಜಿಲ್ಲೆಯ ಡಿಸ್ಟ್ರಿಕ್ಟ ಬೋರ್ಡಿನ ಚೇರಮನ್ನರೆಂದು ೧೯೨೪ ರಲ್ಲಿ ಆಯ್ಕೆಯನ್ನು ಹೊಂದಿ ೧೯೨೮ ರ ವರೆಗೆ ಆ ಹುದೆಯಲ್ಲಿ ಕೆಲಸ ಮಾಡಿದರು. ೧೯೨೪ ರಲ್ಲಿ ಹಿಂದಿನ ಬಿಹಾರ-ಓರಿಸಾ ಪ್ರಾಂತದ ಕಾಯದೆ ಮಂಡಳ (Legislative Council) ಕ್ಕೆ ಚುನಾಯಿಸಲ್ಪಟ್ಟಿದ್ದರು. ಉತ್ಕಲ ಪ್ರಾಂತದ ಕಾಂಗ್ರೆಸ ಕಮಿಟಿಯ ಅಧ್ಯಕ್ಷರೆಂದು ೧೯೩೦ ರಲ್ಲಿ, ೧೯೩೭ ರಲ್ಲಿ, ಹೀಗೆ ಎರಡು ಸಲ ಚುನಾಯಿತರಾದರು. ೧೯೩೮ ರಿಂದ ೧೯೪೬ ರ ವರೆಗೆ ಕಾಂಗ್ರೆಸ ಕಾರ್ಯಕಾರಿ ಸಮಿತಿ (Congress Working Committee)ಯ ಸದಸ್ಯರೆಂದು ಕೆಲಸ ಮಾಡಿದ್ದಾರೆ. ಕೆಲಕಾಲ ಓರಿಸಾ ಪ್ರಾಂತದ ಕಾಂಗ್ರೆಸ ಅಸೆಂಬ್ಲಿ ಪಕ್ಷದ ಮುಖ್ಯಸ್ಥರೆಂದು ನಿಯೋಜಿಸಲ್ಪಟ್ಟಿದ್ದರು. ೧೯೪೭ ನೆಯ ಇಸವಿ ಡಿಸೆಂಬರ ತಿಂಗಳಲ್ಲಿ ಓರಿಸಾ ಪ್ರಾಂತದಲ್ಲಿಯ ಎಲ್ಲ ಸಂಸ್ಥಾನಗಳು ತಮ್ಮ ಪ್ರಾಂತದಲ್ಲಿ ವಿಲೀನಗೊಳ್ಳಲು ಕಾರಣೀಭೂತರಾಗಿದ್ದಾರೆ. ೧೯೩೭ ರಲ್ಲಿ ರಚಿತವಾಗಿದ್ದ ಓರಿಸಾ ಸಂಸ್ಥಾನಗಳ ಪರಿಶೀಲನೆ ಸಮಿತಿ (Orissa States Inquiry Committee) ಯ ಅಧ್ಯಕ್ಷರೆಂದು ನೇಮಿಸಲ್ಪಟ್ಟಿದ್ದರು. ೧೯೪೬ ರಿಂದ ೧೯೫೦ ರ ವರೆಗೆ ಓರಿಸಾ ಪ್ರಾಂತದ ಮುಖ್ಯ ಮಂತ್ರಿಗಳೆಂದು ಕೆಲಸ ಮಾಡಿದ್ದಾರೆ. ದಿನಾಂಕ ೧-೫-೧೯೫೦ ರಿಂದ ೧೧-೫-೧೯೫೨ ರ ವರೆಗೆ ಕೇಂದ್ರ ಸರಕಾರದ ವಾಣಿಜ್ಯ ಹಾಗೂ ಉದ್ಯಮ ಶಾಖೆಯ ಮಂತ್ರಿಗಳಾಗಿದ್ದರು. ಕೆಲಕಾಲ ಕೇಂದ್ರದಲ್ಲಿ ಕಾಂಗ್ರೆಸ ಪಾರ್ಲಿಮೆಂಟರಿ ಪಕ್ಷದ ಸೆಕ್ರೆಟರಿ-ಜನರಲ್ ಎಂದು ಸೇವೆ ಸಲ್ಲಿಸಿದ್ದಾರೆ.

ಪತ್ರಿಕೋದ್ಯಮ ಹಾಗೂ ಸಾಹಿತ್ಯ

ಓರಿಸಾ ಪ್ರಾಂತದ ಜನರಾಡುವ ಭಾಷೆಗೆ ಉರಿಯಾ ಎಂದು ಕರೆಯುತ್ತಾರೆ. ಉರಿಯಾ ಭಾಷೆಯು ನಮ್ಮ ಚರಿತ್ರನಾಯಕರ ತಾಯ್ನುಡಿಯೆಂಬುದನ್ನು ಇಲ್ಲಿ ಹೇಳುವದೇ ಬೇಡ. ಆ ಭಾಷೆಯಲ್ಲಿ "ಪ್ರಜಾತಂತ್ರ"ವೆಂಬ ಹೆಸರಿನದೊಂದು ದೈನಿಕವನ್ನು ಹೊರಡಿಸಿ ಏಳು ವರ್ಷಗಳ ವರೆಗೆ ಅದರ ಸಂಪಾದಕರಾಗಿದ್ದುದಲ್ಲದೆ "ಈಸ್ಟರ್ನ್ ಟಾಯಿಮ್ಸ್" (Eastern Times) ಎಂಬ ಹೆಸರಿನ ಇಂಗ್ಲೀಷ ದೈನಿಕದ ಸಂಪಾದಕತ್ವವನ್ನು ವಹಿಸಿಕೊಂಡು, ಅವೆರಡೂ ದೈನಿಕಗಳನ್ನು ದಕ್ಷತೆಯಿಂದ ಸಾಗಿಸಿಕೊಂಡು ನಡೆದರು. ಅವಲ್ಲದೆ "ಝುಂಕರ" (Jhankar) ಎಂಬ ಹೆಸರಿನದೊಂದು ಸಾಹಿತ್ಯ ಮಾಸಿಕವನ್ನು ಉರಿಯಾ ಭಾಷೆಯಲ್ಲಿ ಹೊರಡಿಸುತ್ತಿದ್ದರು. ಅವರ ಹಿರಿದಾದ ಲೇಖಗಳು ಎಲ್ಲರ ಮನ್ನಣೆಗೆ ಪಾತ್ರವಾಗಿದ್ದವು. ಸುಮಾರು ಎಂಟು ಕಾದಂಬರಿಗಳೂ, ಒಂದು ನಾಟಕವೂ, ಹಲವು ಪದ್ಯ-ಕವನಗಳೂ ಅವರಿಂದ ಬರೆಯಲ್ಪಟ್ಟಿವೆ. ಸಾಕಷ್ಟು ಸಂಶೋಧನ ಮಾಡಿ, ವಿಶೇಷ ಶ್ರಮವನ್ನು ವಹಿಸಿ, ಓರಿಸಾದ ಇತಿಹಾಸವನ್ನು ಬರೆದಿದ್ದಾರೆ. ಅದು ಅಧಿಕೃತ ಉದ್-ಗ್ರಂಥವೆಂದು ಎಲ್ಲ ವಿದ್ವಾಂಸರ ಒಪ್ಪಿಗೆಯನ್ನು ಪಡೆದಿದೆ. ತಾವು ಸ್ವತಃ ಪ್ರತಿಭಾನ್ವಿತ ಸಾಹಿತಿಗಳಾಗಿರುವದಲ್ಲದೆ ಸಾಹಿತ್ಯದ ಪೋಷಕರಾಗಿ ಸಹಾಯಧನವನ್ನಿತ್ತಿದ್ದಾರೆ. ಬೆಳಕು ಕಾಣದೆ ಕತ್ತಲೆಯಲ್ಲಿ ಹುಳ-ಹುಪ್ಪಡಿಗಳ ಪಾಲಾಗುತ್ತಿದ್ದ ಹಳೆಯ ಕಾಲದ ಉರಿಯಾಕವಿಗಳ ಕಾವ್ಯಗಳನ್ನೆಲ್ಲ ಸಂಶೋಧಿಸಿ, ಶೇಖರಿಸಿ, ಪರಿಷ್ಕರಿಸಿ ಪ್ರಕಟಿಸಲು ೨೫೦೦೦ ರೂಪಾಯಿಗಳ ಉದಾರ ದೇಣಿಗೆಯನ್ನು ದಯಪಾಲಿಸಿದ್ದಾರೆ! ತಮ್ಮ ಪ್ರಾಂತದಲ್ಲಿಯ ಆದಿವಾಸಿಗಳಲ್ಲಿ ಗಾಂಧಿ ಧರ್ಮವನ್ನು ಹಬ್ಬಿಸಲು ೨೬೦೦೦ ರೂಪಾಯಿಗಳ ದಾನವನ್ನು ಸ್ವಸಂತೋಷದಿಂದ ಕೊಟ್ಟಿದ್ದಾರೆ! ತಮ್ಮ ತಾಯ್ನುಡಿಯ ಸಾಹಿತ್ಯಕ್ಕರ್ಪಿಸಿದ ಅವರ ಅಮೌಲ್ಯವಾದ ಸೇವೆಯನ್ನು ಮನದಂದು ಆಂಧ್ರ ವಿಶ್ವವಿದ್ಯಾಲಯವು ೧೯೫೦ ರಲ್ಲಿ ಅವರಿಗೆ "ಡಾಕ್ಟರ ಆಫ್ ಲಿಟರೇಚರ" (Doctor of Literature) ಎಂಬ ಪದವಿಯನ್ನು ಗೌರವಾದರಗಳಿಂದ ಅರ್ಪಿಸಿದೆ.

ಶ್ರೀಯುತ ಹರೆ ಕೃಷ್ಣ ಮಹತಾಬರವರು

ಯೋಗ್ಯತೆ

೧೯೨೧ ರಿಂದ ಸ್ವಾತಂತ್ರ್ಯ ಪ್ರಾಪ್ತಿಯ ವರೆಗೆ ನಿಷ್ಠಾವಂತ ಸೈನಿಕನಂತೆ ಹೋರಾಡಿದುದು ಅವರು ಮಹಾತ್ಮರಲ್ಲಿಟ್ಟದ್ದ ಸ್ವಾಮಿಭಕ್ತಿಯನ್ನೂ ಕಾಂಗ್ರೆಸಿನಲ್ಲಿಟ್ಟದ್ದ ವಿಶ್ವಾಸವನ್ನೂ ಪ್ರದರ್ಶಿಸುತ್ತಿದೆ. ೨೫ ವರ್ಷದ ಪ್ರಾಯದವರಿದ್ದಾಗ ಡಿಸ್ಟ್ರಿಕ್ಟ ಬೋರ್ಡಿನ ಚೇರಮನ್ನರಾದದ್ದೂ ಕಾಯದೆ ಮಂಡಳದ ಸದಸ್ಯರೆಂದು ಚುನಾಯಿತರಾದದ್ದೂ ಅವರ ಲೋಕಪ್ರಿಯತೆಯನ್ನು ಕೈಯೆತ್ತಿ ತೋರಿಸುತ್ತಿವೆ. ಅಷ್ಟು ಚಿಕ್ಕ ವಯಸ್ಸಿನಲ್ಲಿ ಆಯ್ಕೆಯನ್ನು ಹೊಂದಿದ ಉದಾಹರಣೆಗಳು ತೀರ ವಿರಳ. ಪತ್ರಿಕೋದ್ಯಮದಲ್ಲಿಯಂತೂ ಅವರೊಂದು ವಿಕ್ರಮವನ್ನೇ ಮಾಡಿ ತೋರಿಸಿದ್ದಾರೆ. ಒಂದು ಉರಿಯಾದಲ್ಲಿ, ಒಂದು ಇಂಗ್ಲೀಷದಲ್ಲಿ ಹೀಗೆ ಎರಡು ದೈನಿಕಗಳನ್ನೂ ಒಂದು ಉರಿಯಾ ಸಾಹಿತ್ಯ ಮಾಸಿಕವನ್ನೂ ಎಲ್ಲರು ಹೌದೆನ್ನುವ ಹಾಗೆ ಏಕಕಾಲಕ್ಕೆ ನಡೆಯಿಸಿಕೊಂಡು ಹೋಗುವದು ನಿಜಕ್ಕೂ ಆಚ್ಚರಿಯ ಮಾತಲ್ಲವೇ ? ನಮ್ಮಲ್ಲಿಯ ಪತ್ರಿಕೋದ್ಯಮಿಗಳಿಗೆ ಒಂದು ದೈನಿಕ ಇಲ್ಲವೆ ಒಂದು ಸಾಪ್ತಾಹಿಕವನ್ನು ಸಾಗಿಸಿಕೊಂಡು ಹೋಗಬೇಕಾದರೆ ಸಾಕುಬೇಕಾಗುತ್ತಿದೆ. ಈ ಸಂದರ್ಭದಲ್ಲಿ ಅವರನ್ನು ಎಷ್ಟು ಹೊಗಳಿದರೂ ಕಡಿಮೆಯೇ ಸೈ. ಅವರ ವಿಚಾರಪರಿಪ್ಲುತವಾದ ಲೇಖಗಳನ್ನೋದಿ ಎಲ್ಲರು ತಲೆದೂಗುತ್ತಿದ್ದರು. ಅಲ್ಲದೆ, ಅವರು ಉತ್ತಮೋತ್ತಮ ಸಾಹಿತಿಗಳಾಗಿದ್ದಾರೆ. ಎಂಟು ಕಾದಂಬರಿಗಳನ್ನೂ, ಒಂದು ನಾಟಕವನ್ನೂ, ಒಂದು ಅಪ್ರತಿಮ ಇತಿಹಾಸವನ್ನೂ ಅಸಂಖ್ಯ ಪದ್ಯ-ಕವನಗಳನ್ನೂ ಬರೆದಿದ್ದಾರೆ. ಅವರು ಸಾಹಿತಿಗಳಾಗಿರದಿದ್ದರೆ ಸಾಹಿತ್ಯ ಮಾಸಿಕವನ್ನು ಹೊರಡಿಸುವ ಗೋಜಿಗೇ ಹೋಗುತ್ತಿರಲಿಲ್ಲ. " ಮನೆ ಸಣ್ಣದಿದ್ದರೂ ಮನ ದೊಡ್ಡದಿರಬೇಕು " ಎಂಬ ನಾಣ್ಣುಡಿಯಿದೆಯಲ್ಲವೇ ? ನಮ್ಮ ರಾಜ್ಯಪಾಲರ ಮನೆ (ರಾಜಭವನ)ಯೂ ದೊಡ್ಡದಿದೆ, ಮನವೂ ಮತ್ತಷ್ಟು ದೊಡ್ಡದಿದೆ; ಅವರಲ್ಲಿ ಹೃದಯ ವೈಶಾಲ್ಯವಿದೆ. ಯಾಕಂದರೆ, ತಮ್ಮ ತಾಯ್ನಾಡಿಯ ಏಳ್ಗೆಗೋಸ್ಕರ ಹಾಗೂ ಆದಿವಾಸಿಗಳ ಉದ್ಧಾರಕ್ಕೋಸುಗ ಮೇಲೆ ಉಲ್ಲೇಖಿಸಿದಂತೆ ಸಾವಿರಾರು ರೂಪಾಯಿಗಳ ಬಿಚ್ಚುಗೈಯ ದೇಣಿಗೆಗಳನ್ನು ಆತ್ಮಸಂತೋಷದಿಂದ ಸಲ್ಲಿಸಿದ್ದಾರೆ. ಒಟ್ಟಿನಲ್ಲಿ ಅವರು ಸರ್ವವಿಧದಿಂದಲೂ ಒಳ್ಳೇ ಅರ್ಹತೆಯುಳ್ಳ ರಾಜ್ಯಪಾಲರಿರುವರೆಂದೇ ನಮ್ಮ ಪ್ರಾಂಜಲ ಮತ. ಕ್ಷಿಪ್ರದಲ್ಲಿಯೇ ಏಕೀಕೃತ ಕರ್ನಾಟಕವಾಗಲಿರುವ ಶುಭ ಸಮಯದಲ್ಲಿ ಅವರು ರಾಜ್ಯಪಾಲರಾದುದೊಂದು ಸಂತೋಷದ ಸಂಗತಿಯು ! ಏಕೆಂದರೆ, ಓರಿಸಾವು ಪ್ರತ್ಯೇಕ ರಾಜ್ಯವಾಗುವ ಸಮಯದಲ್ಲಿ ಅವರಾಡಿದ ಪಾತ್ರವು ಗಮನಾರ್ಹಲೇವಿರಬೇಕು. ಅವರು ತಮ್ಮೊಂದಿಗೆ ತಂದಿರುವ ಅನುಭವವನ್ನು ಕರ್ನಾಟಕ ಏಕೀಕರಣಕ್ಕೆ ಸಲ್ಲಿಸಿ ಶ್ರೇಯೋಭಾಗಿಗಳಾಗುವರೆಂದು ನೆರನಂಬಿದ್ದೇವೆ. ಮುಂಬಯಿ ಕರ್ನಾಟಕಕ್ಕೆ ಅವರಿಂದ ಜನಹಿತದ ಕಾರ್ಯಗಳು ಜರುಗುವವೆಂದು ನಮ್ಮ ಜನತೆ ಅವರ ಬಗೆಗೆ ಆಶೆ-ಆಕಾಂಕ್ಷೆಗಳನ್ನು ತಳೆದಿದೆ. ಅವುಗಳನ್ನೀಡೇರಿಸಲು ದೇವರು ಅವರಿಗೆ ಆಯುರಾರೋಗ್ಯಗಳನ್ನು ದಯಪಾಲಿಸಲಿ!

ಸಣ್ಣ ಮಕ್ಕಳಿಗೆ ವ್ಯಾಕರಣವನ್ನು ಕಲಿಸುವ ಬಗೆ

ಲೇಖಕರು : ಶ್ರೀ ಎಸ್. ಆರ್. ಶೆಟ್ಟಿ. ಬಿಜಾಪುರ ಟ್ರೈನಿಂಗ ಶಾಲೆ ಶ್ರೀ. ಶಾ. ಹುನಗುಂದ

"ರಾಮರಾಯರ ಮನೀ ಅಂಗಳದಾಗ ಆಡ್ತಿದ್ದ ಅವರ ಸಣ್ಣ ಹುಡುಗ ಒಮ್ಮೆಲೆ ಚಿಟ್ಟನ ಚೀರಿತು. ಅದೇನಂತ ರಾಮರಾಯರು, ಶಿವರಾಯ ಅಲ್ಲಿಗೆ ಓಡಿದರು. ನೋಡತಾರ! ಒಂದು ಚೇಳು ಹುಡುಗ್ನ ಕಡದು ಓಡತಿತ್ತು. ಅದು ಅಲ್ಲೇ ಒಟ್ಟಿದ್ದ ಕಲ್ಲಿನ ಹತ್ತರ ಇತ್ತು. ರಾಮರಾಯರು ಅದನ್ನ ಹೊಡ್ದು ಕೊಂದ್ರು. ಹುಡುಗ "ಅಪ್ಪಾ ಉರೀತದ" ಅಂತ ಅಳತಿತ್ತು. ರಾಮರಾಯ್ರು ಮನೀಯೊಳ್ಗ ಓಡಿ ಚೇಳು ಕಡತಕ್ಕ ಔಷಧ ತಂದ ಹಚ್ಚಿದ್ರು. ಹುಡುಗನ ಉರಿ ಒಂದಿಷ್ಟು ಶಾಂತಾಯ್ತು. ಇದನ್ನೆಲ್ಲಾ ನೋಡಿ ಶಿವರಾಯ 'ಎಪ್ಪಾ ಅದೆಂಥಾ ಪ್ರಾಣಿ' ಅಂದ"

ನಾವು ಒಂದು ಸುದ್ದಿಯನ್ನು ಹೇಳುತ್ತಿದ್ದರೆ ಸ್ವಲ್ಪ ಹೆಚ್ಚು ಕಡಿಮೆ ಮಾತುಗಳನ್ನು ಹೀಗೆ ಕೂಡಿಸಿರುತ್ತೇವೆ. ಆದರೆ ಇದೇ ಪುಸ್ತಕದಲ್ಲಿ ಬರೆದಿದ್ದರೆ ಹೀಗಿರುತ್ತಿತ್ತು :

"ರಾಮರಾಯರ ಮನೆಯ ಅಂಗಳದಲ್ಲಿ ಆಡುತ್ತಿದ್ದ ಅವರ ಸಣ್ಣ ಮಗು ಚಿಟ್ಟನೆ ಚೀರಿತು. ಅದೇನೆಂದು ರಾಮರಾಯರೂ ಶಿವರಾಯನೂ ಅಲ್ಲಿಗೆ ಓಡಿದರು. ಏನು ಕಂಡರು! ಮಗುವಿಗೆ ಒಂದು ಚೇಳು ಕಡಿದು ಓಡುತ್ತಿತ್ತು. ಅದು ಅಲ್ಲಿಯೇ ಒಟ್ಟಿದ್ದ ಕಲ್ಲುಗಳ ಒಳಯಲ್ಲಿ ಇತ್ತು. ರಾಮರಾಯರು ಅದನ್ನು ಹೊಡೆದು ಕೊಂದರು. ಮಗು "ಅಪ್ಪಾ ಉರಿಯುತ್ತದೆ" ಎಂದು ಅಳುತ್ತಿತ್ತು. ರಾಮರಾಯರು ಮನೆಯೊಳಗೆ ಓಡಿ, ಚೇಳು ಕಡಿತದ ಔಷಧವನ್ನು ತಂದು ಹಚ್ಚಿದರು. ಮಗುವಿನ ಉರಿ ತುಸು ಶಾಂತವಾಯಿತು. ಇದನ್ನೆಲ್ಲಾ ನೋಡಿ ಶಿವರಾಯನು "ಅಪ್ಪಾ! ಅದು ಎಂತಹ ಪ್ರಾಣಿ" ಎಂದನು.

ಆಡುವ ಮಾತಿಗೂ ಪುಸ್ತಕದ ಮಾತಿಗೂ ಹೀಗೆ ಹೆಚ್ಚು ಕಡಿಮೆ ಇಷ್ಟೇ ಇರುವದು. ಆಡುವಾಗ ಮಾತುಗಳನ್ನು ಒಂದರೊಳಗೊಂದು ಕೂಡಿಸಿ ಬೇಗನೆ ಉಚ್ಚರಿಸುತ್ತೇವೆ; ಬರೆಯುವಾಗ ಹೆಚ್ಚು ಬಿಡಿಬಿಡಿಯಾಗಿ ಬರೆಯುವೆವೆಂಬುದು. ಆಡುವ ಮಾತು ನಮ್ಮೆಲ್ಲರಿಗೆ ಇಷ್ಟರಲ್ಲಿಗೆ ತಿಳಿದಿರುತ್ತದೆ. ಪುಸ್ತಕದಲ್ಲಿ ಬರೆದ ಮಾತು, ಅದನ್ನು ಓದುವ ಕನ್ನಡಿಗರೆಲ್ಲರಿಗೂ—ಅವರು ಎಲ್ಲಿಯೇ ಇರಲಿ—ತಿಳಿಯಬೇಕು. ಬರೆದದ್ದನ್ನು ಓದುವವರೆಲ್ಲರೂ ಅರ್ಥ ಮಾಡಿಕೊಳ್ಳುವರು. ಆದರೆ ಇಲ್ಲಿ ನಾವು ಮಾತಾಡುವ ಮಾತು ನಾಡಿನ ಮೈಲುಗಳ ನೋಡಿರದ ಕನ್ನಡಿಗರಿಗೆ ತಟ್ಟನೆ ತಿಳಿಯುವದಿಲ್ಲ.— ಶಬ್ದ ಮಾತಿನಂತೆ ಇಲ್ಲ-ಸಲ್ಲ ಬೇರೆಯಾಗಿ ಬೆಳೆದಿರುವದು. ಇದು ವ್ಯವಹಾರಕ್ಕೆ ಒಂದಿಷ್ಟು ತೊಡಕು. ಮಾತಾಡುವವರೊಡನೆ ಅಕ್ಕರೆಯ ಭಾವನೆ ಬಂದಾಗ ಬೇರೆ ಬೇರೆ ಇದ್ದರೆ ಮಾತಿನ ರೀತಿಯೂ ಬೇರೆ ಇರಬಹುದು. ಅದಕ್ಕಾಗಿ ಸರ್ವಸಾಧಾರಣವಾದ ಒಂದು ಮಾತಿನ ರೀತಿಯನ್ನು ಕನ್ನಡಿಗರು ಓದಲೆಂದಿರುವ ಪುಸ್ತಕದಲ್ಲಿ ಬಳಸಬೇಕಾಗುವದು. ಹೀಗೆ ಅಗತ್ಯವಿದ್ದಂತೆ ಭಾಷೆಯ ವ್ಯಾಕರಣದ ರೀತಿಗಳಲ್ಲಿ ಪ್ರತಿಯೊಂದು ಪ್ರದೇಶದವರೂ ತಮ್ಮ ತಮ್ಮ ಕೆಲವು ಶಬ್ದ ಬಳಕೆಗಳನ್ನು ಕಾಣದೆ ಹೋಗಬಹುದು. ಹಾಗೆಯೇ ಇತರ ಪ್ರದೇಶಗಳಲ್ಲಿ ಬಳಸುತ್ತಿದ್ದ ತಮಗೆ ಗೊತ್ತಿರದ ಹಲವು ಪ್ರಯೋಗಗಳನ್ನು ಕಾಣಬಹುದು. ಪ್ರತಿಯೊಂದು ಪ್ರದೇಶದವರೂ ತಮ್ಮತನ್ನತನವನ್ನು ಬಿಡಬೇಕು ಇನ್ನೊಬ್ಬರದನ್ನು ತೆಗೆದುಕೊಳ್ಳಬೇಕು— ಸ್ವೀಕರಿಸಬೇಕು. ನೋಡಿದಿರಿ. ಉದಾರ ಹೃದಯದ ಸಾಮಾಜಿಕತೆಯು ಬೇರೆ ಭಾಷಾ ಪ್ರದೇಶಗಳು ತಮ್ಮ ದೇಶದ ಕೆಲವು ಸಾಂಪ್ರದಾಯಿಕ ಅಂಶಗಳನ್ನು ಬಿಡಬೇಕು. ಇತರ ದೇಶಗಳಲ್ಲಿದ್ದ ಒಳ್ಳೆಯ ಸಂಪ್ರದಾಯಗಳನ್ನು ಸ್ವೀಕರಿಸಬೇಕು. ಇದೇ ಮಾನವ ಜೀವನಧರ್ಮ. ವ್ಯಾಕರಣದ ಭಾಷೆಯೂ ಹೀಗೆ.

ವ್ಯಾಕರಣವನ್ನು ಏಕೆ ಕಲಿಯಬೇಕೆಂದು ಈಗ ನಿಮಗೆ ತಿಳಿಯಿತೇ? ಮುಖ್ಯವಾಗಿ ದೊಡ್ಡ ದೇಶಗಳಲ್ಲಿ ಮಾತಾಡಲಿಕ್ಕೆ ಬಳಸುವ ಭಾಷೆಯು ತಿಳಿಯಲಿಕ್ಕೆ

ಮತ್ತು ಪುಸ್ತಕಗಳನ್ನು ಬರೆಯುವವರು ಯಾವ ಭಾಷೆಯನ್ನು ಬಳಸಬೇಕೆಂದು ತಿಳಿಯಬೇಕು; ಏಕೆಂದರೆ ಆ ಭಾಷೆಯು ಭಿನ್ನ ಭಿನ್ನ ಪ್ರದೇಶದ ಜನರ ಕಿವಿಗೆ ಬಿದ್ದು ಅರ್ಥವಾಗಬೇಕಾಗುತ್ತದೆ—ಹಾಗೂ ವ್ಯಾಕರಣದಲ್ಲಿದೆ ಅರ್ಥವಾಗಬೇಕಾಗುವುದು — ಭಿನ್ನವೆ ಅರ್ಥವಾಗಬೇಕಾಗುವುದು—ತಮ್ಮ ಬಾಳೆ ಇದೆಂದು ಅತ್ಯವಶ್ಯ ವಹಿಸಬೇಕಾಗುತ್ತದೆ.

ಬರೆದ ಪುಸ್ತಕಗಳಲ್ಲಿ—ಬರೆಯುವ ಪುಸ್ತಕಗಳಲ್ಲಿ ಅನೇಕ ತರಗತಿಗಳವೆ. ಉದಾಹರಣೆಗೆ ಕನ್ನಡ ಸಾಹಿತ್ಯವೆಂದು ಹೆಸರಾಗಿರುವ ಗದ್ಯಪದ್ಯಾತ್ಮಕ ಕೃತಿಗಳು, ಪ್ರಾದೇಶಿಕ ಶಾಲೆಯ ಮಕ್ಕಳಿಗಾಗಿ ಬರೆಯುವ ಪುಸ್ತಕಗಳು, ತಿಂಗಳ ಪತ್ರಿಕೆಗಳಲ್ಲಿ ಬರುವ ಪ್ರಬಂಧಗಳು, ಪತ್ರಪತ್ರಗಳಲ್ಲಿನ ಪ್ರಕಟವಾದ ಸುದ್ದಿಗಳು, ಹೀಗೆ ಕಾಣುವ ವಿಷಯಗಳು ಲೇಖನಗಳಲ್ಲಿ ವ್ಯಾಕರಣದ ತಪ್ಪುಗಳನ್ನು ಬಹಳ ನೋಡಿದ್ದೇವೆ. ಹಾಗೇ ಗ್ರಾಂಥಿಕ ಭಾಷೆಯಲ್ಲಿ ಬರೆಯುವ ಕೆಲವು ಲೇಖಕರು ಪತ್ರಿಕೆಗಳಲ್ಲಿಯೂ ಅಪ್ರಸಿದ್ಧವಾದ ಶಬ್ದಗಳನ್ನು ಬಳಸುವ ಈ ಪದ್ಧತಿ ತಪ್ಪೆಂದು ಹೇಳಬೇಕಾಗುತ್ತದೆ—ಇದೇ ಒಂದು ಕಾರಣದಿಂದ ಇದು.

ವ್ಯಾಕರಣವು ಏಕೆ ಬೇಕೆಂಬುದನ್ನು ತಿಳಿದ ಮೇಲೆ ಅದನ್ನು ಹೇಗೆ ಕಲಿಸಬೇಕು? ಉದಾಹರಣೆಗೆ ಒಂದು ಪ್ರಾರಂಭಿಕ ವ್ಯಾಕರಣಗಳನ್ನು ನೋಡಿ ದಾಗ ಅವರು ಅಥವಾ ವ್ಯಾಕರಣದ ಶಬ್ದಗಳನ್ನು ನೋಡಿ ಅನೇಕ ಉದಾಹರಣೆಗಳನ್ನು ತಿಳಿಸಿರುತ್ತಾರೆ. ಶಬ್ದದ ಪ್ರಕಾರಗಳ ಬಗ್ಗೆ ತಿಳಿಸುತ್ತ "ವಸ್ತುವಿನ ಹೆಸರನ್ನು ತಿಳಿಸುವ ಶಬ್ದಗಳು ನಾಮಪದಗಳು" ಎಂದು ನಮ್ಮ ಗುರುಗಳು ಹೇಳಿದಾಗ ನಾವು ಉದಾಹರಣೆಗಳನ್ನು ಕೊಡಬೇಕು. ಹುಡುಗ, ಮನೆ, ಪುಸ್ತಕ, ಧಾರವಾಡ, ಕೃಷ್ಣ, ಗಂಗಾ, ಆನೆ" ಮುಂತಾದ ಶಬ್ದಗಳು ನಾಮಪದಗಳು ಎಂದು ಹೇಳಿದಾಗ "ನಾವು ತಿಳಿದೆವು" ಎಂದು ಹೇಳಬಹುದು. ಈ ಉದಾಹರಣೆಗಳನ್ನು ನೋಡಿದರೆ ಆ ವಸ್ತು "ವಸ್ತುವಿನ ಹೆಸರುಗಳು" ನಾಮಗಳು

ಎಂದು ಕಲಿಸಿದರೂ ಸರಿ. ತಿಳಿದ ಹಾಗಾಯಿತು. ಹೀಗೆಯೇ 'ವಸ್ತುವನ್ನು ವರ್ಣಿಸುವ ಶಬ್ದಕ್ಕೆ ವಿಶೇಷಣ' ಎಂಬ ಹೆಸರು. ಉದಾಹರಣೆ, ತುಂಬ, ಹಿರಿದು ಇತ್ಯಾದಿ "ಇದು, ಅದು ಮುಂತಾದ ಶಬ್ದಗಳನ್ನು ಸರ್ವನಾಮ ಶಬ್ದಗಳು" "ಕ್ರಿಯಾಪದಗಳು" "ಕ್ರಿಯಾಪದಕ್ಕೆ ವಿಶೇಷಣ ಹಾಗೆ ಇರುವುದಕ್ಕೆ ಕಾರಣವನ್ನು ತಿಳಿ" ಇತ್ಯಾದಿ ಪ್ರಶ್ನೆಗಳನ್ನು ಶಾಲೆಯ ಮಕ್ಕಳು ಚೆನ್ನಾಗಿ ತಿಳಿದುಕೊಳ್ಳಬೇಕು. ಮನಸ್ಸಿನ ಭಾವ ಪರೀಕ್ಷೆಯಲ್ಲಿ ಉತ್ತರ ಬರೆಯಬೇಕು. ಈ ಪ್ರಶ್ನೆಗಳ ಹಿಂದೆ ಬಹಳ ಅಭಿಪ್ರಾಯವಿದ್ದರೂ ಅವು ಹೇಗೆ ಉಪಯೋಗವಾಗುತ್ತವೆ ಎಂದು ಕೇಳಬಹುದು. ನಮ್ಮ ಅಕ್ಷರ ಬರಹ ಎಂಬುದು ವ್ಯಾಕರಣದ ಅರ್ಥ ಹೇಳುವುದಕ್ಕೆ ಹೇಗೆ ತಿಳಿಯಬೇಕು? "ಸ್ತ್ರೀ ಲಿಂಗ" ಇದು ಬರವಣಿಗೆಯಲ್ಲಿ ಹೇಗೆ ತಿಳಿದುಕೊಳ್ಳಬೇಕು? 'ತಿನ್ನುತ್ತಾನೆ' 'ಕೊಡುತ್ತಾನೆ' ಇದು ಕಾಲ ಎಂದು ಹೇಗೆ ಬಳಸಬೇಕು? ಕಾಲದ ಇದು ಬೇರೆ ಬೇರೆ ರೂಪಗಳು ಇವೆ ಎಂದು ಯಾವ ವಸ್ತುವನ್ನು ವರ್ಣಿಸುತ್ತವೆ?

ಹಾಗಾದರೆ ಇನ್ನಾವ ಪದ್ಧತಿಯಿಂದ—ಇದು ನಾಮ ಪದ, ಇದು ಕ್ರಿಯಾಪದ, ಇದು ವಿಶೇಷಣ—ಎಂದು ಮಕ್ಕಳಿಗೆ ಗುರುತಿಸಿಕೊಡಬೇಕು? ಈ ಪ್ರಶ್ನೆಯು ಬಹಳ ಮುಖ್ಯ. ಸೂಚನೆ— ಪ್ರಯೋಗದಿಂದ ತಿಳಿಸಿಕೊಡಬೇಕು.

ಒಬ್ಬರ ವಾಕ್ಯದಲ್ಲಿ ಯಾವ ರೂಪವನ್ನು ಧರಿಸಿ ಶಬ್ದವು ಬರುತ್ತದೆಂಬುದನ್ನು ನೋಡಬೇಕು. 'ರಾಮನು' ಎಂಬ ಶಬ್ದವನ್ನು ಹೇಗೆ 'ರಾಮನನ್ನು, ರಾಮನಿಂದ, ರಾಮನಿಗೆ, ರಾಮನದು, ರಾಮನಲ್ಲಿ, ರಾಮನೇ' ಹೀಗೆ ಅನೇಕ ರೀತಿಯಿಂದ ಬಳಸುತ್ತೇವೆ. ಇದರಿಂದ ನಾಮಪದ ಎಂಬ ಸಂಜ್ಞೆಯನ್ನು ಹೇಳದೆ ಅವು ಒಂದು ಪ್ರಕಾರದ ಉದಾಹರಣೆ ಎನ್ನಬಹುದು. ಹಾಗಾದರೆ 'ಕುದುರೆ' ಎಂಬ ಶಬ್ದದ 'ಕುದುರೆಯನ್ನು, ಕುದುರೆಯಿಂದ, ಕುದುರೆಗೆ'... ಹೀಗೆಲ್ಲ ಹೇಳಬಹುದಲ್ಲ ಎಂದರೆ, ಈ ರೂಪಗಳಲ್ಲಿ ಕೆಲವು ಅದು ಪ್ರಯೋಗವಾಗಿದೆ.

"ಅಜ್ಞಾನಿಯಾದವನು ಕಣ್ಣಿಲ್ಲದವನಿಗಿಂತಲೂ ಕುರುಡನು" "ಇವು ಅವಕ್ಕಿಂತ ಕಿರಿದು" "ಅವನು ನನಗಿಂತಲೂ ಸಣ್ಣವನು" ಹೀಗೆ -"ಕ್ಕಿಂತ" -"ಗಿಂತ" ಇವುಗಳ ಮುಂದೆ ಬರುವ ಶಬ್ದಗಳು ವಿಶೇಷಣವೆಂದು ಹೇಳಬಹುವಲ್ಲವೆ? ಅಥವಾ "ತುಂಟ ಹುಡುಗ" ಎಂಬ ಮಾತಿನಲ್ಲಿ 'ತುಂಟ' ಎಂಬುದರ ಬದಲಾಗಿ "ಹುಚ್ಚ ಹುಡುಗ", "ದಡ್ಡ ಹುಡುಗ", "ಜಾಣ ಹುಡುಗ" ಹೀಗೆ ಯಾವ ಯಾವ ಶಬ್ದಗಳನ್ನು ಜೋಡಿಸಬಹುದೋ ಅವು ವಿಶೇಷಣವೆಂದು ಹೇಳಬಹುವಲ್ಲವೇ? ಇದರಂತೆ, 'ಮಾಡುತ್ತಾನೆ', 'ಮಾಡುತ್ತಾಳೆ' 'ಮಾಡುತ್ತದೆ' ಹೀಗೆ ಎಲ್ಲಿ ಬದಲು ಕಾಣಬಹುದೋ ಅಲ್ಲಿ ಅದು ಕ್ರಿಯಾಪದವು.

ಸರ್ವನಾಮಗಳಂತೂ ಪರಿಮಿತ ಸಂಖ್ಯೆಯಲ್ಲಿರುವದರಿಂದ "ಈ ಯಾದಿಯಲ್ಲಿ (ನಾನು, ನೀನು, ಅವನು, ಅವಳು....) ಬರುವ ಶಬ್ದಗಳೆಲ್ಲ ಸರ್ವನಾಮಗಳು" ಎಂದು ಹೇಳಿಕೊಡಬಹುದು. ನಾಮಪದದಂತೆಯಾಗಲಿ ಕ್ರಿಯಾಪದದಂತೆಯಾಗಲಿ ಬದಲಾವಣೆ ಹೊಂದದ ಶಬ್ದವು 'ಅವ್ಯಯ' ಇತ್ಯಾದಿಯಾಗಿ ಮಕ್ಕಳಿಗೆ ಕಲಿಸಿ ನೋಡಿರಿ.

ವರ್ಗದ ಶಿಸ್ತು ಕಾಯುವದೆಂತು ?

ಲೇಖಕರು:— ಶ್ರೀ. ಎಸ್. ಎಂ. ಹಳ್ಳಿಕೇರಿ, ಬಿ. ಎ., ಡಿ. ಬಿ. ಇ.,
ಅಧ್ಯಾಪಕ, ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
(ಶ್ರೀ ಎಸ್. ಎನ್. ಸಾಂಗರ ಇವರ ಇಂಗ್ಲಿಷ ಲೇಖನದ ಆಧಾರದಿಂದ)

ವರ್ಗದಲ್ಲಿ ಯೋಗ್ಯ ಶಿಸ್ತನ್ನು ಕಾಯುವದರ ಮಹತ್ವವನ್ನು ಒತ್ತಿಹೇಳಬೇಕಾಗಿಲ್ಲ. ನಿಜವಾಗಿ ನೋಡಿದಲ್ಲಿ, ವರ್ಗದಲ್ಲಿ ಆರೋಗ್ಯಕರ ಹಾಗು ಯಶಸ್ವಿ ಶಿಸ್ತನ್ನು ಕಾಯುವ ಶಿಕ್ಷಕನ ಯೋಗ್ಯತೆಯ ಮೇಲೆಯೇ ಕಲಿಸುವಿಕೆಯ ಹೆಚ್ಚಿನ ಯಶಸ್ಸು ಅವಲಂಬಿಸಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಹದಿನೆಂಟು ಹತ್ತೊಂಬತ್ತು ವಯೋಮಾನದ ವಿದ್ಯಾರ್ಥಿಗಳಿಗೆ ಕಲಿಸುವಾಗ್ಗೆ ಈ ಮಾತು ಹೆಚ್ಚು ಸ್ಪಷ್ಟವಾಗಿ ಹಾಗೂ ಸತ್ಯವಾಗಿ ಕಾಣಬಹುದು. ಕಾಲೇಜ ಹಾಗು ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ತಮಗೆ ಪಾಠ ಹೇಳುವ ಪ್ರಾಧ್ಯಾಪಕರ ಪಾಂಡಿತ್ಯವನ್ನು ಒರೆಗೆ ಹಚ್ಚಿ ಶ್ಲಾಘಿಸುವ ಮಾನಸಿಕ ಪರಿಪಕ್ವತೆಯನ್ನು ಸಾಮಾನ್ಯವಾಗಿ ಪಡೆದವರಾಗಿದ್ದಾರೆಂದು ಹೇಳಬಹುದು. ತತ್ಪರಿಣಾಮವಾಗಿ, ಈ ವಿದ್ಯಾರ್ಥಿಗಳು ತಮ್ಮಷ್ಟಕ್ಕೆ ತಾವೇ ಶಿಸ್ತು-ವ್ಯವಸ್ಥೆಗಳನ್ನು ಕಾಯುತ್ತಿರುವರಾದ್ದರಿಂದ ಪ್ರಾಧ್ಯಾಪಕರು ಈ ದಿಶೆಯಲ್ಲಿ ತಮ್ಮ ಶಕ್ತಿಯನ್ನು ವಿನಿಯೋಗಿಸುವ ಪ್ರಸಂಗಗಳು ಕಡಿಮೆಯೆಂದೇ ಹೇಳಬಹುದು.

ಶಿಕ್ಷಕನ ಪಾಂಡಿತ್ಯ ಹಾಗೂ ಯೋಗ್ಯತೆಗಳು ಮಕ್ಕಳ ಮೇಲೆ ಪರಿಣಾಮ ಮಾಡದಿರವು. ಅಲ್ಲದೆ ಶಿಕ್ಷಕನಿಗೆ ವಿಷಯಗಳಲ್ಲಿ ಯೋಗ್ಯ ಪರಿಣತಿ ಹಾಗು ಅರ್ಹತೆಗಳು ಇದ್ದುದಾದರೆ, ಅವು ಆತನ ವೈಯಕ್ತಿಕ

ಕೀರ್ತಿಗೆ ಸಾಧನವಾಗಿಯೂ, ಮಕ್ಕಳ ಪ್ರೀತಿ-ಆದರಗಳನ್ನು ಗಳಿಸುವ ಮಹತ್ತರವಾದ ಅಸ್ತ್ರಗಳಾಗಿಯೂ ಪರಿಣಮಿಸಬಲ್ಲವು. ಶಿಕ್ಷಕನು ಒಳ್ಳೇ ಶ್ರೇಷ್ಠ ಶಿಕ್ಷಕನಾಗಬೇಕಾದರೆ ಅವನು ಸಹಸ್ರಾರು ಪದವಿಗಳನ್ನು ಪಡೆದರಷ್ಟೇ ಸಾಲದು. ತನ್ನ ವಿದ್ಯಾರ್ಥಿಗಳ ಬೇಕು-ಬೇಡಿಕೆಗಳನ್ನು ಅರಿತು, ಅವರ ಕಷ್ಟನಷ್ಟಗಳಲ್ಲಿ ಸಹಾನುಭೂತಿ–ಸಹಕಾರಗಳನ್ನು ತೋರಿ, ಅವರೊಡನೆ ಸಮರಸನಾದಾಗಲೇ ಶಿಕ್ಷಕನ ಕಲಿಸುವಿಕೆಯ ಪರಿಣಾಮವು ಮಕ್ಕಳ ಮೇಲೆ ಆಗಬಹುದು. ಈ ರೀತಿಯಾಗಿ, ವಿಷಯದ ಪ್ರಭುತ್ವ ಹಾಗು ಮಕ್ಕಳೊಡನೆ ಆತ್ಮೀಯ ಸಂಬಂಧ ಇವುಗಳಿಂದಲೇ ಶಿಕ್ಷಕನು ಮಕ್ಕಳ ಜಟಿಲ ಹಾಗು ಸೂಕ್ಷ್ಮ ಸಮಸ್ಯೆಗಳನ್ನು ಬಿಡಿಸಲು ಸಮರ್ಥನಾಗುವನಲ್ಲದೆ, ಅವರಲ್ಲಿ ನಿಜವಾದ ಶಿಸ್ತಿನ ಇಂಗಿತವನ್ನು ಒಡಮೂಡಿಸಬಲ್ಲನು.

ನಿಜವಾದ ಶಿಸ್ತು ಎಂದರೇನು ? ಮಕ್ಕಳ ಮನೋವಿಜ್ಞಾನದಲ್ಲಿ ತ್ವರಿತ ಪ್ರಗತಿ ಹಾಗು ಸಂಶೋಧನಗಳು ನಡೆಯುತ್ತಿದ್ದರಿಂದ ಬೆತ್ತದ ಏಟು ಹಾಗು ಬಲವಂತದ ಶಿಸ್ತು ಮಕ್ಕಳ ಪ್ರಗತಿಯನ್ನು ಸಾಧಿಸಲಾರವೆಂದು ಮನವರಿಕೆಯಾಗಿದೆ. ಈ ರೀತಿಯ ರೂಢಿಗಳಿಂದ ನಿಜವಾಗಿಯೂ ಮಕ್ಕಳ ಪ್ರಗತಿ, ಅಭಿವೃದ್ಧಿಗಳು ಕುಂಠಿತವಾಗುವವು. ಈಗಿನ ಮಗು ಕಲಿಯುವ ತಾಟಸ್ಥ್ಯ ಮೂರ್ತಿಯಲ್ಲ. ಈಗಲೂ ಮಗುವಿನ ಶಿಕ್ಷಣದ ತಳಹದಿಯು ಓದು, ಬರೆಹ ಹಾಗು ಗಣಿತಗಳೇ ಇದ್ದಾಗ್ಯೂ ಅದು ಇವುಗಳನ್ನು ಮೂಕನಾಗಿ ಸ್ವೀಕರಿಸುವ ಕಾಲ ಗತಿಸಿಹೋಯಿತು. ಶಿಕ್ಷಕನಿಗಿದ್ದ ಪ್ರಾಮುಖ್ಯತೆಯು ಈಗ ಮಗುವಿಗೆ ಪ್ರಾಪ್ತವಾಗಿದೆ. ಈ ಸ್ಥಿತ್ಯಂತರದಿಂದ ವರ್ಗದ ಶಿಸ್ತಿನ ಅರ್ಥವೂ ಸಹ ಹೊಸ ದೃಷ್ಟಿ ಕೋನವುಳ್ಳದ್ದಾಗಿ ಶಿಕ್ಷಕನ ಹೊಣೆಯನ್ನು ಹೆಚ್ಚಿಸಿದೆ. ಈಗಿನ ಶಿಕ್ಷಕನು ತನ್ನ ಪೂರ್ವಜರಂತೆ ಶಿಸ್ತಿನ ಬಿಗಿಯಾದ ಕಟ್ಟುನಿಟ್ಟುಗಳನ್ನು ಅವಲಂಬಿಸಿ ಕೂತರೆ ನಡೆಯಲಾರದು. ಶಿಸ್ತುಭಂಗಮಾಡಿದ ಪ್ರತಿಯೊಬ್ಬ ವ್ಯಕ್ತಿಯನ್ನು ಪರಿಶೋಧಿಸಿ, ಆತನ ವರ್ತನೆಯ ಲೋಪದೋಷಗಳ ಕಾರಣಗಳನ್ನು ಕಂಡು ಹಿಡಿದು ಅವುಗಳ ನಿವಾರಣೆಯ ಕ್ರಮವನ್ನು ಕೈಕೊಳ್ಳುವದು ಇಂದಿನ ಶಿಕ್ಷಕನ ಹೊಣೆಯಾಗಿದೆ.

ಐವತ್ತು ವರ್ಷಗಳ ಹಿಂದಿನ ಶಿಕ್ಷಕನು ಇಂದಿನ ಶಾಲೆಯನ್ನು ನೋಡಿದಲ್ಲಿ, ಆತನಿಗೆ ವರ್ಗಗಳೆಲ್ಲ ಗದ್ದಲದಲ್ಲಿರುವದೂ ಹಾಗು ಕೃತಿಮೂಲ ವಿಷಯಗಳ ಪರಿಸ್ಥಿತಿಯು ಅಸಹನೀಯವಾಗಿಯೂ ಕಾಣಬಹುದು. ಒಂದೇ ವರ್ಗವು ನಾಲ್ಕೈದು ವಿದ್ಯಾರ್ಥಿಗಳ ಬೇರೆ ಬೇರೆ ಗುಂಪುಗಳಲ್ಲಿ ನಡೆಯುತ್ತಿರುವದು ಒಂದು ಆಶ್ಚರ್ಯದ ಸಂಗತಿಯೆಂದು ಆತನಿಗೆ ತೋರಬಹುದು. ವರ್ಗದ ವಿದ್ಯಾರ್ಥಿಗಳು ತಮ್ಮ ಇಚ್ಛೆಯಂತೆ ವರ್ಗಕ್ಕೆ ಬರುವದು ಇಲ್ಲವೆ ಹೊರಗೆ ಹೋಗುವದು, ಪ್ರತಿಯೊಂದು ಅವಧಿಯ ಸೂಚನೆಯ ಗಂಟೆಗಳನ್ನು ಬಾರಿಸದಿರುವದು, ಪರೀಕ್ಷೆಗಳಲ್ಲಿ ಮೇಲ್ವಿಚಾರಣೆ ಇಲ್ಲದಿರುವದು ಇವೆಲ್ಲವುಗಳು ಹಳೆಯ ಶಿಕ್ಷಕನ ಊಹೆಗೂ ನಿಲುಕದ ಸಂಗತಿಗಳೇ ಸರಿ. ಇಂತಹ ಲಕ್ಷಣಗಳು ಅನೇಕ ದೇಶಗಳಲ್ಲಿಯ ಪ್ರಾಗತಿಕ ಶಾಲೆಗಳಲ್ಲಿ ರೂಢಿಗತವಾಗಿವೆ.

ವರ್ಗದ ವ್ಯವಸ್ಥೆ ಹಾಗು ಕಲಿಸುವಿಕೆಯು ಪ್ರಭಾವಯುತವಾಗಿ ನಡೆಯಬೇಕಾದರೆ ವಿಧಿ ನಿಯಮಗಳಂತೆ ನಡೆಯುವದು ಅವಶ್ಯವಾದುದಾದರೂ, ಶಿಸ್ತಿನ ಹೆಸರಿನಲ್ಲಿ ಮಗುವಿನ ವ್ಯಕ್ತಿತ್ವವನ್ನು ಹತ್ತಿಕ್ಕದಂತೆ ಲಕ್ಷ್ಯ ಕೊಡಬೇಕು. ಹೀಗೆ ಲಕ್ಷ್ಯಕೊಡಲು ತಪ್ಪಿದಲ್ಲಿ ಮಗುವಿನ ಮನಸ್ಸಿನಲ್ಲಿ ಅನೇಕ ತಪ್ಪುಕಲ್ಪನೆಗಳು ಹುಟ್ಟಿ ಅವನು ಶಿಸ್ತನ್ನು ಕಲಿಯುವ ಬದಲು ಅಪರಾಧ, ಅವ್ಯವಸ್ಥೆಗಳಿಗೆ ತುತ್ತಾಗುವನು.

ಕೆಲವು ಮಕ್ಕಳು ತಮ್ಮ ಮೇಲುಬುದ್ಧಿಯಿಂದ ಜಾಣತನದ ಉತ್ತರಗಳನ್ನೂ ಹಾಗು ಕೆಲಮಟ್ಟಿಗೆ ವಿರೋಧವೃತ್ತಿಯನ್ನೂ ಶಿಕ್ಷಕನೆದುರು ಪ್ರದರ್ಶಿಸುವರು. ಜಾಣ ಶಿಕ್ಷಕನು ಈ ತರಹದ ವರ್ತನೆಯು ತನಗೆ ಅಗೌರವವೆಂದಾಗಲೀ ಇಲ್ಲವೆ ಮಕ್ಕಳ ಉದ್ಧಟತನವೆಂದಾಗಲೀ ತಿಳಿಯಲಾರನು. ಆತನು ಇವುಗಳಿಗೆ ಹುಬ್ಬುಗಂಟಿಕ್ಕದೆ, ಮಕ್ಕಳ ಪ್ರಶ್ನೆಗಳನ್ನು ಹಾಸ್ಯಪ್ರದವಾಗಿ ಹಾಗು ಅವಶ್ಯವಿದ್ದಲ್ಲಿ ಉತ್ತೇಜನಪೂರ್ವಕವಾಗಿ ಬಿಡಿಸಿದಲ್ಲಿ ಅವನ ಕಾರ್ಯವು ಒಳ್ಳೇ ಸುಲಲಿತವಾಗಿ

ನಡೆಯುವದು. ಏಕೆಂದರೆ, ಶಿಕ್ಷಕನೂ ಸಹ ಮನುಷ್ಯನಿದ್ದು ಮಕ್ಕಳಂತೆ ತಪ್ಪು ಮಾಡುವದಾಗಲೀ ಮರೆಯುವದಾಗಲೀ ಆತನಿಂದಲೂ ಆಗುತ್ತಿವೆಯಲ್ಲವೇ ? ಮಕ್ಕಳಿಗೆ ಜೀವನವು ಹೊಸದು; ಶಿಕ್ಷಕನು ವಯಸ್ಸಿನಿಂದ ಹಿರಿಯನಿದ್ದು ಆತನಿಗೆ ಜೀವನದ ಅನುಭವ ಹಾಗು ನಿರ್ಣಾಯಕ ಬುದ್ಧಿ ಪ್ರಾಪ್ತವಾಗಿದೆ. ಈ ಕಾರಣದಿಂದಲ್ಲದೆ ಅವರಿಬ್ಬರಲ್ಲಿ ಅಂತರವೇನೂ ಇಲ್ಲ. ದೊಡ್ಡವರು ತಮ್ಮ ದೃಷ್ಟಿಕೋನದಿಂದಲೇ ನೋಡುತ್ತಾರಲ್ಲದೆ "ಮಕ್ಕಳು" ದೊಡ್ಡವರಲ್ಲವೆಂಬುದನ್ನೇ ಮರೆತು ಬಿಡುವರು. ಶಿಕ್ಷಕನು ಇಂತಹ ದೃಷ್ಟಿಕೋನವನ್ನು ಎಂದೂ ಇಟ್ಟುಕೊಳ್ಳಬಾರದು. ಮಕ್ಕಳ ದೃಷ್ಟಿಕೋನ, ಅವರ ಅವಶ್ಯಕತೆಗಳು, ಅವರ ಸಾಧನಮಾರ್ಗ ಇವೆಲ್ಲವುಗಳು ತನ್ನವುಗಳಿಂದ ತೀರ ಭಿನ್ನವಾಗಿರುವವೆಂಬುವದನ್ನು ಶಿಕ್ಷಕನು ತನ್ನ ದೃಷ್ಟಿಯಲ್ಲಿ ಯಾವಾಗಲೂ ಇಟ್ಟುಕೊಳ್ಳಬೇಕು.

ಯೋಗ್ಯ ಶಿಸ್ತು ಎಂದರೆ, ಮಕ್ಕಳ ಪರಿಶ್ರಮವು ಸಾರ್ಥಕವಾಗಿ, ತಮ್ಮ ಪ್ರಗತಿ ಸಾಧನೆಗಳ ಬಗ್ಗೆ ಅವರಿಗೆ ಆನಂದವಾಗಿ ಕಾರ್ಯನಿರತರಾಗಿರುವದೇ ಆಗಿದೆ. ಕೇವಲ ಶಾಂತಿ ಹಾಗು ಅಬಾಧಿತ ವಿಧೇಯತೆಗಳು ಶಿಸ್ತಿನ ಲಕ್ಷಣಗಳೆಂದು ಹೇಳಲಾಗದು. ವರ್ಗದಲ್ಲಿ ಮಕ್ಕಳು ಮೌನಿಗಳೂ, ವಿನಮ್ರರೂ ಇದ್ದರೆ ಅವರಿಗೆ ಯೋಗ್ಯ ಶಿಕ್ಷಣವು ಹಾಗು ಶಿಸ್ತಿನ ಮಹತ್ವವು ತಿಳಿದಿಲ್ಲವೆಂದೇ ಅರ್ಥವಾಗುವದು. ಎಲ್ಲ ಪ್ರಸಂಗಗಳಲ್ಲಿ ಮಕ್ಕಳು ಸ್ವಾಭಿಮಾನಿ ಹಾಗು ಚುರುಕಾಗಿರುವದೇ ಅವರಲ್ಲಿಯ ಶಿಸ್ತಿನ ಪ್ರತೀಕವು. ಶಿಸ್ತು ಕೇವಲ "ಸಾಧನ" ವಷ್ಟೇ ಅಲ್ಲದೆ "ಸಾಧ್ಯ"ವೂ ಆಗಿದೆಂಬುದನ್ನು ಶಿಕ್ಷಕರು ಲಕ್ಷಿಸಬೇಕು. ಉಳಿದ ವಿಷಯ ಹಾಗು ಕಲೆಗಳನ್ನು ಯಶಸ್ವಿಯಾಗಿ ಕಲಿಯಲು ಯೋಗ್ಯ ಅವಕಾಶವನ್ನು ತಂದುಕೊಡಲು "ಶಿಸ್ತು" ಒಂದು ಕೃತಕ ಅಸ್ತ್ರವೆಂದಷ್ಟೇ ತಿಳಿಯದೆ, ಅಭ್ಯಾಸ ಪತ್ರಿಕೆಯಲ್ಲಿಯ ಉಳಿದ ವಿಷಯಗಳಂತೆಯೇ ಅದೊಂದು ವಿಷಯವೆಂದೂ, ಅದರ ಸಲುವಾಗಿಯೇ ಅದನ್ನು ಕಲಿಯುವದವಶ್ಯವೆಂದೂ ತಿಳಿಯಬೇಕು. ಈ ರೀತಿಯಿಂದ ಶಿಸ್ತಿನ ವ್ಯಾಪ್ತಿಯನ್ನು ಪರಿಶೀಲಿಸಿದಲ್ಲಿ, ಉಳಿದ ವಿಷಯಗಳಿಗೆ ತಗಲುವ ವೇಳೆ, ಶ್ರಮ ಹಾಗು ಲಕ್ಷ್ಯವು ಯೋಗ್ಯ ಶಿಸ್ತಿನ ತರಬೇತಿಗೆ ಅಷ್ಟೇ ಆವಶ್ಯಕವು.

ವರ್ಗದಲ್ಲಿಯ ಯೋಗ್ಯ ಶಿಸ್ತಿನ ವ್ಯಾಖ್ಯೆಯನ್ನು ಸ್ಪಷ್ಟೀಕರಿಸಲು ಕೆಳಗಿನ ದೃಷ್ಟಾಂತಗಳು ಸಹಾಯಕವಾಗ ಬಲ್ಲವು.

(೧) ಒಬ್ಬ ಚುರುಕು ಬುದ್ಧಿಯ ಹುಡುಗನು ವರ್ಗದಲ್ಲಿ ಕೊಟ್ಟ ನಿಬಂಧ ಬರೆಹವನ್ನು ವೇಳೆಗೆ ಮೊದಲೇ ಮುಗಿಸಿ ತನ್ನ ಉಳಿದ ವೇಳೆಯನ್ನು ಇತಿಹಾಸದ ಅಭ್ಯಾಸಕ್ಕಾಗಿ ವಿನಿಯೋಗಿಸಿದ್ದಾನೆಂದು ತಿಳಿಯುವಾ. ಅವಧಿಯಲ್ಲಿ ಹೇಳಲಾಗದ ಅಭ್ಯಾಸಕ್ಕಾಗಿ ಹುಡುಗನು ವ್ಯರ್ಥವಾಗಿ ಕಾಲಹರಣ ಮಾಡಿದನೆಂದೂ ಹಾಗು ಶಿಸ್ತು ಭಂಗಮಾಡಿದನೆಂದೂ ಶಿಕ್ಷಕನು ಆತನನ್ನು ಶಿಕ್ಷಿಸಿದಲ್ಲಿ, ಶಿಕ್ಷಕನ ವರ್ತನೆಯು ಸರಿಯಲ್ಲವೆಂದು ಹೇಳಬೇಕಾದೀತು. ಶಿಕ್ಷಕನ ಅಪ್ಪಣೆ ತೆಗೆದುಕೊಳ್ಳದೆ ವಿದ್ಯಾರ್ಥಿಯು ಬೇರೊಂದು ಕಾರ್ಯಮಾಡುವದು ವಿಹಿತವಲ್ಲವಾದರೂ ಇಂತಹ ಅಪವಾದ ಪ್ರಸಂಗಗಳಲ್ಲಿ ಹುಡುಗರು ತಮ್ಮ ವೇಳೆಯ ಸದ್ವಿನಿಯೋಗ ಮಾಡುವಂತೆ ನೋಡುವ ಹೊಣೆಗಾರಿಕೆಯು ತನ್ನದೇ ಎಂಬುದನ್ನು ಶಿಕ್ಷಕನು ತಿಳಿದಿರಬೇಕು. ಶಿಸ್ತಿನ ಹೆಸರಿನಲ್ಲಿ ಆ ಹುಡುಗನನ್ನು ನಿರ್ಬಂಧಿಸಿದಾದಲ್ಲಿ, ಆತನು ಶಿಕ್ಷೆಯ ಬೆದರಿಕೆಯಿಂದ ಮನಸ್ಸಿಲ್ಲದೆ ಪುಸ್ತಕ ನೋಡುತ್ತ, ಇಲ್ಲವೆ ಮಾಳಿಗೆಯ ಕಡೆಗೆ ನೋಡುತ್ತ ಕಾಲ ಕಳೆಯುವನು.

(೨) ಯಾವುದೊಂದು ಇಯತ್ತೆಯಲ್ಲಿ ಅ, ಬ ವಿಭಾಗಗಳಿರುತ್ತವೆಂದು ತಿಳಿಯುವಾ. ಬ ವರ್ಗವು ಒಳ್ಳೇ ನಡತೆಯುಳ್ಳದ್ದೂ, ಶಾಂತವೂ ಹಾಗು ಅ ವರ್ಗವು ಸ್ವಲ್ಪ ಗೊಂದಲ ಹಾಕುವದೂ ಆಗಿವೆ. ಬ ವರ್ಗದಲ್ಲಿ ಗಣಿತದ ಪಾಠ ನಡೆದಾಗ್ಗೆ ಕೆಲವು ಮಂದಗತಿಯ ಹುಡುಗರು ಸರತಿಯನ್ನು ಕಾಯ್ದು ಶಿಕ್ಷಕರಿಂದ ತಮ್ಮ ಸಂಶಯಗಳನ್ನು ನಿವಾರಿಸಿಕೊಳ್ಳುವಂತೆ ಚುರುಕು ಬುದ್ಧಿಯ ಹುಡುಗರು ತಮ್ಮ ಒಡನಾಡಿಗಳ ಸಲುವಾಗಿ ತಮ್ಮ ಕಾರ್ಯವನ್ನು ಸ್ವಲ್ಪ ಕಾಲ ನಿಲ್ಲಿಸುತ್ತಾರೆ. ಈ ವರ್ಗದಲ್ಲಿ ಹುಡುಗರು ಶಿಸ್ತಿನ ಸಂಪ್ರದಾಯಕ್ಕೆ ತಲೆಬಾಗಿ ತಮ್ಮೊಳಗೆ ಒಬ್ಬರಿಗೊಬ್ಬರು ಗಣಿತದ ಕಠಿಣ ಸಂಗತಿಗಳನ್ನು ಚರ್ಚಿಸುವದಿಲ್ಲ.

ಆದರೆ ಶಿಕ್ಷಕನು ಉಳಿದ ಹುಡುಗರಿಗೆ ವಿಷಯ ಹೇಳುವದರಲ್ಲಿ ತೊಡಗಿದಾಗ್ಗೆ ಆ ವರ್ಗದ ಹುಡುಗನೊಬ್ಬನು ತನಗೆ ತಿಳಿಯದ ಗಣಿತದ ವಿಷಯವನ್ನು ತನ್ನ ಜಾಣ ಗೆಳೆಯನೊಬ್ಬನಿಂದ ಕೇಳಿ ತನ್ನ ಸಂದೇಹವನ್ನು ನಿವಾರಿಸಿಕೊಳ್ಳುವನು. ಈ ವರ್ಗದಲ್ಲಿ ಯಾರೊಬ್ಬರೂ ಶರತಿಯನ್ನು ಕಾಯಬೇಕಿಲ್ಲ. ಈ ವರ್ಗದಲ್ಲಿ ಬುದ್ಧಿಯನುಟ್ಟೆದಂತೆ ೩-೪ ಗುಂಪುಗಳು ಏಕಕಾಲಕ್ಕೆ ಕಾರ್ಯ ಮಾಡುತ್ತಿದ್ದು ಅವು ಒಂದಕ್ಕೊಂದು ಅಡ್ಡಬರುವದಿಲ್ಲ.

ಆಕಸ್ಮಿಕವಾಗಿ ಭೆಟ್ಟಿಕೊಡುವ ನಿರೀಕ್ಷಕನಿಗೆ 'ಬ' ವರ್ಗವು ಆದರ್ಶವೂ ಹಾಗು ಶಿಸ್ತು-ಸಂಘಟನೆಯುಳ್ಳದ್ದೆಂದೂ ಕಾಣಬಹುದು. ಆದರೆ ನಿಜವಾಗಿಯೂ ತರಬೇತಿ ಹಾಗು ಶಿಸ್ತಿನ ದೃಷ್ಟಿಯಿಂದ ಬ ವರ್ಗಕ್ಕಿಂತ ಅ ವರ್ಗವೇ ಶ್ರೇಷ್ಠವಾದದ್ದಾಗಿದೆ. ಬ ವರ್ಗದ ವಿದ್ಯಾರ್ಥಿಗಳಿಗಿಂತ ಅ ವರ್ಗದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಸುಖಿಗಳೂ, ಒಳ್ಳೇ ಶಿಕ್ಷಣ ಹೊಂದಿದವರೂ ಹಾಗು ಶಿಸ್ತು ಪರಿಪಾಲನೆ ಮಾಡುವವರೂ ಆಗುವರು.

ಮೇಲಿನ ಸಂಗತಿಗಳಿಂದ ವರ್ಗದಲ್ಲಿ ಶಿಸ್ತು ಏಕೆ ಭಂಗವಾಗುತ್ತದೆ ಎಂಬುದನ್ನು ತಿಳಿಯುವದು ಅವಶ್ಯವೆನಿಸುವದು. ಮುಖ್ಯವಾಗಿ ನಾಲ್ಕು ಸಂಗತಿಗಳು ಶಿಸ್ತುಭಂಗದ ಕಾರಣಗಳಾಗುವವೆಂದು ಹೇಳಬಹುದು. ಮೊದಲನೆಯದಾಗಿ, ಶಾಲೆಯಲ್ಲಿ ಸಾಮಾನ್ಯವಾಗಿ ಶಿಸ್ತಿನ ಬಿಗುವು ಇಲ್ಲದಿರುವಿಕೆಯು ವರ್ಗದ ಶಿಸ್ತಿನ ಮೇಲೆಯೂ ಪರಿಣಮಿಸುವದು. ಎರಡನೆಯದಾಗಿ, ಶಿಕ್ಷಕನಲ್ಲಿ ಯೋಗ್ಯತೆ, ಸಾಮರ್ಥ್ಯಗಳು ಇರದಿದ್ದರೆ ಅವನು ಮಕ್ಕಳ ಮೇಲೆ ಯಾವ ಪ್ರಭಾವವನ್ನೂ ಬೀರಲಾರನು. ಮೂರನೆಯದಾಗಿ, ಕೆಲವು ಹುಡುಗರು ಕೆಲವೊಂದು ಕಾರಣಗಳಿಂದ ನಿಜವಾದ ತಿಳುವಳಿಕೆ ಇಲ್ಲದೆ ವರ್ಗದ ಶಿಸ್ತನ್ನು ಕಾಯುವದಿಲ್ಲ. ಕೊನೆಯದಾಗಿ, ಮಕ್ಕಳು ತಮ್ಮ ಮನೆಯಲ್ಲಿ ಆರೋಗ್ಯದಾಯಕ ವಾತಾವರಣದಲ್ಲಿ ಬೆಳೆಯದಿದ್ದರೆ, ಅದರ ಪರಿಣಾಮವು ವರ್ಗದಲ್ಲಿ ಪ್ರಕಟವಾಗುವದು.

(೧) ಸಂಸ್ಥೆಯಲ್ಲಿಯ ಸಾಮಾನ್ಯ ವಾತಾವರಣದಿಂದ ಬಹ್ವಂಶದಿಂದ ವರ್ಗಗಳ ಶಿಸ್ತು ರೂಪುಗೊಳ್ಳುವದು. ಶಾಲೆಯ ಗೌರವ ಹಾಗು ಪರಂಪರೆಗಳಿಂದಲೇ ಮುಖ್ಯವಾಗಿ ಅದರ ಕಾರ್ಯ-ಪ್ರಗತಿಗಳನ್ನು ಅಳೆಯಬಹುದು. ಶಾಲೆಯ ಸಾಮಾನ್ಯ ಆಡಳಿತೆ, ಕಾರ್ಯವಿಧಾನವನ್ನು ನಡೆಸಿಕೊಂಡು ಹೋಗುವ ಅದರ ಮುಖ್ಯಾಧಿಕಾರಿಯ ಪಾತ್ರ ಮಹತ್ವದ್ದಾಗಿದೆ. ಅಧ್ಯಾಪಕರ ಸಾಮೂಹಿಕ ಪ್ರಯತ್ನದಿಂದಲೇ ಶಿಸ್ತು ಕಾಯಲಾದರೂ, ಅವರು ಮುಖ್ಯಾಧ್ಯಾಪಕನ ಪ್ರೇಮ-ವಿಶ್ವಾಸಗಳಿಗೆ ಪಾತ್ರರಾಗಿರದಿದ್ದರೆ ಇಂಥ ಪ್ರಯತ್ನದಿಂದ ಯಾವ ಲಾಭವೂ ದೊರೆಯದು. ಅಧ್ಯಾಪಕ ವರ್ಗವು ಮುಖ್ಯಾಧ್ಯಾಪಕನಿಗೆ ನಿಷ್ಕಲಂಕ ಹಾಗೂ ಅಖಂಡವಾದ ಸಹಕಾರ ಹಾಗು ನಿಷ್ಠೆಯನ್ನು ತೋರುವದು ಅತ್ಯಾವಶ್ಯವಾಗಿದೆ. ಪ್ರತ್ಯೇಕ ಶಿಕ್ಷಕನು ತನ್ನ ವೈಯಕ್ತಿಕ ಯೋಗ್ಯತೆ-ಪ್ರಭಾವಗಳಿಂದ ಬಂಧುರವಾದ ಶಿಸ್ತನ್ನು ಕಾಯಬಹುದಾದರೂ, ಇದು ವಿದ್ಯಾರ್ಥಿಗಳ ಸಾಮಾನ್ಯ ಜೀವನ ಹಾಗು ನಡವಳಿಕೆಯ ಮೇಲೆ ಅಷ್ಟೊಂದು ಸತ್ಪರಿಣಾಮವನ್ನು ಮಾಡೀತೆಂದು ಹೇಳಲಿಕ್ಕಾಗದು. ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಉದಾಸೀನತೆ ತಲೆದೋರಿತೆಂದರೆ, ಎಲ್ಲ ವರ್ಗಗಳಲ್ಲಿಯೂ ಶಿಸ್ತು ಕೆಡುವದು ಸ್ವಾಭಾವಿಕವೇ ಸರಿ.

(೨) ಸಾಮಾನ್ಯ ವಾತಾವರಣವು ಮುಖ್ಯಾಧ್ಯಾಪಕ ಹಾಗು ಅಧ್ಯಾಪಕ ವರ್ಗದ ಸಾಮೂಹಿಕ ಪ್ರಯತ್ನದ ಮೇಲೆ ಅವಲಂಬಿಸಿದಂತೆ ಪ್ರತ್ಯೇಕವಾದ ವರ್ಗಗಳಲ್ಲಿಯ ಶಿಸ್ತು ಆಯಾ ವರ್ಗಗಳ ಅಧ್ಯಾಪಕರನ್ನೇ ಬಹ್ವಂಶವಾಗಿ ಅವಲಂಬಿಸಿದೆ. ಏಕೆಂದರೆ, ವರ್ಗಗಳಲ್ಲಿಯ ಶಿಸ್ತುಭಂಗದ ಕಾರಣಗಳನ್ನು ನೋಡಲಾಗಿ ಅವೆಲ್ಲವುಗಳು ಅಧ್ಯಾಪಕನ ದೋಷವನ್ನು ಒಡೆದು ತೋರಿಸುತ್ತವೆ. ಶಿಕ್ಷಕನಲ್ಲಿಯ ಅನುಭವ, ಸುಳ್ಳು ಪ್ರತಿಷ್ಠೆಯ ವ್ಯಾಮೋಹ, ವಿಷಯಗಳ ಬಗ್ಗೆ ಯೋಗ್ಯ ಸಿದ್ಧತೆಯಿಲ್ಲದಿರುವದು ಹಾಗು ಮಕ್ಕಳ ಮನೋವಿಜ್ಞಾನದ ಬಗ್ಗೆ ಅಜ್ಞಾನ ಇವೆಲ್ಲವುಗಳಿಂದ ಅವನ ವ್ಯಕ್ತಿತ್ವದ ಪರಿಣಾಮವಾಗದೇ, ಮಕ್ಕಳು ಶಿಸ್ತುಭಂಗ ಮಾಡುವರಲ್ಲದೆ, ಒಮ್ಮೊಮ್ಮೆ ಬಹಿರಂಗವಾಗಿ ಶಿಕ್ಷಕನ ಪ್ರತಿಭಟನೆಯನ್ನು ಸಹ ಮಾಡುವದುಂಟು. ಇಂತಹ ಅನಾಹುತಗಳು ಆಗದಂತೆ ನೋಡಿಕೊಳ್ಳಬೇಕಾದರೆ, ಶಿಕ್ಷಕನಿಗೆ ವಿಶಿಷ್ಟ ತರಬೇತಿಯನ್ನು ಕೊಡುವ ಅವಶ್ಯಕತೆ ಎಷ್ಟೆಂಬುದನ್ನು

ಬೇರೆ ಹೇಳಲು ಬೇಡ. ಸಾಕ್ಷರತೆ ಹೊಂದಿದ ಯಾವ ಮನುಷ್ಯನೂ ಶಿಕ್ಷಕನಾಗಬಲ್ಲನೆಂಬುದು ಹಳೆಯ ಹಾಗು ತಪ್ಪು ವಿಚಾರವಾಗಿದ್ದು, ಅದನ್ನು ಬೇಗ ತಿದ್ದಿ ಕೊಂಡಷ್ಟು ಒಳ್ಳೆಯದಾಗಿದೆ.

(೩) ಮುಖ್ಯಾಧ್ಯಾಪಕ ಹಾಗು ಅವನ ಸಹಕಾರಿಗಳು ಎಷ್ಟೇ ಪ್ರಯತ್ನ ಮಾಡಿದಾಗ್ಯೂ ವಿದ್ಯಾರ್ಥಿಗಳ ದೋಷದಿಂದಲೇ ಶಿಸ್ತುಭಂಗದ ಉದಾಹರಣೆಗಳು ಕಂಡುಬಂದಿವೆ. ಸಾಮಾನ್ಯವಾಗಿ ಅಭ್ಯಾಸ ನಿರತರಾದ ಮಕ್ಕಳು ಒಳ್ಳೆಯ ಆಚರಣೆಯನ್ನೇ ತೋರಿಸುವರು. ಆದರೆ ಹಿಂದುಳಿದ ಹಾಗು ದುರ್ಬಲ ಮಕ್ಕಳು ವರ್ಗದಲ್ಲಿ ಸಾಮಾನ್ಯರಂತೆ ನಡೆಯುವದಿಲ್ಲವೆಂದು ನಮ್ಮ ಅನುಭವದ ಮಾತು. ತಾವು ಶಿಕ್ಷಕರಿಂದ ನಿಂದೆಯನ್ನು ತಪ್ಪಿಸಿಕೊಳ್ಳಲು ಹಾಗು ಮಾನ್ಯತೆಯನ್ನು ಪಡೆಯಲು ಈ ಮಕ್ಕಳು ಮೋಸಕಾರ್ಯ, ಕಳ್ಳತನ, ಸುಳ್ಳುಗಾರಿಕೆ ಮೊದಲಾದ ದುರ್ನಡತೆಗಳನ್ನವಲಂಬಿಸುವರು. ಕೆಲ ಪ್ರಸಂಗಗಳಲ್ಲಿ ಅವರು ಬಂಟರೂ, ಉದ್ಧಟರೂ ಆಗುವದುಂಟು. ಇದರ ಮೂಲ ಕಾರಣವೆಂದರೆ, ಅವರಲ್ಲಿ ತಮ್ಮ ಬಗೆಗೇನೇ ಕೀಳು ಮನೋಭಾವನೆ ಹಾಗು ಅವಿಶ್ವಾಸವಿರುವದೇ ಆಗಿದೆ. ಅವರು ತಮ್ಮ ಜಾಣ ಹಾಗು ಚುರುಕು ಬುದ್ಧಿಯ ಗೆಳೆಯರನ್ನು ದ್ವೇಷ ಮಾಡಹತ್ತುವರಲ್ಲದೆ, ಅವರಿಗೆ ಕೇಡುಮಾಡಲು ಸಹ ಹಿಂಜರಿಯುವದಿಲ್ಲ. ವರ್ಗದಲ್ಲಿಯ ಜಾಣ ಹುಡುಗರಿಗಾದ ಶೋಚನೀಯ ಪ್ರಸಂಗಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಬಹುದು.

ಒಬ್ಬ ಜಾಣ ಹುಡುಗನು ತನಗೊಪ್ಪಿಸಿದ ಎಲ್ಲ ಅಭ್ಯಾಸವನ್ನು ಯಾವಾಗಲೂ ವೇಳೆಗೆ ಸರಿಯಾಗಿ ಮುಗಿಸುತ್ತಿದ್ದನು. ಕೆಲವು ಹುಡುಗರು ತಮಗೆ ಕೊಟ್ಟ ಅಭ್ಯಾಸವು ಕಡಿಮೆಯಾಗಬೇಕೆಂದು ಗೊಣಗುತ್ತಿದ್ದರು. ಜಾಣ ಹುಡುಗನು ತನ್ನ ಅಭ್ಯಾಸವನ್ನು ಗೊಣಗುಡದೆ ಮಾಡಿದ ಕಾರಣದಿಂದ ಉಳಿದ ಹುಡುಗರೆಲ್ಲರು ಆತನ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿದರು. ಮತ್ತೊಬ್ಬ ಹುಡುಗನು ತನ್ನ ಚುರುಕು ಬುದ್ಧಿ, ಸತತೋದ್ಯೋಗದಿಂದ ಗುರುಗಳ ಪ್ರೀತಿಯ ಶಿಷ್ಯನಾಗಿದ್ದನು. ಇದನ್ನು ಸಹಿಸಲಾರದೆ ಹಲವು ತುಂಟ ಹುಡುಗರು ಈ ಉದ್ಯೋಗಿ ಹುಡುಗನ ಪುಸ್ತಕ,ಟಿಪ್ಪಣಿ ಪುಸ್ತಕ ಹಾಗು ಬಟ್ಟೆಗಳನ್ನು ಕದಿಯಹತ್ತಿದರು. ಬೇರೊಬ್ಬ ಹುಡುಗನು ಶಾಸ್ತ್ರೀಯ ವಿಷಯದ ಪ್ರಯೋಗಗಳನ್ನು ತನ್ನ ಟಿಪ್ಪಣಿ ಪುಸ್ತಕದಲ್ಲಿ ಒಳ್ಳೇ ಅಂದ-ಚಂದವಾಗಿ ಆಕೃತಿಗಳೊಂದಿಗೆ ಹಾಗು ನಿಯಮಿತವಾಗಿ ಬರೆದಿಡುತ್ತಿದ್ದನು. ವರ್ಗದಲ್ಲಿಯ ಉಡಾಳ ಹುಡುಗರು ಇದನ್ನು ಸಹಿಸಲಾರದವರಾಗಿ ವಾರ್ಷಿಕ ಪರೀಕ್ಷೆಯ ಮುನ್ನಾ ದಿನವೇ ಹೇಗೋ ಈ ಹುಡುಗನ ಪ್ರಾಯೋಗಿಕ ಪುಸ್ತಕದಲ್ಲಿಯ ಬರೆಹ ಹಾಗು ಆಕೃತಿಗಳನ್ನು ಕೆಡಿಸಿದ್ದು ಕಂಡುಬಂದಿತು.

(೪) ವಿದ್ಯಾರ್ಥಿಗಳು ಮನೆಯಲ್ಲಿ ಆನಂದದ ವಾತಾವರಣದಲ್ಲಿ ಬೆಳೆಯದಿದ್ದರೆ ಅದರ ಪರಿಣಾಮವು ವರ್ಗದ ಶಿಸ್ತಿನ ಮೇಲೆಯೂ ಆಗದಿರದು. ವರ್ಗದಲ್ಲಿ ಸಮಾಜದ ವಿವಿಧ ವರ್ಗ ಹಾಗು ಮಟ್ಟಗಳ ಹುಡುಗರು ಕೂಡುತ್ತಾರೆ. ಅವರು ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗುವದು ಕಠಿಣವೆನಿಸುವದು. ಏಕೆಂದರೆ, ಶ್ರೀಮಂತ ಮನೆತನದ ಹುಡುಗನು ಸ್ವಾಭಾವಿಕವಾಗಿ ಹಟಮಾರಿಯಾಗುವನು. ಬಡಕುಟುಂಬದ ಹುಡುಗರು ತಮ್ಮ ಬಗ್ಗೆಯೇ ಕೀಳು ಭಾವನೆ ಹಾಗು ಅವಿಶ್ವಾಸಗಳಿಂದ ತೊಳಲಾಡುವರು. ತಂದೆ-ತಾಯಿಗಳಿಗೆ ಒಬ್ಬನೇ ಹುಡುಗನಿದ್ದರೆ ಇಲ್ಲವೆ ಹುಡುಗನಿಗೆ ಯಾವುದಾದರೂ ಅಂಗದ ನ್ಯೂನತೆಯಿದ್ದರೆ, ಇಂತಹ ಹುಡುಗರು ಸ್ವಾಭಾವಿಕವಾಗಿ ತಂದೆ-ತಾಯಿಗಳ ಅಂಧ ಪ್ರೇಮದಿಂದ ಅಸ್ವಾಭಾವಿಕ ವರ್ತನೆಯುಳ್ಳವರಾಗುತ್ತಾರೆ. ಮನೆಯಲ್ಲಿ ಸುಖ-ಶಾಂತಿಯಿರದೆ ಹುಡುಗನನ್ನು ಒಂದೇ ಸವನೆ ಹತ್ತಿಕ್ಕಿದರೆ, ಅವನ ಪ್ರತೀಕಾರವು ಸ್ವಾಭಾವಿಕವಾಗಿ ವರ್ಗದಲ್ಲಿ ತೋರ್ಪಡುವದು.

[ಮುಂದುವರೆಯುವದು]

ನತ್ತು

ಹಾಗೂ

ಮೂಗುತಿ

ಲೇಖಕರು : ಡಾ. ಬಿ. ಎಸ್. ಗದ್ದಗೀಮಠ
M. A. Ph. D.

ಒಕ್ಕಲಿಗನ ಹಲಕೆಲವು ಹಾಡುಗಳನ್ನು ಪರಿಶೀಲಿಸಿ ನೋಡಿದರೆ ಅವನ ಸಂಶೋಧನೆಯೂ ನಿಸರ್ಗ ನಿರೀಕ್ಷಣೆಯೂ ಕಂಡುಬರುವುದು. ನಿಸರ್ಗದಲ್ಲಿ ಹಗಲಿರುಳು ದುಡಿದು ಜನಾಂಗದಲ್ಲಿ ಬಾಳಿ ಬದುಕುವ ಅವನಿಗೆ ಜನಾಂಗದಲ್ಲಿ ಬರುವ ವೇಷಭೂಷಣಗಳ ಅನುಕರಣಗಳಾಗಲಿ, ಪದ್ಧತಿಗಳಾಗಲಿ ಅವನ ದೃಷ್ಟಿಗೆ ಬೀಳದಿರವು. ಅವುಗಳಲ್ಲಿ ನತ್ತು ಎಂಬ ಮೂಗಿನ ಆಭರಣವು ಅವನ ಮನಸ್ಸನ್ನು ಹಿಡಿದಂತೆ ಕಾಣುತ್ತದೆ.

ನತ್ತು - ಮುಗದಾಣ್ಹಾದು, ಮುತ್ತ್ಯೆದಿ ಮೂಗೀಗೆ
ಬಿತ್ತ್ಯಾವ ಸೆಡ್ಡಿ ಭೂಮಿಗೆ। ಕಣದಾಗ
ಉತ್ರಾಣಿ ನೆಕ್ಕ್ಯ ರಾಶೀಗೆ॥ **ಜಾ-ಸಂ-**

ಎಂದು ಮುತ್ತ್ಯೆದಿಗೆ ನತ್ತು 'ಮುಗದಾಣ' (Nose string) ಎಂದು ಹಾಡಿದ್ದಾನೆ. 'ನತ್ತು' ಮುಗದಾಣವೆಂದು ಕರೆಯುವುದರಲ್ಲಿ ಔಚಿತ್ಯವೇನಿರಬಹುದೆಂದು ಅನುಮಾನವು ಎಲ್ಲರಿಗೂ ಬಾರದಿರದು. ಸುಧಾರಿಸಿದವರು ಈ ಮಾತನ್ನು ಕೇಳಿ ಹಾಸ್ಯಮಾಡಿ ನಕ್ಕರೂ ನಗಬಹುದು. ಆದರೆ ಒಕ್ಕಲಿಗನು ಮಾತ್ರ ಈ ಮಾತನ್ನು ವ್ಯರ್ಥವಾಗಿ ಬಳಸಿರಲಿಕ್ಕಿಲ್ಲವೆಂದು ತೋರುತ್ತದೆ. ಅವನ ಈ ಮಾತಿನಲ್ಲಿ ಸತ್ಯತೆ ಇರಬಾರದೇಕೆ? ಈ ಸಂದರ್ಭದಲ್ಲಿ 'ನತ್ತಿ'ನ ಇತಿಹಾಸವನ್ನು ಅರಿತುಕೊಳ್ಳುವುದು ಒಳಿತು. 'ನತ್ತು' ಎಂಬುದು ಕನ್ನಡ ಶಬ್ದವೇ? ಕನ್ನಡ ಹೆಣ್ಣುಮಕ್ಕಳ ಮೂಗಿನ ವಸ್ತುವೇ ಅಭರಣವೇ)? ಅದರ ರೂಪ ರೂಪಾಂತರಗಳ ಬಗೆ ಹೇಗೆ? ಎಂಬ ಪ್ರಶ್ನೆಗಳನ್ನು ಈ ಸಂದರ್ಭದಲ್ಲಿ ಚರ್ಚಿಸುವುದು ಅಗತ್ಯ. ಕನ್ನಡಿಗರಲ್ಲಿ ಈಗ ಬಳಕೆಯಲ್ಲಿರುವ 'ನತ್ತಿನ' ಆಕಾರವು ಪೂರ್ಣಚಂದ್ರಾಕೃತಿಗೆ ಸಮೀಪವಿರುವ ಮುಸಲ್ಮಾನ ಸ್ತ್ರೀಯರು ಧರಿಸುವ ನೇತಾಡುವ ಬುಲಾಕಿಗೆ ಸಮೀಪವಾಗಿದೆ. ಇದರಲ್ಲಿ ಕಡಿಮೆ ಕಡಿಮೆ ಎಂದರೆ ಇಪ್ಪತ್ತೈದು ಮುತ್ತುಗಳಿದ್ದು ಎರಡು ಅಥವಾ ಮೂರು ಕೆಂಪು ಹಾಗೂ ಹಸರು ರತ್ನದ ಹರಳುಗಳಿದ್ದದ್ದು ಕಂಡುಬರುವುದು. ಹಲಕೆಲವು ನತ್ತುಗಳಲ್ಲಿ ಹೆಚ್ಚು ಮುತ್ತುಗಳೂ ಇರುವವು. ನತ್ತಿನ ಒಂಕಿಯನ್ನು ಮೂಗಿನ ಎಡಹೊರಳೆಯ ತೂತಿನಲ್ಲಿ ಪೋಣಿಸಿ ಮುಂಭಾಗಕ್ಕೆ ಜಗ್ಗಿ ನತ್ತಿನ ಇನ್ನೊಂದು ತುದಿಯಲ್ಲಿಯ ಕೊಂಡಿಗೆ ಹಾಕುವರು. ಅದು ಮೂಗಿನ ಮುಂಭಾಗದ ಎಡಹೊರಳೆಯ ಮೇಲಿಂದ ಇಳಿಬಿದ್ದು ಮೂಗನ್ನು ಅಲಂಕರಿಸುವುದು. ಈ ನತ್ತಿನಲ್ಲಿ 'ಸಾದಾನತ್ತು' 'ಗಾಡಿ ನತ್ತು' ಎಂದು ಎರಡು ಪ್ರಕಾರಗಳಿವೆ. ಇವೆರಡೂ ಕರ್ನಾಟಕದಲ್ಲಿ ಕಂಡುಬರುವ ನತ್ತಿನ ರೂಪಾಂತರಗಳೆಂದೇ ಹೇಳಬಹುದು. ಗಾಡಿನತ್ತಿನಲ್ಲಿ ಬಲು ಬೆಳೆಯುಳ್ಳ ದೊಡ್ಡ ಮುತ್ತುಗಳನ್ನು ಪೋಣಿಸುತ್ತಾರೆ. ಈ ನತ್ತಿನ ಆಕಾರವು ಗೋಡಂಬಿಯ ಹಾಗೆ ಇರುವುದರಿಂದ ಉಳಿದ ನತ್ತಿಗಿಂತಲೂ ಬಲು ಜೋರಾಗಿ ಚಂದಕಾಣುವುದು. ಆದುದರಿಂದ ಕನ್ನಡಿಗರು ಇದಕ್ಕೆ ಗಾಡಿ (ಚೆಲುವು) ನತ್ತು ಎಂದು ಕರೆದಿರುವರು. ಮಹಾರಾಷ್ಟ್ರದಲ್ಲಿಯೂ ಇದೇ ಶಬ್ದವು ರೂಢಿಯಲ್ಲಿದೆ. ಈ ನತ್ತುಗಳ ಬೆಲೆಯು ಸಾವಿರಗಟ್ಟಲೆ ಇರುತ್ತದೆ. ಇಂಗ್ಲೀಷರು ದಕ್ಷಿಣ ಸಂಸ್ಥಾನಗಳನ್ನು ರದ್ದುಮಾಡಿ ವಶಪಡಿಸಿಕೊಳ್ಳುವ ಕಾಲಕ್ಕೆ ಆಗಿನ ಸೇನಾಧಿಕಾರಿಗಳು ಸಂಸ್ಥಾನಿಕರ ಅಪಾರವಾದ ಸಂಪತ್ತನ್ನು ಹೊತ್ತೊಯ್ದಿದ್ದಾರೆ. ಅದರಲ್ಲಿ ಅಮೌಲ್ಯವಾದ ಈ ಮೂಗುವಸ್ತುಗಳನ್ನು ನಾನಾ ಪರಿಯಿಂದ ವರ್ಣಿಸಿ ತಮ್ಮ ದಿನಚರಿಯಲ್ಲಿ ಬರೆದೂ ಇಟ್ಟಿದ್ದಾರೆ. 'ಈಸ್ಟ ಇಂಡಿಯಾ ಕಂಪನಿ'ಯ ಸೇನಾಧಿಕಾರಿಯಾದ ಲೆಫ್ಟನಂಟ್ ಎಡ್ವರ್ಡ ಮೂರನು ಮಹಾರಾಷ್ಟ್ರ ಸೇನೆಗೆ ಸಹಾಯಕನಾಗಿ ಟೀಪುಸುಲ್ತಾನನನ್ನು ಸದೆಬಡೆಯಲು (೧೭೯೦-೧೭೯೨) ಕರ್ನಾಟಕದ ಮೇಲೆ ದಂಡೆತ್ತಿ ಬಂದಾಗ ಅಲ್ಲಿಯ ಹೆಣ್ಣುಮಕ್ಕಳ ಮೂಗುವಸ್ತುಗಳನ್ನು ನೋಡಿ ಕೆಳಗಿನಂತೆ ಬರೆದಿದ್ದಾನೆ:—

"In common with most other se$_c$ts of Hindoos, the women wear on an ornamental ring or jewel in their nose called in Hindi Natt. A great deal of money

ಬೇರೆ ಹೇಳಲು ಬೇಡ. ಸಾಕ್ಷರತೆ ಹೊಂದಿದ ಯಾವ ಮನುಷ್ಯನೂ ಶಿಕ್ಷಕನಾಗಬಲ್ಲನೆಂಬುದು ಹಳೆಯ ಹಾಗು ತಪ್ಪು ವಿಚಾರವಾಗಿದ್ದು, ಅದನ್ನು ಬೇಗ ತಿದ್ದಿಕೊಂಡಷ್ಟು ಒಳ್ಳೆಯದಾಗಿದೆ.

(೩) ಮುಖ್ಯಾಧ್ಯಾಪಕ ಹಾಗು ಅವನ ಸಹಕಾರಿಗಳು ಎಷ್ಟೇ ಪ್ರಯತ್ನ ಮಾಡಿದಾಗ್ಯೂ ವಿದ್ಯಾರ್ಥಿಗಳ ದೋಷದಿಂದಲೇ ಶಿಸ್ತುಭಂಗದ ಉದಾಹರಣೆಗಳು ಕಂಡುಬಂದಿವೆ. ಸಾಮಾನ್ಯವಾಗಿ ಅಭ್ಯಾಸ ನಿರತರಾದ ಮಕ್ಕಳು ಒಳ್ಳೆಯ ಆಚರಣೆಯನ್ನೇ ತೋರಿಸುವರು. ಆದರೆ ಹಿಂದುಳಿದ ಹಾಗು ದುರ್ಬಲ ಮಕ್ಕಳು ವರ್ಗದಲ್ಲಿ ಸಾಮಾನ್ಯರಂತೆ ನಡೆಯುವದಿಲ್ಲವೆಂದು ನಮ್ಮ ಅನುಭವದ ಮಾತು. ತಾವು ಶಿಕ್ಷಕರಿಂದ ನಿಂದೆಯನ್ನು ತಪ್ಪಿಸಿಕೊಳ್ಳಲು ಹಾಗು ಮಾನ್ಯತೆಯನ್ನು ಪಡೆಯಲು ಈ ಮಕ್ಕಳು ಮೋಸಕಾರ್ಯ, ಕಳ್ಳತನ, ಸುಳ್ಳುಗಾರಿಕೆ ಮೊದಲಾದ ದುರ್ನಡತೆಗಳನ್ನವಲಂಬಿಸುವರು. ಕೆಲ ಪ್ರಸಂಗಗಳಲ್ಲಿ ಅವರು ಬಂಟರೂ, ಉಷ್ಣಟರೂ ಆಗುವದುಂಟು. ಇದರ ಮೂಲ ಕಾರಣವೆಂದರೆ, ಅವರಲ್ಲಿ ತಮ್ಮ ಬಗೆಗೇನೇ ಕೀಳು ಮನೋಭಾವನೆ ಹಾಗು ಅವಿಶ್ವಾಸವಿರುವದೇ ಆಗಿದೆ. ಅವರು ತಮ್ಮ ಜಾಣ ಹಾಗು ಚುರುಕು ಬುದ್ಧಿಯ ಗೆಳೆಯರನ್ನು ದ್ವೇಷ ಮಾಡಹತ್ತುವರಲ್ಲದೆ, ಅವರಿಗೆ ಕೇಡುಮಾಡಲು ಸಹ ಹಿಂಜರಿಯುವದಿಲ್ಲ. ವರ್ಗದಲ್ಲಿಯ ಜಾಣ ಹುಡುಗರಿಗಾದ ಶೋಚನೀಯ ಪ್ರಸಂಗಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಬಹುದು.

ಒಬ್ಬ ಜಾಣ ಹುಡುಗನು ತನಗೊಪ್ಪಿಸಿದ ಎಲ್ಲ ಅಭ್ಯಾಸವನ್ನು ಯಾವಾಗಲೂ ವೇಳೆಗೆ ಸರಿಯಾಗಿ ಮುಗಿಸುತ್ತಿದ್ದನು. ಕೆಲವು ಹುಡುಗರು ತಮಗೆ ಕೊಟ್ಟ ಅಭ್ಯಾಸವು ಕಡಿಮೆಯಾಗಬೇಕೆಂದು ಗೊಣಗುತ್ತಿದ್ದರು. ಜಾಣ ಹುಡುಗನು ತನ್ನ ಅಭ್ಯಾಸವನ್ನು ಗೊಣಗುಡದೆ ಮಾಡಿದ ಕಾರಣದಿಂದ ಉಳಿದ ಹುಡುಗರೆಲ್ಲರು ಆತನ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿದರು. ಮತ್ತೊಬ್ಬ ಹುಡುಗನು ತನ್ನ ಚುರುಕು ಬುದ್ಧಿ, ಸತತೋದ್ಯೋಗದಿಂದ ಗುರುಗಳ ಪ್ರೀತಿಯ ಶಿಷ್ಯನಾಗಿದ್ದನು. ಇದನ್ನು ಸಹಿಸಲಾರದೆ ಹಲವು ತುಂಟ ಹುಡುಗರು ಈ ಉದ್ಯೋಗಿ ಹುಡುಗನ ಪುಸ್ತಕ, ಟಿಪ್ಪಣಿ ಪುಸ್ತಕ ಹಾಗು ಬಟ್ಟೆಗಳನ್ನು ಕದಿಯಹತ್ತಿದರು. ಬೇರೊಬ್ಬ ಹುಡುಗನು ಶಾಸ್ತ್ರೀಯ ವಿಷಯದ ಪ್ರಯೋಗಗಳನ್ನು ತನ್ನ ಟಿಪ್ಪಣಿ ಪುಸ್ತಕದಲ್ಲಿ ಒಳ್ಳೇ ಅಂದ-ಚಂದವಾಗಿ ಆಕೃತಿಗಳೊಂದಿಗೆ ಹಾಗು ನಿಯಮಿತವಾಗಿ ಬರೆದಿಡುತ್ತಿದ್ದನು. ವರ್ಗದಲ್ಲಿಯ ಉಡಾಳ ಹುಡುಗರು ಇದನ್ನು ಸಹಿಸಲಾರದವರಾಗಿ ವಾರ್ಷಿಕ ಪರೀಕ್ಷೆಯ ಮುನ್ನಾ ದಿನವೇ ಹೇಗೋ ಈ ಹುಡುಗನ ಪ್ರಾಯೋಗಿಕ ಪುಸ್ತಕದಲ್ಲಿಯ ಬರೆಹ ಹಾಗು ಆಕೃತಿಗಳನ್ನು ಕೆಡಿಸಿದ್ದು ಕಂಡುಬಂದಿತು.

(೪) ವಿದ್ಯಾರ್ಥಿಗಳು ಮನೆಯಲ್ಲಿ ಆನಂದದ ವಾತಾವರಣದಲ್ಲಿ ಬೆಳೆಯದಿದ್ದರೆ ಅದರ ಪರಿಣಾಮವು ವರ್ಗದ ಶಿಸ್ತಿನ ಮೇಲೆಯೂ ಆಗದಿರದು. ವರ್ಗದಲ್ಲಿ ಸಮಾಜದ ವಿವಿಧ ವರ್ಗ ಹಾಗು ಮಟ್ಟಗಳ ಹುಡುಗರು ಕೂಡುತ್ತಾರೆ. ಅವರು ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗುವದು ಕಠಿಣವೆನಿಸುವದು. ಏಕೆಂದರೆ, ಶ್ರೀಮಂತ ಮನೆತನದ ಹುಡುಗನು ಸ್ವಾಭಾವಿಕವಾಗಿ ಹಟಮಾರಿಯಾಗುವನು. ಬಡಕುಟುಂಬದ ಹುಡುಗರು ತಮ್ಮ ಬಗ್ಗೆಯೇ ಕೀಳು ಭಾವನೆ ಹಾಗು ಅವಿಶ್ವಾಸಗಳಿಂದ ತೊಳಲಾಡುವರು. ತಂದೆ-ತಾಯಿಗಳಿಗೆ ಒಬ್ಬನೇ ಹುಡುಗನಿದ್ದರೆ ಇಲ್ಲವೆ ಹುಡುಗನಿಗೆ ಯಾವುದಾದರೂ ಅಂಗದ ನ್ಯೂನತೆಯಿದ್ದರೆ, ಇಂತಹ ಹುಡುಗರು ಸ್ವಾಭಾವಿಕವಾಗಿ ತಂದೆ-ತಾಯಿಗಳ ಅಂಧ ಪ್ರೇಮದಿಂದ ಅಸ್ವಾಭಾವಿಕ ವರ್ತನೆಯುಳ್ಳವರಾಗುತ್ತಾರೆ. ಮನೆಯಲ್ಲಿ ಸುಖ-ಶಾಂತಿಯಿರದೆ ಹುಡುಗನನ್ನು ಒಂದೇ ಸವನೆ ಹತ್ತಿಕ್ಕಿದರೆ, ಅವನ ಪ್ರತೀಕಾರವು ಸ್ವಾಭಾವಿಕವಾಗಿ ವರ್ಗದಲ್ಲಿ ತೋರ್ಪಡುವದು.

[ಮುಂದುವರೆಯುವದು]

ನತ್ತು ಹಾಗೂ ಮೂಗುತಿ

ಲೇಖಕರು : **ಡಾ. ಬಿ. ಎಸ್. ಗದ್ದಗೀಮಠ**
M. A. Ph. D.

ಒಕ್ಕಲಿಗನ ಹಲಕೆಲವು ಹಾಡುಗಳನ್ನು ಪರಿಶೀಲಿಸಿ ನೋಡಿದರೆ ಅವನ ಸಂಶೋಧನೆಯೂ ನಿಸರ್ಗ ನಿರೀಕ್ಷಣೆಯೂ ಕಂಡುಬರುವುದು. ನಿಸರ್ಗದಲ್ಲಿ ಹಗಲಿರುಳು ದುಡಿದು ಜನಾಂಗದಲ್ಲಿ ಬಾಳಿ ಬದುಕುವ ಅವನಿಗೆ ಜನಾಂಗದಲ್ಲಿ ಬರುವ ವೇಷಭೂಷಣಗಳ ಅನುಕರಣಗಳಾಗಲಿ, ಪದ್ಧತಿಗಳಾಗಲಿ ಅವನ ದೃಷ್ಟಿಗೆ ಬೀಳದಿರವು. ಅವುಗಳಲ್ಲಿ ನತ್ತು ಎಂಬ ಮೂಗಿನ ಆಭರಣವು ಅವನ ಮನಸ್ಸನ್ನು ಹಿಡಿದಂತೆ ಕಾಣುತ್ತದೆ.

ನತ್ತು ಮುಗದಾಣ್ಹೊದು, ಮುತ್ತೈದಿ ಮೂಗೀಗೆ
ಬಿತ್ತೂವ ಸೆಡ್ಡಿ ಭೂಮಿಗೆ । ಕಣದಾಗ
ಉತ್ರಾಣಿ ಸೆಳ್ಳ್ಯ ರಾಶೀಗೆ ॥ **ಜಾ-ಸಂ-**

ಎಂದು ಮುತ್ತೈದಿಗೆ ನತ್ತು 'ಮುಗದಾಣ' (Nose string) ಎಂದು ಹಾಡಿದ್ದಾನೆ. 'ನತ್ತು' ಮುಗದಾಣವೆಂದು ಕರೆಯುವುದರಲ್ಲಿ ಔಚಿತ್ಯವೇನಿರಬಹುದೆಂದು ಅನುಮಾನವು ಎಲ್ಲರಿಗೂ ಬಾರದಿರದು. ಸುಧಾರಿಸಿದವರು ಈ ಮಾತನ್ನು ಕೇಳಿ ಹಾಸ್ಯಮಾಡಿ ನಕ್ಕರೂ ನಗಬಹುದು. ಆದರೆ ಒಕ್ಕಲಿಗನು ಮಾತ್ರ ಈ ಮಾತನ್ನು ವ್ಯರ್ಥವಾಗಿ ಬಳಸಿರಲಿಕ್ಕಿಲ್ಲವೆಂದು ತೋರುತ್ತದೆ. ಅವನ ಈ ಮಾತಿನಲ್ಲಿ ಸತ್ಯತೆ ಇರಬಾರದೇಕೆ? ಈ ಸಂದರ್ಭದಲ್ಲಿ 'ನತ್ತಿ'ನ ಇತಿಹಾಸವನ್ನು ಅರಿತುಕೊಳ್ಳುವುದು ಒಳಿತು. 'ನತ್ತು' ಎಂಬುದು ಕನ್ನಡ ಶಬ್ದವೇ? ಕನ್ನಡ ಹೆಣ್ಣುಮಕ್ಕಳ ಮೂಗಿನ ವಸ್ತುವೇ (ಆಭರಣವೇ)? ಅದರ ರೂಪ ರೂಪಾಂತರಗಳ ಬಗೆ ಹೇಗೆ? ಎಂಬ ಪ್ರಶ್ನೆಗಳನ್ನು ಈ ಸಂದರ್ಭದಲ್ಲಿ ಚರ್ಚಿಸುವುದು ಅಗತ್ಯ. ಕನ್ನಡಿಗರಲ್ಲಿ ಈಗ ಬಳಕೆಯಲ್ಲಿರುವ 'ನತ್ತಿನ' ಆಕಾರವು ಪೂರ್ಣಚಂದ್ರಾಕೃತಿಗೆ ಸಮೀಪವಿರುವ ಮುಸಲ್ಮಾನ ಸ್ತ್ರೀಯರು ಧರಿಸುವ ನೇತಾಡುವ ಬುಲಾಕಿಗೆ ಸಮೀಪವಾಗಿದೆ. ಇದರಲ್ಲಿ ಕಡಿಮೆ ಕಡಿಮೆ ಎಂದರೆ ಇಪ್ಪತ್ತೈದು ಮುತ್ತುಗಳಿದ್ದು ಎರಡು ಅಥವಾ ಮೂರು ಕೆಂಪು ಹಾಗೂ ಹಸರು ರತ್ನದ ಹರಳುಗಳಿದ್ದದ್ದು ಕಂಡುಬರುವುದು. ಹಲಕೆಲವು ನತ್ತುಗಳಲ್ಲಿ ಹೆಚ್ಚು ಮುತ್ತುಗಳೂ ಇರುವವು. ನತ್ತಿನ ಒಂಕಿಯನ್ನು ಮೂಗಿನ ಎಡಹೊರಳೆಯ ತೂತಿನಲ್ಲಿ ಪೋಣಿಸಿ ಮುಂಭಾಗಕ್ಕೆ ಜಗ್ಗಿ ನತ್ತಿನ ಇನ್ನೊಂದು ತುದಿಯಲ್ಲಿಯ ಕೊಂಡಿಗೆ ಹಾಕುವರು. ಅದು ಮೂಗಿನ ಮುಂಭಾಗದ ಎಡಹೊರಳೆಯ ಮೇಲಿಂದ ಇಳಿಬಿದ್ದು ಮೂಗನ್ನು ಅಲಂಕರಿಸುವುದು. ಈ ನತ್ತಿನಲ್ಲಿ 'ಸಾದಾನತ್ತು' 'ಗಾಡಿನತ್ತು' ಎಂದು ಎರಡು ಪ್ರಕಾರಗಳಿವೆ. ಇವೆರಡೂ ಕರ್ನಾಟಕದಲ್ಲಿ ಕಂಡುಬರುವ ನತ್ತಿನ ರೂಪಾಂತರಗಳೆಂದೇ ಹೇಳಬಹುದು. ಗಾಡಿನತ್ತಿನಲ್ಲಿ ಬಲು ಬೆಳೆಯುಳ್ಳ ದೊಡ್ಡ ಮುತ್ತುಗಳನ್ನು ಪೋಣಿಸುತ್ತಾರೆ. ಈ ನತ್ತಿನ ಆಕಾರವು ಗೋಡಂಬಿಯ ಹಾಗೆ ಇರುವುದರಿಂದ ಉಳಿದ ನತ್ತಿಗಿಂತಲೂ ಬಲು ಠೌಲಾಗಿ ಚಂದಕಾಣುವುದು. ಆದುದರಿಂದ ಕನ್ನಡಿಗರು ಇದಕ್ಕೆ ಗಾಡಿ (ಚೆಲುವು) ನತ್ತು ಎಂದು ಕರೆದಿರುವರು. ಮಹಾರಾಷ್ಟ್ರದಲ್ಲಿಯೂ ಇದೇ ಶಬ್ದವು ರೂಢಿಯಲ್ಲಿದೆ. ಈ ನತ್ತುಗಳ ಬೆಲೆಯು ಸಾವಿರಗಟ್ಟಲೆ ಇರುತ್ತದೆ. ಇಂಗ್ಲೀಷರು ದಕ್ಷಿಣ ಸಂಸ್ಥಾನಗಳನ್ನು ರದ್ದುಮಾಡಿ ವಶಪಡಿಸಿಕೊಳ್ಳುವ ಕಾಲಕ್ಕೆ ಆಗಿನ ಸೇನಾಧಿಕಾರಿಗಳು ಸಂಸ್ಥಾನಿಕರ ಅಪಾರವಾದ ಸಂಪತ್ತನ್ನು ಹೊತ್ತೊಯ್ದಿದ್ದಾರೆ. ಅದರಲ್ಲಿ ಅನಮೌಲ್ಯವಾದ ಈ ಮೂಗುವಸ್ತುಗಳನ್ನು ನಾನಾ ಪರಿಯಿಂದ ವರ್ಣಿಸಿ ತಮ್ಮ ದಿನಚರಿಯಲ್ಲಿ ಬರೆದೂ ಇಟ್ಟಿದ್ದಾರೆ. 'ಈಸ್ಟ ಇಂಡಿಯಾ ಕಂಪನಿ'ಯ ಸೇನಾಧಿಕಾರಿಯಾದ ಲೆಫ್ಟನಂಟ್ ಎಡ್ವರ್ಡ ಮೂರನು ಮಹಾರಾಷ್ಟ್ರ ಸೇನೆಗೆ ಸಹಾಯಕನಾಗಿ ಟೀಪುಸುಲ್ತಾನನನ್ನು ಸದೆಬಡೆಯಲು (೧೭೯೦-೧೭೯೨) ಕರ್ನಾಟಕದ ಮೇಲೆ ದಂಡೆತ್ತಿ ಬಂದಾಗ ಅಲ್ಲಿಯ ಹೆಣ್ಣುಮಕ್ಕಳ ಮೂಗುವಸ್ತುಗಳನ್ನು ನೋಡಿ ಕೆಳಗಿನಂತೆ ಬರೆದಿದ್ದಾನೆ:—

"In common with most other sects of Hindoos, the women wear on an ornamental ring or jewel in their nose called in Hindi Natt. A great deal of money

is some-times expended and a great deal of taste some-times displayed[1] in execution and designing of this favourite appendage, which, whatever mere Europeans may think, must be allowed a very becoming, and almost irregistible addition to the nose of a pretty face. This ornament is sometimes, but here not very frequently, affixed to the septum of the nose, but it then assumes a different name and form, and we think loses all its effect, there not being an equal opportunity of displaying either taste or judgment, as in the circular trinket suspended in the usual style"[1] 'ನತ್ತಿನ ಸಂಬಂಧ ಅನೇಕ ಪಂಡಿತರು ಈಗಾಗಲೇ ತಮ್ಮ ಮತಗಳನ್ನು ಲೇಖನಗಳಲ್ಲಿ ವಿಶದಪಡಿಸಿದ್ದಾರೆ. ಶ್ರೀ. ವಿನ್ಸೆಂಟ ಸ್ಮಿಥ್‌ರವರು, "I have at present no references with me to the nose ornament in India earlier than 1000 A. D."[2] ಎಂದು ಹೇಳಿದ್ದಾರೆ. ಶ್ರೀ ಎಮ್. ಎನ್. ದಾಸಗುಪ್ತರು ಕ್ರಿ. ಶ. ೧೦ನೆಯ ಶತಮಾನದ ಹಿಂದೆ ಹಿಂದೂ ರಾಜ್ಯದಲ್ಲಿ ಮೂಗಿನ ಆಭರಣವಿತ್ತೆಂದೂ ಅದನ್ನು ಪರದೇಶದಿಂದ ಮುಸಲ್ಮಾನರು ತಂದಿಲ್ಲವೆಂದೂ ಸಿದ್ಧಮಾಡಿದ್ದಾರೆ.[3] ಶ್ರೀ. ಪಿ. ಕೆ. ಗೋಡೆ ಅವರು ಶ್ರೀ ದಾಸಗುಪ್ತರ ಮಾತನ್ನು ಸಂಶಯಾತ್ಮಕವೆಂದು ಹೇಳಿ 'ನತ್ತು' ಪರದೇಶದಿಂದ ಬಂದ ಅಲಂಕಾರವಿದ್ದು ಅದನ್ನು ಮುಸಲ್ಮಾನರೇ ಹಿಂದುಸ್ತಾನಕ್ಕೆ ತಂದರೆಂದು ಹೇಳಿದ್ದಾರೆ.[4] ಡಾ. ಎ. ಎಸ್. ಅಳ್ತೇಕರ ಅವರು ನತ್ತನ್ನು ಕುರಿತು ಬಲು ಚರ್ಚಾತ್ಮಕವಾದ ಲೇಖನವನ್ನು ಬರೆದಿದ್ದಾರೆ.[5] ಈ ಎಲ್ಲ ಪಂಡಿತರ ಹೇಳಿಕೆಯ ಬೆಳಕಿನಲ್ಲಿ ಕರ್ನಾಟಕದಲ್ಲಿರುವ ನತ್ತನ್ನು ಚರ್ಚಿಸಬೇಕಾಗಿದೆ.

'ನತ್ತ'ನ್ನು ಕನ್ನಡ ಕವಿಗಳು ತಮ್ಮ ಕಾವ್ಯಗಳಲ್ಲಿ ಎಲ್ಲಿಯೂ ಉಪಯೋಗಿಸದಿದ್ದರೂ ಕನ್ನಡ ಕಾಲಕ್ಕೆ ಪುರಂದರದಾಸರು ಆದದ್ದು ಅವರ ಹೆಂಡತಿಯ ನತ್ತೇ ಮೂಲ ಕಾರಣವೆಂದು ಇತಿಹಾಸ ಹೇಳುತ್ತದೆ. ಈ ಮಹಾಪುರುಷರು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಆಗಿಹೋಗಿದ್ದಾರೆ.(೧೫೦೯-೧೫೩೦) ಅಂದರೆ ಕ್ರಿ. ಶ. ೧೬ನೆಯ ಶತಮಾನದ ಆರಂಭದಲ್ಲಿ 'ನತ್ತು' ಕನ್ನಡ ಹೆಣ್ಣುಮಕ್ಕಳಿಗೆ ಮೂಗುತಿಯಲ್ಲದೆ, ಆಗಲೇ ಮೂಗಿನ ಆಭರಣವಾಗಿ ಬಳಕೆಯಲ್ಲಿ ಬಂದುಹೋಗಿತ್ತು. ಆಗ ಹೆಣ್ಣುಮಕ್ಕಳು ಮೂಗುತಿಯ ಬದಲಾಗಿ 'ನತ್ತು' ಸೌಭಾಗ್ಯ ಚಿನ್ಹವೆಂದು ಇಟ್ಟುಕೊಳ್ಳುತ್ತಿದ್ದರೆಂದು ವಿಶದವಾಗುತ್ತದೆ. ಕನ್ನಡ ಸಾಹಿತ್ಯವನ್ನು ಪರಿಶೋಧಿಸಿ ನಿಘಂಟುವನ್ನು ಬರೆದ ಶ್ರೀ. ಕಿಟಲ್ಲರು 'ನತ್ತು' ಇದು 'ನಥ್' ಎಂಬ ಮರಾಠಿ ಶಬ್ದದಿಂದ ಬಂದಿದೆ ಎಂದು ಹೇಳಿದ್ದಾರೆ. ಆದರೆ ಮರಾಠಿಯಲ್ಲಿಯೂ 'ನಥ್' ಈ ಶಬ್ದವು ಪಾರಿಭಾಷಿಕ ಶಬ್ದವಾಗಿದೆ. ಇಜಿಪ್ತದಲ್ಲಿಯೂ ಅರಬಸ್ತಾನದಲ್ಲಿಯೂ ಪರ್ಶಿಯದಲ್ಲಿಯೂ ಈ ಶಬ್ದವಿದ್ದು ಇದು ಮುಸಲ್ಮಾನ ಹೆಣ್ಣುಮಕ್ಕಳು ಹಾಕಿಕೊಳ್ಳುವ ಮೂಗುವಸ್ತುವೆಂದಿದೆ. ಈ ಆಭರಣವನ್ನು ಕ್ರಿ. ಶ. ೧೫ನೆಯ ಶತಮಾನದಲ್ಲಿ ಮುಸಲ್ಮಾನರು ದಕ್ಷಿಣಕ್ಕೆ ತಂದರು. ದಕ್ಷಿಣದಲ್ಲಿ ಪಂಚಶಾಹಿಗಳು ರಾಜ್ಯವನ್ನು ಸ್ಥಾಪಿಸಿ ಆಳಹತ್ತಿದ ಮೇಲೆ ಈ ಅಲಂಕಾರದ ಪ್ರಭಾವವು ಜನತೆಯ ಮೇಲೆ ಆಗಿ ಮಹಾರಾಷ್ಟ್ರರೂ, ಕನ್ನಡಿಗರೂ ಉಳಿದ ದ್ರಾವಿಡ ಪಂಗಡದವರೂ ಈ ಆಭರಣವನ್ನು ಮೂಗಿನಲ್ಲಿ ಇಟ್ಟುಕೊಳ್ಳಹತ್ತಿದರು. ಮಹಾರಾಷ್ಟ್ರರಿಗೆ ಬರಬರುತ್ತ ಈ ಆಭರಣವು ಬಹಳ ಮಹತ್ವದ್ದಾಗಿ ಅದು ಇಲ್ಲದೆ ಈಗ,

---

1. Narrative of the Operations of Captins Little's Detachment. Chapter XXI. Historical and descriptive particulars of Canara and Canarese. P. P. 288. 289.
2. 'Oxford History of India' 1928.
3. 'Nose ornament' Calcutta Review, May, 1937. pp. 142-144.
4. Antiquity of Hindoo's Nose ornament called 'Nath'. Annals of the Bhandarkar O. R. I. Vol. XIX part I. V. pp. 323-332.
5. 'Dresses and ornaments of Hindu Women' J. B H U. vol II 1938. pp. 399.

ುದುವೆ ಮೊದಲಾದ ಮಂಗಲ ಕಾರ್ಯಗಳು ಜರಗುವ
ಲ್ಲ. ದಕ್ಷಿಣದಲ್ಲಿ ಉಳಿವ ಜನರು ಅದನ್ನು ಕೇವಲ
ಲಂಕಾರವೆಂದು ಇಡುತ್ತಾರೆ.

ಕನ್ನಡ ಜಾನಪದ ಸಾಹಿತ್ಯದಲ್ಲಿ 'ನತ್ತು' ಹೇರಳ
ಾಗಿ ಬಳಸಲ್ಪಟ್ಟಿದೆ. ಒಕ್ಕಲಿಗನು "ನತ್ತು ಮುಗ
ಾಣ್ಹೊದು ಮುತ್ತೈದಿ ಮೂಗೀಗೆ" ಎಂದು ಹಾಡಿ
ದ್ದಾನೆ.

ಆರ ಸೇರಿನ ಸರಿಗಿ, ಅರಗಿಲ್ಲದ ಕಟ್ಟಾಣಿ
ನತ್ತು ಬೇಡಿದರ ನಗುವಂಥ । ರಾಯರ
ನಿಂತು ಬೇಡೀನೆ ಶಿವನಲ್ಲೆ ॥ —ಗೆ-ಹಾ-ಪು-೩೭

ಂದು ಹೆಣ್ಣು ತನ್ನ ಸೌಭಾಗ್ಯವನ್ನು (ಗಂಡನನ್ನು)
ಾಡಿದೆ.

ಸರಿಮು ನಾ ಮಲಗಟಿಗೆ, ಸರಗೀಯು ಕೊಂಡ್ಯೊತ್ತಿ
ಕಾಲುಂಗರೊತ್ತಿ ಬಳಿಯೊತ್ತಿ । ರಾಯರ
ನತ್ತೊತ್ತಿ ನಿದ್ದಿ ಬಾರದ॥—ಜಾನಪದ ಸಂಭಾರ—

ಂದು ಹೆಣ್ಣಿಗೆ 'ನತ್ತು' ರಾಯರದೆಂದು ಜ್ಞಾಪಕವಾಗ
ು ರಾಯರ ನೆನಪಿಗಾಗಿ ನಿದ್ದೆ ಬಾರದೆಂದು ಉಮ್ಮಳ
ನ್ನು ಹಾಡಿದೆ. ಮದುವೆಯಾದ ಹೆಣ್ಣಿಗೆ ರಾಯರ
ನತ್ತು ಮೂಗಿಗೆ ಅಲಂಕಾರವಾಗಿದೆ ಅಲ್ಲದೆ ಗಂಡ
ಂಡರೆಂಬ ಬಂಧನವನ್ನು ಸೂಚಿಸುತ್ತದೆ. ಹಂದರದಲ್ಲಿ
ುದುಮಕ್ಕಳಿಗೆ ಎಣ್ಣ್ಯರಿಷಣವನ್ನು ಹಚ್ಚುವಾಗ

ಗಂಜೀಯು ಸಿರ್ಯುಟ್ಟು, ಗಂಧದ ಬೊಟ್ಟಿಟ್ಟು
ಪಿಲ್ಲಿಕಾಲುಂಗರಿಟ್ಟ ॥ಸೋ॥
ಮುಡಿಸಣ್ಣ ಮುತ್ತೀನ ನತ್ತನಿಟ್ಟವರೆಲ್ಲ
ಎಣ್ಣೆ ಹಚ್ಚೂನು ಬನ್ನೀರೆ ॥ಸೋ॥
ಮ-ದಂ-ವು. ೫೮

ಂದು ಹಾಡುತ್ತ ಮಂಗಲ ಕಾರ್ಯಕ್ಕೆ ನತ್ತಿಟ್ಟ
ುತ್ತೈದೆಯರನ್ನು ಮದುಮಕ್ಕಳ ಎಣ್ಣ್ಯರಿಷಣವನ್ನು
ಚ್ಚಲು ಕರೆಯುತ್ತಾರೆ. ಇಂತಹ ಶುಭಕಾರ್ಯಗಳನ್ನು
ಾಡಲು ನತ್ತಿಟ್ಟ ಮುತ್ತೈದೆಯರೇ ಹಕ್ಕುಳ್ಳವರು.
ುದುಮಕ್ಕಳ ಪ್ರೇಮವು ಇಮ್ಮಡಿಯಾಗಲೆಂದು ಕೂಡಿದ
ಣ್ಣುಮಕ್ಕಳು ಅವರಿಗೆ ಸರಸಸಲ್ಲಾಪಗಳ ಆಟಗಳ
ಡಿಸುವರು.

ಆರೂರ ರಾಜ್ಯ ನಿಮ ತಮ್ಮ ಆಳಿದರೇನ
ನತ್ತಿಗಿ ನಿಮಕಾಲ ಕೊಳೆದಲ್ಲ ॥
ನತ್ತೀಗಿ ನಿಮಕಾಲ ನಾವ್ಯಾಕ ತೊಳೆಯೂನು
ಧೊರಿಯ
ಮುತ್ತೈದಿತನಽ ಪಡದೇವ ॥—ಮ ದಂ ಪು ೫೮.

ಎಂದು ಹೆಣ್ಣಿಗೆ 'ನತ್ತು' ಮುತ್ತೈದಿತನದ ಮಾಂಗಲ್ಯದ
ಚಿಹ್ನವಾಗಿದೆ. ಶೃಂಗಾರದ ಪದಗಳನ್ನು ಹಾಡುವ
ಹಳ್ಳಿಯ ಲಾವಣಿಗಾರನು

ಗಿಡ್ಡ ಪೋರಿ, ಮಡ್ಡ ಹುರಿ ಮಕಽರ್ ।
ಕಣ್ಣ ತಿರವಿ ಚಕ್ಕಽರ್ ।
ನಿಂತಿ ನೀ ನಕ್ಕಽರ್ ।
ಉಳ್ಳತಾವ ಮುತ್ತಾ !
ವಸ್ತ್ರಕಾರಿ ಪಟ್ಟಿ, ವಾಲೀಗಂಟ ಮೂಗಿನಾಗ
ಸರಜಾಮು ನತ್ತಾ ।
ಶ್ರೀ ಸಾನಿಧಪ, ಪಧನಿಸ, ಸರಿಗಮನಾರಿ
ನಿನಗತ್ತಾ ।
ನಮ್ಮ ಕಂಡು ಹೋಗಬ್ಯಾಡ ಚದರಿ ।
ಓಡಿದ್ಹಾಂಗ ಬೆದಽರಿ ಕಾರ್ಹುಣ್ಣಿವಿ ಎತ್ತಾ ॥
ಜೀ—ಸಂ-ಪು. ೬೬

ಎಂದು 'ಸರಜಾಮು ನತ್ತ'ವನ್ನು ಧರಿಸಿದ 'ಗಿಡ್ಡ ಪೋರಿ'
ಯ ಸಿಂಗಾರವನ್ನೂ ಒಯ್ಯಾರವನ್ನೂ ಬಣ್ಣಿಸಿದ್ದಾನೆ.
ಅಲ್ಲದೆ 'ನತ್ತು' ಕನ್ನಡ ಹೆಣ್ಣುಮಕ್ಕಳ ಮಾತಾಗಿ ಒಗಟು,
ಗಾದೆ ಮೊದಲಾದವುಗಳಲ್ಲಿಯೂ ಇಳಿದು ಬಿಟ್ಟಿದೆ.
'ನತ್ತು' ಇಲ್ಲವೆಂಬ ಸತ್ತು ಹುಟ್ಟುವೆನೆಂದರೆ ಮತ್ತೆ
ಬಂದಿತೇ?' ಹೆಣ್ಣುಮಕ್ಕಳ ಕೋಲು ಪದಗಳಲ್ಲಿಯೂ
'ನತ್ತು' ಬಂದಿದೆ.

ಹತ್ತೂರ ಕೊಟ್ಟರ, ನತ್ತೀನ ಬೆಲೆಯಿಲ್ಲ
ಅತ್ತೀಯ ಮನಿಯಾಗ ಅರ್ಜುನನೊ ॥
ಕೋಲು ಕೋಲ ॥

ಹೀಗೆ ಬಂದ 'ನತ್ತು' ಕನ್ನಡ ನಾಡೊಳಗೆ 'ಯಲ್ಲವ್ವ,'
'ದ್ಯಾಮವ್ವ', 'ದುರಗವ್ವ' ಮೊದಲಾದ ಪ್ರಸಿದ್ಧ ದೇವತೆ
ಗಳ ಮೂಗನ್ನು ಅಲಂಕಾರ ಮಾಡಹತ್ತಿದೆ. ಬುನಾದಿ
ಯಿಂದಲೂ ಮೂಗುತಿಯನ್ನು ಧರಿಸುತ್ತ ಬಂದ
ಈ ದೇವತೆಗಳಿಗೆ ಈಗ ನತ್ತನ್ನು ಇಡಿಸಹತ್ತಿದ್ದಾರೆ.

ಹೀಗಿದ್ದ ಪಕ್ಷದಲ್ಲಿ ಒಕ್ಕಲಿಗನು ಈ ನತ್ತಿಗ ಮುತ್ತೈದಿಯ ಮೂಗಿಗೆ ಮುಗದಾಣವೆಂದೇಕೆ ಕರೆದಿರಬೇಕು ?

ಮಾನವನು ತನ್ನ ಪ್ರಪಂಚವು ಸುರಳಿತ ಸಾಗಲೆಂದು ಅನೇಕ ಪಶುಗಳನ್ನು ಸಾಕಿ ಸಲಹುತ್ತ ಬಂದಿದ್ದಾನೆ; ಅವುಗಳನ್ನು ತನ್ನ ಆಧೀನದಲ್ಲಿಟ್ಟುಕೊಳ್ಳಲು ಅವುಗಳ ಮೂಗಿಗೆ ಮುಗದಾಣ ಹಾಕಿದ್ದಾನೆ. ಬಹುತರವಾಗಿ ಎಲ್ಲ ಪಶುಗಳಿಗೆ ಮುಗದಾಣ ಪೋಣಿಸಿದ್ದು ಅವುಗಳ ಮೂಗಿನ ಸೆಂಬೆಯೊಳಗಿಂದ. ಒಂಟೆಯೊಂದನ್ನು ಬಿಟ್ಟು, ಉಳಿದ ಪಶುಗಳಿಗೆ ಮುಗದಾಣ ಹಾಕುವ ರೀತಿಯು ಒಂದೇ ಆಗಿರುವುದು. ಒಂಟೆಗೆ ಮಾತ್ರ ಕೇವಲ ಮುಗದಾಣ (Nose string) ವಿರದೆ ಎರಡು ಇಂಚು ತ್ರಿಜ್ಯವುಳ್ಳ ನತ್ತಿನಾಕಾರದ ಮೂಗುಬಳೆಯು ಇರುತ್ತದೆ. ಈ ಬಳೆಯನ್ನು ಒಂಟೆಯ ಮೂಗಿನಲ್ಲಿ ಹಾಕಿ ಎಡಬಲದ ಕೊಂಡಿಗಳಲ್ಲಿ ಹಗ್ಗಗಳನ್ನು ಪೋಣಿಸಿಕೊಂಡು ಉಸುಕಿನ ಭೂಮಿಯಲ್ಲಿ ಜನರು ತಮಗೆ ಬೇಕಾದಲ್ಲಿಗೆ ಹೋಗಲು ಸಾಗಾಟ ಮಾಡುತ್ತಿದ್ದರು. ಇಜಿಪ್ತ ನಾಗರೀಕತೆ (Civilization) ಯು ಅತಿ ಪ್ರಾಚೀನವೆಂದು ಇತಿಹಾಸ ಪ್ರಸಿದ್ಧವಿದೆ. ಯಂತ್ರ ಸಲಕರಣೆಗಳಿಲ್ಲದ ಅಂದಿನ ಕಾಲದಲ್ಲಿ ಮರುಭೂಮಿಯಲ್ಲಿ ನಾಗರೀಕತೆಯ ಪಟ್ಟವನ್ನು ಕಟ್ಟಿದ ಈ ದೇಶವು ತನ್ನ ವ್ಯಾಪಾರ ಮೊದಲಾದ ಸಾಗಾಟಗಳಿಗೆ ಕೇವಲ ಒಂಟೆಯ ಮೇಲೆಯೇ ಅವಲಂಬಿಸಿಕೊಂಡು ಬಂದಿರುತ್ತದೆ. ಇದಕ್ಕೆ ಸಾಕ್ಷಿಯಾಗಿ "Camel is the ship of the desert" ಒಂಟೆಯು ಮಳಲುಗಡಲಿನ ಹಡಗನೆಂದು ಪಾಶ್ಚಾತ್ಯರಲ್ಲಿ ವಾಡಿಕೆಯಿದೆ. ಯಾಂತ್ರಿಕ ಸಲಕರಣೆಗಳಿಲ್ಲದ ಈ ಮರುಭೂಮಿಯ ಹಲಕೆಲವು ಭಾಗಗಳಲ್ಲಿ ಒಂಟೆಯು ಸಾಗಾಟಕ್ಕೆ ಈಗಲೂ ಮುಖ್ಯ ವಾಹನವಾಗಿದೆ. ಇಜಿಪ್ತದಲ್ಲಿ ಒಂಟೆಗೆ ಹಾಕುವ ಈ ಮುಗದಾಣಕ್ಕೆ 'ನಾಥಿಯಾ' ಎಂದು ಕರೆಯುತ್ತಾರೆ. ಅರಬಸ್ತಾನದಲ್ಲಿ '[illegible]' ಎಂದೂ ಪರ್ಶಿಯನ್ [illegible] ಭಾಷೆಗಳಲ್ಲಿ '[illegible]' ಎಂದೂ [illegible] ಶಬ್ದಗಳಿವೆ. [illegible] ಇಂತಹ ಶಬ್ದಗಳಿಂದ ಬಂದಿರಬಹುದೇ? [illegible] ಅನು ಮಾನವಿಲ್ಲ. ಅರಬರು, ಮುಸಲ್ಮಾನರು. [illegible] [illegible] ಎಲ್ಲ ದೇಶಗಳಲ್ಲಿಯೂ 'ನತ್ತು' ಹೆಣ್ಣುಮಕ್ಕಳ ಮೂಗಿಗೆ ಅಲಂಕಾರವಾಗಿದೆ. ಅದಕ್ಕೆ ಲಗ್ನದಲ್ಲಿ ವಿಶೇಷ ಮಹತ್ವವೂ ಮಾಂಗಲ್ಯವೂ ಆ ಜನಾಂಗದಲ್ಲಿ ಬುನಾದಿಯಿಂದಲೂ ಬಂದಿದೆ. ಮುಸ್ಲಿಮ್ಮಾನ ಹೆಣ್ಣುಮಕ್ಕಳು 'ನಥ್' ವನ್ನು ಮೂಗಿನ ಸೆಂಬೆಯೊಳಗೆ ಚುಚ್ಚಿಸಿಕೊಳ್ಳುತ್ತಾರೆ. ಇದು ಪಶುಗಳನ್ನು ಮೂಗಿನ ಸೆಂಬೆಗೆ ಚುಚ್ಚಿ ಮುಗದಾಣ ಹಾಕುವ ರೀತಿಗೆ ಬಹಳ ಹೋಲುತ್ತದೆ. ಅಲ್ಲದೆ ಇಜಿಪ್ತದಲ್ಲಿ ಈ ಮುಗದಾಣಕ್ಕೆ 'ನಾಥಿಯಾ' ಎಂದೂ ಕರೆಯುತ್ತಾರೆ. ಕಾರಣ 'ನಥ್' ಈ ಶಬ್ದವು 'ನಾಥಿಯಾ' ಶಬ್ದದಿಂದಲೇ ಬಂದಿರಬೇಕು. ಅದು 'ನಥ್' ಎಂದು ರೂಪಾಂತರವನ್ನು ಹೇಗೆ ಹೊಂದಿತೆಂದು ಹೇಳಲು ಸಾಕಷ್ಟು ಆಧಾರಗಳಿಲ್ಲ.

ಇಜಿಪ್ತ ನಿವಾಸಿಗಳು ನಾಗರೀಕತೆಯನ್ನು ಹೊಂದುವ ಮುನ್ನ ಆ ಉಸುಕಿನ ಮಹಾ ಅರಣ್ಯದಲ್ಲಿ ಒಂಟೆಗೆ ಮುಗದಾಣ ಹಾಕಿಕೊಂಡು ಪ್ರವಾಸದಲ್ಲಿ ಅದನ್ನು ಮುಗದಾಣದ ಮುಖಾಂತರ ತಮ್ಮ ಸ್ವಾಧೀನದಲ್ಲಿಟ್ಟುಕೊಳ್ಳುತ್ತಿದ್ದರು. ಒಂಟೆಯು ಆ ಮರುಭೂಮಿಯನ್ನು ದಾಟಲು ಹೇಗೋ ಹಾಗೆ 'ಹೆಣ್ಣು' ಪ್ರಪಂಚವೆಂಬ ಮರುಭೂಮಿಯನ್ನು ದಾಟಲು ಎಂದು ಅವರು ಕಲ್ಪಿಸಿರಬಹುದು ಹೆಣ್ಣಿನ ನೆಲೆಯನ್ನರಿಯದ ಮನುಷ್ಯನು ಎಲ್ಲ ಜನಾಂಗಗಳಲ್ಲಿಯೂ ಹೆಣ್ಣನ್ನು ಒಂದಿಲ್ಲೊಂದು ಬಗೆಯಿಂದ ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಲು ಪ್ರಯತ್ನ ಮಾಡುತ್ತ ಬಂದಿದ್ದಾನೆ. ಕಾಡುಸ್ಥಿತಿಯಲ್ಲಿದ್ದಾಗ ಇಜಿಪ್ತದ ನಿವಾಸಿಗಳು ಒಂಟೆಯ ಮುಗದಾಣದ ಪ್ರಯೋಗವನ್ನು ಹೆಣ್ಣಿನ ಮೇಲೆ ಮಾಡಿ ಮದುವೆಯಾದಳೆಂದು ಸೂಚಿಸಲು ಮೊದಲು ಮಾಡಿರಬಹುದು. ಮುಗದಾಣ ಪ್ರಯೋಗವಾದ ಹೆಣ್ಣು, ಮದುವೆಯಾದವಳೆಂದೂ ಓರ್ವ ಪುರುಷನ ಅಂಕಿತದಲ್ಲಿರುವಳೆಂದೂ ಆ ಜನರ ಆಗಿನ ಕಲ್ಪನೆಯಿದ್ದರೂ ಇರಬಹುದು. ಬರಬರುತ್ತ ಸುಧಾರಣೆಯು ವೈದ್ಯೋರಿ ನಾಗರೀಕತೆಯು ಬೆಳೆಯುಹತ್ತಲು, ಅತಿಕ್ರೂರವೂ ಅಸಹನೀಯವೂ ಆದ ಈ ಪಿಧಾನವು ಆಭರಣ ರೂಪವನ್ನು ತಾಳಿರಬಹುದೇ ? ಹೀಗೆ 'ನಥ್' ಶಬ್ದವು ರೂಪಾಂತರ ಹೊಂದಿ ಬಳಕೆಯಲ್ಲಿ ಬಂದಿರಬಹುದು. ಆದರೂ ಪಶುವಿನಂತೆ ಹೆಣ್ಣಿನ ಮೂಗಿನ ಸೆಂಬೆಯನ್ನು ಚುಚ್ಚುವುದು ಮಾತ್ರ ಯಾವ ರೂಪಾಂತರವನ್ನೂ ಹೊಂದಲಿಲ್ಲ. ಅದು ಇಲ್ಲಿಯ ವರೆಗೆ ಹಾಗೆಯೇ ಉಳಿದಿದೆ. [ಮುಂದುವರೆಯುವದು]

ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ

(ಲೇಖಾಂಕ ೩)

ಅನುವಾದಕರು :— ಶ್ರೀ. ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣಭಾಗ, ಧಾರವಾಡ, ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಿ.ಬ್ರೇರಿಯನ್ ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

೨ ನೆಯ ಪ್ರಕರಣ

ಶಿಕ್ಷಕ

(ಹಿಂದಿನಿಂದ ಸಾಗಿಬಂದದ್ದು)

(೨) ಮಕ್ಕಳ ಕೂಡ ಇರತಕ್ಕ ನಿಜವಾದ ಧೋರಣ

ಹಳೆ ಮತ್ತು ಹೊಸ ಶಿಕ್ಷಣಕ್ರಮಗಳಲ್ಲಿಯ ಅಂತರವು ಕಲಿಸುವ ಪದ್ಧತಿಗಳಲ್ಲಿರದೆ ಧೋರಣ ಹಾಗೂ ದೃಷ್ಟಿಕೋನಗಳಲ್ಲಿದೆ. ಮಕ್ಕಳನ್ನು ಯೋಗ್ಯ ದೃಷ್ಟಿಯಿಂದ ನೋಡಿದೊಡನೆಯೇ ಹೊಸ ಶಿಕ್ಷಣವು ತಲೆದೋರುವದು. ಮಕ್ಕಳಗೂಡ ವ್ಯವಹರಿಸುವವರ ಹೃದಯವು ದಯಾಂತಃಕರುಣಗಳಿಂದ ತುಂಬಿ ತುಳುಕುತ್ತಿರಬೇಕು. ಮಾನವೀಯತೆಯ ಮಹತ್ವವನ್ನು ಅರಿತುಕೊಂಡಿರಬೇಕು. ಶಾಲೆಯು ಮಗು ಪ್ರಧಾನವಿದ್ದು ಶಾಲೆಯ ಪ್ರತಿಯೊಂದ ಕಾರ್ಯಕ್ರಮದಲ್ಲಿ ಮಗುವಿನಹಿತ-ಸುಖ-ವಿಕಾಸಗಳಿಗೆ ಅಗ್ರಸ್ಥಾನವಿರಬೇಕು. ಈ ಮಾತನ್ನೇ ಟ್ರೇನಿಂಗ ಸಂಸ್ಥೆಗಳೂ ಲಘು ತರಬೇತಿ ವರ್ಗ (Refresher Courses) ಗಳೂ ಶಿಕ್ಷಕ ವಿದ್ಯಾರ್ಥಿಗಳಿಗೆ.ಒತ್ತಿ ಒತ್ತಿ ಕಲಿಸಬೇಕು. ಶಾಲೆಯ ಇಮಾರತು. ಉಪಕರಣ, ಕಲಿಸುವ ಪದ್ಧತಿ, ಅಭ್ಯಾಸ ಪತ್ರಿಕೆ, ವಿಷಯಗಳು, ಇವೆಲ್ಲವುಗಳಿಗಿಂತ ಮಗುವಿಗೆ ಹೆಚ್ಚಿನ ಪ್ರಾಧಾನ್ಯತೆಯಿದೆಯೆಂಬ ತತ್ತ್ವವನ್ನು ಪ್ರತಿಯೊಬ್ಬ ಶಿಕ್ಷಕನು ನಂಬಿರಬೇಕು. ಈ ಧೋರಣವಿಲ್ಲದ ಶಿಕ್ಷಕನು ಹಳೆಯ ಶಿಕ್ಷಣಕ್ರಮದಂತೆ ಮಗುವಿಗೆ ಪ್ರಾಮುಖ್ಯತೆಯನ್ನು ಕೊಡದೆ ವಿಷಯಗಳಿಗೆ ಪ್ರಾಮುಖ್ಯತೆಯನ್ನು ಕೊಡಹತ್ತುವನು. ವರ್ಗದಲ್ಲಿ ಎಲ್ಲ ಮಕ್ಕಳು ಒಂದೇ ಯೋಗ್ಯತೆಯವರಿರದೆ ಹಲವರು ತೀಕ್ಷ್ಣಮತಿಗಳು ಹಲವರು ಮಂದಮತಿಗಳು ಹಲವರು ಸಾದಾ ಮತಿಗಳೂ ಇರುವದುಂಟೆಂಬುದನ್ನು ಶಿಕ್ಷಕನು ಕಂಡುಹಿಡಿಯಬೇಕು. ತಮಗೆ ಒಳ್ಳೇ ಉಪಯುಕ್ತವಾದೊಂದು ಚಟುವಟಿಕೆ ಇಲ್ಲವೆ ಕೆಲಸದಲ್ಲಿ ತೊಡಗಿದಾಗ ಅವರೆಲ್ಲರು ಮನಸ್ಸಿಗೆ ಹಚ್ಚಿಕೊಂಡು ಕಲಿಯುವರೆಂಬುದನ್ನೂ, ಅದುವೇ ಪರಿಣಾಮಕಾರಿಯಾದ ಶಿಕ್ಷಣವೆಂದೂ ಶಿಕ್ಷಕನು ಮನವರಿಕೆ ಮಾಡಿಕೊಳ್ಳಬೇಕು.

(೩) ಹಳ್ಳಿಗಾಡಿನ ಪರಂಪರೆಗೆ ಮನ್ನಣೆ.

ಹಳ್ಳಿಗಾಡದಲ್ಲಿಯ ಯೋಗ್ಯ ಸಂಸ್ಕೃತಿ ಹಾಗೂ ಪರಂಪರೆಗಳಿಗೆ ಮನ್ನಣೆಯನ್ನೀಯುವ ಧೋರಣವು ಅಲ್ಲಿ

ಕೆಲಸ ಮಾಡುವ ಶಿಕ್ಷಕನಲ್ಲಿರುವದು ಇಷ್ಟವಿದೆ. ಅಲ್ಲಿಯ ಜೀವನದ ಸೊಬಗನ್ನೂ ಜನರ ವೈಶಿಷ್ಟ್ಯಗಳನ್ನೂ ಅಳವಾಗಿ ತಿಳಕೊಂಡಂತಹ ಶಿಕ್ಷಕರು ಸಿಗುವದು ವಿರಳ. ಅಲ್ಲಿಯ ಪರಿಸ್ಥಿತಿಗೆ ಅಂಟಿಕೊಂಡಿರುವ ಕುಂದು-ಕೊರತೆಗಳನ್ನೂ ಶಹರಗಳಲ್ಲಿ ಕಂಡು ಬರುವ ಸೌಕರ್ಯಗಳ ಅಭಾವವನ್ನೂ ಎತ್ತಿ ಆಡುವವರೇ ಬಹಳ. ಅಲ್ಲಿ ಕುಂದು-ಕೊರತೆಗಳೂ ತೊಡಕುಗಳೂ ಇರುವದು ನಿಜ. ಅವುಗಳನ್ನು ನಿವಾರಿಸಿ ಎಲ್ಲ ತರಹದ ಸೌಲಭ್ಯಗಳನ್ನು ಒದಗಿಸಿಕೊಡುವದು ರಾಜ್ಯಭಾರವನ್ನು ಹೊತ್ತವರ ಭಾರ. ಅಲ್ಲಿ ಯಾವ ತರಹದ ಸೌಕರ್ಯವು ಇಲ್ಲವೆಂದು ತಿಳಿದು ಜೋಲು ಮೋರೆ ಹಾಕಿಕೊಂಡು ನಿರುತ್ಸಾಹದಿಂದ ಅಲ್ಲಿ ಕೆಲಸ ಮಾಡಲು ಹೋಗುವ ಶಿಕ್ಷಕನು ತನ್ನ ವೃತ್ತಿಯಲ್ಲಿಯೂ ಯಶವನ್ನು ಹೊಂದಲಾರ ಹಾಗೂ ಅಲ್ಲಿಯ ಸಮಾಜಕ್ಕೂ ಹೊಂದಿಕೊಂಡು ಹೋಗಲಾರ. ತಮ್ಮ ಹಳ್ಳಿಯ ಬಗೆಗೂ ಹಾಗೂ ತಮ್ಮ ಸಾಲೆಯ ಬಗೆಗೂ ಕಳಕಳಿ-ನಿಷ್ಠೆಗಳು ಆತನಲ್ಲಿಲ್ಲವೆಂದು ಮನವರಿಕೆಯಾದ ಮೇಲೆ ಹಳ್ಳಿಗರು ಆವನನ್ನು ಸಂಶಯ ದೃಷ್ಟಿಯಿಂದ ನೋಡಹತ್ತುವರು.

ಹಳ್ಳಿಯ ಪರಂಪರೆಯ ಮಹತ್ವವಾದೊಂದು ಸಂಗತಿಯೆಂದರೆ ನಮ್ಮ ರಾಷ್ಟ್ರದ ಆರ್ಥಿಕ ರಂಗದಲ್ಲಿ ಒಕ್ಕಲಿಗನು ಆಡುವ ಪಾತ್ರ. ಸ್ವಾತಂತ್ರ್ಯವು ನಮಗೆ ಪ್ರಾಪ್ತವಾದ ನಂತರ ರಾಷ್ಟ್ರದ ಲಕ್ಷ್ಯವು ಒಕ್ಕಲಿಗರ ಸ್ಥಿತಿಯನ್ನು ಸುಧಾರಿಸುವದರತ್ತ ದಿನ ದಿನಕ್ಕೆ ಹೆಚ್ಚುತ್ತಿದೆ. ಅವರು ನಮ್ಮ ಆಹಾರವನ್ನು ಬೆಳೆಯುತ್ತಾರೆಂಬ ಕಾರಣದಿಂದ ಮಾತ್ರವಲ್ಲ, ಆದರೆ, ಅವರು ಬಹುಸಂಖ್ಯಾಕರಿರುವದರಿಂದ ಪ್ರಜಾಪ್ರಭುತ್ವದ ತತ್ತ್ವದಂತೆ ಒಂದಿಲ್ಲೊಂದು ದಿನ ರಾಜ್ಯಭಾರದ ಹೊರೆ ಅವರ ಹೆಗಲಿಗೆ ಬೀಳುವ ಸಂಭವವಿದೆ. ಆದುದರಿಂದ, ಒಕ್ಕಲಿಗರಿಗೆ ಸಾವಿರ್ವಿದು ಸಾಮೂಹಿಕವಾಗಿ ಮುನ್ನಡೆ ಕೊಡಲು ಕಲಿಯಬೇಕು. ಶಿಕ್ಷಕನು ಈ ಧೋರಣವನ್ನು ಕೈಕೊಂಡರೆ, ಆತನನ್ನು ನೋಡಿ ಸಾಲೆಯಲ್ಲಿಯ ಮಕ್ಕಳೂ ಊರಲ್ಲಿಯ ಜನರೂ ಅನುಕರಣ ಮಾಡುವದರಲ್ಲಿ ಸಂದೇಹವಿಲ್ಲ.

ಗಣಿತ, ಶಾಸ್ತ್ರೀಯ ವಿಷಯ, ಸಾಮಾಜಿಕ ವಿಷಯಗಳು, ಭೂಗೋಲ, ಸಂಗೀತ, ಉದ್ಯೋಗಗಳು, ಇವುಗಳ ಬಗೆಗೆ ಮಕ್ಕಳಿಗೆ ಕಲಿಸಲು ಹಳ್ಳಿಗಾಡದ ನೈಸರ್ಗಿಕ ಪರಿಸ್ಥಿತಿಯು ಶೈಕ್ಷಣಿಕ ದೃಷ್ಟಿಯಿಂದ ಹಿತಕರವಾಗಿದೆ. ಪೌರನೀತಿಗೆ ಸಂಬಂಧಿಸಿದ ಹಳ್ಳಿಯ ಆಡಳಿತೆಯ ಬಗೆಗೆ ಗೌಡ, ಶಾನುಭೋಗ, ವಾಲೀಕಾರ, ಪಂಚಾಯತಿ, ಸರಪಂಚ, ಮೊದಲಾದವರು ಕೆಲಸ ಮಾಡುತ್ತಿದ್ದಾಗ ಅವರನ್ನು ಸಾಕ್ಷಾತ್ತಾಗಿ ತೋರಿಸಿ ಅವರವರ ಪರಸ್ಪರ ಸಂಬಂಧವನ್ನು ತಿಳಿಸಿಕೊಡಲು ಬರುತ್ತಿದೆ. ಶಿಕ್ಷಕನಿಗೆ ಹಳ್ಳಿಯ ಜೀವನದ ಬಗೆಗೆ ಆಸ್ಥೆಯಿದ್ದರೆ, ಆವನ ಕೈಯಲ್ಲಿ ಕಲಿಯುವ ಮಕ್ಕಳೂ ಆಸ್ಥೆ ವಹಿಸುವರು.

(೪) ವಿಷಯ ಸಂಗ್ರಹದ ವ್ಯಾಪಕತೆ.

ಹಳ್ಳಿಯಲ್ಲಿ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನು ಎಲ್ಲ ಬಲ್ಲವನಿರಬೇಕು. ಮಕ್ಕಳಿಗೆ ಎಲ್ಲ ವಿಷಯಗಳನ್ನು ಕಲಿಸುವದಿರುವದರಿಂದ, ಶೈಕ್ಷಣಿಕ ಕ್ಷೇತ್ರದಲ್ಲಿ ಉಪಯೋಗ ಬೀಳುವ ಎಲ್ಲ ವಿಷಯಗಳ ಜ್ಞಾನವು ಆತನಿಗಿರಬೇಕಾಗುವದು. ಆತನ ಮೇಲಿರತಕ್ಕ ಶಿಕ್ಷಣದ ಹೊಣೆಯು ನಿಜವಾಗಿ ಭಾರವಾದದ್ದಿದೆ. ಮೇಲಾಗಿ ತಮಗೆ ತಿಳಿಯದ ಪ್ರಶ್ನೆಗಳ ಇಲ್ಲವೆ ಸಮಸ್ಯೆಗಳ ಬಗೆಗೆ ಆ ಊರ ಜನರೂ ಸಲಹೆ-ಉಪದೇಶಗಳಿಗಾಗಿ ಆತನೆಡೆಗೆ ಬರುವದುಂಟು. ಆದುದರಿಂದ, ಸರ್ವಜ್ಞನಾಗಿರುವದು ಆತನಿಗೆ ಶಕ್ಯವಿಲ್ಲವಾದರೂ ಅಲ್ಲಿಯ ಪರಿಸ್ಥಿತಿಯ ಬೇಡಿಕೆಗಳಿಗನುಗುಣವಾಗುವಂತೆ ಶಕ್ಯವಿದ್ದಷ್ಟೆಲ್ಲ ವಿಷಯಗಳ ಜ್ಞಾನವನ್ನು ಮಾಡಿಕೊಂಡು ಪ್ರಗತಿಪರನಾಗಿರುವದೊಳಿತು.

(೫) ನೈಸರ್ಗಿಕ ಪರಿಸ್ಥಿತಿಯ ಸಾಕಷ್ಟು ಜ್ಞಾನ.

ಹಳ್ಳಿಯ ಸಾಲೆಯು ನಿಸರ್ಗದ ಮಧ್ಯದಲ್ಲಿರುವದರಿಂದ ಅಲ್ಲಿ ಕೆಲಸ ಮಾಡುವ ಶಿಕ್ಷಕನು ನಿಸರ್ಗಕ್ಕೆ ಸಂಬಂಧಿಸಿ ಕಲಿಸಬೇಕು. ಮಕ್ಕಳು ನಿಸರ್ಗವನ್ನು ದಿನಾಲು ನೋಡುತ್ತಿರುವದರಿಂದ ಆಗಾಗ ಅದರಲ್ಲಾಗುವ ಬದಲಾವಣೆಗಳು ಅವರಿಗೆ ಗೊತ್ತಿರುತ್ತವೆ. ಆದರೆ ಆ ಬದಲಾವಣೆಗಳು ಹೇಗೆ ಆಗುತ್ತವೆ, ಏಕೆ ಆಗುತ್ತವೆ, ಅವುಗಳ ಕಾರಣಗಳೇನು, ಪರಿಣಾಮಗಳೇನು, ಮೊದಲಾದವುಗಳ ಬಗೆಗೆ ಸುಸಂಬದ್ಧವಾದ ಜ್ಞಾನವಿರುವದಿಲ್ಲ. ಆ

ಬದಲಾವಣೆಗಳ ಶಾಸ್ತ್ರೀಯ ಕಾರಣಗಳನ್ನೂ ಪರಿಣಾಮಗಳನ್ನೂ ತಿಳುಹಿಸಿಕೊಡುವದು ಶಿಕ್ಷಕನ ಕರ್ತ್ಯವ್ಯವು. ಸಸ್ಯಾದಿಗಳು ಮತ್ತು ಪ್ರಾಣಿಗಳು, ಹಣ್ಣು-ಹಂಪಲಗಳು, ಪಕ್ಷಿಗಳು, ಋತುಮಾನ-ಹವೆಗಳಲ್ಲಾಗುವ ಹೆಚ್ಚು ಕಡಿಮೆ ಗಳು, ನೀರಿನ ಪೂರೈಕೆ, ಮಣ್ಣು ಮುಂತಾದವುಗಳನ್ನು ಕುರಿತು ಶಾಸ್ತ್ರೀಯ ಜ್ಞಾನವನ್ನು ಮಕ್ಕಳಿಗೆ ಮಾಡಿಕೊಟ್ಟು ನಿಸರ್ಗದಲ್ಲಿ ಹುದುಗಿದ್ದ ಗುಪ್ತ ಸಂಗತಿಗಳನ್ನು ತಿಳಕೊಳ್ಳಲು ಆತುರತೆಯನ್ನು ಅವರಲ್ಲಿ ಹುಟ್ಟಿಸಬೇಕು. ಆ ಪ್ರಕಾರ ಅವರು ಗಳಿಸಿದ ಅನುಭವಗಳನ್ನು ಓದು, ಬರಹ, ಗಣಿತ, ಮೊದಲಾದವುಗಳನ್ನು ಕಲಿಸುವಾಗ ಶಿಕ್ಷಕನು ಉಪಯೋಗಿಸಿಕೊಳ್ಳಬೇಕು.

(೬) ಮಗುವಿನ ವಿಕಾಸದ ಜ್ಞಾನ.

ಮಕ್ಕಳು ಹೇಗೆ ಕಲಿಯುವರು ಮತ್ತು ಬೆಳೆಯುವರೆಂಬುದನ್ನು ಕುರಿತು ಸರಿಯಾದ ಜ್ಞಾನವು ಶಿಕ್ಷಕನಿಗಿರಬೇಕು. ಅವರಗೂಡ ನಿಕಟ ಸಂಬಂಧವನ್ನಿಟ್ಟುಕೊಂಡು ಅವರ ಬೇಡಿಕೆಗಳಾವವು, ಹಿತಗಳಾವವು, ಯೋಗ್ಯತೆಯೆಷ್ಟಿದೆಯೆಂಬುದನ್ನೆಲ್ಲ ನಿರ್ಧರಿಸಿಕೊಳ್ಳಬೇಕು. ಅವರ ಹುಟ್ಟು ಸ್ವಭಾವಗಳಾವವು, ಅವರಲ್ಲಿ ಕಂಡು ಬರುವ ವೈಯಕ್ತಿಕ ಹೆಚ್ಚು-ಕಡಿಮೆಗಳಾವವು, ಅವರ ಬೌದ್ಧಿಕ, ಶಾರೀರಿಕ ಹಾಗೂ ಭಾವಾತ್ಮಕ ವಿಕಾಸದ ಮುಖ್ಯ ತತ್ತ್ವಗಳಾವವು ಎಂಬುದರ ಅರಿವು ಸಾಕಷ್ಟಿರಬೇಕು. ಆ ಜ್ಞಾನದ ಬಲದಿಂದ ಶಿಕ್ಷಕನು ತನ್ನ ಶಿಕ್ಷಣದ ಕೆಲಸವನ್ನು ಹಮ್ಮಿಕೊಳ್ಳಬೇಕು. ಮಕ್ಕಳ ಮೇಲೆ ಪ್ರೇಮಾಂತಃಕರುಣಗಳನ್ನಿಟ್ಟುಕೊಂಡು ಅವರಲ್ಲಿ ಬೆರೆತು ಒಂದಾಗಿ ನಡಕೊಂಡರೆ ಮೇಲೆ ಹೇಳಿದವುಗಳೆಲ್ಲ ಸಾಧಿಸುತ್ತವೆ. ಅವುಗಳನ್ನೆಲ್ಲ ಒಮ್ಮೆ ಸಾಧಿಸಿಕೊಂಡರೆ, ಆತನ ಪ್ರಭಾವವೂ ವರ್ಚಸ್ಸೂ ಮಕ್ಕಳ ಮೇಲೆ ಬೀರುವದು ಅಪ್ಪಿಷ್ಟಲ್ಲ.

ಶಿಕ್ಷಕನು ಒಂಟಿಗನಾಗಿ ಕೆಲಸ ಮಾಡುವ ಹಳ್ಳಿಯ ಸಾಲೆಯಲ್ಲಿ ಮಕ್ಕಳು ಬೇರೆ ಬೇರೆ ವಯಸ್ಸಿನವರಿರುವದುಂಟು. ಹಲವರು ಐದಾರು ಇಲ್ಲವೆ ಏಳೆಂಟು ವರುಷದವರಾದಾಗ ಸಾಲೆಯನ್ನು ಸೇರುವದುಂಟು; ಹಲವರು ವರುಷದಲ್ಲಿ ಬೇಕಾದಾವಾಗ ಬಂದು ಸೇರುವದುಂಟು. ಅಂತಹ ಮಕ್ಕಳಿಗೆಲ್ಲ ವೈಯಕ್ತಿಕವಾಗಿ ಲಕ್ಷ್ಯಕೊಟ್ಟು ಅವರಿಗೆ ಓದು-ಬರಹಗಳನ್ನು ಕಲಿಸುತ್ತ ಹೋಗಬೇಕಾಗುತ್ತದೆ. ಹೊಸದಾಗಿ ಬಂದು ಸೇರಿದ ಚಿಕ್ಕ ಮಕ್ಕಳಿಗೆ ಎಲ್ಲಕ್ಕೂ ಮೊದಲು ಕೈಕೆಲಸ ಮಾಡಲು ಹಾಗೂ ಸ್ಪಷ್ಟ ಮಾತಾಡಲು ಸಾಕಷ್ಟು ರೂಢಿ ಮಾಡಿಸಿ ಆ ಮೇಲೆ ಓದಲು ಕಲಿಸಬೇಕು. ಉಸುಕು, ಮಣ್ಣು ಅರಲು, ಹುಲ್ಲು, ದಂಟು, ಮೊದಲಾದವುಗಳಲ್ಲಿ ಕೈಕೆಲಸ ಮಾಡಿ ಚಿಕ್ಕ ಮಕ್ಕಳು ಅನುಭವ ಪಡೆಯಬೇಕು. ಅದರಿಂದ ಮಕ್ಕಳ ಹಸ್ತ ಕೌಶಲ್ಯವು ಬೆಳೆಯುವದಲ್ಲದೆ ಸಾಲೆಯ ಬಗೆಗೆ ಅವರಲ್ಲಿ ಅಭಿರುಚಿ ಆಸಕ್ತಿಗಳು ಚಿಗುರುವದುಂಟು.

(೭) ಹೊಸ ವಿಧಾನಗಳಲ್ಲಿ ಪ್ರಾವೀಣ್ಯತೆ.

ಹಾಜರಿ ತಕ್ಕೊಳ್ಳುವದು, ರಜಿಸ್ಟರ ಹಾಗೂ ಕಾಗದ ಪತ್ರಗಳನ್ನು ಸರಿಯಾಗಿಡುವದು, ಮಕ್ಕಳು ಮುಖಪಾಠ ಮಾಡಿದ್ದನ್ನು ಒಪ್ಪಿಸಿಕೊಳ್ಳುವದು, ಶುದ್ಧ ಬರಹ, ಪರೀಕ್ಷೆಗಳು, ಮುಂತಾದ ತನ್ನ ನಿತ್ಯದ ವ್ಯವಹಾರಗಳನ್ನು ಬಲ್ಲವನಿರಬೇಕು. ಇವಲ್ಲದೆ, ಕಲಿಸುವ ಹೊಸ ವಿಧಾನಗಳು ವಿಶೇಷತಃ ಸಣ್ಣ ಹಳ್ಳಿಯ ಸಾಲೆಗೆ ಅನ್ವಯಿಸುವ ಪದ್ಧತಿಗಳು ಅವನಿಗೆ ಗೊತ್ತಿರಬೇಕು. ದೊಡ್ಡ ಸಾಲೆಗಳಲ್ಲಿ ಕಂಡುಬರುವ ಕಲಿಸುವ ಪದ್ಧತಿಗಳನ್ನೂ ಯುಕ್ತಿ-ಪ್ರಯುಕ್ತಿಗಳನ್ನೂ ಅರಿತುಕೊಂಡು ತನ್ನ ಚಿಕ್ಕ ಸಾಲೆಯ ಬೇಡಿಕೆಗಳಿಗನುಗುಣವಾಗುವಂತೆ ಪರಿವರ್ತಿಸಲು ಶಕ್ತನಾಗಿರಬೇಕು. ಅವರಿಗೆ ಉಪಯುಕ್ತವಾಗುವ ಉದಾಹರಣೆಗಳನ್ನು ಕೆಳಗೆ ಕೊಡಲಾಗಿದೆ :—

(ಅ) ಗ್ರುಪ್ ಶಿಕ್ಷಕರ ಸಮ್ಮೇಲನಗಳನ್ನು ಕರೆದು ಚರ್ಚೆಗಳಲ್ಲಿ ಭಾಗ ವಹಿಸಬೇಕು. ಅವಶ್ಯವಿದ್ದರೆ, ಅವುಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ಕೆಲಸ ಮಾಡಬೇಕು. ಈ ಧೋರಣವನ್ನು ಕೊನೆಯವರೆಗೆ ಸಾಗಿಸಿಕೊಂಡು ಹೋಗಬೇಕು.

(ಆ) ಬೇರೆ ಬೇರೆ ವರ್ಗಗಳ ಮಕ್ಕಳ ಗುಂಪೊಂದನ್ನು ಆವುದಾದರೊಂದು ಉದ್ದೇಶದ ಸಲುವಾಗಿ ಒಂದು ವರ್ಗದಂತೆ ನಡೆಯಿಸಿಕೊಂಡು ಹೋಗುವ ಯೋಗ್ಯತೆಯುವನಿರಬೇಕು.

(ಇ) ಆದಷ್ಟು ಸ್ವತಂತ್ರವಾಗಿ ಕಲಿಯಲು ಮಕ್ಕಳಿಗೆ ಪ್ರೋತ್ಸಾಹಿಸಬೇಕು; ತನ್ನ ಸಹಾಯ ಅಥವಾ ಮಾರ್ಗದರ್ಶನವಿಲ್ಲದೆ ಕಲಿಯುವಂತಹದೊಂದು ಯೋಜನೆ ಇಲ್ಲವೆ ಚಟುವಟಿಕೆಯಲ್ಲಿ ಮಕ್ಕಳನ್ನು ತೊಡಗಿಸಬೇಕು.

(ಈ) ಆವ ಸಮಯದಲ್ಲಿ ಮಕ್ಕಳಿಗೆ ವೈಯಕ್ತಿಕವಾಗಿ ಕಲಿಸುವದು ಅವಶ್ಯವಿದೆಯೆಂಬುದನ್ನು ಕಂಡುಹಿಡಿದು, ಆ ಸಮಯಕ್ಕೆ ಅದನ್ನು ಮಾಡಿಯೇ ತೀರಬೇಕು.

(ಲ) **ಹಸ್ತಕೌಶಲ್ಯ.**

ಪ್ರಗತಿಪರ ಸಾಲೆಯ ಮುಖ್ಯವಾದೊಂದು ಲಕ್ಷಣವೆಂದರೆ ಆ ಸಾಲೆಯ ಮಕ್ಕಳು ಕೈಕೆಲಸದ ಚಟುವಟಿಕೆಗಳಲ್ಲಿ ಭಾಗವಹಿಸುವದು. ಆಧುನಿಕ ಶಿಕ್ಷಣವು ತಲೆ ಮತ್ತು ಕೈ ಇವೆರಡನ್ನೂ ವಿಕಾಸಗೊಳಿಸಲು ಹವಣಿಸುತ್ತಿದೆ. ಯಾಕಂದರೆ, ಹಸ್ತಕೌಶಲ್ಯವು ವ್ಯಕ್ತಿತ್ವದ ವಿಕಾಸಕ್ಕೆ ಸಹಾಯಕವಿದೆ. ನೂಲುವದು, ಆಟಿಕೆಯ ಸಾಮಾನುಗಳನ್ನು ಮಾಡುವದು, ತೋಟಗಾರಿಕೆ, ಕೆತ್ತಿಗೆಯ ಕೆಲಸ, ಮುಂತಾದವುಗಳಲ್ಲಿ ಮಕ್ಕಳನ್ನು ತೊಡಗಿಸಿ ಅವುಗಳಲ್ಲಿ ಅವರು ನಿಪುಣತೆಯನ್ನು ಹೊಂದುವಂತೆ ಸಣ್ಣ ಹಳ್ಳಿಯ ಸಾಲೆಯ ಶಿಕ್ಷಕನು ಪ್ರಯತ್ನಿಸಬೇಕು. ನೇಯುವದು, ಬಡಿಗತನ, ಚಿತ್ರಕಲೆ, ಇಲ್ಲವೆ ಮತ್ತಾವದಾದರೊಂದು ಕೈಕೆಲಸದಲ್ಲಿ ಆಧುನಿಕ ಶಿಕ್ಷಕನು ಯೋಗ್ಯತೆಯನ್ನು ಪಡೆದವನಿರಬೇಕು. ಆ ಯೋಗ್ಯತೆಯನ್ನು ಪಡೆಯಲು ಶಿಕ್ಷಕನಿಗೆ ದೀರ್ಘಾವಧಿಯ ತರಬೇತಿಯನ್ನು ಕೊಡಬೇಕಾಗುವದು. ಸರಕಾರವು ಅದರ ವ್ಯವಸ್ಥೆಯನ್ನು ಮಾಡಲಿದೆಯಾದರೂ, ಲಘು ತರಬೇತಿ ವರ್ಗಗಳಲ್ಲಿ ಆ ದಿಶೆಯಲ್ಲಿ ಶಕ್ಯವಿದ್ದಷ್ಟು ಕೆಲಸ ಮಾಡಲು ಮರೆಯಬಾರದು. ಒಟ್ಟಿನಲ್ಲಿ, ಹಸ್ತಕೌಶಲ್ಯದ ಉಪಯೋಗವನ್ನು ಶಿಕ್ಷಣದಲ್ಲಿ ಹೇಗೆ ಮಾಡಿಕೊಳ್ಳಬೇಕೆಂಬ ವಿಧಾನಗಳನ್ನರಿಯದ ಶಿಕ್ಷಕನು ಸರಕಾರದವರು ಹೊಸದಾಗಿ ಹೊರಡಿಸಬೇಕೆಂದಿರುವ ಸಾಲೆಗಳಲ್ಲಿ ಆವ ಕಾರಣದಿಂದಲೂ ಇರಕೂಡದು.

(ಮುಂದುವರೆಯುವದು

× × ×

—"ನಮ್ಮಲ್ಲಿ ಇಂದು ದುಡಿದು ಹಣ ಗಳಿಸುವ ಪ್ರಯೋಜನದೃಷ್ಟಿ ಮಾತ್ರ ಬೆಳೆಯುತ್ತಲಿದೆ. ಇದು ಸಮಾಜಕ್ಕೆ ಅಷ್ಟು ಹಿತಕರವಲ್ಲ. ಸೌಂದರ್ಯ ದೃಷ್ಟಿ ಪ್ರತಿಯೊಬ್ಬರಲ್ಲಿ ಬೆಳೆಯುವದೂ ಕಲೆಗಳ ಬಗ್ಗೆ ಪ್ರೇಮಾದರಗಳು ಹೆಚ್ಚುವದೂ ಅವಶ್ಯವಿದೆ. ಜನತೆಯ ಮನಸ್ಸು-ಹೃದಯ ಇಂಥ ದೃಷ್ಟಿ ಬೆಳೆದರೆ ಪರಿಪಕ್ವವಾಗುವವು. ನಮ್ಮ ಶಿಕ್ಷಕರು ಮಕ್ಕಳಲ್ಲಿ ಈ ದೃಷ್ಟಿ ಬೆಳೆಯುವಂತೆ ಅವಿರತ ಯತ್ನಿಸಬೇಕು."

—ಮಾನ್ಯ ಶ್ರೀ. ಬಿ. ಡಿ. ಜತ್ತಿ

×××

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ-

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦**, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕ, ೩೪೩, ಕಸಬಾ ಪೇಟೆ, ಪುಣೆ.

ಸಮಾಜ ವಿಕಾಸ ಕೇಂದ್ರಗಳು

COMMUNITY LIFE IN SCHOOLS

ಎಂಬ ಚಿಕ್ಕ ಹೊತ್ತಿಗೆಯ ಆಧಾರದಿಂದ ಬರೆದುದು

ಲೇಖಕರು: **ಶ್ರೀ ಫ. ಚ. ಉಣಕಲ್ಲ**, ಬಿ. ಎ. ಬಿ ಟಿ, ಡಿ. ಬಿ. ಇ., ಡಿ. ಪಿ. ಇಡಿ. ಧಾರವಾಡ

(ಭಾಗ ೧)

ಸಾಲೆಯನ್ನು ಸಮಾಜ ವಿಕಾಸ ಕೇಂದ್ರವನ್ನಾಗಿ ಪರಿವರ್ತಿಸಿ ಸಾಲೆಯ ಚಟುವಟಿಕೆಗಳನ್ನಾಗಲಿ ಪ್ರಯೋಗಗಳನ್ನಾಗಲಿ ಅದಕ್ಕನುಗುಣವಾಗಿ ಸಂಘಟಿಸಬೇಕು. ಸಾಲೆಯಲ್ಲಿ ನಡೆಯುವ ಚಟುವಟಿಕೆಗಳ ಅಥವಾ ಪ್ರಯೋಗಗಳ ಮುಖಾಂತರ ಮಗುವು ತನ್ನ ಆಸೆ, ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಬೇಕಾದರೆ ಅಥವಾ ತನ್ನ ವಿಕಾಸವನ್ನು ಮಾಡಿಕೊಳ್ಳಬೇಕಾದರೆ ಸಮಾಜದೊಡನೆ ಸಹಕರಿಸಲೇ ಬೇಕಾಗುವದು ಅಂದರೆ ಸುತ್ತಲಿನ ಪರಿಸ್ಥಿತಿಗೆ ಹೊಂದಿಕೊಂಡು ನಡೆಯಲು ಕಲಿಯಬೇಕಾಗುವದು. ವೃಕ್ಷವು ತನ್ನ ಸುತ್ತಲಿನ ವಾತಾವರಣದಿಂದ (Environment) ಆಹಾರವನ್ನು ಸ್ವಭಾವಿಕವಾಗಿ ಪಡೆಯುವಂತೆ (Assimilate) ಮಗುವು ಸಮಾಜದಿಂದ ಪೋಷಣೆ ಪಡೆಯುವನು. ವ್ಯಕ್ತಿಯು ಸಮಾಜದ ಒಂದು ಅಂಗ, ಸಮಾಜ ವಿಕಾಸದಲ್ಲಿ ವ್ಯಕ್ತಿಯ ವಿಕಾಸವು-ತಿಲದ ಮರೆಯ ತೈಲದಂತೆ ಅಡಗಿಕೊಂಡಿದೆ ಸಮಾಜವು ಬಲಪಡಬೇಕಾದರೆ ವ್ಯಕ್ತಿಯ ದೈಹಿಕ, ಬೌದ್ಧಿಕ ಹಾಗು ಆಧ್ಯಾತ್ಮಿಕ ವಿಕಾಸವಾಗಬೇಕಾದುದು ಅತ್ಯಗತ್ಯ. ವ್ಯಕ್ತಿ-ಸಮಾಜದ ಹಿತಾಹಿತಗಳು ಭಿನ್ನವಾಗಿರದೆ ಅವು ಪೋಷಕವಾಗಿವೆ. " ಶೋಷಣರಹಿತ ಸಮಾಜ ರಚನೆ ಹಾಗು ಪರಿಪೂರ್ಣವಾದ ವ್ಯಕ್ತಿಯ ವಿಕಾಸ " ಅಥವಾ " ನೀತಿಯುತವಾದ ಸಮಾಜದೊಡನೆ ನೀತಿವಂತನಾದ ವ್ಯಕ್ತಿಯನ್ನು ತರಬೇತುಗೊಳಿಸುವದು " — ಇದುವೇ ರಾಷ್ಟ್ರೀಯ ಶಿಕ್ಷಣ (ನಯಿತಾಲೀಮು) ದ ಅಂತಿಮ ಗುರಿ. ಆದುದರಿಂದ ಸಮಾಜ— ಮಗುವಿನಲ್ಲಿ ನಿಕಟ ಸಂಬಂಧವನ್ನು ಬೆಳೆಯಿಸುವದೇ ಶಿಕ್ಷಕನ ಧ್ಯೇಯವಾಗಿರಬೇಕು. ಹಾಗು ಮಗುವು ಕೇವಲ ಒಳ್ಳೇ ವ್ಯಕ್ತಿಯಾಗಿ ಬೆಳೆಯದೆ ತನ್ನ ಸುತ್ತಲಿನ ಪರಿಸ್ಥಿತಿಯ ಸಂಗಡ ಹೋರಾಡಿ ಅದಕ್ಕನುಗುಣವಾಗಿ ಹೊಂದಿಕೊಂಡು ಒಳ್ಳೇ ಸಮಾಜ ಜೀವಿಯಾಗಿ ಬಾಳಿ ಬೆಳೆಯುವಂತೆ ನೋಡಿಕೊಳ್ಳುವದು ಶಿಕ್ಷಕನ ಹೊಣೆಯಾಗಿದೆ. ಇದು ಈಡೇರಬೇಕಾದರೆ ಸುಸಂಸ್ಕೃತ ನಾಗರಿಕನಲ್ಲಿರುವ ಗುಣಗಳು ಮಗುವಿನಲ್ಲಿ ಮೊಳೆತು ಬೆಳೆದು ಒಳ್ಳೇ ಫಲಗಳನ್ನೀಯುವ ಸಾಮಾಜಿಕ ಚಟುವಟಿಕೆಗಳಲ್ಲಿ ಮಗುವನ್ನು ತೊಡಗಿಸಬೇಕು. ಇಂತಹ ಚಟುವಟಿಕೆಗಳು ಕೇವಲ ದೈಹಿಕ ದಂಡನೆಯಾಗಿರದೆ ಬುದ್ಧಿಯ ಬಾಗಿಲನ್ನು ಸರಿಯಾಗಿ ತೆರೆಯಲು ಅನುವು ಮಾಡಿಕೊಡಬೇಕು.

ಬ್ರಿಟಿಶರ ಆಳಿಕೆಯಲ್ಲಿ ಸಾಲೆಯೆಂದರೆ ಕೇವಲ ಪಾಠಗಳನ್ನು ಕಲಿಸುವ ಮಂದಿರವೆಂದು ಕಲ್ಪಿಸಲಾಗಿತ್ತು. ಜೀವನಕ್ಕೂ ಶಿಕ್ಷಣಕ್ಕೂ ಯಾವ ಸಂಬಂಧವೂ ಇರಲಿಲ್ಲ. ಆದುದರಿಂದ ಶಾಲೆ ಕಾಲೇಜುಗಳಲ್ಲಿ ಅಭ್ಯಸಿಸುತ್ತಿದ್ದ ವಿದ್ಯಾರ್ಥಿಗಳ ಆದರ್ಶಗಳು ಅವರು ಪ್ರತ್ಯಕ್ಷ ಜೀವನರಂಗಕ್ಕಿಳಿದಾಗ ಮುಗಿಲ ಮಲ್ಲಿಗೆಗಳಾಗಿ ಪರಿಣಮಿಸುತ್ತಿದ್ದವು. ಆದರೆ ಗಾಂಧೀಜಿಯವರು ದಯಪಾಲಿಸಿದ ಜೀವನ ಶಿಕ್ಷಣವು ಮಕ್ಕಳಲ್ಲಿಯ ಸುಪ್ತ ಶಕ್ತಿಗಳನ್ನು ಜಾಗೃತಗೊಳಿಸಿ ಅವರಬೌದ್ಧಿ ಹಾಗು ಶಾರೀರಿಕ

ರಿಕ ಬೆಳವಣಿಗೆಗೆ ಸಮನಾದ ಸ್ಥಾನ ಸಿಕ್ಕು ಸುಸಂಸ್ಕೃತ ಸಮಾಜ ಜೀವಿಗಳಾಗಿ ಅವರು ಬಾಳುವಂತೆ ಸೌಕರ್ಯಗಳನ್ನು ಒದಗಿಸಿ ಕೊಟ್ಟಿವೆ. ಗಾಂಧೀಜಿಯವರು ಹಾಕಿ ಕೊಟ್ಟ ಮಾರ್ಗವನ್ನೇ ಇಂದು ಸಮಾಜ ವಿಕಾಸ ಕೇಂದ್ರಗಳು ಅನುಸರಿಸಬೇಕಾಗಿದೆ. ಸಾಂಘಿಕ ಜೀವನವು ಇಂತಹ ಕೇಂದ್ರಗಳ ಜೀವನದ ಉಸಿರು. ಸಾಂಘಿಕ ಜೀವನವಿಲ್ಲದ ಯಾವ ಶಾಲೆಯೂ ಶಿಕ್ಷಣ ಪ್ರಸಾರದ ಸ್ಥಾನವೆನಿಸಲಾರದು. ವಿದ್ಯಾರ್ಥಿಗಳ ಜೀವನದ ಅವಶ್ಯಕತೆಗಳಿಗೆ ಹಾಗು ಪರಿಸ್ಥಿತಿಗೆ ಸರಿಹೋಗುವಂತೆ ಹೊಂದಿಕೊಂಡು ಸ್ವಾಭಾವಿಕವಾದ ಕುಶಲತೆಯನ್ನು ತೋರ್ಪಡಿಸುವ ಉದ್ದೇಶದಿಂದ ಆಸ್ಥೆಯಿಂದ ಉಪಯುಕ್ತ ಚಟುವಟಿಕೆಗಳಲ್ಲಿ ಅವರು ಭಾಗವಹಿಸುವಂತೆ ಅವರನ್ನು ಪ್ರೇರೇಪಿಸುವದೇ ಇಂತಹ ಕೇಂದ್ರಗಳು ಸಾಧಿಸಬಹುದಾದ ಮಹತ್ವದ ಕೆಲಸವಾಗಿದೆ. ಈ ಉದ್ದೇಶ ಸಾಧನೆಯಲ್ಲಿ ಶಿಕ್ಷಕನು ಹಲವು ವಿಷಯಗಳನ್ನು ಅಥವಾ ಕೌಶಲತೆಗಳನ್ನು ಕಲಿಸುವ ಯೋಜನೆ ಹಾಗು ಸಂಘಟನೆ ಮಾಡುವದಿಷ್ಟೇ ಅಲ್ಲದೆ ವ್ಯವಹಾರಿಕವಾದ, ಉತ್ಪಾದಿತ ಹಾಗು ರಚನಾತ್ಮಕ ಚಟುವಟಿಕೆಗಳನ್ನು ಏರ್ಪಡಿಸಿ ಅವುಗಳ ಮುಖಾಂತರ ವಿದ್ಯಾರ್ಥಿಗಳು ಸಹಕಾರ, ಶಿಸ್ತು, ಮುನ್ನಡೆ, ಆತ್ಮಸಂತೋಷದಿಂದ ಕೂಡತಕ್ಕೊಳ್ಳುವದು, ಸತ್ಯ, ಅಹಿಂಸೆ, ವಿಶ್ವಬಂಧುತ್ವ ಇತ್ಯಾದಿ ಗುಣಗಳನ್ನು ಪಡೆಯುವಂತೆ ನೋಡಿಕೊಳ್ಳಬೇಕು. ಇಂತಹ ಚಟುವಟಿಕೆಗಳನ್ನು ಸಂಘಟಿಸುವಾಗ ಅವುಗಳನ್ನು ಪ್ರತ್ಯೇಕಿಸದೆ ಅಭ್ಯಾಸ-ಆಟ (ಚಟುವಟಿಕೆ)– ಇವುಗಳನ್ನು ಸಮರಸವಾಗಿ ಸಾಗಿಸಬೇಕು. ಕೇವಲ ಭಾಷಣಗಳಿಂದ ಅಥವಾ ಉದಾಹರಣೆಗಳಿಂದ ನಿಜವಾದ ಶಿಕ್ಷಣ ದೊರೆಯಲಾರದು. ಆದರೆ ಮಗುವಿಗೆ ಶಾಲೆಯಲ್ಲಿ ಒಂದು ಸಾಮಾಜಿಕ ಚಟುವಟಿಕೆಯಲ್ಲಿ ಭಾಗವಹಿಸಲು ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕು. ಕೆಲಸದ ಗೊತ್ತುಗುರಿಗಳನ್ನೂ ಅದು ಯಶಸ್ವಿಯಾಗಿ ನೆರವೇರುವಲ್ಲಿ ತನ್ನ ಹೊಣೆಯನ್ನೂ ಮಗುವಿಗೆ ತಿಳಿಯಪಡಿಸಬೇಕು. ಮಗುವು ಕಾರ್ಯದಲ್ಲಿ ತೊಡಗಿದಾಗ ಅನೇಕ ತಪ್ಪು ತಡೆಗಳನ್ನೆಸಗಬಹುದು ಮತ್ತು ತನ್ನ ಗುರಿಯನ್ನು ಮುಟ್ಟುವದರಲ್ಲಿ ಅನೇಕ ಸಮಸ್ಯೆಗಳನ್ನೆದುರಿಸಿ ಯಶಾಪಯಶಗಳನ್ನು ಪಡೆಯಬಹುದು; ಇಂತಹ ಪ್ರಸಂಗಗಳಲ್ಲಿ ಸ್ವಯಂಸ್ಫೂರ್ತಿಯಿಂದ ಕೈಕೊಂಡ ಮಗುವಿನ ಕಾರ್ಯದಲ್ಲಿ ಶಿಕ್ಷಕನು ನಡುನಡುವೆ ತಡೆದು ಆತನ ಕೆಲಸಕ್ಕೆ ಆತಂಕ ಮಾಡದೆ ಅತ್ಯವಶ್ಯವೆನಿಸಿದಲ್ಲಿ ಮಾತ್ರ ಆತನಿಗೆ ಮಾರ್ಗದರ್ಶನ ಅಥವಾ ಸಹಾಯ ಮಾಡಬೇಕು, ಮತ್ತು ಮಗುವು ತಪ್ಪಿ ನಡೆದಾಗ ಕೆಲಸವನ್ನು ಸಂಪೂರ್ಣ ಬಿಡಿಸಿ ಶಿಕ್ಷಕನು ತಾನೇ ಮಾಡಲು ಹತ್ತಕೂಡದು. ಏಕೆಂದರೆ ಕೆಲಸದ ಯಶಾಪಯಶಗಳು ಮಗುವಿಗೆ ಸಂಬಂಧಿಸಿದವುಗಳು. ಅವು ಆತನಿಗೆ ಶೈಕ್ಷಣಿಕ ಮಹತ್ವವನ್ನು ತಿಳಿಪಡಿಸುವವು. ಯಶಸ್ಸು ಅಷ್ಟು ಮಹತ್ವವಾದುದಲ್ಲ; ಆದರೆ ತಾನು ಕೈಕೊಂಡ ಕೆಲಸವನ್ನು ಮನಮುಟ್ಟಿ ಹೊಣೆಗಾರಿಕೆಯಿಂದ ಮಾಡುವದೇ ಹೆಚ್ಚು ಮಹತ್ವವಾದದ್ದು. ಆದರ್ಶ ಶಿಕ್ಷಕನ ನೇತೃತ್ವದಲ್ಲಿ ಮಗುವು ಕಾರ್ಯ ಪ್ರಾರಂಭಿಸಲಿ, ಹಾಗು ಆ ಕೆಲಸದಲ್ಲಿ ಆತನಿಗೆ ಸಂಪೂರ್ಣ ಸ್ವಾತಂತ್ರ್ಯ ಲಭಿಸಿ ಆತನು ಕೆಲಸದ ಪರಿಶೀಲನೆ ಮಾಡಿ ಬಲಸಂವರ್ಧನೆ ಮಾಡಿಕೊಂಡು, ತನ್ನ ತಪ್ಪುಗಳನ್ನು ಮನದಂದು, ಅವುಗಳನ್ನು ನಿವಾರಿಸುವ ಉಪಾಯಗಳನ್ನು ಕಂಡುಹಿಡಿದು ಮುನ್ನಡೆದರೆ ಆತನಿಗೆ ಯಶ ದೊರೆಯಬಹುದು; ಒಂದು ವೇಳೆ ಸೋಲುಂಟಾದಲ್ಲಿ “ಸೋಲುಗಳು ಗೆಲವಿನ ನಿಜವಾದ ಸೋಪಾನಗಳೆಂ”ಬುದು ಆತನಿಗೆ ಮನವರಿಕೆಯಾಗದಿರದು

ಸಾಮಾನ್ಯವಾಗಿ ಚಟುವಟಿಕೆಗಳನ್ನು (ಅ) ವ್ಯಕ್ತಿ (ಬ) ವರ್ಗ (ಕ) ಶಾಲೆಗಳಿಗಾಗಿ ಸಂಬಂಧಿಸಿ ಸಂಘಟಿಸಬಹುದು. ಮಾರ್ಗದರ್ಶನಕ್ಕಾಗಿ ಹಲವು ಚಟುವಟಿಕೆಗಳನ್ನು ಇಲ್ಲಿ ಉದಾಹರಿಸಲಾಗಿದೆ :—

(೧) ಧಾರ್ಮಿಕ, ಸಾಮಾಜಿಕ, ರಾಷ್ಟ್ರೀಯ ಹಾಗು ಸುಗ್ಗಿಯ ಹಬ್ಬಗಳ ಆಚರಣೆ.

(೨) ಐತಿಹಾಸಿಕ, ಧಾರ್ಮಿಕ ಹಾಗು ಸಾಂಸ್ಕೃತಿಕ ಸ್ಥಳಗಳಿಗೆ ಪ್ರವಾಸ.

(೩) ಮಾನವಕುಟುಂಬಕ್ಕೆ ಕಲ್ಯಾಣವೆಸಗಿದ ಸಾಧುಸಂತರು, ಕೀರ್ತಿವಂತ ಕವಿಗಳು, ಲೇಖಕರು, ವಿಜ್ಞಾನಿಗಳು ಮುಂತಾದವರ ಜಯಂತಿಗಳ ಆಚರಣೆ.

(೪) ಪಾಲಕರ ದಿನಾಚರಣೆ ಹಾಗು ಶಾಲಾದಿನ, ಸಫಾಯಿ ದಿನ, ಸಾಂಸರ್ಗಿಕ ರೋಗದಿನಗಳ ಆಚರಣೆ (ಮಲೇರಿಯಾ, ಕಾಲರಾ, ಪ್ಲೇಗ, ವಿಷಮಜ್ವರ, ಕ್ಷಯ ರೋಗ ಅಥವಾ ಮಾನವನಿಗೆ ಗಂಡಾಂತರಕಾರಿಯಾದ ಇತರ ಯಾವುದೇ ರೋಗದ ದಿನಾಚರಣೆ).

ಈ ಮೇಲ್ಕಾಣಿಸಿದ ಚಟುವಟಿಕೆಗಳನ್ನು ಶೈಕ್ಷಣಿಕ ದೃಷ್ಟಿಯಿಂದ ಹೇಗೆ ಸಂಘಟಿಸಬಹುದೆಂಬುದನ್ನು ತಿಳಿದುಕೊಳ್ಳುವುದು ಅತ್ಯವಶ್ಯವಾಗಿದೆ. ಈ ದಿಶೆಯಲ್ಲಿ ಕೆಳಗೆ ಕಾಣಿಸಿದ ನಿಯಮಗಳನ್ನು ಶಿಕ್ಷಕರು ಅನುಲಕ್ಷಿಸಬೇಕು:

(ಅ) ಮಕ್ಕಳಿಗೆ ಒಪ್ಪಿಸಿದ ಕೆಲಸದಲ್ಲಿ ತಮ್ಮ ಹೊಣೆಯನ್ನು ಅರಿತುಕೊಳ್ಳುವ ಪ್ರಸಂಗಗಳನ್ನು ಅವರಿಗೆ ತಂದುಕೊಡಬೇಕು.

(ಆ) ಮಕ್ಕಳು ತಾವು ನಿರ್ವಹಿಸಿಕೊಂಡ ಕಾರ್ಯದ ಹೊಣೆಯನ್ನು ತಾವೇ ಸ್ವತಃ ಹೊತ್ತುಕೊಂಡು ಆತ್ಮ ವಿಶ್ವಾಸದಿಂದ ಅದು ಕೊನೆಗೊಳ್ಳುವಂತೆ ನೋಡಿಕೊಳ್ಳ ತಕ್ಕದ್ದು.

(ಇ) ಶಿಸ್ತು, ಸಹಕಾರಗಳಿಂದ ಕಾರ್ಯವು ನೆರವೇರುವಂತಾಗಬೇಕು

(ಈ) ಅಭ್ಯಾಸಪತ್ರಿಕೆಯಲ್ಲಿ ಕಾಣಿಸಿದ ವಿವಿಧ ವಿಷಯಗಳ ಸಮವಾಯವಾಗುವಂತೆ ಚಟುವಟಿಕೆಗಳು ಜರಗಬೇಕು; ಈ ಸಂದರ್ಭದಲ್ಲಿ ಶಿಕ್ಷಕರು ನೆನಪಿಡತಕ್ಕ ಮಹತ್ವದ ಸಂಗತಿಯೆಂದರೆ, ಸಮವಾಯ ಜ್ಞಾನವನ್ನು ಸ್ವಾಭಾವಿಕವಾಗಿ ಮಕ್ಕಳಿಗೆ ಕೊಡಬೇಕೇ ಹೊರತು ಕೃತ್ರಿಮವಾಗಿ ಅಲ್ಲ; ಸಮವಾಯ ಮಾಡಲಿಕ್ಕೆ ಬಾರದ ವಿಷಯಗಳನ್ನು ನೇರವಾಗಿ ಕಲಿಸತಕ್ಕದ್ದು.

(ಉ) ಸಾಮಾಜಿಕ ಹಾಗು ಸಾಂಸ್ಕೃತಿಕ ಸಂವರ್ಧನೆ ಯಾಗುವಂತೆ ಹಬ್ಬಗಳ ಆಚರಣೆ ನಡೆಯಬೇಕು ಮತ್ತು ರಜೆಯ ದಿನಗಳನ್ನು ಉಪಯುಕ್ತ ರೀತಿಯಲ್ಲಿ ಕಳೆಯ ಬೇಕು

(ಊ) ಶಿಕ್ಷಕರು ಆರ್ಥಿಕ ಪರಿಸ್ಥಿತಿಯನ್ನು ಅನು-ಲಕ್ಷಿಸಿ ಮಿತವ್ಯಯದಿಂದ ಚಟುವಟಿಕೆಗಳನ್ನು ಜರುಗಿಸ ಬೇಕು. ಉದಾಹರಣೆಗಾಗಿ— ಬೇರೆ ಸ್ಥಳಕ್ಕೆ ಪ್ರವಾಸ ಕೈಕೊಂಡಾಗ ಪಾಲಕರ ಆರ್ಥಿಕ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದುಕೊಳ್ಳಬೇಕು; ಅಂದರೆ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ಪ್ರವಾಸದ ಸೌಲಭ್ಯಗಳು ದೊರೆಯುವಂತೆ ಉಳಿದ ಖಾತೆಯವರ ನೆರವು ಪಡೆಯಬೇಕು. ಶೈಕ್ಷಣಿಕ ಉದ್ದೇಶವನ್ನಿಟ್ಟುಕೊಂಡು ಪ್ರವಾಸ ಮಾಡಬೇಕೇ ಹೊರತು ಮನರಂಜನೆಗಾಗಿ ಅಲ್ಲವೆಂಬುದನ್ನು ಗಮನಿಸತಕ್ಕದ್ದು.

ಇವೆಲ್ಲ ಚಟುವಟಿಕೆಗಳು ಯಶಸ್ವಿಯಾಗಿ ಜರುಗಬೇಕಾದರೆ ಯೋಜನೆ ಸರಿಯಾಗಿರಬೇಕು; ಹಾಗು ಆಚರಿಸತಕ್ಕ ಪ್ರತಿಯೊಂದು ಹಬ್ಬದ ಅಥವಾ ಜಯಂತಿಯ ಔಚಿತ್ಯ, ಉದ್ದೇಶ ಹಾಗು ಅದರ ಶೈಕ್ಷಣಿಕ ಮಹತ್ವದ ಪೂರ್ಣ ಜ್ಞಾನವಿರಬೇಕು. ಯಾವುದಾದರೊಂದು ಸಾರ್ವಜನಿಕರಿಗೆ ಸಂಬಂಧಿಸಿದ ಚಟುವಟಿಕೆಯನ್ನು ಕಾರ್ಯರೂಪದಲ್ಲಿ ತರಬೇಕಾದರೆ ಹಳ್ಳಿಗರ ಸಹಕಾರ, ಸಂಪರ್ಕಗಳು ಅತ್ಯವಶ್ಯವಾಗಿವೆಯೆಂಬುದನ್ನು ಶಿಕ್ಷಕರು ಲಕ್ಷ್ಯದಲ್ಲಿಡಬೇಕು. ಮಕ್ಕಳ ಕಲ್ಯಾಣವನ್ನೇ ಸದಾ ಬಯಸುತ್ತಿರುವ ಅಥವಾ ಅವರ ಏಳ್ಗೆಗಾಗಿ ತಮ್ಮ ಸೇವೆಯನ್ನು ಮೀಸಲಾಗಿರಿಸಿ ಫಲಾಪೇಕ್ಷೆಯಿಲ್ಲದೆ ನಿಷ್ಕಾಮ ಕರ್ಮವನ್ನೆಸಗುವ ಸಚ್ಚರಿತ ಶಿಕ್ಷಕರಿಗೆ ಪಾಲಕರು ಸ್ವಯಂಸ್ಫೂರ್ತಿಯಿಂದ ಸರ್ವ ಸಹಾಯ್ಯ, ಸಹಕಾರ ನೀಡುವರೆಂಬುದು ನಿರ್ವಿವಾದ ಸಂಗತಿ; ಇಂತಹ ಶಿಕ್ಷಕರಿಗಾಗಿ ಹಳ್ಳಿಗರು ಜೀವಕ್ಕೆ ಜೀವ ಕೊಡುವರು. ಆದರೆ ಶಿಕ್ಷಕರು ಸ್ವಲ್ಪ ಅಡ್ಡದಾರಿ ತುಳಿದರೆ ಮಾತ್ರ ಜೀವ ತೆಗೆದುಕೊಳ್ಳುವರೆಂಬುದು ಅನುಭವ ಸಿದ್ಧವಾದ ಮಾತು. ಮಕ್ಕಳನ್ನು ಜಾತಿ, ಮತ, ಪಂಥಗಳ ಭೇದ ಭಾವನೆಗಳನ್ನೆಣಿಸದೆ ಅವರು ತನ್ನ ಹೊಟ್ಟೆಯ ಮಕ್ಕಳೆಂದು ಭಾವಿಸಿ ಅವರ ಸರ್ವಾಂಗೀಣ ಉನ್ನತಿಯನ್ನು ಬಯಸುವವನೇ ಆದರ್ಶ ಶಿಕ್ಷಕನು. ಇಂತಹ ಶಿಕ್ಷಕರು ಸಮಾಜ ವಿಕಾಸ ಕೇಂದ್ರಗಳಲ್ಲಿದ್ದರೆ ಮಕ್ಕಳಿಗೆ ತಕ್ಕ ಸಂಸ್ಕಾರ ಕೊಡುವರು; ಅಂದರೆ ಬಾಲಕನು ಸಮಾಜ-ದೇಶಗಳ ಹೊಣೆಯನ್ನು ಹೊರುವ, ಸುಸಂಸ್ಕೃತ ನಾಗರಿಕನಾಗುವ, ಸಹಕಾರ ನೀಡುವ, ಕಲಂಕವಿಲ್ಲದೆ ಸ್ಪರ್ಧಿಸುವ, ಗಾಂಧೀಜಿಯವರಲ್ಲಿದ್ದ ಸತ್ಯ, ಅಹಿಂಸೆ, ತ್ಯಾಗ, ವಿಶ್ವಬಂಧುತ್ವ ಮುಂತಾದ ಗುಣಗಳ ಬೀಜಗಳನ್ನು ಆತನ (ಬಾಲಕನ) ಮನೋಭೂಮಿಯಲ್ಲಿ ಹದಗೊಳಿಸಿ ನೆಡುವ ಪವಿತ್ರ ಕಾರ್ಯವನ್ನು ಎಸಗುವರು.

ಪ್ರಾಥಮಿಕ ಶಿಕ್ಷಣ ಪ್ರಪಂಚ

ಫೆಬ್ರುವರಿ ೧೯೫೫

ಪಂದ್ಯಾಟಗಳು

ವಿಜಾಪೂರ ೬ :— ವಿಜಾಪೂರ ಜಿಲ್ಹೆಯ ಪ್ರಾಥಮಿಕ ಶಾಲೆಗಳ ಜಿಲ್ಲಾ ಪಂದ್ಯಾಟಗಳು ಮಾನ್ಯ ಶ್ರೀ ಬಿ. ಡಿ. ಜತ್ತಿ, ಉಪಮಂತ್ರಿ, ಮುಂಬಯಿ ಅವರ ಅಧ್ಯಕ್ಷತೆಯಲ್ಲಿ ನೆರವೇರಿದವು.

ಆರಂಭದಲ್ಲಿ ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ ಶ್ರೀ ಸಿ. ಎಸ್. ಬೆನ್ನೂರ ಅವರು ಎಲ್ಲರನ್ನೂ ಸ್ವಾಗತಿಸಿದನಂತರ ಡಿ. ಎ. ಇ. ಶ್ರೀ ವಾಯ್. ಬಿ. ಯರಗಲ್ಲರವರು ಪಂದ್ಯಾಟದ ವರದಿಯನ್ನೋದಿದರು.

ಪಂದ್ಯಾಟಕ್ಕೆಂದು ರಜತ ಕಪ್ಪುಗಳನ್ನು ದಯಪಾಲಿಸಿದವರ ಹೆಸರುಗಳನ್ನು ಕೆಳಗೆ ಕೊಡಲಾಗಿದೆ :—

(೧)	ಮಾನ್ಯ ಶ್ರೀ. ಬಿ. ಡಿ. ಜತ್ತಿ, ಉಪಮಂತ್ರಿಗಳು	ರೂ.	೫೧
(೨)	ಶ್ರೀ ಎಸ್. ಜೆ. ದೇಶಮುಖ (ಆಲಮೇಲ) ವಿಜಾಪೂರ	,,	೫೦
(೩)	,, ಜಿ. ಜಿ. ಬ್ಯಾಕೋಡ ಹೂವಿನ ಹಿಪ್ಪರಗಿ	,,	೧೦೦
(೪)	,, ಜಡಿಯಪ್ಪ ಕಂಪ್ಲಿ	,,	೫೦
(೫)	,, ಲೋಣಾಪುರ ದೇಸಾಯರು	,,	೫೦
(೬)	,, ಎನ್. ಸಿ. ನಾಡಗೌಡರು	,,	೫೦
(೭)	,, ಮರೋಳ ಮಿತ್ರರು	,,	೫೦
(೮)	,, ಎಂ. ಬಿ. ಹೊಕ್ರಾಣಿ	,,	೫೦
(೯)	,, ಸೊನ್ನದ ದೇಸಾಯಿ ಅವರು	,,	೫೦
(೧೦)	,, ರಾಚಪ್ಪ ಸಂಗಪ್ಪ ಗದಗಿನ ನಾಲತ್ವಾಡ	,,	೧೦೦

ಪಂದ್ಯಾಟದ ವೀರಾಗ್ರಣಿಗಳು

(ಅ) ಹುಡುಗರು:—

(೧) ಹಿರಿಯ ಗಂಡು.... ಕುಮಾರ ಕಾಲೇಸಾ ಭಾಂಗಿ, ಮ್ಯು. ಕ. ಗಂ. ಶಾಳಾ ನಂ. ೪. ವಿಜಾಪೂರ

(೨) ಕಿರಿಯ ಗಂಡು.... ,, ಪಂಡಿತ ಅಂಕೋಲಾ, ಮ್ಯು. ಕ.ಗಂ. ಶಾಳಾ ನಂ. ೫. ವಿಜಾಪೂರ

(೩) ಹಿರಿಯ ಹೆಣ್ಣು........ ಕುಮಾರಿ ಸುನಂದಾ ಡಂಬಳ, ಡಿ. ಬಿ. ದರಬಾರ ಶಾಳಾ, ವಿಜಾಪೂರ

(೪) ಕಿರಿಯ ಹೆಣ್ಣು........ ,, ಬಸವ್ವಾ ಪಾಟೀಲ, ಕ. ಹೆ ಶಾಳಾ ನಂ. ೩, ಬಾಗಲಕೋಟೆ

(ಬ) ಶಾಲೆಗಳು :—

(೧) ಹಿರಿಯ ಗಂಡು........ ವಿಜಾಪೂರ ಮ್ಯು. ಕ. ಗಂ ಶಾಳಾ ನಂ. ೪.

(೨) ಕಿರಿಯ ಗಂಡು........ ವಿಜಾಪೂರ ಮ್ಯು. ಕ. ಗಂ. ಶಾಳಾ ನಂ. ೫.

(೩) ಹಿರಿಯ ಹೆಣ್ಣು........ ವಿಜಾಪೂರ ಜೀಜಾಮಾತಾ ಮರಾಠಿ ಹೆಣ್ಣು ಶಾಳಾ.

(೪) ಕಿರಿಯ ಹೆಣ್ಣು.... ... ಬಾಗಲಕೋಟೆ ಕ. ಹೆ. ಶಾಳಾ ನಂ ೩.

(ಕ) [illegible] :—

(೧) ವಿಜಾಪೂರ ಮುನಿಸಿಪಾಲಿಟಿ

ನಾವಲ್ಗಿ ೨ :— ಧಾರವಾಡ ಜಿಲ್ಲಾ ಪ್ರಾಥಮಿಕ ಶಾಲಾ ಪಂದ್ಯಾಟದಲ್ಲಿ ಇಲ್ಲಿಯ ಶಾಲೆಯ ಬಾಲಕರು

"ಲೇಝಿಮ್"ದಲ್ಲಿ ಪ್ರಥಮ ಸ್ಥಾನ ಪಡೆದರು ಮತ್ತು ಶ್ರೀ ಕುಸುಗಲ್ಲ ಇವರು ಕೊಟ್ಟ ಬೆಳ್ಳಿಯ ಕಪ್ಪನ್ನು ಪಡೆದಿರುತ್ತಾರೆ.

ಧಾರವಾಡ ೧೩:—ಧಾರವಾಡ ಜಿಲ್ಹೆಯ ಆರೂ ಟ್ರೇನಿಂಗ ಕಾಲೇಜುಗಳ ಪರಿಷ್ಕರನ್ನೊಳಗೊಂಡ "ಪಂದ್ಯಾಟ ಸಮಿತಿ"ಯು ನಿರ್ಣಯಿಸಿದ ಮೇರೆಗೆ "ಪ್ರಥಮ ಪಂದ್ಯಾಟ ಕೂಟ"ದ ಹೊಣೆಯನ್ನು ಕು. ಮೀರಾ ನಾಡಕರ್ಣಿ, ಶ್ರೀಯುತರು ವ್ಹಿ. ಜಿ. ಕುಲಕರ್ಣಿ, ಮಾಸೇಕರ, ನೇರ್ಲೇಕರ, ಕಲ್ಮಠ ಮುಂತಾದವರಿಂದ ಕೂಡಿದ "ಪಂದ್ಯಾಟ ಕಾರ್ಯಕಾರೀ ಸಮಿತಿ"ಗೆ ಒಪ್ಪಿಸಿದ ಮೇರೆಗೆ ದಿನಾಂಕ ೧೩ ರಂದು ಲೆಫ್ಟನಂಟ ಕರ್ನಲ್ ಎಸ್. ಎಸ್. ಕಣಬರ್ಗಿಮಠರವರ ಅಧ್ಯಕ್ಷತೆಯಲ್ಲಿ ಜರುಗಿದ ಪಂದ್ಯಾಟಕೂಟದಲ್ಲಿ ೬೬ ಶಿಕ್ಷಕ-ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಹುಬ್ಬಳ್ಳಿಯ ಗಂಗಾಧರ ಟ್ರೇ. ಕಾ. ದ ಶ್ರೀ. ಎನ್. ವ್ಹಿ. ನಾಯಿಕ ಹಾಗು ಇಲ್ಲಿಯ ವನಿತಾ ಟ್ರೇ. ಕಾ. ದ ಶ್ರೀಮತಿ ಹೊಸಕೇರಿ ಈ ವರುಷದ ಪಂದ್ಯಾಟ ವೀರರಾದರು ಮತ್ತು ಅವರಿಗೆ ಕಪ್ಪುಗಳನ್ನು ಕೊಡಲಾಯಿತು.

ಸಭೆ-ಸಮ್ಮೇಲನಗಳು

ಫೆಬ್ರುವರಿ ೧೯೫೫:—

ಧಾರವಾಡ ೫:— ಇಲ್ಲಿಯ ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ೩೦ನೆಯ ಹುಟ್ಟುಹಬ್ಬವನ್ನು ಅತಿ ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರಿನ್ಸಿಪಾಲ ರಾ. ಯ. ಧಾರವಾಡಕರ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಶಿಕ್ಷಕ ವರ್ಗದವರ ಹೊಣೆಯ ಬಗ್ಗೆ ಭಾಷಣ ಮಾಡಿದರು. ಶಿಕ್ಷಕ-ವಿದ್ಯಾರ್ಥಿನಿ ಹಾಗು ವಿದ್ಯಾರ್ಥಿನಿಯರಿಂದ ಮನರಂಜನೆಯ ಕಾರ್ಯಕ್ರಮಗಳು ಏರ್ಪಡಿಸಲ್ಪಟ್ಟಿದ್ದವು.

ಧಾರವಾಡ ೫ :— "ಗಣೇಶ ನಿಬಂಧ ಸ್ಪರ್ಧೆ"ಯ ಪಾರಿತೋಷಕ ವಿತರಣ ಸಮಾರಂಭವು ಪ್ರಿ. ವ್ಹಿ. ಕೆ. ಗೋಕಾಕರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಸ್ಪರ್ಧೆಯಲ್ಲಿ ಮೇಲುಸ್ಥಾನ ಪಡೆದ ಕೆಳಗಿನ ಹತ್ತು ವಿದ್ಯಾರ್ಥಿಗಳಿಗೆ (ಪ್ರತಿಯೊಬ್ಬರಿಗೆ ರೂ. ೩ ಗಳಂತೆ) ಬಹುಮಾನ ಕೊಡಿಸಲಾಯಿತು.

ಕ. ಗಂ. ಸೆಂಟ್ರಲ್ ಸ್ಕೂಲಿನ ೧) ವಾ. ಕೃ ಕಾಥವಟೆ ೨) ವಿ. ಗು. ಕುಡಚೀಮಠ
೩) ಮ. ಬಿ. ಜೋಶಿ ೪) ಇ. ಹು. ಕುಲಕೋಟೆ
ಕ. ಹೆ. ಸೆಂಟ್ರಲ್ ಸ್ಕೂಲಿನ ೫) ಕು. ಮಿನಾಕ್ಷಿ ಗುಮ್ಮಗೋಳ
೬) ಛಾಯಮ್ಮ ಇನಾಮದಾರ
ಬೇಸಿಕ್ ಪ್ರಾ. ಸ್ಕೂಲಿನ ೭) ವೀರಭದ್ರಪ್ಪ ಸಿಂಧೆ
ಮರಾಠಿ ೧ನೆಯ ನಂ. ಶಾಲೆಯ ೮) ಸ್ನೇಹಲತಾ ಪಟವರ್ಧನ
ಉರ್ದು ಗಂ. ಮ. ಸೆಂಟ್ರಲ್ ಸ್ಕೂಲ ೯) ಬಾಬುಸಾಹೇಬ ಬೇಪಾರಿ
ಉರ್ದು ಹೆ. ಮ. ಸೆಂಟ್ರಲ್ ಸ್ಕೂಲ ೧೦) ಮಹಬುಬಿ ನಾಯಿಕ.

ಸಿಂಬಾಳ (ತಾಂಡೆ) ೧೩ :— ಶ್ರೀ. ಪಾವಟೆ ಚೆನ್ನಪ್ಪನವರು ಇವರ ಹಿರಿಯತನದಲ್ಲಿ ಗ್ರೂಪ್ ಶೈಕ್ಷಣಿಕ ಸಮ್ಮೇಲನವು ಜರುಗಿತು.

ಧಾರವಾಡ ೧೩ :— ಈ ಜಿಲ್ಹೆಯ ಟ್ರೇನಿಂಗ ಕಾಲೇಜುಗಳ ಪಂದ್ಯಾಟಕೂಟದ ಅಂಗವಾಗಿ ಶ್ರೀ. ಕೆ. ಬಿ. ತೇರಗಾಂವಕರ, ಜಿಲ್ಹಾ ಶಿಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರಬಂಧವಾಚನ ಏರ್ಪಡಿಸಲಾಗಿತ್ತು. ಶ್ರೀ. ಆರ್. ಸಿ. ಪಶುಪತಿ, ಕು. ಮಿರಾ ನಾಡಕರ್ಣಿ, ಶ್ರೀಮತಿ ರಮಾ ನಾಯಿಕ ಮತ್ತು ಶ್ರೀ. ಆರ್. ಬಿ. ಹಾವೇರಿ ಅವರು ಅನುಕ್ರಮವಾಗಿ "ಪ್ರಾಥಮಿಕ ಶಾಲೆಗಳಲ್ಲಿ ಆರೋಗ್ಯ

ಶಿಕ್ಷಣ " " ಶಾ. ಶಿ. ದ ಮೂಲ ತತ್ವಗಳು ಮತ್ತು ಹೆಣ್ಣುಮಕ್ಕಳ ಶಾಲೆಗಳಲ್ಲಿ ಅವುಗಳ ಕಾರ್ಯಾಚರಣೆ " " ಪ್ರಾಥಮಿಕ ಶಾಲೆಗಳಲ್ಲಿ ಶಾ. ಶಿ. ದ ಸಮಸ್ಯೆಗಳು ಮತ್ತು ಅವುಗಳ ಪರಿಹಾರೋಪಾಯ " ಮತ್ತು " ಪ್ರಾಥಮಿಕ ಶಾಲೆಗಳಲ್ಲಿ ಆಟಗಳು " ಈ ವಿಷಯಗಳ ಮೇಲೆ ಪ್ರಬಂಧಗಳನ್ನು ಓದಿದರು. ಅವುಗಳ ಬಗ್ಗೆ ಚರ್ಚೆ ನಡೆಯಿತು.

ಎತ್ತಿನಗುಡ್ಡ ೧೬:— ಇಲ್ಲಿಯ ಹೊಸ ಶಾಲಾಕಟ್ಟಡದ ಉದ್ಘಾಟನಾ ಸಮಾರಂಭವು ಮಾನ್ಯ ಶ್ರೀ. ಕೆ. ಎಫ್ ಪಾಟೀಲರ ಅಮೃತ ಹಸ್ತದಿಂದ ಜರುಗಿತು.

ಗಂದಿಗವಾಡ ೧೬ :— ಇಲ್ಲಿಯ ಶಾಲೆಯ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನವು ಶ್ರೀ. ಶಹಾಪೂರಕರ ಇವರ ಹಿರಿಯತನದಲ್ಲಿ ಯಶಸ್ವಿಯಾಗಿ ಜರುಗಿತು.

ಕಬನೂರ ೨೪ :— ಶಾಲಾಕಮಿಟಿ ಚೇರಮನ್‌ರಾದ ಶ್ರೀಯುತ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಪ್ರಾ. ಶಾ. ಪತ್ರಗಳ ವಿತರಣ ಸಮಾರಂಭವು ಸಾಂಗವಾಯಿತು.

ಸತ್ತಿ ೨೯: — ಗ್ರೂಪ್ ಶಿಕ್ಷಕರ ಮಾಸಿಕ ಸಮ್ಮೇಲನವು ಈ ಸಲ ರಡ್ಡೆರಟ್ಟಿಯಲ್ಲಿ ಶ್ರೀ. ಪಿ. ಟಿ. ಪಾಟೀಲ, ಬೀಟ ಆಫಿಸರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಸಂಕೇಶ್ವರ, ೨೬, ೨೭, : — ಸಮಾಜ ವಿಕಾಸ ಯೋಜನೆಯವರ ಪತಿಯಿಂದ ಏರ್ಪಡಿಸಲಾದ ಶೈಕ್ಷಣಿಕ ಸ್ಪರ್ಧೆಯಲ್ಲಿ ೫೮ ಶಾಲೆಯ ೯೧ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಂ. ಗ. ಶಾಲೆ, ಸಂಕೇಶ್ವರಕ್ಕೆ ಪ್ರಥಮಸ್ಥಾನ ಪಡೆದದ್ದಕ್ಕೆ ರೋಲಿಂಗ ಶೀಲ್ಡ್ ದೊರಕಿತು.

ದೇಣಿಗೆಗಳು

ನಿಲಗುಂದ ೧ :— ಇಲ್ಲಿಯ ಶಾಲೆಗೆ ಊರವರು ರೂ. ೩೦ರ ಜಾಂಗಟೆ ಹಾಗು ಧ್ವಜಸ್ಥಂಬಕ್ಕಾಗಿ ರೂ. ೨೫ ಗಳನ್ನು ಕೊಟ್ಟಿರುವರು.

ಸಾವಳ್ಳಿ ೧೨ :— ಊರವರು ಇಲ್ಲಿಯ ಶಾಲೆಗೆ ರಾಷ್ಟ್ರೀಯ ಪುರುಷರ ಫೋಟೋಗಳನ್ನು ಕೊಟ್ಟರು.

ನಾಟಕ

ಹೆಬ್ಬಳ್ಳಿ ೬ :— ಧಾರವಾಡ ತಾಲೂಕಾ ನಾಟಕಗಳ ಸ್ಪರ್ಧೆಯಲ್ಲಿ ಇಲ್ಲಿಯ ಕ. ಗಂ. ಶಾಲೆಯು ಪ್ರಥಮಸ್ಥಾನ ಗಳಿಸಿತು.

ಹುಮುದಾಪುರ ೧೫ :— ಗೋಕಾಕ ತಾಲೂಕಿನ ಪ್ರಾಥಮಿಕ ಶಾಲಾ ಮಕ್ಕಳ ನಾಟಕ ಸ್ಪರ್ಧೆಯಲ್ಲಿ ಅಭಿನಯಿಸಲ್ಪಟ್ಟ ೧೦ ನಾಟಕಗಳಲ್ಲಿ ಇಲ್ಲಿಯ ಶಾಲಾಬಾಲಕರು ಅಭಿನಯಿಸಿದ " ಭಕ್ತ ಪ್ರಲ್ಹಾದ " ನಾಟಕವು ಮೊದಲನೆಯ ನಂಬರ ಗಳಿಸಿತು.

ಅಳ್ನಾವರ ೧೯ :— ಇಲ್ಲಿಯ ಉರ್ದು ಶಾಲೆಯ ಬಾಲಬಾಲಿಕೆಯರು " ಇಲಮ್ " (ವಿದ್ಯೆ) ನಾಟಕವನ್ನು ಅಭಿನಯಿಸಿವರು.

ಪ್ರವಾಸ

ಅಮಲಝರಿ ೧೯, ೨೦ :— ಇಲ್ಲಿಯ ಶಾಲಾಬಾಲಕರು ಪಡಸಲಗಿ ಹಾಗು ಜಮಖಂಡಿಗೆ ಶೈಕ್ಷಣಿಕ ಪ್ರವಾಸ ಕೈಕೊಂಡಿದ್ದರು.

ಕುಂದಗೋಳ ೨೩ :— ಇಲ್ಲಿಯ ಶಾಲಾಬಾಲಕರು ಗುರುಗಳೊಂದಿಗೆ ಹರಿಹರ, ಭದ್ರಾವತಿ, ಶಿವಮೊಗ್ಗಾಗಳಿಗೆ ಶೈಕ್ಷಣಿಕ ಪ್ರವಾಸ ಕೈಕೊಂಡಿದ್ದರು

ಉಖ್ಯಾಣ ೨೪ :— ಇಲ್ಲಿಯ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳು ಮುಂಬಯಿಯ ಔದ್ಯೋಗಿಕ, ಶೈಕ್ಷಣಿಕ, ನೈಸರ್ಗಿಕ ಮತ್ತು ಸಾಂಸ್ಕೃತಿಕ ಸ್ಥಳಗಳನ್ನು ಸಂದರ್ಶಿಸಿ ಬಂದಿರುವರು.

ಬಾಗೇವಾಡಿ ೨೭ :— ಇಲ್ಲಿಯ ೫೦ ಶಾಲಾಬಾಲಕರು ಶೈಕ್ಷಣಿಕ ಪ್ರವಾಸವನ್ನು ಕೈಕೊಂಡು ಆರೇಶಂಕರ ಕೆರೆಯ ನೀರಾವರಿ ಯೋಜನೆ ಹಾಗು ಪಾಟೀ ಕಾರಖಾನೆಗಳನ್ನು ನೋಡಿಕೊಂಡು ಬಂದರು.

ಕೈ. ಡೆಪ್ಯೂಟಿ ಚೆನ್ನಬಸವಪ್ಪನವರು

ಕನ್ನಡಾಂಬೆಯ ಸಿರಿಯ ಸೊಬಗ ಹೆಚ್ಚಿಸ ಬಂದ
ನಿಜಹುತಾತ್ಮರಲಿ ನೀವಹುದು ಅಗ್ರಗಣ್ಯ–
ಕಂಕಣವ ಕಟ್ಟಿ, ನಾಡ ಸೇವೆಗೈದಿಹ ಮಾನ್ಯ !
ನಿಮ್ಮ ಪಡೆದಾ ತಾಯಿ ಧನ್ಯಳಾದಳು; ತಂದೆ.
ಅವಳ ಶ್ರೀಮುಖದಮಲ ಕಾಂತಿಯು ಬೆಳಗಿತಂದೆ,
ಗೆಲುವು ಸಿರಿಗನ್ನಡಕೆ, ನಲಿವು ಹೊಸಗನ್ನಡಕೆ
ನಾಡ ಬಾವುಟವೇರಿ ಹಾರಿತದೋ ಗಗನಕೆ !
ಆ ಬಸವನಾ ಹೆಸರು ನಿಮಗಾಯ್ತು ಯತಾರ್ಥ;

ಹಲವು ವಿಧದಲಿ ಮಾತೆಯನು ಸೇವಿಸಿದ ಶಕ್ತ
ಪ್ರಿನ್ಸಿಪಾಲ, ಡೆಪ್ಯುಟಿ, ವಾಗ್ದೇವಿಯಾ ಭಕ್ತ,
ಕನ್ನಡದ ಕುವರರಿಗೆ ಬೋಧಿಸಿದ ಪರಮಗುರು.
ಇಂದಿನೀ ಕನ್ನಡಕೆ ನೀವಹುದು ಆದಿಗುರು,
ನಿಮ್ಮ ಗೆಯ್ಮೆಯ ಸಿದ್ಧಿಯ ತೇಜ ಅಮರ ಹೊಳಪ,–
ಅನುಪಮದ ಚರಿತವದು, ಶ್ರೀ ಚೆನ್ನಬಸವಪ್ಪ.

—ಗುರುಲಿಂಗ ಕಾಪಸೆ, ಅಚ್ಯಾಣ

Regd No B.5375

ಹೊರಬಿದ್ದಿದೆ ! ಬೆಳಕು ಕಂಡಿದೆ !!

೨ನೆಯ ಆವೃತ್ತಿ | **ಶೈಕ್ಷಣಿಕ ಮನೋವಿಜ್ಞಾನ** | ಪುಟ ೩೦೦

ಬರೆದವರು : ಡಾ| ವಿ. ಕೊ. ಜಪಳಿ, M. Ed. Ph. D. M. A. (ಕೋಲಂಬಿಯಾ)

ಬೆಲೆ: ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಕೈದೀವಿಗೆ ! ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ
ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಅಕಳವಾಡಿ ಬುಕ್ ಡಿಪ್ಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಪುಟ ೨೮೦) **ಮೂಲ ಶಿಕ್ಷಣ** (ಬೆಲೆ: ೩-೦-೦

ಲೇಖಕರು : ಶ್ರೀ. ಮ. ಗು. ಹಂದ್ರಾಳ, ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ. ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಅಕಳವಾಡಿ ಬುಕ್ ಡಿಪ್ಪೋ, ಧಾರವಾಡ

Printed by M. A. Kamat, B Sc at Jai Hind Art Press Dharwar. Edited and Published by S. P. Patil, B. M. Sontri, S. R. Tatti, & Smti P. A. Bhaskar, at the Kannada Prathamik Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ

' ಬಾಳುವುದೇತಕೆ ನುಡಿಯೆಲೆ ಜೀವ, ಸಿಂಗನ್ನಡದಲಿ ಕವಿತೆಯ ಹಾಡೆ '

ಬಿಡಿಪ್ರತಿ

ಎಪ್ರಿಲ ೧೯೬೯

ವಾ. ಚಂದಾ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಕೆ. ಬಿ. ಶೀರಗಾಂವಕರ, ಬಿ. ಎಸ್ ಸಿ., (ಆನರ್ಸ) ಬಿ. ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹ-ಸಂಪಾದಕರು

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ. ಬಿ. ಎಂ. ಶಿಂತ್ರಿ, ಬಿ. ಎ. ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೪	ಎಪ್ರಿಲ ೧೯೫೫	ಸಂಚಿಕೆ ೧೧

ಪರಿವಿಡಿ

೧. ಸಂಪಾದಕೀಯ ೧

೨. ಪ್ರಾಥಮಿಕ ಶಿಕ್ಷಣ ಪ್ರಪಂಚ ೩

೩. ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ
ಸ್ಮರಣಿಕೆ (ಲೇಖಾಂಕ ೪) : ಶ್ರೀ. ಶಿಂತ್ರಿ ಬಸಪ್ಪನವರು ೫

೪. ಶಿಕ್ಷಣ ಹಾಗು ಮನೋವಿಜ್ಞಾನ : ಡಾ|| ಜಿ. ಎಸ್. ಗದ್ದಗೀಮಠ ೧೦

೫. ವರ್ಗದ ಶಿಸ್ತು ಕಾಯ್ದುಕೊಳ್ಳುವಿಕೆ : ಶ್ರೀ. ಎಸ್. ಎಂ. ಹಳ್ಳಿಕೇರಿ ೧೪

೬. ಶಿಕ್ಷಣ ಮತ್ತು ಮನೋವಿಜ್ಞಾನ — ಶ್ರೀ. ಮ. ಗು. ಹಂದ್ರಾಳ ೧೮

೭. ಜೀವನ ಶಿಕ್ಷಣದಲ್ಲಿ ಸಂಗೀತೋಪಾಸನೆಯ ಸ್ಥಾನ — ಶ್ರೀ. ಮ. ಗ. ಯಾಜಿ ೨೩

೮. ಸಮಾಜ ಶಿಕ್ಷಣ ಕೇಂದ್ರಗಳು : ಶ್ರೀ. ಪ. ಚ. ಉಣಕಲ್ಲ ೨೬

ವರ್ಧಮಾನ ಪರೀಕ್ಷೆ — ಫಲಿತಾಂಶ (ಪ್ರಕಟನೆ)— .... ಕವ್ಹರ ೩

ಮುಖಪುಟದ ಚಿತ್ರವು "ಪ್ರಪಂಚ" ವಾರಪತ್ರಿಕೆಯ ಕೃಪೆಯಿಂದ

ಸಂಪಾದಕೀಯ

ಯುಗಾದಿಯ ಶುಭಾಶಯಗಳು

ಹೊಸ ದಿನಕೆ ಹೊಸತನವು, ಹೊಸ ಮಳೆಯು ಹೊಸ ಬೆಳೆಯು
ಹೊಸ ದೀಪ ಹಚ್ಚಿ ಬೆಳವಲುವು । ಎಳೆಯುವದು ಬಸವಣ್ಣ ನಿಮ್ಮ ಹೊಸ ತೇರು ॥

ಜಾನಪದ ಸಂಭಾರ*

ಹಿಂದುಗಳ ಹೊಸ ವರುಷದ ಶುಭ ದಿನವು ದಿನಾಂಕ ೨೪-೩-೧೯೫೫ ರಂದು ಉದಯವಾಯಿತು; ಶ್ರೀ. ಶಾಲಿವಾಹನ ಶಕೆಯ ೧೮೭೬ ನೆಯ ವರ್ಷದ ಜಯನಾಮ ಸಂವತ್ಸರವು ಕ್ಷಿತಿಜದಾಚೆಗೆ ಜಾರಿ ೧೮೭೭ ನೆಯ ವರ್ಷದ ಮನ್ಮಥನಾಮ ಸಂವತ್ಸರವು ಈ ಯುಗಾದಿಯಂದು ಪ್ರಪಂಚದ ದಿಗಂತದಲ್ಲಿ ಮೂಡಿಬಂದಿತು. ಸುತ್ತಲೂ ನವಚೇತನವು ತುಂಬಿ ತೇಲುತ್ತ ನಮ್ಮ ಮುಂಬಾಳಿನ ಹುದುಗಿದ ಆಶೆ-ಆಕಾಂಕ್ಷೆಗಳ ಬೆಡಗಿನಲ್ಲಿ ಸುತ್ತಲೂ ಶುಭ ಸಂದೇಶವನ್ನು ಕಳಿಸುತ್ತಿರುವುದು. ಹುಮ್ಮಸವು ಹೊರಚಿಮ್ಮಿ ಮಾನವನ ಜೀವನರಂಗದಲ್ಲಿ ಆದಲುಬದಲಾಗಿ ಹೊಸತನ ತಾಳಿ ಆನಂದಕೊಡಲು ಬಂದಿರುವುದು. ಬಾಳಿದ್ದು ಬದುಕಿಗಾಗಿ, ಬದುಕಿದ್ದು ಬಾಳ್ವೆಗಾಗಿ, ವರುಷ ಬರುವಂತೆ ಬಂದಿದೆ; ಆದಲುಬದಲು ಕಂಡದ್ದು ಮನಗಣ್ಣಿನಲ್ಲಿ. ಆ ದೃಷ್ಟಿ ತರಂಗವೇ ಹೊಸ ಪ್ರಪಂಚದ ಮುನ್ನೋಟವನ್ನು ನಮ್ಮ ಬರಿಗಣ್ಣ ತುಂಬಿ ತರುತಿದೆ.

ಪ್ರೇಮವು ಯಾವಾಗಲೂ ಒಂದೇಯಾದರೂ ಹೊಸತನದ ಹೊದಿಕೆಯಲ್ಲಿ ಅದರ ರೂಪ ರೇಷೆಗಳೇ ನಮ್ಮ ಕಣ್ಣಿಗೆ ಬೇರೆ ಕಾಣಿಸುವವು. ಸಿಹಿ-ಕಹಿಯಾದ ಬಾಳು ಬಲು ಹದನಾದುದು. ಕೇವಲ ಸಿಹಿಯಾದರೆ ಅದರ ರಸರುಚಿಯೇ ನಮಗೆ ಅನಿಸಲಾರದು. ಅದರೊಡನೆ ಕಹಿಯೊಂದಿದ್ದರೆ ಸಿಹಿಯೆಂಬ ಭಾವನೆಯು ಹೊಳೆಯುವದು; ಮತ್ತಿಷ್ಟು ಪ್ರದೀಪ್ತಮಾನವಾಗುವದು. ನಮ್ಮ ಬಾಳು ಸಿಹಿಕಹಿಗಳ ಕಲಬೆರಕೆಯ ಒಂದು ವಿಚಿತ್ರ ರಸಾಯನವೆಂದೇ ಹೇಳಬಹುದು. ಆ ನಿಮಿತ್ತ ಹೊಸದಿನದ ಉಡುಗರೆ ಹೊಸ ಊಟ ರಸನಿಮಿಷಗಳ ಸಮುಯವೋ ಎಂದು ಕಂಡು ಮಾನವನು ಸಿಹಿ ಕಹಿ ಬಾಳನ್ನು ಏಕೀಭಾವದಿಂದ ಮುಂದೂಡುವೆನೆಂದು ತೋರಿಸಲು ಬೇವುಬೆಲ್ಲವನ್ನ ಮೆದ್ದು ಶಿವದಾನಕುಡಿದು ಶಾಂತಭರಿತನಾಗುವನು.

ಒಕ್ಕಲಿಗನ ಪ್ರಪಂಚದಲ್ಲಿ ಹೊಸತನವು ಮೈದೋರುವುದು. ಮುತ್ತೈದೆಯರು ಹೊಸ ವರುಷದ ಹೊಸ ಆರುತಿಯನ್ನೆತ್ತುವರು. ಮನೆಗೆ ಗುಡಿಯಿಟ್ಟು ತೋರಣಕಟ್ಟುವರು. ಹೊಸತನವು ನಾಡ ಮೂಲಮೂಲೆಗೆ ಹರಿದು ಬರುವದೋ ಏನೋ ಎಂಬಂತೆ ಭಾಸವಾಗಿ ಹೊಸ ವರುಷವೇ ಬಂದು ಬಿಡುವುದು. ಈ ಹೊಸತನವು ಆರಿಗೆ ಸೋಂಕಲಿಲ್ಲ? ಈ ಹೊಸದಿನವು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಬೆಳಕನ್ನು ಬೀರಿ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲಣುವಾಗಲಿ. ಹೀಗಾಗಿ ಜಗವೇ ಶುಭಾಶಯದಲ್ಲಿ ಮುಳುಗಿ ಮುಂಬಾಳಿನ ಮುನ್ನೋಟದಲ್ಲಿ ಹಿಂದಿನ ಹಳೆತನ ಮರೆತು ಮುಂದಿನ ಹೊಸತನಕೆ ಹರಿದು ಹೇಗಿದ್ದರೂ ಬಾಳಿನಲ್ಲಿ ಸಿರತವಾಗಲಿ. ಬಂದ ಹೊಸ ದಿನವು ತರಲಿ ಹೊಸತನವ, ಬೆಳೆಯಲೀ ಆಶೆ ಆಕಾಂಕ್ಷೆ ಕಡೆಗೂ.

ಕವಿವರ 'ಕುವೆಂಪು'ರವರಿಗೆ ಕೇಂದ್ರ ಸರಕಾರದ ಸ್ತುತ್ಯ ಸನ್ಮಾನ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಮರವಾದ ಸ್ಥಾನವನ್ನುಗಳಿಸಿದ ಕವಿವರ ಕುವೆಂಪುರವರ '**ರಾಮಾಯಣ ದರ್ಶನಂ**' ಎಂಬ ಅದ್ಭುತ ಕಾವ್ಯಕ್ಕೆ ಕೇಂದ್ರ ಸರಕಾರವು ೫೦೦೦ ರೂಪಾಯಿಗಳ ಬಹುಮಾನವನ್ನು ಕೊಟ್ಟದ್ದು ಭಾರತ ಸರಕಾರದ ಕಲಾಪ್ರೇಮ ಪ್ರತೀಕ. ಇದಾವ ಕನ್ನಡಿಗನಿಗೆ ಅನಂದವನ್ನುಂಟು ಮಾಡಲಿಕ್ಕಿಲ್ಲ? ಪುಟ್ಟಪ್ಪನವರು ಹೆಸರಾಂತ ಕವಿಗಳು. ಅವರ ಕಾವ್ಯಶಕ್ತಿ ಅಪಾರವಾದುದು. ಜೀವನ ಪವಿತ್ರತಮವಾದುದು. ಹತ್ತು ವರುಷಗಳ ತಪಸ್ಸಿನಫಲ 'ರಾಮಾಯಣ ದರ್ಶನಂ.' ಅಮರ ಕವಿಯ ಅಮರವಾಣಿ. ಇಂತಹ ಕವಿಯನ್ನು ಗೌರವಿಸಿದ ನಾಡು ತನ್ನನ್ನು ತಾನೇ ಗೌರವಿಸಿಕೊಂಡಂತೆ.

ಪುಟ್ಟಪ್ಪನವರು ಮೈಸೂರು ರಾಜ್ಯದ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ ಗ್ರಾಮದವರು. ಇವರ ತಂದೆ ವೆಂಕಟಪ್ಪಗೌಡರು. ತಾಯಿ ಸೀತಮ್ಮನವರು. ಅವರ ಪ್ರಾಥಮಿಕ ಅಭ್ಯಾಸ ಸ್ವಗ್ರಾಮದಲ್ಲಿಯೇ

* **ಡಾ॥ ಬಿ. ಎಸ್. ಗದ್ದಗೀಮಠ,**

ಮುಗಿಯಿತು. ಮಾಧ್ಯಮಿಕ ಅಭ್ಯಾಸವನ್ನು ಮೈಸೂರಲ್ಲಿ ಮಾಡಿದರು. ಅವರ ಮುಂದಿನ ಭವ್ಯ ಕಾವ್ಯಶಕ್ತಿಯ ಬೀಜ ಮೊಳೆಯಲು ಅಲ್ಲಿ ಅವರಿಗೆ ಸಾಕಷ್ಟು ಅನುಕೂಲ ಅವಕಾಶಗಳು ದೊರೆತವು. ಪುಸ್ತಕ ಭಾಂಡಾರಗಳೇ ಅವರ ಪೂಜೆ ಪ್ರಾರ್ಥನೆಗಳ ಮಂದಿರಗಳಾದವು. ಅವರ ವಿದ್ಯಾರ್ಜನೆಯ ಜೀವನವೂ ಒಂದು ತಪಸ್ಸಾಧನೆಯಾಯಿತು. ತಮ್ಮ ಹಿರಿದಾದ ಗುರಿಯನ್ನು ಪರಿಶುದ್ಧವಾದ ಪ್ರಯತ್ನದಿಂದ ಸಾಧಿಸಿದರು. ಬುದ್ಧಿಯನ್ನು ಮಸೆದು ಮನಸ್ಸನ್ನು ಹದಗೊಳಿಸಿದರು. ಕಾವ್ಯಶಕ್ತಿಯನ್ನು ಸಂಪಾದಿಸಿದರು. ಆಂಗ್ಲ ಸಾಹಿತ್ಯವನ್ನು ಅಭ್ಯಸಿಸಿದರು. ಪಾಶ್ಚಾತ್ಯ ಪೌರ್ವಾತ್ಯ ತತ್ವಶಾಸ್ತ್ರಗಳನ್ನು ಅಧ್ಯಯನಮಾಡಿದರು. ಶ್ರೀರಾಮಕೃಷ್ಣ ಪರಮಹಂಸ ಹಾಗು ಶ್ರೀಸ್ವಾಮಿ ವಿವೇಕಾನಂದರ ತತ್ವಬೋಧೆಯನ್ನು ಸೇವಿಸಿ ಆತ್ಮಶಕ್ತಿಯನ್ನು ಸಂಗ್ರಹಿಸಿದರು. ಸಾಹಿತ್ಯ ಪ್ರಪಂಚದಲ್ಲಿ ಸೇರಿ ಕಾವ್ಯ ಜೀವನವನ್ನು ನಡೆಸಿದ್ದಾರೆ. ಸಾಹಿತ್ಯದ ಎಲ್ಲ ರೂಪಗಳಲ್ಲಿಯೂ ಶ್ರೇಷ್ಠವಾದ ಕೃತಿಗಳನ್ನು ರಚಿಸಿರುವದು ಅವರ ವೈಶಿಷ್ಟ್ಯ. ಅವರ ಭಾವಗೀತಗಳು ಕನ್ನಡದಲ್ಲಿ ಶಾಶ್ವತವಾಗಿವೆ. ಆದರ್ಶವೂ ಆಗಿವೆ. 'ಕೊಳಲು' ಗುಂಗುಂಗಾನದ ಮಲೆನಾಡಿನ ನಾದವನ್ನೂ, 'ನವಿಲು' ತಿಮಿರದ ತೀರ ಪಕ್ಷಿ ನರ್ತನವನ್ನೂ, 'ಪ್ರೇಮಕಾಶ್ಮೀರವು' ರಸೋನ್ಮತ್ತವಾದ ಶೃಂಗಾರವನ್ನೂ ಹೊರಸೂಸಿ ಇಂದಿನ ಜನರ ಎದೆಯನ್ನು ಹಿಗ್ಗಿಸುತ್ತಿವೆ. 'ಕಾನೂರ ಸುಬ್ಬಮ್ಮ ಹೆಗ್ಗಡತಿ' ಯು ಕನ್ನಡದಲ್ಲಿ ಕಾಣುವ ಮಹಾಕಾದಂಬರಿಗಳಲ್ಲಿ ಒಂದು 'ನನ್ನ ದೇವರು ಮತ್ತು ಇತರ ಕತೆಗಳು.' 'ಮಹಾರಾತ್ರಿ' 'ಜಲಗಾರ' ಮೊದಲಾದ ನಾಟಕಗಳು, ಜನಮನ ಮೋಹಕವಾಗಿವೆ. ಮಲೆನಾಡಿನ ಚಿತ್ರವು ಇವರ ಸಾಹಿತ್ಯದಲ್ಲಿ ಬೆರತುಹೋಗಿದೆ.

ಶ್ರೇಷ್ಠ ಪ್ರಾಧ್ಯಾಪಕರೂ, ವಿಮರ್ಶಕರೂ, ಭಾಷಣಕಾರರೂ ಆದ ಪುಟ್ಟಪ್ಪನವರ ಸಾಹಿತ್ಯ ಗಾತ್ರದಲ್ಲಿಯೂ, ಸತ್ವದಲ್ಲಿಯೂ ಹಿರಿದಾಗಿದೆ. ಅವರು ಪ್ರಕೃತಿಯಲ್ಲಿ ಕಂಡ ಬೆಡಗು ಅಪ್ರತಿಮವಾಗಿದೆ ಕನ್ನಡ ನುಡಿಗೆ ಅವರು ನೀಡದ ಚೈತನ್ಯ ಎಷ್ಟೆಷ್ಟಲ್ಲ. ಕನ್ನಡನಾಡಿಗೆ ಅವರೊಬ್ಬ 'ಠಾಕೂರರು.' ಮೈಸೂರ ಮಹಾರಾಜಾ ಕಾಲೇಜಿಗೆ ಪ್ರಿನ್ಸಿಪಾಲರೆಂದು ನೇಮಕಹೊಂದಿರುವದು ಬಹು ಸಂತೋಷದ ಸುದ್ದಿ. ಕನ್ನಡ ನಾಡುನುಡಿಗೆ ಇನ್ನೂ ಹೆಚ್ಚಿನ ಸೇವೆಗೈಯ್ಯಲು ದೇವರು ಅವರಿಗೆ ಆಯುರಾರೋಗ್ಯವನ್ನೀಯಲೆಂಬುದೇ ನಮ್ಮ ಪತ್ರಿಕೆಯ ಹಿರಿಯ ಹಂಬಲ, ಪರಮ ಪ್ರಾರ್ಥನೆ.

ನಾಟಕರತ್ನ ವೀರಣ್ಣನವರಿಗೆ ಕೇಂದ್ರ ಸರಕಾರದ ಪ್ರಶಸ್ತಿ

ಕೇಂದ್ರ ಸರಕಾರದ ಸಂಗೀತ ನಾಟಕ ಸಂಸ್ಥೆಯವರು ಈ ವರ್ಷದ ನಟಶ್ರೇಷ್ಠರನ್ನು ಸನ್ಮಾನಿಸಿರುವದು ಒಳ್ಳೆಯ ಸ್ತುತ್ಯ ಸಂಗತಿಯಾಗಿದೆ. ಅದರಲ್ಲಿಯೂ ಈ ಸಲದ ನಟನೆಯ ಸನ್ಮಾನವು ಶ್ರೀ. ಗುಬ್ಬಿ ವೀರಣ್ಣನವರಿಗೆ ಬಂದಿರುವುದು ಹೆಚ್ಚಿನ ಸಂತೋಷ. ಶ್ರೀ. ವೀರಣ್ಣನವರು ಕನ್ನಡ ರಂಗಭೂಮಿಗೆ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ತಮ್ಮ ಅಭಿನಯ ಕುಶಲತೆಯಿಂದ ಜನತೆಯನ್ನು ಆಕರ್ಷಿಸಿದ್ದಾರೆ. ತಮ್ಮ ಎಂಟನೆಯ ವಯಸ್ಸಿನಲ್ಲಿ ರಂಗಭೂಮಿಯನ್ನು ಹತ್ತಿ ಸುಮಾರು ೫೦ ವರುಷಗಳ ನಾಟ್ಯಾನುಭವದ ಶಿಖರವನ್ನೇರಿದ್ದಾರೆ. ಆಗಿನ ಮತ್ತು ಈಗಿನ ನಾಟ್ಯಕಲೆಯಲ್ಲಿ ಹೆಚ್ಚುಕಡಿಮೆಯೇನೆಂಬುದನ್ನು ಕೇಳಬೇಕು ಅವರ ಬಾಯಿಂದಲೆ. ಆಕರ್ಷಕ ವ್ಯಕ್ತಿತ್ವ ಹಾಗು ಗಂಭೀರ ಧ್ವನಿಯುಳ್ಳ ಶ್ರೀ. ವೀರಣ್ಣನವರು ತಮ್ಮ ತ್ಯಾಗಮಯ ಸಾಹಸದಿಂದ ನಟನೆ ಹಾಗು ಹಾಸ್ಯಗಳ ಉನ್ನತ ತುದಿಯನ್ನೇರಿದ್ದಾರೆ. ತಮ್ಮ ಜೀವನದ ಐವತ್ತು ವರುಷಗಳನ್ನು ನಾಟಕ ಕಲೆಯ ಅಭಿವೃದ್ಧಿಗೆ ಮೀಸಲಾಗಿರಿಸಿ ಭರತಖಂಡದಲ್ಲಿ ಕನ್ನಡ ರಂಗಭೂಮಿಗೆ ಅಗ್ರಸ್ಥಾನ ದೊರೆಯುವ ಶ್ರೇಯಸ್ಸು ಇವರಿಗೆ ಯಥೇಚ್ಛವಾಗಿ ಸಲ್ಲುತ್ತದೆ. ಇಂತಹ ನಟಶ್ರೇಷ್ಠರನ್ನು ಮೈಸೂರ ಸರಕಾರದವರು ಈ ಮೊದಲೇ ಗೌರವಿಸಿ 'ನಾಟಕರತ್ನ'ವೆಂಬ ಬಿರುದನ್ನು ಅವರಿಗೆ ದಯಪಾಲಿಸಿದ್ದಾರೆ. ಅವರ ದೀರ್ಘಕಾಲದ ನಾಟಕ ಕಲಾಸೇವೆಯನ್ನು ಮೆಚ್ಚಿ ಭಾರತ ಸರಕಾರದವರು ಸಹ ಈ ವರುಷದ ಪ್ರಶಸ್ತಿಯನ್ನು ಅವರಿಗೆ ಕೊಟ್ಟಿರುವದು ತುಂಬಾ ಸಂತೋಷ. ಈ ಬಗ್ಗೆ ವೀರಣ್ಣನವರಿಗೆ ನಮ್ಮ ಪತ್ರಿಕೆಯ ಹಾರ್ದಿಕ ಅಭಿನಂದನೆ. ಪರಮಾತ್ಮನು ಅವರಿಗೆ ಸುಖ ಸಂಪದಭಿವೃದ್ಧಿಗಳನ್ನೀಯಲಿ.

ಪ್ರಾಥಮಿಕ ಶಿಕ್ಷಣ ಪ್ರಪಂಚ

ಮಾರ್ಚ ೧೯೫೫

ಅಕ್ಕಿಆಲೂರ ೧ : ನಿನ್ನೆ ಡಾ॥ ಎಸ್. ಬಿ. ದೇಸಾಯಿಯವರ ಅಧ್ಯಕ್ಷತೆಯಲ್ಲಿ ಪ್ರಾ. ಶಾಲಾ ಪ್ರಮಾಣಪತ್ರಗಳ ವಿತರಣೆ ಹಾಗು ೧೯೫೪ ರಲ್ಲಿ ಜಿಲ್ಲೆಗೆ ಪ್ರಥಮಸ್ಥಾನ ಪಡೆದ ವಿದ್ಯಾರ್ಥಿಯ ಮತ್ತು ಶಿಕ್ಷಕರನ್ನು ಅಭಿನಂದಿಸುವ ಸಮಾರಂಭವು ನೆರವೇರಿತು. ಈ ಹಿಂದೆ ನಾಟಕನಾಡಿ ಉಳಿದ ಹಣದಿಂದ ೨ ನೀರಿನ ಟಾಕಿಗಳನ್ನು ಕೊಳ್ಳಲಾಯಿತು; ಶ್ರೀ. ಸಿದ್ದಪ್ಪ ಹೋತನಹಳ್ಳಿ ಇವರು ಒಂದು ತಾಮ್ರದ ಕೊಡ; ಶ್ರೀ. ಗದಿಗೆಪ್ಪಗೌಡ ಪಾಟೀಲ, ಇವರು ಒಂದು ತಂಬಿಗೆ ಶಾಲಾ ಬಾಲಕರಿಗೆ ನೀರಿನ ಪೂರೈಕೆಗಾಗಿ ಕೊಟ್ಟರು. ನಾಟ್ಯಕಲೆ ಪ್ರೋತ್ಸಾಹನಕ್ಕಾಗಿ ಶ್ರೀ ಜಿ. ಎಸ್. ದೇಸಾಯಿ ಮತ್ತು ಜಿ. ಆರ್. ದೇಸಾಯಿ ಕಲ್ಲಾಪೂರ ಇವರು ತಲಾ ರೂ. ೨೫ ಗಳನ್ನು ಕೊಟ್ಟರು.

ದೇವನಾಳ (ಬಾಗಲಕೋಟೆ) ೧ : ಜಿಲ್ಹಾ ಶಾಲಾ ಸಮಿತಿಯ ಚೇರಮನ್‌ರಾದ ಶ್ರೀ. ಪಿ. ಎಮ್. ನಾಡಗೌಡ ಅವರ ಅಧ್ಯಕ್ಷತೆಯಲ್ಲಿ ವಿಜಾಪೂರ ಡಿ. ಎಲ್. ಬಿ. ಪ್ರೆಸಿಡೆಂಟ ಶ್ರೀ. ಎಸ್. ಎಸ್. ಮೆಳ್ಳಿಗೇರಿ ಯವರು ಇಲ್ಲಿಯ ಹೊಸ ಶಾಲೆಯನ್ನು ಉದ್ಘಾಟಿಸಿದರು.

ವಿಜಯಪುರ ೫ : ಎಸ್. ಎಸ್. ಸಿ. ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಹಾಗೂ ಅಂತರ್ ಶಾಲೆಯ ಭಾಷಣ ಸ್ಪರ್ಧೆಗಳ ಪಾರಿತೋಷಕ ವಿತರಣ ಸಮಾರಂಭವು ಜಿಲ್ಹಾಧಿಕಾರಿಗಳಾದ ಶ್ರೀ. ಎಚ್. ಟಿ. ಸಾಧ್ವಾನಿಯವರ ಹಸ್ತದಿಂದ ನೆರವೇರಿತು. ಸರಕಾರಿ ಹಾಯಸ್ಕೂಲಿನ ಹೆಡ್ ಮಾಸ್ತರರಾದ ಶ್ರೀ ರಾ. ರಾ. ಕುಪ್ಪಸದರವರು ಸ್ವಾಗತ ಭಾಷಣ ಮಾಡಿ ಸಂಘದ ಚಟುವಟಿಕೆಗಳನ್ನು ವಿವರಿಸಿದರು. ೧೬ ಪಾರಿತೋಷಕಗಳನ್ನು ಹಂಚಲಾಯಿತು.

ಕಾರವಾರ ೫-೬; ಜಿಲ್ಹಾ ಶಿಕ್ಷಣಾಧಿಕಾರಿಗಳಾದ ಶ್ರೀ. ಎ. ಎಚ್. ದಳವಾಯಿಯವರ ಅಧ್ಯಕ್ಷತೆಯಲ್ಲಿ ಕಾರವಾರ ಗುಂಪಿನ ಪ್ರಾ. ಶಿಕ್ಷಕರ ಸಮ್ಮೇಲನವು ನೆರವೇರಿತು. ೪೪ ಶಾಲೆಗಳ ೧೭೫ ಶಿಕ್ಷಕ-ಶಿಕ್ಷಿಕೆಯರು ಹಾಜರಿದ್ದರು.

ಅದರಗುಂಚಿ ೬ : ಇಲ್ಲಿಯ ಸಮಾಜ ಕೇಂದ್ರಕ್ಕೆ ಒಳಪಟ್ಟ ಯಾವತ್ತು ಶಿಕ್ಷಕರ ಸಭೆ ಕರೆಯಲಾಗಿತ್ತು. ಈ ಸಭೆಗೆ ೧೬ ಶಾಲೆಗಳ ಶಿಕ್ಷಕ-ಶಿಕ್ಷಿಕೆಯರು ಮತ್ತು ಗ್ರಾಮಗಳ ಪ್ರತಿಷ್ಠಿತ ನಾಗರಿಕರು ಆಗಮಿಸಿದ್ದರು.

ಅಡರಕಟ್ಟಿ ೧೭ : ಶ್ರೀ. ವ್ಹಿ. ಜೆ. ಡೆವ್ಹಿಡ್ ಇವರ ಹಿರಿಯತನದಲ್ಲಿ ಇಲ್ಲಿಯ ಸಮಾಜ ಶಿಕ್ಷಣ ಗ್ರೂಪ್ ಸಮ್ಮೇಲನವು ವಿಜೃಂಭಣೆಯಿಂದ ಜರುಗಿತು. ಶ್ರೀ. ಬಿ. ಡಿ. ಶೆಟ್ಟಿ, ನಗರಾಧ್ಯಕ್ಷರು ಸಮಾರಂಭದ ಹಾಗೂ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದರು.

ನೇಸರಗಿ : ೨೦ ಶ್ರೀಮತಿ ಎಸ್. ಡಿ. ಥಿಟೆ, ಡೆ. ಎ. ಇ. ಬೆಳಗಾವ ಇವರ ಹಿರಿಯತನದಲ್ಲಿ ಈ ವಿಭಾಗದ ೩೩ ಪ್ರಾ. ಶಾಲೆಗಳ ಶೈಕ್ಷಣಿಕ ಸಮ್ಮೇಲನವು ಸಾಂಗವಾಯಿತು. ೧೫೦ ಶಿಕ್ಷಕರು ಚರ್ಚೆಯಲ್ಲಿ ಭಾಗವಹಿಸಿದ್ದರು. ಶ್ರೀ. ಹೆಗಡೆ, ಎ. ಓ. ರವರು ಸಮ್ಮೇಲನವನ್ನೂ ಶ್ರೀ. ಮೋಣಶಿಯವರು ಪ್ರದರ್ಶನವನ್ನೂ ಉದ್ಘಾಟಿಸಿದರು.

ವಿಜಯಪೂರ ೨೧ ; ಇಲ್ಲಿಯ ಸರಕಾರಿ ಸಾಲೆಯ ಎಸ್. ಎಸ್. ಸಿ ವಿದ್ಯಾರ್ಥಿಗಳಿಗೆ ತಮ್ಮ ಶಾಲೆಯ ತೋಟದಲ್ಲಿ ಬೆಳೆದ ಮಹಾಸೂಲದ ೩ ನಿವ್ವಳ ಲಾಭವನ್ನು ಪಾರಿತೋಷಕರೂಪವಾಗಿ ನಿವೃತ್ತ ಮುಖ್ಯಾಧ್ಯಾಪಕರಾದ ಶ್ರೀ. ಆರ್. ಎಸ್. ಕಿತ್ತೂರ ಇವರ ಹಸ್ತದಿಂದ ಕೊಡಿಸಲಾಯಿತು. ಶ್ರೀ. ಸಿ. ಜೆ. ಪಾಟೀಲರು ಪ್ರಾಸ್ತಾವಿಕ ಭಾಷಣ ಮಾಡಿದರು.

ಪ್ರಾಥಮಿಕ ಶಿಕ್ಷಣ

ಶಿಂದೊಳ್ಳಿ ೨೭ : ಇಲ್ಲಿಯ ಶಾಲಾ ಬಾಲಕರು ಆಡಿದ "ಸ್ವಾವಲಂಬನ" ನಾಟಕವು ಬೆಳಗಾಂವ ಜಿಲ್ಹೆಯಲ್ಲಿ ದ್ವಿತೀಯ ಸ್ಥಾನವನ್ನು ಮತ್ತು ಕನ್ನಡ ನಾಟಕಗಳಲ್ಲಿ ಪ್ರಥಮಸ್ಥಾನಪಡೆದಿರುವದು.

ಹುಕ್ಕೇರಿ ೨೭ : ಶ್ರೀ. ಎಸ್. ವ್ಹಿ. ಜೇವೂರ, ಜಿಲ್ಹಾ ಶಿಕ್ಷಣಾಧಿಕಾರಿಗಳ ಹಿರಿಯತನದಲ್ಲಿ ಇಲ್ಲಿಯ ಸಮಾಜ ವಿಕಾಸ ಯೋಜನೆಯ ಅಂಗವಾಗಿ ಏರ್ಪಡಿಸಲಾದ ಕೊನೆಯ ಶೈಕ್ಷಣಿಕ ಸ್ಪರ್ಧೆಗಳಲ್ಲಿ ಬೆಲ್ಲದ ಬಾಗೇವಾಡಿ (ಹುಕ್ಕೇರಿ) ಕ. ಗಂ. ಶಾಲೆಯವರು ಹೆಚ್ಚ ಗುಣಗಳನ್ನು ಪಡೆದದ್ದಕ್ಕಾಗಿ "ರೋಲಿಂಗ ಶೀಲ್ಡ" ದೊರಕಿತು.

ಅಲ್ಪಾವಧಿ ಹಿಂದೀ ತರಬೇತಿ ವರ್ಗದ ಪ್ರಗತಿ

ಕೇಂದ್ರ ಸರಕಾರದ ಪಂಚವಾರ್ಷಿಕ ಯೋಜನೆಯ ಪ್ರಕಾರ ಅಲ್ಪಾವಧಿ ಹಿಂದೀ ತರಬೇತಿ ವರ್ಗವು ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನಲ್ಲಿ ಕಳೆದ ಜಾನೇವಾರಿಯಿಂದ ಪ್ರಾರಂಭವಾಗಿದ್ದು ಸದರೀ ತರಬೇತಿಗೆ ವಿಜಾಪೂರ, ಧಾರವಾಡ, ಬೆಳಗಾಂವ, ಕಾರವಾರ ಜಿಲ್ಹಾ ಹಾಗೂ ಮುನಸಿಪಲ್ ಸ್ಕೂಲ ಬೋರ್ಡಗಳಿಂದ ೭೬ ಜನ ಶಿಕ್ಷಕರು ಬಂದಿದ್ದಾರೆ. ತರಬೇತಿಯ ಅವಧಿ ಕೇವಲ ನಾಲ್ಕು ತಿಂಗಳುಗಳದ್ದಾಗಿದ್ದರೂ ಸರಕಾರದ ಈ ಗುರಿಯು ಒಳ್ಳೇ ಸ್ತುತ್ಯವಾಗಿದೆ.

ಕೋರ್ಸಿನ ಅಭ್ಯಾಸಕ್ರಮಕ್ಕೆ ಅನುಸರಿಸಿ ಹಿಂದೀ ವಿಷಯದ ರೂಢಿ ಸಾಕಷ್ಟಾಗಲು, ಹಿಂದೀ ಮಾತುಗಾರಿಕೆ ಶಿಕ್ಷಕ ವಿದ್ಯಾರ್ಥಿಗಳಲ್ಲಿ ಬೆಳೆದು ಬರಲು ಕೆಲಪ್ರತಿಷ್ಠಿತ ಹಿಂದೀತಜ್ಞರ ಭಾಷಣಗಳನ್ನೇರ್ಪಡಿಸಿ ನಮಗೆ ಯೋಗ್ಯ ಸುಸಂಧಿಯನ್ನು ಒದಗಿಸಿದ್ದಾರೆ, ಒದಗಿಸಲಿದ್ದಾರೆ. ತಜ್ಞಭಾಷಣಕಾರರ ಭಾಷಣದ ಸಾರಾಂಶ ಇಂತಿದೆ. ಈ ಭಾಷಣಗಳು ನಮ್ಮ ಕಾಲೇಜಿನ ಪ್ರಾರ್ಥನಾ ಮಂದಿರದಲ್ಲಿಯೇ ಆದವು.

ದಿ. ೧೫ – ೩ – ೧೯೫೫ ರಂದು ಕರ್ನಾಟಕ ಹಿಂದೀ ಪ್ರಾಂತೀಯ ಪ್ರಚಾರಸಭೆಯ ಮಂತ್ರಿಗಳಾದ ಶ್ರೀ. ಸಾವಡಾರವರು 'ಹಿಂದೀ ಸಾಹಿತ್ಯದ ಭಕ್ತಿಕಾಲದ ಆರಂಭ' ಈ ವಿಷಯವಾಗಿ ವಿದ್ವತ್ಪೂರ್ಣವಾದ ಭಾಷಣವನ್ನು ಮಾಡಿದರು. ವೀರಗಾಥಾಕಾಲದ ವೀರ್ಯೋತ್ಸಾಹ, ಯುದ್ಧ ಗಾಂಭೀರ್ಯ ಇತ್ಯಾದಿಗಳ ಜೊತೆಗೆ ಆಗಿನ ಜನಮನವು ಭಕ್ತಿ ಆರಾಧನೆಗಳಕಡೆಗೆ ಹೇಗೆ ಆಕರ್ಷಿತವಾಯಿತು? ಹಿಂದೀ ಸಾಹಿತ್ಯ ಯುಗದಲ್ಲಿ ಭಕ್ತಿ ಕಾಲವು ಸುವರ್ಣಮಯವಾದದ್ದು ಎಂಬುದಾಗಿ ಚೆನ್ನಾಗಿ ಮನವರಿಕೆ ಮಾಡಿಕೊಟ್ಟರು.

ದಿ. ೨೨–೩–೫೫ ರಂದು ಶ್ರೀ. ಸು. ವೀ. ಭಟ್ಟ ಎಮ್.ಎ.(ಹಿಂದಿ) ಇವರು ಹಿಂದೀ ಸಾಹಿತ್ಯದಲ್ಲಿಯ 'ರೀತಿಕಾಲದ' ಆರಂಭದ ಬಗೆಗೆ ವಿಶದವಾಗಿ–ಸ್ಪಷ್ಟವಾಗಿ–ತಿಳಿಯುವಂತೆ ಹೇಳಿದರು. ಕೇಶವದಾಸ, ಬಿಹಾರಿ ಮುಂತಾದ ಆ ಕಾಲದ ಪ್ರಕಾಂಡ ಕವಿಗಳ ಪರಿಚಯ ಹಾಗೂ ಅವರ ಕಾರ್ಯವನ್ನು ವರ್ಣಿಸಿದರು.

ದಿ. ೧೮ – ೩ – ೫೫ ರಂದು ಭೂತಪೂರ್ವ ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭೆಯ ಮಂತ್ರಿ ಪಂ. ಸಿದ್ಧನಾಥಪಂತರು 'ಹಿಂದೀ ತರಬೇತಿಯ ಅಭ್ಯಾಸಕ್ರಮ,' ಸರಕಾರದ ಹಿಂದೀ ಭಾಷಾ ವಿಕಾಸಕ್ಕಾಗಿರುವ ಧ್ಯೇಯಧೋರಣೆ, ತರಬೇತಿಗಾಗಿ ಬಂದ ಶಿಕ್ಷಣ ವಿದ್ಯಾರ್ಥಿಗಳ ಹೊಣೆಗಾರಿಕೆ ಈ ಎಲ್ಲ ವಿಷಯುಗಳ ಬಗ್ಗೆ ತಮ್ಮ ಅಸ್ಖಲಿತವಾಣಿಯಿಂದ ಪರಿಚಯಮಾಡಿಕೊಟ್ಟರು.

ರಾಷ್ಟ್ರಭಾಷೆ ಹಿಂದಿಯ ವಿಕಾಸ ದಿನದಿನಕ್ಕೆ ಹೆಚ್ಚಿ, ದೇಶದಾದ್ಯಂತ ಹಿಂದೀ ಭಾಷಾ ಭಾಷಿಗಳ ಸಂಖ್ಯೆಯನ್ನಷ್ಟೇ ಬೆಳಯಿಸುವದಲ್ಲದೆ ಈ ಬಗ್ಗೆ ಆತ್ಮೀಯತೆ, ದೇಶಪ್ರೇಮ ಸಂಸ್ಕೃತಿಯ ಪುನರುತ್ಥಾನ ಒಡಮೂಡಲು ಸರಕಾರವು ಕೈಕೊಂಡ ಈ ತರಬೇತಿಯು ಪ್ರ ಪ್ರಥಮ ಹೆಜ್ಜೆಯಾಗಿದೆ.

— ಕಾರ್ಯದರ್ಶಿ, ಹಿಂದೀ ತರಬೇತಿ ವರ್ಗ.

ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ

(ಲೇಖಾಂಕ ೪)

ಅನುವಾದಕರು :— ಶ್ರೀ. ಶಿಂತ್ರಿ ಬಸಪ್ಪನವರು, ಬಿ. ಎ. ಬಿ. ಟಿ. ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣಭಾಗ, ಧಾರವಾಡ, ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಿಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

೩ ನೆಯ ಪ್ರಕರಣ

ಮಗು

ಶಿಕ್ಷಣವು ಮಗು-ಪ್ರಧಾನ (Child-Centred) ವಿರುವದರಿಂದ ಶಿಕ್ಷಣದ ಎಲ್ಲ ಕಾರ್ಯಕ್ರಮಗಳೂ ಅಭ್ಯಾಸ ಪತ್ರಿಕೆಗಳೂ ಮಗುವಿನ ಅನುಭವ, ಅಭಿರುಚಿ, ಬೇಡಿಕೆಗಳಿಗನುಗುಣವಾಗುವಂತೆ ಹೆಣೆಯಲ್ಪಡಬೇಕು. ಮಗುವಿನ ಬೌದ್ಧಿಕ ವಿಕಾಸದ ಕೂಡ ಶಾರೀರಿಕ ಹಾಗೂ ಭಾವಾತ್ಮಕ ಬೆಳವಣಿಗೆಯನ್ನು ನೋಡಿಕೊಳ್ಳುವದು ಶಿಕ್ಷಕನ ಕರ್ತವ್ಯವು. ಶಿಕ್ಷಣದ ಆಧುನಿಕ ಪದ್ಧತಿಗಳನ್ನು ಅರಿತುಕೊಳ್ಳುವ ಮೊದಲು ಶಿಕ್ಷಕನು ಮಗುವಿನ ಮನಸ್ಸನ್ನೂ ಒಲವು-ನಿಲವುಗಳನ್ನೂ ಚನ್ನಾಗಿ ತಿಳಕೊಂಡವನಿರಬೇಕು. ಮನಃಶಾಸ್ತ್ರದ ಇಲ್ಲವೆ ಶಿಕ್ಷಣಶಾಸ್ತ್ರದ ಹೊತ್ತಿಗೆಗಳನ್ನೋದಿಕೊಂಡರೆ ಆ ಜ್ಞಾನವು ಲಭಿಸಲಾರದು. ಆವಾಗಲೂ ಮಕ್ಕಳ ಮಧ್ಯದಲ್ಲಿದ್ದುಕೊಂಡು ಅವರ ಕೂಡ ಆಡುತ್ತ ಕೆಲಸ ಮಾಡುತ್ತ ಅವರನ್ನು ಕಣ್ಣಲ್ಲಿ ಕಣ್ಣಿಟ್ಟುಕೊಂಡು ನಿರೀಕ್ಷಿಸುತ್ತಿದ್ದರೆ, ಅವರ ಬಗೆಗೆ ನಿಜವಾದ ಜ್ಞಾನವು ಸಿಕ್ಕುವದು. ಮನಃಶಾಸ್ತ್ರವು ಮಕ್ಕಳನ್ನು ಕುರಿತು ಹಲವು ಸಾಧಾರಣ ನಿಯಮಗಳನ್ನು ಹೇಳಬಲ್ಲದು. ಆ ನಿಯಮಗಳು ಪ್ರತಿಯೊಂದು ಮಗುವಿಗೂ ಅನ್ವಯಿಸಲಿಕ್ಕಿಲ್ಲ. ಪ್ರತಿಯೊಂದು ಮಗುವಿನ ವಿಷಯಕ್ಕೆ ಜ್ಞಾನವು ಶಿಕ್ಷಕನಿಗಿರುವದು ಅವಶ್ಯವಿದೆ. ಮಕ್ಕಳಲ್ಲಿ ಬೆರೆತು ಒಂದಾಗಿ ಕೆಲಸ ಮಾಡಿದ ಹೊರತು ಅದು ಸಾಧಿಸುವದಿಲ್ಲ.

ಮಗುವು ಉತ್ಸಾಹಭರಿತವಿದ್ದು ಅದರ ಒಲವು ಚಟುವಟಿಕೆಗಳತ್ತ ಇರುವದುಂಟು. ಅಂತಃಸ್ಫೂರ್ತಿಯಿಂದ ಕೆಲಸ ಮಾಡುತ್ತ, ಅದು ಆವಾಗಲೂ ಹೊಸ ಅನುಭವಗಳನ್ನು ಪಡೆಯಲು ಹಾತೊರೆಯುತ್ತಿದೆ. ಜಾಣನಾದ ಶಿಕ್ಷಕನು ಮಗುವಿನ ಆ ಸ್ಫೂರ್ತಿ—ಅನುಭವಗಳಿಗೆ ತಕ್ಕ ಚಾಲನೆ ಮಾರ್ಗದರ್ಶನಗಳನ್ನು ಕೊಟ್ಟು ತನ್ನ ಶಿಕ್ಷಣದ ಕಾರ್ಯದಲ್ಲಿ ಅವುಗಳನ್ನು ಉಪಯೋಗಿಸಿಕೊಳ್ಳಬೇಕು. ಕೆಲವೊಂದು ಮಗುವು ಅನಾರೋಗ್ಯದ ಮೂಲಕ ನಿರುತ್ಸಾಹಭರಿತವಾಗಿದ್ದು ಚಿಕಿತ್ಸಕ ಬುದ್ಧಿ ಹಾಗೂ ಕಲಿಯಬೇಕೆಂಬ ಲವಲವಿಕೆ ಅದರಲ್ಲಿದ್ದುದು ಕಂಡು ಬರಲಿಕ್ಕಿಲ್ಲ. ಅಂಥಮಗುವಿನ ಅನಾರೋಗ್ಯ

ವನ್ನು ಶಿಕ್ಷಕನು ಗೊತ್ತು ಹಚ್ಚಿ ಅದನ್ನು ನಿವಾರಿಸಲು ಯತ್ನಿಸಬೇಕು. ಆರೋಗ್ಯದಿಂದಿದ್ದ ಮಗುವಿನಲ್ಲಿ ಉತ್ಸಾಹದ ಸೆಲೆಯು ಆವಾಗಲೂ ಚಿಮ್ಮುತ್ತಿರುತ್ತದೆ.

ಚಟುವಟಿಕೆಯು ಮಗುವಿನ ಕೌತುಕವನ್ನು ಕೆಣಕುತ್ತದೆಯೆಂಬ ಮಾತು ಎಲ್ಲರಿಗೂ ಗೊತ್ತಿರಲು ಸಾಕು. " ಅದು ಏನು, ಏಕೆ, ಹೇಗೆ ? " ಎಂದು ಚಿಕಿತ್ಸೆ ಮಾಡುವದು, ನಿರೀಕ್ಷಿಸುವದು, ಸ್ವತಃ ಜ್ಞಾನ ಮಾಡಿಕೊಳ್ಳುವದು, ಇವುಗಳಲ್ಲಿ ಮಗುವಿಗೆ ಸ್ವಾಭಾವಿಕವಾದ ಅಭಿರುಚಿಯಿದೆ. ಮಗುವಿನ ಚಿಕಿತ್ಸಕ ಬುದ್ಧಿಯನ್ನು ಶಿಕ್ಷಕನು ಕಮರಿಸದೆ ಚಿಗುರಿಸಬೇಕು. ಪ್ರಶ್ನೆಗಳನ್ನು ಕೇಳಲು ಮಕ್ಕಳಿಗೆ ಪ್ರೋತ್ಸಾಹಿಸಿ, ಅವರ ಪ್ರಶ್ನೆಗಳಿಗೆಲ್ಲ ಸಮರ್ಪಕ ಉತ್ತರಗಳನ್ನು ಕೊಟ್ಟು ಅವರನ್ನು ಸಮಾಧಾನ ಪಡಿಸಿ, ಅವರಲ್ಲಿ ಶೋಧಕ ಬುದ್ಧಿ ಹುಟ್ಟುವಂತೆ ಮಾಡಿ, ಪ್ರತಿಯೊಂದು ವಸ್ತುವಿನ ಜ್ಞಾನವನ್ನು ತಾವೇ ಸ್ವತಃ ಮಾಡಿಕೊಳ್ಳಲು ಅವರನ್ನು ಹುರಿದುಂಬಿಸಬೇಕು. ಸೃಷ್ಟಿ-ನಿರೀಕ್ಷಣೆ, ಇತಿಹಾಸ ಹಾಗೂ ಭೂಗೋಲ ವಿಷಯಗಳಲ್ಲಿ ಸಣ್ಣ ಪುಟ್ಟ ಶೋಧಗಳನ್ನು ಮಾಡಲು ಅವರನ್ನು ಪ್ರೇರೇಪಿಸಬೇಕು. ವಸ್ತುಗಳನ್ನು ಸ್ವತಃ ತಯಾರ ಮಾಡುವದು, ಅವುಗಳನ್ನು ಶೇಖರಿಸುವದು, ಚಂದ ಕಾಣುವಂತೆ ಅವುಗಳನ್ನು ಬೇರೆ ಬೇರೆಯಾಗಿ ಹೊಂದಿಸುವದು, ಮೊದಲಾದ ಚಟುವಟಿಕೆಗಳಲ್ಲಿ ಮಕ್ಕಳು ಆಸ್ಥೆವಹಿಸುವದು ಆಶ್ಚರ್ಯವಲ್ಲ. ಮಕ್ಕಳಲ್ಲಿ ಸ್ವಾಭಾವಿಕವಾಗಿದ್ದ ಆ ರಚನಾತ್ಮಕ ಪ್ರವೃತ್ತಿಗೆ ಸಾಲೆಯಲ್ಲಿ ತಕ್ಕ ಪೋಷಣೆಯನ್ನು ಕೊಟ್ಟು ಅದನ್ನು ಬೆಳೆಯಿಸಬೇಕು. ಕೈಕೆಲಸ, ಆಟ-ನೋಟ, ಚಿಕ್ಕಪ್ರವಾಸ, ಸೃಷ್ಟಿ-ನಿರೀಕ್ಷಣೆ, ಮೊದಲಾದ ವಿಷಯಗಳು ಮಕ್ಕಳಲ್ಲಿ ಹುದುಗಿದ್ದ ರಚನಾತ್ಮಕ ಶಕ್ತಿಯನ್ನು ಕೆಣಕಿ ಅದನ್ನು ಬಲಪಡಿಸಲು ಅಣಿಯಾಗುತ್ತಿವೆ.

ಮಗುವಿನ ಶರೀರವು ಒಂದು ಕ್ರಮದಿಂದ ಬೆಳೆಯುತ್ತಿದೆ. ಶಾರೀರಿಕ ಬೆಳವಣಿಗೆಗೆ ಅನುಸರಿಸಿ ಅದರ ಮಾನಸಿಕ ವಿಕಾಸವಾಗುವದುಂಟು. ಚನ್ನಾಗಿ ನಡೆದಾಡಲು ಬಂದ ಮೇಲೆ ಮಗುವಿನಲ್ಲಿ ಸಂಗ್ರಹ ಪ್ರವೃತ್ತಿಯು ಚಿಗುರಿ, ಅದು ತನಗೆ ಬೇಕಾದ ವಸ್ತುಗಳನ್ನು ಕೂಡ ಹಾಕಿ ಅವುಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುವದುಂಟು. ನಿರೀಕ್ಷಣೆಯನ್ನು ಮಾಡಿ ಮಾಡಿ ಕಣ್ಣಿನ ದೃಷ್ಟಿಯು ಸಾಕಷ್ಟು ಬೆಳೆಯದ ಹೊರತು ಮಗುವಿಗೆ ಓದಲು ಕೊಡಬಾರದು. ಕಣ್ಣಿನ ಶಕ್ತಿ ಬೆಳೆಯದಿದ್ದ ಮಗುವು ಚನ್ನಾಗಿ ಓದಲಾರ. ಮಕ್ಕಳಿಗೆ ವಿಷಯಗಳನ್ನು ಕಲಿಯಲು ಹೇಳುವ ಮೊದಲು ಅವು ಆ ಮಕ್ಕಳ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗಳಿಗನುಗುಣವಾಗಿವೆಯೆಂಬುದನ್ನು ಶಿಕ್ಷಕನು ಕಂಡುಕೊಳ್ಳಬೇಕು. ಮಕ್ಕಳ ಮನಸ್ಸು ಪಕ್ವವಾಗದ ಮುನ್ನ ಒತ್ತಾಯದಿಂದ ಕಲಿಸಲು ಪ್ರಯತ್ನಿಸಿದರೆ, ಆ ಪ್ರಯತ್ನಗಳೆಲ್ಲ ವ್ಯರ್ಥವಾಗುವವು. ಅರಳದ ಮನಸಿಗೆ ಕಲಿಸುವದರಿಂದ ಶ್ರಮ-ವೇಳೆಗಳ ಉಳಿತಾಯವಾಗುವುದಲ್ಲದೆ ಅದು ಹೆಚ್ಚು ಪರಿಣಾಮಕಾರಿಯಾಗುವದು.

ಮಗುವಿನ ಸಾಮಾಜಿಕ ಪರಿಸ್ಥಿತಿಯನ್ನು ಗೊತ್ತು ಹಚ್ಚಿ ಅದು ಮೊದಲು ಹೇಗಿತ್ತು ಈಗ ಹೇಗಿದೆಯೆಂಬುದನ್ನು ಕೂಲಂಕಷವಾಗಿ ಅಭ್ಯಸಿಸಬೇಕು. ವಾಡಿಕೆಯಾಗಿ ಶಿಕ್ಷಕರು ತಮ್ಮ ಅಭ್ಯಾಸ ಪತ್ರಿಕೆಯೊಳಗಿನ ವಿಷಯಗಳನ್ನು ಕಲಿಸುವದರಲ್ಲಿಯೇ ಮಗ್ನರಾಗಿ ಮಕ್ಕಳು ಸಾಲೆಯ ಹೊರಗೆ ಗಳಿಸಿದ ಅನುಭವಗಳಿಗೆ ಲಕ್ಷ್ಯವನ್ನು ಪೂರೈಸುವದಿಲ್ಲ. ಮಗುವು ಸಾಲೆಗೆ ಕಲಿಯಲಿಕ್ಕೆ ಬಂದಿದೆಯೆಂಬ ವಿಚಾರವನ್ನು ತಲೆಯಲ್ಲಿಟ್ಟುಕೊಂಡು ಅದರ ಹಿಂದಿನ ಹಾಗೂ ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ಗಣನೆಗೆ ತಂದುಕೊಳ್ಳುವದಿಲ್ಲ. ಮಗುವಿನ ಮನೆತನ ಎಂತಹದು, ಮನೆಯಲ್ಲಿ ಸಿಗುವ ಪೋಷಣೆ ಎಂತಹದು, ಓಣಿಯಲ್ಲಿ ಎಂತಹ ಮಕ್ಕಳ ಕೂಡ ಆಡುತ್ತಿದೆ, ಇವುಗಳ ಜ್ಞಾನವು ಶಿಕ್ಷಕನಿಗೆ ಶಿಕ್ಷಣದ ಕಾರ್ಯದಲ್ಲಿ. ನೆರವಾಗುತ್ತಿದೆ. ಯಾಕಂದರೆ, ಮಗುವಿನ ಅಭಿರುಚಿ ಆಸಕ್ತಿಗಳು ಅದರ ಸಾಮಾಜಿಕ ಹಿನ್ನೆಲೆಯ ಮೇಲೆಯೇ ಬಹಳಷ್ಟು ಅವಲಂಬಿಸಿರುತ್ತಿವೆ. ಮಗುವಿನ ಆರೋಗ್ಯ, ಬೌದ್ಧಿಕ ಹಾಗೂ ಭಾವಾತ್ಮಕ ವಿಕಾಸ, ಸಮಾಜಕ್ಕೆ ಹೊಂದಿಕೊಂಡು ಹೋಗುವ ರೀತಿ ನೀತಿ, ಇವುಗಳ ಬಗೆಗೆ ಆಲೋಚಿಸಲು ಶಿಕ್ಷಕನಿಗೆ ಮಗುವಿನ ಬೆಳವಣಿಗೆ ಹಾಗೂ ಸಾಮಾಜಿಕ ಹಿನ್ನೆಲೆ ಇವುಗಳ ಅರಿವು ಅತ್ಯವಶ್ಯವಿದೆ.

ಶಾರೀರಿಕ ಬೆಳವಣಿಗೆ

ಪ್ರತಿಯೊಬ್ಬನ ಯಶಾಪಯಶಗಳು ಆತನ ಆರೋಗ್ಯವನ್ನೇ ಅವಲಂಬಿಸಿರುವದರಿಂದ ಶಿಕ್ಷಕನು ಪ್ರತಿಯೊಂದು ಮಗುವಿನ ಆರೋಗ್ಯದ ಬಗೆಗೆ ಕಾಳಜಿಯನ್ನು ತಕ್ಕೊಳ್ಳಬೇಕು. ದೇಹವಿಕಾಸವಿದ್ದಲ್ಲಿ ಮನೋವಿಕಾಸವಿರುತ್ತದೆ. ಸಾಲೆಯಲ್ಲಿ ಎಷ್ಟೋ ಮಕ್ಕಳು ಮನೋವಿಕಾಸವನ್ನು ಹೊಂದದೆ ಹಿಂದೆ ಬೀಳುವದುಂಟು. ಅಂತಹ ಉದಾಹರಣೆಗಳನ್ನು ಶೋಧಿಸಿ ನೋಡಿದರೆ, ಅನಾರೋಗ್ಯ ಇಲ್ಲವೆ ದೈಹಿಕನ್ಯೂನತೆ ಇವೇ ಅವುಗಳ ಮುಖ್ಯ ಕಾರಣಗಳೆಂದು ಗೊತ್ತಾಗದಿರದು. ಮಕ್ಕಳ ಆರೋಗ್ಯವನ್ನು ಕುರಿತು ಶಿಕ್ಷಕನು ನಿಷ್ಕಾಳಜಿಯಿಂದ ತಕ್ಕ ಎಚ್ಚರಿಕೆಯನ್ನು ವಹಿಸದಿದ್ದರೆ, ಆತನ ಶಿಕ್ಷಣದ ಕಾರ್ಯವು ಪ್ರಗತಿಪರವಾಗಿಯೂ ಪರಿಣಾಮಕಾರಿಯಾಗಿಯೂ ಸಾಗಲಾರದು.

ಹಳ್ಳಿಗಾಡದಲ್ಲಿ ಮಕ್ಕಳ ಶಾರೀರಿಕ ಬೆಳವಣಿಗೆಗೆ ಬೇಕಾದಷ್ಟು ಅನುಕೂಲತೆಗಳಿವೆಯೆಂದು ಜನರ ತಿಳಿವಳಿಕೆ. ನಿರ್ಮಲ ಹವೆ, ಬಿಸಿಲು, ಆಟದಬೈಲು, ಇವುಗಳ ಸಮೃದ್ಧಿಯು ಹಳ್ಳಿಗಾಡದಲ್ಲಿರುವದರಿಂದ ಅಲ್ಲಿಯ ಮಕ್ಕಳು ಸುಖದಿಂದಲೂ ಆರೋಗ್ಯದಿಂದಲೂ ಬೆಳೆಯುವರೆಂದು ಜನರ ಕಲ್ಪನೆಯಾಗಿದೆ; ಶಿಕ್ಷಣ ತಜ್ಞರೂ ಸಹ ಈ ಅಭಿಪ್ರಾಯವನ್ನು ತಳೆಯುವದುಂಟು. ಕೂಲಂಕಷವಾಗಿ ಪರೀಕ್ಷಿಸಿ ನೋಡಿದರೆ, ವಸ್ತುಸ್ಥಿತಿಯು ಹಾಗಿಲ್ಲವೆಂದು ಕಂಡು ಬರುತ್ತದೆ. ನಮ್ಮ ಹಳ್ಳಿಗಳು ಮೂಢ ನಂಬಿಕೆಗಳಿಂದಲೂ ಅಜ್ಞಾನದಿಂದಲೂ ಸಾಂಸರ್ಗಿಕ ರೋಗಗಳಿಂದಲೂ ತುಂಬಿರುವದರಿಂದ ಅಲ್ಲಿ ಮಕ್ಕಳು ಅನಾರೋಗ್ಯದಿಂದ ಬಳಲುವದನ್ನು ನಾವು ಕಾಣುತ್ತೇವೆ. ಸ್ವಲ್ಪದರಲ್ಲಿ ಹೇಳುವದಾದರೆ, ಅಲ್ಲಿಯಸ್ಥಿತಿಗತಿಯು ಕೆಳಗೆ ಕೊಟ್ಟಂತೆ ಇದೆಃ—

(ಅ) ಅಲ್ಲಿ ಮಕ್ಕಳಿಗೆ ತಕ್ಕ ಆಹಾರ ಸಿಕ್ಕುವದಿಲ್ಲ. ಜನರಿಗೆ ಸಮತೋಲ ಆಹಾರದ ಕಲ್ಪನೆಯೇ ಇರುವದಿಲ್ಲವಾದುದರಿಂದ, ಅಲ್ಲಿ ವೆಗ್ಗಳವಾಗಿ ಸಿಕ್ಕುವ ಹಾಲು, ಹಣ್ಣು, ಕಾಯಿಪಲ್ಯ, ಮೊದಲಾದವುಗಳ ಉಪಯೋಗವನ್ನು ತಮ್ಮ ಆಹಾರದಲ್ಲಿ ಮಾಡಿಕೊಳ್ಳುವದಿಲ್ಲ.

(ಆ) ತಿನ್ನುಣ್ಣುವಲ್ಲಿ, ಆಡುವಲ್ಲಿ, ವಿಶ್ರಾಂತಿಯಲ್ಲಿ, ಮಲಗುವಲ್ಲಿ, ನಿಯಮಿತತನದಚಟಗಳ ಅಭಾವ.

(ಇ) ಸರಿಯಾಗಿ ಕೂಡ್ರುವ, ನಿಲ್ಲುವ, ಹಾಗೂ ನಡೆಯುವ ವಿಧಾನಗಳನ್ನು ಮಕ್ಕಳು ಆಚರಿಸದೆ ಇರುವಿಕೆ.

(ಈ) ಹಳ್ಳಿಗರಿಗೆ ಔಷಧಗಳ ಜ್ಞಾನ ಹಾಗೂ ಸಹಾಯ ಇಲ್ಲದಿರುವದರಿಂದ ತಮ್ಮ ಮಕ್ಕಳಿಗಾದ ಕಣ್ಣು, ಕಿವಿ, ಹಲ್ಲು, ಗಂಟಲು, ಹೊಟ್ಟೆ, ಮೊದಲಾದವುಗಳ ರೋಗಗಳಿಗೆ ಪ್ರಾರಂಭದಲ್ಲಿ ಚಿಕಿತ್ಸೆಯನ್ನು ಮಾಡಿಸದೆ ಬಲಿಯಗೊಟ್ಟು ಕೇಡಿಗೆ ಗುರಿಯಾಗುವದುಂಟು.

(ಉ) ಹಳ್ಳಿಗಳಲ್ಲಿ ಆರೋಗ್ಯದ ಬಗೆಗೆ ಶಿಕ್ಷಣವನ್ನು ಕೊಡುವ ತಕ್ಕ ಏರ್ಪಾಟಿನ ಅಭಾವ.

ಮೇಲೆ ವಿವರಿಸಿದ ಅಡ್ಡಿ ಆತಂಕಗಳು ಅಲ್ಲಿ ಕೆಲಸ ಮಾಡುವ ಶಿಕ್ಷಕನಿಗೆ ಕಾಲ್ತೊಡಕುಗಳಾಗಿ ಪರಿಣಮಿಸಿವೆ. ಜಾಣನಾದ ಶಿಕ್ಷಕನು ಅವುಗಳನ್ನೆಲ್ಲ ಹೊಡೆದೋಡಿಸಿ, ದೇವದತ್ತವಾದ ಕೊಡುಗೆಗಳ ಹಾಗೂ ಸೌಕರ್ಯಗಳ ಸದುಪಯೋಗ ಮಾಡಿಕೊಂಡು ಮಕ್ಕಳ ಆರೋಗ್ಯವನ್ನು ಕಾಪಾಡಬೇಕು, ಹೆಚ್ಚಿಸಬೇಕು.

ಬೌದ್ಧಿಕ ಬೆಳವಣಿಗೆ

ಮಗುವಿನ ದೇಹಾರೋಗ್ಯ ಹಾಗೂ ಸಾಮಾಜಿಕ ಪರಿಸ್ಥಿತಿ, ಇವು ಅದರ ಬೌದ್ಧಿಕ ಬೆಳವಣಿಗೆಯ ಮೇಲೆ ತಮ್ಮ ಪ್ರಭಾವವನ್ನು ಬಹಳಷ್ಟು ಬೀರುತ್ತವೆ. ಕಣ್ಣು-ಕಿವಿ ಮಂದವುಳ್ಳ, ಮೂಗಿನ ವಿಕಾರವುಳ್ಳ, ಹಾಗೂ ಚೆಲೋ ಆಹಾರ ತಿನ್ನಲು ಸಿಗದಿದ್ದ ಮಕ್ಕಳು ಬಹುತರವಾಗಿ ಮಂದಮತಿಯುರಾಗಿರುವದುಂಟು. ಆ ಕೊರತೆಯನ್ನು ಹೋಗಲಾಡಿಸಿದೊಡನೆಯೇ ಆ ಮಕ್ಕಳು ಚೇತರಿಸಿಕೊಂಡು ಮೇಲಕ್ಕೇಳುವದುಂಟು. ಬುದ್ಧಿಯ ಬೆಳವಣಿಗೆಯು ಆರೋಗ್ಯದ ಮೇಲೆ ಹೇಗೆ ಅವಲಂಬಿಸಿರುತ್ತದೆಂಬುದನ್ನು ಮನದಂದು ಶಿಕ್ಷಕನು ಮಕ್ಕಳಲ್ಲಿ ದೈಹಿಕ ಕುಂದು-ಕೊರತೆಗಳನ್ನು ಕಂಡೊಡನೆಯೇ ತಂದೆ-ತಾಯಿಗಳಿಗೆ ಇಲ್ಲವೆ ಪಾಲಕರಿಗೆ ಸೂಚಿಸಿ ಔಷಧೋಪಚಾರದಿಂದ ತೀವ್ರವೇ ಅವುಗಳನ್ನು ನಿವಾರಿಸುವ ವ್ಯವಸ್ಥೆ ಮಾಡಲು ಬಿನ್ನವಿಸಿಕೊಳ್ಳಬೇಕು. ಎಷ್ಟೋ-

ವನ್ನು ಶಿಕ್ಷಕನು ಗೊತ್ತು ಹಚ್ಚಿ ಅದನ್ನು ನಿವಾರಿಸಲು ಯತ್ನಿಸಬೇಕು. ಆರೋಗ್ಯದಿಂದಿದ್ದ ಮಗುವಿನಲ್ಲಿ ಉತ್ಸಾಹದ ಸೆಲೆಯು ಆವಾಗಲೂ ಚಿಮ್ಮುತ್ತಿರುತ್ತಿದೆ.

ಚಟುವಟಿಕೆಯು ಮಗುವಿನ ಕೌತುಕವನ್ನು ಕೆಣಕುತ್ತಿದೆಯೆಂಬ ಮಾತು ಎಲ್ಲರಿಗೂ ಗೊತ್ತಿರಲು ಸಾಕು. "ಅದು ಏನು, ಏಕೆ, ಹೇಗೆ?" ಎಂದು ಚಿಕಿತ್ಸೆ ಮಾಡುವದು, ನಿರೀಕ್ಷಿಸುವದು, ಸ್ವತಃ ಜ್ಞಾನ ಮಾಡಿಕೊಳ್ಳುವದು, ಇವುಗಳಲ್ಲಿ ಮಗುವಿಗೆ ಸ್ವಾಭಾವಿಕವಾದ ಅಭಿರುಚಿಯಿದೆ. ಮಗುವಿನ ಚಿಕಿತ್ಸಕ ಬುದ್ಧಿಯನ್ನು ಶಿಕ್ಷಕನು ಕಮರಿಸವೆ ಚಿಗುರಿಸಬೇಕು. ಪ್ರಶ್ನೆಗಳನ್ನು ಕೇಳಲು ಮಕ್ಕಳಿಗೆ ಪ್ರೋತ್ಸಾಹಿಸಿ, ಅವರ ಪ್ರಶ್ನೆಗಳಿಗೆಲ್ಲ ಸಮರ್ಪಕ ಉತ್ತರಗಳನ್ನು ಕೊಟ್ಟು ಅವರನ್ನು ಸಮಾಧಾನ ಪಡಿಸಿ, ಅವರಲ್ಲಿ ಶೋಧಕ ಬುದ್ಧಿ ಹುಟ್ಟುವಂತೆ ಮಾಡಿ, ಪ್ರತಿಯೊಂದು ವಸ್ತುವಿನ ಜ್ಞಾನವನ್ನು ತಾವೇ ಸ್ವತಃ ಮಾಡಿಕೊಳ್ಳಲು ಅವರನ್ನು ಹುರಿದುಂಬಿಸಬೇಕು. ಸೃಷ್ಟಿ-ನಿರೀಕ್ಷಣೆ, ಇತಿಹಾಸ ಹಾಗೂ ಭೂಗೋಲ ವಿಷಯಗಳಲ್ಲಿ ಸಣ್ಣ ಪುಟ್ಟ ಶೋಧಗಳನ್ನು ಮಾಡಲು ಅವರನ್ನು ಪ್ರೇರೇಪಿಸಬೇಕು. ವಸ್ತುಗಳನ್ನು ಸ್ವತಃ ತಯಾರ ಮಾಡುವದು, ಅವುಗಳನ್ನು ಶೇಖರಿಸುವದು, ಚಂದ ಕಾಣುವಂತೆ ಅವುಗಳನ್ನು ಬೇರೆ ಬೇರೆಯಾಗಿ ಹೊಂದಿಸುವದು, ಮೊದಲಾದ ಚಟುವಟಿಕೆಗಳಲ್ಲಿ ಮಕ್ಕಳು ಆಸ್ಥೆವಹಿಸುವದು ಅಷ್ಟಿಷ್ಟಲ್ಲ. ಮಕ್ಕಳಲ್ಲಿ ಸ್ವಾಭಾವಿಕವಾಗಿದ್ದ ಆ ರಚನಾತ್ಮಕ ಪ್ರವೃತ್ತಿಗೆ ಸಾಲೆಯಲ್ಲಿ ತಕ್ಕ ಪೋಷಣೆಯನ್ನುಕೊಟ್ಟು ಅದನ್ನು ಬೆಳೆಯಿಸಬೇಕು. ಕೈಕೆಲಸ, ಆಟ-ನೋಟ, ಚಿಕ್ಕಪ್ರವಾಸ, ಸೃಷ್ಟಿ-ನಿರೀಕ್ಷಣೆ, ಮೊದಲಾದ ವಿಷಯುಗಳು ಮಕ್ಕಳಲ್ಲಿ ಹುದುಗಿದ್ದ ರಚನಾತ್ಮಕ ಶಕ್ತಿಯನ್ನು ಕೆಣಕಿ ಅದನ್ನು ಬಲಪಡಿಸಲು ಅಣಿಯಾಗುತ್ತಿವೆ.

ಮಗುವಿನ ಶರೀರವು ಒಂದು ಕ್ರಮದಿಂದ ಬೆಳೆಯುತ್ತಿದೆ. ಶಾರೀರಿಕ ಬೆಳವಣಿಗೆಗೆ ಅನುಸರಿಸಿ ಅದರ ಮಾನಸಿಕ ವಿಕಾಸವಾಗುವದುಂಟು. ಚನ್ನಾಗಿ ನಡೆದಾಡಲು ಬಂದ ಮೇಲೆ ಮಗುವಿನಲ್ಲಿ ಸಂಗ್ರಹ ಪ್ರವೃತ್ತಿಯು ಚಿಗುರಿ, ಅದು ತನಗೆ ಬೇಕಾದ ವಸ್ತುಗಳನ್ನು ಕೂಡ ಹಾಕಿ ಅವುಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುವದುಂಟು. ನಿರೀಕ್ಷಣೆಯನ್ನು ಮಾಡಿ ಮಾಡಿ ಕಣ್ಣಿನ ದೃಷ್ಟಿಯು ಸಾಕಷ್ಟು ಬೆಳೆಯುದ ಹೊರತು ಮಗುವಿಗೆ ಓದಲು ಕೊಡಬಾರದು. ಕಣ್ಣಿನ ಶಕ್ತಿ ಬೆಳೆಯದಿದ್ದ ಮಗುವು ಚನ್ನಾಗಿ ಓದಲಾರ. ಮಕ್ಕಳಿಗೆ ವಿಷಯುಗಳನ್ನು ಕಲಿಯಲು ಹೇಳುವ ಮೊದಲು ಅವು ಆ ಮಕ್ಕಳ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗಳಿಗನುಗುಣವಾಗಿವೆಯೆಂಬುದನ್ನು ಶಿಕ್ಷಕನು ಕಂಡುಕೊಳ್ಳಬೇಕು. ಮಕ್ಕಳ ಮನಸ್ಸು ಪಕ್ವವಾಗದ ಮುನ್ನ ಒತ್ತಾಯದಿಂದ ಕಲಿಸಲು ಪ್ರಯತ್ನಿಸಿದರೆ, ಆ ಪ್ರಯತ್ನಗಳೆಲ್ಲ ವ್ಯರ್ಥವಾಗುವವು. ಅರಳಿದ ಮನಸಿಗೆ ಕಲಿಸುವದರಿಂದ ಶ್ರಮ-ವೇಳೆಗಳ ಉಳಿತಾಯವಾಗುವುದಲ್ಲದೆ ಅದು ಹೆಚ್ಚು ಪರಿಣಾಮಕಾರಿಯಾಗುವದು.

ಮಗುವಿನ ಸಾಮಾಜಿಕ ಪರಿಸ್ಥಿತಿಯನ್ನು ಗೊತ್ತು ಹಚ್ಚಿ ಅದು ಮೊದಲು ಹೇಗಿತ್ತು ಈಗ ಹೇಗಿದೆಯೆಂಬುದನ್ನು ಕೂಲಂಕಷವಾಗಿ ಅಭ್ಯಸಿಸಬೇಕು. ವಾಡಿಕೆಯಾದಿ ಶಿಕ್ಷಕರು ತಮ್ಮ ಅಭ್ಯಾಸ ಪತ್ರಿಕೆಯೊಳಗಿನ ವಿಷಯುಗಳನ್ನು ಕಲಿಸುವದರಲ್ಲಿಯೇ ಮಗ್ನರಾಗಿ ಮಕ್ಕಳು ಸಾಲೆಯ ಹೊರಗೆ ಗಳಿಸಿದ ಅನುಭವಗಳಿಗೆ ಲಕ್ಷ್ಯವನ್ನು ಪೂರೈಸುವದಿಲ್ಲ. ಮಗುವು ಸಾಲೆಗೆ ಕಲಿಯಲಿಕ್ಕೆ ಬಂದಿದೆಯೆಂಬ ವಿಚಾರವನ್ನು ತಲೆಯಲ್ಲಿಟ್ಟುಕೊಂಡು ಅದರ ಹಿಂದಿನ ಹಾಗೂ ಅಂದಿನ ಸಾಮಾಜಿಕ ಪರಿಸ್ಥಿತಿಯನ್ನು ಗಣನೆಗೆ ತಂದುಕೊಳ್ಳುವದಿಲ್ಲ. ಮಗುವಿನ ಮನೆತನ ಎಂತಹದು, ಮನೆಯಲ್ಲಿ ಸಿಗುವ ಪೋಷಣೆ ಎಂತಹದು, ಓಣಿಯಲ್ಲಿ ಎಂತಹ ಮಕ್ಕಳ ಕೂಡ ಆಡುತ್ತಿದೆ, ಇವುಗಳ ಜ್ಞಾನವು ಶಿಕ್ಷಕನಿಗೆ ಶಿಕ್ಷಣದ ಕಾರ್ಯದಲ್ಲಿ. ನೆರವಾಗುತ್ತಿದೆ. ಯಾಕಂದರೆ, ಮಗುವಿನ ಅಭಿರುಚಿ ಆಸಕ್ತಿಗಳು ಅದರ ಸಾಮಾಜಿಕ ಹಿನ್ನೆಲೆಯ ಮೇಲೆಯೇ ಬಹಳಷ್ಟು ಅವಲಂಬಿಸಿರುತ್ತಿವೆ. ಮಗುವಿನ ಆರೋಗ್ಯ, ಬೌದ್ಧಿಕ ಹಾಗೂ ಭಾವಾತ್ಮಕ ವಿಕಾಸ, ಸಮಾಜಕ್ಕೆ ಹೊಂದಿಕೊಂಡು ಹೋಗುವ ರೀತಿ ನೀತಿ, ಇವುಗಳ ಬಗೆಗೆ ಆಲೋಚಿಸಲು ಶಿಕ್ಷಕನಿಗೆ ಮಗುವಿನ ಬೆಳವಣಿಗೆ ಹಾಗೂ ಸಾಮಾಜಿಕ ಹಿನ್ನೆಲೆ ಇವುಗಳ ಅರಿವು ಅತ್ಯವಶ್ಯವಿದೆ.

ಶಾರೀರಿಕ ಬೆಳವಣಿಗೆ

ಪ್ರತಿಯೊಬ್ಬನ ಯಶಾಪಯಶಗಳು ಆತನ ಆರೋಗ್ಯವನ್ನೇ ಅವಲಂಬಿಸಿರುವದರಿಂದ ಶಿಕ್ಷಕನು ಪ್ರತಿಯೊಂದು ಮಗುವಿನ ಆರೋಗ್ಯದ ಬಗೆಗೆ ಕಾಳಜಿಯನ್ನು ತಕ್ಕೊಳ್ಳಬೇಕು. ದೇಹವಿಕಾಸವಿದ್ದಲ್ಲಿ ಮನೋವಿಕಾಸವಿರುತ್ತದೆ. ಸಾಲೆಯಲ್ಲಿ ಎಷ್ಟೋ ಮಕ್ಕಳು ಮನೋವಿಕಾಸವನ್ನು ಹೊಂದದೆ ಹಿಂದೆ ಬೀಳುವದುಂಟು. ಅಂತಹ ಉದಾಹರಣೆಗಳನ್ನು ಶೋಧಿಸಿ ನೋಡಿದರೆ, ಅನಾರೋಗ್ಯ ಇಲ್ಲವೆ ದೈಹಿಕನ್ಯೂನತೆ ಇವೇ ಅವುಗಳ ಮುಖ್ಯ ಕಾರಣಗಳೆಂದು ಗೊತ್ತಾಗದಿರದು. ಮಕ್ಕಳ ಆರೋಗ್ಯವನ್ನು ಕುರಿತು ಶಿಕ್ಷಕನು ನಿಷ್ಕಾಳಜಿಯಿಂದ ತಕ್ಕ ಎಚ್ಚರಿಕೆಯನ್ನು ವಹಿಸದಿದ್ದರೆ, ಆತನ ಶಿಕ್ಷಣದ ಕಾರ್ಯವು ಪ್ರಗತಿಪರವಾಗಿಯೂ ಪರಿಣಾಮಕಾರಿಯಾಗಿಯೂ ಸಾಗಲಾರದು.

ಹಳ್ಳಿಗಾಡದಲ್ಲಿ ಮಕ್ಕಳ ಶಾರೀರಿಕ ಬೆಳವಣಿಗೆಗೆ ಬೇಕಾದಷ್ಟು ಅನುಕೂಲತೆಗಳಿವೆಯೆಂದು ಜನರ ತಿಳುವಳಿಕೆ. ನಿರ್ಮಲ ಹವೆ, ಬಿಸಿಲು, ಆಟದಬೈಲು, ಇವುಗಳ ಸಮೃದ್ಧಿಯು ಹಳ್ಳಿಗಾಡದಲ್ಲಿರುವದರಿಂದ ಅಲ್ಲಿಯ ಮಕ್ಕಳು ಸುಖದಿಂದಲೂ ಆರೋಗ್ಯದಿಂದಲೂ ಬೆಳೆಯುವರೆಂದು ಜನರ ಕಲ್ಪನೆಯಾಗಿದೆ; ಶಿಕ್ಷಣ ತಜ್ಞರೂ ಸಹ ಈ ಅಭಿಪ್ರಾಯವನ್ನು ತಳೆಯುವದುಂಟು. ಕೂಲಂಕಷವಾಗಿ ಪರೀಕ್ಷಿಸಿ ನೋಡಿದರೆ, ವಸ್ತುಸ್ಥಿತಿಯು ಹಾಗಿಲ್ಲವೆಂದು ಕಂಡು ಬರುತ್ತಿದೆ. ನಮ್ಮ ಹಳ್ಳಿಗಳು ಮೂಢ ನಂಬಿಕೆಗಳಿಂದಲೂ ಅಜ್ಞಾನದಿಂದಲೂ ಸಾಂಸರ್ಗಿಕ ರೋಗಗಳಿಂದಲೂ ತುಂಬಿರುವದರಿಂದ ಅಲ್ಲಿ ಮಕ್ಕಳು ಅನಾರೋಗ್ಯದಿಂದ ಬಳಲುವದನ್ನು ನಾವು ಕಾಣುತ್ತೇವೆ. ಸ್ವಲ್ಪದರಲ್ಲಿ ಹೇಳುವದಾದರೆ, ಅಲ್ಲಿಯಸ್ಥಿತಿಗತಿಯು ಕೆಳಗೆ ಕೊಟ್ಟಂತೆ ಇದೆ:—

(ಅ) ಅಲ್ಲಿ ಮಕ್ಕಳಿಗೆ ತಕ್ಕ ಆಹಾರ ಸಿಕ್ಕುವದಿಲ್ಲ. ಜನರಿಗೆ ಸಮತೋಲ ಆಹಾರದ ಕಲ್ಪನೆಯೇ ಇರುವದಿಲ್ಲವಾದುದರಿಂದ, ಅಲ್ಲಿ ವೆಗ್ಗಳವಾಗಿ ಸಿಕ್ಕುವ ಹಾಲು, ಹಣ್ಣು, ಕಾಯಿಪಲ್ಯ, ಮೊದಲಾದವುಗಳ ಉಪಯೋಗವನ್ನು ತಮ್ಮ ಆಹಾರದಲ್ಲಿ ಮಾಡಿಕೊಳ್ಳುವದಿಲ್ಲ.

(ಆ) ತಿನ್ನುಣ್ಣುವಲ್ಲಿ, ಆಡುವಲ್ಲಿ, ವಿಶ್ರಾಂತಿಯಲ್ಲಿ, ಮಲಗುವಲ್ಲಿ, ನಿಯಮಿತತನದಚಟಗಳ ಅಭಾವ.

(ಇ) ಸರಿಯಾಗಿ ಕೂಡ್ರುವ, ನಿಲ್ಲುವ, ಹಾಗೂ ನಡೆಯುವ ವಿಧಾನಗಳನ್ನು ಮಕ್ಕಳು ಆಚರಿಸದೆ ಇರುವಿಕೆ.

(ಈ) ಹಳ್ಳಿಗರಿಗೆ ಔಷಧಗಳ ಜ್ಞಾನ ಹಾಗೂ ಸಹಾಯ ಇಲ್ಲದಿರುವದರಿಂದ ತಮ್ಮ ಮಕ್ಕಳಿಗಾದ ಕಣ್ಣು, ಕಿವಿ, ಹಲ್ಲು, ಗಂಟಲು, ಹೊಟ್ಟೆ, ಮೊದಲಾದವುಗಳ ರೋಗಗಳಿಗೆ ಪ್ರಾರಂಭದಲ್ಲಿ ಚಿಕಿತ್ಸೆಯನ್ನು ಮಾಡಿಸದೆ ಬಲಿಯಗೊಟ್ಟು ಕೇಡಿಗೆ ಗುರಿಯಾಗುವದುಂಟು.

(ಉ) ಹಳ್ಳಿಗಳಲ್ಲಿ ಆರೋಗ್ಯದ ಬಗೆಗೆ ಶಿಕ್ಷಣವನ್ನು ಕೊಡುವ ತಕ್ಕ ಏರ್ಪಾಟಿನ ಅಭಾವ.

ಮೇಲೆ ವಿವರಿಸಿದ ಅಡ್ಡಿ ಆತಂಕಗಳು ಅಲ್ಲಿ ಕೆಲಸ ಮಾಡುವ ಶಿಕ್ಷಕನಿಗೆ ಕಾಲ್ತೊಡಕುಗಳಾಗಿ ಪರಿಣಮಿಸಿವೆ. ಜಾಣನಾದ ಶಿಕ್ಷಕನು ಅವುಗಳನ್ನೆಲ್ಲ ಹೊಡೆದೋಡಿಸಿ, ದೇವದತ್ತವಾದ ಕೊಡುಗೆಗಳ ಹಾಗೂ ಸೌಕರ್ಯಗಳ ಸದುಪಯೋಗ ಮಾಡಿಕೊಂಡು ಮಕ್ಕಳ ಆರೋಗ್ಯವನ್ನು ಕಾಪಾಡಬೇಕು, ಹೆಚ್ಚಿಸಬೇಕು.

ಬೌದ್ಧಿಕ ಬೆಳವಣಿಗೆ

ಮಗುವಿನ ದೇಹಾರೋಗ್ಯ ಹಾಗೂ ಸಾಮಾಜಿಕ ಪರಿಸ್ಥಿತಿ, ಇವು ಅದರ ಬೌದ್ಧಿಕ ಬೆಳವಣಿಗೆಯ ಮೇಲೆ ತಮ್ಮ ಪ್ರಭಾವವನ್ನು ಬಹಳಷ್ಟು ಬೀರುತ್ತಿವೆ. ಕಣ್ಣು-ಕಿವಿ ಮಂದವುಳ್ಳ, ಮೂಗಿನ ವಿಕಾರವುಳ್ಳ, ಹಾಗೂ ಚಲೋ ಆಹಾರ ತಿನ್ನಲು ಸಿಗದಿದ್ದ ಮಕ್ಕಳು ಬಹುತರವಾಗಿ ಮಂದಮತಿಯುರಾಗಿರುವದುಂಟು. ಆ ಕೊರತೆಯನ್ನು ಹೋಗಲಾಡಿಸಿದೊಡನೆಯೇ ಆ ಮಕ್ಕಳು ಚೇತರಿಸಿಕೊಂಡು ಮೇಲಕ್ಕೇಳುವದುಂಟು. ಬುದ್ಧಿಯ ಬೆಳವಣಿಗೆಯು ಆರೋಗ್ಯದ ಮೇಲೆ ಹೇಗೆ ಅವಲಂಬಿಸಿರುತ್ತದೆಂಬುದನ್ನು ಮನದಂದು ಶಿಕ್ಷಕನು ಮಕ್ಕಳಲ್ಲಿ ದೈಹಿಕ ಕುಂದು-ಕೊರತೆಗಳನ್ನು ಕಂಡೊಡನೆಯೇ ತಂದೆ-ತಾಯಿಗಳಿಗೆ ಇಲ್ಲವೆ ಪಾಲಕರಿಗೆ ಸೂಚಿಸಿ ಔಷದೋಪಚಾರದಿಂದ ತೀವ್ರವೇ ಅವುಗಳನ್ನು ನಿವಾರಿಸುವ ವ್ಯವಸ್ಥೆ ಮಾಡಲು ಬಿನ್ನವಿಸಿಕೊಳ್ಳಬೇಕು. ಎಷ್ಟೋ-

ಸಾಲೆಗಳಲ್ಲಿ ಮುಂಜಾನೆ ಪ್ರಾರಂಭದಲ್ಲಿ ಮಕ್ಕಳೆಲ್ಲರ ದೈಹಿಕ ಸ್ವಚ್ಛತೆಯ ಪರೀಕ್ಷೆಯು ಜರುಗುವದುಂಟು. ಅವರ ಕಣ್ಣು, ಕಿವಿ, ಹಲ್ಲು, ಉಗುರು ಮೊದಲಾದವು-ಗಳ ಸ್ವಚ್ಛತೆಯ ನಿರೀಕ್ಷಣೆಯಾಗುತ್ತಿದೆ. ಇದು ನಿಜವಾಗಿ ಚಲೋ ರೂಢಿಯು.

ಬುದ್ಧಿಯು ಆನುವಂಶಿಕವಿದ್ದಾಗ್ಯೂ ಸಾಮಾಜಿಕ ಪರಿಸ್ಥಿತಿಯು ಬುದ್ಧಿಯ ಬೆಳವಣಿಗೆಯನ್ನು ಹಿಗ್ಗಿಸ-ಬಲ್ಲದು ಇಲ್ಲವೆ ಕುಗ್ಗಿಸಬಲ್ಲದು. ಸುಸಂಸ್ಕೃತವಾದೊಂದು ಮನೆತನದ ವಾತಾವರಣವು ಗ್ರಹಣಶಕ್ತಿ-ಯನ್ನೂ ವಿಚಾರಶಕ್ತಿಯನ್ನೂ ಪ್ರಚೋದಿಸಬಲ್ಲದು, ಪ್ರೋತ್ಸಾಹಿಸಬಲ್ಲದು. ಬಡತನವು ಅನಾರೋಗ್ಯದ ಮೂಲವು. ಆದುದರಿಂದ, ಹಳ್ಳಿಯ ಸಾಲೆಯು ಮೊದಲು ಮಗುವಿನ ದೇಹಾರೋಗ್ಯವನ್ನು ಸುಧಾರಿಸಬೇಕು. ಆ ಮೇಲೆ ಅವರ ಗ್ರಹಣಶಕ್ತಿಯನ್ನೂ ವಿಚಾರಶಕ್ತಿಯನ್ನೂ ಹೆಚ್ಚಿಸಲು ನಿತ್ಯಜೀವನದ ಬೇರೆ ಬೇರೆ ಅನುಭವಗಳನ್ನೂ, ಯೋಜನೆಗಳನ್ನು ಕಲ್ಪಿಸುವದನ್ನೂ, ಅವುಗಳ ಕಾರ್ಯವಿವರಣೆಯನ್ನೂ, ಕಾರ್ಯಸಮಾಪ್ತಿಯನ್ನೂ ಒದಗಿಸಿಕೊಡಬೇಕು.

ಭಾವಾತ್ಮಕ ಬೆಳವಣಿಗೆ

ರಸಭಾವಗಳಲ್ಲಿ ಕಾರ್ಯಪ್ರಚೋದನೆಯ ಶಕ್ತಿಯಿರು-ತ್ತಿದೆ. ಗಾಬರಿಗೊಂಡ, ಹೌಹಾರಿದ, ನೊಂದ ಇಲ್ಲವೆ ಬೆಂದ ಮಕ್ಕಳು ಸುಖಿಯಾಗಿದ್ದ ಮಕ್ಕಳ ಹಾಗೆ ನಿರಾ-ಯಾಸವಾಗಿಯೂ ಪರಿಣಾಮಕಾರಿಯಾಗಿಯೂ ಕಲಿ-ಯುವದಿಲ್ಲ. ಆದುದರಿಂದ, ಶಿಕ್ಷಕನು ಮಕ್ಕಳ ವೈಯಕ್ತಿಕವಾಗ ರಸಭಾವಗಳನ್ನರಿಯುವದು ಅವಶ್ಯವಿದೆ. ರಸ-ಭಾವಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರತಿಯೊಂದು ಮಗುವಿಗೆ ಎರಡು ಸಂಗತಿಗಳು ಅವಶ್ಯವಾಗಿವೆ. ಮೊದಲನೆಯದು, ಆಶ್ವಾಸನ ಹಾಗೂ ಪ್ರೇಮ; ಎರಡ-ನೆಯದು, ಕಲಿಯಲು ಹಾಗೂ ವಿಕಾಸ ಹೊಂದಲು ಸ್ವಾತಂತ್ರ್ಯ. ಮೊದಲನೆಯದು ಮುಖ್ಯತಃ ತಂದೆ ತಾಯಿಗಳ ಕೆಲಸ. ಆದರೆ, ಪ್ರತಿಯೊಂದು ಮಗುವಿನ ವೈಯಕ್ತಿಕ ಯೋಗ್ಯತೆಯನ್ನು ಕಂಡು ಹಿಡಿದು ಅದನ್ನು ಹೆಚ್ಚಿಸುವದು, ಹಾಗೂ ಮಗುವು ಮುಂದೆ ತನ್ನ ಉಪಜೀವನವನ್ನು ಸಾಗಿಸಿಕೊಂಡು ಹೋಗಲು ಅರ್ಹನನ್ನಾಗಿ ಮಾಡುವದು, ಇವು ಸಾಲೆಯ ಮುಖ್ಯ ಕೆಲಸಗಳು.

ಬಹುತರವಾಗಿ ಸಾಲೆಗಳಲ್ಲಿ ಹಲವೊಂದು ವಿಷಯ-ಗಳನ್ನೂ ಕೌಶಲ್ಯಗಳನ್ನೂ ಕಲಿಸುವದರತ್ತ ಹೆಚ್ಚು ಲಕ್ಷ್ಯಕೊಟ್ಟು ಮಕ್ಕಳ ರಸಭಾವನೆಗಳನ್ನು ಮರೆತು ಬಿಡುವದುಂಟು. ಎಷ್ಟೋ ಸಲ ಮಕ್ಕಳ ರಸಭಾವನೆಗ-ಳನ್ನು ನೋಯಿಸಿದ ಉದಾಹರಣೆಗಳುಂಟು. ಮಕ್ಕಳ ಯೋಗ್ಯತೆಗೆ ಮೀರಿದ ಇಲ್ಲವೆ ಅದರ ವಿಚಾರಸರಣಿಗೆ ನಿಲುಕದ ಪಾಠಗಳನ್ನು ಮಾಡಲು ಹೇಳಿದರೆ ಅವರು ತಪ್ಪುವದು ಸ್ವಾಭಾವಿಕ. ಹಾಗೆ ತಪ್ಪಿದಾಗ ಅವರಿಗೆ ಶಿಕ್ಷೆವಿಧಿಸಿ ಅವರನ್ನು ನಿರುತ್ಸಾಹಗೊಳಿಸುವದುಂಟು. ಕೆಲಸ ಮಾಡಿದ ಬಗೆಗೆ ಅವರಿಗೆ ಸಿಗತಕ್ಕ ಆನಂದದ ಅನುಭವವೂ ಸುಖವೂ ಸಿಗದೆ ಹೋಗುವವು. ಅದರ ಪರಿಣಾಮವಾಗಿ ಮನಸಿನಹೋರಾಟ, ಕೀಳುಭಾವನೆ, ಎದೆಗುಂದುವಿಕೆ, ಬೇಸರ, ನಿಷ್ಕ್ರಿಯತೆ, ಮೊದಲಾದ-ವುಗಳು ಮಕ್ಕಳಲ್ಲಿ ತಲೆದೋರಿ ದುಷ್ಟ ಭಾವನೆಗಳ ಬೆಳವಣಿಗೆಗೆ ದಾರಿ ಮಾಡಿಕೊಡುವವು. ಕೆಲಸ ಮಾಡಿದ್ದರಿಂದುಟಾಗುವ ಆನಂದದ ಅನುಭವವು ಮಕ್ಕಳಿಗೆ ಸಿಗುತ್ತ ಹೋದರೆ ಅವರಲ್ಲಿ ಸದ್ಭಾವನೆಗಳುಂಟಾಗಿ-ಮೂಡಿ ಅವರ ವ್ಯಕ್ತಿತ್ವದ ವಿಕಾಸವಾಗುವದಲ್ಲದೆ ಶಿಕ್ಷಣದ ಕಾರ್ಯವು ಪರಿಣಾಮಕಾರಿಯಾಗುವದು.

ಸಾಮಾಜಿಕ ಭಾವನೆಗಳ ಬೆಳವಣಿಗೆ

ಸಮಾಜದಲ್ಲಿ ಹೊಂದಿಕೊಂಡು ಹೋಗುವ ಚಟಗಳು ಇಲ್ಲವೆ ವೃತ್ತಿಗಳು ಪ್ರತ್ಯಕ್ಷ ಅನುಭವದಿಂದ ಪ್ರಾಪ್ತವಾಗುತ್ತಿವೆ. ಒಂದು ವೇಳೆ ಅಂತಹ ಚಟಗಳು ತಲೆದೋರದಿದ್ದರೆ, ಅದು ಶಿಕ್ಷಣಕ್ರಮದಲ್ಲಿಯದೊಂದು ದೋಷವೆಂದು ಕೈಯಿತ್ತಿ ತೋರಿಸುತ್ತಿದೆ. ಒಂದು ಮಗುವು ತನಗಿಂತ ಚಿಕ್ಕ ವಯಸ್ಸಿನ ಮಕ್ಕಳ ಕೂಡ ಆಡುತ್ತಿದ್ದಿತೆಂದರೆ, ಅದು ಅವರ ಮೇಲೆ ತನ್ನ ವರ್ಚ-ಸ್ಸನ್ನು ಕೂಡ್ರಿಸಿ ಆ ಗುಂಪಿನ ನಾಯಕನಾಗಲು ಹವ-ಣಿಸುವದುಂಟು. ತನಗಿಂತ ದೊಡ್ಡವರೊಡನೆ ಆಡುತ್ತಿದ್ದಿತೆಂದರೆ, ಹೇಳಿದಂತೆ ಕೇಳಿಕೊಂಡು ಹೋಗುವ

ಮನೋವೃತ್ತಿಯು ಆ ಮಗುವಿನಲ್ಲಿ ಬೆಳೆಯುವದುಂಟು. ಮಕ್ಕಳ ಕೂಡ ಆಡುವ ಇಲ್ಲವೆ ಕೆಲಸ ಮಾಡುವ ಪ್ರಸಂಗಗಳು ಸಿಗದಿರುವ ಮಗುವು ಒಂಟಿಗನಾಗಿರಲು ಬಯಸುತ್ತದೆ. ಮಗುವಿನಲ್ಲಿ ಸಾಂಘಿಕ ಚಟವಿಲ್ಲದಿರುವದಕ್ಕೆ ಶಾರೀರಿಕ, ಮಾನಸಿಕ ಹಾಗೂ ಭಾವಾತ್ಮಕ ಕಾರಣಗಳಿರಬಹುದು. ಪ್ರಕೃತಿಯಿಂದ ಗಟ್ಟಿಮುಟ್ಟಾಗಿದ್ದ ಮಗುವು ಅಶಕ್ತ ಮಕ್ಕಳ ಮೇಲೆ ದಬ್ಬಾಳಿಕೆಯನ್ನು ನಡಿಸುವದುಂಟು. ಅಶಕ್ತ ಇಲ್ಲವೆ ದೈಹಿಕ ನ್ಯೂನತೆಯುಳ್ಳ ಮಗುವು ಸಶಕ್ತರ ಕೂಡ ಸ್ಪರ್ಧಿಸುವ ಶಕ್ತಿಯಿಲ್ಲದ ಮೂಲಕ ಸಾಂಘಿಕ ಚಟುವಟಿಕೆಗಳಲ್ಲಿ ಸಹಕರಿಸುವದಿಲ್ಲ. ಮಂದಮತಿಯುಳ್ಳ ಹಾಗೂ ದೃಢ ಭಾವನೆಗಳಿಲ್ಲದ ಮಗುವು ಸಾಮಾಜಿಕ ಬಂಧನ ಮತ್ತು ನಡೆ-ನುಡಿಗಳ ಕಲ್ಪನೆಯಿಲ್ಲದೆ ಇರುವದುಂಟು. ಸಾಲೆಯಲ್ಲಿ ಮಗುವಿನ ಶಾರೀರಿಕ, ಮಾನಸಿಕ ಹಾಗೂ ಭಾವಾತ್ಮಕ ಬೆಳವಣಿಗೆಗೆ ಸಾಕಷ್ಟು ಆಸ್ಪದಕೊಟ್ಟು ಅದು ಸಾಂಘಿಕ ಚಟುವಟಿಕೆಗಳಲ್ಲೆಲ್ಲ ಭಾಗವಹಿಸುವಂತೆ ಮಾಡಬೇಕು.

ಮಗುವಿನ ಸಾಂಘಿಕ ವೃತ್ತಿಗಳು ಇಲ್ಲವೆ ನಡೆ-ನುಡಿಗಳು ಸಾಂಘಿಕ ಆಟಗಳಲ್ಲಿ ರೂಪುಗೊಳ್ಳುತ್ತವೆ. ಗುರುಗಳಿಗೆ ಇಲ್ಲವೆ ತಂದೆ–ತಾಯಿಗಳಿಗೆ ಪ್ರಿಯಕರವಾಗಿರುವದಕ್ಕಿಂತ ತನ್ನ ಒಡನಾಡಿಗಳ ಕೂಡ ಹೆಚ್ಚು ಪ್ರಿಯಕರನಾಗಿರುವದು ಮಗುವಿಗೆ ಸೇರುತ್ತದೆ. ಆದುದರಿಂದ, ಸಾಂಘಿಕ ಆಟಗಳು ಆ ಮಗುವಿನ ನಡೆ–ನುಡಿಗಳಿಗೆ ಒಂದು ಮೂರ್ತ ಸ್ವರೂಪವನ್ನು ತಂದು ಕೊಡುತ್ತವೆ. ಆಟಗಳು ಉಳಿದ ಮಕ್ಕಳ ಗೂಡ ಸಹಕಾರದಿಂದ ಹೊಂದಿಕೊಂಡು ಹೋಗುವ ಮನೋವೃತ್ತಿಯನ್ನು ಹುಟ್ಟಿಸುತ್ತವೆ. ಉಳಿದವರ ಅವಶ್ಯಕತೆಯು ಮಗುವಿಗೆ ಹೇಗೋ ಹಾಗೆಯೇ ಆ ಮಗುವಿನ ಅವಶ್ಯಕತೆಯು ಉಳಿದವರಿಗಿದೆ. ಮಗುವು ದೊಡ್ಡದಾದ ಮೇಲೆ ಜನತೆಯ ಕೂಡ ಹೊಂದಿಕೊಂಡು ಹೋಗಲು ಆ ಮನೋಭೂಮಿಕೆಯು ಅತ್ಯವಶ್ಯವಿದೆ.

ಹಲವು ಪುಕ್ಕ ಇಲ್ಲವೆ ನಾಚುವ ಸ್ವಭಾವದ ಮಕ್ಕಳು ಸಿಡಿದು ಒಬ್ಬಂಟಿಗರಾಗಿ ಅಂತರ್ಮುಖಿಗಳಾಗುವದುಂಟು. ಅಂಥ ಮಕ್ಕಳನ್ನು ಕುರಿತು ಶಿಕ್ಷಕನು ಸಾಮಾಜಿಕ ಜೀವನದ ರೂಢಿಗಾಗಿ ಕಾರ್ಯಕ್ರಮವೊಂದನ್ನು ತಯಾರಿಸಬೇಕು. ಆ ಮಕ್ಕಳು ಯಾರ ಗೂಡ ಕೂಡಿಕೊಂಡು ಕೆಲಸ ಮಾಡಲು ಹಾತೊರೆಯುವವೋ ಅಂತಹವರ ಸಹವಾಸದಲಿಯೇ ಕೆಲಸ ಮಾಡಲು ಕೊಡಬೇಕು. ತಮ್ಮ ತಮ್ಮಲ್ಲಿ ಕೆಲಸ ಮಾಡುವ ಬೇರೆ ಬೇರೆ ಸಂಘಗಳನ್ನು ನಿರ್ಮಿಸಿಕೊಳ್ಳುವ ಸ್ವಾತಂತ್ರ್ಯವನ್ನು ಮಕ್ಕಳಿಗೇ ಸಂಪೂರ್ಣವಾಗಿ ಬಿಟ್ಟು ಕೊಡಬೇಕು. ಒಬ್ಬಂಟಿಗನಾಗಿ ಕೆಲಸ ಮಾಡುವದಕ್ಕಿಂತ ಸಾಂಘಿಕವಾಗಿ ಕೆಲಸ ಮಾಡಿದರೆ, ಅದು ಹೆಚ್ಚು ಪರಿಣಾಮಕಾರಿಯಾಗುವದೆಂಬುದು ಮುಂದೆ ಅವರಿಗೆ ಗೊತ್ತಾಗದಿರದು. ಸಾಲೆಯಲ್ಲಿಯ ಬೇರೆ ಬೇರೆ ವರ್ಗಗಳ ಮಕ್ಕಳನ್ನು ಕೂಡಿಸಿ ಎರಡು ದೊಡ್ಡ ತಂಡಗಳನ್ನು ಮಾಡಿ ಆ ತಂಡಗಳ ನಡುವೆ ಅಭಿನಯ, ಆಟ, ಕಥೆ ಹೇಳುವದು, ಕವಿತೆಯನ್ನು ಅನ್ನುವದು, ಮೊದಲಾದವುಗಳಲ್ಲಿ ಪಂದ್ಯಾಟವನ್ನೇರ್ಪಡಿಸಿ ಪ್ರತಿಯೊಂದು ಮಗುವು ಆ ಸ್ಪರ್ಧೆಯಲ್ಲಿ ಭಾಗವಹಿಸಲು ಹುರಿದುಂಬಿಸಬೇಕು. ಬರಬರುತ್ತ ಊರಿನ ಸ್ವಚ್ಛತೆಯ ಕೆಲಸದಲ್ಲಿಯೂ ಹಬ್ಬ-ಹುಣ್ಣಿವೆ-ಜಾತ್ರೆ-ಉರುಸುಗಳಲ್ಲಿ ಮನರಂಜನೆಯ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಲು ಪ್ರೋತ್ಸಾಹಿಸಬೇಕು. ಇಡೀ ಸಾಲೆಯು ಪ್ರಜಾಪ್ರಭುತ್ವದೊಂದು ಚಿಕ್ಕ ಸಂಸ್ಥೆಯಾಗಿ ಪರಿಣಮಿಸಿ ಅದರಲ್ಲಿ ಮಕ್ಕಳು ಯೋಜನೆಗಳನ್ನು ತಾವೇ ಆಯ್ದುಕೊಳ್ಳಬೇಕು ಮತ್ತು ತಾವೇ ಸಾರಾಸಾರವಾಗಿ ಚರ್ಚಿಸಬೇಕು. ಅಲ್ಲಿ ಜೀವನವೂ ಶಿಕ್ಷಣವೂ ಹಾಸುಹೊಕ್ಕಾಗಿ ಹೆಣೆಯಲ್ಪಟ್ಟದ್ದೊಂದು ಸಾಹಸವಂತಿರಬೇಕು.

ಚಿಕ್ಕ ಮಕ್ಕಳಿಗೆ ಓದು-ಬರಹಗಳು ಅಷ್ಟೊಂದು ಸೇರುವದಿಲ್ಲವಾದುದರಿಂದ ಪ್ರಾರಂಭದಲ್ಲಿ ಕೆಲವು ವಾರಗಳ ವರೆಗೆ ಶಿಕ್ಷಕರು ಅವುಗಳನ್ನು ಮಕ್ಕಳಿಗೆ ಕಲಿಸುವ ಗೋಜಿಗೆ ಹೋಗಬಾರದು. ಅವರಿಗೆ ಸೇರುವ ಆಟ-ನೋಟ, ಕಥೆ ಹೇಳುವದು, ಮಾತಾಡುವದು, ಸುತ್ತಲಿನ ಪರಿಸ್ಥಿತಿಯಲ್ಲಿ ಕಂಡು ಬರುವ ಪ್ರಾಣಿ ಸಸ್ಯಾದಿಗಳ ಪರಿಚಯ ಮೊದಲಾದವುಗಳ ಮುಖಾಂತರ ಶಿಕ್ಷಣ ಸಾಗಬೇಕು. ಸಾಲೆಯ ವಾತಾವರಣಕ್ಕೆ ಹೊಂದಿಕೊಂಡು ಚಲೋ ನಡೆ–ನುಡಿಗಳನ್ನೂ ಶಿಷ್ಟಸಂಪ್ರದಾಯಗಳನ್ನೂ ಕಲಿಯುವಂತೆ ಮಾಡಬೇಕು. ಸಾಲೆಯೆಂದರೆ ಅದೊಂದು ಸುಖದ ಬೀಡೆಂದು ಮಕ್ಕಳು ತಿಳಿಯಬೇಕು. ಆ ಉದ್ದೇಶಗಳನ್ನು ಸಾಧಿಸಲು ವ್ಯಯವಾದ ವೇಳೆಯು ಎಂದಿಗೂ ಅಪವ್ಯಯವಾಗಲಾರದು. ಯಾಕಂದರೆ ಪ್ರಾರಂಭದಲ್ಲಿ ಸಾಲೆಯ ಬಗೆಗಿದ್ದ ಮಗುವಿನ ಅಭಿಪ್ರಾಯವು ಕೊನೆಯವರೆಗೆ ಉಳಿಯುವದಲ್ಲವೇ?

(ಮುಂದುವರಿಯುವುದು)

ಶಾಲೆಗಳಲ್ಲಿ ಮುಂಜಾನೆ ಪ್ರಾರಂಭದಲ್ಲಿ ಮಕ್ಕಳೆಲ್ಲರ ದೈಹಿಕ ಸ್ವಚ್ಛತೆಯ ಪರೀಕ್ಷೆಯು ಜರುಗುವದುಂಟು. ಅವರ ಕಣ್ಣು, ಕಿವಿ, ಹಲ್ಲು, ಉಗುರು ಮೊದಲಾದವುಗಳ ಸ್ವಚ್ಛತೆಯ ನಿರೀಕ್ಷಣೆಯಾಗುತ್ತಿದೆ. ಇದು ನಿಜವಾಗಿ ಚಲೋ ರೂಢಿಯು.

ಬುದ್ಧಿಯು ಅನುವಂಶಿಕವಿದ್ದಾಗ್ಯೂ ಸಾಮಾಜಿಕ ಪರಿಸ್ಥಿತಿಯು ಬುದ್ಧಿಯ ಬೆಳವಣಿಗೆಯನ್ನು ಹಿಗ್ಗಿಸಬಲ್ಲದು ಇಲ್ಲವೆ ಕುಗ್ಗಿಸಬಲ್ಲದು. ಸುಸಂಸ್ಕೃತವಾದೊಂದು ಮನೆತನದ ವಾತಾವರಣವು ಗ್ರಹಣಶಕ್ತಿಯನ್ನೂ ವಿಚಾರಶಕ್ತಿಯನ್ನೂ ಪ್ರಚೋದಿಸಬಲ್ಲದು, ಪ್ರೋತ್ಸಾಹಿಸಬಲ್ಲದು ಬಡತನವು ಅನಾರೋಗ್ಯದ ಮೂಲವು. ಆದುದರಿಂದ, ಹಳ್ಳಿಯ ಶಾಲೆಯು ಮೊದಲು ಮಗುವಿನ ದೇಹಾರೋಗ್ಯವನ್ನು ಸುಧಾರಿಸಬೇಕು. ಆ ಮೇಲೆ ಅದರ ಗ್ರಹಣಶಕ್ತಿಯನ್ನೂ ವಿಚಾರಶಕ್ತಿಯನ್ನೂ ಹೆಚ್ಚಿಸಲು ನಿತ್ಯಜೀವನದ ಬೇರೆ ಬೇರೆ ಅನುಭವಗಳನ್ನೂ, ಯೋಜನೆಗಳನ್ನು ಕಲ್ಪಿಸುವದನ್ನೂ, ಅವುಗಳ ಕಾರ್ಯವಿವರಣೆಯನ್ನೂ, ಕಾರ್ಯಸಮಾಪ್ತಿಯನ್ನೂ ಒದಗಿಸಿಕೊಡಬೇಕು.

ಭಾವಾತ್ಮಕ ಬೆಳವಣಿಗೆ

ರಸಭಾವಗಳಲ್ಲಿ ಕಾರ್ಯಪ್ರಚೋದನೆಯ ಶಕ್ತಿಯಿರುತ್ತದೆ. ಗಾಬರಿಗೊಂಡ, ಹೌಹಾರಿದ, ನೊಂದ ಇಲ್ಲವೆ ಬೆಂದ ಮಕ್ಕಳು ಸುಖಿಯಾಗಿದ್ದ ಮಕ್ಕಳ ಹಾಗೆ ನಿರಾಯಾಸವಾಗಿಯೂ ಪರಿಣಾಮಕಾರಿಯಾಗಿಯೂ ಕಲಿಯುವದಿಲ್ಲ. ಆದುದರಿಂದ, ಶಿಕ್ಷಕನು ಮಕ್ಕಳ ವೈಯಕ್ತಿಕವಾದ ರಸಭಾವಗಳನ್ನರಿಯುವದು ಅವಶ್ಯವಿದೆ. ರಸಭಾವಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರತಿಯೊಂದು ಮಗುವಿಗೆ ಎರಡು ಸಂಗತಿಗಳು ಅವಶ್ಯವಾಗಿವೆ. ಮೊದಲನೆಯದು, ಆಶ್ವಾಸನ ಹಾಗೂ ಪ್ರೇಮ; ಎರಡನೆಯದು, ಕಲಿಯಲು ಹಾಗೂ ವಿಕಾಸ ಹೊಂದಲು ಸ್ವಾತಂತ್ರ್ಯ. ಮೊದಲನೆಯದು ಮುಖ್ಯತಃ ತಂದೆ ತಾಯಿಗಳ ಕೆಲಸ. ಆದರೆ, ಪ್ರತಿಯೊಂದು ಮಗುವಿನ ವೈಯಕ್ತಿಕ ಯೋಗ್ಯತೆಯನ್ನು ಕಂಡು ಹಿಡಿದು ಅದನ್ನು ಹೆಚ್ಚಿಸುವದು, ಹಾಗೂ ಮಗುವು ಮುಂದೆ ತನ್ನ ಉಪಜೀವನವನ್ನು ಸಾಗಿಸಿಕೊಂಡು ಹೋಗಲು ಅರ್ಹನನ್ನಾಗಿ ಮಾಡುವದು, ಇವು ಶಾಲೆಯ ಮುಖ್ಯ ಕೆಲಸಗಳು.

ಬಹುತರವಾಗಿ ಶಾಲೆಗಳಲ್ಲಿ ಹಲವೊಂದು ವಿಷಯಗಳನ್ನೂ ಕೌಶಲ್ಯಗಳನ್ನೂ ಕಲಿಸುವದರತ್ತ ಹೆಚ್ಚು ಲಕ್ಷ್ಯಕೊಟ್ಟು ಮಕ್ಕಳ ರಸಭಾವನೆಗಳನ್ನು ಮರೆತು ಬಿಡುವದುಂಟು. ಎಷ್ಟೋಸಲ ಮಕ್ಕಳ ರಸಭಾವನೆಗಳನ್ನು ನೋಯಿಸಿದ ಉದಾಹರಣೆಗಳುಂಟು. ಮಕ್ಕಳ ಯೋಗ್ಯತೆಗೆ ಮೀರಿದ ಇಲ್ಲವೆ ಅದರ ವಿಚಾರಸರಣಿಗೆ ನಿಲುಕದ ಪಾಠಗಳನ್ನು ಮಾಡಲು ಹೇಳಿದರೆ ಅವರು ತಪ್ಪುವದು ಸ್ವಾಭಾವಿಕ. ಹಾಗೆ ತಪ್ಪಿದಾಗ ಅವರಿಗೆ ಶಿಕ್ಷೆವಿಧಿಸಿ ಅವರನ್ನು ನಿರುತ್ಸಾಹಗೊಳಿಸುವದುಂಟು. ಕೆಲಸ ಮಾಡಿದ ಬಗೆಗೆ ಅವರಿಗೆ ಸಿಗತಕ್ಕ ಆನಂದದ ಅನುಭವವೂ ಸುಖವೂ ಸಿಗದೆ ಹೋಗುವವು. ಅದರ ಪರಿಣಾಮವಾಗಿ ಮನಸಿನಹೋರಾಟ, ಕೀಳುಭಾವನೆ, ಎದೆಗುಂದುವಿಕೆ, ಬೇಸರ, ನಿಷ್ಕ್ರಿಯತೆ, ಮೊದಲಾದವುಗಳು ಮಕ್ಕಳಲ್ಲಿ ತಲೆದೋರಿ ದುಷ್ಟ ಭಾವನೆಗಳ ಬೆಳವಣಿಗೆಗೆ ದಾರಿ ಮಾಡಿಕೊಡುವವು. ಕೆಲಸ ಮಾಡಿದ್ದರಿಂದುಂಟಾಗುವ ಆನಂದದ ಅನುಭವವು ಮಕ್ಕಳಿಗೆ ಸಿಗುತ್ತ ಹೋದರೆ ಅವರಲ್ಲಿ ಸದ್ಭಾವನೆಗಳು ಒಡಮೂಡಿ ಅವರ ವ್ಯಕ್ತಿತ್ವದ ವಿಕಾಸವಾಗುವದಲ್ಲದೆ ಶಿಕ್ಷಣದ ಕಾರ್ಯವು ಪರಿಣಾಮಕಾರಿಯಾಗುವದು.

ಸಾಮಾಜಿಕ ಭಾವನೆಗಳ ಬೆಳವಣಿಗೆ

ಸಮಾಜದಲ್ಲಿ ಹೊಂದಿಕೊಂಡು ಹೋಗುವ ಚಟಗಳು ಇಲ್ಲವೆ ವೃತ್ತಿಗಳು ಪ್ರತ್ಯಕ್ಷ ಅನುಭವದಿಂದ ಪ್ರಾಪ್ತವಾಗುತ್ತವೆ. ಒಂದು ವೇಳೆ ಅಂತಹ ಚಟಗಳು ತಲೆದೋರದಿದ್ದರೆ, ಅದು ಶಿಕ್ಷಣಕ್ರಮದಲ್ಲಿಯ ದೋಷವೆಂದು ಕೈಯೆತ್ತಿ ತೋರಿಸುತ್ತದೆ. ಒಂದು ಮಗುವು ತನಗಿಂತ ಚಿಕ್ಕ ವಯಸ್ಸಿನ ಮಕ್ಕಳ ಕೂಡ ಆಡುತ್ತಿದ್ದಿತೆಂದರೆ, ಅದು ಅವರ ಮೇಲೆ ತನ್ನ ವರ್ಚಸ್ಸನ್ನು ಕೂಡ್ರಿಸಿ ಆ ಗುಂಪಿನ ನಾಯಕನಾಗಲು ಹವಣಿಸುವದುಂಟು. ತನಗಿಂತ ದೊಡ್ಡವರೊಡನೆ ಆಡುತ್ತಿದ್ದಿತೆಂದರೆ, ಹೇಳಿದಂತೆ ಕೇಳಿಕೊಂಡು ಹೋಗುವ

ಹಳ್ಳಿಗಾಡಿನಲ್ಲಿ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ

ಮನೋವೃತ್ತಿಯು ಆ ಮಗುವಿನಲ್ಲಿ ಬೆಳೆಯುವದುಂಟು. ಮಕ್ಕಳ ಕೂಡ ಆಡುವ ಇಲ್ಲವೆ ಕೆಲಸ ಮಾಡುವ ಪ್ರಸಂಗಗಳು ಸಿಗದಿರುವ ಮಗುವು ಒಂಟಿಗನಾಗಿರಲು ಬಯಸುತ್ತದೆ. ಮಗುವಿನಲ್ಲಿ ಸಾಂಘಿಕ ಚಟವಿಲ್ಲದಿರುವದಕ್ಕೆ ಶಾರೀರಿಕ, ಮಾನಸಿಕ ಹಾಗೂ ಭಾವಾತ್ಮಕ ಕಾರಣಗಳಿರಬಹುದು. ವ್ಯಕ್ತಿಯಿಂದ ಗಟ್ಟಿಮುಟ್ಟಾಗಿದ್ದ ಮಗುವು ಅಶಕ್ತ ಮಕ್ಕಳ ಮೇಲೆ ದಬ್ಬಾಳಿಕೆಯನ್ನು ನಡಿಸುವದುಂಟು. ಅಶಕ್ತ ಇಲ್ಲವೆ ದೈಹಿಕ ನ್ಯೂನತೆಯುಳ್ಳ ಮಗುವು ಸಶಕ್ತರ ಕೂಡ ಸ್ಪರ್ಧಿಸುವ ಶಕ್ತಿಯಿಲ್ಲದ ಮೂಲಕ ಸಾಂಘಿಕ ಚಟುವಟಿಕೆಗಳಲ್ಲಿ ಸಹಕರಿಸುವದಿಲ್ಲ. ಮಂದಮತಿಯುಳ್ಳ ಹಾಗೂ ದೃಢ ಭಾವನೆಗಳಿಲ್ಲದ ಮಗುವು ಸಾಮಾಜಿಕ ಬಂಧನ ಮತ್ತು ನಡೆ-ನುಡಿಗಳ ಕಲ್ಪನೆಯಿಲ್ಲದೆ ಇರುವದುಂಟು. ಸಾಲೆಯಲ್ಲಿ ಮಗುವಿನ ಶಾರೀರಿಕ, ಮಾನಸಿಕ ಹಾಗೂ ಭಾವಾತ್ಮಕ ಬೆಳವಣಿಗೆಗೆ ಸಾಕಷ್ಟು ಆಸ್ಪದಕೊಟ್ಟು ಅದು ಸಾಂಘಿಕ ಚಟುವಟಿಕೆಗಳಲ್ಲೆಲ್ಲ ಭಾಗವಹಿಸುವಂತೆ ಮಾಡಬೇಕು.

ಮಗುವಿನ ಸಾಂಘಿಕ ವೃತ್ತಿಗಳು ಇಲ್ಲವೆ ನಡೆ-ನುಡಿಗಳು ಸಾಂಘಿಕ ಆಟಗಳಲ್ಲಿ ರೂಪುಗೊಳ್ಳುತ್ತವೆ. ಗುರುಗಳಿಗೆ ಇಲ್ಲವೆ ತಂದೆ–ತಾಯಿಗಳಿಗೆ ಪ್ರಿಯಕರವಾಗಿರುವದಕ್ಕಿಂತ ತನ್ನ ಒಡನಾಡಿಗಳ ಕೂಡ ಹೆಚ್ಚು ಪ್ರಿಯಕರನಾಗಿರುವದು ಮಗುವಿಗೆ ಸೇರುತ್ತದೆ. ಆದುದರಿಂದ, ಸಾಂಘಿಕ ಆಟಗಳು ಆ ಮಗುವಿನ ನಡೆ–ನುಡಿಗಳಿಗೆ ಒಂದು ಮೂರ್ತ ಸ್ವರೂಪವನ್ನು ತಂದು ಕೊಡುತ್ತವೆ. ಆಟಗಳು ಉಳಿದ ಮಕ್ಕಳ ಗೂಡ ಸಹಕಾರದಿಂದ ಹೊಂದಿಕೊಂಡು ಹೋಗುವ ಮನೋವೃತ್ತಿಯನ್ನು ಹುಟ್ಟಿಸುತ್ತವೆ. ಉಳಿದವರ ಅವಶ್ಯಕತೆಯು ಮಗುವಿಗೆ ಹೇಗೋ ಹಾಗೆಯೇ ಆ ಮಗುವಿನ ಅವಶ್ಯಕತೆಯು ಉಳಿದವರಿಗಿದೆ. ಮಗುವು ದೊಡ್ಡದಾದ ಮೇಲೆ ಜನತೆಯ ಕೂಡ ಹೊಂದಿಕೊಂಡು ಹೋಗಲು ಆ ಮನೋಭೂಮಿಕೆಯು ಅತ್ಯವಶ್ಯವಿದೆ.

ಹಲವು ಪುಕ್ಕ ಇಲ್ಲವೆ ನಾಚುವ ಸ್ವಭಾವದ ಮಕ್ಕಳು ಹಿಡಿದು ಒಬ್ಬಂಟಿಗರಾಗಿ ಅಂತರ್ಮುಖಿಗಳಾಗುವದುಂಟು. ಅಂಥ ಮಕ್ಕಳನ್ನು ಕುರಿತು ಶಿಕ್ಷಕನು ಸಾಮಾಜಿಕ ಜೀವನದ ರೂಢಿಗಾಗಿ ಕಾರ್ಯಕ್ರಮವೊಂದನ್ನು ತಯಾರಿಸಬೇಕು. ಆ ಮಕ್ಕಳು ಯಾರ ಗೂಡ ಕೂಡಿಕೊಂಡು ಕೆಲಸ ಮಾಡಲು ಹಾತೊರೆಯುವವೋ ಅಂತಹವರ ಸಹವಾಸದಲ್ಲಿಯೇ ಕೆಲಸ ಮಾಡಲು ಕೊಡಬೇಕು.

ತಮ್ಮ ತಮ್ಮಲ್ಲಿ ಕೆಲಸ ಮಾಡುವ ಬೇರೆ ಬೇರೆ ಸಂಘಗಳನ್ನು ನಿರ್ಮಿಸಿಕೊಳ್ಳುವ ಸ್ವಾತಂತ್ರ್ಯವನ್ನು ಮಕ್ಕಳಿಗೇ ಸಂಪೂರ್ಣವಾಗಿ ಬಿಟ್ಟು ಕೊಡಬೇಕು. ಒಬ್ಬಂಟಿಗನಾಗಿ ಕೆಲಸ ಮಾಡುವದಕ್ಕಿಂತ ಸಾಂಘಿಕವಾಗಿ ಕೆಲಸ ಮಾಡಿದರೆ, ಅದು ಹೆಚ್ಚು ಪರಿಣಾಮಕಾರಿಯಾಗುವದೆಂಬುದು ಮುಂದೆ ಅವರಿಗೆ ಗೊತ್ತಾಗದಿರದು. ಸಾಲೆಯಲ್ಲಿಯ ಬೇರೆ ಬೇರೆ ವರ್ಗಗಳ ಮಕ್ಕಳನ್ನು ಕೂಡಿಸಿ ಎರಡು ದೊಡ್ಡ ತಂಡಗಳನ್ನು ಮಾಡಿ ಆ ತಂಡಗಳ ನಡುವೆ ಅಭಿನಯ, ಆಟ, ಕಥೆ ಹೇಳುವದು, ಕವಿತೆಯನ್ನು ಅನ್ನುವದು, ಮೊದಲಾದವುಗಳಲ್ಲಿ ಪಂದ್ಯಾಟವನ್ನೇರ್ಪಡಿಸಿ ಪ್ರತಿಯೊಂದು ಮಗುವು ಆ ಸ್ಪರ್ಧೆಯಲ್ಲಿ ಭಾಗವಹಿಸಲು ಹುರಿದುಂಬಿಸಬೇಕು. ಬರಬರುತ್ತ ಊರಿನ ಸ್ವಚ್ಛತೆಯ ಕೆಲಸದಲ್ಲಿಯೂ ಹಬ್ಬ-ಹುಣ್ಣಿವೆ-ಜಾತ್ರೆ-ಉರುಸುಗಳಲ್ಲಿ ಮನರಂಜನೆಯ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಲು ಪ್ರೋತ್ಸಾಹಿಸಬೇಕು. ಇಡೀ ಸಾಲೆಯು ಪ್ರಜಾಪ್ರಭುತ್ವದೊಂದು ಚಿಕ್ಕ ಸಂಸ್ಥೆಯಾಗಿ ಪರಿಣಮಿಸಿ ಅದರಲ್ಲಿ ಮಕ್ಕಳು ಯೋಜನೆಗಳನ್ನು ತಾವೇ ಆಯ್ದುಕೊಳ್ಳಬೇಕು ಮತ್ತು ತಾವೇ ಸಾರಾಸಾರವಾಗಿ ಚರ್ಚಿಸಬೇಕು. ಅಲ್ಲಿ ಜೀವನವೂ ಶಿಕ್ಷಣವೂ ಹಾಸುಹೊಕ್ಕಾಗಿ ಹೆಣೆಯಲ್ಪಟ್ಟದ್ದೊಂದು ಸಾಹಸವಂತಿರಬೇಕು.

ಚಿಕ್ಕ ಮಕ್ಕಳಿಗೆ ಓದು-ಬರಹಗಳು ಅಷ್ಟೊಂದು ಸೇರುವದಿಲ್ಲವಾದುದರಿಂದ ಪ್ರಾರಂಭದಲ್ಲಿ ಕೆಲವು ವಾರಗಳ ವರೆಗೆ ಶಿಕ್ಷಕರು ಅವುಗಳನ್ನು ಮಕ್ಕಳಿಗೆ ಕಲಿಸುವ ಗೋಜಿಗೆ ಹೋಗಬಾರದು. ಅವರಿಗೆ ಸೇರುವ ಆಟ-ನೋಟ, ಕಥೆ ಹೇಳುವದು, ಮಾತಾಡುವದು, ಸುತ್ತಲಿನ ಪರಿಸ್ಥಿತಿಯಲ್ಲಿ ಕಂಡು ಬರುವ ಪ್ರಾಣಿ ಸಸ್ಯಾದಿಗಳ ಪರಿಚಯ ಮೊದಲಾದವುಗಳ ಮುಖಾಂತರ ಶಿಕ್ಷಣ ಸಾಗಬೇಕು. ಸಾಲೆಯ ವಾತಾವರಣಕ್ಕೆ ಹೊಂದಿಕೊಂಡು ಚಲೋ ನಡೆ–ನುಡಿಗಳನ್ನು ಶಿಷ್ಟಸಂಪ್ರದಾಯಗಳನ್ನೂ ಕಲಿಯುವಂತೆ ಮಾಡಬೇಕು. ಸಾಲೆಯೆಂದರೆ ಅದೊಂದು ಸುಖದ ಬೀಡೆಂದು ಮಕ್ಕಳು ತಿಳಿಯಬೇಕು. ಆ ಉದ್ದೇಶಗಳನ್ನು ಸಾಧಿಸಲು ವ್ಯಯವಾದ ವೇಳೆಯು ಎಂದಿಗೂ ಅಪವ್ಯಯವಾಗಲಾರದು. ಯಾಕಂದರೆ ಪ್ರಾರಂಭದಲ್ಲಿ ಸಾಲೆಯ ಬಗೆಗಿದ್ದ ಮಗುವಿನ ಅಭಿಪ್ರಾಯವು ಕೊನೆಯವರೆಗೆ ಉಳಿಯುವದಲ್ಲವೇ?

(ಮುಂದುವರಿಯುವುದು)

ನತ್ತು

ಹಾಗೂ

ಮೂಗುತಿ

ಲೇಖಕರು :– ಡಾ. ಬಿ. ಎಸ್. ಗದ್ದಗೀಮಠ
M. A. Ph. D.

[ಹಿಂದಿನ ಸಂಚಿಕೆಯಿಂದ ಮುಂದುವರೆದುದು]

ಮೇಲಿನ ಊಹೆಯು ಸತ್ಯವೇನೋ ಅನ್ನುವಂತೆ ಮುಸಲ್ಮಾನರಲ್ಲಿ ಈಗಲೂ ಮದುವೆಯ ಕಾಲದಲ್ಲಿ ಮದುಮಗಳು ಚಿಕ್ಕವಳಿದ್ದರೆ ಮದುಮಗನು ಅವಳನು ತನ್ನ ಬಲತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮೂಗಿನ ಬಲ ಹೊರಳೆಯಲ್ಲಿ ನತ್ತನ್ನು ಚುಚ್ಚುವನು. ಜಾನಪದ ಸಾಹಿತ್ಯವನ್ನು ಸಂಕಲನ ಮಾಡುವ ಕಾಲಕ್ಕೆ ತೊರಗಲ್ಲಿನಲ್ಲಿ ಈ ವಿಧಾನವು ನನ್ನ ನಿದರ್ಶನಕ್ಕೆ ಬಂತು. ಅದನ್ನು ನೋಡಿ ಆಶ್ಚರ್ಯಗೊಂಡು ಅಲ್ಲಿಯ ಜನರನ್ನು ವಿಚಾರಿಸಲು ಅವರು ಮುಸಲ್ಮಾನ ಧರ್ಮದ ಪ್ರಕಾರ ಇದೊಂದು ಲಗ್ನಕಾಲದಲ್ಲಿ ಆಚರಿಸಲ್ಪಡುವ ಮಹತ್ವದ ವಿಧಾನವೆಂದು ಹೇಳಿದರು. ಆದರೆ ಇತ್ತೀಚೆಗೆ ಹಲಕೆಲವರು ಸುಧಾರಿಸಿದವರೆಂದು ಇದನ್ನು ಆಚರಿಸುವದಿಲ್ಲ. ಅಲ್ಲದೆ ಅವರಲ್ಲಿಯೂ ಬಾಲಗನ್ನೆಯರ ಲಗ್ನಗಳಾಗುವುದು ಕಡಿಮೆಯಾಗಹತ್ತಿದೆ ಎಂದು ಹೇಳಿದರು. ಹೀಗೆ ಮೂಗು ಚುಚ್ಚುವುದು ಲಗ್ನದ ಚಿಹ್ನವೆಂದು ಮುಸಲ್ಮಾನರಲ್ಲಿ ಬಂದಿದೆ. ಹಲಕೆಲವರಲ್ಲಿ ಈಗಲೂ ಬಳಕೆಯಲ್ಲಿದೆ.

ಉತ್ತರ ಹಿಂದುಸ್ತಾನದ ಹಿಂದುಳಿದ ಜನಾಂಗಗಳಲ್ಲಿ ಹೆಣ್ಣು ತದ್ರೂಪದ ಒಂಟಿಯ ಮೂಗಿಗೆ ಹಾಕುವ ಬಳೆಯ ಆಕಾರದ ಒಂದು ಚಿನ್ನದ ಅಥವಾ ಬೆಳ್ಳಿಯ ಬಳೆಯನ್ನು ನಡುವೊಂದು ಗುಂಡು ಪೋಣಿಸಿ ಅಲಂಕಾರವೆಂದು ಮೂಗಿನ ಎಡ ಹೊರಳೆಯಲ್ಲಿಟ್ಟುಕೊಳ್ಳುತ್ತಾರೆ. ಇದು ಈಗ ನಮಗೆ ಕಂಡುಬರುವ ಸುಧಾರಿಸಿದ ನತ್ತಿನ ಸುಂದರವಾದ ಆಕಾರದ ಮೂಲರೂಪವೆಂದು ಹೇಳಬಹುದು. ಒಂಟಿಯ ಮೂಗು ಬಳೆಯಾಕಾರದ ಈ ಮೂಗಿನ ಅಲಂಕಾರವು ನತ್ತಿನ ಮೂಲ ಉಗಮವನ್ನು ಸೂಚಿಸಲಾರದೇ? ಇಜಿಪ್ತದ ನಾಗರೀಕತನವು ದಿನದಿನಕ್ಕೆ ಬೆಳೆದು ಅರಬಸ್ತಾನ, ಪರ್ಶಿಯಾ, ಮೊದಲಾದ ದೇಶದ ಜನಾಂಗಗಳ ಮೇಲೆ ತನ್ನ ಪ್ರಭಾವವನ್ನು ಚೆಲ್ಲಿರಬಹುದು. ಮೂಗಿನ ಸುಂದರವಾದ ಅಲಂಕಾರವನ್ನು ಕಂಡ ಈ ದೇಶದ ಜನರಾದರೂ ಅದನ್ನು ಅನುಕರಣೆ ಮಾಡಿ ತಮ್ಮಲ್ಲಿಯೂ ಉಪಯೋಗಿಸುತ್ತ ಬಂದಿರಬಹುದು. ಮುಂದೆ ಮುಸಲ್ಮಾನರು ಹಿಂದುಸ್ತಾನವನ್ನು ಗೆದ್ದು ಆಳಹತ್ತಿದ ಮೇಲೆ ನತ್ತೂ ಅವರ ಬೆನ್ನು ಹತ್ತಿ ಹಿಂದುಸ್ತಾನಕ್ಕೆ ಬಂತು. ಧರ್ಮವಂತರಾದ ಹಿಂದೂ ಜನರು ಕಾಲಾಂತರದಲ್ಲಿ ಈ ನತ್ತನ್ನು ತಮಗೂ ಮೂಗಿನ ಅಲಂಕಾರವೆಂದು ಒಪ್ಪಿರಬಹುದು. ಕ್ರಿ. ಶ. ಸುಮಾರು ೧೦ನೆಯ ಶತಮಾನದ ನಂತರ ಈ 'ನತ್ತು' ಹಿಂದೂ ಹೆಣ್ಣುಮಕ್ಕಳ ಮೂಗಿಗೆ ಅಲಂಕಾರವಾಯಿತು. [1]

ಪ್ರಾಕೃತ ನಿಘಂಟಿನಲ್ಲಿ 'णत्था' ಎಂಬ ಶಬ್ದಕ್ಕೆ 'ನಾಸಾರಜ್ಜು' (नासारज्जु) ಮೂಗುದಾಣವೆಂಬ ಅರ್ಥವಿದೆ. ಇದು 'ದೇಶಿ'ಯ ಶಬ್ದವೆಂದು ನಿಘಂಟುಕಾರರು 'णत्था' ಎಂಬ ಶಬ್ದಕ್ಕೆ ಪ್ರತಿಯಾಗಿ ಅದೇ ಅರ್ಥವನ್ನು ಸೂಚಿಸುವ ಏಕಶಬ್ದವು ಸಂಸ್ಕೃತದಲ್ಲಿ ದೊರೆಯದ ಮೂಲಕ ಅದನ್ನು ಹುಡುಕಿ ಹೇಳುವ ಗೋಜಿಗೆ ಹೋಗದೆ 'ದೇಶಿ'ಶಬ್ದವೆಂದು ಕರೆದಿರಬಹುದು. ಪ್ರಾಕೃತದಲ್ಲಿ 'ದೇಶಿನಾಮಮಾಲಾ' ಎಂಬ ಗ್ರಂಥವನ್ನು ಬರೆದ ಹೇಮಚಂದ್ರನು ಕ್ರಿ. ಶ. ೧೨ನೆಯ ಶತಮಾನದಲ್ಲಿ ಆಗಿಹೋಗಿದ್ದಾನೆ. ಈ ಮುಂಚೆಯೇ 'ನಥ'

---

[1] Hindoo nose ornament called 'Nath' by P. K. Gode
...kar O. R. I. vol. XIX Part IV PP. 313-333

ಶಬ್ದವು ಬಳಕೆಯಲ್ಲಿ ಬಂದು ಹೋಗಿತ್ತು. ಪ್ರಾಕೃತದಲ್ಲಿಯ '[illegible]' ಎಂಬ ಶಬ್ದವು ಇಜಿಪ್ತ ದೇಶದಲ್ಲಿಯ 'ಸಾಥಿಯಾ' ಎಂಬ ಶಬ್ದದಿಂದಲೇ ಬಂದಿರಬೇಕು. ಯಾಕೆಂದರೆ ಈ ಎರಡೂ ಶಬ್ದಗಳ ಅರ್ಥವು ಒಂದೇ ಆಗಿದ್ದು ಉಚ್ಚಾರಗಳೂ ಒಂದಕ್ಕೊಂದು ಹೋಲಿಕೆಯಲ್ಲಿ ತೀರ ಸಮೀಪವಾಗಿವೆ. ಹೀಗೆ 'ನತ್ತು' ಪರದೇಶದ ಆಭರಣವಿದ್ದು ಮುಸಲ್ಮಾನರೇ ಅದನ್ನು ಹಿಂದುಸ್ತಾನಕ್ಕೆ ತಂದಿರಬಹುದು.

ಕನ್ನಡಿಗರಿಗೆ 'ನತ್ತು' ಹೆರವರು ತಂದ ಅಲಂಕಾರ. ಮೂಗುತಿಯು 'ನತ್ತು' ಬರುವುದಕ್ಕಿಂತ ಮುಂಚೆಯೇ ಕನ್ನಡ ನಾಡಿನಲ್ಲಿ ಹೆಣ್ಣುಮಕ್ಕಳಿಗೆ ಸೌಭಾಗ್ಯ ಚಿಹ್ನವಾಗಿತ್ತು. ಮೂಗುತಿಯು ಅಚ್ಚಗನ್ನಡ ಶಬ್ದ. ನತ್ತಿಗೂ ಇದಕ್ಕೂ ಯಾವ ಸಂಬಂಧವೇ ಇಲ್ಲ. ಸಂಸ್ಕೃತ ಕೋಶದಲ್ಲಿ ನತ್ತೆಂಬ ಅಲಂಕಾರದ ಹೆಸರೇ ಇಲ್ಲ. ಇದರ ಮೇಲಿಂದ ಆರ್ಯ ಜನಾಂಗದ ಹೆಣ್ಣುಮಕ್ಕಳಿಗೆ ಮೊದಲಿನಿಂದ ಮೂಗಿಗೆ ಅಲಂಕಾರವಿದ್ದಿಲ್ಲವೆಂದೇ ಹೇಳಬಹುದು. ಅಲ್ಲದೆ, ಅವರಿಗೆ 'ನತ್ತು' ಲಗ್ನದಲ್ಲಿ ಅಷ್ಟೊಂದು ಮಹತ್ವದ ಅಲಂಕಾರವೂ ಅಲ್ಲ. ಆದುದರಿಂದ ಅವರಿಗೆ ಮೂಗಿಗೆ ಅಲಂಕಾರ ಬಂದದ್ದು ಮುಸಲ್ಮಾನರು ಹಿಂದುಸ್ತಾನವನ್ನು ಹೊಕ್ಕನಂತರವೆಂದೇ ಹೇಳಬಹುದು.

ಕನ್ನಡದ ಯಾವ ಕವಿಯೂ ತನ್ನ ಕಾವ್ಯಗಳಲ್ಲಿ 'ನತ್ತು' ಶಬ್ದವನ್ನು ಉಪಯೋಗಿಸಿರುವುದಿಲ್ಲ. ಅದರ ಬದಲು ಎಲ್ಲ ಕವಿಗಳು 'ಮೂಗುತಿ' ಎಂಬ ಶಬ್ದವನ್ನು ಉಪಯೋಗಿಸುತ್ತ ಬಂದಿದ್ದಾರೆ. ಮೂಗುತಿಯನ್ನು ಕರ್ನಾಟಕದಲ್ಲಿ ಅತಿ ಪ್ರಾಚೀನ ಕಾಲದಿಂದಲೂ ಕಾಣಬಹುದಾಗಿದೆ. ಮೂಗುತಿಯು ಕನ್ನಡ ಹೆಣ್ಣುಮಕ್ಕಳಿಗೆ ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ಮಾಂಗಲ್ಯದ ಗುರುತಾಗಿದೆ. ಕನ್ನೆಯರೂ ಮದುವೆಯಾದ ಮುತ್ತೈದೆಯರೂ ಮೂಗುತಿಯು ಸೌಭಾಗ್ಯ ಲಕ್ಷಣವೆಂದು ಧರಿಸುತ್ತ ಬಂದಿದ್ದಾರೆ. ಕನ್ನಡ, ಮಲೆಯಾಳ, ತೆಲುಗು ಮೊದಲಾದ ಎಲ್ಲ ದ್ರಾವಿಡ ಜನಾಂಗಗಳಲ್ಲಿ ಮೂಗುತಿಯು ಮೊದಲಿನಿಂದಲೂ ಬಂದಿದೆ. ಹೀಗಿದ್ದು ಅಜಂತಾ, ಎಲ್ಲೋರ, ಬಾದಾಮಿ ಮೊದಲಾದ ಸ್ಥಳಗಳಲ್ಲಿ ಕೊರೆಯಿಸಿದ ಶಿಲ್ಪಗಳ ಹೆಣ್ಣುಗೊಂಬೆಗಳ ಮೂಗಿನಲ್ಲಿ ಮೂಗುತಿಯು ಕಂಡುಬರುವದಿಲ್ಲ. ಶಿಲ್ಪಗಳ ಗೋಡೆಗಳ ಮೇಲೆ ಬರೆಸಿದ ಬಣ್ಣದ ಚಿತ್ರಗಳಲ್ಲಿಯೂ (Mural paintings) ಈ ಮೂಗುತಿಯು ಕಾಣದಿರುವುದು ಸೋಜಿಗದ ಸಂಗತಿ. ಇದನ್ನು ಸಂಶೋಧಕರು ಗಾಬರಿಯಾಗುವ ಕಾರಣವೇ ಇಲ್ಲ. ದ್ರಾವಿಡರಿಗೆ ಮೂಗಿನ ಅಲಂಕಾರವು ಮೊದಲಿನಿಂದಲೂ ಇತ್ತೆಂದು ಕಂಡುಬರುತ್ತದೆ. ಆರ್ಯರನ್ನು ಅನುಕರಣ ಮಾಡದ ಎಲ್ಲ ದ್ರಾವಿಡರು ಈ ಮೂಗುತಿಯನ್ನು ಹಾಕುತ್ತ ಬಂದಿದ್ದಾರೆ. ಆರ್ಯರ ಸಂಪರ್ಕದಿಂದ ಅವರ ಸಂಸ್ಕೃತಿಯನ್ನು ಅನುಕರಣ ಮಾಡಿದ ದ್ರಾವಿಡರು ಮೂಗಿನ ಅಲಂಕಾರವಿಲ್ಲದ ಆರ್ಯ ಸ್ತ್ರೀಯರನ್ನು ನೋಡಿ, ತಾವು ಹಾಕುತ್ತ ಬಂದ ಮೂಗುತಿಯನ್ನು ಹಾಕುವ ಪದ್ಧತಿಯನ್ನು ಬಿಟ್ಟುಕೊಟ್ಟಿರಬಹುದು. ಈ ಜನರೇ ರಾಜಕಾರಣದಲ್ಲಿ ಮುಂದೆ ಬಂದು ಶಿಲ್ಪಕಲೆ ಮೊದಲಾದವುಗಳಿಗೆ ಪ್ರೋತ್ಸಾಹ ಕೊಟ್ಟಿದ್ದರಿಂದ ಈ ಶಿಲ್ಪಗಳಲ್ಲಿ ಕೆತ್ತಿಸಿದ ಹೆಣ್ಣುಗೊಂಬೆಗಳಲ್ಲಾಗಲಿ, ಗೋಡೆಯ ಮೇಲೆ ಬರೆಯಿಸಿದ ಚಿತ್ರಗಳಲ್ಲಾಗಲಿ ಮೂಗಿಗೆ ಈ ಅಲಂಕಾರವು ಅನಾಗರಿಕತೆಯ ಗುರುತೆಂದು ಅದನ್ನು ಬಿಟ್ಟಿರಬಹುದೆಂದು ಅನುಮಾನಿಸಬಹುದಾಗಿದೆ. ಎಲ್ಲ ದ್ರಾವಿಡ ಭಾಷೆಗಳಲ್ಲಿಯೂ 'ಮೂಗುತಿ' ಎಂಬ ಶಬ್ದವಿದೆ. ಮಲೆಯಾಳ ಭಾಷೆಯಲ್ಲಿ ಈ 'ಮೂಗುತಿ'ಗೆ 'ಮುಕ್ಕುತ್ತಿ' ಎಂಬ ಶಬ್ದವಿದೆ. ಮುಕ್ಕು+ಕುತ್ತಿ = ಮೂಗು+ಗುದ್ದಿ ಎಂದು ಕನ್ನಡದಲ್ಲಿ ಆಗುವುದು. ಮೂಗುತಿಯು ಹೆಣ್ಣಿಗೆ ಗಂಡನೆಂಬ ಬಲವಂತ 'ಗುದ್ದಿಗೆ' ಯುಂಟೆಂದು ಸೂಚಿಸಬಹುದೇ? ಇದಕ್ಕೆ ಒಕ್ಕಲಿಗನು ಅನ್ನುವ 'ನತ್ತು ಮೂಗದಾಣ್ಯಾನು' ಎಂಬುದನ್ನು ಹೋಲಿಸಿ ನೋಡಿರಿ. ಮೂಗುತಿ ಹಾಗೂ ಗೂಟ ಮೂಗುತಿಗಳ ಹಿಂದೆ ಇದೇ ಅರ್ಥಗರ್ಭಿತ ಧ್ವನಿಯಿರಬಹುದೇ? ಮಲೆಯಾಳ ಸಾಹಿತ್ಯದಲ್ಲಿ 'ಮುಕ್ಕುತ್ತಿ' ಎಂಬ ಶಬ್ದವು ಕ್ರಿ.ಶ. ೮ ನೆಯ ಶತಮಾನದಿಂದಲೂ ಬಳಕೆಯಲ್ಲಿದೆ. ಶ್ರೀ. ಶಂಕರಾಚಾರ್ಯರು

ನತ್ತು

ಹಾಗೂ

ಮೂಗುತಿ

ಲೇಖಕರು :- ಡಾ. ಬಿ. ಎಸ್. ಗದ್ದಗೀಮಠ
M. A. Ph. D.

[ಹಿಂದಿನ ಸಂಚಿಕೆಯಿಂದ ಮುಂದುವರೆದುದು]

ಮೇಲಿನ ಊಹೆಯು ಸತ್ಯವೇನೋ ಅನ್ನುವಂತೆ ಮುಸಲ್ಮಾನರಲ್ಲಿ ಈಗಲೂ ಮದುವೆಯ ಕಾಲದಲ್ಲಿ ಮದುಮಗಳು ಚಿಕ್ಕವಳಿದ್ದರೆ ಮದುಮಗನು ಅವಳನು ತನ್ನ ಬಲತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮೂಗಿನ ಬಲ ಹೊರಳೆಯಲ್ಲಿ ನತ್ತನ್ನು ಚುಚ್ಚುವನು. ಜಾನಪದ ಸಾಹಿತ್ಯವನ್ನು ಸಂಕಲನ ಮಾಡುವ ಕಾಲಕ್ಕೆ ತೊರಗಲ್ಲಿನಲ್ಲಿ ಈ ವಿಧಾನವು ನನ್ನ ನಿದರ್ಶನಕ್ಕೆ ಬಂತು. ಅದನ್ನು ನೋಡಿ ಆಶ್ಚರ್ಯಗೊಂಡು ಅಲ್ಲಿಯ ಜನರನ್ನು ವಿಚಾರಿಸಲು ಅವರು ಮುಸಲ್ಮಾನ ಧರ್ಮದ ಪ್ರಕಾರ ಇದೊಂದು ಲಗ್ನಕಾಲದಲ್ಲಿ ಆಚರಿಸಲ್ಪಡುವ ಮಹತ್ವದ ವಿಧಾನವೆಂದು ಹೇಳಿದರು. ಆದರೆ ಇತ್ತೀಚಿಗೆ ಹಲಕೆಲವರು ಸುಧಾರಿಸಿದವರೆಂದು ಇದನ್ನು ಆಚರಿಸುವದಿಲ್ಲ. ಅಲ್ಲದೆ ಅವರಲ್ಲಿಯೂ ಬಾಲಗನ್ನೆಯರ ಲಗ್ನಗಳಾಗುವುದು ಕಡಿಮೆಯಾಗಹತ್ತಿದೆ ಎಂದು ಹೇಳಿದರು. ಹೀಗೆ ಮೂಗು ಚುಚ್ಚುವುದು ಲಗ್ನದ ಚಿಹ್ನವೆಂದು ಮುಸಲ್ಮಾನರಲ್ಲಿ ಬಂದಿದೆ. ಹಲಕೆಲವರಲ್ಲಿ ಈಗಲೂ ಬಳಕೆಯಲ್ಲಿದೆ.

ಉತ್ತರ ಹಿಂದುಸ್ತಾನದ ಹಿಂದುಳಿದ ಜನಾಂಗಗಳಲ್ಲಿ ಹೆಣ್ಣು ತದ್ರೂಪ ಒಂಟಿಯ ಮೂಗಿಗೆ ಹಾಕುವ ಬಳೆಯ ಆಕಾರದ ಒಂದು ಚಿನ್ನದ ಅಥವಾ ಬೆಳ್ಳಿಯ ಬಳೆಯನ ನಡುವೊಂದು ಗುಂಡು ಪೋಣಿಸಿ ಅಲಂಕಾರವೆಂದ ಮೂಗಿನ ಎಡ ಹೊರಳೆಯಲ್ಲಿಟ್ಟುಕೊಳ್ಳುತ್ತಾರೆ. ಇದ ಈಗ ನಮಗೆ ಕಂಡುಬರುವ ಸುಧಾರಿಸಿದ ನತ್ತಿನ ಸುಂದ ವಾದ ಆಕಾರದ ಮೂಲರೂಪವೆಂದು ಹೇಳಬಹುದು ಒಂಟಿಯ ಮೂಗು ಬಳೆಯಾಕಾರದ ಈ ಮೂಗಿ ಅಲಂಕಾರವು ನತ್ತಿನ ಮೂಲ ಉಗಮವನ್ನು ಸೂಚಿ ಲಾರದೇ ? ಇಜಿಪ್ತದ ನಾಗರೀಕತನವು ದಿನದಿನಕ್ಕೆ ಬೆಳೆದು ಆರಬಸ್ತಾನ, ಪರ್ಶಿಯಾ, ಮೊದಲಾದ ದೇಶ ಜನಾಂಗಗಳ ಮೇಲೆ ತನ್ನ ಪ್ರಭಾವವನ್ನು ಚೆಲ್ಲಿ ಬಹುದು. ಮೂಗಿನ ಸುಂದರವಾದ ಅಲಂಕಾರವನ್ ಕಂಡ ಈ ದೇಶದ ಜನರಾದರೂ ಅದನ್ನು ಅನುಕರಣ ಮಾಡಿ ತಮ್ಮಲ್ಲಿಯೂ ಉಪಯೋಗಿಸುತ್ತ ಬಂದಿ ಬಹುದು. ಮುಂದೆ ಮುಸಲ್ಮಾನರು ಹಿಂದುಸ್ತಾ ವನ್ನು ಗೆದ್ದು ಆಳಹತ್ತಿದ ಮೇಲೆ ನತ್ತೂ ಅವರ ಬೆನ್ ಹತ್ತಿ ಹಿಂದುಸ್ತಾನಕ್ಕೆ ಬಂತು. ಧರ್ಮವಂತರಾದ ಹಿಂದೂ ಜನರು ಕಾಲಾಂತರದಲ್ಲಿ ಈ ನತ್ತನ್ನು ತಮಗೆ ಮೂಗಿನ ಅಲಂಕಾರವೆಂದು ಒಪ್ಪಿರಬಹುದು. ಕ್ರಿ. ಶ. ಸುಮಾರು ೧೦ನೆಯ ಶತಮಾನದ ನಂತರ ಈ 'ನತ್ತು ಹಿಂದೂ ಹೆಣ್ಣುಮಕ್ಕಳ ಮೂಗಿಗೆ ಅಲಂಕಾ ವಾಯಿತು. [1]

ಪ್ರಾಕೃತ ನಿಘಂಟಿನಲ್ಲಿ 'णत्था' ಎಂಬ ಶಬ್ದಕ್ಕೆ 'ನಾಸಾರಜ್ಜು' (नासारज्जु) ಮುಗದಾಣವೆಂಬ ಅರ್ಥ ಇದೆ. ಇದು 'ದೇಶಿ'ಯ ಶಬ್ದವೆಂದು ನಿಘಂಟು ಕಾರರು 'णत्था' ಎಂಬ ಶಬ್ದಕ್ಕೆ ಪ್ರತಿಯಾಗಿ ಅದೇ ಅರ್ಥವನ್ನು ಸೂಚಿಸುವ ಏಕಶಬ್ದವು ಸಂಸ್ಕೃತದಲ್ಲಿ ದೊರೆಯದ ಮೂಲಕ ಅದನ್ನು ಹುಡುಕಿ ಹೇಳುವ ಗೋಜಿಗೆ ಹೋಗದೆ 'ದೇಶಿ'ಶಬ್ದವೆಂದು ಕರೆದಿರಬಹುದು. ಪ್ರಾಕೃತದಲ್ಲಿ 'ದೇಶಿನಾಮಮಾಲಾ' ಎಂಬ ಗ್ರಂಥವನ್ನು ಬರೆದ ಹೇಮಚಂದ್ರನು ಕ್ರಿ. ಶ. ೧೨ನೆಯ ಶತಮಾನದಲ್ಲಿ ಆಗಿಹೋಗಿದ್ದಾನೆ. ಈ ಮುಂಚೆಯೇ 'ನಥ್'

1. The Antiquity of the Hindoo nose ornament called 'Nath' by P. K. Gode Annals of theBhandarkar O. R. I. vol. XIX Part IV PP. 313-333

ಶಬ್ದವು ಬಳಕೆಯಲ್ಲಿ ಬಂದು ಹೋಗಿತ್ತು. ಪ್ರಾಕೃತದಲ್ಲಿಯ 'ಣತ್ಥಾ' ಎಂಬ ಶಬ್ದವು ಇಜಿಪ್ತ ದೇಶದಲ್ಲಿಯ 'ನಾಥಿಯಾ' ಎಂಬ ಶಬ್ದದಿಂದಲೇ ಬಂದಿರಬೇಕು. ಯಾಕೆಂದರೆ ಈ ಎರಡೂ ಶಬ್ದಗಳ ಅರ್ಥವು ಒಂದೇ ಆಗಿದ್ದು ಉಚ್ಚಾರಗಳೂ ಒಂದಕ್ಕೊಂದು ಹೋಲಿಕೆಯಲ್ಲಿ ತೀರ ಸಮೀಪವಾಗಿವೆ. ಹೀಗೆ 'ನತ್ತು' ಪರದೇಶದ ಆಭರಣವಿದ್ದು ಮುಸಲ್ಮಾನರೇ ಅದನ್ನು ಹಿಂದುಸ್ತಾನಕ್ಕೆ ತಂದಿರಬಹುದು.

ಕನ್ನಡಿಗರಿಗೆ 'ನತ್ತು' ಹೆರವರು ತಂದ ಅಲಂಕಾರ. ಮೂಗುತಿಯು 'ನತ್ತು' ಬರುವುದಕ್ಕಿಂತ ಮುಂಚೆಯೇ ಕನ್ನಡ ನಾಡಿನಲ್ಲಿ ಹೆಣ್ಣುಮಕ್ಕಳಿಗೆ ಸೌಭಾಗ್ಯ ಚಿಹ್ನವಾಗಿತ್ತು. ಮೂಗುತಿಯು ಅಚ್ಚಗನ್ನಡ ಶಬ್ದ. ನತ್ತಿಗೂ ಇದಕ್ಕೂ ಯಾವ ಸಂಬಂಧವೇ ಇಲ್ಲ. ಸಂಸ್ಕೃತ ಕೋಶದಲ್ಲಿ ನತ್ತೆಂಬ ಅಲಂಕಾರದ ಹೆಸರೇ ಇಲ್ಲ. ಇದರ ಮೇಲಿಂದ ಆರ್ಯ ಜನಾಂಗದ ಹೆಣ್ಣುಮಕ್ಕಳಿಗೆ ಮೊದಲಿನಿಂದ ಮೂಗಿಗೆ ಅಲಂಕಾರವಿದ್ದಿಲ್ಲವೆಂದೇ ಹೇಳಬಹುದು. ಅಲ್ಲದೆ, ಅವರಿಗೆ 'ನತ್ತು' ಲಗ್ನದಲ್ಲಿ ಅಷ್ಟೊಂದು ಮಹತ್ವದ ಅಲಂಕಾರವೂ ಅಲ್ಲ. ಆದುದರಿಂದ ಅವರಿಗೆ ಮೂಗಿಗೆ ಅಲಂಕಾರ ಬಂದದ್ದು ಮುಸಲ್ಮಾನರು ಹಿಂದುಸ್ತಾನವನ್ನು ಹೊಕ್ಕನಂತರವೆಂದೇ ಹೇಳಬಹುದು.

ಕನ್ನಡದ ಯಾವ ಕವಿಯೂ ತನ್ನ ಕಾವ್ಯಗಳಲ್ಲಿ 'ನತ್ತು' ಶಬ್ದವನ್ನು ಉಪಯೋಗಿಸಿರುವುದಿಲ್ಲ. ಅದರ ಬದಲು ಎಲ್ಲ ಕವಿಗಳು 'ಮೂಗುತಿ' ಎಂಬ ಶಬ್ದವನ್ನು ಉಪಯೋಗಿಸುತ್ತ ಬಂದಿದ್ದಾರೆ. ಮೂಗುತಿಯನ್ನು ಕರ್ನಾಟಕದಲ್ಲಿ ಅತಿ ಪ್ರಾಚೀನ ಕಾಲದಿಂದಲೂ ಕಾಣಬಹುದಾಗಿದೆ. ಮೂಗುತಿಯು ಕನ್ನಡ ಹೆಣ್ಣುಮಕ್ಕಳಿಗೆ ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ಮಾಂಗಲ್ಯದ ಗುರುತಾಗಿದೆ. ಕನ್ನೆಯರೂ ಮದುವೆಯಾದ ಮುತ್ತೈದೆಯರೂ ಮೂಗುತಿಯು ಸೌಭಾಗ್ಯ ಲಕ್ಷಣವೆಂದು ಧರಿಸುತ್ತ ಬಂದಿದ್ದಾರೆ. ಕನ್ನಡ, ಮಲೆಯಾಳ, ತೆಲುಗು ಮೊದಲಾದ ಎಲ್ಲ ದ್ರಾವಿಡ ಜನಾಂಗಗಳಲ್ಲಿ ಮೂಗುತಿಯು ಮೊದಲಿನಿಂದಲೂ ಬಂದಿದೆ. ಹೀಗಿದ್ದು ಅಜಂತಾ, ಎಲ್ಲೋರ, ಬಾದಾಮಿ ಮೊದಲಾದ ಸ್ಥಳಗಳಲ್ಲಿ ಕೊರೆಯಿಸಿದ ಕಲ್ಮನೆಗಳ ಹೆಣ್ಣು ಗೊಂಬೆಗಳಿಗೆ ಮೂಗಿನಲ್ಲಿ ಮೂಗುತಿಯು ಕಂಡುಬರುವದಿಲ್ಲ. ಕಲ್ಮನೆಗಳ ಗೋಡೆಗಳ ಮೇಲೆ ಬರೆಸಿದ ಬಣ್ಣದ ಚಿತ್ರಗಳಲ್ಲಿಯೂ (Mural paintings) ಈ ಮೂಗುತಿಯು ಕಾಣದಿರುವುದು ಸೋಜಿಗದ ಮಾತಾಗಿದೆ. ಇದಕ್ಕೆ ಸಂಶೋಧಕರು ಗಾಬರಿಯಾಗುವ ಕಾರಣವೇ ಇಲ್ಲ. ದ್ರಾವಿಡರಿಗೆ ಮೂಗಿನ ಅಲಂಕಾರವು ಮೊದಲಿನಿಂದಲೂ ಇತ್ತೆಂದು ಕಂಡುಬರುವುದು. ಆರ್ಯರನ್ನು ಅನುಕರಣ ಮಾಡದ ಎಲ್ಲ ದ್ರಾವಿಡರು ಈ ಮೂಗುತಿಯನ್ನು ಹಾಕುತ್ತ ಬಂದಿದ್ದಾರೆ. ಆರ್ಯರ ಸಂಪರ್ಕದಿಂದ ಅವರ ಸಂಸ್ಕೃತಿಯನ್ನು ಅನುಕರಣ ಮಾಡಿದ ದ್ರಾವಿಡರು ಮೂಗಿನ ಅಲಂಕಾರವಿಲ್ಲದ ಆರ್ಯ ಸ್ತ್ರೀಯರನ್ನು ನೋಡಿ, ತಾವು ಹಾಕುತ್ತ ಬಂದ ಮೂಗುತಿಯನ್ನು ಕಾಡು ಪದ್ಧತಿಯೆಂದು ಬಿಟ್ಟುಕೊಟ್ಟಿರಬಹುದು. ಈ ಜನರೇ ರಾಜಕಾರಣದಲ್ಲಿ ಮುಂದೆ ಬಂದು ಶಿಲ್ಪಕಲೆ ಮೊದಲಾದವುಗಳಿಗೆ ಪ್ರೋತ್ಸಾಹ ಕೊಟ್ಟದ್ದರಿಂದ ಈ ಕಲ್ಮನೆಗಳಲ್ಲಿ ಕೆತ್ತಿಸಿದ ಹೆಣ್ಣು ಗೊಂಬೆಗಳಲ್ಲಾಗಲಿ, ಗೋಡೆಯ ಮೇಲೆ ಬರೆಯಿಸಿದ ಚಿತ್ರಗಳಲ್ಲಾಗಲಿ ಮೂಗಿಗೆ ಈ ಅಲಂಕಾರವು ಅನಾಗರೀಕತೆಯ ಗುರುತೆಂದು ಅದನ್ನು ಬಿಟ್ಟಿರಬಹುದೆಂದು ಅನುಮಾನಿಸಬಹುದಾಗಿದೆ ಎಲ್ಲ ದ್ರಾವಿಡ ಭಾಷೆಗಳಲ್ಲಿಯೂ 'ಮೂಗುತಿ' ಎಂಬ ಶಬ್ದವಿದೆ. ಮಲೆಯಾಳ ಭಾಷೆಯಲ್ಲಿ ಈ 'ಮೂಗುತಿ'ಗೆ 'ಮುಕ್ಕುತ್ತಿ' ಎಂಬ ಶಬ್ದವಿದೆ. ಮುಕ್ಕ+ಕುತ್ತಿ = ಮೂಗು+ಗುದ್ದಿ ಎಂದು ಕನ್ನಡದಲ್ಲಿ ಆಗುವುದು. ಮೂಗುತಿಯು ಹೆಣ್ಣಿಗೆ ಗಂಡನೆಂಬ ಬಲವಂತ 'ಗುದ್ದಿಗೆ' ಯುಂಟೆಂದು ಸೂಚಿಸಬಹುದೇ? ಇದಕ್ಕೆ ಒಕ್ಕಲಿಗನು ಅನ್ನುವ 'ನತ್ತು ಮುಗದಾಣ್ದಾದು' ಎಂಬುದನ್ನು ಹೋಲಿಸಿ ನೋಡಿರಿ. ಮೂಗುತಿ ಹಾಗೂ ಗೂಟ ಮೂಗುತಿಗಳ ಹಿಂದೆ ಇದೇ ಅರ್ಥಗರ್ಭಿತ ಧ್ವನಿಯಿರಬಹುದೇ? ಮಲೆಯಾಳ ಸಾಹಿತ್ಯದಲ್ಲಿ 'ಮುಕ್ಕುತ್ತಿ' ಎಂಬ ಶಬ್ದವು ಕ್ರಿ.ಶ. ೮ ನೆಯ ಶತಮಾನದಿಂದಲೂ ಬಳಕೆಯಲ್ಲಿದೆ. ಶ್ರೀ. ಶಂಕರಾಚಾರ್ಯರು

ಬರೆದಿರಬಹುದೆಂದು ಅನುಮಾನಿಸಿದ 'ತ್ರಿಪುರ ಸುಂದರೀ ಮಾನಸ ಪೂಜಾಸ್ತೋತ್ರ'ದಲ್ಲಿ

मध्यस्थारुण-रत्न-कांति-रुचिरां मुक्तामुगोद्भसितान् ॥ ಇವನ್ನು ಶಂಕರಾಚಾರ್ಯರೇ ಬರೆದದ್ದಾದರೆ, ದ್ರಾವಿಡ ದೇಶದಲ್ಲಿ ಹುಟ್ಟಿ ಬೆಳೆದ ಈ ಮಹಾಪುರುಷನಿಗೆ ಮೂಗುತಿಯು ಅಪರಿಚಿತವಲ್ಲ. 'मुक्तामुगोद्भसितान्' ಎಂಬ ಸಮಾಸ ಪದದಲ್ಲಿ 'मुक्ता मुग' ಎಂಬ ಶಬ್ದವು ಕನ್ನಡಿಗರಿಗೆ ಚಿರಪರಿಚಿತವಿರುವ ಮುತ್ತಿನ ಮೂಗುಬಟ್ಟು (ಮೂಗ್ ಮುತ್ತು)ನ್ನೇ ನಿಸ್ಸಂದೇಹವಾಗಿ ಸೂಚಿಸುವುದು. ಈ ಮೂಗುಬಟ್ಟಿನಲ್ಲಿ ಮಧ್ಯದಲ್ಲಿ ಕೆಂಪು ರತ್ನವಿದ್ದು ಅದರ ಸುತ್ತಲು ಇಳಿಬಿಟ್ಟ ಮುತ್ತಿನ ಜಲ್ಲರಿಯಿರುವುದನ್ನು ಕರ್ನಾಟಕದಲ್ಲಿ ಈಗ ಸಹ ನೋಡಬಹುದು. ಶ್ರೀ. ಪಿ. ಕೆ. ಗೋಡೆಯವರು The Antiquity of the Hindoo Nose ornament called Nath' ಎಂಬ ಲೇಖನದಲ್ಲಿ ಪು. ೩೩೦ ಕೆಳಗಿನ ಟಿಪ್ಪಣಿಯಲ್ಲಿ 'मुग' ಎಂಬ ಶಬ್ದಾರ್ಥವನ್ನು ಪೂರ್ಣ ತಿಳಿದುಕೊಳ್ಳದೆ ಮರಾಠಿಯಲ್ಲಿಯ 'मूग' ಎಂಬ ಧಾನ್ಯವೆಂದು ಊಹಿಸಿದ್ದಾರೆ. ಕರ್ನಾಟಕದಲ್ಲಿ ಮೂಗುತಿಯು ಮದುವೆಯ ಸೌಭಾಗ್ಯದ ಗುರುತೆಂದು ಬುನಾದಿಯಿಂದಲೂ ರೂಢಿಯಲ್ಲಿ ಬಂದಿದೆ. ಇದರ ಮಹತ್ವವನ್ನರಿತ ಕನ್ನಡ ಬಾಲಿಕೆಯರು 'ಗುಜುಗುಜು ಮಾಪುರಿ ಎಂಬ ಆಟದ ಹಾಡಿನಲ್ಲಿ ಹೆಣ್ಣುಗಂಡಿನ ಕೊಡುತಕ್ಕೊಳ್ಳುವ ಸಮಸ್ಯೆ ಬಂದಾಗ

> ಬೇಡಿದ್ದ ಕೊಡತಿವಿ, ಬೇಡಿದ್ದ ಇಡತಿವಿ
> ಹೆಣ್ಣಾ ಕೊಡತಿಗೆ ಹೆಣ್ಣಾ ಕೊಡತಿಗೆ ||
> ಕುಲಸುದ್ದ ಮನಿಯಾಗ
> ವರಸುದ್ದ ಗಂಡಪ್ಪ
> ತಾಳ್ಯೊಂದು ಮೂಗುತಿ
> ಮುಂದ್ಯಾಗ ಮನಿಮುಂದ
> ಮದುವೆ ಮಾಡಿದರ
> ಹೆಣ್ಣ್ಕೊಡತಿಗೆ ಹೆಣ್ಣ್ಕೊಡತಿಗೆ || —ಜಾ-ಸಂ-

ಎಂದು 'ತಾಳಿ' ಮತ್ತು 'ಮೂಗುತಿ'ಗಳು ಮದುವೆಗೆ ಬೇಕಾಗುವ ಮುಖ್ಯ ಆಭರಣಗಳೆಂದು ಹಾಡಿದ್ದಾರೆ. ಮೂಗುತಿ ಹಾಗೂ ಗುಳಿದಾಳಿ (ಮಂಗಳ ಸೂತ್ರಗಳು ಮದುಮಗಳಿಗೆ ಇಡತಕ್ಕ ಮುಖ್ಯ ಅಲಂಕಾರಗಳಾಗಿವೆ. ಕರ್ನಾಟಕದಲ್ಲಿ ಹಲಕೆಲವು ಜಾತಿ ಪಂಗಡಗಳಲ್ಲಿ ಈ ಎರಡೂ ಆಭರಣಗಳಿಲ್ಲದೆ ಮದುವೆಯೇ ಆಗುವದಿಲ್ಲ. ದ್ಯಾಮವ್ವ, ದುರಗವ್ವ ಮೊದಲಾದ ಗ್ರಾಮದೇವತೆಗಳಿಗೆ ಮೂಗುತಿಯನ್ನಿಡಿಸುತ್ತ ಬಂದಿದ್ದಾರೆ. ಇಷ್ಟು ಮಹತ್ವವಿದೆ ಈಗಲೂ ಮೂಗುತಿಗೆ ಕನ್ನಡ ಜನಾಂಗದಲ್ಲಿ!

ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲು ಮೂಗುತಿಯು ಉಪಯೋಗಿಸಲ್ಪಟ್ಟದ್ದು ನಾಗವರ್ಮನ ಛಂದೋಂಬುಧಿಯಲ್ಲಿ.

> ಗಂಡರ ಮೂಕುತಿಯೆನಿಸಿದ
> ಮಂಡಳಿಕರ ಮಂತ್ರಿ ಸಂಧಿ–ವಿಗ್ರಹಿ ರಾಯಂ।
> ಕೊಂಡಾಡಿ ಪೊರೆದಸೆನೆ ಧರೆ
> ಕೊಂಡಾಡದೆ ಕೊಂಡಕೊನೆಯದೇ ನಾಕಿಗನಂ॥

ಕ-ಕ-ಚ-ಭಾ ೧-ಪು. ೫೨

ಎಂದು ನಾಗವರ್ಮನು ತನ್ನ ಪೋಷಕನಾದ ರಾಯನನ್ನು 'ಗಂಡರ ಮೂಗುತಿ' ಎಂದೆನ್ನುವುದರಲ್ಲಿ ಒಂದು ಔಚಿತ್ಯವೂ ಇದೆ. ಮೂಗುತಿ ಇಟ್ಟು ಗಂಡ (ಶೂರ)ರಾದವರಿಗೆ ತನ್ನ ಪೋಷಕ ರಾಯನು ಮೂಗುತಿ (ಅಲಂಕಾರ) ಎಂದು ಹೇಳುವುದರಲ್ಲಿ ಆ ಅರಸನ ಶೌರ್ಯವನ್ನು ತೋರಿಸುವನಲ್ಲದೆ, ಮೂಗುತಿಯು ಮದುವೆಯ ಗುರುತೆಂದು ಆ ಶಬ್ದದ ಹಿಂದೆ ಧ್ವನಿಯನ್ನೂ ಇಟ್ಟಿರುವನು. ಶ್ರೀ. ಆರ್. ನರಸಿಂಹಾಚಾರ್ಯರು ನಾಗವರ್ಮನು ಕ್ರಿ. ಶ. ಸುಮಾರು ೯೯೦ರಲ್ಲಿದ್ದನೆಂದು ಅವನ ಕಾಲಮಾನವನ್ನು ನಿರ್ಧರಿಸಿದ್ದಾರೆ. ಅಂದ ಮೇಲೆ ಮೂಗುತಿಯು ನಾಗವರ್ಮನಕಿಂತ ಮುಂಚೆಯೇ ಎಷ್ಟೋ ವರುಷಗಳ ಹಿಂದೆ ಕನ್ನಡಿಗರಿಗೆ ಪರಿಚಿತವಾದ ಅಲಂಕಾರವಾಗಿತ್ತಲ್ಲದೆ ಗಂಡ-ಹೆಂಡರ ಸಂಬಂಧ ಸೂಚಿಸುವ, ಜನತೆಯಲ್ಲಿ ಮಹತ್ವದ ಮೂಗಿನ ಅಲಂಕಾರವಿತ್ತೆಂದು ತಿಳಿದುಬರುತ್ತದೆ. ನಾಗವರ್ಮನ ನಂತರ

ನತ್ತು ಹಾಗೂ ಮೂಗುತಿ

ಹರಿಹರನು 'ಗಿರಿಜಾಕಲ್ಯಾಣ'ದಲ್ಲಿ ಈ ಮೂಗುತಿಯನ್ನು ಪಯೋಗಿಸಿದ್ದಾನೆ. ಈ ಕಾವ್ಯದ ೩ನೆಯ ಆಶ್ವಾಸ 'ಹೈಮವತಿ ಶೈಶವ' ವರ್ಣನೆಯಲ್ಲಿ ಹರನ ಪೂಜೆಗೆ ಹೊರಟ ಗಿರಿಜೆಯನ್ನು ೯೧ನೆಯ ಪದ್ಯದ ನಂತರ ಮುಂಬರುವ ವಚನದಲ್ಲಿ " ಮೂಗುತಿಯ ಮುಗುಳ್ಗೆ " ಎಂದು ಕರೆದಿದ್ದಾನೆ. ಅದೇ ಕಾವ್ಯದ ೧೦ನೆಯ ಆಶ್ವಾಸ "ಪಾರ್ವತಿ ಪರಮೇಶ್ವರ ವಿವಾಹ" ವರ್ಣನೆಯಲ್ಲಿ

ಜಳಜಾನನೆಯರ್ ವಿನಯೋ
ಜ್ಜ್ವಳ ಮುಖಿಯರ್ ಸಖಿಯರೊಲ್ದು
ಗಿರಿಜಾನನದೊಳ್ ।
ನಳಿನಳಿಪಜ್ಜೆ ಮುಗುಳ್ ನಗೆ
ವೊಳೆತುದೆಸಲ್ ಮೆರವ ಮೂಗುತಿಯನೊಸೆ
ದಿತ್ತರ್ ॥ ೩೮ ॥

ಎಂದು ಲಗ್ನವಾಗುವ ಗಿರಿಜೆಗೆ ಆವಳ ಸಖಿಯರು ಪ್ರೇಮದಿಂದ ಮೂಗುತಿಯನಿಡಿಸಿದರೆಂದು ಕವಿಯು ಹೇಳಿದ್ದಾನೆ. ವೀರಶೈವರು ಮೂಗುತಿಯನ್ನು ಮೊದಲಿನಿಂದಲೂ ಮಾಂಗಲ್ಯವೆಂದು ಧರಿಸುತ್ತ ಬಂದಿದ್ದಾರೆ. ಅಲ್ಲದೆ ಹರಿಹರನು ಗಿರಿಜಾಕಲ್ಯಾಣವನ್ನು ಬರೆಯುವಾಗ ವೀರಶೈವನಾಗಿದ್ದಿಲ್ಲವೆಂದು ಹಲವು ಪಂಡಿತರ ಮತವಿದೆ. ಹಾಗಿದ್ದ ಪಕ್ಷದಲ್ಲಿ ಬ್ರಾಹ್ಮಣರೂ ಮೂಗುತಿಯನ್ನು ಮೂಗಿನ ಸೌಭಾಗ್ಯಾಲಂಕಾರವೆಂದು ಇಟ್ಟುಕೊಳ್ಳುತ್ತಿದ್ದರೆಂದು ಹೇಳಲು ಏನೂ ಸಂದೇಹವಿಲ್ಲ. ಹಳ್ಳಿಗಳಲ್ಲಿ ವಾಸಮಾಡುವ ಹಳೆಯ ಪದ್ಧತಿಯ ಬ್ರಾಹ್ಮಣ ಹೆಣ್ಣು ಮಕ್ಕಳು ಈಗಲೂ ಗೂಟಮೂಗುತಿಯನ್ನಿಟ್ಟುಕೊಳ್ಳುವುದನ್ನು ನೋಡಿ ಮನಗಾಣಬಹುದಾಗಿದೆ. ಹರಿಹರನ ನಂತರ ಬಂದ ಅನೇಕ ವೀರಶೈವ ಕವಿಗಳು—ರಾಘವಾಂಕ, ಭೀಮಕವಿ, ವಿರುಪಾಕ್ಷಪಂಡಿತ, ಷಡಕ್ಷರಿದೇವ ಮೊದಲಾದವರು— ಈ ಮೂಗುತಿಯೆಂಬ ಶಬ್ದವನ್ನು ತಮ್ಮ ಕಾವ್ಯಗಳಲ್ಲಿ ಹೇರಳವಾಗಿ ಉಪಯೋಗಿಸಿದ್ದಾರೆ. 'ಭರತೇಶವೈಭವ' ಎಂಬ ಕಾವ್ಯದಲ್ಲಿ 'ರತ್ನಾಕರವರ್ಣಿಯೂ,' 'ಜಯನೃಪಕಾವ್ಯ'ದಲ್ಲಿ ಮಂಗರಸ ಕವಿಯೂ ಈ ಶಬ್ದವನ್ನು ಬಳಸಿದ್ದಾರೆ. ಜೈನರೂ ಮೂಗುತಿಯನ್ನಿಟ್ಟುಕೊಳ್ಳುವರು. ಜನಪದಕ್ಕೆ ಚಿರಪರಿಚಿತವಾದ ಈ ಅಲಂಕಾರವು 'ಒಗಟು,' 'ಗಾದೆ' ಮೊದಲಾದವುಗಳಲ್ಲಿಯೂ ಉಪಯೋಗಿಸಲ್ಪಟ್ಟಿದೆ. 'ಮೂಗಿಗಿಂತ ಮೂಗುತಿಭಾರ," 'ಮೂಗಿಲ್ಲದವಳಿಗೆ ಮೂಗುತಿ ಯಾತಕ್ಕೆ " ಎಂಬ ಮಾತುಗಳನ್ನು ನಮ್ಮ ಹಳ್ಳಿಗರು ಪ್ರಸಂಗ ಬಂದಾಗ ಸಹಜವೇ ಮಾತಾಡಿಬಿಡುತ್ತಾರೆ.

ಮೂಗಿನಾಗ ಮೂಗುತಿ, ಸಕ್ಕರೆ ಕರೆಕಲ್ಲ
ಆಕ್ಕ ನೀನ್ಯಾರ ಮಗಳವ್ವ । ಹಲಸಂಗಿ
ಗಚ್ಚಿನಗುಡಿಯ ಜಕ್ಕವ್ವ ॥ —ಗ-ಹಾ-ಪು. ೩

ಎಂದು ಮೂಗುತಿಯನ್ನಿಟ್ಟ ಗ್ರಾಮದೇವತೆಯನ್ನು ಒಕ್ಕಲಿಗನು ಸ್ತುತಿಸಿದ್ದಾನೆ.

ಸಕಲೇಶ ಮಾದರಸು, ಭಕುತ ಮಾದಯ್ಯನಿಗೆ
ನಿಕಟ ಗುರುಲಿಂಗ ಜಂಗಮನು । ಕಾಯಕದ
ನಿಕಷ ಮಂಟಪಕೆ ಮೂಗುತಿಯು ॥೧೦॥ ಹೂ-ಮಾ

ಎಂದು ಒಕ್ಕಲಿಗನು ಬಸವಾದಿ ಪ್ರಮಥರ ಕಾಲದಲ್ಲಿಯ 'ಗುರುಸಕಲೇಶ ಮಾದರಸು' 'ಕಾಯಕ ಮಂಟಪಕೆ' ಮೂಗುತಿಯೆಂದು ಹಂತಿಯಲ್ಲಿ ಹಾಡಿದ್ದಾನೆ.

ಹಣೆಗೆ ಕುಂಕುಮ ಚೆಂದ, ಕೊರಳ ಕರಿಮಣಿ ಚೆಂದ
ಮೂಗೀಗೆ ಚೆಂದ ಮೂಗುತಿ । ಮುತ್ತೈದಿ
ಉಡಿಯಾಗ ಚೆಂದ ಉಡಿಯಕ್ಕಿ ॥ —ಜಾ-ಸಂ-

ಹೀಗೆ ಹಳ್ಳಿಯ ಹೆಣ್ಣು ಸೌಭಾಗ್ಯವನ್ನು ಹಾಡಿ ಬೀಸಿದೆ. ಹೀಗೆ ಮೂಗುತಿಯು ಕನ್ನಡಿಗರಿಗೆ ಬುನಾದಿಯಿಂದಲೂ ಬಂದ ಮೂಗಿನ ಸೌಭಾಗ್ಯ ಅಲಂಕಾರ. 'ನತ್ತು' ಇತ್ತೀಚೆ ಕನ್ನಡಿಗರಲ್ಲಿ ಬಳಕೆಯಲ್ಲಿ ಬಂದಿದ್ದರೂ ಅದು ಕನ್ನಡ ಹೆಣ್ಣುಮಕ್ಕಳ ಅಲಂಕಾರವೇ ಅಲ್ಲ. ಅದನ್ನು ಮುಸಲ್ಮಾನರು ಕ್ರಿ. ಶ. ೧೪ನೆಯ ಶತಮಾನದಲ್ಲಿ ಕರ್ನಾಟಕಕ್ಕೆ ತಂದರೆಂದು ಹೇಳಬಹುದು.

ಹೀಗೆ ಕನ್ನಡ ಜಾನಪದ ಸಾಹಿತ್ಯದಲ್ಲಿ ಬರುವ ಕಾಲುಂಗುರ, ಸುತ್ತುಂಗುರ, ಪಿಲ್ಲೆ, ಮಿಂಟಿ, ರುಳಿ, ವಡ್ಯಾಣ, ಕಡಗ, ತೋಡೆ, ಸರಿಗೆ ಚಿಂತಾಕ, ಕಟ್ಟಾಣಿ ಸರ, ಓಲೆ, ಬುಗುಡಿ, ಮಿಂಚು, ಬಾವುಲಿ ಮುಂತಾದ ಸೌಭಾಗ್ಯ ದ್ಯೋತಕ, ಕನ್ನಡ ಹೆಣ್ಣುಮಕ್ಕಳ ಆಭರಣಗಳನ್ನೆತ್ತಿ ಹುಡುಕಿ ಬರೆಯುವದನ್ನು ಬರಲಿರುವ ಜಾನಪದ ಸಾಹಿತಿಗಳಿಗೆ ಬಿಟ್ಟುಕೊಡಲಾಗಿದೆ.

—ಜಾನಪದಕೆ ಮಂಗಳಂ—

ವರ್ಗದ ಶಿಸ್ತು ಕಾಯುವದೆಂತು?

ಲೇಖಕರು :— **ಶ್ರೀ. ಎಸ್. ಎಂ. ಹಳ್ಳಿಕೇರಿ,** ಬಿ. ಎ., ಡಿ. ಬಿ. ಇ.,
ಅಧ್ಯಾಪಕ, ಗಂಡುಮಕ್ಕಳ ಟ್ರೇನಿಂಗ ಕಾಲೇಜ ಧಾರವಾಡ.
(ಶ್ರೀ. ಎಸ್. ಎನ್. ಸಾಂಗರ ಇವರ ಇಂಗ್ಲಿಷ ಲೇಖನದ ಆಧಾರದಿಂದ)

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಮನೆಯ ವಾತಾವರಣದ ಪರಿಣಾಮವಾಗಿ ಶಾಲೆಯಲ್ಲಿ ಮಕ್ಕಳು ಅಸ್ವಾಭಾವಿಕವಾಗಿ ನಡೆಯುವ ಅನೇಕ ಉದಾಹರಣೆಗಳುಂಟು. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೇಳಬಹುದು.

ಒಬ್ಬ ಹುಡುಗನ ತಂದೆ-ತಾಯಿಗಳು ಬಹಳೇ ಬಿಗುವಿನ ಹಾಗೂ ಕಠಿಣ ಸ್ವಭಾವದವರಾಗಿದ್ದು ಅವನು ಮಾಡಿದ ಸಣ್ಣ ತಪ್ಪನ್ನು ಸಹ ಅವರು ಕ್ಷಮಿಸದೆ ಅವನನ್ನು ಉಗ್ರವಾಗಿ ಶಿಕ್ಷಿಸುತ್ತಿದ್ದರು. ತಂದೆ-ತಾಯಿಗಳ ಹೆದರಿಕೆಯು ಅವನನ್ನು ಬಾಧಿಸುತ್ತಿತ್ತು. ಮನೆಯಲ್ಲಿ ಅವನು ಅಂಜಿಕೆಯಿಂದಲೇ ಇರಬೇಕಾಗುತ್ತಿತ್ತು. ಅವನ ಮನಸ್ಸು ಪ್ರತಿಭಟಿಸಬೇಕೆಂದಿದ್ದರೂ ತಂದೆ-ತಾಯಿಗಳ ಅಧಿಕಾರದೆದುರು ಅವನ ಧೈರ್ಯ ಸಾಲುತ್ತಿದ್ದಿಲ್ಲ. ಈ ಹುಡುಗನ ಪ್ರತಿಭಟನಾ ವೃತ್ತಿಯು ಶಾಲೆಯಲ್ಲಿ ಪ್ರಕಟವಾಗಿ ಶಿಕ್ಷಕನ ಅಧಿಕಾರವನ್ನು ಹಠಾತ್ತಾಗಿ ಅವನು ವಿರೋಧಿಸಹತ್ತಿದನು. ಶಿಕ್ಷಕನು ಮನೆಯಲ್ಲಿ ಮಾಡಿಕೊಂಡು ಬರಲ ಹೇಳಿದ ಅಭ್ಯಾಸವನ್ನು ಅಧಿಕಾರ ಪ್ರತಿಭಟನಾ ವೃತ್ತಿಯ ಕಾರಣದಿಂದಲೇ ಮಾಡಿಕೊಂಡು ಬರುತ್ತಿದ್ದಿಲ್ಲ.

ಒಬ್ಬ ಹುಡುಗನಿಗೆ ಫೌಂಟನ್‌ಪೆನ್ ಇಟ್ಟುಕೊಳ್ಳಲು ಬಹಳೇ ಆಶೆಯಾಗಿದ್ದರಿಂದ ಆತನು ತನ್ನ ತಂದೆಯನ್ನು ಕೊಡಿಸಲು ಹೇಳಿದನು. ಅದು ಅನಾವಶ್ಯಕವೆಂದು ತಂದೆಯು ಕೊಡಿಸಲಿಲ್ಲ; ಆದರೂ ಹುಡುಗನು ತಂದೆಯನ್ನು ಬಹಳೇ ಕಾಡಿಸಿದ್ದರಿಂದ ಅವನಿಗೆ ತಂದೆಯಿಂದ ಬಲವಾದ ಏಟುಗಳು ಬಿದ್ದವು. ಹುಡುಗನು ನಿರಾಶನಾಗಿ ತನ್ನ ವರ್ಗದ ಹುಡುಗರ ಫೌಂಟನ್‌ಪೆನ್‌ಗಳನ್ನು ಕದಿಯ ಹತ್ತಿದ್ದನ್ನು ತಂದೆಯು ನೋಡಬೇಕಾಯಿತು.

ಒಬ್ಬ ಹುಡುಗನಿಗೆ ಒಳ್ಳೇ ಕಠೋರ ಹೃದಯದ ಮಲತಂದೆಯಿದ್ದನು. ಮಲತಂದೆಯು ಆತನನ್ನು ಬಹಳೇ ಕಾಡಿಸುತ್ತಿದ್ದರಿಂದ, ಹುಡುಗನು ಹೆದರಿಕೆಯಿಂದ ಅವನ ಅಧಿಕಾರವನ್ನು ಮನಸ್ಸಿನಲ್ಲಿಯೇ ವಿರೋಧಿಸಹತ್ತಿದನು. ಈ ಹುಡುಗನ ಅಧಿಕಾರ ವಿರೋಧ ವೃತ್ತಿಯು ಇವನನ್ನು ವರ್ಗದಲ್ಲಿ ಅಸಭ್ಯ ಹಾಗೂ ಉದ್ಧಟನನ್ನಾಗಿ ಮಾಡಿತು.

ಇನ್ನು ಶಾಲೆಯಲ್ಲಿ ಶಿಸ್ತು ಕಾಯುವದೆಂತು, ಅದಕ್ಕೆ ಸಂಬಂಧಿಸಿದ ಸಾಮಾನ್ಯ ಸಂಗತಿಗಳಾವವೆಂಬುದನ್ನು ಆಲೋಚಿಸುವಾ.

ಶಾಲೆಯಲ್ಲಿ ಶಿಸ್ತು ಕಾಯಲು ಅಧ್ಯಾಪಕರ ಸಾಂಘಿಕ ಪ್ರಯತ್ನಗಳು ಎಷ್ಟು ಅವಶ್ಯವೋ ಅಷ್ಟೇ ವಿದ್ಯಾರ್ಥಿಗಳ ಪ್ರಯತ್ನವೂ ಮಹತ್ವದ್ದಾಗಿದೆ. ಏಕೆಂದರೆ, ಶಿಕ್ಷೆಯ ಬೆದರಿಕೆಯಿಂದ ವಿದ್ಯಾರ್ಥಿಗಳಲ್ಲಿ ಒತ್ತಾಯದ ಶಿಸ್ತನ್ನು ಹುಟ್ಟಿಸುವದಾದರೂ, ನಿಜವಾದ ಶಿಸ್ತು ಗುರು ಶಿಷ್ಯರ ಪರಸ್ಪರ ಸಹಕಾರ ಹಾಗು ತಿಳಿವಳಿಕೆಯಿಂದಲೇ ಸಾಧ್ಯವಾಗುವದು. ಇದನ್ನು ಸಾಧಿಸಲು ವಿದ್ಯಾರ್ಥಿಗಳಿಗೆ ಹೊಣೆಗಾರಿಕೆಯನ್ನು ಒಪ್ಪಿಸುವದಲ್ಲದೆ ಅವರನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳಬೇಕು. ವರ್ಗದಲ್ಲಿ ಹಿರೇ

ಮಣಿಯ ಆಯ್ಕೆ ಮಾಡಿ, ಅವನ ಸಹಕಾರಪಡೆಯುವದು ಪ್ರಾಗತಿಕ ಶಾಲೆಗಳ ಮುಖ್ಯ ಲಕ್ಷಣವಾಗಿದೆ. ಶಾಲೆಯನ್ನು ಆದರ್ಶ ಹಾಗು ಸುಸಂಘಟಿತ ಸಂಸ್ಥೆಯನ್ನಾಗಿ ಮಾಡಲು ಅಧ್ಯಾಪಕರ ಪ್ರತಿನಿಧಿಗಳು ಹಾಗು ಹಿರೇಮಣಿಗಳನ್ನೊಳಗೊಂಡ ಒಂದು ಮಂಡಲವನ್ನು ರಚಿಸಿ, ಅದಕ್ಕೆ ಸಮಾನ್ಯಧೋರಣೆ ಹಾಗು ಪಾರಿತೋಷಕ ಮತ್ತು ಶಿಕ್ಷೆಗಳಿಗೆ ಸಂಬಂಧಿಸಿದ ಸಂಗತಿಗಳನ್ನು ಒಪ್ಪಿಸಬೇಕು. ಈ ಮಂಡಲದಲ್ಲಿಯು ವಿದ್ಯಾರ್ಥಿ ಪ್ರತಿನಿಧಿಗಳನ್ನು ಅಧ್ಯಾಪಕರಂತೆ ಸಮಾನ ದೃಷ್ಟಿಯಿಂದ ಕಾಣಬೇಕು. ಅವರು ತಮ್ಮ ಅಭಿಪ್ರಾಯಗಳನ್ನು ನಿರ್ಭಯವಾಗಿ ಹಾಗೂ ಮುಚ್ಚುಮರೆಯಿಲ್ಲದೆ ಮಂಡಿಸಲು ಅವಕಾಶವಿರಬೇಕು. ಭಿನ್ನಾಭಿಪ್ರಾಯವಾದಾಗ್ಗೆ ಮುಖ್ಯಾಧ್ಯಾಪಕನ ಆಲೋಚನೆ ಅವಶ್ಯವಾಗುವದು. ಈ ಮಂಡಲದ ಮುಖ್ಯ ತತ್ವಗಳು, ಕಾರ್ಯ ವ್ಯಾಪ್ತಿ ಹಾಗು ಅಧಿಕಾರಗಳನ್ನು ನಿರೂಪಿಸುವ ಕಾರ್ಯವು ಮುಖ್ಯಾಧ್ಯಾಪಕನಿಗೇ ಸೇರಿರಬೇಕು. ಅಪರಾಧ ಮಾಡುವ ಅಭ್ಯಾಸವೇ ಇರುವ ಹಾಗು ಮಾನಸಿಕ ನ್ಯೂನತೆಗಳಿರುವ ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಪರಿಶೋಧನೆ ಹಾಗು ಕ್ರಮದ ಸಲುವಾಗಿ ಈ ಮಂಡಲದ ಉನ್ನತಾಧಿಕಾರವುಳ್ಳ ಬೇರೊಂದು ಉಪಸಮಿತಿಯನ್ನು ರಚಿಸಬೇಕು.

ಹುಡುಗರು ತಮ್ಮ ಸಮಸ್ಯೆಗಳಲ್ಲಿ ಈ ರೀತಿಯಾಗಿ ಕ್ರಿಯಾಶೀಲರಾಗಿ ಭಾಗವಹಿಸಿದಲ್ಲಿ ಅವರಿಗೆ ತಮ್ಮ ಕಲ್ಯಾಣ, ಯೋಗ್ಯ ಶಿಸ್ತಿನ ಲಾಭ ಹಾಗು ಹೊಣೆಗಾರಿಕೆ ಇವುಗಳ ಬಗ್ಗೆ ಅರಿವುಂಟಾಗಿ ತಮ್ಮ ಸಂಸ್ಥೆಯ ಆಡಳಿತ ವ್ಯವಸ್ಥೆಗಳ ಮಟ್ಟವನ್ನು ಎತ್ತರಿಸುವಲ್ಲಿ ಬಹಳೇ ಸಹಾಯಕವಾಗುವದು.

ಶಿಕ್ಷಕನು ತನ್ನ ವಿದ್ಯಾರ್ಥಿಗಳ ಗೌರವ–ನಿಷ್ಠೆಗಳನ್ನು ಪಡೆಯಬೇಕಾದಲ್ಲಿ ತಾನೇ ಕೆಲವು ವಿಧಿ–ನಿಯಮಗಳನ್ನು ಪಾಲಿಸಬೇಕು. ಉಪದೇಶಕ್ಕಿಂತ ಆಚಾರವು ಹೆಚ್ಚು ಪರಿಣಾಮ ಕಾರಿಯೆಂಬುದು ನಮಗೆ ಗೊತ್ತಿದೆಯಷ್ಟೇ. ಶಿಕ್ಷಕನು ಈ ಕೆಳಗಿನಂತೆ ನಡೆದಲ್ಲಿ ಆತನ ವರ್ಗದ ಶಿಸ್ತು ಉತ್ತಮವಾಗಿ ಮಾರ್ಪಡುವದೆಂದು ಸ್ಪಷ್ಟವಾಗಿ ಹೇಳಬಹುದು.

(೧) ಶಿಕ್ಷಕನು ಯಾವಾಗಲೂ ವಿನಯ ಶೀಲ ಹಾಗು ಸ್ನೇಹಭಾವದವನಾಗಿರಬೇಕು. ತನ್ನ ವಿದ್ಯಾರ್ಥಿಗಳ ದೋಷಗಳನ್ನು ಸಹಾನುಭೂತಿ, ತಾಳ್ಮೆ ಹಾಗು ತಿಳುವಳಿಕೆಯಿಂದ ನಿವಾರಿಸಬೇಕಲ್ಲದೆ, ಕೋಪಕ್ರೋಶಿಲುಕಿ ಇಲ್ಲವೆ ಗರ್ಜಿಸಿ ತನ್ನ ದುರ್ಬಲತೆಯನ್ನು ತೋರಿಸಬಾರದು. ಶಿಕ್ಷಕನು ಚಂಚಲ, ಒರಟು ಹಾಗು ನಿರಂಕುಶನಾದಲ್ಲಿ ವಿದ್ಯಾರ್ಥಿಗಳಿಂದ ಗೌರವವು ದೊರೆಯದು.

(೨) ಶಿಕ್ಷಕನು ಪ್ರತಿಯೊಬ್ಬ ವಿದ್ಯಾರ್ಥಿಯ ಸಂಗಡಲೂ ನಿಷ್ಪಕ್ಷಪಾತ ವೃತ್ತಿ ಹಾಗು ನ್ಯಾಯನಿಷ್ಠೆಯಿಂದ ನಡೆಯಬೇಕು. ಹುಡುಗರು ಶಿಕ್ಷಕನ ಭೇದ ನೀತಿಯನ್ನು ಕಂಡು ಹಿಡಿಯಲು ಬಹಳೇ ಚಪಲರಿರುತ್ತಾರೆ. ಪರೀಕ್ಷೆಯ ವಿಷಯಗಳ ಉತ್ತರ ಕಾಗದಗಳನ್ನು ಪರಿಶೋಧಿಸಿ ಗುಣಗಳನ್ನು ಕೊಡುವಾಗ್ಗೆ ಶಿಕ್ಷಕನು ಬಹಳೇ ಎಚ್ಚರಿಕೆಯಿಂದ ನಡೆಯಬೇಕು. ಒಂದುವೇಳೆ ಗುಣಗಳನ್ನು ಕೊಡುವಲ್ಲಿ ದೋಷವಾಗಿದೆಯೆಂದು ಕಂಡು ಬಂದಲ್ಲಿ ಅದನ್ನು ಕೂಡಲೇ ಸರಿಪಡಿಸಲು ಹಿಂಜರಿಯಬಾರದು.

(೩) ಶಿಕ್ಷಕನ ಪೋಷಾಕು ಅಚ್ಚುಕಟ್ಟಾಗಿರಬೇಕು. ಶಕ್ಯವಿದ್ದಲ್ಲಿ ಅಧ್ಯಾಪಕರ ಹಾಗು ವಿದ್ಯಾರ್ಥಿಗಳ ಪೋಷಾಕುಗಳನ್ನು ನಿರ್ದಿಷ್ಟಪಡಿಸಲಡ್ಡಿಯಿಲ್ಲ. ಪೋಷಾಕು ಹೆಚ್ಚು ಆಡಂಬರವಾಗಿರದಿದ್ದರೂ ಅಸಹ್ಯವಾಗಿರಬಾರದು; ಸಾದಾ, ಅಚ್ಚುಕಟ್ಟಾದ ಹಾಗು ಒಪ್ಪುವ ವೇಷವಿರಬೇಕು.

(೪) ಶಿಕ್ಷಕನು ವಿದ್ಯಾರ್ಥಿಗಳಿಂದ ಕಾಣಿಕೆ ಇಲ್ಲವೆ ದೇಣಿಗೆಗಳನ್ನು ಸ್ವೀಕರಿಸಕೂಡದು. ಹೀಗೆ ಮಾಡಿದಲ್ಲಿ ಶಿಕ್ಷಕನ ಗೌರವವು ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಕೆಳ ಮಟ್ಟಕ್ಕೆ ಇಳಿಯುವದು.

(೫) ಶಿಕ್ಷಕನು ಯಾವಾಗಲೂ ವರ್ಗಕ್ಕೆ ನಿಯಮಿತ ವೇಳೆಗೆ ಬರಬೇಕು. ಒಂದು ವೇಳೆ ತಡವಾಗುವಂತಿದ್ದರೆ ವಿದ್ಯಾರ್ಥಿಗಳಿಗೆ ಮೊದಲೇ ತಿಳಿಸಬೇಕು; ಆದಾಗದಲ್ಲಿ ಕ್ಷಮೆ ಕೋರಿದಲ್ಲಿ ಯಾವ ಅಭ್ಯಂತರವಿಲ್ಲ.

(೬) ಶಿಕ್ಷಕನು ವಿದ್ಯಾರ್ಥಿಗಳ ತಪ್ಪುಗಳನ್ನು ಖಂಡಿಸಿದರೆ ಆಗಲಿಲ್ಲ; ಒಳ್ಳೆಯ ಕೆಲಸ ಮಾಡಿದ

ವಿದ್ಯಾರ್ಥಿಗಳನ್ನು ಅಭಿನಂದಿಸುವದೂ ಅವನ ಕರ್ತವ್ಯವೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ವಿದ್ಯಾರ್ಥಿಗಳ ದೋಷಗಳನ್ನು ಕಂಡುಹಿಡಿಯಬೇಕಲ್ಲದೆ, ಅಪರಾಧಿಗಳನ್ನು ಶಿಕ್ಷಿಸಲೂಬೇಕು. ಆದರೆ ಇವೆಲ್ಲವುಗಳನ್ನು ವೈಯಕ್ತಿಕವಾಗಿ ತಿದ್ದಬೇಕಲ್ಲದೆ, ಸಾಮೂಹಿಕವಾಗಿ ಖಂಡನೆಮಾಡಿ ವಿದ್ಯಾರ್ಥಿಗಳ ಕ್ರಾಂತಿಯನ್ನಾಗಲೀ, ಅನಾರೋಗ್ಯಕರವಾದ ಪ್ರತಿಕ್ರಿಯೆಯನ್ನಾಗಲೀ ಆಹ್ವಾನಿಸಬಾರದು.

(೭) ಶಿಕ್ಷಕನು ಪೂರ್ವ ಸಿದ್ಧತೆಯಿಲ್ಲದೆ ಪಾಠ ತೆಗೆದುಕೊಳ್ಳಬಾರದು. ಪಾಠವನ್ನು ಮೊದಲೇ ಯೋಜಿಸಿ, ಸಿದ್ಧತೆ ಮಾಡಿಕೊಂಡು ಹೋದರೆ ವರ್ಗದಲ್ಲಿ ಶಾಂತಿ ಹಾಗು ಶಿಸ್ತು ತನ್ನಿಂದ ತಾವೇ ಸಾಧಿಸುವವು. ಶಿಕ್ಷಕನು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಯಾವದೊಂದು ಕಾರ್ಯದಲ್ಲಿ ತೊಡಗಿಸಲು ಸಮರ್ಥನಾಗುವದಲ್ಲದೆ, ತನ್ನ ವಿಷಯ ಸಂಗ್ರಹದಿಂದ ಅವಧಿಯ ಕೊನೆಯವರೆಗೆ ವಿದ್ಯಾರ್ಥಿಗಳ ಅವಧಾನ-ಆಸಕ್ತಿಗಳನ್ನು ನಿರ್ವಹಿಸುವನು.

ಶಿಕ್ಷಕನು ಮೇಲಿನ ವಿಧಾನಗಳನ್ನು ಪಾಲಿಸಿದಲ್ಲಿ ವರ್ಗದಲ್ಲಿ ಶಿಸ್ತುಭಂಗವಾಗುವ ಪ್ರಸಂಗಗಳು ಕಡಿಮೆಯಾಗುವವದರಲ್ಲಿ ಸಂದೇಹವಿಲ್ಲ. ಇನ್ನು ಶಿಸ್ತುಭಂಗದ ವಾಡಿಕೆಯ ರೂಪಗಳಾದ ಗದ್ದಲ, ಅಲಕ್ಷ್ಯ, ವಂಚನೆಗಳ ಬಗ್ಗೆ ಪರ್ಯಾಲೋಚಿಸುವಾ.

ವರ್ಗದ ಕಾರ್ಯವು ಪರಿಣಾಮಕಾರಿಯಾಗಿ ನಡೆಯಬೇಕಾದಲ್ಲಿ ಶಾಂತ ವಾತಾವರಣವು ಅವಶ್ಯವಾಗಬೇಕು. ಆದ್ದರಿಂದ ವರ್ಗದ ಸುತ್ತುಮುತ್ತಲು ಗದ್ದಲವಾಗದಂತೆ ಯತ್ನಿಸಬೇಕು. ಆದರೂ ವರ್ಗದಲ್ಲಿಯೇ ಕೆಲವು ಮಾತುಗುಳಿ ಹಾಗು ಗದ್ದಲಮಾಡುವ ಹುಡುಗರೂ ಇರುವದುಂಟು. ಇಂಥವರಿಗೆ ಶಿಕ್ಷಕನು ಸ್ವಲ್ಪ ಅವಕಾಶ, ಸವಲತ್ತು ಕೊಡಬೇಕು. "ಹುಡುಗರೂ ಇಂಥವರನ್ನು ಚಟುವಟಿಕೆಯಲ್ಲಿ ತೊಡಗಿಸು" ಎಂಬುದೇ ತಾರಕಮಂತ್ರ. ಶಿಕ್ಷಕನ ಸತತ ಹಾಗು ಲಕ್ಷ್ಯಪೂರಕ ನಿಯಂತ್ರಣವು ಗದ್ದಲವಾಗದ ಕಾರ್ಯದಂತೆ ಅದೊಂದು ನಿರೋಧ ಮಾರ್ಗವು. ಇದಕ್ಕಿಂತಲೂ ಉಪಯುಕ್ತವಾದ ಮನಸ್ಸಿನ ಪ್ರವೃತ್ತಿಗೆ ಸಂಬಂಧಿಸಿದ ಬೇರೊಂದು ಮಾರ್ಗವಿದೆ. ಮಕ್ಕಳಿಗೆ ಆಗಾಗ್ಗೆ ಮಾತಾಡಲು ಅವಕಾಶಕೊಟ್ಟು, ಅವರಲ್ಲಿಯ ಶಾವನ್ನು ಹೊರಗೆ ಹಾಕಬೇಕು. ತಮ್ಮ ಅಭಿಪ್ರಾಯ ವ್ಯಕ್ತಮಾಡಲು ತಮಗೆ ಅವಕಾಶವಿದೆಯೆಂದು ತಿಳಿದು ಅವರು ಶಾಂತರೂ, ವ್ಯವಸ್ಥಿತರೂ ಆಗುವದುಂಟು. ಆದ್ದರಿಂದ ವಿಚಾರಸಂಕೀರ್ಣ, ಕಾವ್ಯಗಾಯನ, ನಾಟ್ಯ ಪ್ರಯೋಗ ಮೊದಲಾದ ಚಟುವಟಿಕೆಗಳು ಅಪ್ರತ್ಯಕ್ಷವಾಗಿ ಶಿಸ್ತನ್ನು ಪರಿಪೋಷಿಸುವ ಸಾಧನಗಳಾಗಿವೆ.

ವರ್ಗದ ಕ್ರಮ-ವ್ಯವಸ್ಥೆಗಳು ಸರಿಯಾಗಿದ್ದರೆ ಹುಡುಗರಿಂದ ಅಲಕ್ಷ್ಯವಾಗುವದು ಕಡಿಮೆ. ಆಸಕ್ತಿಯ ಅಭಾವ, ಯಾವದೊಂದು ವಿಷಯದಲ್ಲಿ ಹಿಂದುಳಿಯುವದು ಇಲ್ಲವೆ ದೈಹಿಕ ನೋವುಗಳಿಂದಾಗಿ ಹುಡುಗನು ವಿಷಯದತ್ತ ಲಕ್ಷ್ಯಹಾಕಲಾರನು. ಆದ್ದರಿಂದ ಶಿಕ್ಷಕನು ವಿಷಯವಿವೇಚನೆಯನ್ನು ಒಳ್ಳೇ ಆಕರ್ಷಕವಾಗಿ ಮಾಡಿ, ಮಕ್ಕಳಿಗೆ ತಲೆಭಾರವಾಗದಂತೆ ನೋಡಬೇಕು. ಶಿಕ್ಷಕನು ಬಾಲಕರಿಗೆ ಎತ್ತಬೇಕತ್ತ ಪ್ರಶ್ನೆಗಳನ್ನು ಹಾಕಿದಲ್ಲಿ ಪ್ರಶ್ನೆಯು ತನ್ನ ಪಾಲಿಗೆ ಯಾವಾಗ್ಗೆ ಬರುವದೋ ಎಂಬ ಊಹೆಯಿಂದ ಬಾಲಕನು ವಿಷಯದಿಂದ ಬೇರೆಡೆ ಮನಸ್ಸು ಹಾಕಲಾರನು. ಶಿಕ್ಷಕನು ಮಗುವಿನ ಅಲಕ್ಷ್ಯದ ಯೋಗ್ಯ ಕಾರಣವನ್ನು ಕಂಡುಹಿಡಿಯಬೇಕು. ವಿಷಯವೇ ಕಚ್ಚಾ ಇದ್ದಲ್ಲಿ ಅಂಥ ಬಾಲಕನನ್ನು ಶಿಕ್ಷಿಸದೆ, ಅವನನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಪ್ರೋತ್ಸಾಹಿಸಿ ವಿಷಯದಲ್ಲಿ ಆತನ ಮನಸ್ಸನ್ನು ಸ್ಥಿರಗೊಳಿಸಬೇಕು.

ಶಿಕ್ಷಕನಿಂದ ಬೆದರಿಕೆ, ಆಲಸ್ಯತನ ವಿಷಯದಲ್ಲಿ ಹಿಂದುಳಿಯುವಿಕೆಯ ಕಾರಣಗಳಿಂದಾಗಿ ಹುಡುಗರು ವಂಚನೆಯ ಮಾರ್ಗಕ್ಕಿಳಿಯುವರು. ಹುಡುಗರ ವಂಚನೆಗೆ ಯಾವ ಕಾರಣ ಮೂಲವಾಗಿದೆಂಬುದನ್ನು ಕಂಡುಹಿಡಿದು ಈ ದುಷ್ಪ್ರವೃತ್ತಿಯನ್ನು ನಿರೋಧಿಸಲು ತಕ್ಕ ಪ್ರಯತ್ನಗಳನ್ನು ಮಾಡಬೇಕು. ದೊಡ್ಡ ಹುಡುಗರಿಗೆ ತರ್ಕಶಕ್ತಿ, ನಿರ್ಣಾಯಕ ಬುದ್ಧಿಗಳಿರುವದರಿಂದ ಕಾರ್ಯಗೌರವ-ಆನಂದಗಳ ಬಗ್ಗೆ ಅವರಿಗೆ ಯೋಗ್ಯ ತಿಳಿವಳಿಕೆಯನ್ನು ಕೊಟ್ಟರೆ, ಅವರಿಗೆ ತಮ್ಮ ಕಾರ್ಯ

ಗಳಲ್ಲಿ ಸದಭಿಮಾನ ಉಂಟಾಗಿ ಅವರು ಮೋಸ ಕಾರ್ಯಗಳಿಂದ ದೂರಾಗುವರು.

ಶಿಕ್ಷೆಯ ಬೆದರಿಕೆಯು ಕಾರ್ಯದ ಹೇತುವಾಗಬಾರದು. ತಾವು ಶಿಕ್ಷಕನ ಸಲುವಾಗಿ ಇಲ್ಲವೆ ಆತನ ಕಾರಣದಿಂದ ದುಡಿಯುವದಿಲ್ಲವೆಂಬ ಯೋಗ್ಯ ತಿಳಿವಳಿಕೆಯನ್ನು ಮಕ್ಕಳಿಗೆ ಮಾಡಿಕೊಡಬೇಕು. "ಕೆಲಸದ ಸಲುವಾಗಿ ಕೆಲಸ ಮಾಡು" ಎಂಬ ಉಚ್ಚವಾದ ಆದರ್ಶವನ್ನು ಮಕ್ಕಳಿಗೆ ತಿಳಿಸುವದು ಸಾಧ್ಯವಾಗದಿದ್ದರೂ, ತಮ್ಮ ಸಲುವಾಗಿಯಾದರೂ ತಾವು ಕಾರ್ಯ ಮಾಡಬೇಕೆಂಬ ಅರಿವನ್ನು ಅವರಲ್ಲಿ ಹುಟ್ಟಿಸಬೇಕು. ಅವರಲ್ಲಿ ಈ ಭಾವನೆ ಒಡಮೂಡಿದಲ್ಲಿ ವಂಚನೆಯಿಂದ ಲಾಭವಿಲ್ಲವೆಂದು ಅವರು ತಾವಾಗಿಯೇ ತಿಳಿದುಕೊಳ್ಳುವರು.

ಕೆಲಸವನ್ನು ಸಮಯಕ್ಕೆ ಸರಿಯಾಗಿ ಮಾಡಲಿಲ್ಲವೆಂದು ಹುಡುಗರನ್ನು ಒಮ್ಮೆಲೇ ಶಿಕ್ಷಿಸದೆ, ಅವನ ಮನ ಒಲಿಸಿ, ಸಹಾನುಭೂತಿಪೂರ್ವಕ ತಿಳಿವಳಿಕೆ ಕೊಟ್ಟಲ್ಲಿ ಕಾರ್ಯವು ಹೆಚ್ಚು ಪರಿಣಾಮಕಾರಿಯಾಗುವದು. ಸಿಟ್ಟುಮಾಡುವದು, ಶಿಕ್ಷೆಮಾಡುವದು ಇವುಗಳಿಗೆ ಶಾಲೆಯಲ್ಲಿ ಯೋಗ್ಯಸ್ಥಾನವಿರುವದಾದರೂ, ಅವುಗಳನ್ನೇ ಅವಲಂಬಿಸಿ ಕೂಡುವದು ತಪ್ಪು. ಕೆಲವು ಹುಡುಗರು ಮೈಯುಳಿಸಿಕೊಂಡು ವಂಚನೆಯ ಮಾರ್ಗಗಳನ್ನು ಅನುಸರಿಸುವದು ಶಿಕ್ಷಾಪದ್ಧತಿಯ ದುಷ್ಪರಿಣಾಮವಲ್ಲದೆ ಮತ್ತೇನೂ ಅಲ್ಲ. ಮಕ್ಕಳು ಒಮ್ಮೊಮ್ಮೆ ಕಾರ್ಯದಲ್ಲಿ ಅನಾಸಕ್ತರಿರುವದಕ್ಕೆ ಬಲವಾದ ಕಾರಣಗಳಿರುವದುಂಟು.

ವರ್ಗದ ಸಾಮಾನ್ಯ ವಾತಾವರಣ ವ್ಯವಸ್ಥೆಗಳಿಗೆ ಒಳ್ಳೇ ಮಹತ್ವದ ಸ್ಥಾನವಿದೆ. ತಾವು ಶಿಕ್ಷಕನ ವಿಶ್ವಾಸಕ್ಕೆ ಪಾತ್ರರಿರುವೆವೆಂಬುದನ್ನು ಮಕ್ಕಳ ಮನಸ್ಸಿನಲ್ಲಿ ತುಂಬಿದಾಗಲೇ, ಈ ವಿಶ್ವಾಸವನ್ನು ಕಾಯ್ದುಕೊಳ್ಳಲು ಅವರು ಶಿಕ್ಷಕನ ಗೈರಹಾಜರಿಯಲ್ಲಿ ಸಹ ಅವನ "ಅಗೋಚರ ಮೇಲ್ವಿಚಾರಣೆ" ಯನ್ನು ಮನದಂದು ಅವನ ಮಾತುಗಳಿಗೆ ಬೆಲೆಕೊಡಲು ಯಾವಾಗಲೂ ಪ್ರಯತ್ನಿಸುವರು. ಇಂತಹ ಪರಸ್ಪರ ತಿಳಿವಳಿಕೆ, ವಿಶ್ವಾಸಗಳಿಂದ ಕಾರ್ಯಮಾಡುವ ವರ್ಗದ ಹುಡುಗರೆಲ್ಲರೂ ಹೊಣೆಗಾರಿಕೆಯಿಂದ ಹಾಗು ಲಕ್ಷ್ಯಪೂರ್ವಕವಾಗಿ ತಪ್ಪಿತಸ್ಥ ಹುಡುಗರನ್ನು ತಾವಾಗಿಯೇ ಹುಡುಕಿಕೊಡುವರು. ವರ್ಗದ ಸಾಮೂಹಿಕ ನೈತಿಕ ಬಲದಿಂದ ಅಪರಾಧಿ ಹುಡುಗನು ತನ್ನ ವಂಚನೆಯ ಕಾರ್ಯದಲ್ಲಿ ಯಾವ ಪ್ರಯೋಜನವೂ ಇಲ್ಲವೆಂದು ತಿಳಿದು ದುಷ್ಟ ಮಾರ್ಗದಿಂದ ದೂರಾಗುವನು.

ಪ್ರಕಟನೆ

೧೯೫೫ ನೆಯ ಅಗಷ್ಟದಲ್ಲಿ ಜರುಗಲಿರುವ "ಕನ್ನಡ ವರ್ಧ ಪ್ರಾಯಿಜ ಪರೀಕ್ಷೆ"ಗೆ ಕೂಡ್ರಲಿಚ್ಛಿಸುವವರು ೧-೮-೧೯೫೫ ನೆಯ ದಿನಾಂಕದೊಳಗಾಗಿ ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರ, ಜಿಲ್ಹಾ ಧಾರವಾಡ ಇವರಿಗೆ ಮುಟ್ಟುವಂತೆ ಅಪೇಕ್ಷಾ ಪತ್ರಗಳನ್ನು ಕಳುಹಿಸತಕ್ಕದ್ದು. ನಿಶ್ಚಿತ ದಿನ ಹಾಗೂ ವೇಳೆಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು. ವಿವರಗಳಿಗಾಗಿ ಇದೇ ಸಂಚಿಕೆಯಲ್ಲಿ ಕವ್ಹರಿನ ೩ ನೆಯ ಪುಟದಲ್ಲಿ ಕೊಡಲಾದ "ವರ್ಧ ಪ್ರಾಯಿಜ" ಪರೀಕ್ಷೆಯ ಪ್ರಕಟನೆಯ ೧, ೨ ಹಾಗೂ ೫ ನೆಯ ಪರಿಚ್ಛೇದಗಳನ್ನು ನೋಡಿರಿ.

Sd/ S. P. Patil
ಪ್ರಿನ್ಸಿಪಾಲ
ಕ. ಗಂ. ಸ. ಟ್ರೇ. ಕಾ. ಧಾರವಾಡ

ಧಾರವಾಡ
೨-೪-೧೯೫೫

ಶಿಕ್ಷಣ ಮತ್ತು ಮನೋವಿಜ್ಞಾನ

ಲೇಖಕರು :— ಶ್ರೀ. ಮ. ಗು. ಹಂದ್ರಾಳ,
ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

ಪರಿಚಯ—ಮನೋವಿಜ್ಞಾನವು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದಿದೆ. ಮನಸ್ಸೆಂದರೆ ಆತ್ಮ (Soul) ಮನೋವಿಜ್ಞಾನವೆಂದರೆ ಆತ್ಮಜ್ಞಾನ (Science of the Soul) ಎಂಬರ್ಥದಲ್ಲಿರೂಪುಗೊಂಡು ಮನೋವಿಜ್ಞಾನವು ತತ್ವಜ್ಞಾನದ (Philosophy) ಒಂದು ಭಾಗವಾಗಿ ಬಹುಕಾಲದಿಂದಲೂ ಉಳಿದುಕೊಂಡು ಬಂದಿದೆ. ವಿಶ್ವವಿದ್ಯಾಲಯ (University) ಪದವಿಗಳಿಗಾಗಿ ಓದುವ ವಿದ್ಯಾರ್ಥಿಗಳು ಉಚ್ಚ ಶಿಕ್ಷಣಾಲಯ (College) ಗಳಲ್ಲಿ ಮನೋವಿಜ್ಞಾನವನ್ನು ತತ್ವಜ್ಞಾನದ ಅಂಗವಾಗಿ ಈಗಲೂ ಅಭ್ಯಸಿಸುತ್ತಿರುವರು. ಇಂದಿನ ಶತಮಾನದ ಆರಂಭದಿಂದ ಈ ದಿಶೆಯಲ್ಲಿ ಹೊಸ ಕಿರಣವು ಮೂಡಿ ಬಂದಿದೆ. ಮನೋವಿಜ್ಞಾನವು ಆತ್ಮಜ್ಞಾನದ ಬಂಧನದಿಂದ ಮುಕ್ತವಾಗಿ, ಮನಸ್ಸಿನ ಅಭ್ಯಾಸ (Study of Mind) ಎಂಬ ಅರ್ಥದಲ್ಲಿ ಬಳಕೆಯಾಗತೊಡಗಿದೆ. ಈಗ ಮನೋವಿಜ್ಞಾನವು **ಮನೋವ್ಯಾಪಾರಗಳ ಅರ್ಥಾತ್** ಮನಸ್ಸಿನ **ಕ್ರಿಯೆಗಳ ನಿರೂಪಣೆಯ ಶಾಸ್ತ್ರ**ವೆಂಬ ನಿಚ್ಚಳ ನಿಲುಮೆಗೆ ನಿಲುಕಿದ್ದೇವೆ. ಮಾನವನ ಮನಸ್ಸಿನ ಕ್ರಿಯೆಗಳು ಬಹುವಾಗಿ ಅವನ ವರ್ತನದಲ್ಲಿಯೇ ಕಾಣಿಸಿಕೊಳ್ಳುವವು. ಮಾನವನ ವರ್ತನದ ಅರ್ಥಾತ್ ನಡಾವಳಿಯ ಅಭ್ಯಾಸವು ಪುರಾತನ ಕಾಲದಿಂದಲೂ ನಡೆದು ಬಂದಿದೆ. ಉಪನಿಷತ್ತುಗಳಲ್ಲಿಯೂ ಈ ಬಗೆಗೆ ಉಲ್ಲೇಖಗಳುಂಟು. ವ್ಯಾಪಕವಾದ ಭೂಮಿಕೆಯಲ್ಲಿ ಮನಸ್ಸಿನ ತತ್ವಾನ್ವೇಷಣ ಮಾಡುವ ಮಹಾತತ್ವಜ್ಞಾನಿಗಳೆಲ್ಲ ಮನಸ್ಸಿನ ಅಭ್ಯಾಸವನ್ನು ಇಂದಿಗೂ ತತ್ವಜ್ಞಾನದ ಅಂಗವೆಂದೇ ಅಭ್ಯಸಿಸುತ್ತಿರುವರು. ವಿದ್ಯಾವ್ಯಾಸಂಗದಲ್ಲಿ ಮಗ್ನನಾಗಿರುವ ಒಬ್ಬ ವಿದ್ಯಾರ್ಥಿ ಒಂದು ಸಾಹಸದ ಕೆಲಸದಲ್ಲಿ ತಲ್ಲೀನನಾಗಿರುವ ಒಬ್ಬ ಯುವಕ ಜೀವನದಲ್ಲಿ ಬರುವ ಅಡೆ ತಡೆಗಳನ್ನು ಧೀರತೆಯಿಂದ ಎದುರಿಸಿ ಅನುಭವದ ಬಲದಿಂದ ತನ್ನ ನಡಾವಳಿಯನ್ನು ರೂಪಿಸಿಕೊಳ್ಳುತ್ತಿರುವ ಒಬ್ಬ ಪ್ರೌಢ, ತನ್ನ ಆತ್ಮವನ್ನು ಪರಮ ಆತ್ಮನಲ್ಲಿ ಲೀನಗೊಳಿಸಬೇಕೆಂದು ಧ್ಯಾನಿಸುತ್ತಿರುವ ಒಬ್ಬ ತಪಸ್ವೀ ಈ ಎಲ್ಲ ವ್ಯಕ್ತಿಗಳ ಮನಸ್ಸನ್ನು ಒಳಹೊಕ್ಕು ನಿರೀಕ್ಷಿಸಿದಲ್ಲಿ ಮನಸ್ಸಿನ ಅಭ್ಯಾಸವು ಬಹುಮುಖವಾಗಿ ಸಾಗಬೇಕಾಗಿದೆ ಎಂಬುದು ಸ್ವಯಂಸಿದ್ಧ. ಭಿನ್ನ ಭಿನ್ನ ವ್ಯಕ್ತಿಗಳು ಭಿನ್ನ ಭಿನ್ನ ಸನ್ನಿವೇಶಗಳಲ್ಲಿ ತಮ್ಮ ತಮ್ಮ ಉದ್ದಿಶ್ಯಗಳಿಗನುಗುಣವಾಗುವಂತೆ ಮನಸ್ಸಿನ ವ್ಯವಹಾರಗಳನ್ನು ವ್ಯಕ್ತಗೊಳಿಸುತ್ತಿರುವದು ಸಹಜ. ಆದುದರಿಂದ ಮನಸ್ಸಿನ ಅಭ್ಯಾಸವನ್ನು ಸಶಾಸ್ತ್ರೀಯವಾಗಿ ಮಾಡಬೇಕಾದರೆ, ಅದರಲ್ಲಿ ವಿವಿಧ ವಿಭಾಗಗಳನ್ನು ಮಾಡಲೇಬೇಕೆಂಬುದು ಸ್ಪಷ್ಟ. ಮನೋವಿಜ್ಞಾನವು ಮಾನವನ ಬಾಲ್ಯ ಜೀವನದಲ್ಲಿಯ ಮನಸ್ಸಿನ ಕ್ರಿಯೆಗಳ ರೂಪರೇಖೆ (Child-psychology) ಪ್ರೌಢ ಜೀವನದಲ್ಲಿಯ ಮನೋವ್ಯಾಪಾರಗಳ ಸ್ವರೂಪ (Adult Psychology) ಆಧ್ಯಾತ್ಮ ಜೀವನದಲ್ಲಿಯ ಆಂತರಿಕ ಹೋರಾಟದ ಫಲಸ್ವರೂಪ (Science of the Soul) ಹೀಗೆ ವಿಭಾಗಗಳನ್ನು ಧರಿಸಿದೆ. ಆಧುನಿಕ ತತ್ವವೇತ್ತರೂ, ಶಿಕ್ಷಣತಜ್ಞರೂ ಈ ಬಗೆಯಾಗಿ ಮನೋವಿಜ್ಞಾನವನ್ನು, ಶಾಖೆಗಳನ್ನಾಗಿ ಕಲ್ಪಿಸಿ, ವಿಶೇಷ ಅಭ್ಯಾಸಮಾಡುತ್ತಿರುವದು ಕಂಡು ಬಂದಿದೆ.

ಶಿಕ್ಷಣ ಮತ್ತು ಮನೋವಿಜ್ಞಾನ

ಶಿಕ್ಷಣ ಮತ್ತು ಮನೋವಿಜ್ಞಾನ ಇವುಗಳಲ್ಲಿರುವ ನಿಕಟ ಸಂಬಂಧವನ್ನು ಹೆಣೆದುಕೊಂಡು ಬರುತ್ತಿರುವುದೇ

ಹೊಸ ಶಿಕ್ಷಣದ ಸಾಫಲ್ಯವು, ಸೌಂದರ್ಯವು ಎಂದು ಧಾರಾಳವಾಗಿ ಹೇಳಬಹುದು. ಹೊಸ ಶಿಕ್ಷಣದ ಪ್ರಥಮ ಪುರಸ್ಕರ್ತನಾದ ರೂಸೋ ಬಹು ವಿಧವಾಗಿ ಈ ಬಾಂಧವ್ಯವನ್ನು ಬೆಳೆಯಿಸಲು ಯತ್ನಿಸಿದನು. ತನ್ನ ಕಾಲದ ಶೈಕ್ಷಣಿಕ ವಿಚಾರಗಳನ್ನು ಅವನು ಬಲವಾಗಿ ಖಂಡಿಸಲು ಅವನ ಮನೋವಿಜ್ಞಾನದ ಒಳನೋಟವೇ ಕಾರಣವಾಗಿದೆ. ಪ್ರೌಢನ ಕಾಲ್ಪನಿಕ ಕೃತಿಯಿಂದ ನಿರ್ಮಿತವಾದ ಸೆರೆಮನೆಯಲ್ಲಿ ಮಗುವು ಬಳಲಿ, ಬೆಂಡಾಗಿ ಶಿಕ್ಷಣ ಪಡೆಯುತ್ತಿರುವದನ್ನು ಕಂಡು ಕೊರಗಿ, ನೊಂದು ಬೆಂದವನಾಗಿ "ಶಿಕ್ಷಣದಲ್ಲಿ ಮಗು ಸ್ವಾತಂತ್ರ್ಯ" ಎಂಬ ಕೂಗನ್ನು ಎಬ್ಬಿಸಿ, "ಮಗುವನ್ನು ಮಗುವಿನಂತೆಯೇ ನೋಡಿರಿ" ಎಂಬ ಹೊಸ ದಿಶೆಯನ್ನು ತೋರಿಸಿದ ರೂಸೋ ನಿಜವಾಗಿಯೂ, ಶಿಕ್ಷಣ ತಜ್ಞರ ಮನಸ್ಸನ್ನು ವಿದ್ಯಾರ್ಥಿಯ ಮನಸ್ಸಿನ ಅಭ್ಯಾಸದ ಕಡೆಗೆ ಸೆಳೆದ ಶ್ರೇಯಸ್ಸಿಗೆ ಪಾತ್ರನಾದನು. ಆಗಿನ ಕಾಲದಲ್ಲಿ ಮಗುವು ಸಂಪ್ರದಾಯಗಳ ಸಂಕೋಲೆಗಳಲ್ಲಿ ಸಿಲುಕಿಕೊಂಡು, ತನ್ನ ವಿಚಾರ, ಭಾಷೆ, ಕೃತಿ ಮೊದಲಾದವುಗಳನ್ನು ಪ್ರೌಢಶಿಕ್ಷಕನ ಇಲ್ಲವೆ ಪಾಲಕನ ಇಚ್ಛೆಗಳ ಪಾಶಕ್ಕೆ ಮಾರುಗೊಂಡು 'ತನ್ನತನ' ಅರ್ಥಾತ್ ತನ್ನ ವ್ಯಕ್ತಿತ್ವವನ್ನೇ ತೂರಿಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದನು. ಅರ್ಥ ತಿಳಿಯಲಿ ತಿಳಿಯದಿರಲಿ, ಭಾವಕ್ಕೆ ಒಗ್ಗಲಿ ಬಿಡಲಿ, ಮನಮೆಚ್ಚಲಿ ಬಿಡಲಿ, ಪ್ರೌಢ ಶಿಕ್ಷಕ ತನ್ನ ದೃಷ್ಟಿಯಿಂದ ಯೋಗ್ಯವೆನಿಸಿದುದನ್ನು ವಿದ್ಯೆಯ ಹೆಸರಿನಿಂದ ನೀಡುತ್ತಿದ್ದ. ಅದನ್ನು ಅರೆಮನಸ್ಸಿನಿಂದ ಅರಗಿಸಿಕೊಳ್ಳಲು ಮಗು ಕುರುಡುಪಾಠ ಮಾಡುತ್ತಿದ್ದ, ಶಿಕ್ಷಕನು ಕೇಳಿದಾಗ ಸ್ಮರಣ ಶಕ್ತಿಯ ಬಲದಿಂದ ಅದನ್ನು ಉಸಿರುಕೊಳ್ಳುತ್ತಿದ್ದ. ಅಭ್ಯಾಸ ವಿಷಯಗಳು ಗಹನವಿದ್ದಷ್ಟು ಮಹತ್ವವಾದವುಗಳು ಎಂಬ ಗ್ರಹಿಕೆ ರೂಢವಾಗಿದ್ದದರಿಂದ ಮಗುವಿನ ಮೇಲೆ ಮತ್ತಿಷ್ಟು ಒತ್ತಡ ಬೀಳುತ್ತಿತ್ತು. ಮಗುವಿನ ಶಿಕ್ಷಣವು ಯಾಂತ್ರಿಕವಾಗಿ ಸಾಗುತ್ತಿತ್ತು. ಸಜೀವ ವ್ಯಕ್ತಿಯ ಬೆಳವಣಿಗೆಯ ನಿರೂಪಣೆಯಲ್ಲಿ ನಿರ್ಜೀವತೆ ತುಂಬಿ ತುಳುಕುತ್ತಿತ್ತು. ಇಂತಹ ಶೈಕ್ಷಣಿಕ ವಾತಾವರಣದಲ್ಲಿ ಪ್ರೌಢನ ಆಚಾರ ವಿಚಾರಗಳು, ರೀತಿನೀತಿಗಳು, ಒಲುಮೆ ಬಲತ್ಕಾರಗಳು ಮಗುವಿನ ವಿದ್ಯಾರ್ಥಿ ಜೀವನದಲ್ಲಿ ಬಲವಾದ ಪೆಟ್ಟುಕೊಟ್ಟು, ಅವನ ಸ್ವಾತಂತ್ರ್ಯವನ್ನು ಹರಣಮಾಡಿ, ವ್ಯಕ್ತಿತ್ವವನ್ನು ಕುಗ್ಗಿಸುತ್ತಿದ್ದವು. ಮಾನವಸ್ವಾತಂತ್ರ್ಯಕ್ಕಾಗಿ ಮೂಡಿದ ಫ್ರೆಂಚ ರಾಜ್ಯಕ್ರಾಂತಿಯ ಕಾರಣಪುರುಷರಲ್ಲೊಬ್ಬನಾದ ರೂಸೋ ಶಿಕ್ಷಣದಲ್ಲಿ ಮಗು ಸ್ವಾತಂತ್ರ್ಯ ಚಳುವಳಿಯ ಮೊದಲಿಗನಾದನು. ಮಗುವು ತನ್ನ ಒಲವು–ನಿಲವು, ಆಶೆ-ಆಕಾಂಕ್ಷೆಗಳಿಗೆ ಅನುಗುಣವಾಗುವಂತೆ ಸಂಸ್ಕಾರಹೊಂದಿ, ತನ್ನ ಅಂತಃಶಕ್ತಿಗಳ ಸಹಜ ವಿಕಾಸವನ್ನು ಪ್ರೇಮಮಯ ವಾತಾವರಣದಲ್ಲಿ ಅಡ್ಡಿ ಆತಂಕಗಳಿಲ್ಲದೆ ಮಾಡಿಕೊಂಡು ತನ್ನ ತೃಪ್ತಿಯನ್ನು ಪಡೆಯಬೇಕು. ಮಗುವೇ ಶಿಕ್ಷಣ ಕಾರ್ಯದ ಕೇಂದ್ರ. ಅವನ ಸ್ವಭಾವವನ್ನು ಅರಿತುಕೊಳ್ಳುವದೇ ಶಿಕ್ಷಣದ ನೆಲೆಗಟ್ಟು. ನಿಸರ್ಗವೇ ಅವನ ಶೈಕ್ಷಣಿಕ ಸಾಮಗ್ರಿ. ಅವನ ಅನುಭವವೇ ಅವನ ಶಿಕ್ಷಣ. ಪುಸ್ತಕದಲ್ಲಿರುವದು ಮಾತ್ರ ವಿದ್ಯೆಯಲ್ಲ; ನಿಜವಾದ ವಿದ್ಯೆಯು ಮಗುವಿನ ಜೀವನ ಸಂಗತಿಯಾಗಿ ದೊರೆಯುವುದು ಎಂದು ಮುಂತಾಗಿ ರೂಸೋ ಬೋಧಿಸಿದ. ಅವನ ಈ ಬೋಧೆಯಲ್ಲಿ ಹೊಸ ಶಿಕ್ಷಣದ ಜೀವಾಳವಿದೆ; ಹೊಸ ಶಿಕ್ಷಣವು ಮನೋವಿಜ್ಞಾನದ ಆಧಾರದ ಮೇಲೆಯೇ ಬೆಳೆಯುತ್ತಿದೆ ಎಂಬುದು ಸ್ಪಷ್ಟವಿದೆ. ಎಮೀಲನಿಗೆ ಜೀವನದ ವಿವಿಧ ಹಂತ (Stage) ಗಳಲ್ಲಿ ಯಾವ ತರಹದ ಶಿಕ್ಷಣವು ನಿಸರ್ಗ ಮಾರ್ಗಾನುಸರಿಸಿ (Nature's way) ದೊರೆಯಬೇಕೆಂದು ಒಳ್ಳೇ ಸ್ವಾರಸ್ಯವಾಗಿ ರೂಸೋ ವಿವರಿಸಿದ್ದಾನೆ. ಮಗುವಿನ ಶಿಕ್ಷಣವು ಅವನ ಬೆಳವಣಿಗೆಯ ಸ್ವಾಭಾವಿಕ ಮಾರ್ಗವನ್ನೇ ಅನುಸರಿಸಿ ಸಾಗಬೇಕು. ಪ್ರೌಢನ ರೀತಿನೀತಿಗಳೇ ಬೇರೆ ಮಗುವಿನ ಒಲವುನಿಲವುಗಳೇ ಬೇರೆ ಎಂದು ಸ್ಪಷ್ಟವಾಗಿ ವಿವರಿಸಿ, ಶಿಕ್ಷಣ ಶಾಸ್ತ್ರವನ್ನು ಮನೋವಿಜ್ಞಾನದ ನೆರವಿನಿಂದಲೇ ರಚಿಸಬೇಕು, ಬೆಳೆಯಿಸಬೇಕು. ಇದುವೇ ಹೊಸ ಮಾರ್ಗ ಹೊಸ ದೃಷ್ಟಿ ಎಂದು ರೂಸೋ ಪ್ರತಿಪಾದಿಸಿದನು. ಶಿಕ್ಷಣ ಶಾಸ್ತ್ರವನ್ನು ಅರಿಯಬಲ್ಲವರು ಮಗುವಿನ ಮನೋವಿಜ್ಞಾನವನ್ನು (Child psychology) ಅರಿತುಕೊಳ್ಳುವದು ಅಗತ್ಯವೆನಿಸಿತು.

ಶಿಕ್ಷಣ ಮತ್ತು ಮನೋವಿಜ್ಞಾನ

ಲೇಖಕರು :— ಶ್ರೀ. ಮ. ಗು. ಹಂದ್ರಾಳ್,
ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

ಪರಿಚಯ—ಮನೋವಿಜ್ಞಾನವು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದಿದೆ. ಮನಸ್ಸೆಂದರೆ ಆತ್ಮ (Soul) ಮನೋವಿಜ್ಞಾನವೆಂದರೆ ಆತ್ಮಜ್ಞಾನ (Science of the Soul) ಎಂಬರ್ಥದಲ್ಲಿರೂಪುಗೊಂಡುಮನೋವಿಜ್ಞಾನವು ತತ್ತ್ವಜ್ಞಾನದ (Philosophy)ಒಂದು ಭಾಗವಾಗಿ ಬಹುಕಾಲದಿಂದಲೂ ಉಳಿದುಕೊಂಡು ಬಂದಿದೆ. ವಿಶ್ವವಿದ್ಯಾಲಯ (University) ಪದವಿಗಳಿಗಾಗಿ ಓದುವ ವಿದ್ಯಾರ್ಥಿಗಳು ಉಚ್ಚ ಶಿಕ್ಷಣಾಲಯ(College) ಗಳಲ್ಲಿ ಮನೋವಿಜ್ಞಾನವನ್ನು ತತ್ತ್ವಜ್ಞಾನದ ಅಂಗವಾಗಿ ಈಗಲೂ ಅಭ್ಯಸಿಸುತ್ತಿರುವರು. ಇಂದಿನ ಶತಮಾನದ ಆರಂಭದಿಂದ ಈ ದಿಶೆಯಲ್ಲಿ ಹೊಸ ಕಿರಣವು ಮೂಡಿ ಬಂದಿದೆ. ಮನೋವಿಜ್ಞಾನವು ಆತ್ಮಜ್ಞಾನದ ಬಂಧನದಿಂದ ಮುಕ್ತವಾಗಿ, ಮನಸ್ಸಿನ ಅಭ್ಯಾಸ (Study of Mind) ಎಂಬ ಅರ್ಥದಲ್ಲಿ ಬಳಕೆಯಾಗತೊಡಗಿದೆ. ಈಗ **ಮನೋವಿಜ್ಞಾನವು ಮನೋವ್ಯಾಪಾರಗಳ ಅರ್ಥಾತ್** ಮನಸ್ಸಿನ **ಕ್ರಿಯೆಗಳ ನಿರೂಪಣೆಯ ಶಾಸ್ತ್ರ**ವೆಂಬ ನಿಚ್ಚಳ ನಿಲುಮೆಗೆ ಸಿಲುಕಿದ್ದೇವೆ. ಮಾನವನ ಮನಸ್ಸಿನ ಕ್ರಿಯೆಗಳು ಬಹುವಾಗಿ ಅವನ ವರ್ತನದಲ್ಲಿಯೇ ಕಾಣಿಸಿಕೊಳ್ಳುವವು. ಮಾನವನ ವರ್ತನದ ಅರ್ಥಾತ್ ನಡಾವಳಿಯ ಅಭ್ಯಾಸವು ಪುರಾತನ ಕಾಲದಿಂದಲೂ ನಡೆದು ಬಂದಿದೆ. ಉಪನಿಷತ್ತುಗಳಲ್ಲಿಯೂ ಈ ಬಗೆಗೆ ಉಲ್ಲೇಖಗಳುಂಟು. ವ್ಯಾಪಕವಾದ ಭೂಮಿಕೆಯಲ್ಲಿ ಮನಸ್ಸಿನ ತತ್ತ್ವಾನ್ವೇಷಣ ಮಾಡುವ ಮಹಾತತ್ತ್ವಜ್ಞಾನಿಗಳೆಲ್ಲ ಮನಸ್ಸಿನ ಅಭ್ಯಾಸವನ್ನು ಇಂದಿಗೂ ತತ್ತ್ವಜ್ಞಾನದ ಅಂಗವೆಂದೇ ಅಭ್ಯಸಿಸುತ್ತಿರುವರು. ವಿದ್ಯಾವ್ಯಾಸಂಗದಲ್ಲಿ ಮಗ್ನನಾಗಿರುವ ಒಬ್ಬ ವಿದ್ಯಾರ್ಥಿ ಒಂದು ಸಾಹಸದ ಕೆಲಸದಲ್ಲಿ ತಲ್ಲೀನನಾಗಿರುವ ಒಬ್ಬ ಯುವಕ, ಜೀವನದಲ್ಲಿ ಬರುವ ಅಡೆ ತಡೆಗಳನ್ನು ಧೀರತೆಯಿಂದ ಎದುರಿಸಿ ಅನುಭವದ ಬಲದಿಂದ ತನ್ನ ನಡಾವಳಿಯನ್ನು ರೂಪಿಸಿಕೊಳ್ಳುತ್ತಿರುವ ಒಬ್ಬ ಪ್ರೌಢ, ತನ್ನ ಆತ್ಮವನ್ನು ಪರಮ ಆತ್ಮನಲ್ಲಿ ಲೀನಗೊಳಿಸಬೇಕೆಂದು ಧ್ಯಾನಿಸುತ್ತಿರುವ ಒಬ್ಬ ತಪಸ್ವೀ ಈ ಎಲ್ಲ ವ್ಯಕ್ತಿಗಳ ಮನಸ್ಸನ್ನು ಒಳಹೊಕ್ಕು ನಿರೀಕ್ಷಿಸಿದಲ್ಲಿ ಮನಸ್ಸಿನ ಅಭ್ಯಾಸವು ಬಹುಮುಖವಾಗಿ ಸಾಗಬೇಕಾಗಿದೆ ಎಂಬುದು ಸ್ವಯಂಸಿದ್ಧ. ಭಿನ್ನ ಭಿನ್ನ ವ್ಯಕ್ತಿಗಳು ಭಿನ್ನ ಭಿನ್ನ ಸನ್ನಿವೇಶಗಳಲ್ಲಿ ತಮ್ಮ ತಮ್ಮ ಉದ್ದಿಶ್ಯಗಳಿಗನುಗುಣವಾಗುವಂತೆ ಮನಸ್ಸಿನ ವ್ಯವಹಾರಗಳನ್ನು ವ್ಯಕ್ತಗೊಳಿಸುತ್ತಿರುವದು ಸಹಜ. ಆದುದರಿಂದ ಮನಸ್ಸಿನ ಅಭ್ಯಾಸವನ್ನು ಸಶಾಸ್ತ್ರೀಯವಾಗಿ ಮಾಡಬೇಕಾದರೆ, ಅದರಲ್ಲಿ ವಿವಿಧ ವಿಭಾಗಗಳನ್ನು ಮಾಡಲೇಬೇಕೆಂಬುದು ಸ್ಪಷ್ಟ. ಮನೋವಿಜ್ಞಾನವು ಮಾನವನ ಬಾಲ್ಯ ಜೀವನದಲ್ಲಿಯ ಮನಸ್ಸಿನ ಕ್ರಿಯೆಗಳ ರೂಪರೇಖೆ (Child-psychology) ಪ್ರೌಢ ಜೀವನದಲ್ಲಿಯ ಮನೋವ್ಯಾಪಾರಗಳ ಸ್ವರೂಪ (Adult Psychology) ಆಧ್ಯಾತ್ಮ ಜೀವನದಲ್ಲಿಯ ಆಂತರಿಕ ಹೋರಾಟದ ಫಲಸ್ವರೂಪ (Science of the Soul) ಹೀಗೆ ವಿಭಾಗಗಳನ್ನು ಧರಿಸಿದೆ. ಆಧುನಿಕ ತತ್ತ್ವವೇತ್ತರೂ, ಶಿಕ್ಷಣತಜ್ಞರೂ ಈ ಬಗೆಯಾಗಿ ಮನೋವಿಜ್ಞಾನವನ್ನು, ಶಾಖೆಗಳನ್ನಾಗಿ ಕಲ್ಪಿಸಿ, ವಿಶೇಷ ಅಭ್ಯಾಸಮಾಡುತ್ತಿರುವದು ಕಂಡು ಬಂದಿದೆ.

ಶಿಕ್ಷಣ ಮತ್ತು ಮನೋವಿಜ್ಞಾನ

ಶಿಕ್ಷಣ ಮತ್ತು ಮನೋವಿಜ್ಞಾನ ಇವುಗಳಲ್ಲಿರುವ ನಿಕಟ ಸಂಬಂಧವನ್ನು ಹೆಣೆದುಕೊಂಡು ಬರುತ್ತಿರುವುದೇ

ಹೊಸ ಶಿಕ್ಷಣದ ಸಾಫಲ್ಯವು, ಸೌಂದರ್ಯವು ಎಂದು ಧಾರಾಳವಾಗಿ ಹೇಳಬಹುದು. ಹೊಸ ಶಿಕ್ಷಣದ ಪ್ರಥಮ ಪುರಸ್ಕರ್ತನಾದ ರೂಸೋ ಬಹು ವಿಧವಾಗಿ ಈ ಬಾಂಧವ್ಯವನ್ನು ಬೆಳೆಯಿಸಲು ಯತ್ನಿಸಿದನು. ತನ್ನ ಕಾಲದ ಶೈಕ್ಷಣಿಕ ವಿಚಾರಗಳನ್ನು ಅವನು ಬಲವಾಗಿ ಖಂಡಿಸಲು ಅವನ ಮನೋವಿಜ್ಞಾನದ ಒಳನೋಟವೇ ಕಾರಣವಾಗಿದೆ. ಪ್ರೌಢನ ಕಾಲ್ಪನಿಕ ಕೃತಿಯಿಂದ ನಿರ್ಮಿತವಾದ ಸೆರೆಮನೆಯಲ್ಲಿ ಮಗುವು ಬಳಲಿ, ಬೆಂಡಾಗಿ ಶಿಕ್ಷಣ ಪಡೆಯುತ್ತಿರುವದನ್ನು ಕಂಡು ಕೊರಗಿ, ನೊಂದು ಬೆಂದವನಾಗಿ "ಶಿಕ್ಷಣದಲ್ಲಿ ಮಗು ಸ್ವಾತಂತ್ರ್ಯ" ಎಂಬ ಕೂಗನ್ನು ಎಬ್ಬಿಸಿ, "ಮಗುವನ್ನು ಮಗುವಿನಂತೆಯೇ ನೋಡಿರಿ" ಎಂಬ ಹೊಸ ದಿಶೆಯನ್ನು ತೋರಿಸಿದ ರೂಸೋ ನಿಜವಾಗಿಯೂ, ಶಿಕ್ಷಣ ತಜ್ಞರ ಮನಸ್ಸನ್ನು ವಿದ್ಯಾರ್ಥಿಯ ಮನಸ್ಸಿನ ಅಭ್ಯಾಸದ ಕಡೆಗೆ ಸೆಳೆದ ಶ್ರೇಯಸ್ಸಿಗೆ ಪಾತ್ರನಾದನು. ಆಗಿನ ಕಾಲದಲ್ಲಿ ಮಗುವು ಸಂಪ್ರದಾಯಗಳ ಸಂಕೋಲೆಗಳಲ್ಲಿ ಸಿಲುಕಿಕೊಂಡು, ತನ್ನ ವಿಚಾರ, ಭಾಷೆ, ಕೃತಿ ಮೊದಲಾದವುಗಳನ್ನು ಪ್ರೌಢಶಿಕ್ಷಕನ ಇಲ್ಲವೆ ಪಾಲಕನ ಇಚ್ಛೆಗಳ ಪಾಶಕ್ಕೆ ನೂಕಿಗೊಂಡು 'ತನ್ನತನ' ಅರ್ಥಾತ್ ತನ್ನ ವ್ಯಕ್ತಿತ್ವವನ್ನೇ ತೂರಿಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದನು. ಅರ್ಥ ತಿಳಿಯಲಿ ತಿಳಿಯದಿರಲಿ, ಭಾವಕ್ಕೆ ಒಗ್ಗಲಿ ಬಿಡಲಿ, ಮನಮೆಚ್ಚಲಿ ಬಿಡಲಿ, ಪ್ರೌಢ ಶಿಕ್ಷಕ ತನ್ನ ದೃಷ್ಟಿಯಿಂದ ಯೋಗ್ಯವೆನಿಸಿದುದನ್ನು ವಿದ್ಯೆಯ ಹೆಸರಿನಿಂದ ನೀಡುತ್ತಿದ್ದ. ಅದನ್ನು ಅರೆಮನಸ್ಸಿನಿಂದ ಅರಗಿಸಿಕೊಳ್ಳಲು ಮಗು ಕುರುಡುಪಾಠ ಮಾಡುತ್ತಿದ್ದ, ಶಿಕ್ಷಕನು ಕೇಳಿದಾಗ ಸ್ಮರಣ ಶಕ್ತಿಯ ಬಲದಿಂದ ಅದನ್ನು ಉಸಿರುಕೊಳ್ಳುತ್ತಿದ್ದ. ಅಭ್ಯಾಸ ವಿಷಯಗಳು ಗಹನವಿದ್ದಷ್ಟು ಮಹತ್ವವಾದವುಗಳು ಎಂಬ ಗ್ರಹಿಕೆ ರೂಢವಾಗಿದ್ದದರಿಂದ ಮಗುವಿನ ಮೇಲೆ ಮತ್ತಷ್ಟು ಒತ್ತಡ ಬೀಳುತ್ತಿತ್ತು. ಮಗುವಿನ ಶಿಕ್ಷಣವು ಯಾಂತ್ರಿಕವಾಗಿ ಸಾಗುತ್ತಿತ್ತು. ಸಜೀವ ವ್ಯಕ್ತಿಯ ಬೆಳವಣಿಗೆಯ ನಿರೂಪಣೆಯಲ್ಲಿ ನಿರ್ಜೀವತೆ ತುಂಬಿ ತುಳುಕುತ್ತಿತ್ತು. ಇಂತಹ ಶೈಕ್ಷಣಿಕ ವಾತಾವರಣದಲ್ಲಿ ಪ್ರೌಢನ ಆಚಾರ ವಿಚಾರಗಳು, ರೀತಿನೀತಿಗಳು, ಒಲುಮೆ ಬಲತ್ಕಾರಗಳು ಮಗುವಿನ ವಿದ್ಯಾರ್ಥಿ ಜೀವನದಲ್ಲಿ ಬಲವಾದ ಪೆಟ್ಟುಕೊಟ್ಟು, ಅವನ ಸ್ವಾತಂತ್ರ್ಯವನ್ನು ಹರಣಮಾಡಿ, ವ್ಯಕ್ತಿತ್ವವನ್ನು ಕುಗ್ಗಿಸುತ್ತಿದ್ದವು. ಮಾನವಸ್ವಾತಂತ್ರ್ಯಕ್ಕಾಗಿ ಮೂಡಿದ ಫ್ರೆಂಚ ರಾಜ್ಯಕ್ರಾಂತಿಯ ಕಾರಣಪುರುಷರಲ್ಲೊಬ್ಬನಾದ ರೂಸೋ ಶಿಕ್ಷಣದಲ್ಲಿ ಮಗು ಸ್ವಾತಂತ್ರ್ಯ ಚಳುವಳಿಯ ಮೊದಲಿಗನಾದನು. ಮಗುವು ತನ್ನ ಒಲವು-ನಿಲವು, ಆಶೆ-ಆಕಾಂಕ್ಷೆಗಳಿಗೆ ಅನುಗುಣವಾಗುವಂತೆ ಸಂಸ್ಕಾರಹೊಂದಿ, ತನ್ನ ಅಂತಃಶಕ್ತಿಗಳ ಸಹಜ ವಿಕಾಸವನ್ನು ಪ್ರೇಮಮಯ ವಾತಾವರಣದಲ್ಲಿ ಅಡ್ಡಿ ಆತಂಕಗಳಿಲ್ಲದೆ ಮಾಡಿಕೊಂಡು ತನ್ನ ತೃಪ್ತಿಯನ್ನು ಪಡೆಯಬೇಕು. ಮಗುವೇ ಶಿಕ್ಷಣ ಕಾರ್ಯದ ಕೇಂದ್ರ. ಅವನ ಸ್ವಭಾವವನ್ನು ಅರಿತುಕೊಳ್ಳುವದೇ ಶಿಕ್ಷಣದ ನೆಲೆಗಟ್ಟು. ನಿಸರ್ಗವೇ ಅವನ ಶೈಕ್ಷಣಿಕ ಸಾಮಗ್ರಿ. ಅವನ ಅನುಭವವೇ ಅವನ ಶಿಕ್ಷಣ. ಪುಸ್ತಕದಲ್ಲಿರುವದು ಮಾತ್ರ ವಿದ್ಯೆಯಲ್ಲ; ನಿಜವಾದ ವಿದ್ಯೆಯು ಮಗುವಿನ ಜೀವನ ಸಂಗತಿಯಾಗಿ ದೊರೆಯುವುದು ಎಂದು ಮುಂತಾಗಿ ರೂಸೋ ಬೋಧಿಸಿದ. ಅವನ ಈ ಬೋಧೆಯಲ್ಲಿ ಹೊಸ ಶಿಕ್ಷಣದ ಜೀವಾಳವಿದೆ; ಹೊಸ ಶಿಕ್ಷಣವು ಮನೋವಿಜ್ಞಾನದ ಆಧಾರದ ಮೇಲೆಯೇ ಬೆಳೆಯುತ್ತಿದೆ ಎಂಬುದು ಸ್ಪಷ್ಟವಿದೆ. ಎಮೀಲನಿಗೆ ಜೀವನದ ವಿವಿಧ ಹಂತ (Stage) ಗಳಲ್ಲಿ ಯಾವ ತರಹದ ಶಿಕ್ಷಣವು ನಿಸರ್ಗ ಮಾರ್ಗಾನುಸರಿಸಿ (Nature's way) ದೊರೆಯಬೇಕೆಂದು ಒಳ್ಳೇ ಸ್ವಾರಸ್ಯವಾಗಿ ರೂಸೋ ವಿವರಿಸಿದ್ದಾನೆ. ಮಗುವಿನ ಶಿಕ್ಷಣವು ಅವನ ಬೆಳವಣಿಗೆಯ ಸ್ವಾಭಾವಿಕ ಮಾರ್ಗವನ್ನೇ ಅನುಸರಿಸಿ ಸಾಗಬೇಕು. ಪ್ರೌಢನ ರೀತಿನೀತಿಗಳೇ ಬೇರೆ ಮಗುವಿನ ಒಲವುನಿಲವುಗಳೇ ಬೇರೆ ಎಂದು ಸ್ಪಷ್ಟವಾಗಿ ವಿವರಿಸಿ, ಶಿಕ್ಷಣ ಶಾಸ್ತ್ರವನ್ನು ಮನೋವಿಜ್ಞಾನದ ನೆರವಿನಿಂದಲೇ ರಚಿಸಬೇಕು, ಬೆಳೆಯಿಸಬೇಕು. ಇದುವೇ ಹೊಸ ಮಾರ್ಗ ಹೊಸ ದೃಷ್ಟಿ ಎಂದು ರೂಸೋ ಪ್ರತಿಪಾದಿಸಿದನು. ಶಿಕ್ಷಣ ಶಾಸ್ತ್ರವನ್ನು ಅರಿಯಬಲ್ಲವರು ಮಗುವಿನ ಮನೋವಿಜ್ಞಾನವನ್ನು (Child psychology) ಅರಿತುಕೊಳ್ಳುವದು ಅಗತ್ಯವೆನಿಸಿತು.

ರೂಸೋನ ತರುವಾಯ ಹೆಸರಾದ ಶಿಕ್ಷಣತಜ್ಞನೆಂದರೆ ಪೆಸ್ಟಲಾಝಿ. ಇವನು ರೂಸೋನ ಶೈಕ್ಷಣಿಕ ತತ್ವಗಳನ್ನು ಪ್ರತ್ಯಕ್ಷ ಪ್ರಯೋಗ ಮಾಡಿ, ಅವುಗಳ ಮೌಲ್ಯಗಳನ್ನು ಜನತೆಗೆ ತೋರಿಸಿಕೊಟ್ಟನು. ಬಡಜನ ಮಕ್ಕಳಿಗೆ ಅನ್ನ, ಅರಿವೆ, ಆಶ್ರಯಕೊಟ್ಟು, ವಿದ್ಯಾಭ್ಯಾಸ ಮಾಡಿಸಿದನು. ಇವನು ಬೋಧಿಸಿದ ಶೈಕ್ಷಣಿಕ ವಿಚಾರಗಳು ಪ್ರಯೋಗದ ಫಲವಾಗಿ ಹೊರಬಿದ್ದುದರಿಂದ ಅವುಗಳಿಗೆ ವಿಶೇಷ ಮಹತ್ವ ದೊರೆಯಿತು. ಬಾಲಕನ ವಿಕಾಸವನ್ನು ಒಂದು ಸಸಿಯ ಅಖಂಡ ವಿಕಾಸಕ್ಕೆ ಹೋಲಿಸಿ, ಬೀಜದಲ್ಲಿ ಭಾವೀ ವೃಕ್ಷದ ಆಕಾರ ಹಾಗು ಗುಣವಿಶೇಷಗಳು ಅಡಕವಾಗಿವೆ ಎಂಬುದನ್ನು ತೋರಿಸಿ, ಮಗುವಿನ ಶಿಕ್ಷಣವೂ ಇದೇ ರೀತಿಯಾಗಿ ಸಾಗಿ-ಅವನ ಇಡಿಯ ಬೆಳವಣಿಗೆ (Integrated Development) (ಶಾರೀರಿಕ, ಬೌದ್ಧಿಕ, ನೈತಿಕ-) ಯನ್ನು ರೂಪಿಸುವಂತಾಗಬೇಕೆಂದು ತಿಳಿಸಿ, ಮಗುವಿನಲ್ಲಿ ಹುದುಗಿದ ಅಂತಃಶಕ್ತಿಗಳನ್ನು ವಿಕಸಿಸಲು ನೆರವಾಗುವದೇ ಶಿಕ್ಷಕನ ಮುಖ್ಯ ಕಾರ್ಯವೆಂದು ಬೋಧಿಸಿ ಹೊಸ ಶಿಕ್ಷಣದ ಹೊಸ ದೃಷ್ಟಿಯನ್ನು ಪುಷ್ಟೀಕರಿಸಿದನು. ಶಿಕ್ಷಣ ಶಾಸ್ತ್ರವು ಮನೋವಿಜ್ಞಾನದ ನೆರವಿನಿಂದಲೇ ಸಾಗಬೇಕೆಂದು ಸಾರಿದನು. ಬೋಧೆಯು (Instruction) ಕೇವಲ ಶಬ್ದನಿಷ್ಠವಾಗಿರದೆ ವಸ್ತುನಿಷ್ಠವಾಗಿರಬೇಕು. 'ಗಿಳಿಪಾಠ' ಪದ್ಧತಿಯು ಅನಿಷ್ಟವಾದದ್ದು; ನಿಗಮನ ಪದ್ಧತಿಯು (Inductive Process) ಉಪಯುಕ್ತವಾದದ್ದು; ಇಂದ್ರಿಯಗಳ ಮುಖಾಂತರ ದೊರೆತ ಅನುಭವವೇ ಜ್ಞಾನಾರ್ಜನೆಯ ಆಧಾರವು. ಯಾವುದೊಂದು ವಿಷಯವನ್ನು ಕಲಿಸುವಾಗ ಸುಲಭ ಸಂಗತಿಗಳಿಂದ ಪ್ರಾರಂಭಿಸಿ, ಕಠಿಣ ಸಂಗತಿಗಳ ಕಡೆಗೆ ಸಾಗಬೇಕು; ಕಲಿತ ಭಾಗವನ್ನು ಸರಿಯಾಗಿ ದೃಢೀಕರಿಸಿ, ಮುಂದೆ ಸಾಗಬೇಕು. ಅವಲೋಕನವು (Observation) ಜ್ಞಾನ ಸಂಗ್ರಹದ ತಳಹದಿಯು. ಶಾಲೆಯಲ್ಲಿಯ ಭಯಪ್ರೇರಕ ವಾತಾವರಣವು ದೂರಾಗಿ, ಶಿಕ್ಷಕ ಬಾಲಕರ ಬಾಂಧವ್ಯವು ಪ್ರೇಮಮಯವಾಗಿರಬೇಕು. ಒಟ್ಟಿನಲ್ಲಿ, ಶಿಕ್ಷಣದ ಮುಖ್ಯ ಧ್ಯೇಯವು ಜ್ಞಾನವನ್ನು ಒದಗಿಸಿಕೊಡುವುದು ಮಾತ್ರ ಆಗಿರದೆ, ಮಗುವಿನ ಅಂತಃಶಕ್ತಿಗಳನ್ನು ಬೆಳೆಯಿಸುವುದಾಗಿರಬೇಕು. ಪೆಸ್ಟಲಾಝಿಯು ಈ ಎಲ್ಲ ವಿಚಾರಗಳನ್ನು ಕೊಟ್ಟದ್ದಲ್ಲದೆ, ಶಿಕ್ಷಣವು ಮನಶ್ಶಾಸ್ತ್ರಾನುಗಾಮಿಯಾಗಬೇಕು ಎಂದು ಪ್ರತಿಪಾದಿಸಿದನು. ಶಿಕ್ಷಣದ ಧ್ಯೇಯ, ಕ್ರಮ, ಶಾಲಾಶಾಸನ, ಶಿಕ್ಷಕ-ಬಾಲಕರ ಸಂಬಂಧ ಮೊದಲಾದ ಸಂಗತಿಗಳನ್ನೆಲ್ಲ ತಿಳಿದುಕೊಳ್ಳಲು ಮನೋವಿಜ್ಞಾನವೇ ಆಧಾರವೆಂದು ಸಾರಿದ್ದರಿಂದ ಶಿಕ್ಷಣ ಮತ್ತು ಮನೋವಿಜ್ಞಾನ ಇವುಗಳ ಅನ್ಯೋನ್ಯ ಸಂಬಂಧವನ್ನು ಸಿದ್ಧಮಾಡಿಕೊಟ್ಟ ಶ್ರೇಯಸ್ಸು ಹೆಚ್ಚಾಗಿ ಪೆಸ್ಟಲಾಝಿಗೆ ಸಲ್ಲುತ್ತದೆ.

ತತ್ವಜ್ಞಾನಿಯೂ, ಹೊಸ ಶಿಕ್ಷಣ ಪುರಸ್ಕರ್ತರಲ್ಲಿ ಮೂರನೆಯ ಮಹಾವ್ಯಕ್ತಿಯೂ ಎಂದು ಹೆಸರಾದವನೆಂದರೆ ಹರ್ಬಾರ್ಟ್. ಇವನು ಶಿಕ್ಷಕನಾಗಿ ಅನುಭವವನ್ನು ಗಳಿಸಿ, ಶಿಕ್ಷಣ ಶಾಸ್ತ್ರಗಳನ್ನು ರಚಿಸಿ, ಶಿಕ್ಷಣವೇತ್ತನೆಂದು ಕೀರ್ತಿಗಳಿಸಿದನು. ಮನಸ್ಸಿನ ಸ್ವರೂಪ ಹಾಗು ವಿಕಾಸ, ಇಂದ್ರಿಯ ಸಂಸ್ಕಾರಗಳು (Sense of Perception), ಕಲ್ಪನೆಗಳ ಸಾಹಚರ್ಯ (Association of ideas), ಕಲ್ಪನಾಸಂಕಲನಗಳು (Systems of ideas), ಅನುಬೋಧೆ (Apperception) ಶಿಕ್ಷಣದ ಧ್ಯೇಯ, ಕ್ರಮ, ಪಠ್ಯ ವಿಷಯಗಳು,(Curriculum) ಬಾಲಕರ ಬಹುಮುಖ ಆಸಕ್ತಿ (Many sided interests), ಅನುಬಂಧ ತತ್ವವಾದದ ಮೆಟ್ಟಲುಗಳನ್ನು ವಿವರಿಸಿ ಶಿಕ್ಷಣ ಮತ್ತು ಮನೋವಿಜ್ಞಾನ ಇವುಗಳ ಪರಸ್ಪರ ಸಂಬಂಧವನ್ನು ತೋರಿಸಿಕೊಟ್ಟಿದ್ದಾನೆ.

ಹೊಸ ಶಿಕ್ಷಣ ತಜ್ಞರ ಮಾಲಿಕೆಯಲ್ಲಿ ಸೇರಿದ ನಾಲ್ಕನೆಯವನು ಫ್ರೊಬೆಲ್. ಇವನು ವಿದ್ಯಾರ್ಥಿಯನ್ನು ಬೆಳೆಯುವ ಒಂದು ಸಸಿಗೆ, ಶಿಕ್ಷಕನನ್ನು ಅದರ ಬೆಳಗೆಯನ್ನು ನಿರ್ದೇಶಿಸುವ ತೋಟಿಗನಿಗೆ ಹೋಲಿಸಿ ಹೊಸ ಶಿಕ್ಷಣದ ತಿರುಳನ್ನು ಚೆನ್ನಾಗಿ ತಿಳಿಸಿ ಹೇಳಿದ್ದಾನೆ. ಇವನು ನಿಸರ್ಗ ಪ್ರೇಮಿಯೂ, ಪ್ರತಿಯೊಂದನ್ನು ಆಧ್ಯಾತ್ಮಿಕ ದೃಷ್ಟಿಯಿಂದ ನೋಡುವಂತಹನೂ ಆಗಿದ್ದನು. ಪ್ರತಿಯೊಂದು ವಸ್ತುವಿನಲ್ಲಿ ದೇವಾಂಶವಿದೆ ಎಂದು ಬೋಧಿಸಿದನು. ಇವನ ಶೈಕ್ಷಣಿಕ ತತ್ವಜ್ಞಾನವು ಮನಸಿನ ಮೂಲಭೂತ ಕ್ರಿಯೆಗಳನ್ನು ಅಳವಡಿ

ಕೊಂಡಿವೆ. ಮಗುವಿನ ಪರಿಪೂರ್ಣ ವಿಕಾಸಕ್ಕೆ ಸಮಾಜದ ಸಂಪರ್ಕವೂ, ಪರಮಾತ್ಮನ ಮಹಿಮೆಯನ್ನು ಅರಿಯಲು ನಿಸರ್ಗ ಸಂಪರ್ಕವೂ ಅಗತ್ಯವೆಂದು ಸಾರಿದನು. ಅಲ್ಲದೆ, ಮಗುವಿನ ಆಳವಾದ ಕೃತಿ ಪ್ರೇಮ, ಸಹಜ ಪ್ರವೃತ್ತಿಗಳಿಗೆ ತಕ್ಕ ಚಾಲನೆ, ಆಟಪಾಟಗಳಲ್ಲಿಯ ಆಸಕ್ತಿ, ರಚನಾ ಕೌಶಲ್ಯಗಳ ಪ್ರಚೋದನೆ ಮೊದಲಾದ ಸಂಗತಿಗಳನ್ನು ವಿಸ್ತರಿಸಿ ಶಿಕ್ಷಣ ಶಾಸ್ತ್ರವನ್ನು ಮನೋವಿಜ್ಞಾನದ ಆಧಾರದ ಮೇಲೆಯೇ ಹೆಣೆಯಲು ಹವಣಿಸಿದ್ದಾನೆ. ಇವನು ತೋರಿಸಿದ ಬಾಲೋದ್ಯಾನ (ಕಿಂಡರ ಗಾರ್ಟನ್) ಕ್ರಮವು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೆಜ್ಜೆಯನ್ನೇ ಮೂಡಿಸಿದೆ.

ಐದನೆಯ ಕುಸುಮವೆಂದರೆ ಮೆಡಮ್ ಮೊಂಟೆಸರಿ. ಇವರು ಅಂಗಹೀನರ ಹಾಗು ಬುದ್ಧಿಮಾಂದ್ಯರ ಶಿಕ್ಷಣ ಕಾರ್ಯದಲ್ಲಿ ಮೊದಲು ತೊಡಗಿ, ಚಿಕ್ಕ ಮಕ್ಕಳ ಶಿಕ್ಷಣ ಕ್ರಮ ನಿರೂಪಿಸುವಲ್ಲಿ ವಿಶೇಷ ಪಾತ್ರವಹಿಸಿದರು. ಶಿಕ್ಷಣ ಹೊಂದುವ ಮಗುವಿಗೆ ತನ್ನ ಮಾರ್ಗದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಅವನ ಒಲವು-ನಿಲವುಗಳಿಗನುಸರಿಸಿ ಶೈಕ್ಷಣಿಕ ಸಾಧನ-ಸಾಮಗ್ರಿಗಳನ್ನು ಒದಗಿಸಿಕೊಡಬೇಕು. ಅವನ ವ್ಯಕ್ತಿತ್ವವು ಪೂರ್ತಿಯಾಗಿ ವಿಕಸಿತವಾಗಲು ಅನುಕೂಲವಾಗುವಂತಹ ಸನ್ನಿವೇಶಗಳಿರಬೇಕು. ಇಂದ್ರಿಯಗಳ ದ್ವಾರಾ ಜ್ಞಾನ ಸಂಗ್ರಹವಾಗಿ, ಶರೀರ-ಮನಸ್ಸುಗಳ ಸಂಬಂಧವನ್ನು ಪೋಷಿಸಿ ಶಿಕ್ಷಣವು ಸಾಗಬೇಕು. ಈ ಮೊದಲಾದ ಮಹತ್ವದ ಮಾತುಗಳಿಂದ ಶಿಕ್ಷಣ ಶಾಸ್ತ್ರಕ್ಕೂ ಮನೋವಿಜ್ಞಾನಕ್ಕೂ ಇರುವ ನಿಕಟ ಸಂಬಂಧವನ್ನು ತೋರಿಸಿದ್ದಾರೆ.

ಈ ಐವರು ತೋರಿಸಿದ ಹಾದಿಯಲ್ಲಿಯೇ ಸಾಗಿ ಹೊಸ ಶಿಕ್ಷಣವನ್ನು ಪ್ರಸಾರ ಮಾಡಿದ, ಮಾಡುತ್ತಿರುವ ಮ್ಯಾಕ್‌ಡೂಗಲ್ ರಾಸ್, ರಾಯಬರ್ನ, ಥಾಡಾರ್ನಯ್ಕ್, ಫ್ರಾಯಿಡ್, ಸ್ಪ್ಯಾಂಡಿಫೋರ್ಡ ಮೊದಲಾದ ಮನೋವೈಜ್ಞಾನಿಕರೂ, ಬರ್ಟ್ರ್ಯಾಂಡ ರಸೆಲ್, ಡ್ಯೂಯಿ, ಬೆಲಾರ್ಡ, ಫೆರಿಯರ್, ನನ್ ಮೊದಲಾದ ಶಿಕ್ಷಣ ತಜ್ಞರೂ ಶಿಕ್ಷಣ ತತ್ವ ಮತ್ತು ಮನೋವಿಜ್ಞಾನ ಇವುಗಳ ಸಾಮರಸ್ಯವನ್ನು ಒಳ್ಳೇ ಸ್ವಾರಸ್ಯವಾಗಿ ತೋರಿಸಿದ್ದಾರೆ. ಇಂದಿನ ಯುಗದಲ್ಲಿ ಶೈಕ್ಷಣಿಕ ಮನೋವಿಜ್ಞಾನವು ತನ್ನದೇ ಆದ ಒಂದು ವಿಶಿಷ್ಟಸ್ಥಾನವನ್ನು ದೊರಕಿಸಿ, ಶಿಕ್ಷಣ ಶಾಸ್ತ್ರಕ್ಕೆ ಆಧಾರವಾಗಿ ನಿಂತಿದೆ; ಎಂದರೆ ಮನಶ್ಶಾಸ್ತ್ರವು ಶಿಕ್ಷಣಶಾಸ್ತ್ರದ ಅಡಿಗಲ್ಲು.

ಶಿಕ್ಷಣ ಮತ್ತು ಮನೋವಿಜ್ಞಾನ

ಒಂದು ಕಾಲದಲ್ಲಿ, ಶಿಕ್ಷಕನು ತಾನು ಕಲಿಸಬೇಕಾದ ವಿಷಯವನ್ನು ತಿಳಿದರೆ ಸಾಕು ಎಂದು ತಿಳಿಯಲಾಗಿತ್ತು. ಆಗ ವಿದ್ಯಾಭ್ಯಾಸ ಮಾಡಿಸುವದೆಂದರೆ ಮಗುವಿಗೆ ಭಾಷೆ, ಗಣಿತ, ಇತಿಹಾಸ, ಭೂಗೋಲ, ವಿಜ್ಞಾನ ಮೊದಲಾದ ವಿಷಯಗಳನ್ನು ಕಲಿಸುವದು ಎಂಬ ಗ್ರಹಿಕೆಯಾಗಿತ್ತು. ಶಿಕ್ಷಕನು ಕಲಿಸುವವ, ಅವನ ಪಾತ್ರ ಹಿರಿಯದು, ಅವನು ಹೇಳಿದಂತೆ ಮಗು ವರ್ತಿಸಬೇಕು ಎಂಬ ವಿಚಾರವು ಪ್ರಧಾನವಾಗಿತ್ತು. ಇದು ಹಳೆಯ ಶಿಕ್ಷಣ ಕ್ರಮದ ಒಂದು ದೃಷ್ಟಿ. ಶಿಕ್ಷಕನು ತಾನು ಕಲಿಸಬೇಕಾದ ವಿಷಯವನ್ನು ಮಾತ್ರ ಅರಿತರೆ ಸಾಲದು; ಕಲಿಯುವ ವಿದ್ಯಾರ್ಥಿಯ ಬಗೆಗೂ ಅವನು ತಿಳಿದವನಾಗಿರಬೇಕು. ರೋಗಿಯನ್ನು ಚಿಕಿತ್ಸೆಯನ್ನು ಕೈಕೊಳ್ಳುವ ಪೂರ್ವದಲ್ಲಿ ವೈದ್ಯನು ರೋಗಿಯನ್ನು ಚೆನ್ನಾಗಿ ಪರೀಕ್ಷಿಸುವನು. ಅಲ್ಲದೆ ರೋಗಿಯ ವಯಸ್ಸು, ದೈಹಿಕ ಸಾಮರ್ಥ್ಯ, ಮನಸ್ಸಿನ ಸ್ಥಿತಿ ಮೊದಲಾದವುಗಳನ್ನು ಅನುಲಕ್ಷಿಸಿ ಕೊಡುವ ಔಷಧವನ್ನೂ, ಅದರ ಪ್ರಮಾಣವನ್ನೂ ನಿಶ್ಚಿತಗೊಳಿಸುವನು. ಅದರಂತೆಯೇ ಶಿಕ್ಷಕನು ಮಗುವಿಗೆ ಜ್ಞಾನವನ್ನು ಒದಗಿಸುವ ಮುಂಚೆ ಅವನ ಶಾರೀರಿಕ ಹಾಗೂ ಮಾನಸಿಕ ಬೇಡಿಕೆಗಳನ್ನು ಅನುಲಕ್ಷಿಸಿ, ಅವನಲ್ಲಿರುವ ಜ್ಞಾನವನ್ನು ಸ್ವೀಕರಿಸುವ. ಅರಗಿಸಿಕೊಳ್ಳುವ, ಉಳಿಸಿ ಬೆಳೆಯಿಸಿಕೊಳ್ಳುವ ಹಾಗೂ ಬಳಸುವ ಸಾಮರ್ಥ್ಯಗಳನ್ನೆಲ್ಲ ಗಮನಿಸಿ ವಿದ್ಯಾಭ್ಯಾಸ ಮಾಡಿಸಬೇಕಾಗುವದು. ಅಲ್ಲದೆ ಬಾಲಕನ ಮನೋವಿಕಾಸದ ಮೆಟ್ಟಿಲುಗಳನ್ನು, ಆ ಆ ಅವಸ್ಥೆಗಳಲ್ಲಿ ಪ್ರಧಾನವಾಗಿ ಪ್ರಕಟವಾಗುವ ಲಕ್ಷಣಗಳನ್ನೂ ಶಿಕ್ಷಕನು ತಿಳಿಯಬೇಕಾಗುವದು. ಜ್ಞಾನವನ್ನು ಮಗುವಿಗೆ ಆಕರ್ಷಕ ರೀತಿ

ಯಲ್ಲಿ ಒದಗಿಸುವ, ಅದನ್ನು ದೃಢೀಕರಿಸುವ ರೀತಿಗಳನ್ನು ಅವನು ಅರಿತಷ್ಟು ಅವನ ಕಾರ್ಯವು ಪರಿಣಾಮಕಾರಕವಾಗುವದು. ಒಂದು ವರ್ಗದ ಎಲ್ಲ ಮಕ್ಕಳೂ ಅಥವಾ ಒಂದೇ ವಯಸ್ಸಿನ ಕೆಲಮಕ್ಕಳೂ ಒಂದೇ ರೀತಿಯಾಗಿ ವರ್ತಿಸುವದಿಲ್ಲ. ರುಚಿಗಳು ಭಿನ್ನವಾಗಿಯೂ, ಸಾಮರ್ಥ್ಯಗಳೂ (abilities) ಹೆಚ್ಚು ಕಡಿಮೆಗಳಾಗಿಯೂ ತೋರುವವು. ಕಾರಣ ವ್ಯಕ್ತಿಯ ವಿಶಿಷ್ಟ ಲಕ್ಷಣಗಳನ್ನು ಚೆನ್ನಾಗಿ ಅಭ್ಯಸಿಸಿ ವಿದ್ಯಾಭ್ಯಾಸ ಮಾಡಿಸುವದು ವಿಹಿತ. ಕಲಿಯುವಿಕೆಯಲ್ಲಿ ಪ್ರೇರಣೆಯು(Motivation)ಮಹತ್ವದ್ದು. ಅಧ್ಯಯನ ರೇಷೆ(Learning Curve) ಸರಳವಾಗಿ ಏರುವದಿಲ್ಲ, ಕೆಲಕಾಲ ಏರುವದು, ಬಳಿಕ ಸಮಪಾತಳಿಯಲ್ಲಿ ನಿಲ್ಲುವದು, ಇನ್ನೊಂದು ಅವಧಿ ಕೆಳಗಿಳಿಯುವದು ಮತ್ತೆ ಮೇಲೇರುವದು. ಕೆಲ ಅಭ್ಯಾಸ ವಿಷಯಗಳು ಕೆಲಮಕ್ಕಳಿಗೆ ಸೇರುವುದೇ ಇಲ್ಲ. ಕೆಲಬಾಲಕರು ಪಾಠದಲ್ಲಿ ತಲ್ಲೀನರಾಗಿರುವರು. ಬೇರೆ ಕೆಲವರು ಅತ್ತಿತ್ತ ನೋಡುತ್ತಿರುವರು ಮತ್ತಿತರರು. ಪಾಠಪಲ್ಲಿ ಅವಧಾನವನ್ನೂ ಇಟ್ಟವರಂತೆ ನಟಿಸುತ್ತಿರುವರು. ಒಬ್ಬ ಬಾಲಕನು ಸುಮ್ಮಸುಮ್ಮನೆ ಸುಳ್ಳುಹೇಳುವ ಪ್ರವೃತ್ತಿಯನ್ನು ಬೆಳಸುತ್ತಿರುವನು. ಇನ್ನೊಬ್ಬನು ದುರ್ಬಲ ಬಾಲಕನನ್ನು ಆಗಾಗ್ಗೆ ಗುದ್ದುತ್ತಿರುವನು. ಮತ್ತೊಬ್ಬನು ಕಡ್ಡಿಯ ಚೂರು, ಅರಿವೆಯ ತುಣುಕು, ಖಾಲಿ ದೀಪದಕಡ್ಡೀ ಪೆಟ್ಟಿಗೆ, ಚಿಕ್ಕಚಿತ್ರ ಮೊದಲಾದ ವಸ್ತುಗಳನ್ನು ಕೂಡಹಾಕುತ್ತಿರುವನು. ಒಬ್ಬನು ಹಿರಿಯರಿಗೆ ಅಧೀನನಾಗಿ ನಡೆದುಕೊಳ್ಳುವನು. ಇನ್ನೊಬ್ಬನು ಪರರು ತನ್ನನ್ನು ಯಾವಾಗಲೂ ಮೆಚ್ಚಬೇಕೆಂದೂ, ತನ್ನಮಾತೇ ನಡೆಯಬೇಕೆಂದೂ ಇಚ್ಛಿಸುವನು. ಹೀಗೆ ವ್ಯಕ್ತಿ ವ್ಯಕ್ತಿಗಳ ವರ್ತನೆಯಲ್ಲಿ ಭಿನ್ನ ಭಿನ್ನ ಪ್ರವೃತ್ತಿಗಳು ಕಾರಣವಾಗಿ ನಿಂತಿವೆ ಎಂಬುದನ್ನು ಶಿಕ್ಷಕನು ಅರಿತು ತನ್ನ ಕಾರ್ಯವನ್ನು ಮುಂದುವರಿಸಬೇಕಾಗುವದು. ಕಲಿಸತಕ್ಕ ವಿಷಯದ ಆಯ್ಕೆ ಅದನ್ನು ಕಲಿಸುವಕ್ರಮ, ಮರಳಿ ಬಳಸುವ ರೀತಿ, ವರ್ಗದಲ್ಲಿ ಉದ್ಭವಿಸುವ ಸಮಸ್ಯೆಗಳು, ಶಾಲಾ ಶಾಸನ ವಿಧಾನ, ಶಿಕ್ಷಣದ ಧ್ಯೇಯ, ಧೋರಣಗಳು ಮೊದಲಾದ ಸಂಗತಿಗಳನ್ನೆಲ್ಲ ಶಿಕ್ಷಕನು ಚೆನ್ನಾಗಿ ಅರಿತುಕೊಳ್ಳಬೇಕಾದರೆ, ಮಕ್ಕಳ ಮನಸ್ಸಿನ ಸ್ವರೂಪ ಕ್ರಿಯೆಗಳು, ವಿಕಾಸದ ಅಂತಸ್ತುಗಳು, ಪ್ರವೃತ್ತಿಗಳು ಹಾಗೂ ಭಾವಗಳು, ಅವುಗಳ ಸಂಸ್ಕರಣ, ಬೌದ್ಧಿಕ ಬೆಳವಣಿಗೆ ಹಾಗೂ ಬುದ್ಧಿ—ಮಾಪನ ಇತ್ಯಾದಿ ಮನೋವಿಜ್ಞಾನದ ವಿವಿಧ ಭಾಗಗಳನ್ನೆಲ್ಲ ಶಿಕ್ಷಕನು ಚೆನ್ನಾಗಿ ಅಭ್ಯಸಿಸಬೇಕಾಗುವದು. ಆದುದರಿಂದ ಆಧುನಿಕ ಶಿಕ್ಷಣತಜ್ಞರು ಶಿಕ್ಷಕನಿಗೆ ತಾನು ಕಲಿಸಬೇಕಾದ ಗಣಿತ ಜ್ಞಾನದ ಜೊತೆಗೆ ಕಲಿಯುವ ಮಗುವಿನ ಜ್ಞಾನವೂ ಅಗತ್ಯವೆಂದು ತಿಳಿಹೇಳುವರು. ಮಗುವಿನ ಜ್ಞಾನವೇ ಮನೋವಿಜ್ಞಾನ. ಇದುವೇ ಶಿಕ್ಷಣದಲ್ಲಿ ಹೊಸದೃಷ್ಟಿ. ಶಿಕ್ಷಣಶಾಸ್ತ್ರ ಹಾಗೂ ಮನೋವಿಜ್ಞಾನ ಇವುಗಳ ಮಧುರಮಿಲನವೇ ಹೊಸದೃಷ್ಟಿ ಇದನರಿಯುವುದರಲ್ಲಿಯೇ ಶಿಕ್ಷಕನಿಗೆ ತನ್ನ ಕಾಯಕದ ಮರ್ಮವಿದೆ. ಮನೋವಿಜ್ಞಾನವನ್ನರಿಯದೇ ಕೆಲಸಮಾಡುತ್ತಿರುವ ಶಿಕ್ಷಕನು ಕೈಗೋಲಿಲ್ಲದ ಕುರುಡನಂತೆ ಅಲೆದಾಡುವನು. ಇರುಳಿನಲ್ಲಿ ಕೈದೀವಿಗೆಯಿಲ್ಲದೆ ಅಲೆದಾಡುವ ಮರುಳನ ಸ್ಥಿತಿಯಂತೆ ಅವನ ಗತಿಯಾಗುವದು. ಆದುದರಿಂದ ಮನೋವಿಜ್ಞಾನವು ಶಿಕ್ಷಕನ ಊರುಗೋಲು ಇಲ್ಲವೆ ಕೈದೀವಿಗೆ; ಮನೋವಿಜ್ಞಾನದ ಪರಿಜ್ಞಾನವು ಶಿಕ್ಷಕನ ಒರೆಗಲ್ಲು ಎಂದು ಶಿಕ್ಷಣತಜ್ಞರು ಅಲಂಕಾರಯುಕ್ತ ಮಾತುಗಳಲ್ಲಿ ಹೇಳುತ್ತಿರುವುದು ಅತ್ಯುಕ್ತಿಯಲ್ಲ.

" ಜೀವನ ಶಿಕ್ಷಣದಲ್ಲಿ ಸೌಂದರ್ಯೋಪಾಸನೆಯ ಸ್ಥಾನ "

ಲೇಖಕರು :—ಶ್ರೀ. ಮ. ಗ. ಯಾಜಿ. " ಕನ್ನಡಜಾಣ " ಇಡಗುಂಜಿ (ತಾ. ಹೊನ್ನಾವರ)

ಇಂದು ಭರದಿಂದ ಮುನ್ನುಗ್ಗುತ್ತಿರುವ ಜೀವನ ಶಿಕ್ಷಣ ಯೋಜನೆಯಲ್ಲಿ ಮನೋರಂಜನೆಗೆ ಮಹತ್ವದ ಸ್ಥಾನವು ಲಭಿಸುತ್ತ ಸಾಗಿದೆ. ಮನೋರಂಜನೆಯಲ್ಲಿ ಎರಡು ಪ್ರಕಾರಗಳು. ತಾವು ಮನೋರಂಜನೆಹೊಂದುವದು ಹಾಗೂ ಬೇರೆಯವರ ಮನಸ್ಸನ್ನು ರಂಜಿಸುವದು. ನಾವು ಮನೋರಂಜನೆಯನ್ನು ಹೊಂದುವದರಿಂದ ನಮ್ಮ ನಮ್ಮ ಪ್ರಾಪಂಚಿಕ ದೈಹಿಕ, ಇಲ್ಲವೆ ಇನ್ನಾವದೇ ತರದ ಮನಸ್ಸಿನ ಬೇಗುದಿಯಿಂದ ಅಷ್ಟು ಹೊತ್ತು ವಿಮುಕ್ತರಾದಂತಾಗಿ ನಮ್ಮ ಮನಸ್ಸು ಪ್ರಸನ್ನವಾಗುವದು. ಹೊಸ ಕಾರ್ಯಶಕ್ತಿಯೂ ಉತ್ಸಾಹವೂ ಉಂಟಾಗುವದು. ಬೇರೆಯವರ ಮನಸ್ಸನ್ನು ರಂಜಿಸಬೇಕಾದರೆ ನಾವುಮೊದಲು ಕೆಲವು ಕಲೆಗಳನ್ನು ನಮ್ಮವುಗಳನ್ನಾಗಿ ಮಾಡಿ ಕೊಳ್ಳಬೇಕಾಗುವದು. ನೃತ್ಯ, ಸಂಗೀತ, ವಾದನ, ಹಾಸ್ಯಮೊದಲಾದ ಅನೇಕ ಕಲೆಗಳನ್ನಾಗಲೀ ಅಥವಾ ಯಾವದೇ ಒಂದು ವಿಶಿಷ್ಟ ಕಲೆಯನ್ನಾಗಲೀ ರೂಢಿಸಿಕೊಳ್ಳುವದರಿಂದ ನಾವು ಬೇರೆಯವರಿಗೆ ಮನೋರಂಜನೆಯನ್ನುಂಟುಮಾಡಬಹುದು. ಹೀಗೆ ನಾವು ಕಲೆಗಳನ್ನು ಕರಗತಮಾಡಿಕೊಳ್ಳುವದರಿಂದ ಸಮಾಜದಲ್ಲಿ ಗೌರವವನ್ನು ಗಳಿಸುವದರಜೊತೆಗೆ ಸುಸಂಸ್ಕೃತ ಜೀವನವನ್ನೂ ಶಾಂತ ಮನಸ್ಸನ್ನೂ ತುಂಬು ಹೃದಯವನ್ನೂ ಆರೋಗ್ಯವನ್ನೂ ಪಡೆಯಬಹುದು.

ಆದರೆ ಒಂದು ಮಾತನ್ನು ಮರೆಯತಕ್ಕದ್ದಲ್ಲ. ಅದೇನೆಂದರೆ ನಾವು ಮನರಂಜನೆ ಪಡೆಯಬೇಕಾದರೆ ಇಲ್ಲವೆ ಬೇರೆಯವರ ಮನಸ್ಸನ್ನು ರಂಜಿಸಬೇಕಾದರೆ ಅಷ್ಟು ಹೊತ್ತು ನಮ್ಮ ಇತರ ಎಲ್ಲ ವ್ಯಾಪಾರಗಳನ್ನು ತಾತ್ಪೂರ್ತಿಕವಾಗಿಯಾದರೂ ಮರೆಯಬೇಕಾಗುವದು. ಕೋಪಾವಿಷ್ಟನಾದ ಪ್ರೇಕ್ಷಕನು ನಾಟಕದಲ್ಲಿಯ ಸುಂದರ ಕಲ್ಪನೆಗಳನ್ನು ಕಂಡುಕೊಳ್ಳಲಾರನು. ದುಃಖಿಯಾದ ನಟನು ಶೃಂಗಾರರಸವನ್ನು ಪರಿಣಾಮಕಾರಕವಾಗಿ ವ್ಯಕ್ತಗೊಳಿಸಲಾರನು. ಕೋಪೋದ್ರಿಕ್ತನಾದ ನಟನು ತನ್ನ ನಟನಾ ಕಾರ್ಯದಲ್ಲಿ ಅಯಶಸ್ವಿಯಾಗಿ ಪ್ರೇಕ್ಷಕರ ನಗೆಯಾಟಕ್ಕೆ ಗುರಿಯಾಗಬೇಕಾಗಬಹುದು.

ಇದರಿಂದ ಮನೋರಂಜನೆಗೊಳಿಸುವವರೂ, ಮನೋರಂಜನೆಗೊಳ್ಳುವವರೂ ಒಂದೇ ಮನಸ್ಥಿತಿಯುವರಿರಬೇಕಾಗುವದೆಂಬ ವಿಷಯ ಸ್ಪಷ್ಟವಾಯಿತು. ಆ ಮನಸ್ಥಿತಿಯೇ ಸೌಂದರ್ಯೋಪಾಸನೆ. ಸೌಂದರ್ಯೋಪಾಸಕರಾಗದವರು ಬೇರೆಯವರನ್ನು ಸಂತೋಷಗೊಳಿಸುವದೆಂತು ! ಅಥವಾ ತಾವು ಸಂತೋಷ ಗೊಳ್ಳುವದೆಂತು ! ಮನೋರಂಜನೆ ಎಂದರೆ ಸೌಂದರ್ಯೋಪಾಸನಾಶಕ್ತಿಯನ್ನು ಹೆಚ್ಚಿಸುವದು. ಇದು ನಟನಾರಂಗಸ್ಥಳದ ಮಾತಾದರೆ ಇದೇಮಾತು ಜೀವನರಂಗಸ್ಥಳಕ್ಕೂ ಅನ್ವಯಿಸುವದು. ನಾಟ್ಯರಂಗಸ್ಥಳದ ನಟನು ಅಥವಾ ಪ್ರೇಕ್ಷಕನು ಮನೋರಂಜನೆಯ ಪೂರ್ಣಲಾಭವನ್ನು ಹೊಂದಬೇಕಾದರೆ ಹೇಗೆ ಸೌಂದರ್ಯೋಪಾಸನೆಯತ ಅಗತ್ಯವೋ ಹಾಗೆಯೇ ಜೀವನರಂಗದಲ್ಲಿಯೂ ಮನುಷ್ಯನು ಯಶಸ್ವಿಯಾಗಬೇಕಾದರೆ ಬಂದ ಎಡರು ತೊಡರುಗಳನ್ನೆಲ್ಲ ನಿವಾರಿಸಿ ಆತ್ಮೋನ್ನತಿ ಹೊಂದಬೇಕಾದರೆ ಸೌಂದರ್ಯೋಪಾಸನೆಯು ಅತಿ ಅಗತ್ಯವಾದುದು.

ಹಾಗಾದರೆ ತನ್ನ ಮಕ್ಕಳ ಸೌಂದರ್ಯೋಪಾಸನೆಗಾಗಿ ನಿಸರ್ಗ ಮಾತೆಯು ಏನೇನು ವ್ಯವಸ್ಥೆಯನ್ನೇರ್ಪಡಿಸಿರುವಳೆಂಬದನ್ನು ವಿವೇಚಿಸುವಾ. ನಮ್ಮ ಹಿರಿಯರು ನಿಸರ್ಗವನ್ನೇ ತಮ್ಮ ದೇವರೆಂದು ಸಾರಿದರು. ದೇವರು ಅತ್ಯಂತ ಸುಂದರನೂ, ಶಾಂತನೂ, ಭಕ್ತಪೋಷಕನೂ, ಆಗಿರುವನೆಂದರು. ಬೆಳ್ಳಿಯ ಬೆಟ್ಟದ ತುದಿಯಲ್ಲಿ ವಾಸವಾಗಿರುವ ಈಶ್ವರನು ಮಹಾ ಸೌಂದರ್ಯೋಪಾಸಕನಾಗಿದ್ದಾನೆಂಬ ಬಗ್ಗೆ ಕುರುಹುಗಳನು ಕೊಟ್ಟರು. ಅವನ ತಲೆಯಲ್ಲಿ ಜಲಪಾತ, ಮುಂದುಗಡೆ ಜಾತಿವೈರವನ್ನು ಮರೆತು ಸ್ನೇಹಿತರಂತೆ ವಾಸವಾಗಿರುವ ಬಸವ ಮತ್ತು ಹುಲಿ, ಸಮೀಪದಲ್ಲಿ ಸೌಂದರ್ಯದ

ಖಣಾ ಪರ್ವತಪುತ್ರಿ, ಸ್ವಯಲ್ಲ ಗಾಯಕಿ, ನೃತ್ಯಕ್ಕೆ ಪ್ರಮಥ ಗಣಗಳು, ಕುತ್ತಿಗೆಯಲ್ಲಿ ಅಪ್ಪುತ ರಮ್ಯವೆನಿಸುವ ನಾಗರ ಹಾವಿನ ಸರ, ಹಣೆಯಲ್ಲಿ ಉರಿಗಣ್ಣುಳ್ಳ ಈಶ್ವರನು ಈತನಾದರೆ ಹಾಲಿನ ಸಮುದ್ರದಲ್ಲೇ ವಾಸವಾಗಿರುವ ಮಹಾವಿಷ್ಣುವಿನ ನಾಭಿಯಲ್ಲೇ ತಾವರೆ ಅರಳಿದ, ಹೆಡೆಯಲ್ಲಿ ಮಣಿಯನ್ನು ಹೊತ್ತ ಮಹಾಶೇಷನೇ ಆಸನ. ಮಹಾಲಕ್ಷ್ಮಿಯೇ ಕಾಲನ್ನೊತ್ತುವ ಸೇವಕಿ. ಗಂಧರ್ವ ನಾರದರೇ ಗಾಯಕರು. ಹೇಗಿದೆ ಈ ದೇವರೆಲ್ಲರ ಸೌಂದರ್ಯೋಪಾಸನೆ. ನಾವೇನು ಮಾಡುತ್ತಿದ್ದೇವೆ ? ಇಂಥ ದೇವರ ವಿಗ್ರಹಗಳನ್ನೇ ವಿಧವಿಧವಾಗಿ ಅಲಂಕರಿಸಿ ನೋಡಿ ನಮ್ಮ ಕಣ್ಮನಗಳನ್ನು ತಣಿಸಿಕೊಳ್ಳುತ್ತೇವೆ.

ಇನ್ನು ನಿಸರ್ಗವೇನು ಕಡಿಮೆಯೇ! ಉದಯಾಸ್ತ ಕಾಲಮಾನದ ಮುಗಿಲರಾಗ, ತುಂಬಿದಸಾಗರ, ಅಸಂಖ್ಯ ತಾರೆಗಳಿಂದ ಸುಶೋಭಿತವಾದ ಆಕಾಶ, ಗಗನ ಚುಂಬಿಯಾದ ಗಿರಿಶಿಖರ, ಹೂ ಫಲಗಳಿಂದ ಭರಿತವಾದ ತರುಲತೆಗಳು, ತುಂಟ ಮಗುವಿನಂತೆ ಬಂಡೆಯಿಂದ ಬಂಡೆಗೆ ಹಾರಿ, ನುಸುಳಿ, ಚಿಮ್ಮಿ, ಜಿಳ್ಳೊರೆ ಸುರಿಸಿ, ರಾಗತೆಗೆದು ಹಾಡುತ್ತ ಹರಿಯುವ ತೊರೆಗಳು, ಮುಗಿಲನ್ನು ಭೇದಿಸಿ ಭೋರ್ಗರೆದು ಧುಮುಕುತ್ತಿರುವ ಜಲಪಾತಗಳು, ಮುಂತಾದ ನಟನೆಗಳಿಂದ ನಿಸರ್ಗ ಮಾತೆಯು ತಾನು ಮಹಾ ಸೌಂದರ್ಯೋಪಾಸಕಳೆನಿಸಿಕೊಂಡಿದ್ದಾಳೆ. ಅವಳ ನಾಟಕೀಯತೆ ಬಹುರಮ್ಯವಾಗಿದೆ.

ಈ ವಿಶ್ವದ ಪ್ರತಿ ಅಣುವಿನಲ್ಲಿಯೂ ಸೌಂದರ್ಯವು ಎಷ್ಟೋ ಜನರ ಪಾಲಿಗೆ ಅದೆಲ್ಲ ಮಂಗನ ಕೈಯೊಳಗಿನ ಮಾಣಿಕ್ಯದಂತಾಗಿದೆ. ಆದರೆ ಆ ಸೃಷ್ಟಿ ಸೌಂದರ್ಯವನ್ನು ತುಂಬಿದ್ದರೂ ಕಾಣುವ, ಕಂಡು ನಲಿಯುವ, ನಲಿದು ಸವಿಯುವ, ಸವಿದು ಪುಳಕಗೊಂಡು ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ದೃಷ್ಟಿಬೇಕು; ವಿಚಾರಶಕ್ತಿಬೇಕು. ಸುಸಂಸ್ಕೃತ ವಿಶಾಲ ಮನಸ್ಸುಬೇಕು. ರಸಿಕತೆ ಬೇಕು. ಕುತೂಹಲಬೇಕು. ಪರಮಾತ್ಮನಲ್ಲಿ ಅಚಲವಾದ ಭಕ್ತಿ ಬೇಕು. ಈ ವಿಶ್ವದ ಸೌಂದರ್ಯದಲ್ಲಿ ತಾದಾತ್ಮ್ಯತೆ ಹೊಂದುವ ಸಹಚರ್ಯ ಭಾವಬೇಕು. ತದಾತ್ಮ್ಯಬೇಕು. ತಲ್ಲೀನತೆಬೇಕು. ಪ್ರಾಪಂಚಿಕ ತಾಪತ್ರಯಗಳನ್ನು ಕ್ಷಣಕಾಲವಾದರೂ ಪೂರ್ಣವಾಗಿ ಮರೆಯುವ ಸ್ಥಿರಚಿತ್ತಬೇಕು.

ಪರಮಾತ್ಮನು ಸೌಂದರ್ಯವನ್ನು ನಿರ್ಮಿಸಿದಂತೆ ಅದನ್ನು ಸವಿಯುವ ಸೌಂದರ್ಯೋಪಾಸನೆಯನ್ನು ಸೃಷ್ಟಿಸಿದ್ದಾನೆ. ಸೌಂದರ್ಯೋಪಾಸನೆಯೆಂದರೆ ನಮ್ಮ ಕಣ್ಣಿಗೆಕಾಣುವ ಸೌಂದರ್ಯವನ್ನಷ್ಟೇ ಸವಿಯುವದಲ್ಲ. ಸೌಂದರ್ಯೋಪಾಸನೆಯ ಅರ್ಥವು ತುಂಬಾ ವಿಶಾಲವಾಗಿದೆ. ಕೋಗಿಲೆಯು ಮೈಬಣ್ಣ ಕರಿದಾದರೂ ಅದರ ಸ್ವರದಲ್ಲಿ ಸೌಂದರ್ಯತುಂಬಿದೆ. ಈ ಸ್ವರದ ಸೌಂದರ್ಯವನ್ನು ಸವಿಯಲು ಕಣ್ಣು ನಿಷ್ಪ್ರಯೋಜಕ. ಅದಕ್ಕೆ ಕಿವಿಯೇಬೇಕು. ನಾವು ಕೆರೆಯದಂಡೆಯಲ್ಲಿ ತಂಗಾಳಿಗೆ ಮೈಯೊಡ್ಡಿ ಕುಳಿತಾಗಿನ ಮಂದ ಮಾರುತನ ಸೌಂದರ್ಯವನ್ನು ಸವಿಯಲು ಸ್ಪರ್ಶೇಂದ್ರಿಯವೇಬೇಕು. ಪ್ರಸ್ತುತ ಕಾಣದ ಒಂದು ಸುಂದರ ವಸ್ತುವನ್ನು ನೆನೆಸಿ ಅದರ ಸೌಂದರ್ಯವನ್ನು ಸವಿಯಬೇಕಾದರೆ ನಮಗೆ ಅಂತಹ ಮನಸ್ಸುಬೇಕೇ ಹೊರತು ಇತರ ಇಂದ್ರಿಯಗಳಿಂದ ಅಸಾಧ್ಯವಾಗಿದೆ. ಅದಾವುದೋ ಒಂದು ಕಾಣದ ಸೌಂದರ್ಯವನ್ನು ನೆನೆಸಿ ಕಲ್ಪಿಸಿ ಭಾವಲೋಕಕ್ಕೆ ತೆರಳಿ ಸೌಂದರ್ಯವನ್ನು ಸವಿಯ ಬೇಕಾದರೆ ಭಾವ ಪರಿಶುದ್ಧತೆ, ಕಲ್ಪನಾಸಾಮರ್ಥ್ಯ, ನಿರ್ವಿಕಲ್ಪವಾದ ಸೌಂದರ್ಯೋಪಾಸನೆ ಅಗತ್ಯವಾಗಿ ಬೇಕು.

ಹೀಗೆ ಸೌಂದರ್ಯವು ಅನಂತವಾಗಿದ್ದಂತೆ ಸೌಂದರ್ಯೋಪಾಸನೆಯ ರೀತಿಗಳೂ ಅವುಗಳಲ್ಲಿ ಕಂಡುಬರುವ ವೈವಿಧ್ಯತೆಗಳೂ ಅನಂತವಾಗಿವೆ. ವಸ್ತು ಒಂದೇ ಆದರೂ ಅದರಲ್ಲಿ ಕಾಣುವ ಸೌಂದರ್ಯವು ವ್ಯಕ್ತಿವ್ಯಕ್ತಿಗಳಿಗೂ ಭಿನ್ನವಾಗಿವೆ. ಅದು ಅವರವರ ಮನಸ್ಸು, ಭಾವ ಪರಿಸ್ಥಿತಿ, ಸನ್ನಿವೇಶ, ಮುಂತಾದವುಗಳನ್ನು ಹೊಂದಿಕೊಂಡಿವೆ. ಅದರಂತೆ ಅದನ್ನು ಸವಿಯುವ ಮನಸ್ಸು, ಭಾವಗಳು, ಬೇರೆಯಾದರೂ ಅದು ಪ್ರತಿಯೊಂದು ವ್ಯಕ್ತಿಯಲ್ಲೂ ನೈಸರ್ಗಿಕವಾಗಿಯೇ ತುಂಬಿಕೊಂಡಿದೆ ಎಂಬಲ್ಲಿ ಸಂದೇಹಕ್ಕೆಡೆಯಿಲ್ಲ.

ಹಾವಾಡಿಗನ ಪುಂಗಿಯ ನಾದಕ್ಕೆ ಸಿಟ್ಟಿಗೆದ್ದ ನಾಗರಹಾವು ಶಾಂತವಾಗಿ ತಲೆದೂಗುವದು. ಗೊಲ್ಲನ ಕೊಳಲಿನ

ಧ್ವನಿಯನ್ನು ದನಗಳು ಮೇಯುವದನ್ನು ಬಿಟ್ಟು ಕೊರಳೆತ್ತಿ ಆಲಿಸುವವು. ರಾತ್ರಿಯ ಚಂದ್ರನನ್ನೋ, ಸಂಜೆಯ ಮುಗಿಲ ಬಣ್ಣವನ್ನೋ, ಬಣ್ಣದ ಗೊಂಬೆಯನ್ನೋ, ನದಿಯ ಪ್ರವಾಹವನ್ನೋ, ಪೀಪಿಯ ದನಿಯನ್ನೋ ಕಂಡು, ಕೇಳಿ, ಅಳುತ್ತಿರುವ ಮಗು ತನ್ನ ಅಳುವನ್ನು ನಿಲ್ಲಿಸುವದು. ಇದು ಸೌಂದರ್ಯೋಪಾಸನೆಯಲ್ಲದೆ ಮತ್ತೇನು ? ಬಣ್ಣ ಬಣ್ಣದ ಪಾತರಗಿತ್ತಿಗಳನ್ನು ನೋಡಿ ಕೇಕೆ ಹಾಕಿ ನಕ್ಕು ಕುಣಿಯದಿರುವ ಮಗುವನ್ನು ನಾವು ನೋಡಲಾರೆವು. ಹೀಗೆ ಎಲ್ಲ ಮಗುಗಳಲ್ಲಿಯೂ ಸೌಂದರ್ಯೋಪಾಸನೆಯು ನೈಸರ್ಗಿಕವಾಗಿಯೇ ಇರುತ್ತದೆ.

ಆದರೆ ಎಲ್ಲ ಮಗುಗಳೂ ಸೌಂದರ್ಯೋಪಾಸಕರಿದ್ದಂತೆ ಎಲ್ಲ ಮನುಷ್ಯರೂ ಸೌಂದರ್ಯೋಪಾಸಕರಾಗಿರುವರೇ ? ಮಗುವು ಬೆಳೆದು ದೊಡ್ಡದಾದಂತೆಲ್ಲ ಅದರ ಸೌಂದರ್ಯೋಪಾಸನೆಯು ವಿವಿಧ ಮುಖಗಳಿಂದ ಬೆಳೆಯುತ್ತಿರುವದೇ ? ಇದಕ್ಕೆ ನಾವು ವಿಷಾದದಿಂದ ಇಲ್ಲವೆಂದೇ ಹೇಳಬೇಕಾಗುವದು. ಮಗುವು ಬೆಳೆದು ದೊಡ್ಡದಾದಂತೆಲ್ಲ ಅದು ತನ್ನ ಸಹಜ ಸೌಂದರ್ಯೋಪಾಸನಾಶಕ್ತಿಯನ್ನು ಕಳಕೊಂಡು ಹೆಚ್ಚು ಹೆಚ್ಚು ಒರಟೂ, [illegible] ಸಂವೇದಿಯೂ ಆಗುವದು. ಮತ್ತು ಹೆಚ್ಚು ಹೆಚ್ಚು ತನ್ನ ನೈಸರ್ಗಿಕ ಶಕ್ತಿಯನ್ನು ಕಳಕೊಳ್ಳುವದು. ಆದುದರಿಂದ ನಾವು ಇಂದು ನಿಜವಾದ ಸೌಂದರ್ಯೋಪಾಸಕರನ್ನು ಸಮಾಜದಲ್ಲಿ ತೀರ ಅಪರೂಪವಾಗಿಯೇ ನೋಡಬಹುದು. ಢಂಬಾಚಾರವುಳ್ಳವರನ್ನೂ, ಕಾಮುಕರನ್ನೂ, ಸ್ವಾರ್ಥಿಗಳನ್ನೂ ನಾವು ಸೌಂದರ್ಯೋಪಾಸಕರೆಂದು ಕರೆಯಲಾಗದು. ಸೌಂದರ್ಯೋಪಾಸನೆಯಲ್ಲಿ ಮನಸ್ಸು, ಭಾವ, ಮಲಿನವಾಗಿರಬಾರದು. ಅದು ಪರಮಾತ್ಮನಷ್ಟೇ ಪವಿತ್ರವಾದುದು.

ಯಾವುದಾದರೂ ಒಂದು ಒಳ್ಳೇ ವಸ್ತುವನ್ನು ಕಂಡರೆ ಅದನ್ನು ತಮ್ಮದಾಗಿ ಮಾಡಿಕೊಂಡು "ಮಲ್ಲಿಗೆ ಹೂವಿನಿಂದ ಬಳ್ಳಿಯು ಮಾರಾಟವಾದಂತೆ" ಸ್ವಾರ್ಥಸಾಧಿಸುವ ಸಾಧಕರು ಎಲ್ಲೆಲ್ಲೂ ಎಲ್ಲಕಡೆಗೂ ಇದ್ದೇ ಇರುವರು. ಅದರಂತೆ ಸೌಂದರ್ಯೋಪಾಸನೆಯ ಹೆಸರಿನಿಂದ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವವರಿಗೇನೂ ಇಂದು ಕೊರತೆ ಇಲ್ಲ. ಆದರೆ ಸೌಂದರ್ಯೋಪಾಸನೆಯು ತಮ್ಮ ಸೊತ್ತೆಂದು ಸ್ವಾರ್ಥಿಗಳು ಹೇಳಿಕೊಳ್ಳುತ್ತಿರುವದು ಮಹತ್ವದ್ದಲ್ಲ. ಅದು ಕೆಲವೇ ಜನರ ಸೊತ್ತೆಂಬುದನ್ನು ಸಮಾಜವು ಒಪ್ಪುವದು. ಇದು ತೀರ ವಿಷಾದಕರ. ಅಂದರೆ ಸೌಂದರ್ಯೋಪಾಸನೆಯು ಕೇಂದ್ರೀಕರಣವಾಗಬಾರದು. ಪ್ರತಿಯೊಂದು ವ್ಯಕ್ತಿಯೂ ಸೌಂದರ್ಯೋಪಾಸಕನಾಗಬೇಕು. ಸೌಂದರ್ಯೋಪಾಸನೆಯು ಪ್ರತಿಯೊಬ್ಬನ ಕರ್ತವ್ಯವೆಂದು ಭಾವಿಸುವಂತಾಗಬೇಕು.

ನಿಜವಾದ ಸೌಂದರ್ಯೋಪಾಸಕನು ಸದಾ ಹಸನ್ಮುಖಿಯಾಗಿಯೇ ಇರುವನು. ಜೀವನದಲ್ಲಿಯ ತೊಂದರೆ, ತಾಪತ್ರಯಗಳು ದುಃಖ—ದುಮ್ಮಾನಗಳು ಅವನ ಮುಖವನ್ನು ಬಾಡಿಸಲಾರವು. ಶಾಂತಹೃದಯವನ್ನು ಕಲಕಲಾರವು. ಪವಿತ್ರಧ್ಯೇಯದಿಂದ ಅವನನ್ನು ಪರಾವೃತ್ತಗೊಳಿಸಲಾರವು. ಅವನು ಸದಾ ಸಂತುಷ್ಟಚಿತ್ತನೂ ನಿತ್ಯ ತೃಪ್ತನೂ, ಪ್ರಿಯವಾದಿಯೂ, ವಿನಯಶೀಲನೂ ಪರಮಾತ್ಮನಲ್ಲಿ ಅಚಲ ಶ್ರದ್ಧೆಯುಳ್ಳವನೂ ಇರುವನು. ಈ ಎಲ್ಲ ಗುಣಗಳನ್ನು ನಾವು ಸಣ್ಣ ಮಗುವಿನಲ್ಲಿ ಸಹಜವಾಗಿ ಕಾಣಬಹುದು.

ಸೌಂದರ್ಯೋಪಾಸನೆಯು ಸುಖ ಜೀವನದ ತಳಹದಿ. ಸುಖವೆಂಬುದು ನಮ್ಮ ಹೃದಯದಲ್ಲಿರತಕ್ಕ ವಸ್ತುವೇ ಹೊರತು ಹೊರಗಿರುವ ವಸ್ತುವಲ್ಲ ಆದರೆ ನಾವು ಇಂದು ಮಾಡುತ್ತಿರುವದೇನು ? ಸುಖಜೀವನ ಬಯಸಿ ಸ್ವಾರ್ಥಿಗಳಾಗಿ ಒರಟರೂ, ಅಹಂಕಾರಿಗಳೂ, ಮತ್ತರೂ ಆಗಿ ಸೌಂದರ್ಯೋಪಾಸನೆಯನ್ನು ದೊಡ್ಡತನದ ಲಕ್ಷಣವೆಂದು ಬಗೆದು ನಿಜವಾದ ಸೌಂದರ್ಯದ ವಿಷಯವನ್ನು ಮರೆತು ಕೊನೆಗೆ ಅಸಂತುಷ್ಟರಾಗಿ ಸುಖವೆಂಬ ಬಿಸಿಲುಗುದುರೆಯ ಬೆನ್ನುಹತ್ತಿ ತೊಳಲಾಡುತ್ತಿದ್ದೇವೆ.

ಹುಣ್ಣಿಮೆಯ ಚಂದ್ರನನ್ನು ನೋಡಿ ಮಗುವು ಸಂತೋಷ ಪಡುವಂತೆ ನಮಗೇಕೆ ನಿರ್ವಿಕಲ್ಪವಾದ ಸಂತೋಷವಾಗುತ್ತಿಲ್ಲ! ಅದಕ್ಕೆ ನಾವು ಬೆಳೆದು ಬಂದ ಸನ್ನಿವೇಶ, ಪರಿಸ್ಥಿತಿ, ಸಮಾಜದ ಕೃತ್ರಿಮ ಜೀವನ

ಇವೇ ಕಾರಣಗಳು. ಎಷ್ಟೋಸಾರಿ ನಾವು ನಿಜವಾದ ಸೌಂದರ್ಯೋಪಾಸನೆಯನ್ನು ಸಂಪ್ರದಾಯದ ಭಯದಿಂದ ಹತ್ತಿಕ್ಕುತ್ತೇವೆ. ಆದರೆ ಸೌಂದರ್ಯೋಪಾಸನೆಯೆಂದರೆ ಸ್ವಾರ್ಥ ಸಾಧನೆಗೆ ದಾರಿ ಅಲ್ಲ! ಅಂಥ ದಾರಿ ನಿಜವಾದ ಸೌಂದರ್ಯೋಪಾಸನೆಯೇ ಅಲ್ಲ. ಸೌಂದರ್ಯೋಪಾಸನೆಯು ಪವಿತ್ರವಾದುದು. ನೈಸರ್ಗಿಕವಾದುದು. ಆನಂದದಾಯಕವಾದುದು. ಮಗುವಿನಲ್ಲಿರುವ ನೈಸರ್ಗಿಕ ಸೌಂದರ್ಯೋಪಾಸನೆಯು ಕಮರದಂತೆ ಶಿಕ್ಷಣದಲ್ಲಿ ನಿಜವಾದ ಸೌಂದರ್ಯೋಪಾಸನೆಗೆ ಸ್ಥಾನ ದೊರೆಯಬೇಕು. ಪಠ್ಯ ಹಾಗೂ ಪಠ್ಯೇತರ ವಿಷಯಗಳನ್ನು ಕಲಿಸುವಾಗ ಒದಗುವ ಸಂದರ್ಭಗಳನ್ನು ಸೌಂದರ್ಯೋಪಾಸನೆಗಾಗಿ ಬಳಸಿಕೊಳ್ಳಬೇಕು. ಶಿಕ್ಷಕರು ಮಗುವಿನಲ್ಲಿರುವ ಸಹಜ ಸೌಂದರ್ಯೋಪಾಸನೆ ಎಂಬ ಗಿಡಕ್ಕೆ ನೀರೆರೆದು ಗೊಬ್ಬರಹಾಕಿ ಬೆಳೆಸಬೇಕು. ಅದು ಮರುಭೂಮಿಯಲ್ಲಿ ಬಿದ್ದ ಬೀಜದಂತೆ ಸುಟ್ಟು ಕಮರಿ ಹೋಗಲು ಬಿಡಬಾರದು. ಅಂದರೇನೇ ಅವರು ನಿಸರ್ಗ ಶಕ್ತಿಯನ್ನು ಅರಿತು ನೈಸರ್ಗಿಕ ಒಲವಿನಂತೆ ತಮ್ಮ ಜೀವನ ಸಾಗಿಸಲು ಸಮರ್ಥರಾಗುವರು. ಇದೇ ಜೀವನ ಶಿಕ್ಷಣದ ಸಾರ್ಥಕತೆ. ಜೀವನ ಶಿಕ್ಷಣವು ಯಶಸ್ವಿಯಾಗಬೇಕಾದರೆ ಮಗುವಿನಲ್ಲಿರುವ ನೈಸರ್ಗಿಕ ಸೌಂದರ್ಯೋಪಾಸನಾ ಸಾಮರ್ಥ್ಯವನ್ನು ಬೆಳೆಸಿ ಅದನ್ನು ಪರಿಪೂರ್ಣಾವಸ್ಥೆಗೊಯ್ಯಬೇಕು. ಇದು ಅಹಿಂಸಾತ್ಮಕವಾದ ಪ್ರಾಮಾಣಿಕ ಹಾಗೂ ಕರ್ತವ್ಯದಕ್ಷ ಆತ್ಮವಿಶ್ವಾಸೀ ಶೋಷಣ–ರಹಿತ ಸಮಾಜದ ರಚನೆಗೆ ಮಹತ್ವದ ದಾರಿಯಾದೀತು ಹಾಗೂ ಮಹಾತ್ಮರ ಬಯಕೆ ಪೂರ್ತಿಯಾದೀತು.

ಸಮಾಜ ವಿಕಾಸ ಕೇಂದ್ರಗಳು

ಲೇಖಕರು :— ಶ್ರೀ. ಫ. ಚ. ಉಣಕಲ್ಲ, ಬಿ. ಎ. ಬಿ. ಟಿ, ಡಿ. ಬಿ. ಇ., ಡಿ. ಪಿ. ಇಡಿ. ಧಾರವಾಡ.

(ಭಾಗ ೨)

ಮಹಾತ್ಮಾಗಾಂಧಿ ಜಯಂತಿಯನ್ನು ಸಮಾಜವಿಕಾಸ ಕೇಂದ್ರದಲ್ಲಿ ಆಚರಿಸುವ ಒಂದು ಚಟುವಟಿಕೆಯನ್ನು ಹೇಗೆ ಸಂಘಟಿಸಿ ಜರಗಿಸಬಹುದೆಂಬುದನ್ನು ಶಿಕ್ಷಕರ ಮಾರ್ಗದರ್ಶನಕ್ಕಾಗಿ ಇಲ್ಲಿ ಕೊಡಲಾಗಿದೆ; ಆದರೆ ಶಿಕ್ಷಕರು ಸ್ಥಳೀಕ ಪರಿಸ್ಥಿತಿಗನುಸರಿಸಿ ತಮಗೆ ಸರಿಕಂಡಂತೆ ಅದರಲ್ಲಿ ಮಾರ್ಪಾಟು ಮಾಡಿಕೊಳ್ಳಬಹುದು. ಈ ಚಟುವಟಿಕೆಯನ್ನು ಸಂಘಟಿಸುವಲ್ಲಿ (೧) ಯೋಜನೆ (೨) ಕಾರ್ಯನಿರ್ವಹಣೆ (೩) ಪರಿಶೀಲನೆ — ಈ ಮೂರು ಮೆಟ್ಟಿಲುಗಳು ಮಹತ್ವವಾದವುಗಳು.

(೧) **ಯೋಜನೆ:**— ಜಯಂತಿಯನ್ನಾಚರಿಸುವ ದಿನಾಂಕಕ್ಕಿಂತ ಸಾಕಷ್ಟು ಮೊದಲು ಪ್ರಧಾನ ಗುರುಗಳ ಹಾಗು ಉಪಗುರುಗಳ ಒಂದು ಚಿಕ್ಕ ಸಭೆ ಜರುಗಿಸಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜರಗಿಸುವಂತೆ ಹೊಣೆ ಹೊರುವ ಸಮರ್ಥ ವರ್ಗ(...) ...ದೆಂಬುದನ್ನು

ಕಂಡುಹಿಡಿಯಬೇಕು. ಆ ವರ್ಗವು ಉಳಿದ ವರ್ಗಗಳ ಸಹಕಾರದಿಂದ ಕಾರ್ಯವನ್ನಾರಂಭಿಸಲು ವಿವಿಧ ಕೆಲಸಗಳನ್ನು ಹಂಚಿಕೊಡಬೇಕು. ಕೇಂದ್ರದ ಮಕ್ಕಳಲ್ಲಿ ಚುನಾವಣೆ ಜರುಗಿ ಒಂದು ಕಾರ್ಯಕಾರಿ ಮಂಡಲವು ರಚಿತವಾಗಬೇಕು. ಪ್ರಧಾನಗುರುಗಳು ಜಯಂತಿಯ ಕಾರ್ಯಕ್ರಮದ ವಿವರಗಳನ್ನೊಳಗೊಂಡ ಒಂದು ಯೋಜನೆಯನ್ನು ಸಿದ್ಧಪಡಿಸಿ ಕಾರ್ಯಕಾರಿ ಮಂಡಳಕ್ಕೆ ಕೊಡಬೇಕು; ಈ ಕಾರ್ಯಕ್ರಮದ ಪಟ್ಟಿಯಲ್ಲಿ ಜಯಂತಿಯನ್ನು ಆಚರಿಸುವ ರೀತಿ, ಮುಖ್ಯ ಅತಿಥಿಗಳನ್ನು ಆರಿಸುವದು, ಅತಿಥಿಗಳಿಗೆ ಆಮಂತ್ರಣ ಕೊಡುವ ಹೊಣೆ, ಮಂದಿರ ಅಥವಾ ಮಂಟಪವನ್ನು ತಳಿರು, ತೋರಣ, ಪರಪರೆ ಇತ್ಯಾದಿಗಳಿಂದ ಶೃಂಗರಿಸುವ ಕೆಲಸ, ಸಫಾಯಿ, ಕಾರ್ಯಕ್ರಮ ಜರಗುವಸ್ಥಳದ ಆಯ್ಕೆ; ಕೇಂದ್ರವು ಹಾಗು ಇತರರು ಪ್ರದರ್ಶಿಸಬಹುದಾದ ಚಟುವಟಿಕೆಗಳು ಇವೆಲ್ಲ ವಿಷಯಗಳು ಅಡಕವಾಗಿರಬೇಕು. ಕಾರ್ಯಕಾರಿ ಮಂಡಲವು ವಿವಿಧ ಉಪಸಮಿತಿಗಳನ್ನು ರಚಿಸಿ ಅವುಗಳ ಮುಖಾಂತರ ಈ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಹೊಣೆಯನ್ನು ಹೊತ್ತು ಕಾರ್ಯರಂಗಕ್ಕಿಳಿಯುವಂತೆ ನೋಡಿಕೊಳ್ಳಬೇಕು. ಶಿಕ್ಷಕರು ವಿದ್ಯಾರ್ಥಿಗಳ ಹಿಂದೆ ನಿಂತು ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡತಕ್ಕದ್ದು ಹಾಗು ಅವರು (ಶಿಕ್ಷಕರು) ಜಯಂತಿಯು ಇಡೀ ಸಾಲೆಗೆ (ಕೇಂದಕ್ಕೆ) ಸಂಬಂಧಿಸಿದ್ದೆಂದು ತಿಳಿದು ಪ್ರತಿಯೊಂದು ವರ್ಗವು ಅದು (ಕಾರ್ಯಕ್ರಮ) ಯಶಸ್ವಿಯಾಗುವವನಲ್ಲಿ ಉತ್ತಮೋತ್ತಮ ಸಹಕಾರವನ್ನು ನೀಡುವಂತೆ ದಕ್ಷತೆ ವಹಿಸಬೇಕು. ಮುಖ್ಯ ಅತಿಥಿಯನ್ನು ಆರಿಸುವ ಹೊಣೆಯನ್ನು ಮಕ್ಕಳಿಗೇ ಬಿಟ್ಟುಕೊಟ್ಟು, ಸಾಲೆ, ಸಮಾಜ, ಹಳ್ಳಿ ಅಥವಾ ನಾಡಿಗೆ ಸಲ್ಲಿಸಿದ ಸೇವೆಯನ್ನು ಮನದಂದು ಆರಿಸಬೇಕೆ ವಿನಃ ವ್ಯಕ್ತಿಯ ಸಿರಿವಂತಿಕೆ, ಹುದ್ದೆಗಳನ್ನು ನೋಡಿ ಆರಿಸಕೂಡದೆಂಬ ಸೂಚನೆಯನ್ನು ಕೊಟ್ಟ ಶಿಕ್ಷಕರು ಮಾರ್ಗದರ್ಶನಮಾಡಬೇಕು.

ಮೇಲೆ ನಮೂದಿಸಿದಂತೆ ಕಾರ್ಯಕ್ರಮದ ಬೇರೆಬೇರೆ ಅಂಗಗಳೆಂದರೆ (೧) ಕಾರ್ಯಕ್ರಮ ನೆರವೇರುವ ಸ್ಥಳದ ಆಯ್ಕೆ (೨) ಸಫಾಯಿ (೩) ಸ್ಥಳವನ್ನು ಶೃಂಗರಿಸುವದು (೪) ಆಮಂತ್ರಣ ಪತ್ರಿಕೆಗಳನ್ನು ಕಳಿಸುವದು (೫) ಸ್ವಾಗತಿಸುವದು (೬) ಕೂಡ್ರುವ ವ್ಯವಸ್ಥೆ (೭) ಸ್ವಯಂ ಸೇವಕರ ಪಥಕ (೮) ನಗರ ಸಂಕೀರ್ತನೆ, ಧ್ವಜವಂದನೆ, ನೂಲುವಸ್ಪರ್ಧೆ, ಚರ್ಚಾಕೂಟ, ಇತ್ಯಾದಿ ಚಟುವಟಿಕೆಗಳ ಸರಿಯಾದ ಯೋಜನೆ (೯) ಆಭಾರಮನ್ನಣೆ (೧೦) ರಾಷ್ಟ್ರಗೀತೆ. ಕಾರ್ಯಸಂಘಟನೆಯ ವಿವರಗಳನ್ನು ಇಲ್ಲಿ ಕೊಡಲಾಗಿದೆ.

(ಅ) ಎಷ್ಟು ಜನ ನೆರೆಯಬಹುದೆಂಬು ಅಂದಾಜು ಮಾಡಿ ಎಲ್ಲರೂ ಸರಿಯಾಗಿ ಕುಳಿತುಕೊಳ್ಳುವಂತೆ (ಹೆಣ್ಣುಮಕ್ಕಳಿಗೆ ಹಾಗು ಗಂಡುಮಕ್ಕಳಿಗೆ ಬೇರೆ ಬೇರೆ ಸ್ಥಳ ನಿರ್ದಿಷ್ಟಗೊಳಿಸಬೇಕು.) ಯೋಗ್ಯ ಸ್ಥಳವನ್ನು ಆರಿಸಬೇಕು.

(ಬ) ಪ್ರತಿಯೊಂದು ವರ್ಗದ ವಿದ್ಯಾರ್ಥಿಗಳು ತಮ್ಮ ತಮ್ಮ ವರ್ಗದ ಸಫಾಯಿ ಮಾಡಬೇಕಲ್ಲದೆ ಸ್ವಚ್ಛತೆಯ ಸಮಿತಿಯವರು ಹಂಚಿಕೊಟ್ಟ ಇತರ ಸಾಮಾನ್ಯ ಸಫಾಯಿಯನ್ನು ಮಾಡತಕ್ಕದ್ದು

(ಕ) ಜಯಂತಿಗೆ ತಕ್ಕಂತೆ ಶೃಂಗಾರವಿರಬೇಕೆಂಬುದನ್ನು ನೆನಪಿನಲ್ಲಿಡಬೇಕು. ಉದಾ:- ತಳಿರು, ತೋರಣ, ಪರಪರೆ, ರಂಗೋಲಿ, ಬಣ್ಣದಕಾಗದಗಳಿಂದ ಮಾಲೆ ತಯಾರಿಸುವದು ಇತ್ಯಾದಿ ಕೆಲಸಗಳನ್ನು ವಿವಿಧ ವರ್ಗಗಳಲ್ಲಿ ಹಂಚಿಕೊಡಬೇಕು. ಪರಪರೆಮಾಡುವ ಕೆಲಸವನ್ನು ಕೆಳಗಿನ ವರ್ಗದ ಹುಡುಗರಿಗೆ ಒಪ್ಪಿಸಬಹುದು. ಈ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳಿಗೆ ಸ್ವಾಭಾವಿಕವಾಗಿ ಭೂಮಿತಿಯ ಹಾಗು ಬಣ್ಣದ ಕಲ್ಪನೆ, ಅಚ್ಚುಕಟ್ಟುತನ, ವ್ಯವಹಾರ ಜ್ಞಾನ, ಸಹಕಾರ ಇವು ಬಾಲಕರಲ್ಲಿ ಬೆಳೆದು ಬರುವವು.

(ಡ) ರಂಗೋಲಿಯ ಕೆಲಸವನ್ನು ಮತ್ತು ಹಾರತುರಾಯಿ ಮಾಡುವ ಹಾಗು ರಂಗೋಲಿಯ ಬೇರೆ ಬೇರೆ ಡಿಝಾಯಿನು ಹಾಕುವ ಮತ್ತು ಅರಿವೆ ಅಥವಾ ಕಾಗದಗಳಿಂದ ಬ್ಯಾಜು ತಯಾರಿಸುವ ಕೆಲಸವನ್ನು ವಿದ್ಯಾರ್ಥಿನಿಯರಿಗೆ ಒಪ್ಪಿಸುವದು ಹೆಚ್ಚು ವಿಹಿತವಾದುದು. ಈ ಚಟುವಟಿಕೆಗಳ ಮುಖಾಂತರ ಚಿತ್ರಕಲೆ, ಅಚ್ಚುಕಟ್ಟುತನ ವಿಷಯಗಳು ಮನನವಾಗುವವು.

(ಇ) ಆಮಂತ್ರಿತರ ಒಂದು ಯಾದಿಯನ್ನು ಸಿದ್ಧಪಡಿಸಿ ಅವರೆಲ್ಲರಿಗಾಗಿ ಆಮಂತ್ರಣ ಪತ್ರಿಕೆಗಳನ್ನು ಹಾಗು ಪಾಕೀಟುಗಳನ್ನು ತಯಾರಿಸಿ ಸುಂದರ ಬರಹಗಾರರೆಂದೆನಿಸಿಕೊಳ್ಳುವ ವಿದ್ಯಾರ್ಥಿಗಳಿಂದ ಬರೆಯಿಸಿ ಕಳಿಸುವ ವ್ಯವಸ್ಥೆ ಮಾಡುವದು. ಇದರಲ್ಲಿ ಸಹ ಭೂಮಿತಿ, ಗಣಿತ, ಬರೆಹ ಈ ವಿಷಯಗಳ ರೂಢಿಯಾಗುವದು.

ಇವಲ್ಲದೆ ಕೆಳಗಿನ ವರ್ಗಗಳಿಗೆ ಮಹಾತ್ಮರು ವಿವಿಧ ರಂಗಗಳಲ್ಲಿ ಮಾಡಿದ ಕಾರ್ಯವನ್ನು ತೋರಿಸುವ ಭಾವಚಿತ್ರಗಳು ಮತ್ತು ರಾಷ್ಟ್ರಕ್ಕೆ ಮತ್ತು ಮಾನವಕುಟುಂಬಕ್ಕೆ ಗಾಂಧಿಯವರಂತೆ ಸೇವೆಸಲ್ಲಿಸಿದ ವಿಭೂತಿಗಳ ಚಿತ್ರಗಳನ್ನು ಕಲೆಹಾಕಿ ಮಂಟಪದಲ್ಲಿ ಕಾಣುವಂತೆ ಹಾಕಿ ಶೃಂಗರಿಸುವ ಕೆಲಸವನ್ನು ಕೊಡಬಹುದು.

(ಫ) ಪ್ರದರ್ಶನ ಹಾಗು ಇತರ ಚಟುವಟಿಕೆಗಳನ್ನು ಏರ್ಪಡಿಸುವ ಚಿಕ್ಕ ಸಮಿತಿಗಳಿರಬೇಕು; ಅವುಗಳಲ್ಲಿ ಪ್ರಾಮುಖ್ಯವಾಗಿ (೧) ಸಂಘಟಿಸುವ ಸಮಿತಿ (೨) ಕಾರ್ಯಕ್ರಮದ ಸಮಿತಿ (೩) ಸ್ವಯಂಸೇವಕರ ಸಮಿತಿ (೪) ಸ್ವಾಗತ ಸಮಿತಿ ಎಂದು ವಿಂಗಡಿಸಬಹುದು. ಏರ್ಪಡಿಸತಕ್ಕ ಪ್ರದರ್ಶನದಲ್ಲಿ, ಮಕ್ಕಳು ನೆಯ್ದ ಅರಿವೆ, ಕೂತ ನೂಲು, ಇತರ ಕೈಕೆಲಸ; ಇತಿಹಾಸ, ಭೂಗೋಲ ಹಾಗು ವಿಜ್ಞಾನ ಇತ್ಯಾದಿ ವಿಷಯಗಳ ಬಗೆಗೆ ಆಲೇಖ, ರೇಖಾಚಿತ್ರ, ಪಟಗಳು, ಮಾದರಿಗಳು (ಮಾಡೆಲ್ಸು) ಮಕ್ಕಳ ಕೈಬರೆಹದ ದಿನಪತ್ರಿಕೆ, ಮಾಸಿಕ ಇದಲ್ಲದೆ ಗಾಂಧೀಜಿಯವರು ಬರೆದ ಪುಸ್ತಕಗಳು, ಅವರ ತ್ಯಾಗ, ಸೇವೆ, ಸತ್ಯ, ಅಹಿಂಸೆ, ವಿಶ್ವಬಂಧುತ್ವ ಅವರು ಹಾಕಿಕೊಟ್ಟ ವಿಧಾಯಕ ಕಾರ್ಯಕ್ರಮ ಇತ್ಯಾದಿ ಗುಣಗಳ ಬಗೆಗೆ ಗಣ್ಯವ್ಯಕ್ತಿಗಳು ಬರೆದ ಲೇಖನಗಳನ್ನು, ಚಿತ್ರಪಟಗಳನ್ನು ಸಂಗ್ರಹಿಸಿ ಸಂದರ್ಶಕರ ಅವಗಾಹನೆಗಾಗಿ ಇಡಬೇಕು. ಸಂಘಟಿಸುವ ಸಮಿತಿಯು ಎಲ್ಲ ವರ್ಗಗಳಲ್ಲಿ ಸುತ್ತುವರೆದು ಕಾರ್ಯದಲ್ಲಿ ಯಾವ ಯಾವ ವರ್ಗಗಳಿಂದ ಯಾವ ಯಾವ ನೆರವು ಬೇಕಾಗಿದೆ ಹಾಗೂ ಯಾವ ದಿನಾಂಕದಿಂದ ಕಾರ್ಯ ಪ್ರಾರಂಭಿಸತಕ್ಕದ್ದೆಂಬುದರ ಬಗೆಗೆ ತಿಳಿಸುವದು.

(ಗ) ವಿದ್ಯಾರ್ಥಿಗಳು ಮಹಾತ್ಮಾಜಿಯವರ ಜೀವನದ ವಿವಿಧ ರಂಗಗಳಲ್ಲಿ ಅವರು ಎಸಗಿದ ಕ್ರಾಂತಿಕಾರಕ ಕಾರ್ಯಗಳನ್ನೊಳಗೊಂಡ ವಿಷಯಗಳನ್ನು ಆಯ್ದುಕೊಂಡು ಅವುಗಳ ಬಗೆಗೆ ಒಂದು ವಿಚಾರಸಂಕೀರಣವನ್ನು ಇಟ್ಟುಕೊಳ್ಳಬಹುದು. ಉದಾ:— ಗಾಂಧೀಜಿಯವರ ಸತ್ಯ, ಅಹಿಂಸೆಯ ಮಾರ್ಗ; ಬಡತನ, ಸಾಮ್ರಾಜ್ಯಶಾಹಿ, ಅಸತ್ಯ, ದಾಸ್ಯತ್ವ ಇವುಗಳ ವಿರುದ್ಧ ಅವರ ಹೋರಾಟ; ಸ್ವಾತಂತ್ರ್ಯಕ್ಕಾಗಿ "ಮಾಡು ಇಲ್ಲವೆ ಮಡಿ" ಎಂಬ ಆಂದೋಲನ; ''ವರ್ಗರಹಿತ ಸಮಾಜದ ರಚನೆ" ಈ ವಿಶ್ವದ ಬಗೆಗೆ ಅವರ ಕ್ರಾಂತಿಕಾರಕ ವಿಚಾರಗಳು; ರಕ್ತಪಾತವಿಲ್ಲದೆ ಸ್ವಾತಂತ್ರ್ಯಗಳಿಸಿದ ಮಾರ್ಗ; ಗಾಂಧೀಜೀಯವರ ವಿದ್ಯಾರ್ಥಿ ಜೀವನ, ಕೌಟುಂಬಿಕ ಜೀವನ; ಹಳ್ಳಿಗಳ ಬಗೆಗೆ ಅವರ ಕಲ್ಪನೆಗಳು; ಗಾಂಧೀಜಿಯವರು ಹಾಗು ಚಿಕ್ಕ ಮಕ್ಕಳು; ಗಾಂಧೀಜಿಯೂ ಹರಿಜನೋದ್ಧಾರವೂ; ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಗಳು; ಅವರ ಅನುಯಾಯಿಗಳು ಹಾಗು ಸ್ವಾತಂತ್ರ್ಯವೀರರು; ಮಾನವ ಕುಟುಂಬದ ಕಲ್ಯಾಣಕ್ಕಾಗಿ ಅವರು ಸಲ್ಲಿಸಿದ ಅಮೋಘ ಕಾಣಿಕೆ;— ಇತ್ಯಾದಿ ವಿಷಯಗಳನ್ನು ಆಯ್ದುಕೊಳ್ಳಬಹುದು.

(ಮುಂದುವರೆಯುವದು)

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಪ್ರೊ. ಎಸ್. ಕೆ. ಜೋಶಿ, ಮತ್ತು
ಪ್ರೊ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧-೧೨-೦, ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಕನ್ನಡ 'ವರ್ಷ ಪ್ರಾಯಿಜ' ಪರೀಕ್ಷೆ—೧೯೫೬

(ಮುಂಬಯಿ ಸರಕಾರದ ವಿದ್ಯಾ ಖಾತೆಯು ತಾ. ೪-೨-೧೯೫೪ ರ ಗೊತ್ತುವಳಿ ನಂCEF 1054 ಮತ್ತು ಪ್ರಕಟನೆಯ ಮೇರೆಗೆ)

೧. **ಪರೀಕ್ಷೆಯ ವಿಷಯುಗಳು** :- (೧) ವ್ಯಾಕರಣ ಮತ್ತು ಛಂದಸ್ಸು (೨) ಹಳಗನ್ನಡ ನಿಬಂಧ (೩) 'ಕನ್ನಡ ಬಾವುಟ' ದಿಂದ ಕವಿತೆಗಳು. (೪) ಹಳಗನ್ನಡದ ಗೊತ್ತಿದ್ದ ಗದ್ಯಸಂಗ್ರಹ (೫) ಹೊಸಗನ್ನಡ ನಿಬಂಧ. (೬) ೧೨ನೆಯ ಶತಮಾನದ ಕನ್ನಡ ಸಾಹಿತ್ಯ.

೨. **ಬಹುಮಾನ** :- ಈ ಮೊದಲು ಇದ್ದ ೮೦ ರೂಪಾಯಿಗಳ ಒಂದೇ ಬಹುಮಾನದ ಬದಲಾಗಿ ಇನ್ನು ಮುಂದೆ ಈಗ ೫೦ ಹಾಗು ೩೦ ರೂ. ಗಳ ಎರಡು ಬಹುಮಾನಗಳು ಕೊಡಲ್ಪಡುವವು. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನಿಗೆ ಒಟ್ಟಿನಲ್ಲಿ ಕನಿಷ್ಟ ೧೦೦ ಕ್ಕೆ ೭೫, ಎರಡನೆಯ ಬಹುಮಾನ ಪಡೆಯುವ ಉಮೇದವಾರನಿಗೆ ಒಟ್ಟಿನಲ್ಲಿ ಕನಿಷ್ಟ ೧೦೦ ಕ್ಕೆ ೫೦ ಗುಣಗಳು ದೊರೆಯಲೇಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು. ಒಂದು ವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವುದು.

೩. **ಅರ್ಜಿ ಮಾಡತಕ್ಕ ಅವಧಿ** :- ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೫೬ ಅಗಸ್ಟ ೧ನೆಯ ತಾರೀಖಿನೊಳಗಾಗಿ ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಇವರಿಗೆ ಮುಟ್ಟುವಂತೆ ಅಪೇಕ್ಷಾ ಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ** :- ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಈ ಪರೀಕ್ಷೆಯು ೧೯೫೬ ನೆಯ ಇಸವಿ ಅಗಸ್ಟ ತಿಂಗಳಲ್ಲಿ ನಡೆಯುವದು. ತಾರೀಖು, ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವುದು.

೫. **ಪ್ರಶ್ನೆ ಕಾಗದಗಳು** :- ಪ್ರತಿಯೊಂದು ಕಾಗದಕ್ಕೆ ೩ ಗಂಟೆ ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯ ಕಾಗದ: ಹಳಗನ್ನಡ ನಿಬಂಧ ೪೦ ಗುಣಗಳು. ಹೊಸಗನ್ನಡ ನಿಬಂಧ ೬೦ ಗುಣಗಳು.

ಎರಡನೆಯ ಕಾಗದ: ಕನ್ನಡ ಬಾವುಟದ ಕವಿತಾಭಾಗ ೫೦ ಗುಣಗಳು. ಹಳಗನ್ನಡದ ಗೊತ್ತಿದ್ದ ಗದ್ಯಸಂಗ್ರಹ ೫೦ ಗುಣಗಳು.

ಮೂರನೆಯ ಕಾಗದ: ವ್ಯಾಕರಣ ಮತ್ತು ಛಂದಸ್ಸು ೫೦ ಗುಣಗಳು. ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ೫೦ ಗುಣಗಳು.

ಕನ್ನಡಬಾವುಟದಲ್ಲಿಯ ಕವಿತಾ ವಿವರಣೆ: (೧) ರಾಷ್ಟ್ರಕೂಟ ರಾಜನ ಶಾಸನ (ಪುಟ ೫) (೨) ಕನ್ನಡನಾಡಿನ ಚೆಲುವು (ಪುಟ ೧೭ ರಿಂದ ೨೦ ಪೂರ್ಣ) (೩) ಬಸವಣ್ಣನವರ ಗುಣ (ಪುಟ ೪೫) (೪) ಮಹಾದೇವಿಯಕ್ಕ (ಪುಟ ೪೬-೪೯ ಪೂರ್ಣ) (೫) ಕನಕದಾಸರು (ಪುಟ ೫೯-೬೧ ಪೂರ್ಣ) (೬) ಅರಣೋದಯ (ಪುಟ ೯೭) (೭) ಕರ್ನಾಟದ ವೈಭವ (ಪುಟ ೧೦೦) (೮) ಕೊಡಗು (ಪುಟ ೧೦೨) (೯) ತೆಂಕಣ ಗಾಳಿಯಾಟ (ಪುಟ ೧೦೬) (೧೦) ಕುಮಾರವ್ಯಾಸ (ಪುಟ ೧೨೧) (೧೧) ಬೇಲೂರಿನ ಶಿಲಾಬಾಲಿಕೆಯರು (ಪುಟ ೧೨೬).

ಹಳಗನ್ನಡದ ಗೊತ್ತಿದ್ದ ಗದ್ಯ: ಪಂಡಿತ ಮ. ಪ್ರ. ಪೂಜಾರರಿಂದ ಸಂಪಾದಿತ ದುರ್ಗಸಿಂಹನ **ಪಂಚತಂತ್ರಸಾರವ್**.

೧೨ ನೆಯ ಶತಮಾನದ ಸಾಹಿತ್ಯ: ಕನ್ನಡ ಕವಿಚರಿತೆಯ ೧ ನೆಯ ಭಾಗ ಮತ್ತು ಇದು ವರೆಗೆ ಅಚ್ಚಾದ ಕನ್ನಡ ಸಾಹಿತ್ಯ ಇತಿಹಾಸದ ಗ್ರಂಥಗಳು.

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,
ಧಾರವಾಡ
ತಾ. ೧-೪-೫೫

(Sd) S. P. Patil
Principal,
Govt. Training College for Men, Dharwar.

Regd No B.5375

ಹೊರಬಿದ್ದಿದೆ ! ಬೆಳಕು ಕಂಡಿದೆ !!

೨ನೆಯ ಆವೃತ್ತಿ | ಶೈಕ್ಷಣಿಕ ಮನೋವಿಜ್ಞಾನ | ಪುಟ ೩೯೦

ಬರೆದವರು : ಡಾ| ವಿ. ಕೊ. ಜವಳಿ, M. Ed. Ph. D. M. A. (ಕೋಲಂಬಿಯಾ)

ಬೆಲೆ: ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಕೈದೀವಿಗೆ ! ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. ತಿಳಿಯಾದ ಸುಂದರ ಶೈಲಿ ! ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ.

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಪುಟ ೨೮೦) ಮೂಲ ಶಿಕ್ಷಣ (ಬೆಲೆ: ೩-೦-೦

ಲೇಖಕರು : ಶ್ರೀ. ಮ. ಗು. ಹಂದ್ರಾಳ, ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. ಮೂಲ ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೆ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ. ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ

Printed by M.A. Kamat, B. Sc. at Jai Hind Art Press Dharwar. Edited and Published by S. P. Patil B. M. Shintri, S. R Tatti, & Smti. P. A. Bhaskar. at the Kannada Prathamik Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ. ಎಸ್. ಬಿ. ಪಾಟೀಲ

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ
ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯ

ಬಿಡಿಪ್ರತಿ: ೦-೩-೦ | ಮೇ ೧೯೫೫ | ವಾ. ಚಂದಾ

ಜಗದ ಭಾನು ಬಸವಣ್ಣ !

ಅಷ್ಟ ಶತಮಾನಗಳ ಕಾಲ ಗತಿಗಳ ಸರಿಸಿ
ಬೆಸರೆ ನೋಡಲು ಕಾಂಬುದೊಂದು ಬೆಳಕು !
ಕಷ್ಟ ಕಾರ್ಪಣ್ಯಗಳ ದುಷ್ಟ ದುರ್ನೀತಿಗಳ
ಕಡಡರುವ ಬಾಳ್ಗಡಲ ನಡುವೆ ಬೆಳಕು !
ಮಾನವನ ಜೀವನದ ನೌಕೆ ನೇತಾಡುತಿದೆ
ಮೊರೆವ ಬಲ್ದೆರೆಗಳಗ್ರದಲಿ ಬಳುಕಿ
ಮೌನವಾಗಿಹ ಬೆಳಕು ! ಮಾರ್ಗದರ್ಶನಕಾಗಿ
ಬೆಳಗುತಿದೆ ಬುವಿ ಬಾನುಗಳನು ತುಳುಕಿ ೧

ಗತಿಗೆಟ್ಟ ಮಾನವಗೆ ಧೃತಿಯನ್ನು ನೀಡಿತ್ತು
ಕಲ್ಯಾಣದೊಳು ನಿಂದ ದಿವ್ಯ ತಾರೆ !
ಮತಿಯ ಮೌಢ್ಯವ ಕಳೆದು ಜ್ಞಾನಜ್ಯೋತಿಯ ತಳೆದು
ಅನುಭವಾಮೃತವನ್ನು ಸಕಲರಿಗೆ ತೋರಿ
ಕಲ್ಯಾಣ ಕ್ರಾಂತಿಯಾ ಜೀವನದ ಮಂಥನದಿ
ಮೂಡಿತ್ತು ಸ್ಫೂರ್ತಿ ಮಂಗಳದ ಮೂರ್ತಿ !
ಎಲ್ಲೆಲ್ಲಿಯೂ ತನ್ನ ಅರಿವಿನಾನಂದವನು
ನೀಡಿತ್ತು ಶಾಂತಿಯ ಜಗಕೆ ಪೂರ್ತಿ ! ೨

ಸರ್ವ ಸಾಮಾನ್ಯತೆಯ ಸಕಲ ಸರ್ವೋದಯದ
ಸಿರಿಮೊಗವ ಹಿಗ್ಗಿಸಿದ ಕ್ರಾಂತಿವೀರ !
ಸಾಮಾನ್ಯರೋಳ್ ದಿವ್ಯ ಸರ್ವೇಶನಂ ಕಂಡು
ಪೂಜಿಸಿದ ಪುಣ್ಯ ಪುಂಗವನು ಧೀರ
ನಿನ್ನೆದೆಯ ಬಯಲಲ್ಲಿ ನೆಗೆಯುತಿದೆ ಕಾರಂಜಿ
ಕರುಣೆಯುಂ ದೆಸೆದೆಸೆಗೆ ತೂರಿತೂರಿ
ಬನ್ನ ಬೆಟ್ಟವದೆಲ್ಲ ಆತ್ಮ ತೇಜಕೆ ಕರಗಿ
ಶಾಂತಿಜಲ ಹರಿಯುತದು ಕಳೆಯ ಬೀರಿ ! ೩

ಕನ್ನಡದ ಕಾಗಣಿಕ ಕಲ್ಯಾಣದೊಡೆಯ, ಬಾ,
ನಿತ್ಯ ನೂತನ ಯುಗದ ಸ್ಫೂರ್ತಿ ನೀನು !
ನಿನ್ನ ಜೀವನವೆಮಗೆ ಹೊನ್ನ ಗಣಿಯಾಗಿಹುದು
ಮೂಡಿ ಬಾ ಮತ್ತೊಮ್ಮೆ ಜಗದ ಭಾನು ! ೪

ಎಸ್. ಬಿ. ಇಂಚಲ,
ಹುಬ್ಬಳ್ಳಿ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ

ಸಂಚಾಲಕರು : ಶ್ರೀ. ಎಚ್. ಎಂ. ಕಾಳೆ ಬಿ. ಎ(ಆನರ್ಸ) ಬಿ.ಟಿ.ಡಿ.ಪಿ. ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ. ಎಸ್. ಪಿ. ಪಾಟೀಲ ಬಿ. ಎ., ಬಿ. ಟಿ., ಡಿ. ಪಿ. ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಸಹ-ಸಂಪಾದಕರು

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಟ್ರೇನಿ ಕಾಲೇಜ, ಧಾರವಾಡ

ಶ್ರೀ. ಬಿ. ಎಂ. ಶಿಂತ್ರಿ, ಬಿ. ಎ. ಬಿ. ಟಿ. ನಿವೃತ್ತ ಆಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗೂ ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ. ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೪೮	ಮೇ ೧೯೫೫	ಸಂಚಿಕೆ ೧೨

ಪರಿವಿಡಿ

೧ ಸಂಪಾದಕೀಯ ೧

೨ ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ
ಸೂಚನೆಗಳ ಕೈಪಿಡಿ (೮ನೆಯ ಪ್ರಕರಣ) ಶ್ರೀ. ಶಿಂತ್ರಿ ಬಸಪ್ಪನವರು. ೫

೩ ಹೊಸ-ಶಿಕ್ಷಣದ ಕೆಲವು ಉಪಕರಣಗಳು ಶ್ರೀ. ಲ. ಗ. ಭಟ್ಟ ೯

೪ ಸಮುದ್ರದಾಚೆಯ ಸಮಾಜ ಶಿಕ್ಷಣ ಶ್ರೀ. ವ್ಹಿ. ಎ. ಉಮರಾಣಿ ೧೨

೫ ಪ್ರಾರ್ಥನೆಯ ಮಹತ್ವ – ಶ್ರೀ. ಆರ್. ಎಮ್. ಅಡ್ಕಿ ೧೬

೬ ಪ್ರಿನ್ಸಿಪಾಲ ವ್ಹಿ. ಕೆ.ಗೋಕಾಕರ ಭಾಷಣ ಸಂ: ಭಿ. ನೆ. ಮಣ್ಣೂರ ೧೮

೭ ಎಂಜಲು .... ಶ್ರೀ. ಜಿ. ಎಸ್. ಸಿಗರಿ ೨೦

೮ ಕೈ ವಾ. ಗಂಗಾಧರಪ್ಪ ತೂರಮರಿಯವರು ಶ್ರೀ. ಆಯ್. ಎಸ್. ಬಿದರಿ ೨೨

೯ ಸಾಲೆಗಳಲ್ಲಿ ಸಹಪಠ್ಯ ಚಟುವಟಿಕೆಗಳು ಶ್ರೀ. ಕಮಲಾಕರ ಭಾಗವತ ೨೫

೧೦ ಪ್ರಾಥಮಿಕ ಶಿಕ್ಷಣ ಪ್ರಪಂಚ ೨೯

೧೧ ಮಂಜೂರಾದ ಪಠ್ಯ-ಪುಸ್ತಕಗಳ ೩೧

ಜಗದ ಭಾನು ಬಸವಣ್ಣ .... ಶ್ರೀ. ಎಸ್. ಡಿ. ಇಂಚಲ ಕವ್ಹರ ೨

ಕಲ್ಯಾಣ ಕ್ರಾಂತಿ .... ಶ್ರೀ. ಗಂಗಪ್ಪ ವಾಲಿ ಕವ್ಹರ ೩

ಮುಖಪೃಷ್ಠದ ಪಡಿಯಚ್ಚು 'ನವಯುಗ' ದಿನಪತ್ರಿಕೆಯ ಕೃಪೆಯಿಂದ

ಸಂಪಾದಕೀಯ

—:o:—

ಬಸವಜಯಂತಿ.

ವೈಶಾಖ ಶುದ್ಧ ತೃತೀಯ ತಿಥಿಯು ಅಕ್ಷಯ ತೃತೀಯ ಎಂದು ನಾಮಕರಣವೆತ್ತಿದೆ. ಉಳಿದ ತೃತೀಯಗಳಂತೆ ಇದು ಕೇವಲ ತೃತೀಯವಾಗಿರದೆ ಅಕ್ಷಯ ಎಂದು ಹಿಂದೆ ವಿಶೇಷ ವಿಶೇಷಣವನ್ನು ಹಚ್ಚಿಕೊಳ್ಳಲು ಕಾರಣವೇನು ? ಈ ತೃತೀಯವು ಅಕ್ಷಯವಾಗಿ ಉಳಿಯಲು ಕಾರಣೀಭೂತರಾದ ಆ ಮಹಾವ್ಯಕ್ತಿಯು ಯಾರು ? ಅವರಾದರೂ ಅಮರರಾಗಿರಬೇಕಲ್ಲವೇ ? ಅವರು ಬೇರೆ ಯಾರೂ ಅಲ್ಲ ! ೧೨ ನೆಯ ಶತಮಾನದಲ್ಲಿ ವಿಜಾಪೂರ ಜಿಲ್ಹೆಯ ಬಸವನ ಬಾಗೇವಾಡಿಯಲ್ಲಿ ಹುಟ್ಟಿ, ಬೆಳೆದು ದೊಡ್ಡವನಾಗುವ ಮುನ್ನವೇ ಶಿವದೀಕ್ಷೆಯನ್ನು ಪಡೆದು, ಕೂಡಲ ಸಂಗನಲ್ಲಿ ವಿದ್ಯಾರ್ಜನೆ ಮಾಡಿ, ಬಿಜ್ಜಳನ ಓಲಗದಲ್ಲಿ ಸಾಮಾನ್ಯ ಕರಣಿಕನೆಂದು ಸೇರಿ ಕೆಲವೇ ದಿನಗಳಲ್ಲಿ ಅರ್ಥಮಂತ್ರಿಯಾಗಿ, ಸೋದರ ಮಾವ ಬಲದೇವನ ಮರಣಾನಂತರ ಮುಖ್ಯಮಂತ್ರಿಯಾಗಿ, ಅಸಾಮಾನ್ಯ ನ್ಯಾಯನಿಷ್ಠುರ, ನಿರ್ದಾಕ್ಷಿಣ್ಯನೆಂದು, ಭಕ್ತಿಭಾಂಡಾರಿಯೆಂದು, ಅದ್ವಿತೀಯ ಸಾಹಿತಿಯೆಂದು, ಸಮಾಜದ ಉದ್ಧಾರಕನೆಂದು, ವಿಶ್ವ ಬಂಧುತ್ವವನ್ನು ಸ್ಥಾಪಿಸುವ ವಿಶ್ವಶಕ್ತಿಯೆಂದು ಹೆಸರಾಗಿ ಬಾಳಿ ಬೆಳಗಿ ಪರಂಜ್ಯೋತಿಯಲ್ಲಿ ಮರೆಯಾದ ಆ ಮಹಾತ್ಮ ಬಸವಣ್ಣನವರೇ ಅವರು.

ಪ್ರಾಥಮಿಕ ಶಿಕ್ಷಣ

ಭಕ್ತಿಭಾಂಡಾರಿ ಬಸವನು ಜನ್ಮವೆತ್ತಿದುದು ವೈಶಾಖ ಶುದ್ಧ ತೃತೀಯ ದಿನದಂದು. ಎಪ್ರಿಲ ದಿನಾಂಕ ೨೫. ರಂದು ಅವರ ಜಯಂತಿಯನ್ನು ನಾಡಿನಲ್ಲೆಲ್ಲ ಅತ್ಯಂತ ಉತ್ಸಾಹದಿಂದ ಆಚರಿಸಿರಲಿಕ್ಕೆ ಸಾಕು. ಬಸವಣ್ಣನವರು ಜೀವನದ ಎಲ್ಲ ರಂಗಗಳಲ್ಲಿ ಹೊಸಹಾದಿಯನ್ನು ತುಳಿದರು; ಅಲ್ಪ ಸಮಯದಲ್ಲಿಯೇ ಅವರು ಸಾಧಿಸಿದ ಮಹತ್ಕಾರ್ಯ ಇತಿಹಾಸದಲ್ಲಿಯೇ ಅದ್ವಿತೀಯವಾಗಿದೆ. ಅವರ ಪಾರಮಾರ್ಥಿಕ ಸಂಪತ್ತು, ಸತ್ಯಮಾರ್ಗಾನ್ವೇಷಣೆ, ನೀತಿಯ ತಳಹದಿ, ಕಲ್ಯಾಣ ರಾಜ್ಯ ಕಟ್ಟಬಯಸುವ ಹಂಬಲ, ವಿಶ್ವಧರ್ಮಬೋಧೆ, ನುಡಿದಂತೆ ನಡೆಯುವ ಮನೋನಿರ್ಧಾರ, ಸೀಮಾತೀತ ದೇವಭಕ್ತಿ, ಅಸಾಧಾರಣವಾದ ಪಾಂಡಿತ್ಯ ಹಾಗೂ ಪ್ರತಿಭೆ, ಸಮಾಜ ಸೇವಾ ದುರಂಧರತೆ ಇವೇ ಮೊದಲಾದ ಅಲೌಕಿಕ ಗುಣವಿಶೇಷಗಳಿಂದ ಬಸವಣ್ಣನವರು ವಿಶ್ವಶಕ್ತಿಯಾಗಿದ್ದರು ! ಕಾರಣಪುರುಷರಾಗಿದ್ದರು. ಅವರು ಭಕ್ತಿಭಾಂಡಾರಿಯೂ ಅಹುದು ! ಯುಗಪ್ರವರ್ತಕರೂ ಅಹುದು ! ವಿಶ್ವಧರ್ಮಪುರಸ್ಕರ್ತರೂ ಅಹುದು ! ಅನುಪಮ ರಾಜಕಾರಣಿಗಳೂ ಅಹುದು ! ಕಲ್ಯಾಣರಾಜ್ಯ ನಿರ್ಮಾಣಪಾತ್ರರೂ ಅಹುದು ! ಬಸವಣ್ಣನವರ ವಚನಗಳು ಸಾಹಿತ್ಯ ಶ್ರೀಯಲ್ಲಿಯ ಜಾಜ್ವಲ್ಯತಮ ರತ್ನಗಳಾಗಿವೆ. ನಾವು ಮಾತಿನಲ್ಲಿ 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ಅವರ ಉಕ್ತಿಯನ್ನು ಅನುಸರಿಸಿದರೆ ಧಾರ್ಮಿಕ ತಿಳಿವಳಿಕೆಯಲ್ಲಿ 'ದಯವೇ ಧರ್ಮದ ಮೂಲವಯ್ಯ' ಎಂಬ ಹೇಳಿಕೆಯನ್ನು ಅನುಸರಿಸಬೇಕಾಗುವದು. ಅವರ ಜಯಂತಿಯನ್ನು ಆಚರಿಸಿ ಅವರು ೮೦೦ ವರ್ಷಗಳ ಹಿಂದೆ ತುಳಿದ ದಾರಿಯ ನೆನಪನ್ನು ತಂದುಕೊಂಡು ಮಾತಿನಲ್ಲಿ, ಮನಸ್ಸಿನಲ್ಲಿ, ಕೃತಿಯಲ್ಲಿ ಅವರ ಸಂದೇಶವನ್ನು, ಬೋಧಾಮೃತವನ್ನು ತತ್ವೋಪದೇಶವನ್ನು ತಂದುಕೊಂಡು ಕಲ್ಯಾಣರಾಜ್ಯದತ್ತ ಮುನ್ನಡೆಯೋಣ.

ಜ್ಞಾನದೀಕ್ಷೆಯನ್ನು ಪಡೆದ ಶಿಕ್ಷಕರು:

೧೯೫೫ನೆಯ ಎಪ್ರಿಲ ೩೦ರಂದು ಸಾಯಂಕಾಲ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಸಂಸ್ಥೆಗಳಿಗೆ ಈ ವರ್ಷದ (೧೯೫೪-೫೫ನೆಯ ಸಾಲಿನ) ಕೊನೆಯ ದಿನ. ಎರಡು ವರ್ಷಗಳ ವರೆಗೆ ತರಬೇತಿ ಹೊಂದಿ ಹೊಸ ಶಿಕ್ಷಣದ ಅಂಗೋಪಾಂಗಗಳನ್ನು ಅಭ್ಯಸಿಸಿ, ನಾಡಶಿಲ್ಪಿಗರಾಗಿ ಹೊರಬೀಳಲಿರುವ ಶಿಕ್ಷಕರಿಗೆ ಎಪ್ರಿಲ ೩೦ರಂದು ಕೊನೆಯ ದಿನ. ಟ್ರೇನಿಂಗ ಸಂಸ್ಥೆಗಳಲ್ಲಿ ಅವರನ್ನು ಅತ್ಯಂತ ಉತ್ಸಾಹದಿಂದ ಬೀಳ್ಕೊಟ್ಟಿರಲಿಕ್ಕೆ ಸಾಕು. ಹೊಸ ಶಿಕ್ಷಣವು ನಾಳಿನ ಶಿಕ್ಷಕರಿಂದ ಅಪೇಕ್ಷಿಸುವದು ಬಹಳವಿದೆ. ಶಿಕ್ಷಣದ, ಅದರೊಂದಿಗೆ ಹಾಸುಹೊಕ್ಕಾಗಿ ಜೀವನದ ಹೊಣೆಯನ್ನು ಹೊತ್ತು ಹೊರಬೀಳಲಿರುವ ಶಿಕ್ಷಕರು ಕವಲು ದಾರಿಯಲ್ಲಿ ಬಂದು ನಿಂತಂತೆ. ಕವಲೊಡೆದ ಒಂದುದಾರಿ ಗುರಿಯ ಕಡೆಗೆ ಶೀಘ್ರದಲ್ಲಿ ಒಯ್ಯುವಂತೆ ಕಂಡು ಆಕರ್ಷಕವಾದಂತೆ ತೋರಿದರೂ ವಾಮ ಮಾರ್ಗವೆಂದೆನಿಸಿಕೊಳ್ಳುವದು; ಇನ್ನೊಂದು ಸರಳ ದಾರಿ, ತುಸು ಸುತ್ತುವರಿದ ದಾರಿ, ನಿರಾಕರ್ಷಕ-ನೀರಸವೆಂದು ಕಂಡುಬರುವ ದಾರಿ; ಆದರೂ ನೈಜದಾರಿ, ಪ್ರಾಮಾಣಿಕತನದ ದಾರಿ. ಅಡೆ-ತಡೆಗಳಿಂದ ಕೂಡಿರುವದೆಂದು ಕಂಡುಬರುವ ಈ ದಾರಿಯನ್ನೇ ಹಿಡಿದು, ನಿಸ್ಸೀಮ ಸೇವಾ ಬುದ್ಧಿಯಿಂದ, ನಿರಲಸ ಕರ್ತವ್ಯದಕ್ಷತೆಯಿಂದ, ಅಚಲಶ್ರದ್ಧೆಯಿಂದ ಸಾಗಿದ್ದಾದರೆ ದಾರಿಯಲ್ಲಿ ಬರುವ ಅಡ್ಡಿ ಆತಂಕಗಳೆಲ್ಲ ದಿನಮಣಿಯ ಉದಯದ ನಂತರ ಕರಗುವ ಮಂಜಿನಂತೆ ಮಾಯವಾಗುವವು; ಗುರಿಯು ಸುಲಭಸಾಧ್ಯವಾಗುವದು. ಆದರ್ಶ ಶಿಕ್ಷಕನ ದಾರಿಯಿದು. ನಾಳಿನ ಪ್ರಾಥಮಿಕ ಶಿಕ್ಷಕರಿಗೆ ನಮ್ಮ ಶುಭ ಚಿಂತನೆಗಳು. ಅವರು ಹೊಸ ಶಿಕ್ಷಣದ ಆದೇಶದಂತೆ ಕೇವಲ ನಾಲ್ಕು ಗೋಡೆಗಳ ಆವಾರಕ್ಕೆ ಮಾತ್ರ ಜ್ಞಾನದೀಪವನ್ನು ಹೊತ್ತಿಸದೆ ಇಡಿಯ ಹಳ್ಳಿಯಲ್ಲಿಯೇ ಜ್ಞಾನದೀಪವನ್ನು ಹೊತ್ತಿಸಿ ಇಡಿಯ ಹಳ್ಳಿಯನ್ನೇ ಜ್ಞಾನಮಂದಿರವನ್ನಾಗಿ ಮಾಡುವರೆಂದು ಹಾರೈಸುತ್ತೇವೆ.

ಸಂಪಾದಕೀಯ

ರಾಜ್ಯಪಾಲರ ಮಿಂಚಿನ ಸಂಚಾರ:

ನಮ್ಮ ರಾಜ್ಯಪಾಲರಾದ ಡಾ|| ಹರೆಕೃಷ್ಣ ಮಹೆತಾಬರು ಇದೇ ತಿಂಗಳ ದಿನಾಂಕ ೨ ರಂದು ಧಾರವಾಡಕ್ಕೆ ಆಗಮಿಸಿ ಕರ್ನಾಟಕದ ಕೆಲ ಜಿಲ್ಹೆಗಳಲ್ಲಿ ಸಂಚರಿಸಿದರು; ಗದಗಿನಲ್ಲಿ ಯುಕ್ತರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳ ಧ್ವಜಪ್ರದರ್ಶನವನ್ನು ಉದ್ಘಾಟಿಸಿದರು; ಮತ್ತು ದೇಶದ ಆಂತರಿಕ ಅಭ್ಯುದಯದತ್ತ ಜನರು ಶ್ರಮ ವಹಿಸಿ ದುಡಿಯಬೇಕೆಂದು ಬೋಧಿಸಿದರು. ತನ್ನ ಸಹೋದ್ಯೋಗಿಗಳ ಮೇಲೆ ಭಾರತವು ಪ್ರಭಾವಶಾಲಿಯಾಗಿದೆಯೆಂದೂ ಹೇಳಿದರು; ಹೊಸ ಮಾರ್ಕೆಟನ್ನು ಉದ್ಘಾಟಿಸಿದರು. ಭಾಷಣ ಮಾಡುತ್ತ ಕರ್ನಾಟಕ ಜನತೆಗೆ ಕರ್ನಾಟಕದಲ್ಲಿ ಹೇರಳವಾಗಿ ವಿದ್ಯುತ್ತು ದೊರೆಯುವದೆಂದೂ ಇದರಿಂದ ಉದ್ದಿಮೆಗಳನ್ನು ಬೆಳಿಸಬೇಕೆಂದೂ, ಇದರಿಂದ ಭದ್ರತೆ ತತ್ಪರಿಣಾಮವಾಗಿ ಆರ್ಥಿಕ ಮೇಲುಗೈ ದೊರೆಯುವದೆಂದೂ ಈ ಪ್ರಸಂಗವನ್ನು ಕನ್ನಡಿಗರು ಬಿಡಕೂಡದೆಂದೂ ಹೇಳಿದರೆಂದು ತಿಳಿದು ಬರುತ್ತದೆ. ರಾಜ್ಯಪಾಲರ ಸಂಚಾರದಿಂದ ನಾಡಿನಲ್ಲಿ ನವಜಾಗ್ರತಿಯಾಯಿತೆನ್ನಲು ಅಡ್ಡಿಯಿಲ್ಲ. ದೇಶದ ಆರ್ಥಿಕ ಭದ್ರತೆ ಬೆಳೆಯಬೇಕಾದರೆ ಅದರ ಘಟಕಗಳಾದ ರಾಜ್ಯಗಳು ಅಷ್ಟೇಕೆ–ಹಳ್ಳಿಗಳು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕು. ಜೋಗ ವಿದ್ಯುತ್ ಪೂರೈಕೆಯಿಂದ ನಿಜವಾಗಿಯೂ ಕರ್ನಾಟಕದಲ್ಲಿ ಉದ್ದಿಮೆಗಳು ಬೆಳೆಯುವದು ಸಾಧ್ಯವಿದೆ. ಧನವಂತರು ಹಾಗು ಸಾಹಸಿಗರು ಮುಂದೆ ಬಂದು ವಿದ್ಯುತ್ತಿನ ಸದುಪಯೋಗ ಮಾಡಿಕೊಂಡು ಉದ್ದಿಮೆಗಳನ್ನು ಬೆಳಿಸುವರೆಂದೂ ಇದರಿಂದ ವೈಯಕ್ತಿಕ ಲಾಭವೂ ಸಾಮೂಹಿಕ ಉನ್ನತಿಯೂ ಆಗುವದೆಂದೂ ಹೇಳಬಯಸುವೆವು.

ಕಂಬನಿ

—★—

ವಿಖ್ಯಾತ ವಿಜ್ಞಾನಿಗಳಾದ ಡಾ| ಆಲ್ಬರ್ಟ ಐನ್‌ಸ್ಟೀನರು ೧೯೫೫ನೆಯ ಎಪ್ರಿಲ ೧೮ರಂದು ತಮ್ಮ ೭೬ನೆಯ ವಯಸ್ಸಿನಲ್ಲಿ ನಿಧನ ಹೊಂದಿದರು. ಅವರ ನಿಧನದಿಂದ ಜಗತ್ತಿಗೆ ಒಬ್ಬ ಮಹಾಪುರುಷನು ಇಲ್ಲದಂತಾಯಿತು. ಜಗತ್ತು ತುಂಬಿಬಾರದ ಹಾನಿಗೀಡಾಯಿತು. ಆಧುನಿಕ ಯುಗದ ಶ್ರೇಷ್ಠ ವಿಜ್ಞಾನಿಯಾದ ಐನ್‌ಸ್ಟೀನರು ಜರ್ಮನಿಯಲ್ಲಿ ಹುಟ್ಟಿ ಬೆಳೆದಾಗ್ಯೂ ೨೨ ವರುಷಗಳ ಹಿಂದೆ ಅಮೇರಿಕೆಗೆ ತೆರಳಿ ಅಲ್ಲಿಯೇ ಸ್ಥಿರವಾಗಿ ನಿಂತು ಅಲ್ಲಿಯ ನಾಗರಿಕರಾದರು. ಭೌತಶಾಸ್ತ್ರ ವಿಜ್ಞಾನಿಗಳೂ, ಗಣಿತ ಶಾಸ್ತ್ರ ಪಾರಂಗತರೂ ಆದ ಐನ್‌ಸ್ಟೀನರು ಮಹಾ ಶಾಂತಿಪ್ರವಾದಿಯೂ ಆಗಿದ್ದರು. ಅಣುಸಂಶೋಧನೆಗೆ ಮಾರ್ಗಮಾಡಿಕೊಟ್ಟಿದ್ದರೂ ಅಣುಶಸ್ತ್ರ ತಯಾರಿಕೆಯನ್ನು ವಿರೋಧಿಸಿದರು. ವಿಜ್ಞಾನವು ಬೆಳೆಯಬೇಕು; ಅದು ವಿಶ್ವದ ನೆಮ್ಮದಿಗೆ ಸಹಾಯವಾಗಬೇಕು ಎಂಬುದು ಅವರ ಮತ. ಜಾಗತಿಕ ಸಹಕಾರದ ಪ್ರತಿಪಾದಕರಾದ ಐನ್‌ಸ್ಟೀನರು ಶಾಂತಿದೂತರೂ ಮಾನವ ಕಲ್ಯಾಣವಾದಿಯೂ ಆಗಿದ್ದರು. ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ

ಅನುವಾದಕರು : ಶ್ರೀ. ಶಿಂತ್ರಿ ಬಸಪ್ಪನವರು ಬಿ. ಎ. ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ ಹಾಗೂ ಗೌರವ ಕಾರ್ಯದರ್ಶಿ
ಮತ್ತು ಲಾಯಿಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

೪ನೆಯ ಪ್ರಕರಣ

:: ಸಂಘಟನೆ (೧) ::

ಹಳ್ಳಿಗಾಡದಲ್ಲಿ ಒಂಟಿಗನಾಗಿ ಕೆಲಸಮಾಡುವ ಶಿಕ್ಷಕನು ತನ್ನ ಶೈಕ್ಷಣಿಕ ಚಟುವಟಿಕೆಗಳ ಸಂಘಟನೆಯನ್ನು ಹೇಗೆ ಮಾಡಿಕೊಳ್ಳಬೇಕೆಂಬ ಸಮಸ್ಯೆಯನ್ನು ಎದುರಿಸಬೇಕಾಗುವದು. ಬೇರೆ ಬೇರೆ ವಯಸ್ಸಿನ, ಒಲವಿನ, ಯೋಗ್ಯತೆಯ, ವರ್ಗಗಳ ಹಾಗೂ ಬುದ್ಧಿಮಟ್ಟದ ಮಕ್ಕಳಿಗೆ ಕಲಿಸುವದಿರುತ್ತದೆಯಾದುದರಿಂದ ಅವರನ್ನೆಲ್ಲ ಒಂದು ಹಿಡಿತದಿಂದ ಒಯ್ಯಬೇಕಾಗುತ್ತದೆ. ಅವನ ಮುಖ್ಯ ತೊಂದರೆಗಳೆಂದರೆ ಒಂದೇ ವೇಳೆಗೆ ಐದು ಇಯತ್ತೆಗಳನ್ನು ಸಾಗಿಸುವದು ಹಾಗೂ ಒಂದೊಂದು ಇಯತ್ತೆಗೆ ಆರೇಳು ವಿಷಯಗಳನ್ನು ಕಲಿಸುವದು. ಸಾಲೆಯ ವೇಳೆಯ ಉಪಯೋಗವನ್ನು ಜಾಣತನದಿಂದಲೂ ಮಿತದಿಂದಲೂ ಮಾಡಿಕೊಳ್ಳಬೇಕು. ಅಭ್ಯಾಸ ಪತ್ರಿಕೆಯೊಳಗಿನ ವಿಷಯಗಳಿಗೆ ಚ್ಯುತಿಬಾರದೆ ಎಲ್ಲ ಮಕ್ಕಳಿಗೆ ಶಿಕ್ಷಣವು ಹೊಂದಿಕೆಯಾಗುವಂತೆ ನೋಡಿಕೊಳ್ಳಬೇಕು. ಈ ತೊಂದರೆಗಳನ್ನು ನೀಗಲು ಜಾಣತನದ ಹಂಚಿಕೆಗಳು ಬೇಕು. ಆ ದಿಶೆಯಲ್ಲಿ ಹಲವು ಸೂಚನೆಗಳನ್ನು ಕೆಳಗೆ ಕೊಡಲಾಗಿದೆ.

ವರ್ಗಗಳನ್ನು ಒಟ್ಟುಗೂಡಿಸುವದು.

ವರ್ಗಗಳನ್ನು ಒಟ್ಟುಗೂಡಿಸಿ ಕಲಿಸುವದರಿಂದ ಹಳ್ಳಿಯಲ್ಲಿ ಒಂಟಿಗನಾಗಿ ಕೆಲಸಮಾಡುವ ಶಿಕ್ಷಕನ ಕೆಲಸವು ಹಗುರಾಗುವದುಂಟು. ಐದು ಇಯತ್ತೆಗಳುಳ್ಳ ಸಾಲೆಯಲ್ಲಿ ಎರಡನೆಯ ಇಯತ್ತೆಯನ್ನು ಮೂರನೆಯ ಇಯತ್ತೆಗೆ ನಾಲ್ಕನೆಯ ಇಯತ್ತೆಯನ್ನು ಐದನೆಯ ಇಯತ್ತೆಗೆ ಕೂಡಿಸಿ ಒಂದನೆಯ ಇಯತ್ತೆಯನ್ನು ಇದ್ದಂತೆ ಇಡಬೇಕು. ಹೀಗೆ ಮಾಡುವದರಿಂದ ಐದರ ಬದಲು ಮೂರೇ ವರ್ಗಗಳಾಗುವವು. ನಾಲ್ಕು ಇಯತ್ತೆಗಳಿದ್ದಲ್ಲಿ ಎರಡೇ ವರ್ಗಗಳನ್ನೂ ಆರು ಇಯತ್ತೆಗಳಿದ್ದಲ್ಲಿ ಮೂರೇ ವರ್ಗಗಳನ್ನೂ ಮಾಡಿಕೊಳ್ಳಲು ಬರುತ್ತದೆ. ಹೊಸದಾಗಿ ಸೇರಬಯಸುವ ವಿದ್ಯಾರ್ಥಿಗಳನ್ನು ವರ್ಷದ ಮಧ್ಯದಲ್ಲಿ ಅದಷ್ಟು ಮಟ್ಟಿಗೆ ಸೇರಿಸಿಕೊಳ್ಳಬಾರದು.

ಈ ಹಂಚಿಕೆಯು ತಂದೆ-ತಾಯಿಗಳಿಗೂ ಅಧಿಕಾರಸ್ಥರಿಗೂ ಅಷ್ಟೊಂದು ರುಚಿಸುವದಿಲ್ಲ. ಶಹರದಲ್ಲಿ ಸಾಲೆಗಳಲ್ಲಿರುವಂತೆ ಇಯತ್ತೆಗೊಂದು ವರ್ಗವು ಎಲ್ಲಕಡೆಗೂ ಇರಬೇಕೆಂದು ಅವರು ಬಯಸುವರು. ಯಾಕಂದರೆ ಹಳ್ಳಿಯ ಸಾಲೆಯನ್ನು ಬಿಟ್ಟು ಶಹರದ ಸಾಲೆಗೆ ಹೋಗುವ ಮಕ್ಕಳಿಗೆ ಅದು ಅನುಕೂಲವಿದೆ ಹಾಗೂ ಮಕ್ಕಳ ಪ್ರಗತಿ, ಪಾಸು, ನಪಾಸು, ಮೊದಲಾದ ಪತ್ರಿಕೆಗಳನ್ನಿಡಲು ಸಹಾಯಕವಿದೆ. ತಮ್ಮ ಮಕ್ಕಳು ಒಂದು ಇಯತ್ತೆಯನ್ನು ಪಾಸಾಗಿ ಮೇಲಿನ ಇಯತ್ತೆಗೆ ಹೋಗುವದನ್ನು ನೋಡಿ ನಲಿಯುವ ಉತ್ಕಟೇಚ್ಛೆಯು ತಂದೆ-ತಾಯಿಗಳಿಗಾ

ವನು ಸ್ವಾಭಾವಿಕ ಮತ್ತು ಈ ಪದ್ಧತಿಯು ಮಕ್ಕಳಿಗೂ ಒಂದು ರೀತಿಯಿಂದ ಉತ್ತೇಜನವನ್ನು ಕೊಡುತ್ತದೆ. ಶಹರದ ಶಾಲೆಗಳಲ್ಲಿ ಕಂಡುಬರುವ ಕ್ಲಾಸುವಾರ ಪದ್ಧತಿಯು ಮೇಲಿಂದ ನಿರ್ಮಿಸಲ್ಪಟ್ಟಿಲ್ಲವೆಂಬುದನ್ನು ನಾವೆಲ್ಲರೂ ನೆನಪಿನಲ್ಲಿಡತಕ್ಕದ್ದು. ಅದು ನಿರ್ದಿಷ್ಟ ವಾತಾವರಣಕ್ಕೆ ಹೊಂದಿಕೆಯಾಗುವದೊಂದು ವ್ಯವಸ್ಥೆ. ಹಳ್ಳಿಗಾಡಿನಲ್ಲಿ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನ ಶಾಲೆಯ ವಾತಾವರಣಕ್ಕೆ ಸರಿ ಹೋಗುವಂತೆ ಆ ವ್ಯವಸ್ಥೆಯನ್ನು ಮಾರ್ಪಡಿಸಿದರೆ, ಅದರಲ್ಲಿ ತಪ್ಪೇನಿದೆ ? ಉದಾಹರಣಾರ್ಥವಾಗಿ, ಪಂಜಾಬ ರಾಜ್ಯದಲ್ಲಿಯ ಒಂಟಿಗರಾಗಿ ಕೆಲಸಮಾಡುವ ಶಿಕ್ಷಕರ ಶಾಲೆಗಳಲ್ಲಿ ಮಕ್ಕಳು ಶಾಲೆಯಲ್ಲಿ ಮಾಡಿದ ಕೆಲಸ ಮತ್ತು ಓದುವದರಲ್ಲಿ ತೋರಿಸಿದ ಪ್ರಗತಿ ಇವುಗಳ ಮೇಲಿಂದ ಅವರ ಗುಂಪುಗಳನ್ನು ಮಾಡಲಾಗಿದೆ. ವಾಚನ ಪುಸ್ತಕಗಳನ್ನು ಓದಿ ತೋರಿಸುವ ಯೋಗ್ಯತೆಯ ಮೇಲಿಂದ ಮಕ್ಕಳು ಬೇರೆ ಬೇರೆ ಗುಂಪುಗಳನ್ನು ಸೇರುವರು. "ನೀನು ಯಾವ ಇಯತ್ತೆಯಲ್ಲಿರುವಿ?" ಎಂದು ಕೇಳಿದ ಪ್ರಶ್ನೆಗೆ "ನಾನು ಮೊದಲನೆಯ ಇಯತ್ತೆಯ ವಾಚನ ಪುಸ್ತಕವನ್ನು ಓದುತ್ತಿದ್ದೇನೆ, ನಾನು ಮೂರನೆಯ ವಾಚನ ಪುಸ್ತಕವನ್ನೋದುತ್ತಿದ್ದೇನೆ;" ಎಂಬ ಉತ್ತರಗಳು ಬಂದವು ಮತ್ತು ಅವು ಆ ಮಕ್ಕಳ ಇಯತ್ತೆ ಹಾಗೂ ಪ್ರಗತಿಯನ್ನು ತೋರಿಸಿಕೊಟ್ಟವು. ಶಿಕ್ಷಕನು ಅವರೆಲ್ಲರಿಗೆ ವೈಯಕ್ತಿಕವಾಗಿ ಕಲಿಸಿದ್ದರಿಂದ ಅವರ ಪ್ರಗತಿಯು ವೈಯಕ್ತಿಕವಾಗಿಯೇ ಇದ್ದಿತು. ಬೇನೆಯಿಂದಾಗಲಿ ಇಲ್ಲವೆ ಬೇರಾವ ಕಾರಣದಿಂದಾಗಲಿ ಬಹಳ ದಿನಗಳವರೆಗೆ ಗೈರಹಾಜರ ಇದ್ದ ಮಗುವು ಶಾಲೆಗೆ ಬಂದರೆ ಅದು ತಾನು ಮೊದಲು ಕಲಿತದ್ದನ್ನೆಲ್ಲ ಉಜಳಣೆ ಮಾಡಿಕೊಂಡು ಆಮೇಲೆ ತನ್ನ ನಿತ್ಯದ ಪಾಠಗಳನ್ನು ಕಲಿಯಲು ಪ್ರಾರಂಭಿಸಬೇಕು. ಮಕ್ಕಳ ವೈಯಕ್ತಿಕ ಪ್ರಗತಿಯ ಮೇಲಿಂದ ಆ ವ್ಯವಸ್ಥೆಯು ರಚಿಸಲ್ಪಟ್ಟಿತ್ತಾದುದರಿಂದ ಅದು ತಂದೆ–ತಾಯಿಗಳ ಹಾಗೂ ಶಿಕ್ಷಕರ ಸಮ್ಮತಿಯನ್ನು ಪಡೆದಿತ್ತು. ಪಾಸಾಗಿ ಮೇಲಿನ ಇಯತ್ತೆಗೆ ಸೇರ್ಪಡೆಯಾಗುವದೆಂದರೆ ಮೇಲಿನ ಇಯತ್ತೆಯ ವಾಚನ ಪುಸ್ತಕವನ್ನು ಕಲಿಯಲು ಕೊಡುವದು.

"ವರ್ಗ"ವು ಶಹರದ ಕಲ್ಪನೆ. ಶಹರಗಳಲ್ಲಿ ವರ್ಗಗಳಷ್ಟು ಶಿಕ್ಷಕರಿರುವದುಂಟು. ಇಯತ್ತೆಗಳು ಶಾಲೆಯಲ್ಲಿ ಮಗುವು ಕಲಿತ ವರುಷಗಳ ಹಾಗೂ ವಾರ್ಷಿಕ ಪರೀಕ್ಷೆಗಳ ಪರಿಣಾಮಗಳ ದ್ಯೋತಕಗಳು. ಈ ಪರೀಕ್ಷೆಗಳು ಅಷ್ಟೊಂದು ವಿಶ್ವಾಸಾರ್ಹವಲ್ಲವಾದುದರಿಂದ ಅವುಗಳ ಆಧಾರದ ಮೇಲೆ ರಚಿಸಲ್ಪಟ್ಟ ಇಯತ್ತೆಗಳು ಕೃತ್ರಿಮ ಹಾಗೂ ಅಸಮಾಧಾನಕಾರಕ ಇವೆ. ಈ ಸಂಗತಿಯು ಚಿಕ್ಕ ಮಕ್ಕಳ ಭಾವಾತ್ಮಕ ಬೆಳವಣಿಗೆಯ ಮೇಲೆ ಅಹಿತಕಾರಕ ಪರಿಣಾಮವನ್ನುಂಟು ಮಾಡುತ್ತಿದೆ. ಅವರಲ್ಲಿ ಹಲವರು ಸುದೈವದಿಂದ ಪಾಸಾಗಿ ಮೇಲಿನ ಇಯತ್ತೆಗೆ ಹೋಗಬಹುದು. ಉಳಿದವರು ಪಾಸಾಗುವ ಯೋಗ್ಯತೆಯಿದ್ದರೂ ನಪಾಸಾಗಿ ಹಿಂದೆ ಉಳಿಯಬಹುದು. ಇಯತ್ತೆಯೆಂದರೆ ಅದೆಂದಿಗೂ ಮಾರ್ಪಡಿಸಲು ಬಾರದೊಂದು ಅಳತೆಯಲ್ಲ. ಮಗುವಿನ ಪ್ರಗತಿಯು ವರ್ಗಗಳ ಇಲ್ಲವೆ ಶಿಕ್ಷಕರ ಬದಲಾವಣೆಯಿಂದ ಅಳೆಯಲ್ಪಡದೆ ಕಲಿತ ವಿದ್ಯೆಗಳಿಂದ ಅಳೆಯಲ್ಪಡಬೇಕು. ಪ್ರಯತ್ನಪಟ್ಟು ಕಲಿತದ್ದಕ್ಕೆ ತಕ್ಕ ಪ್ರತಿಫಲವು ಸಿಗುವದೆಂಬ ಭರವಸೆಯು ಮಕ್ಕಳಲ್ಲಿ ಹುಟ್ಟಬೇಕು.

ಮಕ್ಕಳ ಬುದ್ಧಿಮಟ್ಟದಲ್ಲಿ ಕಂಡುಬರುವ ಹೆಚ್ಚು ಕಡಿಮೆಗಳಿಗನುಗುಣವಾಗುವಂತಹದೊಂದು ಯೋಜನೆಯು ಇದು ಆಗಿದೆ. ಒಂದು ಮಗುವು ಗಣಿತವನ್ನು ಮೇಲಿನ ಗುಂಪಿನಲ್ಲಿಯೂ ಭಾಷಾವಿಷಯವನ್ನು ಕೆಳಗಿನ ಗುಂಪುಗಳಲ್ಲಿಯೂ ಕಲಿಯಬಹುದು. ಮತ್ತೊಂದು ಮಗುವು ವರುಷದ ಅವಧಿಯು ಮುಗಿಯುವದರೊಳಗಾಗಿಯೇ ತನ್ನ ವಾಚನ ಪುಸ್ತಕವನ್ನು ಮುಗಿಸಿ ಮುಂದಿನ ವಾಚನ ಪುಸ್ತಕವನ್ನು ಕಲಿಯಬಹುದು. ಇಲ್ಲವೆ ತನ್ನ ವರ್ಗವನ್ನು ಕಳೆದುಕೊಳ್ಳದೆ ತನ್ನ ವಾಚನ ಪುಸ್ತಕ ವರುಷಕ್ಕಿಂತ ಹೆಚ್ಚಿನ ಅವಧಿಯನ್ನು ತಕ್ಕೊಂಡು ಕಲಿಯಬಹುದು. ಚುರುಕಿದ್ದ ಮಗುವು ತನ್ನ ವರ್ಷದ ಅಭ್ಯಾಸವನ್ನೆಲ್ಲ ಬೇಗನೆ ಮುಗಿಸಿಕೊಂಡು ಮೇಲಿನ ಗುಂಪಿನಲ್ಲಿ ಸೇರಿಕೊಳ್ಳಬಹುದು. ಹೀಗೆ ಮಾಡುವದರಿಂದ ಒಬ್ಬನೂ ನಪಾಸಾಗುವದಿಲ್ಲ, ಒಬ್ಬನೂ ಹಿಂದೆ ಬೀಳುವದಿಲ್ಲ. ಪ್ರತಿಯೊಂದು ಮಗುವು ತನ್ನ ಯೋಗ್ಯತೆಗನುಸರಿಸಿ ಮುಂದೆ ಸಾಗುವನು.

ಈ ವ್ಯವಸ್ಥೆಯಿಂದ ಉದ್ಭೂತವಾಗುವದೊಂದು ಸಂಗತಿಯೆಂದರೆ ವರ್ಗಗಳನ್ನು ಒಟ್ಟುಗೂಡಿಸಿ ಕಲಿಸುವದಕ್ಕೆ ಹೊಂದಿಕೆಯಾಗುವಂತಹದೊಂದು ಅಭ್ಯಾಸ ಪತ್ರಿಕೆಯ

ಪುನರ್ನಿರ್ಮಾಣವು. ಬೇರೆ ಬೇರೆ ವಿಷಯಗಳೊಳಗಿನ ಸಂಗತಿಗಳನ್ನು ಯಾವ ಕ್ರಮದಿಂದ ಕಲಿಸುತ್ತ ಹೋಗಬೇಕೆಂಬುದನ್ನು ಈಗಿನ ಅಭ್ಯಾಸ ಪತ್ರಿಕೆಯಲ್ಲಿ ದೊಡ್ಡ ಶಾಲೆಗಳ ಉದಾಹರಣೆಗಳನ್ನು ಕಣ್ಮುಂದಿಟ್ಟುಕೊಂಡು ರಚಿಸಲಾಗಿದೆ. ಅವುಗಳನ್ನು ಬೇಕಾದ ಕ್ರಮದಿಂದ ಕಲಿಸಬಹುದು. ಭೂಗೋಲದಲ್ಲಿ ಭೂಮಿಯು ಚೆಂಡಿನಂತೆ ದುಂಡಗಿದೆಯೆಂದು ಪ್ರಾರಂಭ ಮಾಡಿ ಗೋಲಾರ್ಧವನ್ನೂ, ಖಂಡ-ಮಹಾಸಾಗರಗಳನ್ನೂ, ಏಶಿಯಾ ಮತ್ತು ಅದರಲ್ಲಿಯ ದೇಶಗಳನ್ನೂ, ಹಿಂದುಸ್ತಾನ ಮತ್ತು ಅದರಲ್ಲಿಯ ರಾಜ್ಯಗಳನ್ನೂ ಕಲಿಸಬಹುದು. ಇಲ್ಲವೆ, ಹಳ್ಳಿಯಿಂದ ಪ್ರಾರಂಭಮಾಡಿ ತಾಲೂಕು, ಜಿಲ್ಹೆ, ಪ್ರಾಂತ, ರಾಜ್ಯ, ದೇಶ ಈ ಕ್ರಮದಿಂದ ಕಲಿಸಬಹುದು. ಅಥವಾ ಹವೆಯಿಂದ ಪ್ರಾರಂಭಮಾಡಿ ಹವಾಮಾನ, ಋತುಮಾನ, ಹುಟ್ಟುವಳಿ, ಉದ್ಯೋಗ ಈ ಕ್ರಮದಿಂದ ಹೋಗಬಹುದು. ಗಣಿತದಲ್ಲಿ, ವಜಾಬಾಕಿಯನ್ನು ಕಲಿಸುವ ಮೊದಲು ಬೇರೀಜನ್ನು ಕಲಿಸಬೇಕು. ಬೇರೀಜಿನಿಂದ ಗುಣಾಕಾರಕ್ಕೆ ಹಾಗೂ ವಜಾಬಾಕಿಯಿಂದ ಭಾಗಾಕಾರಕ್ಕೆ ಸಾಗಬೇಕು. ಇಲ್ಲವೆ, ಇವೆಲ್ಲವುಗಳಲ್ಲಿಯ ಸುಲಭ ಉದಾಹರಣೆಗಳನ್ನು ಜತೆಜತೆಯಾಗಿ ಕಲಿಸುತ್ತ ಸಾಗಬೇಕು. ಹೀಗೆ ಅನೇಕ ಪ್ರಕಾರಗಳಿಂದ ಕಲಿಸುವ ಕ್ರಮವು ಸಾಗಿದ್ದುಂಟು. ಮಕ್ಕಳ ಬೇಡಿಕೆ-ಅಭಿರುಚಿಗಳಿಗೆ ಹೊಂದಿಕೆಯಾಗುವ ಕ್ರಮವೇ ನಿಜವಾದ ಕ್ರಮವು. ಅವರ ನಿತ್ಯದ ಕೆಲಸ ಹಾಗೂ ಅನುಭವಗಳೇ ಶಿಕ್ಷಣ ಕ್ರಮದ ತಳಹದಿ.

ವಿಷಯಗಳ ಒಟ್ಟುಗೂಡಿಸುವಿಕೆ

ಕ್ಲಾಸುಗಳನ್ನು ಕೂಡಿಸಿ ಕಲಿಸುವದಕ್ಕಿಂತ ಸಂಬಂಧೀಕರಣದಿಂದ ವಿಷಯಗಳನ್ನು ಒಟ್ಟುಗೂಡಿಸಿ ಕಲಿಸಬಹುದು. ಇತಿಹಾಸ, ಭೂಗೋಲ ಮತ್ತು ಪೌರನೀತಿ ಇವುಗಳನ್ನು ಸಾಮಾಜಿಕ ವಿಷಯಗಳೆಂದು ಕೂಡಿಸಿ ಕಲಿಸಬಹುದು. ಓದುವದನ್ನು ಈ ಮೂರೂ ವಿಷಯಗಳ ಕೂಡ ಇಲ್ಲವೆ ಪ್ರತ್ಯೇಕವಾಗಿ ಒಂದೊಂದರ ಕೂಡ ಕಲಿಸಬಹುದು. ನಿಬಂಧವನ್ನು ಬೇರೆ ಬೇರೆ ವಿಷಯಗಳ ಕೂಡ ಸಂಬಂಧೀಕರಣ ಮಾಡಿ ಕಲಿಸುವದುಂಟು. ಇತಿಹಾಸ, ಭೂಗೋಲ ಹಾಗೂ ಸೃಷ್ಟಿನಿರೀಕ್ಷಣೆಗಳಲ್ಲಿಯ ಎಷ್ಟೋ ಸಂಗತಿಗಳನ್ನು ಮೌಖಿಕ ಇಲ್ಲವೆ ಲೇಖನದ ನಿಬಂಧಗಳಿಗೆ ಆಯ್ದುಕೊಳ್ಳಬಹುದು. ತಾಜಮಹಾಲದಂಥ ಐತಿಹಾಸಿಕ ಸ್ಥಳವನ್ನು, ನದಿಯ ಪ್ರವಾಹದಂಥ ಭೌಗೋಲಿಕ ವಿಷಯವನ್ನು ಇಲ್ಲವೆ ಸೂರ್ಯಾಸ್ತದಂಥ ಮನೋಹರ ದೃಶ್ಯವನ್ನು ಆಯ್ದುಕೊಳ್ಳಲು ಮಕ್ಕಳಿಗೆ ಹೇಳಿಕೊಳ್ಳಬೇಕು. ಇಂಥ ಸಂದರ್ಭಗಳಲ್ಲಿ ಅವರು ವ್ಯಾಕರಣದ ನಿಯಮಗಳನ್ನು ಕಲಿಯುವದಲ್ಲದೆ ಇತಿಹಾಸ, ಭೂಗೋಲ ಇಲ್ಲವೆ ಸೃಷ್ಟಿನಿರೀಕ್ಷಣೆಯ ಹಲವು ಸಂಗತಿಗಳನ್ನು ಗೊತ್ತು ಮಾಡಿಕೊಳ್ಳುವರು. ಶಿಕ್ಷಣದಲ್ಲಿ ಪ್ರಗತಿಪರ ಆಂದೋಲನದ ಮೂಲಕ ಎಷ್ಟೋ ವಿಷಯಗಳ ಸಂಗತಿಗಳನ್ನು ಆವುದಾದರೊಂದು ಚಟುವಟಿಕೆಯಲ್ಲಿ ಇಲ್ಲವೆ ಸಾಮೂಹಿಕ ಯೋಜನೆಯಲ್ಲಿ ಸಮಾವೇಶಗೊಳಿಸುವ ಧೋರಣವಿದೆ. ಈ ಧೋರಣದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಬಹಳಷ್ಟು ಮುಂದುವರಿದಿವೆ. ಮಕ್ಕಳ ಸಲಹೆಗಳೊಂದಿಗೆ ಅವರ ಮನಸ್ಸಿಗೆ ಬಂದದ್ದೊಂದು ಯೋಜನೆ ಇಲ್ಲವೆ ಚಟುವಟಿಕೆಯನ್ನು ಅವರ ಮುಂದೆ ಶಿಕ್ಷಕನು ಇಡುತ್ತಾನೆ. ಅದನ್ನು ನಿರ್ವಹಿಸಲು ಮಕ್ಕಳು ಎಷ್ಟೋ ವಿಷಯಗಳಲ್ಲಿಯ ಸಂಗತಿಗಳನ್ನು ಕಲಿತುಕೊಳ್ಳಬೇಕಾಗುತ್ತಿದೆ. ಉದಾಹರಣಾರ್ಥವಾಗಿ, ರಾಷ್ಟ್ರಗೀತೆಯನ್ನು ಕಲಿಯುವದಿದೆಯೆಂದು ತಿಳಿಯಿರಿ. ಮಕ್ಕಳು ಹೊಸ ಶಬ್ದಗಳ ಹಾಗೂ ಪದಗಳ ಪರಿಚಯವನ್ನು ಮಾಡಿಕೊಳ್ಳುವರು; ಕವಿತೆ ಮತ್ತು ಸಂಗೀತದ ಆನಂದವನ್ನು ಹೊಂದುವರು; ಮುಖಪಾಠ ಅನ್ನಲು ರೂಢಿಯನ್ನು ಮಾಡುವರು; ಹೋರಾಟದಿಂದ ಸ್ವಾತಂತ್ರ್ಯವನ್ನು ದೊರಕಿಸಿದ್ದನ್ನೂ ಹೋರಾಡಿದ ಪ್ರಮುಖ ಭಾರತೀಯರನ್ನೂ ಅರಿಯುವರು; ನಮ್ಮ ದೇಶ, ಜನಸಂಖ್ಯೆ, ವಿವಿಧ ರಾಜ್ಯಗಳು, ಪ್ರತಿಯೊಂದು ರಾಜ್ಯದ ವೈಶಿಷ್ಟ್ಯಗಳು, ನಮ್ಮ ಸಾಮಾಜಿಕ ಹಾಗೂ ರಾಜಕೀಯ ಘಟನೆ, ಇವೆಲ್ಲವುಗಳ ಬಗೆಗೆ ಸಾಧಾರಣ ಮಾಹಿತಿಯು ಗೊತ್ತಾಗುವದು. ಒಂದು ನಿರ್ದಿಷ್ಟ ಚಟುವಟಿಕೆಯು ಭಾಷಾವಿಷಯ, ಇತಿಹಾಸ, ಭೂಗೋಲ, ಸಾಮಾಜಿಕ ವಿಷಯ ಮೊದಲಾದವುಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳುತ್ತಿದೆ. ಜ್ಞಾನವು ಅಖಂಡವಾಗಿದೆ. ಹಾಗೂ ಬೇರೆ ಬೇರೆ ವಿಷಯಗಳು ಅದರ ಬೇರೆ ಬೇರೆ ಅಂಗಗಳಾಗಿವೆಯೆಂಬುದನ್ನು ಈ ಕೇಂದ್ರೀಕರಣವು ಗುರುಗಳಿಗೂ ವಿದ್ಯಾರ್ಥಿಗಳಿಗೂ ತೋರಿಸಿ

ಲು ಸಹಾಯಕವಾಗುತ್ತಿದೆಯಲ್ಲದೆ ಎಲ್ಲ ಜ್ಞಾನವು ಜೀವನದ ಚಟುವಟಿಕೆಗಳಿಂದಲೇ ಉದ್ಭವಿಸುತ್ತದೆ ಯೆಂಬುದನ್ನು ತಿಳಿಯಪಡಿಸುತ್ತಿದೆ. ವಿಚಾರಗಳಲ್ಲಿರುವ ನೈಜವಾದ ಪರಸ್ಪರ ಸಂಬಂಧವನ್ನು ಕುರಿತು ಅಭ್ಯಾಸ ಮಾಡುವದರಿಂದ ಮಕ್ಕಳಿಗೆ ಹೆಚ್ಚು ಆಳವಾದ ಹಾಗೂ ನಿಚ್ಚಳವಾದ ಅರ್ಥವು ದೊರೆಯುತ್ತದೆ.

ಮೂಲ-ಶಿಕ್ಷಣದಲ್ಲಿ ಬಡಿಗತನ, ಒಕ್ಕಲತನ, ಕುಂಬಾರಿಕೆ, ನೂಲುವದು, ನೇಯುವದು, ಮೊದಲಾದ ಉತ್ಪಾದಕ ಹಾಗೂ ರಚನಾತ್ಮಕ ಶಕ್ತಿಗಳಿಗೆ, ಮೂಲೋದ್ಯೋಗಕ್ಕೆ ಕೇಂದ್ರೀಕರಿಸಿ ಸಮವಾಯದಿಂದ ಎಲ್ಲ ವಿಷಯಗಳನ್ನು ಕಲಿಸುವದುಂಟು. ಉದಾಹರಣೆಗಾಗಿ, ನೂಲುವದರಿಂದ ಮಗುವು ಎಷ್ಟೋ ಹೊಸ ಶಬ್ದಗಳನ್ನು ಕಲಿಯುತ್ತದೆ; ದಿನಕ್ಕೆ ವಾರಕ್ಕೆ ಇಲ್ಲವೆ ತಿಂಗಳಿಗೆ ನೂತ ನೂಲಿನ ಹಾಗೂ [illegible] ಹಂಜಿಗಳ ಲೆಕ್ಕವನ್ನಿಡುವದರಿಂದ ಪ್ರಾರಂಭದ ಗಣಿತದ ಜ್ಞಾನವಾಗುತ್ತದೆ; ಹತ್ತಿ ಬೆಳೆಯುವ ದೇಶಗಳು, ಅಲ್ಲಿಯ ಹವಾಮಾನ, ನೆಲದ ಗುಣ, ಹತ್ತಿಯ ಬೇರೆ ಬೇರೆ ಜಾತಿಗಳು, ನೇಯುವ ಗಿರಣಿಗಳ ಕೇಂದ್ರಗಳು ಮುಂತಾದವುಗಳ ಪರಿಚಯವಾಗುತ್ತದೆ; ಇಲ್ಲವೆ ನೇಕಾರರುಗಳಲ್ಲಾಗುತ್ತ ಬಂದ ಮಾರ್ಪಾಟುಗಳ ಇತಿಹಾಸವನ್ನರಿಯುತ್ತದೆ. ಸಂಗತಿಗಳ ಹೊಂದಿಕೆ ಅನುಬಂಧನಗಳು ಪ್ರಗತಿಪರವಾದ ಎಲ್ಲ ಶಾಲೆಗಳಲ್ಲಿ ಹೆಚ್ಚಾಗಿ ನಡೆದಿವೆ. ಸಂಗತಿಗಳಲ್ಲಿ ಹುದುಗಿರುವ ಪರಸ್ಪರ ಸಂಬಂಧವನ್ನು ಶೋಧಿಸಿ ತೆಗೆಯುವದರಿಂದ ಜ್ಞಾನವಿಕಾಸವಾಗುತ್ತದೆ. ಹೀಗೆ ಮಾಡುವದರಿಂದ, ವಿಷಯಗಳ ಬಗೆಗೆ ಹುಟ್ಟಿದ ಜ್ಞಾನವು ಲಭಿಸುವದಲ್ಲದೆ, ಕಲಿಯುವವರ ಹಾಗೂ ಕಲಿಸುವವರ ಶ್ರಮ-ವೇಳೆಗಳ ಉಳಿತಾಯವಾಗುತ್ತದೆ.

ಬಹು-ವರ್ಗಗಳ ಕಲಿಸುವಿಕೆ

[illegible] ಉಪಯುಕ್ತವಾದ ಹಂಚಿಕೆಯೊಂದರೆ ಬಹುವರ್ಗಗಳ ಕಲಿಸುವಿಕೆ. ವರ್ಗಗಳನ್ನು ಇದ್ದ ಹಾಗೆ ಇಟ್ಟು, ಅವುಗಳಲ್ಲಿ ಎರಡು ಇಲ್ಲವೆ ಹೆಚ್ಚು ವರ್ಗಗಳನ್ನು ಒಂದೇ ವೇಳೆಗೆ ಕೆಲವು ವಿಷಯಗಳಲ್ಲಿ ಮಾತ್ರ ಕಲಿಸಬಹುದು. ಉದಾಹರಣಾರ್ಥವಾಗಿ, ಎಲ್ಲ ವರ್ಗಗಳಿಗೆ ಸೃಷ್ಟಿ ನಿರೀಕ್ಷಣ, ಶಾರೀರಿಕ ಶಿಕ್ಷಣ ಇಲ್ಲವೆ ಕೈಕೆಲಸ ಇವುಗಳನ್ನು ಕಲಿಸಲು ಕಠಿಣವೆನಿಸುವದಿಲ್ಲ. ಉಳಿದ ವಿಷಯಗಳಲ್ಲಿ ಎಲ್ಲ ವರ್ಗಗಳನ್ನು ಕೂಡಿಸದೆ, ವಾಚನ, ಸಾಮಾಜಿಕ ವಿಷಯಗಳು, ಶಬ್ದ ರಚನೆ, ವ್ಯಾಕರಣ ಮೊದಲಾದವುಗಳ ಸಲುವಾಗಿ ಎರಡು ಇಲ್ಲವೆ ಹೆಚ್ಚು ವರ್ಗಗಳನ್ನು ಕೂಡಿಸಿ ಗುಂಪುಗಳನ್ನು ಮಾಡಬಹುದು. ಗುಂಪುಗಳನ್ನು ಮಾಡುವಾಗ ಒಂದು ಕಟ್ಟು-ನಿಟ್ಟಿಗೆ ಹೊಕ್ಕದೆ ಅಜಮಾಸಿನ ಮೇಲಿಂದ ಮಾಡಬೇಕು. ಶಿಕ್ಷಣವು ಮಿತ[illegible]ದಿಂದಲೂ ಪರಿಣಾಮಕಾರಿಯಾಗಿಯೂ ಆಗುತ್ತಿದ್ದರೆ ಮಾತ್ರ ಈ ಹಂಚಿಕೆಯನ್ನು ಕೈಕೊಳ್ಳಬೇಕು.

ಶಿಫ್ಟ ಪದ್ಧತಿ

ಮಕ್ಕಳ ಸಂಖ್ಯೆಯು ೫೦ ಇಲ್ಲವೆ ೬೦ ಕ್ಕಿಂತ ಹೆಚ್ಚು ಇದ್ದರೆ ಮತ್ತು ಶಿಕ್ಷಕರು ದೊರೆಯದಿದ್ದರೆ ಶಾಲೆ ನಡೆಸಿಕೊಂಡು ಹೋಗಲು ಬಾರದಂತಿದ್ದರೆ, ಶಿಕ್ಷಕರು ಶಿಫ್ಟ ಪದ್ಧತಿಯನ್ನು ಬಳಕೆಯಲ್ಲಿ ತರುವದು ಲೇಸು. ಒಟ್ಟು ನಾಲ್ಕು ಕ್ಲಾಸುಗಳಿದ್ದರೆ ಎರಡು ಮುಂಜಾನೆ ಎರಡು ಸಂಜೆಗೆ ಇಡಬಹುದು. ಇದರಿಂದ ಶಿಕ್ಷಕನ ಕೆಲಸವು ಹಗುರಾಗಿ ಸರತಿಗೆ ಎರಡೇ ಕ್ಲಾಸುಗಳನ್ನು ಕಲಿಸಬೇಕಾಗುವದು. ಈ ಪರಿಸ್ಥಿತಿಯಲ್ಲಿ ಶಿಫ್ಟ ಪದ್ಧತಿಯಲ್ಲಿ ಎಷ್ಟೊಂದು ಕ್ಲಿಷ್ಟತೆ ಹಾನಿಯಾಗದೆ ಶಿಕ್ಷಕನ ಕೆಲಸವು ಹೆಚ್ಚು ಹಗುರಾಗುತ್ತದೆ. ಸಾಧಾರಣವಾಗಿ [illegible] ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯು [illegible] ದಿಂದ ಶಿಫ್ಟ ಪದ್ಧತಿಯು ಅವಶ್ಯಕವೆನಿಸಿ [illegible] ಬಂದಿಲ್ಲ.

(ಮುಂದುವರಿಯುವದು)

ಹೊಸ ಶಿಕ್ಷಣದ ಕೆಲವು ಉಪಕರಣಗಳು

ಶ್ರೀ. ಲ. ಗ. ಭಟ್ಟ, ೨ನೆಯ ವರ್ಷ ಶಿಕ್ಷಕ-ವಿದ್ಯಾರ್ಥಿ, ಟ್ರೇನಿಂಗ ಕಾಲೇಜ, ಕಾರವಾರ.

ಹೊಸ ಶಿಕ್ಷಣದ ಅಂಗವಾದ **ಸಫಾಯಿ, ಮತ್ತು ವಿಷಯುಗಳನ್ನು ಕಲಿಸುವಿಕೆ** ಇವುಗಳಿಗೂ ಕೆಲವು ಸಾಧನಗಳು ಬೇಕಾಗುತ್ತವೆ. ಅವು ಉತ್ತಮ ಮತ್ತು ತಾಳಿಕೆಯುಳ್ಳವು ಇದ್ದರೆ ಕೃತಿಯನ್ನು ಕಡಿಮೆ ವೇಳೆಯಲ್ಲಿ ಸ್ವಲ್ಪೇ ಪರಿಶ್ರಮಮಾಡಿ ಮುಗಿಸಬಹುದು. ಉಪಕರಣಗಳ ಬಳಕೆಯು ಒಂದಿಲ್ಲೊಂದು ರೀತಿಯಿಂದ ಸೃಷ್ಟಿಯ ಆರಂಭದಿಂದಲೂ ಮನುಷ್ಯನಿಂದಮಾಡಿಕೊಳ್ಳಲ್ಪಡುತ್ತಾ ಬಂದಿದೆಯೆಂದು ಪ್ರಭುಸಮ್ಮತವಾದ ವೇದದಿಂದಲೂ, ಕಾಂತಾಸಮ್ಮಿತವಾದ ನಾಟಕಗಳಿಂದಲೂ, ಮಿತ್ರ ಸಮ್ಮಿತವಾದ ರಾಮಾಯಣ, ಮಹಾಭಾರತಗಳಿಂದಲೂ, ಚರಿತ್ರಾತ್ಮಕವಾದ ಇತಿಹಾಸಗಳಿಂದಲೂ ತಿಳಿದು ಬರುತ್ತದೆ. ಹಿಂದಿನದನ್ನು ಆಧರಿಸಿಯೇ ಹಿಂದಿನದು ನಡೆಯುತ್ತದೆ. ಪೂರ್ವಿಕರು ಸಹ ಕೆಲವು ಸಾಧನಗಳನ್ನು ಖರ್ಚು ಇಲ್ಲದೆ ನೈಸರ್ಗಿಕ ವಸ್ತುಗಳಿಂದ ತಯಾರಿಸಿಕೊಳ್ಳುತ್ತಿದ್ದರು. ಅವುಗಳ ಬಳಕೆ ಈಗೀಗ ಕಡಿಮೆಯಾಗುತ್ತಾಗುತ್ತ ಸಂಪೂರ್ಣ ಮಾಯವಾಗಲಿಕ್ಕೆ ಹತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಅವುಗಳನ್ನು ಸಹ ನಾವು ಪುನರುಜ್ಜೀವನಗೊಳಿಸುವದು ಅವಶ್ಯಕವಿರುತ್ತದೆ. ಲವನ್ನು ಈ ಕೆಳಗೆ ಉಲ್ಲೇಖಿಸುವೆ.

ಸಫಾಯಿ:— ಸಫಾಯಿಗೆ ಕಸಬರಿಗೆ, ಬುಟ್ಟಿ, ಸಲಿಕೆ, ಕುರುಪಿ ಇವು ಸಾಮಾನ್ಯವಾಗಿ ಉಪಯೋಗಿಸಲ್ಪಡುತ್ತವೆ. ಕಸಬರಿಗೆಯನ್ನು ನಾವು ಸ್ವತಃ ತಯಾರಿಸಿಕೊಳ್ಳಬಹುದು. ಅದನ್ನು ತೆಂಗಿನ ಗರಿಗಳಿಂದ, ಮರಗಳ ಚಿಕ್ಕ ಚಿಕ್ಕ ಟೊಂಗೆಗಳಿಂದ, ಅಡಿಕೆಯ ಗರಿಗಳಿಂದ ಅಲ್ಲದೆ ಈಚಲ ಹಾಡುಗಳಿಂದ ತಯಾರಿಸಲು ಬರುತ್ತವೆ. ಇವೆಲ್ಲವುಗಳನ್ನು ನಾವು ಕಸಬರಿಗೆಯ ಬಗ್ಗೆ ಬಳಿಸಿಕೊಂಡರೆ ಬಹುತೇಕವಾಗಿ ಭಾರತದ ಎಲ್ಲ ಹಳ್ಳಿಗಳಲ್ಲಿಯೂ ಕಸಬರಿಗೆಯನ್ನು ವೆಚ್ಚವಿಲ್ಲದೆ ಉಪಯೋಗಿಸಲು ಸಾಧ್ಯವಿದೆ.

ಬುಟ್ಟಿ:— ಬುಟ್ಟಿಗಳನ್ನು ಬೆತ್ತ, ಬಿದಿರು ಮತ್ತು ಮರಗಳಿಗೆ ಹಬ್ಬುವ ಒಂದು ಪ್ರಕಾರದ ಬಳ್ಳಿಗಳು ಇವುಗಳಿಂದ ಸ್ವತಃ ತಯಾರಿಸಿಕೊಳ್ಳಲು ಸಾಧ್ಯವಿರುತ್ತದೆ. ಡಬ್ಬಿ, ಚಹದ ಪೆಟ್ಟಿಗೆ ಅಲ್ಲದೆ ಗೋಣಿ ತಟ್ಟುಗಳಿಗೆ ಬೆತ್ತದ ಇಲ್ಲವೆ ಕಟ್ಟಿಗೆಯ ಚೌಕಟ್ಟಿನಿಂದ ಬುಟ್ಟಿಯನ್ನು ತಯಾರಿಸಿ ಉಪಯೋಗಿಸಬಹುದು. ಹಳ್ಳಿಗಳಲ್ಲಿ ಎಷ್ಟೋ ಮನೆಗಳಲ್ಲಿ ಬುಟ್ಟಿ, ಚಹದಪೆಟ್ಟಿಗೆ, ಗೋಣಿಯ ತಟ್ಟು, ಟಿನ್ನಿನ ಡಬ್ಬಿ ಮುಂತಾದವು ಉಪಯೋಗಕ್ಕೆ ಬೇಕಾಗುವಷ್ಟಕ್ಕಿಂತ ಹೆಚ್ಚು ಇದ್ದವುಗಳು ಮೂಲೆ ಗುಂಪಾಗಿ ಬೀಳುತ್ತವೆ. ಹಳ್ಳಿಗರೆಂದರೆ ಸಾಧಾರಣವಾಗಿ ಶಾಲಾ ಬಾಲಕರ ಪಾಲಕರೇ ಇರುತ್ತಾರೆ. ಶಿಕ್ಷಕರು ಅವರಲ್ಲಿಗೆ "ಉಪಕರಣದಾನ-ಯಜ್ಞ"ಕ್ಕೆ ಹೊರಟರೆ ಉಪಕರಣಗಳ ಸಾಕಷ್ಟು ಸಂಗ್ರಹವು ಸಾಮಾನ್ಯವಾಗಿ ಆಗದೇ ಇರಲಿಕ್ಕಿಲ್ಲ.

ಸಾಲಿಕೆಗಳಿಗೆ ಬೇಕಾಗುವ ಮರದ ಹಿಡಿಕೆ (ಕಾವು) ಗಳನ್ನು ನಾವು ಸ್ವತಃ ತಯಾರಿಸಿಕೊಳ್ಳಬಹುದು. ಅವುಗಳ ಬಗ್ಗೆ ಬಡಿಗನನ್ನು ಆಶ್ರಯಿಸುವದಗತ್ಯವಿಲ್ಲ. ಇವುಗಳ ಸಂಗ್ರಹದ ಬಗ್ಗೆ ಪರ್ವತಿರಮ್ಯ ಪ್ರದೇಶಗಳಿಗೆ ಶೈಕ್ಷಣಿಕ ಪ್ರವಾಸವನ್ನು ಕೈಕೊಳ್ಳುವದು ಯೋಗ್ಯವಿರುತ್ತದೆ.

"ಉಪಕರಣದಾನ-ಯಜ್ಞದಿಂದ" ಶಿಕ್ಷಕರು, ಬಾಲಕರು ಮತ್ತು ಪಾಲಕರು ಇವರಲ್ಲಿ ಒಕ್ಕಟ್ಟು ಮತ್ತು ಪರಸ್ಪರ ಸಹಕಾರ ಭಾವನೆಗಳು ತಲೆದೋರಿದಾಗ, ಶಿಕ್ಷಣದ ಕ್ಷೇತ್ರವನ್ನು ವಿಶಾಲಗೊಳಿಸಿ ಬೆಳಗಿಸಲು ಶಕ್ಯವಾಗುವದು.

ಶಾರೀರಿಕ ಸ್ವಚ್ಛತೆಯೂ ಸಫಾಯಿಯ ಒಂದು ಅಂಗವಾಗಿರುತ್ತದೆ. ಇದಕ್ಕೆ ಬೇಕಾಗುವ ಸಾಬೂನು ಮತ್ತು ಹಲ್ಲಿನ ಪುಡಿ ದಂತ ಮಜ್ಜನ ಕುಂಚ (Tooth Brush) ಇವುಗಳನ್ನು ನಾವು ಅನಿವಾರ್ಯ ಪ್ರಸಂಗಗಳಲ್ಲಿ ಖರೀದಿ

ಮಾಡಿ ಉಪಯೋಗಿಸಬಹುದು. ಸಾಬೂನುಗಳ ಬಗ್ಗೆ: ಅಂಟ್ಲಕಾಯಿ ಮತ್ತು ಸೀಗೆಕಾಯಿಗಳನ್ನು ಒಣಗಿಸಿ ಹಿಟ್ಟು ಮಾಡಿ ಇಟ್ಟುಕೊಳ್ಳಬಹುದು, ಚಿಕ್ಕ ಬಾಲಕರಿಗೆ ಕಡ್ಲೆ, ಹೆಸರು ಮುಂತಾದ ದ್ವಿದಲ ಧಾನ್ಯಗಳ ಹಿಟ್ಟನ್ನು ಉಪಯೋಗಿಸಬಹುದು. ಹೆಡೆಪಂಟಿ (ತೆಂಗಿನ ಗರಿಯ ಬುಡಭಾಗ) ಯನ್ನು ಸುಟ್ಟರೆ ಒಂದು ತರದ ಬೂದಿ ಉತ್ಪನ್ನವಾಗುತ್ತದೆ. ಅದಕ್ಕೆ ಕಾರಬೂದಿ ಅನ್ನುವರು. ಇದರಿಂದ ಸಹ ಶರೀರ ಮತ್ತು ಬಟ್ಟೆಗಳು ಸ್ವಚ್ಛವಾಗುತ್ತವೆ. ಗಂಜಿಯುಳ್ಳ ಬಟ್ಟೆಗಳ ಗಂಜಿಯನ್ನು ಹೋಗಲಾಡಿಸಲು ಸಗಣಿಯ ನೀರನ್ನು ಉಪಯೋಗಿಸಬಹುದು.

ದಂತ ಮಜ್ಜನಕ್ಕೆ: ಇದ್ದಲಿ, ಮತ್ತು ಉಪ್ಪಿನ ಪುಡಿ ಇವುಗಳ ಮಿಶ್ರಣ, ಉಮಿಕರಿ, ಬೆರಣಿ (ಕುಳ್ಳು) ಕರಿ, ಸೀತಾಪ್ಪಲದ ಹಂಡೆ ಅಥವಾ ಹೂವೆಯ್ಯುವುಸಿ ಇವುಗಳನ್ನು ಸ್ವತಃ ಖರ್ಚು ಇಲ್ಲದೆ ಸಂಗ್ರಹಿಸಲು ಸಾಧ್ಯವಿದೆ. ದಂತ ಮಜ್ಜನ ಕುಂಚ (Tooth Brush) ದ ಬಗ್ಗೆ ತೆಂಗಿನ ಕಾತಿಯಿಂದ ತಯಾರಿಸಿದ ಕುಂಚ, ಉತ್ತರಾಣಿ, ಗೋಟಕ, ಕಹಿಬೇವು, ಜಾಲಿ ಮುಂತಾದವುಗಳ ದೇಟುಗಳನ್ನು ಸರಿಯಾಗಿ ಕತ್ತರಿಸಿ ತಯಾರಿಸಿದ ಕುಂಚಗಳು ಇವುಗಳನ್ನು ಉಪಯೋಗಿಸಬಹುದು.

ಕಲಿಸುವಿಕೆಯ ಉಪಕರಣಗಳು.

ದೃಕ್ ಶಿಕ್ಷಣವು ಬಂದಂದಿನಿಂದ ಇವುಗಳಿಗೆ ಮಹತ್ವ ಹೆಚ್ಚಾಯಿತು. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಿವೆ.

ಕರಿಹಲಿಗೆ:— ಇದು ಕಾಟಕೋನ ಚೌಕೋನಾಕಾರದ್ದು ಇರುವ ಮತ್ತು (೩×೨) ಚೌರಸ ಆಕಾರದ್ದೂ ಇರಬಹುದು. ಚಿಕ್ಕ ಮಕ್ಕಳ ಶಾಲೆಗಳಲ್ಲಿ ಭಾರವಾದ ಕರ್ರೀ ಹಲಿಗೆ ಅಷ್ಟು ಉಪಯೋಗವಿಲ್ಲ. ಏಕೆಂದರೆ ಬಾಲಕರು ಸಗಿಸಬೇಕಾದರೆ, ಉರುಳಿದರೆ ಅಪಘಾತ ಪ್ರಸಂಗ ಬರುತ್ತದೆ. ಆದರಿಂದ ದೇವದಾರು; (ಪ್ಲಾಯ್‌ವುಡ್) ಮುಂತಾದ ತೆಳುವಾದ ಹುರು ಬುರುಕು ಹಲಿಗೆಯನ್ನು ಉಪಯೋಗಿಸಿದರೆ ಒಳಿತು. ಡಾಂಬರ ಇಲ್ಲವೆ ಒಂದು ತರದ ಕಪ್ಪುಬಣ್ಣ ಇವುಗಳನ್ನು ಸ್ವತಃ ಅವುಗಳಿಗೆ ಬಳೆಯಬಹುದು. ತೆಳುವಾದ ಹಲಿಗೆಗಳಿಗೆ ಚೌಕಟ್ಟನ್ನು ಮಾತ್ರ ಹಾಕಬೇಕಾಗುತ್ತದೆ. ಗೋಡೆಗಳಿಗೂ ಕರ್ರೀ ಹಲಿಗೆಯನ್ನು ನಿರ್ಮಿಸಬಹುದು. ಇಲ್ಲವೆ ಅವುಗಳಿಗೆ ಡಾಂಬರ ಇಲ್ಲವೆ ಕಪ್ಪು ಬಣ್ಣಗಳನ್ನು ಬಳದು ತಯಾರಿಸಿಕೊಳ್ಳಬಹುದು. ಕರೀಹಲಿಗೆಯು ಸ್ವಲ್ಪ ಹುರುಬುರುಕು ಕಡಿಮೆ ಖರ್ಚಿನದ್ದೂ, ಅಪಾಯರಹಿತವೂ, ವರ್ಗ ಸಂವಿಧಾನಕ್ಕೆ ಯೋಗ್ಯವೂ ಇರಬೇಕು. ದಾಂಡೇಲಿಯಲ್ಲಿಯ ಪ್ಲಾಯವುಡ್ ಕಂಪನಿಯಲ್ಲಿ ತೆಳುವಾದ ಹಲಿಗೆಯ ಸಾಮಾನುಗಳು ತಯಾರಾಗುತ್ತವೆಂತೆ.

ಚಿತ್ರಕಲೆ:— ಶಿಕ್ಷಣದಲ್ಲಿ ಇದಕ್ಕೆ ಮಹತ್ವದ ಸ್ಥಾನವಿರುತ್ತದೆ. "ಬಾಲಕರು ದುಂಡಗಾಗಿ ಅಕ್ಷರಗಳನ್ನು ಬರೆಯಬೇಕಾದರೆ, ಅವರು ಚಿತ್ರಕಲೆಯ ಅಭ್ಯಾಸವನ್ನು ಮಾಡಬೇಕು" ಎಂದು ಗಾಂಧೀಜಿಯವರು ಹೇಳಿದರು. ಇದಕ್ಕೆ ಉಪಯೋಗಕ್ಕೆ ಬೇಕಾಗುವ ಕುಂಚ ಮತ್ತು ಬಣ್ಣಗಳನ್ನು ಪ್ರಥಮತಃ ಬಾಲಕರಿಗೆ ಕಲಿಸುವ ಬಗ್ಗೆ ಸ್ವತಃ ನಾವು ಸಂಗ್ರಹಿಸಿ ತಯಾರಿಸಿ ಉಪಯೋಗಿಸಬಹುದು. ಕುಂಚಗಳನ್ನು ಕಾತಿಯ ಮೃದು ಎಳೆಗಳಿಂದ, ಹುಲ್ಲಿನ ರೋಮಗಳಿಂದ, ಪಕ್ಷಿಗಳ ಗರಿಗಳಿಂದ ಇಲ್ಲವೆ ಪುಂಡಿ ಮೊದಲಾದ ನಾರುಗಳಿಂದ ತಯಾರಿಸಿಕೊಳ್ಳಬಹುದು.

ಬಣ್ಣ:— ಬಣ್ಣದ ಬಗ್ಗೆ ಭೂಮಿಯಲ್ಲಿ ದೊರೆಯುವ (ಮಟ್ಟಿ ಕಲ್ಲು ವ ಜಾಜಿನ ಕಲ್ಲು) ಸೇಡಿ ಮಣ್ಣು (ಬಿಳಿಯದು) ಸುಣ್ಣ ಮತ್ತು ಅರಿಷಿಣವನ್ನು ಸೇರಿಸಿ ತಯಾರಿಸಿದ ಕೆಂಪು ಅರದಾಳದ ಕಲ್ಲು (ಬಿಳಿಯ ಬಣ್ಣದ ಬಗ್ಗೆ) ದೀಪಗಳಿಂದ ಉತ್ಪನ್ನವಾಗುವ ಕಾಡಿಗೆ, ಹೊಗೆ ಕೆಂಡಿಗಳಿಂದ ಸಂಗ್ರಹಿಸಬಹುದಾದ ಕಪ್ಪುಪುಡಿ (ಕಪ್ಪು ಬಣ್ಣದ ಬಗ್ಗೆ) ಸಂಗ್ರಹಿಸಿ ಉಪಯೋಗಿಸಿಕೊಳ್ಳಬಹುದು.

ಚಿತ್ರಕಲೆಯಲ್ಲಿ ಬಾಲಕರು ಪ್ರಗತಿಯನ್ನು ಗಳಿಸುತ್ತ ಬಂದಂತೆ ಅವರ ಮಾದರಿಗಳನ್ನು ಕಾಯ್ದಿಡಲು ಯೋಗ್ಯವಾಗುವಂತೆ ಪೇಟೆಯಲ್ಲಿ ಸಿಗತಕ್ಕ ಉತ್ತಮ ಬಣ್ಣಗಳನ್ನು ಕುಂಚಗಳನ್ನು ಉಪಯೋಗಿಸಬಹುದು.

ಭೂಗೋಲ:— ಈ ವಿಷಯವನ್ನು ತಿಳಿಸುವಾಗ ಗ್ಲೋಬು ಅತ್ಯಗತ್ಯವಿರುತ್ತದೆ. ಇದನ್ನು ರದ್ದಿ ಪುಟ್ಟಿ ಕಾಗದದಿಂದ ಸ್ವತಃ ತಯಾರಿಸಲು ಸಾಧ್ಯವಿದೆ. ಈ ರೀತಿ ತಯಾರಿಸಿದ್ದನ್ನು ಕುಮಟಾ ತಾಲೂಕ ಚಿತ್ರಗಿ ಶಾಲೆಯಲ್ಲಿ ನೋಡಬಹುದು. ಭೂಗೋಲ ಜ್ಞಾನವನ್ನು

ಮಾಡಿ ಕೊಡುವಾಗ್ಗ ಯಾವ ಯಾವ ಭಾಗವನ್ನು ಕಲಿಸ ಬೇಕಾಗುತ್ತದೆಯೋ ಆ ವಿಭಾಗದ ನಕಾಶೆಯನ್ನು ದೊಡ್ಡದಾಗಿ ತೆಗೆದು, ಇಲ್ಲವೆ ತೆಗೆಯಿಸಿ ಬಾಲಕರ ಮುಂಗಡೆಯಲ್ಲಿಯೇ ತುಂಬಿ ಅಥವಾ ತುಂಬಿದ್ದನ್ನು ಸರಿಯಾಗಿ ತೋರಿಸಿ ಕಲಿಸುವದು ಅವಶ್ಯವಿರುತ್ತದೆ. ಕನಿಷ್ಠಪಕ್ಷ ಶಾಲೆಯಲ್ಲಿ ಒಂದು ಜಗತ್ತಿನದು, ಮತ್ತೊಂದು ಭಾರತದ್ದು. ಹೀಗೆ ಎರಡು ಬಾಹ್ಯರೇಷೆಯ ನಕಾಶೆಗಳು ದೊಡ್ಡ ಪ್ರಮಾಣದಿಂದ ತೆಗೆದವುಗಳಿದ್ದರೆ, ಬೇಕಾದ ಭಾಗಗಳನ್ನು ಆಗಿಂದಾಗ ತುಂಬಿ ತೋರಿಸಲು ಸಾಧ್ಯವಾಗುತ್ತದೆ. ಶಾಲೆಯ ಮುಂಭಾಗದಲ್ಲಿ ಒಂದು ವಿಶಿಷ್ಟ ಸ್ಥಳದಲ್ಲಿ ಅವಶ್ಯವಿರುವ ನಕಾಶೆಗಳನ್ನು ಕೊರೆಯಿಸಿ ಇಲ್ಲವೆ ಕೊರೆದು ಸ್ವಾಭಾವಿಕ ವಿಭಾಗಗಳನ್ನು ತೋರಿಸಲು ಸಾಧ್ಯವಾಗುವಂತೆ, ನೈಸರ್ಗಿಕ ವಸ್ತುಗಳಿಂದ ತುಂಬಿ ಇಲ್ಲವೆ ತುಂಬಿಸಿ ಇಡಬೇಕು. ಇದರಿಂದ ಸ್ವಾಭಾವಿಕ ವಿಭಾಗಗಳ ಕಲ್ಪನೆಯು ಕಾಗದದ ಹಾಳೆಯಲ್ಲಿ ತೆಗೆದ ನಕಾಶೆಗಿಂತಲೂ ಹೆಚ್ಚು ಚೆನ್ನಾಗಿ ಬಾಲಕರಿಗೆ ಆಗಲು ಶಕ್ಯವಿದೆ.

ಇತಿಹಾಸ:— ಇದು ಬರೆ ಘಟನಾತ್ಮಕ ಚರಿತ್ರೆ; ಶಬ್ದಚಿತ್ರಣದ ಮೂಲಕವೇ ಕಲಿಸಬಹುದು ಎನ್ನುವ ದಾದರೂ ನಕಾಶೆಯ ಉಪಯೋಗವು ಇದಕ್ಕೂ ಅನ್ವಯಿಸುತ್ತದೆ. ರಾಜ ಮಹಾರಾಜರು ಮಾಡಿದ ರಾಜ್ಯ ವಿಸ್ತಾರ, ಆ ಕಾಲಕ್ಕೆ ಹೆಸರಾದ ರಾಜ್ಯಧಾನಿಗಳು ಮುಂತಾದವುಗಳನ್ನು ನಕಾಶೆಯ ಮೂಲಕ ಜ್ಞಾನ ಮಾಡಿ ಕೊಡಬಹುದು. ಇದಲ್ಲದೆ ಐತಿಹಾಸಿಕ ವ್ಯಕ್ತಿಗಳು ಕಟ್ಟಡಗಳು ಇವುಗಳ ಚಿತ್ರಗಳ ಒಂದು ಪುಸ್ತಕವನ್ನು ಸಹ ತಯಾರಿಸಿಕೊಳ್ಳಬಹುದು ಇಲ್ಲವೆ ಸಂಗ್ರಹಿಸಬಹುದು.

ಸಾಮಾನ್ಯ ವಿಜ್ಞಾನ:—ಈ ವಿಷಯವನ್ನು ಕಲಿಸಲು ಉಪಯೋಗ ಬೀಳುವ ಎಲ್ಲ ಸಾಧನಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸಲು ಸಾಧ್ಯವಿದೆಯೋ ಎನ್ನುವ ಅನುಮಾನವಿದೆ ಈ ವರೆಗೆ ಪ್ರಾಥಮಿಕ ಶಾಲೆಗಳಲ್ಲಿ ಅವೆಲ್ಲವುಗಳನ್ನು ಉಪಯೋಗಿಸಿದ್ದು ನನ್ನ ದೃಷ್ಟಿಯಲ್ಲಿ ಬಿದ್ದಿಲ್ಲ ಪ್ರತ್ಯಕ್ಷ ಉಪಕರಣಗಳನ್ನು ದೊರಕಿಸಲು ಸಾಧ್ಯವಿಲ್ಲದಾಗ ಅದನ್ನು ಕಲಿಸಲು ಸಂಬಂಧಿಸಿದ ಎಲ್ಲ ಆಕೃತಿಗಳನ್ನು ಬಿಡಿಬಿಡಿಯಾಗಿ ತೆಗೆದು ಉಪಯೋಗಿಸುವದು ಅವಶ್ಯವಿರುತ್ತದೆ, ಆದರೂ ಪ್ರಕಾಶವು ಸರಳರೇಷೆಯಲ್ಲಿ ಗಮಿಸುವದು ಪ್ರಕಾಶಪೃಥಕ್ಕರಣ, ಸೂರ್ಯನ ಪ್ರಕಾರಗಳು, ಕಿರಣ ವಕ್ರೀಭವನ ಮುಂತಾದವುಗಳನ್ನು ತಿಳಿಸಲು ಸಾಧನಗಳಾದ ರಟ್ಟಿನ ತುಂಡುಗಳು, ದೀಪದ ಬುರುಡೆ, ಲೋಲಕ, ಕತ್ತರಿ, ಅಡಕೊತ್ತು ಮುಂತಾದವುಗಳನ್ನು ಪ್ರಯತ್ನಪಟ್ಟು ಸಂಗ್ರಹಿಸಬಹುದು ಸಸ್ಯಶಾಸ್ತ್ರವನ್ನು ಕಲಿಸುವಾಗ ಸಾಧ್ಯವಾದ ಮಟ್ಟಿಗೂ ಪ್ರತ್ಯಕ್ಷ ವಸ್ತುಗಳನ್ನು ಉಪಯೋಗಿಸುವದು ಒಳಿತು

ಗಣಿತ:—ಚಿಕ್ಕ ಬಾಲಕರಿಗೆ ಎಣಿಕೆ, ಬೇರಿಜು, ವಜಾಬಾಕಿಗಳನ್ನು ಕಲಿಸಲು ಒಂದು ಗುಂಡಿನ ಚೌಕಟ್ಟು ಇರಲೇಬೇಕು ಅದು ಶಕ್ಯವಿಲ್ಲದ ಪ್ರಸಂಗದಲ್ಲಿ ಗೋಲವಾದ ಸಣ್ಣ ಕಲ್ಲುಗಳು ಚಿನ್ನೆ ಹರಳು, ಅಳ್ಳಿಕ್ಕಾಯಿ, ಗಜಗನ ಹರಳು, ಬಕುಳದ ಬೀಜ ಮುಂತಾದವುಗಳನ್ನು ಸಂಗ್ರಹಿಸಬಹುದು ರಟ್ಟಿನ ಮತ್ತು ತಿಳುವಾದ ಮರದ ಹಲಿಗೆಯ ತುಂಡುಗಳಲ್ಲಿ ಮೂಲಾಕ್ಷರಗಳನ್ನು ಕೊರೆದು ಇಲ್ಲವೆ ಬರೆದು ತಯಾರಿಸಿದ ಒಂದು ಸೆಟ್ಟು ಮತ್ತು ಅದರೊಡನೆ ಮೂಲಾಕ್ಷರಗಳನ್ನು ತೋರಿಸುವ ಒಂದು ಚಿತ್ರಪಟ ಇವುಗಳನ್ನು ತಯಾರಿಸಿ ಇಲ್ಲವೆ ಸಂಗ್ರಹಿಸಿ ಇಡಬೇಕು.

ಭೂಮಿತಿ:— ತ್ರಿಕೋನ, ಚೌಕೋನ, ವರ್ತುಲ ಮುಂತಾದವುಗಳ ಬಗ್ಗೆ ಜ್ಞಾನವನ್ನು ಮಾಡಿಕೊಡುವಾಗ ಅವುಗಳ ಪ್ರತ್ಯಕ್ಷ ಕಲ್ಪನೆಯನ್ನು ಮಾಡಿಕೊಡುವ ಬಗ್ಗೆ ಅವುಗಳ ಆಕಾರಗಳ ರಟ್ಟುಗಳನ್ನು ತಗಡುಗಳನ್ನು ಇಲ್ಲವೆ ತೆಳುವಾದ ಹಲಗೆಗಳನ್ನು ಸಂಗ್ರಹಿಸಬೇಕು. ಇಲ್ಲವೆ ತಯಾರಿಸಿ ಇಟ್ಟುಕೊಳ್ಳಬೇಕು ಒಂದು ಭೂಮಿತಿ ಉಪಕರಣದ ಸೆಟ್ಟು ಅತಿ ಅವಶ್ಯವಿರುತ್ತದೆ.

ಕಥೆ:— ಚಿಕ್ಕ ಮಕ್ಕಳಿಗೆ ವಿಚಾರಶಕ್ತಿ ಬೆಳೆಯಲು ಅನುಕೂಲವಾಗಬೇಕೆಂದು ಬಾಲಕರಿಂದ ಚಿತ್ರಗಳ ಮೂಲಕವೇ ಕಥೆಯು ಹೊರಡುವಂತಹ ಚಿತ್ರಗಳನ್ನು ಸಂಗ್ರಹಿಸಬೇಕು; ಇಲ್ಲವೆ ತೆಗೆದಿಡಬೇಕು

ಆಟಿಗೆಗಳು:—ಬಾಲಕರು ಸಂತುಷ್ಟರೂ, ಉತ್ಸಾಹಿಗಳೂ, ಸ್ವಾಭಿಮಾನಿಗಳೂ ಆಗಬೇಕಾದರೆ ಅವರಿಂದಲೇ ಮಣ್ಣಿನಿಂದ ತರತರದ ಹಣ್ಣುಗಳನ್ನು, ಪ್ರಾಣಿಗಳನ್ನು,

ಪಕ್ಷಿಗಳನ್ನು, ಕಾಯಿಪಲ್ಲೆಗಳನ್ನು, ಗಣಪತಿ ಮುಂತಾದ ಮೂರ್ತಿಗಳನ್ನು, ಗಣಪತಿಗಳನ್ನು ಸಾಧ್ಯವಿದ್ದ ಮಟ್ಟಿಗೂ ತಯಾರಿಸಿ ಅವು ಚಂದಕಾಣಲು ಬಣ್ಣವನ್ನು ಕೊಡಿಸಿ ಇರಿಸಬಹುದು.

ಕೃತ್ರಿಮ ಉಪಕರಣಗಳನ್ನು ಪ್ರತ್ಯಕ್ಷ ವಸ್ತುಗಳನ್ನು ತೋರಿಸಿ ಕಲಿಸಲು ಸಾಧ್ಯವಾಗದಿರುವಾಗ ಮಾತ್ರ ಉಪಯೋಗಿಸುದು ಒಳಿತು. ಸರಕಾರದಿಂದ ಕೊಡಲ್ಪಡುವ ಶೈಕ್ಷಣಿಕ ಉಪಕರಣಗಳನ್ನು ಶಿಕ್ಷಣಾಧಿಕಾರಿಗಳ ಮುಖಾಂತರ ಪಡೆದು ಕೊಳ್ಳಬಹುದು. ಉಳಿದ ಕೆಲವನ್ನು ತಯಾರಿಸಿ ಕೊಳ್ಳಬಹುದು ಈ ಬಗ್ಗೆ ಬಾಲಕರ ಪಾಲಕರ ನೆರವನ್ನು ಕೋರಬಹುದು.

ಒಟ್ಟಿನಲ್ಲಿ ಭಾರತದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕಾಯಾ, ವಾಚಾ, ಮನಸಾ, ಹೆಣಗಾಡುವದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯವಾಗಿರುತ್ತದೆ. [ಈ ಲೇಖನವು ನನ್ನ ತರಬೇತಿಯ ಅವಧಿಯಲ್ಲಿ ಹಾಗೂ ಈ ವರೆಗೆ ಅನುಭವಕ್ಕೆ ಬಂದವುಗಳಲ್ಲಿಯ ಕೆಲವಂಶವನ್ನು ಹೇಳಬಯಸುತ್ತೇನೆ.]

ಹೊಸ ಶಿಕ್ಷಣ ಕ್ಷೇತ್ರವು ಶಿಕ್ಷಕರ ಪ್ರೇಮ ಮತ್ತು ಸಹಾಯ, ಬಾಲಕರ ಗೆಯ್ಮೆ ಮತ್ತು ಜ್ಞಾನ ಪಾಲಕರ ಉತ್ತಮ ಸಂತತಿ ನಿರ್ಮಾಣ ಮತ್ತು ಆರ್ಥಿಕ ಸಾಹಾಯ, ಶಿಕ್ಷಣಾಧಿಕಾರಿಗಳ ದಯೆ, ಮತ್ತು ಸಹಕಾರ ಇವುಗಳಿಂದ ವಿಶಾಲವಾಗುತ್ತ ನಡೆಯಲಿ, ಸರ್ವರೂ ಸುಸಂಸ್ಕೃತರಾಗಲಿ! ಮತ್ತು ಸುಖಿಗಳಾಗಲಿ! ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಸಿರಿಗನ್ನಡಂಗೆಲ್ಗೆ

ಸಮುದ್ರದಾಚೆಯ ಸಮಾಜ ಶಿಕ್ಷಣ

(Foreign Review, February, 1948 ರ ಸಂಚಿಕೆಯಲ್ಲಿ ಪ್ರಕಟಿಸಲಾದ "Adult Education Abroad" ಎಂಬ ಲೇಖನದ ಆಧಾರದಿಂದ)

ಲೇಖಕರು: ಶ್ರೀ. ವ್ಹಿ. ಎ. ಉಮರಾಣಿ ಬಿ. ಎ., ಬಿ. ಟಿ., ಡಿ. ಬಿ. ಇ. ಧಾರವಾಡ

ಶಿಕ್ಷಣವು ಬಹಳ ಪುರಾತನವಾದುದು. ಅತಿ ಕಾಡುಸ್ಥಿತಿಯಲ್ಲಿ ಇರುವ ಸಮಾಜಗಳಲ್ಲಿಯೂ ಸಂಗಡದ ಎಳೆಯರನ್ನು ತರಬೇತಿಗೊಳಿಸುವ ಪದ್ಧತಿಯುಂಟು. ಎಳೆಯರು ತಮ್ಮ ಜನರ ಸಂಪ್ರದಾಯ ರೂಢಿಗಳನ್ನು ಕಲಿಯಬೇಕಾಗುವದು. ಅವರ ತರಬೇತಿಯು ಬಹುತರವಾಗಿ ಯೌವನ ಪ್ರಾಪ್ತಿಗೆ ಮುಗಿಯುವದು. ಪರೀಕ್ಷೆ ಹಾಗು ದೀಕ್ಷಾವಿಧಿಗಳ ನಂತರ ವಯಸ್ಕರಲ್ಲಿ ಸೇರಿಕೊಳ್ಳುವರು. ಸರಳರೀತಿಯಲ್ಲಿ ಪ್ರಾರಂಭಿಸಲ್ಪಟ್ಟ ಇಂಥ ಪದ್ಧತಿಗಳಿಂದ ಮನುಷ್ಯನು ಚಿಕ್ಕವರನ್ನು ತರಬೇತಿಗೊಳಿಸುವ ಕ್ರಮವನ್ನು ಕೈಕೊಂಡಿರುವನು. ಅದೇ ಇಂದು ಶಾಲಾ ಪದ್ಧತಿ ಎಂದು ರೂಢಿಯಲ್ಲಿ ಬಂದಿರುವದು.

ದುರ್ದೈವದಿಂದ ಪ್ರತಿಯೊಂದು ದೇಶವಲ್ಲಿ ಪುಕ್ಕಟೆಯಾದ ಒತ್ತಾಯದ ಪ್ರಾಥಮಿಕ ಶಿಕ್ಷಣ-ಕ್ರಮವಿಲ್ಲದಿರುವದು ಕಂಡು ಬರುವದು; ಆದರೆ ಅಂಥ ಅವಶ್ಯಕತೆಯನ್ನು ಯಾರೂ ನಿರಾಕರಿಸಿಲ್ಲ. ಪ್ರತಿಯೊಂದು ಪಕ್ಷ ಇಲ್ಲವೆ ಸಂಗಡ ತನ್ನ ಕಾರ್ಯಕ್ರಮದಲ್ಲಿ ಶಿಕ್ಷಣದ ಯೋಜನೆಯನ್ನು ಸೇರಿಸದೆ ಬಿಟ್ಟಿಲ್ಲ.

ಯುರೋಪ ಮತ್ತು ಅಮೇರಿಕಾ ಖಂಡಗಳಲ್ಲಿ ಉಚಿತ ಸಕ್ತಿಯ ಪ್ರಾಥಮಿಕ ಶಿಕ್ಷಣವು ಇತ್ತೀಚೆಗೆ ಉದಯವಾಯಿತು. ಔದ್ಯೋಗಿಕ ಅವಶ್ಯಕತೆಗಳ ಒತ್ತಡ ಹಾಗು ಕೆಲವೊಂದು ಧ್ಯೇಯವಾದಿಗಳ ವೈಯಕ್ತಿಕ ಪ್ರಯತ್ನಗಳ ಫಲವಾಗಿ ಬೆಳವಣಿಗೆ ಹೊಂದಿರುತ್ತದೆ. ಈ ಶಿಕ್ಷಣ ಕ್ರಮವು ಬಾಲ್ಯದಿಂದ ಯೌವನಾವಸ್ಥೆಯ ಪ್ರಾರಂಭದವರೆಗಿನ ಮಕ್ಕಳಿಗೆ ಮಾತ್ರ ಸಂಬಂಧಪಟ್ಟಿರುವದು. ಈ ಕಾರ್ಯಕ್ಕಾಗಿಯೇ ನಿರ್ದಿಷ್ಟಪಡಿಸಲಾದ ಮತ್ತು ನಿರ್ಮಿಸಲಾದ ಕಟ್ಟಡಗಳಲ್ಲಿ ತರಬೇತಿ ಕೊಡಲಾಗುವದು. ವಯೋಮಾನ ಹಾಗು ಯೋಗ್ಯತೆಗಳ ಪ್ರಕಾರ ಹೆಚ್ಚುಕಡಿಮೆ ಮಾಡಲ್ಪಟ್ಟ ಅಭ್ಯಾಸಕ್ರಮವು ಎಲ್ಲರಿಗೂ ಕಡ್ಡಾಯದ್ದಾಗಿರುವದು. ಚಿಕ್ಕವರಿಗೆ ಅವಶ್ಯವಾದ ಅವರ ಬಗೆಗೆ, ಅವರ ಸಮಾಜ ಮತ್ತು ಅವರ ಸುತ್ತಲಿರುವ ಜಗತ್ತಿನ ಬಗ್ಗೆ ಸಾಮಾನ್ಯಜ್ಞಾನ ಮತ್ತು ಓದು, ಬರಹ ಮತ್ತು ಗಣಿತಗಳ ಪದ್ಧತಿಗಳನ್ನು ಕಲಿಸುವದೇ ಅಭ್ಯಾಸಪತ್ರಿಕೆಯ ಧ್ಯೇಯವಿರುವದು.

ಎಲ್ಲ ಮಗುಗಳಿಗಾಗಿ ಉಚಿತ ಸಕ್ತಿಯ ಪ್ರಾಥಮಿಕ ಶಿಕ್ಷಣವು ಇತ್ತೀಚೆಗೆ ಉದಯಿಸಿರುವದು. ಆದರೂ ಜಗತ್ತಿನ ಅನೇಕ ಭಾಗಗಳಲ್ಲಿ ಇದು ಇಲ್ಲದೆ-ಇರುವದರಿಂದ ಇನ್ನ ಸಮಕಾಲೀನ ಜಗತ್ತಿನಲ್ಲಿ ವ್ಯಕ್ತಿಗೆ ಅತ್ಯವಶ್ಯವಾಗಿರುವ ವಿದ್ಯೆಯನ್ನೂ ಕಲೆಯನ್ನೂ ಪಡೆದುಕೊಳ್ಳುವ ಸದಾವಕಾಶವು ಅನೇಕ ಜನರಿಗೆ ದೊರೆತಿಲ್ಲ. ಆರಂಭಿಕ ಶಿಕ್ಷಣವನ್ನು ಪಡೆದ ಕೆಲವರಿಗೆ ಹಲವು ವಿಷಯಗಳಲ್ಲಿ ಹೆಚ್ಚಿನ ಶಿಕ್ಷಣ ಪಡೆಯುವ ಇಚ್ಛೆಯಾಗಿರುವದು; ಹಲವರಿಗೆ ಹೊಸ ವಿಷಯವನ್ನು ಮತ್ತು ಹಲವರಿಗೆ ತಮ್ಮ ವ್ಯವಹಾರಗಳಲ್ಲಿ ರೂಢಿ ಮಾಡುತ್ತಿರುವ ಪ್ರಾತ್ಯಕ್ಷಿಕೆಯ ತಾತ್ವಿಕತೆಯನ್ನು ಕಲಿಯಬೇಕೆಂಬ ಹಂಬಲವಿರುತ್ತದೆ. ಇನ್ನೂ ಕೆಲವರು ಬೌದ್ಧಿಕ ವಿಚಾರ ಸಂಕೀರ್ಣಗಳನ್ನು ಅಪೇಕ್ಷಿಸುವದಲ್ಲದೆ ತಮ್ಮ ವಿರಾಮ ವೇಳೆಯಲ್ಲಿ ಸುಶಿಕ್ಷಿತರ ಸಹವಾಸ ಬಯಸುವರು.

ಈ ಎಲ್ಲ ಪ್ರವೃತ್ತಿಗಳ ಹಾಗು ಇಚ್ಛೆಗಳ ಮೂಲಕವೇ ವಯಸ್ಕರ ಶಾಲೆ, ಸಂಜೆಯ ವರ್ಗಗಳು, ಎಲ್ಲ ತರದ ಶೈಕ್ಷಣಿಕ ಸಂಘಗಳು ಆರಂಭವಾದುವು. ಇವೆಲ್ಲವುಗಳ ಉದ್ದೇಶಗಳು ಬೇರೆ ಬೇರೆ ಯಾಗಿದ್ದವು. ಪ್ರಾರಂಭದಲ್ಲಿ ವ್ಯಕ್ತಿಗಳ ಅಥವಾ ಖಾಸಗಿ ಸಂಸ್ಥೆಗಳ ಮತ್ತು ಚರ್ಚ ಹಾಗು ಸ್ವತಂತ್ರ ಸಮಿತಿಗಳ ಮುಖಾಂತರ ಇವೆಲ್ಲವುಗಳು ಆರಂಭಿಸಲ್ಪಟ್ಟವು. ಬರಬರುತ್ತ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಅಧಿಕಾರಿಗಳ ಆಸ್ಥೆ ಹಾಗು ಬೆಂಬಲವನ್ನು ಪಡೆದುಕೊಂಡವು. ಎರಡು-ಮೂರು ತಲೆಮಾರುಗಳಿಂದ ಉಚಿತವಾದ ಕಡ್ಡಾಯದ ಶಿಕ್ಷಣ ಪದ್ಧತಿಯನ್ನು ಅನುಸರಿಸಿದ ಪರಿಣಾಮವಾಗಿ ಆ ಎಲ್ಲ ದೇಶಗಳಲ್ಲಿ ವಿಶಾಲವಾದ ಮತ್ತು ವೈವಿಧ್ಯಪೂರ್ಣ-ಪ್ರೌಢಶಿಕ್ಷಣ-ಪದ್ಧತಿ ಬೆಳೆದು ಬಂದಿರುವದು.

ವಯಸ್ಕರ ಶಿಕ್ಷಣದ ಪ್ರಕಾರ ಮತ್ತು ರೂಢಿ, ಅಭಿರುಚಿ ಹಾಗು ಅಭ್ಯಾಸಪತ್ರಿಕೆಗಳು ಮಾನವನ ಸ್ವಭಾವಗಳಷ್ಟೇ ಹೇರಳವಾಗಿರುವವು. ಪ್ರತಿಯೊಂದು ದೇಶದಲ್ಲಿ ಈ ಆಂದೋಲನವು ಹೇಗೆ ಬೆಳೆಯಿತೆಂಬುದನ್ನು ಪರೀಕ್ಷಿಸುವದು ಒಂದು ಕುತೂಹಲಾತ್ಮಕ ಸಂಗತಿಯೆನಿಸುವದು.

ಹದಿನೆಂಟನೆಯ ಶತಮಾನದಲ್ಲಿ ಇಂಗ್ಲಂಡ ದೇಶದಲ್ಲಿ ವಯಸ್ಕರಿಗಾಗಿ ಆರಂಭಿಸಿದ ವರ್ಗಗಳು ಪ್ರಚಲಿತವಿದ್ದ ಸಂಗತಿ ತಿಳಿದಿದ್ದಿತು. ಜನರು "ಬಾಯ್ಬಲ್" (The Bible) ವನ್ನು ಸ್ವತಃ ಓದಲು ಶಕ್ತರಾಗಬೇಕೆಂಬ ಧಾರ್ಮಿಕ ಪ್ರವೃತ್ತಿಯ ಒತ್ತಡದ ಮೂಲಕ "ಚರ್ಚ" ದವರು ಓದು ಕಲಿಸಲು ಸಂಜೆಯ ವರ್ಗಗಳನ್ನು ಆರಂಭಿಸಿದರು.

"ಅಶಿಕ್ಷಿತ ಪುರುಷರ ಹಾಗೂ ಸ್ತ್ರೀಯರ ಬೇಡಿಕೆಗಳನ್ನು ಪೂರೈಸುವದಕ್ಕಾಗಿ ಒಂದು ಶತಮಾನದ ಪೂರ್ವದಲ್ಲಿ ವಯಸ್ಕರ ವರ್ಗಗಳು ಮೊದಲಿಗೆ ಪ್ರಾರಂಭಿಸಲ್ಪಡುವ ಕಾಲಕ್ಕೆ ಬ್ರಿಟನ್‌ದಲ್ಲಿ ವಯಸ್ಕರ ಖಾಸಗಿ ಶೈಕ್ಷಣಿಕ ಸಂಸ್ಥೆಯಾದ ಪ್ರೌಢ ಶಾಲಾ ಆಂದೋಲನವು (The Adult School Movement) ಉದಯಿಸಿತು........'

ಹತ್ತೊಂಬತ್ತನೆಯ ಶತಮಾನವು ಕಾರ್ಮಿಕರ ಮಕ್ಕಳಿಗಾಗಿ ಕೊಡಲಾದ ಶೈಕ್ಷಣಿಕ ಅನುಕೂಲತೆಗಳಲ್ಲಿ ಸುಧಾರಣೆಯನ್ನು ಕಂಡು ಕೊಂಡಿತು. ಅದೇ ಮುಂದೆ ೧೮೭೦ ನೆಯ ಇಸ್ವಿಯಲ್ಲಿ ಐದರಿಂದ ಹದಿನಾಲ್ಕು ವಯಸ್ಸಿನ ಎಲ್ಲ ಮಕ್ಕಳಿಗಾಗಿ ಆರಂಭಿಸಲ್ಪಟ್ಟ ಉಚಿತ, ಒತ್ತಾ

ಯುದ ಆರಂಭಿಕ ಶಿಕ್ಷಣದಿಂದ ಊರ್ಜಿತಾವಸ್ಥೆಯನ್ನು ಹೊಂದಿತು. ಇದರಿಂದ ಸಮಕಾಲೀನ ವಯಸ್ಕರು ಶಿಕ್ಷಿತರಾಗಿ ಉಳಿದರು; ಆದರೆ ಅದು ಸಮಾಜ ಸುಧಾರಕರಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಅಲಕ್ಷಿಸಲ್ಪಟ್ಟ ವಯಸ್ಕರ ಆವಶ್ಯಕತೆಗಳನ್ನು ಪೂರೈಸುವದರಲ್ಲಿ ಅಭೂತಪೂರ್ವ ಹುರುಪನ್ನು ಕೊಟ್ಟಿತು. ಶಿಕ್ಷಣ ಬಗೆಗೆ ಆಸ್ಥೆಯು ಹೆಚ್ಚಾದುದರಿಂದ ಮಕ್ಕಳ ಸಲುವಾಗಿ ತೆರೆದ ಆರಂಭಿಕ ಶಾಲೆಗಳಲ್ಲಿ ಸ್ಥಾನಿಕ ಶಿಕ್ಷಣಾಧಿಕಾರಿಗಳಿಂದ ಸಂಜೆಯ ವರ್ಗಗಳು ತೆರೆಯಲ್ಪಟ್ಟವು.

ಇಂಥ ಸಹಜತೆಯ ಪ್ರಾರಂಭದಿಂದ, ದೇಶದ ತುಂಬೆಲ್ಲ ವಾಸವಾಗಿರುವ ಎಲ್ಲ ಪುರುಷರಿಗೂ ಸ್ತ್ರೀಯ-ರಿಗೂ ಸಂಬಂಧಿಸಿದ ವಿಶಾಲವಾದ ಆಂದೋಲನವು ಬೆಳೆದಿರುತ್ತದೆ; ಮತ್ತು ಕೇವಲ ತಾಂತ್ರಿಕ ಹಾಗೂ ವೃತ್ತಿಯ ಮಾಲೋದ್ಯೋಗಗಳಿಂದ ಪ್ರಖ್ಯಾತವಾದ ಮತ್ತು ಅತಿ ಗಹನವಾದ ಮಾನವನ ವಿಚಾರ ಪ್ರಣಾಲಿಯ ವಿಷ-ಯಗಳ ವರೆಗೂ ಬೆಳೆದಿರುತ್ತದೆ ಬೇರೆಬೇರೆ ಸಂಸ್ಥೆಗಳಿಂದ. ಈ ವಿವಿಧ ಅಭ್ಯಾಸಗಳು ಯೋಜಿಸಲ್ಪಡುತ್ತವೆ ಹಾಗೂ ಪೂರೈಸಲ್ಪಡುತ್ತವೆ. ಕೆಲವು ಧಾರ್ಮಿಕ ಉದ್ದೇಶದಿಂದಲೂ ಹಲವು ರಾಜಕೀಯ ಮತ್ತು ಉಳಿದವುಗಳು ಔದ್ಯೋಗಿಕ ಹಾಗು ಬೌದ್ಧಿಕ ಪ್ರಯೋಜನಗಳಿಗಾಗಿ ಹುಟ್ಟಿದವು. ಓದು, ಬರಹ ಮತ್ತು ಗಣಿತಗಳ ಆರಂಭಿಕೆಗಳನ್ನು ವಯಸ್ಕರಿಗೆ ಕಲಿಸಿ ಸೇವೆಯನ್ನು ಸಲ್ಲಿಸುವ ಮೊದಲಿನ ಕ್ರಮವು ಸಂಪೂರ್ಣವಾಗಿ ಮಾಯವಾಗಿದೆ. ಪ್ರತಿಯೊಬ್ಬರು ಬಾಲ್ಯದಲ್ಲಿ ಶಾಲೆಗೆ ಹೋಗುವದರಿಂದ ಇವು ಅನಾವಶ್ಯಕವಾಗಿವೆ. ಇದೂ ಅಲ್ಲದೆ, ಶಾಲೆಗಳಲ್ಲಿ ಪ್ರಾಥಮಿಕ ಜ್ಞಾನ–ಸಂಗ್ರಹ ಕೊಡಲಾಗುವದು; ಆ ಕಾರಣದಿಂದ ಪ್ರೌಢ ವರ್ಗಗಳಲ್ಲಿ ಮುಂದುವರೆದ ವಿಷಯಗಳನ್ನು ಚರ್ಚಿಸಲು ಸಾಧ್ಯವಾಗುವದು. ಸಮಾಜ ಶಿಕ್ಷಣವನ್ನು ವಿಶ್ವವಿದ್ಯಾಲಯಗಳೊಂದಿಗೆ ಜೋಡಿಸಲಾಗಿದೆ. ವಿಶ್ವವಿದ್ಯಾಲಯಗಳ ವಿಸ್ತರಣ ವರ್ಗಗಳ (University Extension Classes) ಹಾಗು ಕಾರ್ಮಿಕರ ಶಿಕ್ಷಣ ಸಮಿತಿ (Workers' Educational Association) ಗಳ ಮುಖಾಂತರ ವಿಶ್ವವಿದ್ಯಾಲಯದ ಮಟ್ಟದ ಮೂರು ವರ್ಷ ಅವಧಿಯ ಅಭ್ಯಾಸವನ್ನು ಸಂಜೆಯ ವರ್ಗಗಳಲ್ಲಿ ಕೈಕೊಳ್ಳಲು ಕಾರ್ಮಿಕ ಪುರುಷರಿಗೂ ಸ್ತ್ರೀಯರಿಗೂ ಸಾಧ್ಯವಾಗಿದೆ.

ಬೌದ್ಧಿಕ ಅಭ್ಯಾಸಗಳನ್ನಷ್ಟೇ ಕಲಿಯುವದು ಸಂಜೆಯ ವರ್ಗಗಳಲ್ಲಿ ಅಭ್ಯಸಿಸುವ ಪುರುಷರ–ಸ್ತ್ರೀಯರ ಉದ್ದೇಶವಲ್ಲ. ಪ್ರತಿಯೊಂದು ಪ್ರಕಾರದ ಆಸಕ್ತಿಯನ್ನು ತೃಪ್ತಪಡಿಸಲಾಗುತ್ತದೆ. ತಾಂತ್ರಿಕ ಶಿಕ್ಷಣ, ವ್ಯಾಪಾರದ ತರಬೇತಿ, ಗೃಹ-ಶಿಕ್ಷಣ, ಕಲಾಕೌಶಲ್ಯಗಳು, ಉದ್ದಿಮೆಗಳು, ಭಾಷೆ, ಸಾಹಿತ್ಯ, ಇತಿಹಾಸ, ಭೂಗೋಲ, ಕಲೆ, ನಾಟಕ, ವಾಕ್-ಚಾತುರ್ಯ, ಸಾರ್ವಜನಿಕ-ಭಾಷಣ, ಸೂಜಿಗೆಲಸ, ಬಡಿಗತನ, ಪೋಷಾಕು-ತಯಾರಿಸುವದು, ಉಡಿಗೆ-ತೊಡಿಗೆ, ಕ್ಷೇಮ-ಪಾಲನ-ಶಾಸ್ತ್ರ (ಆರೋಗ್ಯ ಶಾಸ್ತ್ರ) ಶಾಸ್ತ್ರೀಯ-ವಿಷಯ, ಗಣಿತ–ಶಾಸ್ತ್ರ, ಶುಸ್ರೂಷೆ, ಪ್ರಥಮ–ಚಿಕಿತ್ಸೆ, ಚಿಕ್ಕ ಮಕ್ಕಳ ಆರೈಕೆ, ಸಂಗೀತ, ತತ್ವಜ್ಞಾನ–ವಿಷಯಗಳ ವೈವಿಧ್ಯತೆ ಮುಗಿಯಲಾರದು. ವಿದ್ಯಾರ್ಥಿಗಳಲ್ಲಿಯೂ ಭೇದ-ಭಾವ ಮಾಡಲಾಗುವದಿಲ್ಲ.

ದೇಶದ ತುಂಬೆಲ್ಲ ಸಂಘ ಸಂಸ್ಥೆಗಳ ಕಾರ್ಯಕಲಾಪಗಳು ಯಥಾರ್ಥವಾಗಿ ಪಸರಿಸುವದರಿಂದ ಮತ್ತು ವೈಯಕ್ತಿಕ ಲಕ್ಷ್ಯ ಪೂರೈಸುವದರಿಂದ ತಮಗೆ ಆಸಕ್ತಿಯುಳ್ಳ ವಿಷಯಗಳನ್ನು ಕಲಿಯುವ ಸುಸಂದರ್ಭವನ್ನು ಪುರುಷರಾಗಲಿ ಸ್ತ್ರೀಯರಾಗಲಿ ಕಳೆದುಕೊಳ್ಳಲಾರರು. ೧೯೦೩ರಲ್ಲಿ ಆಲ್ಬರ್ಟ ಮ್ಯಾನ್ಸಬ್ರಿಜ್ ಇವರಿಂದ ಸ್ಥಾಪಿತವಾದ ಕಾರ್ಮಿಕರ ಶಿಕ್ಷಣ ಸಮಿತಿ (The Workers' Educational Associatien), ಸಹಕಾರಿ-ಸಂಘ (The Co-opeiative Union), ರಾಷ್ಟ್ರೀಯ ಪ್ರೌಢ ಶಾಲಾ ಸಂಘ (The National Adult school Union), ಯುವಕರ-ಯುವತಿಯರ ಕ್ರಿಶ್ಚನ್ ಸಮಿತಿಗಳು ಹಾಗು ಇನ್ನೂ ಅನೇಕ ಖಾಸಗಿ ಸಮಿತಿಗಳೂ ಸಂಸ್ಥೆಗಳೂ ಅಸ್ತಿತ್ವದಲ್ಲಿದ್ದವು. ಇವು ತಮ್ಮದೇ ಆದ ಪದ್ಧತಿಯಲ್ಲಿ ಸಂಜೆಯ ವರ್ಗಗಳನ್ನು ನಡೆಯಿಸುವ ಸ್ಥಾನಿಕ ಆಡಳಿತದಾರರಾದ ನಗರಸಭೆಗಳೊಂದಿಗೆ ಸಹಕರಿಸುತ್ತಿದ್ದವು ಮತ್ತು ಅವರ ಸಹಾಯವನ್ನು ಪಡೆಯುತ್ತಿದ್ದವು.

ಶಿಕ್ಷಣವು ವೃದ್ಧಿಗೊಂಡಂತೆ ಮತ್ತು ಪಸರಿಸಿದಂತೆ ದಿನದ ಕೆಲಸದ ನಂತರ ಸಂಜೆಯ ವರ್ಗಗಳಲ್ಲಿ ಸದ್ಯಕ್ಕೆ

ಸಾಧ್ಯವಿರುವದಕ್ಕಿಂತ ಹೆಚ್ಚಿನ ರೀತಿಯಲ್ಲಿ ಒಂದುಗೂಡಿಸಲಾದ ಪದ್ಧತಿಯ ಅಭ್ಯಾಸದ ಆವಶ್ಯಕತೆಯೆನಿಸಿತು. ಆಕ್ಸಫರ್ಡ ಮತ್ತು ಕೇಂಬ್ರಿಜ್‌ಗಳಲ್ಲಿಯ ಮಹಾವಿದ್ಯಾಲಯಗಳ ಮಾದರಿಯ-ವಸತಿ ಸೌಕರ್ಯವುಳ್ಳ ಮಹಾವಿದ್ಯಾಲಯದಲ್ಲಿಯ ಅಭ್ಯಾಸಕ್ರಮವಿರುವದು ಒಳಿತೆಂದು ಅನೇಕ ಜನರಿಗೆ ಅನಿಸಿತು. ಕಾರಣ ಕಾರ್ಮಿಕರಿಗೆ ತಮ್ಮ ವಾಸ್ತವಿಕ ಮತ್ತು ಶಾರೀರಿಕ ಜೀವನದ ಎಲ್ಲ ಹಂಬಲಗಳಿಂದ ಹಾಗು ಚಿಂತೆಗಳಿಂದ ದೂರಾಗುವದರಿಂದ ಅವರಿಗೆ ಸಿಗಲಾರದಂಥ ಶಾಂತ ವಾತಾವರಣದಲ್ಲಿ ವಿಚಾರ-ಅಭ್ಯಾಸಗಳಿಗೆ ಸುಸಂಧಿ ದೊರಕಬಹುದು. ವಾಸ್ತವ್ಯದ ಸೌಕರ್ಯವುಳ್ಳ ಮತ್ತು ಭಿನ್ನ-ಭಿನ್ನವಾದ ಅವಧಿಗಳ ಅಭ್ಯಾಸಕ್ರಮವುಳ್ಳ ಮಹಾ-ವಿದ್ಯಾಲಯಗಳಿಗಾಗಿ ಬ್ರಿಟನ್‌ದಲ್ಲಿಯ ಆಂದೋಲನಕ್ಕೆ ಪುಟ ದೊರಕಲು ಡೆನ್ಮಾರ್ಕ ಹಾಗು ಸ್ವೀಡನ್ ಮಾದರಿಯಾದವು; ಆದರೆ ಪೂರಕ ತರಬೇತಿಯನ್ನು ಕೊಡುವ ಈ ಪದ್ಧತಿಯು ಅಮೂಲ್ಯವಾದದ್ದೆಂದು ಯುದ್ಧದ ಅನುಭವವು ಸಿದ್ಧಪಡಿಸಿತು.

"ಒಂದು ವರ್ಷದ ಕಾಲಾವಧಿಯ ಅಭ್ಯಾಸಕ್ರಮದ ತರಬೇತಿ ಪಡೆಯುವ ವಿದ್ಯಾರ್ಥಿಗಳ ವಸತಿ-ಸೌಕರ್ಯವುಳ್ಳ ಮಹಾವಿದ್ಯಾಲಯಗಳಲ್ಲಿಯೂ ವಸಾಹತುಗಳಲ್ಲಿಯೂ ಭಿನ್ನತೆ ಇರುತ್ತದೆ. ಆವ್ಹಾನ್-ಕ್ರಾಫ್ಟ (Avoncroft)ದಲ್ಲಿಯ ಕಲಿಸುವಿಕೆಯು ಒಕ್ಕಲತನದ ಮೇಲೆ ಅವಲಂಬಿಸಿರುತ್ತದೆ. ಹೆಣ್ಣು ಮಕ್ಕಳಿಗಾಗಿ ಹಿಲ್‌ಕ್ರಾಫ್ಟ (Hill-croft) ಮತ್ತು ಧಾರ್ಮಿಕ ಹಾಗು ಸಾಮಾಜಿಕ ತರಬೇತಿಯ ವೈಶಿಷ್ಟ್ಯಕ್ಕಾಗಿ ವುಡ್‌ಬ್ರೂಕ್ (Wood-brooke) ಇದ್ದರೆ ಫರ್‌ಕ್ರಾಫ್ಟ (Fir-croft) ಮತ್ತು ಕೊಲಿಗ್ ಹಾರ್ಲೆಚ್ (Coleg Harlech) ಸಾಮಾನ್ಯ ಸಾಂಸ್ಕೃತಿಕ ತರಬೇತಿಗಾಗಿ ಇರುತ್ತವೆ."

ಸಮಾಜ ಶಿಕ್ಷಣದಲ್ಲಿಯೇ ಕಾರ್ಮಿಕರ ವರ್ಗ—ವಿಶ್ವವಿದ್ಯಾಲಯಗಳ ನಡುವೆ ಅತಿ ಸಾಮಿಪ್ಯದ ಸಂಬಂಧ ಬರುವದು. ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಕಾರ್ಮಿಕರ ಶಿಕ್ಷಣ ಸಮಿತಿ ಹಾಗು ವಿಶ್ವವಿದ್ಯಾಲಯ ವಿಸ್ತರಣ ಅಭ್ಯಾಸ ಕ್ರಮಗಳಿಗಾಗಿ ಭಾಷಣ ಮಾಡುವರು; ಅನೇಕ ಪದವೀಧರರು ಕಾರ್ಮಿಕರ ಹಾಗು ಸ್ತ್ರೀಯರ ಸಲುವಾಗಿ ನಡೆಯಿಸಲ್ಪಟ್ಟ ಕೂಟಗಳಲ್ಲಿ ಸಂಸ್ಥೆಗಳಲ್ಲಿ ಉಚಿತ ಸೇವೆ ಸಲ್ಲಿಸುವರು; ಮತ್ತು ಅನೇಕ ಪದವೀಧರರು ಈ ವಸತಿ ಸೌಕರ್ಯವುಳ್ಳ ಮಹಾವಿದ್ಯಾಲಯಗಳಲ್ಲಿ ಸಮಾಜ ಶಿಕ್ಷಣದಲ್ಲಿಯ ವಿವಿಧ ಪ್ರಕಾರದ ಉದ್ಯೋಗಗಳಿಗಾಗಿ ತರಬೇತಿ ಪಡೆಯಲು ವಿದ್ಯಾರ್ಥಿಗಳೆಂದು ಬರುವರು.

ಶ್ರಮಜೀವಿಗಳಿಗಾಗಿ ವಸತಿ ಸೌಕರ್ಯವುಳ್ಳ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಿದ ಮೊದಲನೆಯ ದೇಶವು ಡೆನ್ಮಾರ್ಕವು.

"(N. F. S. Grundtvig) ಗ್ರುಂಡ್ವಿಗ್‌ರ ಜನಪ್ರಿಯ ವಿಶ್ವವಿದ್ಯಾಲಯದ ವಿಚಾರಪ್ರಣಾಲಿಯೇ ಪಶ್ಚಾತ್ತರ ಮಾಧ್ಯಮಿಕ ಶಾಲೆಗಳ ಮೂಲ. ಪರೀಕ್ಷೆ ಅಥವಾ ಪದವಿಗಳಿಲ್ಲದ ಮತ್ತು ಯುವಕರಿಗೆ ಉತ್ತಮ ನಾಗರಿಕತೆಯನ್ನು ಕಲಿಸುವ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಬೇಕೆಂದು ಅವರು ಸೂಚಿಸಿದರು. ಆದರೆ ಈ ವಿಚಾರವು ಎಂದಿಗೂ ಫಲಿಸಲಿಲ್ಲ. ೧೮೪೪ರಲ್ಲಿ ಮುಖ್ಯವಾಗಿ ರಾಷ್ಟ್ರೀಯ ಉದ್ದೇಶದಿಂದ ಜುಟಲಂಡದ ದಕ್ಷಿಣ ಭಾಗದಲ್ಲಿ ವಯಸ್ಕರಿಗಾಗಿ ಒಂದು ಖಾಸಗಿ ಶಾಲೆಯು ಸ್ಥಾಪಿಸಲ್ಪಟ್ಟಿತು; ಆದರೆ ಗ್ರುಂಡ್ವಿಗ್‌ರ ವಿಚಾರಗಳ ನಿಜವಾದ ನಿರ್ವಹಣೆಯು ೧೮೫೧ರಲ್ಲಿ ನಡೆಯಿತು. ಅದೇ ವರ್ಷ ಗ್ರುಂಡ್ವಿಗ್ ಇವರ ಕೇವಲ ಕಲಿಸುವ ಹಾಗು ಶಾಲೆಗಳ ಮೇಲಿನ ತಾತ್ವಿಕತೆಗಳಲ್ಲದೆ ಧಾರ್ಮಿಕ ಹಾಗು ರಾಷ್ಟ್ರೀಯತೆಯ ವಿಚಾರ-ತರ್ಕಗಳ ಪ್ರಭಾವದಿಂದಾಗಿ ಕ್ರಿಸ್ಟೆನ್ ಕೋಲ್ಡ (Kristen Kold) ಇವರು ಕಲಿಸುವ ಕಾರ್ಯವನ್ನಾರಂಭಿಸಿದರು."

ಸ್ವೀಡನ್ ಕೂಡಲೆ ಡೆನ್ಮಾರ್ಕದ ಮಾದರಿಯನ್ನು ಅನುಕರಣಮಾಡಿತು. ತಮ್ಮ ಜೀವನಗಳನ್ನೇ ಹಾಗು ತಮ್ಮ ಸಂಪತ್ತನ್ನೇ ಕಾರ್ಯಕ್ಕಾಗಿ ಮೀಸಲಾಗಿರಿಸಿದ ಖಾಸಗಿ ಸಂಸ್ಥೆಗಳ ಮತ್ತು ಆದರ್ಶವಾದಿಗಳ ಪ್ರಯತ್ನಗಳ ಫಲವಾಗಿ ಅಂಥವೇ ವಸತಿ ಸೌಕರ್ಯವುಳ್ಳ ಮಹಾವಿದ್ಯಾಲಯಗಳು ಪ್ರಾರಂಭಿಸಲ್ಪಟ್ಟವು.

ಎರಡೂ ದೇಶಗಳಲ್ಲಿ, ಅವುಗಳ ಯಶಸ್ಸು ಸಾರ್ವಜನಿಕರ ಬೆಂಬಲ ಹಾಗು ಮನ್ನಣೆಯನ್ನು ಪಡೆದು

ಯದ ಆರಂಭಿಕ ಶಿಕ್ಷಣದಿಂದ ಊರ್ಜಿತಾವಸ್ಥೆಯನ್ನು ಹೊಂದಿತು. ಇದರಿಂದ ಸಮಕಾಲೀನ ವಯಸ್ಕರು ಅಶಿಕ್ಷಿತರಾಗಿ ಉಳಿದರು; ಆದರೆ ಅದು ಸಮಾಜ ಸುಧಾರಕರಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಅಲಕ್ಷಿಸಲ್ಪಟ್ಟ ವಯಸ್ಕರ ಆವಶ್ಯಕತೆಗಳನ್ನು ಪೂರೈಸುವದರಲ್ಲಿ ಅಭೂತಪೂರ್ವ ಹುರುಪನ್ನು ಕೊಟ್ಟಿತು. ಶಿಕ್ಷಣ ಬಗೆಗೆ ಆಸ್ಥೆಯು ಹೆಚ್ಚಾದುದರಿಂದ ಮಕ್ಕಳ ಸಲುವಾಗಿ ತೆರೆದ ಆರಂಭಿಕ ಶಾಲೆಗಳಲ್ಲಿ ಸ್ಥಾನಿಕ ಶಿಕ್ಷಣಾಧಿಕಾರಿಗಳಿಂದ ಸಂಜೆಯ ವರ್ಗಗಳು ತೆರೆಯಲ್ಪಟ್ಟವು.

ಇಂಥ ಸಹಜತೆಯ ಪ್ರಾರಂಭದಿಂದ, ದೇಶದ ತುಂಬೆಲ್ಲ ವಾಸವಾಗಿರುವ ಎಲ್ಲ ಪುರುಷರಿಗೂ ಸ್ತ್ರೀಯರಿಗೂ ಸಂಬಂಧಿಸಿದ ವಿಶಾಲವಾದ ಆಂದೋಲನವು ಬೆಳೆದಿರುತ್ತದೆ; ಮತ್ತು ಕೇವಲ ತಾಂತ್ರಿಕ ಹಾಗೂ ವೃತ್ತಿಯ ಮೂಲೋದ್ಯೋಗಗಳಿಂದ ಪ್ರಖ್ಯಾತವಾದ ಮತ್ತು ಅತಿ ಗಹನವಾದ ಮಾನವನ ವಿಚಾರ ಪ್ರಣಾಲಿಯ ವಿಷಯಗಳ ವರೆಗೂ ಬೆಳೆದಿರುತ್ತದೆ ಬೇರೆಬೇರೆ ಸಂಸ್ಥೆಗಳಿಂದ. ಈ ವಿವಿಧ ಅಭ್ಯಾಸಗಳು ಯೋಜಿಸಲ್ಪಡುತ್ತವೆ ಹಾಗೂ ಪೂರೈಸಲ್ಪಡುತ್ತವೆ. ಕೆಲವು ಧಾರ್ಮಿಕ ಉದ್ದೇಶದಿಂದಲೂ ಹಲವು ರಾಜಕೀಯ ಮತ್ತು ಉಳಿದವುಗಳು ಔದ್ಯೋಗಿಕ ಹಾಗು ಬೌದ್ಧಿಕ ಪ್ರಯೋಜನಗಳಿಗಾಗಿ ಹುಟ್ಟಿದವು. ಓದು, ಬರಹ ಮತ್ತು ಗಣಿತಗಳ ಆರಂಭಿಕೆಗಳನ್ನು ವಯಸ್ಕರಿಗೆ ಕಲಿಸಿ ಸೇವೆಯನ್ನು ಸಲ್ಲಿಸುವ ಮೊದಲಿನ ಕ್ರಮವು ಸಂಪೂರ್ಣವಾಗಿ ಮಾಯವಾಗಿದೆ. ಪ್ರತಿಯೊಬ್ಬರು ಬಾಲ್ಯದಲ್ಲಿ ಶಾಲೆಗೆ ಹೋಗುವದರಿಂದ ಇವು ಅನಾವಶ್ಯಕವಾಗಿವೆ. ಇದೂ ಅಲ್ಲದೆ, ಶಾಲೆಗಳಲ್ಲಿ ಪ್ರಾಥಮಿಕ ಜ್ಞಾನ–ಸಂಗ್ರಹ ಕೊಡಲಾಗುವದು; ಆ ಕಾರಣದಿಂದ ಪ್ರೌಢ ವರ್ಗಗಳಲ್ಲಿ ಮುಂದುವರೆದ ವಿಷಯಗಳನ್ನು ಚರ್ಚಿಸಲು ಸಾಧ್ಯವಾಗುವದು. ಸಮಾಜ ಶಿಕ್ಷಣವನ್ನು ವಿಶ್ವವಿದ್ಯಾಲಯಗಳೊಂದಿಗೆ ಜೋಡಿಸಲಾಗಿದೆ. ವಿಶ್ವವಿದ್ಯಾಲಯಗಳ ವಿಸ್ತರಣ ವರ್ಗಗಳ (University Extension Classes) ಹಾಗು ಕಾರ್ಮಿಕರ ಶಿಕ್ಷಣ ಸಮಿತಿ (Workers' Educational Association) ಗಳ ಮುಖಾಂತರ ವಿಶ್ವವಿದ್ಯಾಲಯದ ಮುಟ್ಟಿನ ಮೂರು ವರ್ಷ ಅವಧಿಯ ಅಭ್ಯಾಸವನ್ನು ಸಂಜೆಯ ವರ್ಗಗಳಲ್ಲಿ ಕೈಕೊಳ್ಳಲು ಕಾರ್ಮಿಕ ಪುರುಷರಿಗೊ ಸ್ತ್ರೀಯರಿಗೂ ಸಾಧ್ಯವಾಗಿದೆ.

ಬೌದ್ಧಿಕ ಅಭ್ಯಾಸಗಳನ್ನಷ್ಟೇ ಕಲಿಯುವದು ಸಂಜೆಯ ವರ್ಗಗಳಲ್ಲಿ ಅಭ್ಯಸಿಸುವ ಪುರುಷರ–ಸ್ತ್ರೀಯರ ಉದ್ದೇಶವಲ್ಲ. ಪ್ರತಿಯೊಂದು ಪ್ರಕಾರದ ಆಸಕ್ತಿಯನ್ನು ತೃಪ್ತಪಡಿಸಲಾಗುತ್ತದೆ. ತಾಂತ್ರಿಕ ಶಿಕ್ಷಣ, ವ್ಯಾಪಾರದ ತರಬೇತಿ, ಗೃಹ-ಶಿಕ್ಷಣ, ಕಲಾಕೌಶಲ್ಯಗಳು, ಉದ್ದಿಮೆಗಳು, ಭಾಷೆ, ಸಾಹಿತ್ಯ, ಇತಿಹಾಸ, ಭೂಗೋಲ, ಕಲೆ, ನಾಟಕ, ವಾಕ್-ಚಾತುರ್ಯ, ಸಾರ್ವಜನಿಕ-ಭಾಷಣ, ಸೂಜಿಗೆಲಸ, ಬಡಿಗತನ, ಪೋಷಾಕು-ತಯಾರಿಸುವದು, ಉಡಿಗೆ-ತೊಡಿಗೆ, ಕ್ಷೇಮ-ಪಾಲನ-ಶಾಸ್ತ್ರ (ಆರೋಗ್ಯಶಾಸ್ತ್ರ) ಶಾಸ್ತ್ರೀಯ-ವಿಷಯ, ಗಣಿತ–ಶಾಸ್ತ್ರ, ಶುಸ್ರೂಷೆ, ಪ್ರಥಮ–ಚಿಕಿತ್ಸೆ, ಚಿಕ್ಕ ಮಕ್ಕಳ ಆರೈಕೆ, ಸಂಗೀತ, ತತ್ವಜ್ಞಾನ–ವಿಷಯಗಳ ವೈವಿಧ್ಯತೆ ಮುಗಿಯಲಾರದು. ವಿದ್ಯಾರ್ಥಿಗಳಲ್ಲಿಯೂ ಭೇದ-ಭಾವ ಮಾಡಲಾಗುವದಿಲ್ಲ.

ದೇಶದ ತುಂಬೆಲ್ಲ ಸಂಘ ಸಂಸ್ಥೆಗಳ ಕಾರ್ಯಕಲಾಪಗಳು ಯಥಾರ್ಥವಾಗಿ ಪಸರಿಸುವದರಿಂದ ಮತ್ತು ವೈಯಕ್ತಿಕ ಲಕ್ಷ್ಯ ಪೂರೈಸುವದರಿಂದ ತಮಗೆ ಆಸಕ್ತಿಯುಳ್ಳ ವಿಷಯಗಳನ್ನು ಕಲಿಯುವ ಸುಸಂದರ್ಭವನ್ನು ಪುರುಷರಾಗಲಿ ಸ್ತ್ರೀಯರಾಗಲಿ ಕಳೆದುಕೊಳ್ಳಲಾರರು. ೧೯೦೩ರಲ್ಲಿ ಆಲ್ಬರ್ಟ ಮ್ಯಾನ್ಸಬ್ರಿಜ್ ಇವರಿಂದ ಸ್ಥಾಪಿತವಾದ ಕಾರ್ಮಿಕರ ಶಿಕ್ಷಣ ಸಮಿತಿ (The Workers' Educational Associatien), ಸಹಕಾರಿ-ಸಂಘ (The Co-operative Union), ರಾಷ್ಟ್ರೀಯ ಪ್ರೌಢ ಶಾಲಾ ಸಂಘ (The National Adult school Union), ಯುವಕರ-ಯುವತಿಯರ ಕ್ರಿಶ್ಚನ್ ಸಮಿತಿಗಳು ಹಾಗು ಇನ್ನೂ ಅನೇಕ ಖಾಸಗಿ ಸಮಿತಿಗಳೂ ಸಂಸ್ಥೆಗಳೂ ಅಸ್ತಿತ್ವದಲ್ಲಿದ್ದವು. ಇವು ತಮ್ಮದೇ ಆದ ಪದ್ಧತಿಯಲ್ಲಿ ಸಂಜೆಯ ವರ್ಗಗಳನ್ನು ನಡೆಯಿಸುವ ಸ್ಥಾನಿಕ ಆಡಳಿತದಾರರಾದ ನಗರಸಭೆಗಳೊಂದಿಗೆ ಸಹಕರಿಸುತ್ತಿದ್ದವು ಮತ್ತು ಅವರ ಸಹಾಯವನ್ನು ಪಡೆಯುತ್ತಿದ್ದವು.

ಶಿಕ್ಷಣವು ವೃದ್ಧಿಗೊಂಡಂತೆ ಮತ್ತು ಪಸರಿಸಿದಂತೆ ದಿನದ ಕೆಲಸದ ನಂತರ ಸಂಜೆಯ ವರ್ಗಗಳಲ್ಲಿ ಸದ್ಯಕ್ಕೆ

ಸಾಧ್ಯವಿರುವದಕ್ಕಿಂತ ಹೆಚ್ಚಿನ ರೀತಿಯಲ್ಲಿ ಒಂದುಗೂಡಿಸಲಾದ ಪದ್ಧತಿಯ ಅಭ್ಯಾಸದ ಅವಶ್ಯಕತೆಯೆನಿಸಿತು. ಆಕ್ಸಫರ್ಡ ಮತ್ತು ಕೇಂಬ್ರಿಜ್‌ಗಳಲ್ಲಿಯ ಮಹಾವಿದ್ಯಾಲಯಗಳ ಮಾದರಿಯ–ವಸತಿ ಸೌಕರ್ಯವುಳ್ಳ ಮಹಾವಿದ್ಯಾಲಯದಲ್ಲಿಯ ಅಭ್ಯಾಸಕ್ರಮವಿರುವದು ಒಳಿತೆಂದು ಅನೇಕ ಜನರಿಗೆ ಅನಿಸಿತು. ಕಾರಣ ಕಾರ್ಮಿಕರಿಗೆ ತಮ್ಮ ವಾಸ್ತವಿಕ ಮತ್ತು ಶಾರೀರಿಕ ಜೀವನದ ಎಲ್ಲ ಹಂಬಲಗಳಿಂದ ಹಾಗು ಚಿಂತೆಗಳಿಂದ ದೂರಾಗುವದರಿಂದ ಅವರಿಗೆ ಸಿಗಲಾರದಂಥ ಶಾಂತ ವಾತಾವರಣದಲ್ಲಿ ವಿಚಾರ-ಅಭ್ಯಾಸಗಳಿಗೆ ಸುಸಂಧಿ ದೊರಕಬಹುದು. ವಾಸ್ತವ್ಯದ ಸೌಕರ್ಯವುಳ್ಳ ಮತ್ತು ಭಿನ್ನ-ಭಿನ್ನವಾದ ಅವಧಿಗಳ ಅಭ್ಯಾಸಕ್ರಮವುಳ್ಳ ಮಹಾ-ವಿದ್ಯಾಲಯಗಳಿಗಾಗಿ ಬ್ರಿಟನ್‌ದಲ್ಲಿಯ ಆಂದೋಲನಕ್ಕೆ ಪುಟ ದೊರಕಲು ಡೆನ್ಮಾರ್ಕ ಹಾಗು ಸ್ವೀಡನ್ ಮಾದರಿಯಾದವು; ಆದರೆ ಪೂರಕ ತರಬೇತಿಯನ್ನು ಕೊಡುವ ಈ ಪದ್ಧತಿಯು ಅಮೂಲ್ಯವಾದದ್ದೆಂದು ಯುದ್ಧದ ಅನುಭವವು ಸಿದ್ಧಪಡಿಸಿತು.

"ಒಂದು ವರ್ಷದ ಕಾಲಾವಧಿಯ ಅಭ್ಯಾಸಕ್ರಮದ ತರಬೇತಿ ಪಡೆಯುವ ವಿದಾರ್ಥಿಗಳವಸತಿ-ಸೌಕರ್ಯವುಳ್ಳ ಮಹಾವಿದ್ಯಾಲಯಗಳಲ್ಲಿಯೂ ವಸಾಹತುಗಳಲ್ಲಿಯೂ ಭಿನ್ನತೆ ಇರುತ್ತದೆ. ಆವ್ಹಾನ್-ಕ್ರಾಫ್ಟ (Avoncroft)ದಲ್ಲಿಯ ಕಲಿಸುವಿಕೆಯು ಒಕ್ಕಲತನದ ಮೇಲೆ ಅವಲಂಬಿಸಿರುತ್ತದೆ. ಹೆಣ್ಣು ಮಕ್ಕಳಿಗಾಗಿ ಹಿಲ್‌ಕ್ರಾಫ್ಟ (Hill-croft) ಮತ್ತು ಧಾರ್ಮಿಕ ಹಾಗು ಸಾಮಾಜಿಕ ತರಬೇತಿಯ ವೈಶಿಷ್ಟ್ಯಕ್ಕಾಗಿ ವುಡ್‌ಬ್ರೂಕ್ (Wood-brooke) ಇದ್ದರೆ ಫರ್‌ಕ್ರಾಫ್ಟ (Fir–croft) ಮತ್ತು ಕೊಲಿಗ್ ಹಾರ್ಲೆಚ್ (Coleg Harlech) ಸಾಮಾನ್ಯ ಸಾಂಸ್ಕೃತಿಕ ತರಬೇತಿಗಾಗಿ ಇರುತ್ತವೆ."

ಸಮಾಜ ಶಿಕ್ಷಣದಲ್ಲಿಯೇ ಕಾರ್ಮಿಕರ ವರ್ಗ–ವಿಶ್ವವಿದ್ಯಾಲಯಗಳ ನಡುವೆ ಅತಿ ಸಾಮೀಪ್ಯದ ಸಂಬಂಧ ಬರುವದು. ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಕಾರ್ಮಿಕರ ಶಿಕ್ಷಣ ಸಮಿತಿ ಹಾಗು ವಿಶ್ವವಿದ್ಯಾಲಯ ವಿಸ್ತರಣ ಅಭ್ಯಾಸ ಕ್ರಮಗಳಿಗಾಗಿ ಭಾಷಣ ಮಾಡುವರು; ಅನೇಕ ಪದವೀಧರರು ಕಾರ್ಮಿಕರ ಹಾಗು ಸ್ತ್ರೀಯರ ಸಲುವಾಗಿ ನಡೆಯಿಸಲ್ಪಟ್ಟ ಕೂಟಗಳಲ್ಲಿ ಸಂಸ್ಥೆಗಳಲ್ಲಿ ಉಚಿತ ಸೇವೆ ಸಲ್ಲಿಸುವರು; ಮತ್ತು ಅನೇಕ ಪದವೀಧರರು ಈ ವಸತಿ ಸೌಕರ್ಯವುಳ್ಳ ಮಹಾವಿದ್ಯಾಲಯಗಳಲ್ಲಿ ಸಮಾಜ ಶಿಕ್ಷಣದಲ್ಲಿಯ ವಿವಿಧ ಪ್ರಕಾರದ ಉದ್ಯೋಗಗಳಿಗಾಗಿ ತರಬೇತಿ ಪಡೆಯಲು ವಿದ್ಯಾರ್ಥಿಗಳೆಂದು ಬರುವರು.

ಶ್ರಮಜೀವಿಗಳಿಗಾಗಿ ವಸತಿ ಸೌಕರ್ಯವುಳ್ಳ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಿದ ಮೊದಲನೆಯ ದೇಶವು ಡೆನ್ಮಾರ್ಕವು.

"(N. F. S. Grundtvig) ಗ್ರುಂಡ್ವಿಗ್‌ರ ಜನಪ್ರಿಯ ವಿಶ್ವವಿದ್ಯಾಲಯದ ವಿಚಾರಪ್ರಣಾಲಿಯೇ ಪಶ್ಚಾರ ಮಾಧ್ಯಮಿಕ ಶಾಲೆಗಳ ನ್ಯೂ. ಪರೀಕ್ಷೆ ಅಥವಾ ಪದವಿಗಳಿಲ್ಲದ ಮತ್ತು ಯುವಕರಿಗೆ ಉತ್ತಮ ನಾಗರಿಕತೆಯನ್ನು ಕಲಿಸುವ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಬೇಕೆಂದು ಅವರು ಸೂಚಿಸಿದರು. ಆದರೆ ಈ ವಿಚಾರವು ಎಂದಿಗೂ ಫಲಿಸಲಿಲ್ಲ. ೧೮೪೪ರಲ್ಲಿ ಮುಖ್ಯವಾಗಿ ರಾಷ್ಟ್ರೀಯ ಉದ್ದೇಶದಿಂದ ಜುಟಲೆಂಡದ ದಕ್ಷಿಣ ಭಾಗದಲ್ಲಿ ವಯಸ್ಕರಿಗಾಗಿ ಒಂದು ಖಾಸಗಿ ಶಾಲೆಯು ಸ್ಥಾಪಿಸಲ್ಪಟ್ಟಿತು; ಆದರೆ ಗ್ರುಂಡ್ವಿಗ್‌ರ ವಿಚಾರಗಳ ನಿಜವಾದ ನಿರ್ವಹಣೆಯು ೧೮೫೧ರಲ್ಲಿ ನಡೆಯಿತು. ಅದೇ ವರ್ಷ ಗ್ರುಂಡ್ವಿಗ್ ಇವರ ಕೇವಲ ಕಲಿಸುವ ಹಾಗು ಶಾಲೆಗಳ ಮೇಲಿನ ತಾತ್ವಿಕತೆಗಳಲ್ಲದೆ ಧಾರ್ಮಿಕ ಹಾಗು ರಾಷ್ಟ್ರೀಯತೆಯ ವಿಚಾರ–ತರ್ಕಗಳ ಪ್ರಭಾವದಿಂದಾಗಿ ಕ್ರಿಸ್ಟೆನ್ ಕೋಲ್ಡ (Kristen Kold) ಇವರು ಕಲಿಸುವ ಕಾರ್ಯವನ್ನಾರಂಭಿಸಿದರು."

ಸ್ವೀಡನ್ ಕೂಡಲೆ ಡೆನ್ಮಾರ್ಕದ ಮಾದರಿಯನ್ನು ಅನುಕರಣಮಾಡಿತು. ತಮ್ಮ ಜೀವನಗಳನ್ನೇ ಹಾಗು ತಮ ಸಂಪತ್ತನ್ನೇ ಕಾರ್ಯಕ್ಕಾಗಿ ಮೀಸಲಾಗಿರಿಸಿದ ಖಾಸಗಿ ಸಂಸ್ಥೆಗಳ ಮತ್ತು ಆದರ್ಶವಾದಿಗಳ ಪ್ರಯತ್ನಗಳ ಫಲವಾಗಿ ಅಂಥವೇ ವಸತಿ ಸೌಕರ್ಯವುಳ್ಳ ಮಹಾವಿದ್ಯಾಲಯಗಳು ಪಾರಂಭಿಸಲ್ಪಟ್ಟವು.

ಎರಡೂ ದೇಶಗಳಲ್ಲಿ, ಅವುಗಳ ಯಶಸ್ಸು ಸಾರ್ವಜನಿಕರ ಬೆಂಬಲ ಹಾಗು ಮನ್ನಣೆಯನ್ನು ಪಡೆದು

[illegible]

([illegible])

[illegible]

[illegible]

[illegible]

[illegible]

[illegible]

[illegible]

ಬಾಯ್ಬಲ್, ಕುರಾನ ಮುಂತಾದ ಪವಿತ್ರ ಉದ್ಗ್ರಂಥಗಳನ್ನು ಬರೆದರು.

ಜಗದ್ವಂದ್ಯ ಗಾಂಧೀಜಿಯವರು ದಿನಾಲು ಮುಂಜಾನೆ ಮತ್ತು ಸಾಯಂಕಾಲ ಎರಡು ಸಲ ಸಾಮೂಹಿಕವಾಗಿ ಪ್ರಾರ್ಥನೆಯನ್ನು ಆಚರಿಸುತ್ತಿದ್ದರು. ಭಗವದ್ಗೀತೆಯಲ್ಲಿಯ ಪವಿತ್ರ ಶ್ಲೋಕಗಳನ್ನು ಮತ್ತು ಬಾಯ್ಬಲ್ ಮತ್ತು ಕುರಾನದಲ್ಲಿಯ ಪವಿತ್ರ ವಚನಗಳನ್ನು ಪಠಿಸುತ್ತಿದ್ದರು. ಸರ್ವಧರ್ಮದ ತತ್ವಗಳನ್ನು ಜನರಿಗೆ ತಿಳಿಸಿ ಹೇಳಿ ತಾವು ಆಚರಿಸುತ್ತಿದ್ದರು. "Prayer is the key of both morning and the Evening" — "ಪ್ರಾರ್ಥನೆಯು ಮುಂಜಾನೆ ಹಾಗೂ ಸಾಯಂಕಾಲಗಳ ಬೀಗದ ಕೈ" ಎಂದು ಗಾಂಧೀಜಿ [illegible] ಪ್ರಾರ್ಥನೆಯ ಬಗ್ಗೆ ಹೇಳಿದ್ದಾರೆ. ಹೀಗೆ ದಿನಾಲು ಪ್ರಾರ್ಥನೆಯನ್ನು [illegible] ಆಚರಿಸುತ್ತಿದ್ದರು. [illegible] ಗಾಂಧೀಜಿಯವರ ಜೀವನವು ಪವಿತ್ರವಾಯಿತು.

[illegible]

ಪ್ರಚಾರವನ್ನು ಮಾಡಿ ಜನರಲ್ಲಿ ಹೊಸ ಚೈತನ್ಯವನ್ನು ತುಂಬಿದರು.

ಮಾನವ ಶಿಕ್ಷಣದಲ್ಲಿ ಸಾಂಘಿಕ ಜೀವನಕ್ಕೆ ಮಹತ್ವದ ಸ್ಥಾನವಿದೆ. ಪ್ರಾರ್ಥನೆಯನ್ನು ಸಾಂಘಿಕ ಜೀವನದ ಅಂಗವಾಗಿ ಶಾಲೆಯಲ್ಲಿ ಆಚರಿಸಲೇಬೇಕು. ಶಾಲೆಯಲ್ಲಿಯ ಎಲ್ಲ ಚಟುವಟಿಕೆಗಳು ಮುಂಜಾನೆಯ ಪ್ರಾರ್ಥನೆಯಿಂದ ಪ್ರಾರಂಭವಾಗಿ ಸಾಯಂಕಾಲದ ಪ್ರಾರ್ಥನೆಯಿಂದ ಕೊನೆಗೊಳ್ಳುತ್ತವೆ. [illegible]

[illegible]

ಬೇಕು. ಹೊಸ ಹೊಸ ಹಾಡುಗಳನ್ನು ಬಾಲಕರು ಸರಾಗವಾಗಿ ಹಾಡಲು ಕಲಿಯುವದರಿಂದ ಅವರಲ್ಲಿ ಸಂಗೀತ-ಜ್ಞಾನವು ಬೆಳೆಯುವದು. ಸಾಹಿತ್ಯದ ಬಗ್ಗೆ ಅಭಿರುಚಿಯು ಹುಟ್ಟುವದು. ವಿಶ್ವಧರ್ಮದ ಸಮಾನತೆಯನ್ನು ಬಾಲಕರು ಕಂಡುಕೊಳ್ಳುವರು. ಅವರಲ್ಲಿದ್ದ ಸಂಕುಚಿತ ಭಾವನೆಯು ಹೋಗಿ ವಿಶಾಲ ಭಾವನೆಯು ಎಡೆಗೊಳ್ಳುವದು. ಹೀಗೆಯೇ ದಿನಾಲು ಬಾಲಕರು ಪ್ರಾರ್ಥನೆಯನ್ನು ಮಾಡುತ್ತ ಹೋದರೆ ಅವರ ಭಾವೀ ಜೀವನವು ಸುಸಂಸ್ಕೃತವಾಗಿ ಪವಿತ್ರವಾಗಿ ಸುಂದರವಾಗುವದು. ಅವರಲ್ಲಿದ್ದ ಅಮರತ್ವವು ವಿಕಾಸವಾಗುವದು.

* * * * * * * * * * * * * * * * * *

ಪ್ರಿ. ವ್ಹಿ. ಕೆ. ಗೋಕಾಕರ ಭಾಷಣ

* * * * * * * * * * * * * * * * * *

ಸಂಗ್ರಹಕಾರರು: **ಶ್ರೀ. ಭೀ. ನ. ಮಣ್ಣೂರ ಪ್ರಾ. ಸ್ಕೂಲ, ಸರಕಾರಿ ಟ್ರೆ. ಕಾ. ಧಾರವಾಡ**

(ದಿನಾಂಕ ೩೦–೪–೫೫ರಂದು ಧಾರವಾಡ ಸರಕಾರೀ ಟ್ರೇನಿಂಗ ಕಾಲೇಜದಲ್ಲಿ ಜರುಗಿದ ಹಿರಿಯ ಶಿಕ್ಷಕ–ವಿದ್ಯಾರ್ಥಿಗಳ ದೀಕ್ಷಾವಿಧಿಯ ಸಮಾರಂಭದಲ್ಲಿ ಮಾಡಿದ ಭಾಷಣವನ್ನು ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ.)

—:o:—

“ಪ್ರಿನ್ಸಿಪಾಲ ಪಾಟೀಲರೇ, ಹಾಗೂ ಶಿಕ್ಷಕ-ವಿದ್ಯಾರ್ಥಿಗಳೇ, ಈ ದಿವಸ ೨ನೆಯ ವರ್ಷದ ಶಿಕ್ಷಕ-ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭಕ್ಕೆ ಮತ್ತು ಹಿಂದೀ ಕೋರ್ಸಿನ ಶಿಕ್ಷಕ-ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭಕ್ಕೂ ನನ್ನೊಬ್ಬನನ್ನೇ ಅತಿಥಿಯನ್ನಾಗಿ ಕರೆಯಿಸಿದ್ದಕ್ಕೆ ತಮಗೆ ನಾನು ತುಂಬಾ ಋಣಿಯಾಗಿದ್ದೇನೆ.

ನಿಮ್ಮ ಸಾಮೂಹಿಕ ಪ್ರಾರ್ಥನೆಯನ್ನು ನೋಡಿ, ನನಗೆ ತುಂಬಾ ಆನಂದವಾಯಿತು. ಪ್ರಶಾಂತವಾದ ಪ್ರಾರ್ಥನೆಯಲ್ಲಿ ಭಾಗವಹಿಸಿ, ಮನಸ್ಸು ಪ್ರಫುಲ್ಲಿತವಾಯಿತು. ಪ್ರಾರ್ಥನೆಯಲ್ಲಿ ಪ್ರಶಾಂತತೆ, ತನ್ಮಯತೆ ತೀರ ಅವಶ್ಯಕ. ಆದರೆ ಸಾಮಾನ್ಯವಾಗಿ, ಸಾರ್ವಜನಿಕ ಪ್ರಾರ್ಥನೆಯಲ್ಲಿ ಈ ಬಗೆಯ ತನ್ಮಯತೆ ಕಂಡುಬರುವದು ಕಡಿಮೆ. ಹೆಚ್ಚಾಗಿ ಸಾಮೂಹಿಕ ಪ್ರಾರ್ಥನೆಯಲ್ಲಿ ಅದರ ವಿಡಂಬನವೇ ಕಂಡು ಬರುತ್ತದೆ. ಆದರೆ ಪ್ರಾರ್ಥನೆಯು ನಮ್ಮ ಜೀವನಕ್ಕೆ ತೀರ ಅವಶ್ಯಕ. ಈ ಪ್ರಾರ್ಥನೆಯನ್ನು ಮಾಡುವಾಗ ನಾವು ಎರಡು ಮಾತುಗಳ ಕಡೆಗೆ ಲಕ್ಷ್ಯ ಕೊಡಬೇಕು. ಮೊದಲನೆಯದಾಗಿ ನಾವು ನಮ್ಮ ಮನಸ್ಸನ್ನು ನಿರ್ವಿಕಾರ, ನಿರ್ವಿಚಾರ ಸ್ಥಿತಿಯಲ್ಲಿ ಇರಿಸಬೇಕು. ಎರಡನೆಯದಾಗಿ ಮನಸ್ಸನ್ನು ಪರಮಾತ್ಮನಲ್ಲಿ ಕೇಂದ್ರೀಕರಿಸಬೇಕು. ಹೀಗೆ ನಾವು ಏಕಾಗ್ರ ಚಿತ್ತದಿಂದ, ಶ್ರದ್ಧೆಯಿಂದ ಪ್ರಾರ್ಥನೆ ಮಾಡಿದಾಗ, ಅಲ್ಲಿ ಒಂದು ತೇಜಸ್ಸು ಜನಿಸುತ್ತದೆ. ಅದೇ ನಮಗೆ ಕತ್ತಲೆಯಲ್ಲಿ ದಾರಿ ತೋರಿಸುತ್ತದೆ. ಬೇಕಾದಂತಹ ದುಸ್ತರ ಪ್ರಸಂಗದಲ್ಲಿಯೂ ಕೂಡ, ನಾವು ಪ್ರಾರ್ಥನೆಯನ್ನು ಮಾಡಿದರೆ, ನಮಗೆ ಅದರಲ್ಲಿ ಒಂದು ಹೊಸ ಮಾರ್ಗ ಕಾಣುತ್ತದೆ. ಪ್ರಾರ್ಥನೆ ನಮ್ಮ ಜೀವನದ ಉಸಿರು. ಈ ಸಾಮೂಹಿಕ ಪ್ರಾರ್ಥನೆಯನ್ನು ನಾವು ನಮ್ಮ ಹಳ್ಳಿಯ ಶಾಲೆಗೆ ಹೋದಾಗ ಅಲ್ಲಿಯ ಮಕ್ಕಳಿಂದ ಮಾಡಿಸಿ, ಅವರಲ್ಲಿ ಪ್ರಾರ್ಥನೆಯ ಬಗ್ಗೆ ಶ್ರದ್ಧೆಯನ್ನು ಹುಟ್ಟಿಸಿದರೆ, ನಾವು ರಾಷ್ಟ್ರ ಕಲ್ಯಾಣವನ್ನು ಮಾಡಿದಂತೆ ಆಗುತ್ತದೆ.

ಕಾಲೇಜದ ಸುಸಂಸ್ಕೃತ ವಾತಾವರಣವನ್ನು ಪಡೆದು ಇಲ್ಲಿಯ ಸಾಂಘಿಕ ಜೀವನವನ್ನು ಅನುಭವಿಸಿ, ತಿರುಗಿ ನೀವು ಹಳ್ಳಿಗೆ ಹೋದಾಗ ನಮಗೆ ಈ ಕಾಲೇಜ ಜೀವನದ ಸವಿನೆನಪು ಮನಸ್ಸಿಗೆ ಕೊಂಚ

ಭೇದವನ್ನುಂಟು ಮಾಡಬಹುದು. ಇಂತಹ ಸುಸಂಸ್ಕೃತ ಜೀವನ ಅಲ್ಲಿ ಸಿಗಲಿಕ್ಕಿಲ್ಲ. ಇಂಥ ಅನುಕೂಲತೆ ಅಲ್ಲಿ ಇರಲಿಕ್ಕಿಲ್ಲ. ಅದಕ್ಕಾಗಿ ನೊಂದುಕೊಳ್ಳುವ ಕಾರಣವಿಲ್ಲ. ಕಡೆತನಕ ವಿದ್ಯಾರ್ಥಿ ಜೀವನದಲ್ಲಿ ಇರುವದು ಸಾಧ್ಯವಿಲ್ಲ. ಜೀವನವು ನೀರಿನ ಪ್ರವಾಹವಿದ್ದಂತೆ ಇದೆ. ಆದು ಪ್ರಗತಿಪಥದಲ್ಲಿ ಸಾಗುತ್ತದೆ. ಜೀವನದಲ್ಲಿ ಉಷಃಕಾಲ, ಮಧ್ಯಾಹ್ನ ಮತ್ತು ಸಂಜೆ ಇವು ಇರತಕ್ಕವೇ. ಉಷಃಕಾಲದ ಶಾಂತಮಯ ಸಂಗೀತದ ಸವಿಯು ಕಡೆತನಕ ಸವಿಯಲು ಸಿಗಲಾರದು. ಮಧ್ಯಾಹ್ನದ ಬಿಸಿಲು ಸಂಜೆಯ ನಸುಗೆಂಪು ನಮ್ಮ ಜೀವನದಲ್ಲಿ ಬರತಕ್ಕವೇ. ಆದರೆ ವಿದ್ಯಾರ್ಥಿ ಜೀವನವನ್ನು ಮುಗಿಸಿ, ಪ್ರಪಂಚದಲ್ಲಿ ಕಾಲಿಟ್ಟಾಗ ನಮ್ಮ ಜೀವನಪಥದಲ್ಲಿ ಎರಡು ಟಿಸಿಲುಗಳು ಕಾಣುತ್ತವೆ. ಒಂದನೆಯ ಮಾರ್ಗ ವಾಮಮಾರ್ಗ, ಎರಡನೆಯದು ದಾರುಣ ಸತ್ಯಮಾರ್ಗ. ಜಗತ್ತಿನಲ್ಲಿ ಒಂದನೆಯ ಮಾರ್ಗವನ್ನು ಅನುಸರಿಸುವ ಜನರೇ ಹೆಚ್ಚು. ಏನಕೇನ ಪ್ರಕಾರೇಣ ತಮ್ಮ ಗುರಿಯನ್ನು ಮುಟ್ಟಲು ಪ್ರಯತ್ನಿಸುವವರು ಜಗತ್ತಿನಲ್ಲಿ ತಮ್ಮ ಚತುರತೆಯನ್ನು ತೋರಿಸಿ, ಆತ್ಮವಂಚನೆಯನ್ನು ಮಾಡಿ ತಮ್ಮ ಉತ್ಕರ್ಷವನ್ನು ಸಾಧಿಸುತ್ತಾರೆ. ಇಂಥ ಜನರಿಗೆ ಉತ್ಕರ್ಷೆಯ ಜೊತೆಗೆ ಅಪಕೃತಿಯ ಬಗ್ಗೆ ಏಟುಗಳೂ ಬೀಳುತ್ತವೆ. ಈ ಮಾರ್ಗದಲ್ಲಿ ಸ್ಪರ್ಧೆಯ ತಾಕಲಾಟವು ಕಾಣುತ್ತದೆ. ವ್ಯಕ್ತಿಗಳ ತಿಕ್ಕಾಟವು ತೈದೋರುತ್ತದೆ.

ಜೀವನದಲ್ಲಿ ಎರಡನೆಯ ಮಾರ್ಗವು ಶ್ರೇಷ್ಠವಾದದ್ದು. ಇಲ್ಲಿ ಸ್ಪರ್ಧೆಗೆ ಅವಕಾಶವಿಲ್ಲ. ಕೀರ್ತಿಗಿಂತ ಆತ್ಮತೃಪ್ತಿಗೇ ಹೆಚ್ಚು ಮಹತ್ವ. ಈ ದಾರುಣ ಸತ್ಯದ ಮಾರ್ಗದಿಂದ ನಡೆಯುತ್ತಿರುವ ಮಾನವನನ್ನು ಜಗತ್ತು ಮೂರ್ಖನೆಂದು ಕರೆಯಬಹುದು. ಅವನ ಮಾರ್ಗದಲ್ಲಿ ಅನೇಕ ಅಡೆತಡೆಗಳನ್ನು ತಂದು ಒಡ್ಡಬಹುದು. ಇವೆಲ್ಲವುಗಳನ್ನು ಎದುರಿಸಿ, ನೀವು ಮುಂದೆ ಸಾಗಿದರೆ, ನಿಮ್ಮ ಜೀವನದ ಸಫಲತೆಯನ್ನು ಕಾಣುವಿರಿ. ಈಗ್ಗೆ ಜಗತ್ತಿನಲ್ಲಿ ಒಳ್ಳೆಯವರಿಗೆ ಬೆಲೆಯಿಲ್ಲ. ಎಲ್ಲಿಯವರೆಗೆ ಒಳ್ಳೆಯತನಕ್ಕೆ ನಮ್ಮ ಜಗತ್ತಿನಲ್ಲಿ ಮನ್ನಣೆ ದೊರಕುವದಿಲ್ಲವೋ, ಅಲ್ಲಿಯತನಕ ನಾವು ಮಾಡುವ ಎಲ್ಲ ರಾಜಕಾರಣ ವ್ಯರ್ಥ; ನಮಗೆ ಶಾಂತಿ ಸಿಗಲಾರದು. ಈ ಸತ್ಯ ಮಾರ್ಗದಿಂದಲೇ ನಿಮಗೆ ಜೀವನದಲ್ಲಿ ಶಾಂತಿ, ತೃಪ್ತಿ ಸಿಗುತ್ತವೆ. ನೀವು ನಿಮ್ಮ ಕಾರ್ಯವನ್ನು ಶ್ರದ್ಧೆಯಿಂದ ಮಾಡಿದರೆ ಸಿಗುವ ತೃಪ್ತಿಯೂ ಮಹಾತ್ಮಾ ಗಾಂಧೀಜಿಗೆ ಭಾರತದ ಸ್ವಾತಂತ್ರ್ಯ ದೊರಕಿಸಿದಾಗ ಆದ ತೃಪ್ತಿಯೂ ಒಂದೇ ಆಗಿವೆ. ಆತ್ಮವಂಚನೆ ಇಲ್ಲದೆ ಕೈಕೊಂಡ ಕಾರ್ಯವನ್ನು ನಿರ್ಮಲ ಹೃದಯದಿಂದ ಮಾಡಿದರೆ, ನಿಮಗೆ ಜೀವನದಲ್ಲಿ ತೃಪ್ತಿ, ಶಾಂತಿ ಸಿಕ್ಕುತ್ತವೆ. ಕೀರ್ತಿಗಿಂತ ಆತ್ಮ ತೃಪ್ತಿಯೇ ಹೆಚ್ಚಿನದು. ಕೀರ್ತಿಯು ಒಂದು ಕೆರೆಯಲ್ಲಿ ಸಣ್ಣ ಕಲ್ಲು ಒಗೆದರೆ, ಉಂಟಾಗುವ ವರ್ತುಲದಂತೆ. ಈ ವರ್ತುಳವು ತಿರುಗಿ ನೀರಿನಲ್ಲಿ ಬೆರೆಯುತ್ತದೆ. ಹೆಚ್ಚು ದೊಡ್ಡ ಕಲ್ಲು ಒಗೆದಂತೆ ಹೆಚ್ಚು ದೊಡ್ಡ ವರ್ತುಳವು ನೀರಿನಲ್ಲಿ ಉಂಟಾಗುತ್ತದೆ. ಅದೂ ಕೊನೆಗೆ ದಡಕ್ಕೆ ಅಪ್ಪಳಿಸಿ, ನೀರಿನಲ್ಲಿ ವಿಲೀನವಾಗುತ್ತದೆ. ಪರಮಾತ್ಮನ ಮೇಲೆ ಭರವಸೆ ಇಟ್ಟು, ಸತ್ಯಮಾರ್ಗವನ್ನು ಹಿಡಿದು ಜೀವನವನ್ನು ಸಾಗಿಸುವದರಿಂದಲೇ ನಿಜವಾದ ತೃಪ್ತಿ ಜೀವನದಲ್ಲಿ ಸಿಗುತ್ತದೆ. ಆದ್ದರಿಂದ ನೀವೆಲ್ಲರೂ ಮುಂದೆ ಹಳ್ಳಿಗೆ ಹೋಗಿ, ನಿಮ್ಮ ಕಾರ್ಯಕ್ಷೇತ್ರದಲ್ಲಿ ಕಾಲಿಟ್ಟಾಗ್ಯೂ ಈ ದಾರುಣ ಸತ್ಯ ಮಾರ್ಗವನ್ನೇ ಅವಲಂಬಿಸಿರಿ. ಅದೇ ಜೀವನದ ಶಾಂತಿಮಾರ್ಗ. ಇನ್ನು ಹಿಂದೀ ಶಿಕ್ಷಣವನ್ನು ಪಡೆದುಕೊಂಡು ನೀವು ಹಳ್ಳಿಗೆ ಹೋಗುವಿರಿ. ಅಲ್ಲಿಗೆ ಹೋದಾಗ ನೀವು ಹಿಂದೀ ಮಾಸಪತ್ರಿಕೆಗಳನ್ನೂ, ದೈನಿಕ ಪತ್ರಿಕೆಗಳನ್ನೂ ತರಿಸಿ, ಹಿಂದಿಯ ಜ್ಞಾನವನ್ನು ವೃದ್ಧಿಗೊಳಿಸಿರಿ. ಅದಕ್ಕೆ ಜಂಗು ಹತ್ತಿಸಬೇಡಿರಿ. ನಿಮ್ಮ ಹಿಂದಿಯ ಜ್ಞಾನವನ್ನು ಹಳ್ಳಿಯ ಜನರಲ್ಲಿ, ಮಕ್ಕಳಲ್ಲಿ ಹರಡಿ, ಆತ್ಮತೃಪ್ತಿಯನ್ನು ಹೊಂದಿರಿ. ನೀವು ಕೈಕೊಂಡ ಕಾರ್ಯ ಒಂದು ತಪಸ್ಸು. ಅದನ್ನು ಶ್ರದ್ಧೆಯಿಂದ ಮಾಡದಿದ್ದರೆ ಅದು 'ತಪಾಸು' ಆಗುತ್ತದೆ. ಅದರಲ್ಲಿ ಸಫಲತೆ, ತೃಪ್ತಿ ಮತ್ತು ಶಾಂತಿ ಸಿಗಲಾರವು. ಆದರಿಂದ ತಾವೆಲ್ಲರೂ ಕೈಕೊಂಡ ಕಾರ್ಯವನ್ನು ಶ್ರದ್ಧೆಯಿಂದ ನಿರ್ಮಲ ಹೃದಯದಿಂದ ಮಾಡಿ, ಆತ್ಮ ತೃಪ್ತಿಯನ್ನು ಪಡೆಯಿರಿ." ಎಂದು ಹೇಳಿ, ಸಂಸ್ಥೆಯ ಸಂಚಾಲಕರು ಈ ಅವಕಾಶ ಕೊಟ್ಟದ್ದಕ್ಕಾಗಿ ಮತ್ತೊಮ್ಮೆ ಅವರನ್ನು ಅಭಿನಂದಿಸಿ ತಮ್ಮ ಭಾಷಣವನ್ನು ಮುಗಿಸಿದರು.

ಎಂಜಲು

ಬರೆದವರು :— ಶ್ರೀ ಜಿ. ಎನ್. ಸಗರ, ಸರಕಾರಿ. ಪ್ರ್ಯಾ. ಸ್ಕೂಲ, ಟ್ರೇ. ಕಾ. ಧಾರವಾಡ.

ಪಾತ್ರಗಳು

(೧) ಶ್ರೀರಾಮ (೨) ಲಕ್ಷ್ಮಣ (೩) ಶಬರಿ

ನಿವೇದಕ :— ಇಂದು ಶ್ರೀರಾಮಚಂದ್ರನು ತನ್ನ ಗುಡಿಸಲಿನ ಮುಂದಿನ ಮಾರ್ಗದಿಂದ ಹಾದು ಹೋಗುತ್ತಾನೆಂದು ಶಬರಿಗೆ ಹೇಗೋ ತಿಳಿಯಿತು. ಬಹು ದಿವಸಗಳಿಂದ ಶ್ರೀರಾಮನನ್ನು ಕಾಣಬೇಕೆಂದಿದ್ದ ಶಬರಿಯ ಬಯಿಕೆಯ ಬಳ್ಳಿಯು ಕೊನರಿ ಇಂದು ವಿಶಾಲವಾಗಿ ಹಬ್ಬತೊಡಗಿದೆ. ಇದೀಗ ಶಬರಿಯು ಆತನ ಮಾರ್ಗ ನಿರೀಕ್ಷಣೆ ಮಾಡುತ್ತ ತನ್ನ ಗುಡಿಸಲಿನ ಮುಂದೆ ನಿಂತಿರುವಳು.

ಶಬರಿ :— ರಾಮಚಂದ್ರನು ಇದೇ ಮಾರ್ಗದಿಂದ ಹೋಗುತ್ತಾನೆಂಬುವದನ್ನು ಕೇಳಿ ನನ್ನ ಮನಸ್ಸು ನವಿಲಿನಂತೆ ಕುಣಿಯಹತ್ತಿದೆ. ರಾಮಚಂದ್ರನ ದಾರಿಯನ್ನು ಮುಂಜಾವಿನಿಂದ ಒಂದೇಸವನೆ ಕಾಯುತ್ತಿದ್ದೇನೆ. ಆದರೆ ಈ ವರೆಗೆ ಆತನ ಸುಳುವೇ ಇಲ್ಲ. ರಾಮಚಂದ್ರನು ಯಾವಾಗ ಬರುವನೋ ಏನೋ? ಆತನನ್ನು ಯಾವಾಗ ಕಣ್ತುಂಬ ನೋಡುವೆನೋ ಎಂದು ನನ್ನ ಮನಸ್ಸು ಒಂದೇಸವನೆ ಚಡಪಡಿಸುತ್ತಿದೆ. ಆಹಹ! ದೂರದಲ್ಲಿ ಯಾರೋ ಇಬ್ಬರು ಬರುತ್ತಿದ್ದಾರೆ. ಅವರೇ ರಾಮ ಲಕ್ಷ್ಮಣರು ಇರಬಹುದು! ಅಹುದು! ಅಹುದು! ಅವರೇ ರಾಮ ಲಕ್ಷ್ಮಣರು. ಈಗ ನನ್ನ ಮನಸ್ಸಿಗೆ ಶಾಂತಿಯುಂಟಾಯಿತು. ಇಂದಿಗೆ ನನ್ನ ಕನಸು ನನಸಾಯಿತು. (ರಾಮ ಲಕ್ಷ್ಮಣರು ಬರುವರು) ರಾಮಚಂದ್ರಾ, ನಿನಗೆ ಜಯವಾಗಲಿ (ನಮಸ್ಕರಿಸುವಳು.)

ರಾಮು :—ಮಂಗಲವಾಗಲಿ,ಎದ್ದೇಳು. ಯಾರವ್ವಾ ನೀನು? ನಮ್ಮೊಡನೆ ನಿನಗೇನಾಗಬೇಕಾಗಿದೆ? ಹೇಳು.

ಶಬರಿ :— ಸ್ವಾಮೀ ನಾನು ಒಬ್ಬ ಶಬರಿಯು. ದೇವಾ, ಎಂದಿನಿಂದಲೂ ತಮ್ಮನ್ನು ಕಾಣಬೇಕೆಂದು ಹಂಬಲಿಸುತ್ತಿದ್ದೆ. ಆ ನನ್ನ ಇಚ್ಛೆಯು ಇಂದಿಗೆ ಪೂರ್ತಿಯಾಯಿತು. ಈಗ ನಾನು ಪುಣ್ಯವಂತಳಾದೆ.

ಲಕ್ಷ್ಮಣ:—ಅಣ್ಣಾ, ನಾವಿನ್ನು ಮುಂದೆ ತೆರಳೋಣ.

ರಾಮ :— ತಾಯೀ, ನಿನ್ನ ದರ್ಶನದಿಂದ ನನಗೆ ಕೌಶಲ್ಯೆಯನ್ನು ಕಂಡಷ್ಟು ಹರುಷವಾಗಿ ನನ್ನ ಹೃದಯವು ಹಿಗ್ಗಿ ಹೋಗಿದೆ. ನಿನ್ನಂಥ ಸಾತ್ವಿಕ ಶಬರಿಯರಿಂದ ಈ ವನವು ಬಹು ಮನೋಹರವಾಗಿ ಕಂಗೊಳಿಸುತ್ತಿದೆ. ಈ ನಿನ್ನ ಗುಡಿಸಲು ಶಾಂತಿ ಸುಖಗಳಿಂದ ತುಂಬಿ ತುಳುಕಾಡಲಿ! ನಿನ್ನ ಆಶೆಗಳೆಲ್ಲ ಪೂರ್ಣಗೊಳ್ಳಲಿ. ಅಮ್ಮಾ, ನಾವು ಕ್ರಮಿಸತಕ್ಕ ದಾರಿಯು ಇನ್ನೂ ಬಹು ದೀರ್ಘವಾಗಿದೆ. ಕಾರಣ ನಾವು ಮುಂದೆ ಸಾಗುತ್ತೇವೆ.

ಶಬರಿ :— ಮಹಾತ್ಮರೇ, ದಾರಿಯ ತುಳಿತದಿಂದ ತಾವು ತುಂಬಾ ದಣಿದಿರುವಿರಿ. ಈ ಬಡವೆಯ ಭಕ್ತಿಯನ್ನಷ್ಟು ಸ್ವೀಕರಿಸಿ ಮುಂದೆ ಹೋಗಿರಿ. ನನ್ನ ಈ ಬಿನ್ನಹವನ್ನು ಮನ್ನಿಸಬೇಕೆಂದು ಬೇಡಿಕೊಳ್ಳುತ್ತೇನೆ.

ರಾಮ : — ಆಗಲಿ! ನಿನ್ನ ಮನದಿಚ್ಛೆಯಂತೆ ನಾವೀಗ ವರ್ತಿಸುತ್ತೇವೆ. (ಶಬರಿಯು ಗುಡಿಸಲೊಳಗೆ ಹೋಗುವಳು).

ಲಕ್ಷ್ಮಣ :— ಅಣ್ಣಾ, ಶಬರಿಯ ಮನೆಯಲ್ಲಿ ಅತಿಥಿ ಸತ್ಕಾರವನ್ನು ಸ್ವೀಕರಿಸುವಿಯಾ?

ರಾಮ :— ಮುಡುಕಬೇಡ; ಲಕ್ಷ್ಮಣಾ. ಅವಳ ಮನದಾಶೆಯಾದರೂ ಏನಿದೆಯೆಂಬುದನ್ನು ಮೊದಲು ಕಂಡುಕೊಳ್ಳೋಣ. ಅಲ್ಲದೆ, ತಮ್ಮಾ, ಕ್ಷತ್ರಿಯ ಧರ್ಮದವರಾದ ನಮಗೆ ಈ ರೀತಿಯಾಗಿ ಯಾವ ಅನುಮಾನ ಪಟ್ಟು ಕೊಳ್ಳುವ ಕಾರಣವೂ ಇಲ್ಲ.

ಶಬರಿಯು ಬೋರೆಯಹಣ್ಣುಗಳನ್ನು ಕೊಡುವಳು. ರಾಮನು ತಿನ್ನ ಹತ್ತುವನು. ಲಕ್ಷ್ಮಣನು ಮಾತ್ರ ತಿನ್ನದೆ

ಅಣ್ಣನನ್ನು, ಹಣ್ಣುಗಳನ್ನು ನೋಡುತ್ತ ನಿಲ್ಲುವನು)

ಲಕ್ಷ್ಮಣ:—(ಸ್ವಗತ) ನಮ್ಮ ಅಣ್ಣನು ಎಂಜಲು ಹಣ್ಣುಗಳನ್ನು ತಿನ್ನುತ್ತಿದ್ದಾನೆ. ಅಹಹಹ

ರಾಮ:—ತಮ್ಮಾ ಆ ಹಣ್ಣುಗಳನ್ನು ತಿನ್ನದೆ ಅಷ್ಟೇಕೆ ದಿಟ್ಟಿಸಿ ನೋಡುತ್ತಿರುವೆ?

ಲಕ್ಷ್ಮಣ:—ಅಣ್ಣಾ, ಹಣ್ಣುಗಳ ಮೇಲೆ ಕಚ್ಚುಗಳಾಗಿವೆ ಎಂಜಲು ಎಂದು ಶಂಕಿಸುತ್ತಿದ್ದೇನೆ.

ರಾಮ:—ಅಮ್ಮಾ ಈ ಹಣ್ಣುಗಳ ಮೇಲಿ ಆಗಿರುವ ಕಚ್ಚುಗಳು ಯಾತರವು? ಹಕ್ಕಿಗಳು ತಿಂದಿರುವವೇ?

ಶಬರಿ:—ಸ್ವಾಮೀ ಹಕ್ಕಿಗಳ ಎಂಜಲವನ್ನು ತಮಗೆ ಕೊಡುವೆನೇ? ನಾನೇ ಕಡಿದು ಸವಿನೋಡಿ ಒಳ್ಳೇ ರುಚಿಕರವಾದ ಹಣ್ಣುಗಳನ್ನು ಆರಿಸಿ ಇಟ್ಟಿದ್ದೇನೆ

ಲಕ್ಷ್ಮಣ:—ಅಂದಮೇಲೆ ಎಂಜಲು ಹಣ್ಣುಗಳನ್ನು ತಿನ್ನುವಿಯಲ್ಲಾ ಅಣ್ಣಾ! ಇಂಥ ಸತ್ಕಾರದ ಸೇವನೆಯು ನಗೇಕೋ ಸೇರುವದಿಲ್ಲ.

ರಾಮ:—ತಮ್ಮಾ ಅವು ಎಂಜಲು ಹಣ್ಣುಗಳಲ್ಲ ಅವಳಹಲ್ಲಿನಿಂದಾದಕಚ್ಚುಗಳಲ್ಲಿ ಭಕ್ತಿಯರಸವು ತುಂಬಿ ಹೋಗಿದೆ. ಅದರಿಂದಲೇ ಅವು ಸಕ್ಕರೆಗಿಂತ ಸಿಹಿಯಾಗಿವೆ. ಜೇನಿಗಿಂತ ಮಧುರವಾಗಿವೆ. ಇಂದಿನ ವರೆಗೆ ನಾನು ಇಂಥ ಹಣ್ಣುಗಳನ್ನು ಎಲ್ಲಿಯೂ ತಿಂದಿಲ್ಲ. ಈ ಹಣ್ಣುಗಳ ಸೇವನೆಯಿಂದ ನನ್ನ ಹಸಿವು ತೃಷೆಗಳು ಹಿಂಗಿದವು ಮಾತೃವಾತ್ಸಲ್ಯದಿಂದ ಕೂಡಿರುವ ಈ ಶಬರಿಯ ಮಾಥ ಭಕ್ತಿಯ ಮಹಾತ್ಮೆಯನ್ನು ಅದಾರು ಬಣ್ಣಿಸ ಬಲ್ಲರು!

ಲಕ್ಷ್ಮಣ:—ದೇವಾ, ಅಣ್ಣನ ಮನಸ್ಸು ಎಷ್ಟು ವಿಶಾಲವಾದದ್ದು? ಶುದ್ಧವಾದ ಮನಸ್ಸಿನ ಈ ಶಬರಿಯ ಎಂಜಲವನ, ಅನಂದದಿಂದ ಸವಿದು, ಅವಳ ಆಶೆಯನ್ನು ಪೂರ್ಣಗೊಳಿಸಿದನು. ಆದುದರಿಂದಲೇ ಎಲ್ಲರು ರಾಮ ರಾಮ ಎಂದು ನೆನಿಸುತ್ತಾರೆ.

ರಾಮ:—ತಮ್ಮಾ ಇನ್ನೂ ಅನುಮಾನವೇ? ತಿನ್ನು; ನೀನು ತಿನ್ನದಿದ್ದರೆ ಶಬರಿಯ ಮನಸು ಖಿನ್ನಗೊಳ್ಳುವದಿಲ್ಲವೇ? (ಲಕ್ಷ್ಮಣನು ತಿನ್ನುವನು)

ಶಬರಿ:—ಸ್ವಾಮೀ, ಇಂದಿಗೆ ನನ್ನ ಜನ್ಮವು ಸಾರ್ಥಕವಾಯಿತು. ನಾನು ಧನ್ಯಳಾದೆ. ಇನ್ನು ಮುಂದಿನ ತಮ ಪ್ರಯಾಣವು ಸುಖಕರವಾಗಲಿ.

(ನಮಸ್ಕರಿಸುವಳು)

ರಾಮ:— ಕಲ್ಯಾಣವಾಗಲಿ. (ಹೋಗುವರು. ಶಬರಿಯು ಕೈಮುಗಿದು ರಾಮಲಕ್ಷ್ಮಣರನ್ನು ಕಣ್ಣುಮರೆಯಾಗುವವರೆಗೆ ನೋಡುತ್ತ ಭಜಿಸುತ್ತಿರುವಳು,

ಶಬರಿ:— ರಾಮ! ರಾಮ ಜಯರಾಮ!; ಜಯರಾಮ!!

* ಗವ್ನ. ಪ್ರಾ. ಸ್ಕೂಲಿನ ಬಾಲಕರು ೧೯-೧೦-೫೪ ರಂದು ಗಿಳಿವಿಂಡಿನ ವಿಶೇಷ ಕಾರ್ಯಕ್ರಮದಲ್ಲಿ ಮಾಡಿ ತೋರಿಸಿದ್ದಾರೆ.

(ಧಾರವಾಡ ಆಕಾಶವಾಣಿ ಕೃಪೆಯಿಂದ)

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಪ್ರೊ. ಎಸ್. ಕೆ. ಜೋಶಿ, ಮತ್ತು
ಪ್ರೊ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾಸ್ಥರಲ್ಲಿ ದೊರೆಯುವದು. **ಬೆಲೆ ೧-೧೩-೦,** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಅಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಗಂಗಾಧರ ಮಡಿವಾಳೇಶ್ವರ ತೂರಮರಿ

೧೯ನೆಯ ಶತಮಾನದ ಪೂರ್ವಾರ್ಧ; ಆರನೆಯ ದಶಕದ ಉತ್ತರಾರ್ಧ; ೧೮೬೭ನೆಯ ಇಸ್ವಿಯ ಒಂದು ಶುಭದಿನ; ಬೆಳಗಾಂವ ಜಿಲ್ಲೆಯಲ್ಲಿ ಒಂದು ತಾಲ್ಲೂಕಿನ ಸ್ಥಳವಾದ ಬೈಲಹೊಂಗಲದಲ್ಲಿ ತೂರಮರಿಯವರದೊಂದು ಈಗಲೂ ಹೆಸರಾಗಿರುವ ಮನೆತನದ ಸದ್ಗೃಹಸ್ಥರಾದ ಚೆನ್ನಬಸಪ್ಪನವರಿಗೆ ಮುಂದೆ ಕನ್ನಡ ಕುಲೋದ್ಧಾರಕನಾಗಲಿರುವ ಒಂದು ಗಂಡು ಕೂಸಿನ ಜನನವಾಯಿತು. ಧರ್ಮಪರಂಪರೆಯಂತೆ ಈ ಮಗುವಿಗೆ ಶುಭಮುಹೂರ್ತದಲ್ಲಿ ಗಂಗಪ್ಪ ಎಂದು ನಾಮಕರಣ ಮಾಡಲಾಯಿತು. ಸುಶಿಕ್ಷಿತ ಮನೆತನದಲ್ಲಿ ಜನ್ಮವೆತ್ತ ಗಂಗಪ್ಪನು ಬಿದಿಗೆಯ ಚಂದ್ರನಂತೆ ಬೆಳೆದು ಮುಂದೆ ಶರತ್ಕಾಲದ ಪೂರ್ಣಿಮೆಯ ತಂಗದಿರನಂತೆ ಕನ್ನಡ ನುಡಿ ಕನ್ನಡ ಶಿಕ್ಷಣವನ್ನು ಬೆಳಸಿ, ಬೆಳಗುವ ಆಶಾಕಿರಣವನ್ನು ಅಂದಿನ ಕನ್ನಡಿಗರಲ್ಲಿ ಉದಯಿಸಿದನು. ಗಂಗಪ್ಪನಿಗೆ ವೀರಪ್ಪ, ಸೋಮಪ್ಪ, ಸಿದ್ದಲಿಂಗಪ್ಪ ಎಂಬ ಮೂವರು ತಮ್ಮಂದಿರೂ ಚೆನ್ನಬಸಪ್ಪನೆಂಬ ತಂಗಿಯೂ ಇದ್ದರು.

ಅಂದು ದಕ್ಷಿಣ ಮಹಾರಾಷ್ಟ್ರವೆಂಬ ಪ್ರಾಂತಕ್ಕೊಳಗಾದ ಬೆಳಗಾಂವಿ ಜಿಲ್ಲೆಯಲ್ಲಿ ಮರಾಠಿಯ ಪ್ರಾಬಲ್ಯವು ಹೆಚ್ಚಾಗಿದ್ದುದರಿಂದ ಆಗಿನ ಜನರು ಖಾಸಗಿ ಸಾಲೆಯ ಅಯ್ಯನವರಿಂದ ತಮ್ಮ ಮಕ್ಕಳಿಗೆ ಮರಾಠಿಯ ಮೋಡೀ ಅಕ್ಷರಗಳನ್ನೂ ಅಲ್ಪಸ್ವಲ್ಪ ಕನ್ನಡವನ್ನೂ ಕಲಿಸುತ್ತಿದ್ದರು. ಕ್ರಮಕಾಲತೆಯಿಂದ ಕೆಲಕ್ಕು ವಿದ್ಯಾರ್ಥಿಗಳಿಗೆ ಮಾತ್ರ ಹಳೆಗನ್ನಡವೂ ಸಂಸ್ಕೃತವೂ ಕಲಿಸಲ್ಪಡುತ್ತಿದ್ದವು.

ಗಂಗಪ್ಪನವರು ವಿದ್ಯಾಭ್ಯಾಸದ ವ್ಯಾಸಂಗದಿಂದ ಹೊಂದಿ ಮಿತ್ರತ್ವವನ್ನು ತಳೆದ ಸಮಯಕ್ಕೆ ಅಥಣಿಯ ಹಿರೇಮಠದ ಮಡಿವಾಳ ಶಿವಯೋಗಿಗಳೆಂಬವರು ತಮ್ಮ ಶಿಷ್ಯರಾದ ಚೆನ್ನಬಸಪ್ಪನವರ ಮನೆಗೆ ಬಂದರು ಹಾಗೂ ಈ ನಾಲ್ವರೂ ಹುಡುಗರ ವಿದ್ಯಾಭ್ಯಾಸವನ್ನು ಅವರೇ ಮಾಡಿಸಿದರು. ಬಾಲಕ ಗಂಗಪ್ಪನವರ ಕುಶಾಗ್ರಮತಿಯನ್ನು ಕಂಡು ಸಂತಸಪಟ್ಟ ಶ್ರೀಮಡಿವಾಳಯ್ಯನವರು [illegible] ಚೆನ್ನಾಗಿ ಮಾಡಿಸಿದರು ಮತ್ತು ಗಂಗಪ್ಪನವರನ್ನು ತಮ್ಮ ಉಡಿಯಲ್ಲಿ ಹಾಕಿಸಿಕೊಳ್ಳಬೇಕೆಂಬ ಇಚ್ಛೆಯನ್ನು ವ್ಯಕ್ತಮಾಡಿದರು. ಗುರುವಿನ ಮನೋಭಿಲಾಷೆಯಂತೆ ಶುಭಮುಹೂರ್ತದಲ್ಲಿ ಗಂಗಪ್ಪನವರಿಗೆ ಜಂಗಮದೀಕ್ಷೆಯಾಗಿ ಅವರನ್ನು ಶ್ರೀಮಡಿವಾಳಯ್ಯನವರ ಉಡಿಯಲ್ಲಿ ಹಾಕಿದರು. ಗಂಗಪ್ಪನವರು ಅಂದಿನಿಂದ ಗಂಗಾಧರಯ್ಯನವರಾದರು. ಕೆಲದಿನಗಳಲ್ಲಿ ಮಡಿವಾಳಯ್ಯನವರು ಲಿಂಗೈಕ್ಯರಾದರು.

ಜಂಗಮದೀಕ್ಷೆಹೊಂದಿದ ಗಂಗಪ್ಪನವರು ತಮ್ಮ ಜನ್ಮವೆತ್ತ ಮನೆಯಲ್ಲಿಯೇ ಪ್ರೀತಿಯಿಂದ ನಿಂತುಕೊಂಡು ಮನೆತನದ ಹೆಸರನ್ನು ಬದಲಿಸದೆ ತಮ್ಮ ಹೆಸರನ್ನು ಗಂಗಾಧರ ಮಡಿವಾಳೇಶ್ವರ ತೂರಮರಿ ಎಂದು ಬರೆಯತೊಡಗಿದರು.

ಗಂಗಾಧರಯ್ಯನವರು ಹಳೆಗನ್ನಡದಲ್ಲಿ ಹಾಗೂ ಸಂಸ್ಕೃತದಲ್ಲಿ ಎತ್ತಿದ ಕೈ; ಪುರಾಣ-ಪ್ರವಚನದಲ್ಲಿ ಪಳಗಿದ ಕೈ. ಅಂದಿನ ಸರಕಾರದವರು ಕೆಲವು ದೊಡ್ಡದೊಡ್ಡ ಊರುಗಳಲ್ಲಿ ದೇಶಭಾಷೆಯ ಸಾಲೆಗಳನ್ನು ಸ್ಥಾಪಿಸಿದರು; ಅಲ್ಲಲ್ಲಿ ಕಂಡು ಬರುತ್ತಿದ್ದ ವಿದ್ವಜ್ಜನರನ್ನು ಆರಿಸಿಕೊಂಡು ಅವರನ್ನು ಅಖವಾನಜಿ; ಇಲ್ಲವೆ ಪಂತೋಜಿ! ಅರ್ಥಾತ್ ಶಿಕ್ಷಕರನ್ನಾಗಿ ನೇಮಿಸಿದರು. ವಿದ್ವಜ್ಜನ ಕಣ್ಮಣಿಯಂತಿದ್ದ ಗಂಗಾಧರಯ್ಯನವರು ಹುನುಗುಂದ ಸಾಲೆಯ ಮುಖ್ಯ ಗುರುಗಳಾದರು. ಮುಂದೆ ಅವರು ಪುಣೆಗೆ ಹೋಗಿ ಇಂಗ್ಲೀಷ ಮೇಲ್ತರಗತಿಯ ಶಿಕ್ಷಣಪಡೆದು ಬಂದರು. ೧೮೯೧ರಲ್ಲಿ ಬೆಳಗಾಂವಿ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಕನ್ನಡ ಭಾಷಾಭೂಷಣ ಚೆನ್ನಬಸವಪ್ಪ ಬಸಲಿಂಗಪ್ಪ ಧಾರವಾಡ ಇವರು, ಸಾಲೆಯ ಪರೀಕ್ಷೆಗೆ ಬಂದಾಗ ಗಂಗಾಧರಯ್ಯನವರ ಅಸಾಧಾರಣ ಪಾಂಡಿತ್ಯವನ್ನೂ ಗಣಿತ ಕಾರ್ಯಕ್ಷಮತೆಯನ್ನೂ, ಅಪಾರ ವಿದ್ವತ್ತೆಯನ್ನೂ

ಸ್ಕೂಲಿನಲ್ಲಿ ಈಗಿನ ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ) ಶಿಕ್ಷಕರನ್ನಾಗಿ ನಿಯಮಿಸಿದರು. ಕನ್ನಡ ಭಾಷೆಯ ಮೇಲಿನ ಇವರ ಪ್ರಭುತ್ವವನ್ನು ಕಂಡು ಇಂಗ್ಲಿಷ ಅಧಿಕಾರಿಗಳು ಇವರನ್ನು ಶೀಘ್ರ ವಕ್ಷಿಯೆಂತ್ರ ಕನ್ನಡ ಟ್ರಾನ್ಸಲೇಟರ(ಭಾಷಾಂತರಕಾರ) ರೆಂದು ನೇಮಿಸಿದರು ತಮ್ಮ ಜಾಣ್ಮೆ, ಸತತೋದ್ಯೋಗ ತನ ಮೊದಲಾದ ಲೋಕೋತ್ತರ ಗುಣವಿಶೇಷಗಳಿಂದ ಕೆಲದಿನಗಳಲ್ಲಿ ಹಿಂದೆ ಟ್ರೇನಿಂಗ ಸ್ಕೂಲು ಇದ್ದು ಮುಂದೆ ಟ್ರೇನಿಂಗ ಕಾಲೇಜು ಆದ ಆ ಸಂಸ್ಥೆಯ ವ್ಹಾಯಿಸ್ ಪ್ರಿನ್ಸಿಪಾಲರಾದರು.

ಉದ್ಯೋಗಶೀಲರಾದ ಗಂಗಾಧರಯ್ಯನವರು ಬಿಡುವಿನ ವೇಳೆಯನ್ನು ಬರೆಯುವದರಲ್ಲಿ ಕಳೆಯುತ್ತಿದ್ದರು. ತಿಂಗಳಿಗೊಮ್ಮೆ ಹೊರಡುವ ಶಾಲಾಪತ್ರಿಕದ. ಇಂದಿನ ಕನ್ನಡ ಪ್ರಾಥಮಿಕ ಶಿಕ್ಷಣ—ಸಂಪಾದಕತ್ವವು ಇವರ ಕಡೆಗೇ ಇತ್ತು ಇವರು ಸನ್ ೧೮೭೭ರಿಂದ ೪-೫ ವರ್ಷಗಳವರೆಗೆ ಶಬ್ದಮಣಿದರ್ಪಣದ ಟೀಕೆಯನ್ನು ಈ ಪತ್ರಿಕೆಯಲ್ಲಿ ಕೊಡುತ್ತಿದ್ದರು. ೧೮೭೭ರಲ್ಲಿ ಪ್ರಾಚೀನ ಕನ್ನಡ ಕಾವ್ಯಗಳೊಳಗಿನ ಒಳ್ಳೆಯ ಭಾಗಗಳನ್ನು ಶೇಖರಿಸಿ 'ಕವಿತಾಸಂಗ್ರಹ'ವೆಂಬ ಪುಸ್ತಕವನ್ನು ಪ್ರಕಟಿಸಿದರು.

ಸನ್ ೧೮೭೮ರ ನವ್ಹಂಬರ ತಿಂಗಳಲ್ಲಿ ಚಿತ್ರದುರ್ಗದ ಶ್ರೀಜಗದ್ಗುರು ಮಹಾ ಸ್ವಾಮಿಗಳಾಗಿದ್ದ ಶ್ರೀಮಹಾಲಿಂಗ ಸ್ವಾಮಿಗಳ ಆಶೀರ್ವಾದ ಬಲದಿಂದ ಡೆ ಚೆನ್ನಬಸವಪ್ಪನವರಿಂದ ನಡೆಸಲ್ಪಟ್ಟ ವೀರಶೈವ ಫ್ರೀಬೋರ್ಡಿಂಗಿನ ವ್ಯವಸ್ಥೆಯನ್ನು ಶ್ರೀಗಂಗಾಧರಯ್ಯನವರು ನೋಡುತ್ತಿದ್ದರು. ೧೮೭೯ರಲ್ಲಿ ಇವರು ೫೮೮ ಪುಟಗಳುಳ್ಳ ' ಶಬ್ದಮಂಜರಿ'' ಎಂಬ ಕನ್ನಡ ಕೋಶವನ್ನು ಪ್ರಕಟಿಸಿದರು; ಈ ಸಾಹಸದ ಕೆಲಸಕ್ಕಾಗಿ ಸರಕಾರದವರು ಇವರಿಗೆ ೪೦೦೦ ರೂಪಾಯಿಗಳನ್ನು ಬಹುಮಾನವಾಗಿ ಕೊಟ್ಟರು. ಇದೇಕಾಲಕ್ಕೆ ಇವರು 'ಕನ್ನಡ ಕವಿತಾಪದ್ಧತಿ' ಎಂಬ ಪುಸ್ತಕವನ್ನು ಬರೆದು ಪ್ರಸಿದ್ಧಿಸಿದರು. 'ರಾಜಶೇಖರ ವಿಲಾಸ' ಎಂಬ ಕಾವ್ಯದ ೧ನೆಯ ಆಶ್ವಾಸಕ್ಕೆ ಅತ್ಯುತ್ತಮ ಟೀಕೆಯನ್ನು ಬರೆದದ್ದಕ್ಕೆ ವಿದ್ಯಾಖಾತೆಯ ಅಂದಿನ ಡಾಯರೆಕ್ಟರರಾದ ಪೀಲ್ ಸಾಹೇಬರವರು ಅವರಿಗೆ ೨೦೦ ರೂಪಾಯಿಗಳ ಬಹುಮಾನವನ್ನಿತ್ತು ಸತ್ಕರಿಸಿದರು ಮುಂದೆ ಗಂಗಾಧರಯ್ಯನವರು ನಿಜಗುಣ ಶಿವಯೋಗಿಗಳ 'ಕೈವಲ್ಯಪದ್ಧತಿ'ಗೆ ಟೀಕೆಯನ್ನು ಬರೆದರು.

ಅಂದಿನ ಕನ್ನಡ ವಾಚನ ಪಾಠಗಳ ೧ನೆಯ ೨ನೆಯ ತಿದ್ದಿದರು; ಹಾಗೂ ಪುಸ್ತಕ ಸಮಿತಿಯವರ ನಿರ್ಣಯದಂತೆ ೩ನೆಯ, ೪ನೆಯ ಪುಸ್ತಕಗಳನ್ನು ಹೊಸದಾಗಿ ಬರೆದರು. ೧೮೭೭ರ ಸಪ್ಟಂಬರದಿಂದ ಪ್ರತಿ ತಿಂಗಳು 'ಶಾಲಾ ಪತ್ರಿಕೆ' ಯಲ್ಲಿ 'ಭಾಷಾದರ್ಪಣ' ವೆಂಬ ಕನ್ನಡ ವ್ಯಾಕರಣವನ್ನು ಬರೆಯತೊಡಗಿದ್ದರು ಆದರೆ ಅದು ಅಪೂರ್ಣವಾಗಿ ಉಳಿಯಿತು. ಇವೆಲ್ಲ ಗ್ರಂಥಗಳಿಗೆ ಕಲಶವೆನ್ನುವಂತೆ ಶ್ರೀಗಂಗಾಧರಯ್ಯನವರು ೧೮೭೬-೭೭ರಲ್ಲಿ ಬಾಣಕವಿಯ ಸಂಸ್ಕೃತ ಕಾದಂಬರಿಯನ್ನು ಕನ್ನಡಕ್ಕೆ ಪರಿವರ್ತಿಸಿದರು ಈ ಕಾದಂಬರಿಯು ತುರಮರಿಯವರ ಹೆಸರನ್ನು ಆಚಂದ್ರಾರ್ಕವಾಗಿ ಉಳಿಯುವಂತೆ ಮಾಡಿತು.

ಹೀಗೆ ನುಡಿಯ ಸೇವೆ, ತನ್ಮೂಲಕ ನಾಡಿನ ಸೇವೆಯನ್ನು ನಿಸ್ವಾರ್ಥತೆಯಿಂದ ಗೈದ ಈ ಮಹಾನುಭಾವರು ಕ್ರಿಸ್ತಶತಾಬ್ದದ ೧೮೭೪ನೆಯ ಇಸ್ವಿಯ ನವ್ಹಂಬರ ತಿಂಗಳಿನ ದ್ವಿತೀಯ ದಿನಾಂಕದಂದು ತಮ್ಮ ಐವತ್ತನೆಯ ವಯಸ್ಸಿನಲ್ಲಿ ಇಹಲೋಕಯಾತ್ರೆಯನ್ನು ಮುಗಿಸಿ ಪರಂಧಾಮವನ್ನೈದಿದರು. ಕನ್ನಡವು ಕುಂಠಿತವಾಗುತ್ತಿದ್ದ ಆ ಕಾಲದಲ್ಲಿ ಕನ್ನಡಸಾಲೆಗಳನ್ನು ಹೆಚ್ಚಿಸಿ, ಗ್ರಂಥಗಳನ್ನು ಬರೆದು, ಕನ್ನಡದಲ್ಲಿ ಶಿಕ್ಷಣ ಪ್ರಸಾರಮಾಡಿ, ಕನ್ನಡ ಕೀರ್ತಿಧ್ವಜವನ್ನು ಮೆರೆಯಿಸಿದ ಡೆಪ್ಯೂಟಿ ಚೆನ್ನಬಸವಪ್ಪ ಮೊದಲಾದ ಕೆಲವೇ ಪ್ರಭೃತಿಗಳಲ್ಲಿ ಗಂಗಾಧರಯ್ಯನವರೂ ಒಬ್ಬರು ಎಂದು ಬೇರೆ ಹೇಳಬೇಕಿಲ್ಲ. ಗಂಗಾಧರಯ್ಯನವರು ಅಸಾಧಾರಣ ಪಂಡಿತರೂ ಅಹುದು, ಅನುಪಮ ವಿದ್ವನ್ಮಣಿಗಳೂ ಅಹುದು; ಆದರ್ಶ ಲೇಖಕರೂ ಅಹುದು, ಅಗಣಿತ ಭಾಷಾಭಿಮಾನಿಗಳೂ ಅಹುದು; ಅತ್ಯುಚ್ಚ ಶಿಕ್ಷಕರೂ ಅಹುದು, ಅಸಾದೃಶ ಕರ್ತವ್ಯಶೀಲರೂ ಅಹುದು; ಅಲೌಕಿಕ ಸಮಾಜ ಸೇವಕರೂ ಅಹುದು. ಜಡದೇಹವು ಅಳಿದರೂ ತುರಮರಿಯವರ ಆತ್ಮಜ್ಯೋತಿಯು ಅವರು ಬರೆದ ಗ್ರಂಥಗಳಲ್ಲಿ, ಸಲ್ಲಿಸಿದ ಸಮಾಜ ಸೇವೆಯಲ್ಲಿ, ತೋರಿಸಿದ ಭಾಷಾ ಬೆಳವಣಿಗೆಯ ಕಾರ್ಯದಲ್ಲಿ, ಗೈದ ಕರ್ತವ್ಯದಕ್ಷತೆಯಲ್ಲಿ ಮಾಡಿದ ಹಲವಾರು ಕಾರ್ಯರಂಗದಲ್ಲಿ ಜಾಜ್ವಲ್ಯವಾಗಿ ಬೆಳಗುತ್ತಿದೆ. ನಾಡಿನ ಕೀರ್ತಿ ನಭೋಮಂಡಲದಲ್ಲಿ, ನಾಡವರ ಅಂತರ್ ಚಕ್ಷುವಿನಲ್ಲಿ ಎಂದಿಗೂ ಉಳಿಯಲಿರುವ ಗಂಗಾಧರ ಮಡಿವಾಳೇಶ್ವರ ತುರಮರಿಯವರು ಪ್ರಾರಂಭದಲ್ಲಿ ಪ್ರಾಥಮಿಕ ಶಿಕ್ಷರಾಗಿದ್ದರೆಂಬುದು ಇಂದಿನ ಹಾಗೂ ನಾಳಿನ ಪ್ರಾಥಮಿಕ ಶಿಕ್ಷಕರೆಲ್ಲರಿಗೆ ಹೆಮ್ಮೆಯ ಹಾಗೂ ಹರ್ಷದ ಮಾತಾಗಿದೆ.

ಗಂಗಾಧರ ಮಡಿವಾಳೇಶ್ವರ ತೂರಮರಿ

ಲೇಖಕರು:— ಶ್ರೀ ಆರ್. ಎಸ್. ಬಿದರಿ, ಟ್ರೇನಿಂಗ ಕಾಲೇಜ, ಧಾರವಾಡ

(ಶ್ರೀ ವೀರಸನ್ನಪ್ಪ ನಾಗನೂರ ಸೀನಿಯರ್ ಮಾಸ್ತರ, ಕಿತ್ತೂರ ಇವರು ಬರೆದ ಚಿಕ್ಕಹೊತ್ತಿಗೆಯ ಆಧಾರದಿಂದ.)

೧೯ನೆಯ ಶತಮಾನದ ಪೂರ್ವಾರ್ಧ; ಎರಡನೆಯ ದಶಕದ ಉತ್ತರಾರ್ಧ; ೧೮೧೭ನೆಯ ಇಸ್ವಿಯ ಒಂದು ಶುಭದಿನ; ಬೆಳಗಾಂವ ಜಿಲ್ಲೆಯಲ್ಲಿ ಒಂದು ತಾಲ್ಲೂಕಿನ ಸ್ಥಳವಾದ ಬೈಲಹೊಂಗಲದಲ್ಲಿ ತೂರಮರಿಯವರದೊಂದು ಈಗಲೂ ಹೆಸರಾಗಿರುವ ಮನೆತನದ ಸದ್ಗೃಹಸ್ಥರಾದ ಚೆನ್ನಬಸಪ್ಪನವರಿಗೆ ಮುಂದೆ ಕನ್ನಡ ಕುಲೋದ್ಧಾರಕನಾಗಲಿರುವ ಒಂದು ಗಂಡು ಕೂಸಿನ ಜನನವಾಯಿತು. ಧರ್ಮಪರಂಪರೆಯಂತೆ ಈ ಮಗುವಿಗ ಶುಭಮುಹೂರ್ತದಲ್ಲಿ ಗಂಗಪ್ಪ ಎಂದು ನಾಮಕರಣ ಮಾಡಲಾಯಿತು. ಸುಶಿಕ್ಷಿತ ಮನೆತನದಲ್ಲಿ ಜನ್ಮವೆತ್ತ ಗಂಗಪ್ಪನು ಬಿದಿಗೆಯ ಚಂದ್ರನಂತೆ ಬೆಳೆದು ಮುಂದೆ ಶರತ್ಕಾಲದ ಪೂರ್ಣಿಮೆಯ ತಂಗದಿರನಂತೆ ಕನ್ನಡ ನುಡಿ ಕನ್ನಡ ಶಿಕ್ಷಣವನ್ನು ಬೆಳಸಿ, ಬೆಳಗುವ ಆಶಾಕಿರಣವನ್ನು ಅಂದಿನ ಕನ್ನಡಿಗರಲ್ಲಿ ಉದಯಿಸಿದನು. ಗಂಗಪ್ಪನಿಗೆ ವೀರಪ್ಪ, ಸೋಮಪ್ಪ, ಸಿದ್ಧಲಿಂಗಪ್ಪ ಎಂಬ ಮೂವರು ತಮ್ಮಂದಿರೂ ಚೆನ್ನಬಸಪ್ಪನೆಂಬ ತಂಗಿಯೂ ಇದ್ದರು.

ಅಂದು ದಕ್ಷಿಣ ಮಹಾರಾಷ್ಟ್ರವೆಂಬ ಪ್ರಾಂತಕ್ಕೊಳಗಾದ ಬೆಳಗಾಂವಿ ಜಿಲ್ಲೆಯಲ್ಲಿ ಮರಾಠಿಯ ಪ್ರಾಬಲ್ಯವು ಹೆಚ್ಚಾಗಿದ್ದುದರಿಂದ ಆಗಿನ ಜನರು ಖಾಸಗಿ ಸಾಲೆಯ ಅಯ್ಯನವರಿಂದ ತಮ್ಮ ಮಕ್ಕಳಿಗೆ ಮರಾಠಿಯ ಮೊಡೀ ಕಿಮುಬರಹಗಳನ್ನೂ ಅಲ್ಪಸ್ವಲ್ಪ ಕನ್ನಡವನ್ನೂ ಕಲಿಸುತ್ತಿದ್ದರು; ಅನುಕೂಲತೆಯಿದ್ದ ಜಂಗಮ ವಿದ್ಯಾರ್ಥಿಗಳಿಗೆ ಮಾತ್ರ ಹಳೆಗನ್ನಡವೂ ಸಂಸ್ಕೃತವೂ ಕಲಿಸಲ್ಪಡುತ್ತಿದ್ದವು.

ಗಂಗಪ್ಪನವರು ವಿದ್ಯಾಭ್ಯಾಸದ ವ್ಯಾಸಂಗದಿಂದ ವಯೋಮಿತಿಯನ್ನು ತಲ್ಪುವ ಸಮಯಕ್ಕೆ ಆಥಣಿಯ ಗಚ್ಚಿನಮಠದ ಮುರುಘೇಂದ್ರಸ್ವಾಮಿಗಳೆಂಬವರು ತಮ್ಮ ಶಿಷ್ಯರಾದ ಚೆನ್ನಬಸಪ್ಪನವರ ಮನೆಗೆ ಬಂದರು ಹಾಗೂ ಈ ನಾಲ್ವರೂ ಹುಡುಗರ ವಿದ್ಯಾಭ್ಯಾಸವನ್ನು ಅವರೇ ಮಾಡಿಸಿದರು. ಬಾಲಕ ಗಂಗಪ್ಪನವರ ಕುಶಾಗ್ರಮತಿಯನ್ನು ಕಂಡು ಸಂತಸಪಟ್ಟ ಶ್ರೀಮಡಿವಾಳಯ್ಯನವರು ಅವರಿಗೆ ಹಳೆಗನ್ನಡ ಹಾಗೂ ಸಂಸ್ಕೃತ ಅಭ್ಯಾಸವನ್ನು ಚೆನ್ನಾಗಿ ಮಾಡಿಸಿದರು ಮತ್ತು ಗಂಗಪ್ಪನವರನ್ನು ತಮ್ಮ ಉಡಿಯಲ್ಲಿ ಹಾಕಿಸಿಕೊಳ್ಳಬೇಕೆಂಬ ಇಚ್ಛೆಯನ್ನು ವ್ಯಕ್ತಮಾಡಿದರು. ಗುರುವಿನ ಮನೋಭಿಲಾಷೆಯಂತೆ ಶುಭಮುಹೂರ್ತದಲ್ಲಿ ಗಂಗಪ್ಪನವರಿಗೆ ಜಂಗಮದೀಕ್ಷೆಯಾಗಿ ಅವರನ್ನು ಶ್ರೀಮಡಿವಾಳಯ್ಯನವರ ಉಡಿಯಲ್ಲಿ ಹಾಕಿದರು. ಗಂಗಪ್ಪನವರು ಅಂದಿನಿಂದ ಗಂಗಾಧರಯ್ಯನವರಾದರು. ಕೆಲದಿನಗಳಲ್ಲಿ ಮಡಿವಾಳಯ್ಯನವರು ಲಿಂಗೈಕ್ಯರಾದರು.

ಜಂಗಮ ದೀಕ್ಷೆಹೊಂದಿದ ಗಂಗಪ್ಪನವರು ತಮ್ಮ ಜನ್ಮವೆತ್ತ ಮನೆಯಲ್ಲಿಯೇ ಪ್ರೀತಿಯಿಂದ ನಿಂತುಕೊಂಡು ಮನೆತನದ ಹೆಸರನ್ನು ಬದಲಿಸದೆ ತಮ್ಮ ಹೆಸರನ್ನು ಗಂಗಾಧರ ಮಡಿವಾಳೇಶ್ವರ ತೂರಮರಿ ಎಂದು ಬರೆಯತೊಡಗಿದರು.

ಗಂಗಾಧರಯ್ಯನವರು ಹಳೆಗನ್ನಡದಲ್ಲಿ ಹಾಗೂ ಸಂಸ್ಕೃತದಲ್ಲಿ ಎತ್ತಿದ ಕೈ; ಪುರಾಣ-ಪ್ರವಚನದಲ್ಲಿ ಪಳಗಿದ ಕೈ. ಅಂದಿನ ಸರಕಾರದವರು ಕೆಲವು ದೊಡ್ಡದೊಡ್ಡ ಊರುಗಳಲ್ಲಿ ದೇಶಭಾಷೆಯ ಸಾಲೆಗಳನ್ನು ಸ್ಥಾಪಿಸಿದರು; ಅಲ್ಲಲ್ಲಿ ಕಂಡು ಬರುತ್ತಿದ್ದ ವಿದ್ವಜ್ಜನರನ್ನು ಆರಿಸಿಕೊಂಡು ಅವರನ್ನು 'ಅಖವಾನಜಿ; ಇಲ್ಲವೆ ಪಂತೋಜಿ! ಅರ್ಥಾತ್ ಶಿಕ್ಷಕರನ್ನಾಗಿ ನೇಮಿಸಿದರು. ವಿದ್ವಜ್ಜನ ಕಣ್ಮಣಿಯಂತಿದ್ದ ಗಂಗಾಧರಯ್ಯನವರು ಹುನುಗುಂದ ಸಾಲೆಯ ಮುಖ್ಯ ಗುರುಗಳಾದರು. ಮುಂದೆ ಅವರು ಪುಣೆಗೆ ಹೋಗಿ ಇಂಗ್ಲೀಷ ಮೇಲ್ತರಗತಿಯ ಶಿಕ್ಷಣಪಡೆದು ಬಂದರು. ೧೮೭೭ರಲ್ಲಿ ಬೆಳಗಾಂವಿ ಜಿಲ್ಹೆಯ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಕನ್ನಡ ಭಾಷಾ ಭೂಷಣ ಚೆನ್ನಬಸವಪ್ಪ ಬಸಲಿಂಗಪ್ಪ ಧಾರವಾಡ ಇವರು, ಸಾಲೆಯ ಪರೀಕ್ಷೆಗೆ ಬಂದಾಗ ಗಂಗಾಧರಯ್ಯನವರ ಅಸಾಧಾರಣ ಪಾಂಡಿತ್ಯವನ್ನೂ ಅಗಣಿತ ಕಾರ್ಯಕ್ಷಮತೆಯನ್ನೂ, ಅಪಾರ ವಿದ್ವತ್ತೆಯನ್ನೂ

ಸ್ಕೂಲಿನಲ್ಲಿ ಈಗಿನ ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ) ಶಿಕ್ಷಕರನ್ನಾಗಿ ನಿಯಮಿಸಿದರು. ಕನ್ನಡ ಭಾಷೆಯ ಮೇಲಿನ ಇವರ ಪ್ರಭುತ್ವವನ್ನು ಕಂಡು ಇಂಗ್ಲಿಷಿನ ಅಧಿಕಾರಿಗಳು ಇವರನ್ನು ಶೀಘ್ರ ದಕ್ಷಿಯೇ ಕನ್ನಡ ಟ್ರಾನ್ಸಲೇಟರ(ಭಾಷಾಂತರಕಾರ)ರೆಂದು ನೇಮಿಸಿದರು ತಮ್ಮ ಜಾಣ್ಮೆ, ಸತತೋದ್ಯೋಗತನ ಮೊದಲಾದ ಲೋಕೋತ್ತರ ಗುಣವಿಶೇಷಗಳಿಂದ ಕೆಲದಿನಗಳಲ್ಲಿ ಹಿಂದೆ ಟ್ರೇನಿಂಗ ಸ್ಕೂಲು ಇದ್ದು ಮುಂದೆ ಟ್ರೇನಿಂಗ ಕಾಲೇಜು ಆದ ಆ ಸಂಸ್ಥೆಯ ವ್ಹಾಯಿಸ್ ಪ್ರಿನ್ಸಿಪಾಲರಾದರು.

ಉದ್ಯೋಗಶೀಲರಾದ ಗಂಗಾಧರಯ್ಯನವರು ಬಿಡುವಿನ ವೇಳೆಯನ್ನು ಬರೆಯುವದರಲ್ಲಿ ಕಳೆಯುತ್ತಿದ್ದರು. ತಿಂಗಳಿಗೊಮ್ಮೆ ಹೊರಡುವ ಶಾಲಾಪತ್ರಕದ. ಇಂದಿನ ಕನ್ನಡ ಪ್ರಾಥಮಿಕ ಶಿಕ್ಷಣ—ಸಂಪಾದಕತ್ವವು ಇವರ ಕಡೆಗೇ ಇತ್ತು ಇವರು ಸನ್ ೧೮೭೭ರಿಂದ ೪-೫ವರ್ಷಗಳವರೆಗೆ ಶಬ್ದಮಣಿದರ್ಪಣದ ಟೀಕೆಯನ್ನು ಈ ಪತ್ರಿಕೆಯಲ್ಲಿ ಕೊಡುತ್ತಿದ್ದರು. ೧೮೭೭ರಲ್ಲಿ ಪ್ರಾಚೀನ ಕನ್ನಡ ಕಾವ್ಯಗಳೊಳಗಿನ ಒಳ್ಳೆಯ ಭಾಗಗಳನ್ನು ಶೇಖರಿಸಿ 'ಕವಿತಾಸಂಗ್ರಹ'ವೆಂಬ ಪುಸ್ತಕವನ್ನು ಪ್ರಕಟಿಸಿದರು.

ಸನ್ ೧೮೬೮ರ ನವ್ಹಂಬರ ತಿಂಗಳಲ್ಲಿ ಚಿತ್ರದುರ್ಗದ ಶ್ರೀಜಗದ್ಗುರು ಮಹಾ ಸ್ವಾಮಿಗಳಾಗಿದ್ದ ಶ್ರೀಮಹಾಲಿಂಗ ಸ್ವಾಮಿಗಳ ಆಶೀರ್ವಾದ ಬಲದಿಂದ ಡೆ ಚೆನ್ನಬಸವಪ್ಪನವರಿಂದ ನಡೆಸಲ್ಪಟ್ಟ ವೀರಶೈವ ಫ್ರೀಬೋರ್ಡಿಂಗಿನ ವ್ಯವಸ್ಥೆಯನ್ನು ಶ್ರೀಗಂಗಾಧರಯ್ಯನವರು ನೋಡುತ್ತಿದ್ದರು. ೧೮೭೯ರಲ್ಲಿ ಇವರು ೫೮೮ಪುಟಗಳುಳ್ಳ 'ಶಬ್ದಮಂಜರಿ" ಎಂಬ ಕನ್ನಡ ಕೋಶವನ್ನು ಪ್ರಕಟಿಸಿದರು; ಈ ಸಾಹಸದ ಕೆಲಸಕ್ಕಾಗಿ ಸರಕಾರದವರು ಇವರಿಗೆ ೪೦೦೦ ರೂಪಾಯಿಗಳನ್ನು ಬಹುಮಾನವಾಗಿ ಕೊಟ್ಟರು. ಇದೇಕಾಲಕ್ಕೆ ಇವರು 'ಕನ್ನಡ ಕವಿತಾಪದ್ಧತಿ' ಎಂಬ ಪುಸ್ತಕವನ್ನು ಬರೆದು ಪ್ರಸಿದ್ಧಿಸಿದರು. 'ರಾಜಶೇಖರ ವಿಲಾಸ' ಎಂಬ ಕಾವ್ಯದ ೧ನೆಯ ಆಶ್ವಾಸಕ್ಕೆ ಅತ್ಯುತ್ತಮ ಟೀಕೆಯನ್ನು ಬರೆದದ್ದಕ್ಕೆ ವಿದ್ಯಾಖಾತೆಯ ಅಂದಿನ ಡಾಯರೆಕ್ಟರರಾದ ಪೀಲ್ ಸಾಹೇಬರವರು ಅವರಿಗೆ ೨೦೦ರೂಪಾಯಿಗಳ ಬಹುಮಾನವನ್ನಿತ್ತು ಸತ್ಕರಿಸಿದರು ಮುಂದೆ ಗಂಗಾಧರಯ್ಯನವರು ನಿಜಗುಣ ಶಿವಯೋಗಿಗಳ 'ಕೈವಲ್ಯಪದ್ಧತಿ'ಗೆ ಟೀಕೆಯನ್ನು ಬರೆದರು.

ಅಂದಿನ ಕನ್ನಡ ವಾಚನ ಪಾಠಗಳ ೧ನೆಯ ೨ನೆಯ ತಿದ್ದಿದರು; ಹಾಗೂ ಪುಸ್ತಕ ಸಮಿತಿಯವರ ನಿರ್ಣಯದಂತೆ ೩ನೆಯ, ೪ನೆಯ ಪುಸ್ತಕಗಳನ್ನು ಹೊಸದಾಗಿ ಬರೆದರು. ೧೮೭೭ರ ಸಪ್ಟಂಬರದಿಂದ ಪ್ರತಿ ತಿಂಗಳು 'ಶಾಲಾ ಪತ್ರಿಕೆ'ಯಲ್ಲಿ 'ಭಾಷಾದರ್ಪಣ'ವೆಂಬ ಕನ್ನಡ ವ್ಯಾಕರಣವನ್ನು ಬರೆಯತೊಡಗಿದ್ದರು ಆದರೆ ಅದು ಅಪೂರ್ಣವಾಗಿ ಉಳಿಯಿತು. ಇವೆಲ್ಲ ಗ್ರಂಥಗಳಿಗೆ ಕಲಶವೆನ್ನುವಂತೆ ಶ್ರೀಗಂಗಾಧರಯ್ಯನವರು ೧೮೭೬-೭೭ರಲ್ಲಿ ಬಾಣಕವಿಯ ಸಂಸ್ಕೃತ ಕಾದಂಬರಿಯನ್ನು ಕನ್ನಡಕ್ಕೆ ಪರಿವರ್ತಿಸಿದರು ಈ ಕಾದಂಬರಿಯು ತೂರಮರಿಯವರ ಹೆಸರನ್ನು ಆಚಂದ್ರಾರ್ಕವಾಗಿ ಉಳಿಯುವಂತೆ ಮಾಡಿತು.

ಹೀಗೆ ನುಡಿಯ ಸೇವೆ, ತನ್ಮೂಲಕ ನಾಡಿನ ಸೇವೆಯನ್ನು ನಿಸ್ವಾರ್ಥತೆಯಿಂದ ಗೈದ ಈ ಮಹಾನುಭಾವರು ಕ್ರಿಸ್ತಶತಾಬ್ದದ ೧೮೯೭ನೆಯ ಇಸ್ವಿಯ ನವ್ಹಂಬರ ತಿಂಗಳಿನ ದ್ವಿತೀಯ ದಿನಾಂಕದಂದು ತಮ್ಮ ಐವತ್ತನೆಯ ವಯಸ್ಸಿನಲ್ಲಿ ಇಹಲೋಕಯಾತ್ರೆಯನ್ನು ಮುಗಿಸಿ ಪರಂಧಾಮವನ್ನೈದಿದರು. ಕನ್ನಡವು ಕುಂಠಿತವಾಗುತ್ತಿದ್ದ ಆ ಕಾಲದಲ್ಲಿ ಕನ್ನಡಸಾಲೆಗಳನ್ನು ಹೆಚ್ಚಿಸಿ, ಗ್ರಂಥಗಳನ್ನು ಬರೆದು, ಕನ್ನಡದಲ್ಲಿ ಶಿಕ್ಷಣ ಪ್ರಸಾರಮಾಡಿ, ಕನ್ನಡ ಕೀರ್ತಿಧ್ವಜವನ್ನು ಮೆರೆಯಿಸಿದ ಡೆಪ್ಯೂಟಿ ಚೆನ್ನಬಸವಪ್ಪ ಮೊದಲಾದ ಕೆಲವೇ ಸ್ವಭ್ಯರುಗಳಲ್ಲಿ ಗಂಗಾಧರಯ್ಯನವರೂ ಒಬ್ಬರು ಎಂದು ಬೇರೆ ಹೇಳಬೇಕಿಲ್ಲ. ಗಂಗಾಧರಯ್ಯನವರು ಅಸಾಧಾರಣ ಪಂಡಿತರೂ ಅಹುದು, ಅನುಪಮ ವಿದ್ವನ್ಮಣಿಗಳೂ ಅಹುದು; ಆದರ್ಶ ಲೇಖಕರೂ ಅಹದು, ಅಗಣಿತ ಭಾಷಾಭಿಮಾನಿಗಳೂ ಅಹುದು; ಅತ್ಯುಚ್ಚ ಶಿಕ್ಷಕರೂ ಅಹುದು, ಅಸಾದೃಶ ಕರ್ತವ್ಯಶೀಲರೂ ಅಹುದು; ಅಲೌಕಿಕ ಸಮಾಜ ಸೇವಕರೂ ಅಹುದು. ಜಡದೇಹವು ಅಳಿದರೂ ತೂರಮರಿಯವರ ಆತ್ಮಜ್ಯೋತಿಯು ಅವರು ಬರೆದ ಗ್ರಂಥಗಳಲ್ಲಿ, ಸಲ್ಲಿಸಿದ ಸಮಾಜ ಸೇವೆಯಲ್ಲಿ, ತೋರಿಸಿದ ಭಾಷಾಬೆಳವಣಿಗೆಯ ಕಾರ್ಯದಲ್ಲಿ, ಗೈದ ಕರ್ತವ್ಯದಕ್ಷತೆಯಲ್ಲಿ ಮಾಡಿದ ಹಲವಾರು ಕಾರ್ಯರಂಗದಲ್ಲಿ ಜಾಜ್ವಲ್ಯವಾಗಿ ಬೆಳಗುತ್ತಿದೆ. ನಾಡಿನ ಕೀರ್ತಿ ನಭೋಮಂಡಲದಲ್ಲಿ, ನಾಡವರ ಅಂತರ್‌ಚಕ್ಷುವಿನಲ್ಲಿ ಎಂದಿಗೂ ಉಳಿಯಲಿರುವ ಗಂಗಾಧರ ಮಡಿವಾಳೇಶ್ವರ ತೂರಮರಿಯವರು ಪ್ರಾರಂಭದಲ್ಲಿ ಪ್ರಾಥಮಿಕ ಶಿಕ್ಷಕರಾಗಿದ್ದರೆಂಬುದು ಇಂದಿನ ಹಾಗೂ ನಾಳಿನ ಪ್ರಾಥಮಿಕ ಶಿಕ್ಷಕರೆಲ್ಲರಿಗೆ ಹೆಮ್ಮೆಯ ಹಾಗೂ ಹರ್ಷದ ಮಾತಾಗಿದೆ.

[ದಿನಾಂಕ ೨೫-೪-೧೯೫೫ ರಂದು ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ “ ಬಸವ ಜಯಂತಿ ” ದಿನಾಚರಣೆಯ ಅಧ್ಯಕ್ಷತೆ ವಹಿಸಿದ **ಶ್ರಿ. ಎನ್. ಕೆ. ದೀಕ್ಷಿತ** ರವರು ಹೇಳಿದ ಮಾತುಗಳು] ಪ್ರ. ಸಂ.

‘ ಬಸವಣ್ಣನವರ ಅವತಾರವೆಂದರೆ ಸತ್ಯ, ಸದಾಚಾರ, ಸದ್ಭಕ್ತಿಯ ಅವತಾರ’

‘ ಮಾನವ ಕೋಟಿಯೆಲ್ಲ ಭಕ್ತಿಯ ಬೆಳಕಿನಲ್ಲಿ ಒಂದೇ-ಎಂಬ ಸಮತಾವಾದದ ದಿವ್ಯ ಅವತಾರಿ-ಬಸವಣ್ಣ ದೇವರು ಸತ್ಯದ ನಿತ್ಯವತಾರ ’

‘ ಇವತ್ತಿಗೂ ವೀರಶೈವ ಧರ್ಮವು ಜೀವಂತ ಧರ್ಮವಾಗಿದೆ. ಅದಕ್ಕೆ ಕಾರಣವೆಂದರೆ-ಬಸವಣ್ಣನವರು ಮಾನವ ಕುಲೋದ್ಧಾರಕರು. ’

‘ ಪುರುಷರಷ್ಟೇ ಸ್ತ್ರೀಯರಿಗೂ ಭಕ್ತಿ ಮುಕ್ತಿಯ ಮಾರ್ಗಕ್ಕೆ ಸಂಪೂರ್ಣ ಅಧಿಕಾರವದೆ. ’

‘ ಸದ್ಭಕ್ತನೇ ಕುಲಜ ”- “ ಕಾಯಕವೇ ಕೈಲಾಸ ” ಎಂಬ ತತ್ವಗಳ ತಳಹದಿಯ ಮೇಲೆ ಸಮಾಜವು ನಿಲ್ಲಬೇಕು.’

“ ಬಸವಣ್ಣನವರ ಶ್ರೇಷ್ಠ ಅನುಯಾಯಿಗಳಾದ ನವಿಲಗುಂದದ ಗವೀಮಠದ ಪೂಜ್ಯ ಶ್ರೀ.ನಿ.ಪ್ರ.ಬಸವಲಿಂಗ ಮಹಾಸ್ವಾಮಿಗಳಎಪ್ರಿಲ,೨೧ ನೆಯ ತಾ|ನ ಪತ್ರದಲ್ಲಿಯ ಅಪ್ಪಣೆ-‘ನಿಮ್ಮಂಥ ವಿದ್ಯಾವಂತರು, ಕಾಲೋಚಿತ ಬಲ್ಲವರು ಕೆಲಸಕ್ಕೆ ನಿಂತರೆ ಧರ್ಮ ಧರ್ಮಗಳ, ಮತ ಮತಗಳ ತಾಕಲಾಟ ತಿಕ್ಕಾಟಗಳು ಬಹುಮಟ್ಟಿಗೆ ಕಡಿಮೆಯಾಗಬಹುದು. ಇದರಿಂದ ನಾಡಿಗೆ ಒಂದು ಬಗೆಯಿಂದ ಕಲ್ಯಾಣವಾದೀತು’-ಎಂಬುದನ್ನು ಇಂದಿನಿಂದ ಕಾರ್ಯಗತ ಮಾಡಲು ಆರಂಭಿಸಿರುವನಾಗಿ ತಿಳಿಸಿ ಇದನ್ನು ನೀವು ಪಾಲಿಸಬೇಕಾಗಿ ವಿನಂತಿಸುವೆ.”

ಪ್ರಕಟನೆ

೧೯೫೫ ನೆಯ ಎಪ್ರಿಲದಲ್ಲಿ ಜರುಗಿದ ಪ್ರಾಥಮಿಕ ಶಾಳಾ ಪ್ರಮಾಣ ಪತ್ರ ಪರೀಕ್ಷೆಯ ಪರಿಣಾಮವು ದಿನಾಂಕ ೨೫ ನೆಯ ಮೇ ೧೯೫೫ ರಂದು ಸಂಬಂಧಪಟ್ಟ ಕೇಂದ್ರಗಳಲ್ಲಿ ಪ್ರಸಿದ್ಧಿಸಲಾಗುವದು.

ಸಹಿ

ಎಚ್. ಎಮ್. ಕಾಳೆ.

ಧಾರವಾಡ ೧೧-೫-೫೫ ಜಿಲ್ಲಾ ಶಿಕ್ಷಣಾಧಿಕಾರಿ’ ಧಾರವಾಡ

ಶಾಲೆಗಳಲ್ಲಿ ಸಹಪಠ್ಯ ಚಟುವಟಿಕೆಗಳು

ಲೇಖಕರು : ಕಮಲಾಕರ ಭಾಗವತ, ೨ನೆಯ ವರ್ಷ, ಶಿಕ್ಷಕವಿದ್ಯಾರ್ಥಿ, ಸರಕಾರಿ ಟ್ರೇನಿಂಗ ಕಾಲೇಜ, ಕಾರವಾರ

ಶಿಕ್ಷಣವು ವಿಶಾಲವಾಗಿದೆ, ಅನಂತವಾಗಿದೆ. ಸಾಕ್ಷರತೆ ಎಂಬುದು ಶಿಕ್ಷಣವಲ್ಲ, ಆದರೆ ಶಿಕ್ಷಣದ ಹಲವು ಮಹತ್ವದ ಸಾಧನೆಗಳಲ್ಲಿ ಒಂದು ಮಾತ್ರ. ಶಿಕ್ಷಣವು ಮಾನವನ ಹುಟ್ಟಿನಿಂದ ಸಾಯುವ ತನಕವೂ ಅಖಂಡವಾಗಿ ನಡೆಯುತ್ತಿರುತ್ತದೆ. ಜೀವನದ ಪ್ರತಿ ನಿಮಿಷ ನಿಮಿಷಕ್ಕೂ ನಾವು ಏನಾದರೂ ಹೊಸ ಶಿಕ್ಷಣ ಪಡೆಯುತ್ತಿರುತ್ತೇವೆ. ಈ ಮಾತನ್ನು ಗಾಂಧೀಜಿಯವರು ಹೇಳಿದ್ದಾರೆ. **ಜೀವನವೇ ಶಿಕ್ಷಣ** ಅರ್ಥಾತ್ ಜೀವನ ಶಿಕ್ಷಣ ಇದು ಗರ್ಭದಿಂದ ಗೋರಿಯತನಕ ಸಾಗಬೇಕು. ಮಕ್ಕಳ ಭಾವೀ ಜೀವನವು ಸುಗಮವೂ ಸುಖಮಯವೂ ಆಗಬೇಕಾದರೆ ಅವರಿಗೆ ಯೋಗ್ಯ ಶಿಕ್ಷಣ ಕೊಡುವದು ಅಗತ್ಯವಿದೆ.

ಶಿಕ್ಷಣವೆಂದರೆ ಕೇವಲ ಸಾಕ್ಷರತೆಯಲ್ಲವೆಂದು ಮೇಲೆಯೇ ಹೇಳಿದಾಗಿದೆ. ಹಾಗಾದರೆ ಸಾಕ್ಷರತೆಯ ಜೊತೆಗೆ ಇನ್ನೂ ಏನೋ ಅವಶ್ಯವಿದೆ ಎಂದ ಹಾಗಾಯಿತು. ಹಾಗಾದರೆ ಆ ಅವಶ್ಯಕತೆ ಯಾವುದು ? ಅದನ್ನು ವಿಚಾರಿಸುವಾ. ಬಾಲಕರಿಗೆ ನಾವು ಪಠ್ಯಪುಸ್ತಕಗಳ ಮುಖಾಂತರ ಅಕ್ಷರಜ್ಞಾನ ಮಾಡಿಕೊಡುತ್ತೇವೆ. ಆದರೆ ಪಠ್ಯಪುಸ್ತಕಗಳು ಬಾಲಕರ ಶಿಕ್ಷಣಕ್ಕೆ ಎಷ್ಟರ ಮಟ್ಟಿಗೆ ಸಹಕಾರಿಯಾಗಿವೆ ? ಈ ಪಠ್ಯಪುಸ್ತಕಗಳು ಮಕ್ಕಳ ಹಲವು ಬೇಡಿಕೆಗಳನ್ನು ಎಷ್ಟರ ಮಟ್ಟಿಗೆ ಪೂರೈಸಬಲ್ಲವು ಎಂಬುದು ವಿಚಾರಿಸತಕ್ಕ ಮಾತಾಗಿದೆ. ಪ್ರಾರಂಭಕ್ಕೆ ಕೆಲವು ಮಟ್ಟಿಗೆ ಇವುಗಳು ಮಕ್ಕಳ ಹಲವು ಬೇಡಿಕೆಗಳನ್ನು ಪೂರೈಸಲು ಶಕ್ತವಾಗಬಹುದು. ಆದರೆ ಮಕ್ಕಳು ಬೆಳೆದಂತೆ ಅವರ ಬುದ್ಧಿಯು ಕೂಡ ವಿಕಾಸವಾಗುತ್ತದೆ. ಬುದ್ಧಿ ಬಲಿತಂತೆ ಅವರ ಕುತೂಹಲವು ಹೆಚ್ಚಾಗುತ್ತದೆ. ಜ್ಞಾನಪಿಪಾಸೆಯು ಹೆಚ್ಚಾಗುತ್ತದೆ. ಹಾಗೂ ಹಲವು ಮುಖವಾಗಿರುತ್ತದೆ. ಅಂಥ ವೇಳೆಯಲ್ಲಿ ಬಾಲಕರಿಗೆ ಶಾಲೆಯ ವರ್ಗದ ಕೋಣೆಯು, ವರ್ಗದ ಅಭ್ಯಾಸಗಳು ತೀರ ಸಂಕುಚಿತವೆಂದು ಭಾಸವಾಗುತ್ತವೆ. ಈಗ ನಾವು ಅವರ ಕುತೂಹಲ ಕೆರಳಿಸಲು ಜ್ಞಾನಪಿಪಾಸೆ ಹಿಂಗಿಸಲು ಸಹಪಠ್ಯ (Co-curricular) ದ ಕೆಲವು ಚಟುವಟಿಕೆಗಳನ್ನು ಕೈಕೊಳ್ಳುವದು ಅವಶ್ಯವಾಗುತ್ತದೆ.

ಎರಡನೆಯದಾಗಿ ಮಕ್ಕಳನ್ನು ಸಾಕ್ಷರರನ್ನಾಗಿ ಮಾಡುವದರ ಜೊತೆಗೆ ಅವರ ಭಾವೀ ಜೀವನ ರಂಗದಲ್ಲಿ ಯೋಗ್ಯ ನಟರಾಗಿ ನಟಿಸಲು ಯೋಗ್ಯ ತರಬೇತಿಯನ್ನು ಕೂಡ ಬಾಲ್ಯದಲ್ಲಿಯೇ ಕೊಡಬೇಕಾಗುತ್ತದೆ. ಹಾಗೆ ತರಬೇತಿ ಕೊಡಬೇಕಾದರೆ ಮುಂದಿನ ಜೀವನದಲ್ಲಿ ಬರಬಹುದಾದಂಥ ಘಟನೆಗಳ, ಸನ್ನಿವೇಶಗಳ ಸಮ್ಯಗ್ ಜ್ಞಾನವನ್ನು ಬಾಲಕರಿಗೆ ಮಾಡಿಕೊಡಬೇಕಾಗುವದು.

ಹಾಗೆ ಜ್ಞಾನ ಮಾಡಿಕೊಡುವಾಗ ಅಂಥ ಘಟನೆಗಳ, ಸನ್ನಿವೇಶಗಳ ಅರಿವಿನಲ್ಲಿ ಬಾಲಕರನ್ನು ಪ್ರತ್ಯಕ್ಷವಾಗಿ ತರಬೇಕಾಗುತ್ತದೆ. ಹೀಗೆ ಮಾಡುವ ಸಾಧನೆಗಳೆಂದರೆ ಸಹಪಠ್ಯ ಚಟುವಟಿಕೆಗಳು.

ಶಾಲೆಗಳಲ್ಲಿ ಕೈಕೊಳ್ಳಬಹುದಾದ ಶೈಕ್ಷಣಿಕ ಸಹಪಠ್ಯ ಚಟುವಟಿಕೆಗಳನ್ನು ಕೆಳಗಿನಂತೆ ವಿಂಗಡಿಸಬಹುದು—

೧. ಮಂತ್ರಿ ಮಂಡಳ. ೨. ಬಾಲವೀರ ದಳ. ೩. ಚರ್ಚಾಕೂಟ. ೪. ಕೈಬರಹದ ನಿಯತಕಾಲಿಕಗಳು. ೫. ವಾಚನಾಲಯ. ೬. ನಾಟ್ಯ ಸಂಘ. ೭. ಕ್ರೀಡಾಸಂಘ. ೮. ಶೈಕ್ಷಣಿಕ ಪ್ರವಾಸಗಳು. ೯. ಹಬ್ಬ ಹುಣ್ಣಿವೆ ಮತ್ತು ದಿನಗಳನ್ನು ಆಚರಿಸುವದು. ೧೦ ಪ್ರದರ್ಶನಗಳು ಹಾಗೂ ವಸ್ತುಸಂಗ್ರಹಾಲಯ.

ಈ ಪ್ರಕಾರ ಮೇಲಿನ ಅನೇಕ ಸಾಂಘಿಕ ಕಾರ್ಯಕ್ರಮಗಳಲ್ಲಿ ಮಕ್ಕಳು ಭಾಗ ವಹಿಸುವಂತೆ ಮಾಡಿದರೆ, ಅದರಲ್ಲಿ ಅವರಿಗೆ ಪ್ರತ್ಯಕ್ಷ ಅನುಭವವಾಗಿ ಅವರಲ್ಲಿ ಒಂದು ಬಗೆಯ ಆತ್ಮ ಜಾಗೃತಿಯಾಗುವದು. ಅವರ ಅನುಭವ ಬೆಳೆಯುವದು. ಉತ್ತಮ ಆದರ್ಶ, ಅನುಭವಗಳೇ ಉತ್ತಮ ಶಿಕ್ಷಣದ ಸೋಪಾನಗಳಾಗುವವು. ಇನ್ನು ಮೇಲಿನ ಚಟುವಟಿಕೆಗಳ ಸಂಘಟನೆ, ಉಪಯುಕ್ತತೆ ಇವುಗಳ ಬಗ್ಗೆ ನಾಲ್ಕು ಮಾತು ಬರೆಯುವೆ.

ಮಂತ್ರಿ ಮಂಡಲ— ಯಾವುದೇ ಕೆಲಸ ಸಾಗಬೇಕಾದರೆ ಶಿಸ್ತು, ಸಂಘಟನೆ, ಸುವ್ಯವಸ್ಥಿತತೆ ಇವುಗಳ ಆವಶ್ಯಕತೆ ಇರುತ್ತದೆ. ಅಂತೆಯೇ ಶಾಲೆಯಲ್ಲಿಯ ಎಲ್ಲ ಚಟುವಟಿಕೆಗಳು ಸುವ್ಯವಸ್ಥಿತವಾಗಿ ಶಿಸ್ತಿನಿಂದ ಸಾಗಬೇಕಾದರೆ ಕಾರ್ಯಸಂಘಟನೆ ಚೆನ್ನಾಗಿ ಮಾತ ಬೇಕಾಗುತ್ತದೆ. ಇಂಥ ಸಂಘಟನೆಯೆಂದರೆ ಬಾಲಕರಿಂದಲೇ ಚುನಾಯಿಸಲ್ಪಟ್ಟ, ಬಾಲಕರದೇ ಆದ, ಬಾಲಕರ ಬಗ್ಗಾಗಿಯೇ ಕೆಲಸ ಮಾಡುವ ಮಂತ್ರಿ ಮಂಡಳ. ಇಂಥ ಮಂತ್ರಿ ಮಂಡಳ ರಚಿಸಿಕೊಂಡು ಕೆಲಸ ಮಾಡುವದರಿಂದ, ಬಾಲಕರಿಗೆ ಜೊಣೆಗಾರಿಕೆಯ ಅರಿವಾಗಿ ಅವರಲ್ಲಿ ಕರ್ತವ್ಯ ಜಾಗೃತಿಯಾಗುತ್ತದೆ. ಅಲ್ಲದೆ ಇದರಿಂದ ಅವರಿಗೆ ನಾಗರಿಕ ಜೀವನದ ಪ್ರಥಮ ಪಾಠವನ್ನು ಕೂಡ ಪ್ರತ್ಯಕ್ಷವಾಗಿ ಕೊಟ್ಟಂತಾಗುತ್ತದೆ ಮಹತ್ವದ ಮಾತೆಂದರೆ ಬಾಲಕರಲ್ಲಿ ಪರಸ್ಪರ ಸಹಕಾರ, ಪ್ರೀತಿ, ಬಂಧುತ್ವ ಇವು ಬೆಳೆದು ನಿಜವಾದ ಸಾಂಘಿಕ ಜೀವನ ಅರಿವಾಗುತ್ತದೆ ಇನ್ನು ಬಾಲಕರಿಗೇ ವಹಿಸಿ ಕೊಟ್ಟಂಥ ಕೆಲಸಗಳನ್ನು ಹೆಚ್ಚು ದಕ್ಷತೆಯಿಂದ ಮಾಡುತ್ತಾರೆ. ಹೀಗೆ ಅವರಿಗೆ ಸ್ವಾತಂತ್ರ್ಯ ವಹಿಸಿ ಕೊಟ್ಟರೆ ಅವರ ಆತ್ಮಪ್ರತಿಷ್ಠಾಪ್ರವೃತ್ತಿಗೂ, ರಚನಾಪ್ರವೃತ್ತಿಗೂ ಚಾಲನೆ ಸಿಕ್ಕು, ಅವುಗಳ ಯೋಗ್ಯ ಲಾಭವಾಗುವದು. ಉದಾಹರಣೆಗಾಗಿ ಶಾಲೆಯಲ್ಲಿ ಒಂದು ದಿನಾಚರಣೆ ಆಚರಿಸುವದಿದೆ ಎಂದು ತಿಳಿಯವಾ. ಆಗ ಶಿಕ್ಷಕರು ಎಲ್ಲ ಕೆಲಸಗಳನ್ನು ತಾವೇ ನಿರ್ವಹಿಸುವದು ಸಾಧ್ಯವಾಗುವದಿಲ್ಲ. ಅದೇ ಆಗ ಶಾಲೆಯ ಬಾಲಕರ ಮಂತ್ರಿ ಮಂಡಲಕ್ಕೆ ಆ ಕೆಲಸ ನಿರ್ವಹಿಸಲು ಹೇಳಿ, ತಾವು ಮಾರ್ಗದರ್ಶಕರಾದರೆ, ಅಲ್ಲಿ ಪರಿಣಾಮ ಉತ್ತಮವಾಗುವದು. ಶಾಲೆಯ ಶೃಂಗಾರ, ಆಮಂತ್ರಣ ಪತ್ರಿಕೆ ಹಂಚುವದು, ಸಭೆಯ ವ್ಯವಸ್ಥೆ ಮಾಡುವದು ಮುಂತಾದ ಕೆಲಸಗಳನ್ನು ಅತಿ ಉತ್ತಮ ರೀತಿಯಲ್ಲಿ ಸಾಗಿಸಿಕೊಂಡು ಹೋಗುತ್ತಾರೆ. ಈ ರೀತಿಯ ಪ್ರಯೋಗದಿಂದ ಬಾಲಕರಿಗೆ ಮುಂದೆ ಸಮಾಜದಲ್ಲಿ ತಮ್ಮ ಹಕ್ಕು ಹೊಣೆಗಾರಿಕೆಯನ್ನು ಅರಿತುಕೊಂಡು ಸಮಾಜಸೇವೆ ಮಾಡಲು ಅನುಕೂಲವಾಗುವದು.

ಚರ್ಚಾಕೂಟ— ಮಕ್ಕಳಿಗೆ ಸ್ವಾಭಾವಿಕವಾಗಿ ಕೆಲವು ವಿಷಯಗಳ ಮೇಲೆ ಅವರ ಸ್ವಂತ ಅಭಿಪ್ರಾಯವಿರುತ್ತದೆ ಹಾಗೂ ಅದನ್ನು ವ್ಯಕ್ತಪಡಿಸಲು ಇಚ್ಛಿಪಡುತ್ತಿರುತ್ತಾರೆ. ಆದರೆ ಅವರ ಸಂಕೋಚಪ್ರವೃತ್ತಿಯ ಮೂಲಕ ಅದನ್ನು ಇತರರ ಎದುರಿಗೆ ವ್ಯಕ್ತಪಡಿಸಲು ಮಂಡಿಸಲು ಹಾಗೂ ಸಮರ್ಥಿಸಲು ಹಿಂಜರಿಯುತ್ತಾರೆ. ಚರ್ಚಾಕೂಟದಲ್ಲಿ ಭಾಗ ವಹಿಸುವದರಿಂದ ಮಕ್ಕಳಲ್ಲಿಯ ಸಂಕೋಚ ದೂರ ಆಗುತ್ತದೆ. ಅಲ್ಲದೆ ಅವರಲ್ಲಿ ನಿರ್ಭಯತೆ, ಸ್ವತಂತ್ರ ವಿಚಾರಶೀಲತೆ ಮುಂತಾದ ಸದ್ಗುಣಗಳು ನೆಲೆಗೊಳ್ಳುತ್ತವೆ. ಇಷ್ಟೇ ಅಲ್ಲ, ತಾವೂ ಕೂಡ ತಮ್ಮ ವಿಚಾರದಿಂದ ಹೊಸ ತತ್ವಗಳನ್ನು ಕಂಡು ಹಿಡಿಯಬಹುದೆಂಬ ಸಂಶೋಧನಾಪ್ರವೃತ್ತಿಯು ಕೂಡ ಕುದುರುತ್ತದೆ.

ಕೈಬರಹದ ನಿಯತ ಕಾಲಿಕೆಗಳು— ಇದು ಕೂಡ ಬಾಲಕರ ಸ್ವತಂತ್ರ ವಿಚಾರಶೀಲತೆ, ಭಾವಪ್ರದರ್ಶನ ಇವುಗಳಿಗೆ ಒಳ್ಳೇ ಸಹಕಾರಿಯಾಗುತ್ತವೆ ಇಲ್ಲಿ ಕೂಡ ಚರ್ಚಾಕೂಟದಲ್ಲಿಯ ಲಾಭಗಳೇ ಕಂಡು ಬಂದರೂ ಇನ್ನೂ ಹೆಚ್ಚಿನ ಲಾಭಗಳು ಇವೆ ಕೆಲವರು ಸಾಹಿತ್ಯದಲ್ಲಿ ಅಭಿರುಚಿ ಇದ್ದವರು ಇರುತ್ತಾರೆ ಅಂಥವರು ತಮ್ಮ ವಿಚಾರ, ತತ್ವಗಳನ್ನು ಬರಹಗಳ ಮುಖಾಂತರ ಪ್ರಕಟಿಸಬಹುದು ಕೆಲವರು ಅಂತರ್ಮುಖಿ ಬಾಲಕರಿರುತ್ತಾರೆ ಅವರಲ್ಲಿಯೂ ಕೂಡ ಅನೇಕ ಭಾವಗಳಿರುತ್ತವೆ. ಆದರೆ ಅವರು ಹೆಚ್ಚಾಗಿ ಅದನ್ನು ಪ್ರದರ್ಶಿಸುವದಿಲ್ಲ ಆದರೆ ಚಿತ್ರ, ಪೇಂಟಿಂಗ ಮುಂತಾದ ಕಲೆಗಳ ಮೂಲಕ ಅವರ ಭಾವ ಪ್ರಕಟವಾಗುವದು. ಅದಕ್ಕೂ ಕೂಡ ಇಲ್ಲಿ ಸಾಕಷ್ಟು ಅವಕಾಶವಿದೆ. ಹೀಗೆ ಅಚ್ಚುಕಟ್ಟುತನ, ಸೌಂದರ್ಯ ಪ್ರೀತಿ ಬರಹದಿಂದ ಉಂಟಾಗುತ್ತದೆ.

ವಾಚನಾಲಯ — ಇಂದಿನ ಸುಶಿಕ್ಷಿತ ಜನಾಂಗದಲ್ಲಿ ವಾಚನಾಲಯದ ಉಪಯೋಗ ಎಷ್ಟೆಂಬುದನ್ನು ವಿವರಿಸಬೇಕಾಗಿಲ್ಲ. ಆದರೂ ಬಾಲಕರಿಗೆ ಎಂಥ ವಾಚನಾಲಯ ಬೇಕೆಂದು ವಿಚಾರಿಸಬೇಕು. ಬಾಲಕರಲ್ಲಿ ಭಾಷಾಭಿರುಚಿ ಹುಟ್ಟಬೇಕಾದರೆ, ಅವರು ಸುರಸ, ಸುಲಭ, ಉದ್ಬೋಧಕ ಪುಸ್ತಕಗಳನ್ನು ಓದಬೇಕು ಪುಸ್ತಕಗಳು

ಸುಂದರವೂ, ಆಕರ್ಷಕವೂ ಆಗಿರಬೇಕು. ಪಠ್ಯಪುಸ್ತಕಗಳಲ್ಲಿ ಬರುವ ಪಾಠಗಳು ಖಂಡಶಃ ಇರುತ್ತವೆ ಬಾಲಕರಿಗೆ ಯಾವದೊಂದು ವಸ್ತುವಿನ ಇಲ್ಲವೆ ವ್ಯಕ್ತಿಯ ಖಂಡಶಃ ಪರಿಚಯವಾದಾಗ ಅವರಿಗೆ ಆ ವಸ್ತುವಿನ ಇಲ್ಲವೆ ವ್ಯಕ್ತಿಯ ಪೂರ್ಣ ಜ್ಞಾನ ಮಾಡಿಕೊಳ್ಳಬೇಕೆಂಬ ಅಭಿಲಾಷೆ, ಕುತೂಹಲ ಇರುತ್ತದೆ. ವಾಚನಾಲಯದಲ್ಲಿ ಮಕ್ಕಳ ಮಟ್ಟಕ್ಕಿರುವ ಮಾಸಿಕಗಳು, ಕಥೆ ಕವನ ಸಂಗ್ರಹಗಳು ಹಾಗೂ ವ್ಯಕ್ತಿ-ಚಿತ್ರಗಳು ಇದ್ದರೆ ಅವುಗಳನ್ನೋದಿ, ಅವರು ತಮ್ಮ ಕುತೂಹಲ ತಣಿಸಿಕೊಳ್ಳಬಹುದು. ಕಾರಣ ಪ್ರತಿ ಸಾಲೆಯಲ್ಲಿ ಇಂಥ ಪುಸ್ತಕಗಳನ್ನೊಳಗೊಂಡ ವಾಚನಾಲಯ ಇರುವದವಶ್ಯ.

ನಾಟ್ಯಸಂಘ—ಬಾಲಕರು ಸ್ವಾಭಾವಿಕವಾಗಿ ನಟನಾಪ್ರಿಯರು. ನಟನೆಯೆಂದರೆ ಒಂದು ಬಗೆಯ ಅನುಕರಣವೇ ಆಗಿರುತ್ತದೆ. ಚಿಕ್ಕ ಬಾಲಕರು, ಸಾಮಾನ್ಯ ಮೂರು–ನಾಲ್ಕು ವರ್ಷದ ಬಾಲಕರು ಕೂಡ ಜೀವನದ ವಿವಿಧ ಸನ್ನಿವೇಶಗಳನ್ನನುಕರಿಸಿ, ಒಮ್ಮೆ ತಾಯಿಯಾಗಿ ಅಡುಗೆ ಆಟ ಆಡುವದು, ಒಮ್ಮೆ ಮಾಸ್ತರನಾಗಿ ನಟಿಸುವದು, ಒಮ್ಮೊಮ್ಮೆ ಮದುವೆಯ ಆಟಗಳನ್ನು ಆಡುತ್ತಿರುವದು ನಮ್ಮ ನಿತ್ಯ ಜೀವನದಲ್ಲಿ ಕಾಣುವ ಮಾತಾಗಿದೆ. ಇದು ಬಾಲಕರ ಸಾಹಜಿಕವಾದ ಹಾಗೂ ಭಾವೀ ಜೀವನ ನಾಟಕದ ಪೂರ್ವ ಸಿದ್ಧತೆಯೇ ಆಗಿದೆ ಹೀಗೆ ಸ್ವಾಭಾವಿಕವಾಗಿ ಮಕ್ಕಳಲ್ಲಿದ್ದ ನಾಟ್ಯ ಕಲೆಯನ್ನು ನಾವು ಶೈಕ್ಷಣಿಕ ದೃಷ್ಟಿಯಲ್ಲಿ ಉಪಯೋಗಿಸಬಹುದು. ಇತಿಹಾಸ ಇಲ್ಲವೆ ಪೌರಾಣಿಕ ಕಥೆಗಳನ್ನು ಕಲಿಸುವಾಗ ಉದ್ದಕ್ಕೆ ಹೇಳುತ್ತ ಹೋದರೆ ಒಳಿತಲ್ಲ ಅದೇ ಆಯಾ ಭಾಗಗಳ ಒಂದು ರೂಪಕವನ್ನು ಬಾಲಕರಿಂದಲೇ ನಟಿಸಿದರೆ ರಂಜನೆಯ ಜೊತೆಗೆ ಆಯಾ ವಿಷಯಗಳ ದೃಢೀಕರಣವೂ ಸಾಕಷ್ಟಾಗುವದು. ಅಲ್ಲದೆ ನಾಟ್ಯದಿಂದ ಕಲಾಭಿವೃದ್ಧಿಯು, ಕಲೆಯ ಬಗ್ಗೆ ಆಸ್ಥೆಯು ಉತ್ಪನ್ನವಾಗುವದು.

ಕ್ರೀಡಾಸಂಘ— ಮಕ್ಕಳು ಯಾವಾಗಲೂ ಕ್ರೀಡಾಸಕ್ತರಿರುತ್ತಾರೆ. ಇದು ಅವರ ಸ್ವಾಭಾವಿಕ ಪ್ರವೃತ್ತಿ ಇರುತ್ತದೆ. ಇಂಥ ಸ್ವಾಭಾವಿಕವಾದ ಅವರಲ್ಲಿಯ ಪ್ರವೃತ್ತಿಗೆ ಒಂದು ಮಾರ್ಗ ಹಾಕಿ ಕೊಟ್ಟರೆ, ಅದರಿಂದ ಎಷ್ಟೋ ಒಳ್ಳೆಯ ಪರಿಣಾಮಗಳಾಗುವವು. ಅನೇಕ ಉತ್ತಮ ಆದರ್ಶ ಗುಣಗಳನ್ನು ಬಾಲಕರಲ್ಲಿ ಮೂಡಿಸಬಹುದು. ಆಟಗಳೆಂದರೆ ಶಾರೀರಿಕ, ಮಾನಸಿಕ, ನೈತಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಮಾಡುವ ಉತ್ತಮ ಸಾಧನೆಗಳು. ಆಟಗಳಿಂದ ಮಕ್ಕಳಲ್ಲಿಯ ಸಾಂಘಿಕ ನಡತೆಗೆ ಒಂದು ಕಳೆ ಬರುತ್ತತೆ. ಅವರು ಸಂಘ ವಿಧೇಯರಾಗಿ ಅದರಲ್ಲಿ ಕೂಡಿ ನಡೆಯುವದನ್ನು ಸುಲಭವಾಗಿ ಕಲಿಯುತ್ತಾರೆ. ಹೀಗೆ ಬಾಲಕರ ಶಾರೀರಿಕ, ಮಾನಸಿಕ, ನೈತಿಕ ಉತ್ಕರ್ಷ ಸಾಧಿಸುವ ಕ್ರೀಡಾಸಂಘಗಳು ಶಾಲೆಯಲ್ಲಿ ಇರುವದು ಒಳಿತು.

ಶೈಕ್ಷಣಿಕಪ್ರವಾಸಗಳು—ಮಕ್ಕಳು ನಿಸರ್ಗಪ್ರಿಯರಾಗಿರುತ್ತಾರೆ. ಅವರಿಗೆ ನಿಸರ್ಗದಲ್ಲಿ ಆಡುವದು, ನಿಸರ್ಗ ನಿರೀಕ್ಷಣೆ ಮಾಡುವದು ಬಹಳ ಸೇರುತ್ತದೆ. ಅವರ ಈ ಪ್ರವೃತ್ತಿಗಳಿಗೂ ಕೂಡ ಸಾಕಷ್ಟು ಅವಕಾಶ ಕೊಡುವದು ಅವಶ್ಯವಿದೆ. ಭೂಗೋಲ ಪಾಠಗಳು, ಐತಿಹಾಸಿಕ ಘಟನೆಗಳ ಸ್ಥಳಗಳು ಇವುಗಳನ್ನು ಹೇಳುವಾಗ ಮತ್ತು ಸಾಮಾನ್ಯ ಜ್ಞಾನದ ಪಾಠಗಳನ್ನು ಹೇಳುವಾಗ ಕೇವಲ ಶಾಬ್ದಿಕ ಚಿತ್ರಗಳಿಂದಾಗಲೀ ಅಥವಾ ಚಿತ್ರಗಳ ಮೂಲಕವಾಗಿಯಾಗಲೀ ಕಲಿಸಿದರೆ ಅಷ್ಟೊಂದು ಪರಿಣಾಮಕಾರಿಯಾಗುವದಿಲ್ಲ ಉದಾಹರಣೆಗಾಗಿ ಹೇಳಬೇಕಾದರೆ ನಮ್ಮಲ್ಲಿಯ ಅನೇಕ ಬಾಲಕರು ಉಗಿಬಂಡಿಯನ್ನು ನೋಡಿರುವದಿಲ್ಲ. ಉಗಿಬಂಡಿಯ ಬಗ್ಗೆ ಹೇಳಬೇಕಾದರೆ, ಇನ್ನೂ ಅದನ್ನು ನೋಡದೇ ಇದ್ದ ಬಾಲಕರ ಎದುರಿಗೆ ಅದನ್ನು ಎಷ್ಟು ವರ್ಣಿಸಿ ಹೇಳಿದರೂ ಅವರ ಚಿತ್ರ ತೋರಿಸಿದರೂ ಅವರಿಗೆ ಉಗಿಬಂಡಿಯ ಸ್ಪಷ್ಟವಾದ ಕಲ್ಪನೆಯಾಗುವದಿಲ್ಲ. ಅದೇ ಒಮ್ಮೆ ಅವರನ್ನು ಉಗಿಬಂಡಿಯ ನಿಲ್ದಾಣಕ್ಕೆ ಒಯ್ದು, ಉಗಿಬಂಡಿ ತೋರಿಸಿಕೊಂಡು ಬಂದರೆ, ಅವರಿಗೆ ಅದರ ಬಗ್ಗೆ ತುಂಬಾ ಜ್ಞಾನವಾಗುವದಲ್ಲದೆ, ಆ ಜ್ಞಾನವು ಅವರ ಮನಸ್ಸಿನ ಮೇಲೆ ಅಚ್ಚಳಿಯದ ಮುದ್ರೆ ವತ್ತಿದಂತೆ ಆಗುವದು. ಇದು ಒಂದು ಸಾಮಾನ್ಯ ಉದಾಹರಣೆ. ಹೀಗೆಯೇ ಇನ್ನೂ ಎಷ್ಟೋ ಸಂಗತಿಗಳನ್ನು ಅವರಿಗೆ ಪ್ರತ್ಯಕ್ಷ ನಿರೀಕ್ಷಣೆಯಿಂದ

ಮನದಟ್ಟು ಮಾಡಿಕೊಟ್ಟರೆ, ಒಳ್ಳೆಯ ಪರಿಣಾಮವಾಗುತ್ತದೆ. ಕಾರಣ ಶಕ್ಯವಿದ್ದಾಗಲೆಲ್ಲ ಬಾಲಕರ ಶೈಕ್ಷಣಿಕ ಪ್ರವಾಸ ಕೈಕೊಳ್ಳಬೇಕು.

ಹಬ್ಬ-ಹುಣ್ಣಿವೆ ದಿನಾಚರಣೆಗಳು— ಸ್ವಾಭಾವಿಕವಾಗಿ ಹಬ್ಬ ಹುಣ್ಣಿವೆಗಳ ದಿನಗಳಲ್ಲಿ ಸಾಲೆಗೆ ಬಿಡುವು ಇರುವದು. ಬಿಡುವು ಎಂದು ಕೂಡಲೇ ಶಾಲೆಗೆ ಭದ್ರವಾದ ಬೀಗ ಮುದ್ರೆ ಒತ್ತುವದಿಲ್ಲ. ಅಂದೂ ಕೂಡ ಬಾಲಕರಿಗೆ ಕಲಿಸತಕ್ಕ ಅನೇಕ ಸಂಗತಿಗಳು ಇರುತ್ತವೆ. ಯಾವದೇ ಹಬ್ಬ ಇಲ್ಲವೆ ದಿನಾಚರಣೆಗಳನ್ನು ಸಾಲೆಯಲ್ಲಿ ಯೋಗ್ಯ ರೀತಿಯಿಂದ ಆಚರಿಸಿ, ಅವುಗಳ ಬಗ್ಗೆ ಕಲ್ಪನೆ ಮಾಡಿಕೊಟ್ಟರೆ ಬಾಲಕರಿಗೆ ಆನಂದದ ಜೊತೆಗೆ ಅಭ್ಯಾಸದ ಭಾಗದಲ್ಲಿಯ ಎಷ್ಟೋ ವಿಷಯಗಳನ್ನು ಕಲಿಸಿದಂತೆ ಆಗುವದು. ಆದ್ದರಿಂದ ಶಾಲೆಗಳಲ್ಲಿ ಆಯಾ ಹಬ್ಬ-ಹುಣ್ಣಿವೆ ಜಯಂತಿಗಳನ್ನು ಆಚರಿಸಿ, ಅಂದಿನ ದಿನದ (ಸೂಟಿಯ) ಯೋಗ್ಯ ಲಾಭ ಮಾಡಿಕೊಳ್ಳಬೇಕು.

ಪ್ರದರ್ಶನಗಳು ಮತ್ತು ವಸ್ತುಸಂಗ್ರಹಾಲಯಗಳು— ಇವುಗಳ ಉಪಯೋಗ ಕೂಡ ಶಿಕ್ಷಣಕ್ಷೇತ್ರದಲ್ಲಿ ಸಾಕಷ್ಟು ಇದೆ. ಮಕ್ಕಳು ಕೃತಿಪ್ರೇಮಿಗಳಿರುತ್ತಾರೆ. ಅವರು ಯಾವಾಗಲೂ ಒಂದಿಲ್ಲೊಂದು ಕೈ ಕೆಲಸಗಳಲ್ಲಿ ತೊಡಗಿರುವದನ್ನು ನಾವು ಕಾಣುತ್ತೇವೆ. ಈ ಅವರ ಸ್ವಾಭಾವಿಕ ಒಲವನ್ನೇ ನಾವು ಸ್ವಲ್ಪ ತಿದ್ದಿ, ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡಿದರೆ ಅನೇಕ ಉತ್ತಮ ಕೈಗಾರಿಕೆಗಳನ್ನು ಹೊರಡಿಸಬಹುದು. ಹೀಗೆ ಅವರು ಮಾಡಿದ ಕೃತಿಗಳನ್ನು ಇತರರು ನೋಡಿ ಮೆಚ್ಚಿದರೆ ಇಲ್ಲವೆ ಇತರರು ಮಾಡಿದ ಉತ್ತಮ ಕೃತಿಗಳನ್ನು ಬಾಲಕರು ನಿರೀಕ್ಷಿಸಿದರೆ, ಬಾಲಕರ ಕೃತಿ ಪ್ರೇಮವು ಇನ್ನೂ ಹೆಚ್ಚಾಗುವದು. ಅಲ್ಲದೆ ಬಾಲಕರು ಉತ್ತಮ ಕೃತಿಗಳನ್ನು ಮಾಡಲು ಶಕ್ತರಾಗುತ್ತಾರೆ ಹೀಗೆ ಪ್ರದರ್ಶನಗಳನ್ನು ಏರ್ಪಡಿಸುವದರಿಂದ ಪ್ರದರ್ಶನಗಳ ಸಂದರ್ಶನದಿಂದ ಬಾಲಕರಿಗೆ ತುಂಬಾ ಲಾಭವಾಗುವದು. ಇನ್ನು ಬಾಲಕರಲ್ಲಿ ಸಂಗ್ರಹ ಪ್ರವೃತ್ತಿ ಇರುತ್ತದೆ. ಅದನ್ನೇ ಉತ್ತಮವಾದ ಚಟಗಳಲ್ಲಿ (Hobbies) ಮಾರ್ಪಡಿಸಿದರೆ ಉತ್ತಮವಾಗುವದು. ಇದರಿಂದ ಶಾಲೆಯಲ್ಲಿ ಕೂಡ ಒಂದು ಸಣ್ಣ ಉತ್ತಮ ವಸ್ತು ಸಂಗ್ರಹಾಲಯು ತಯಾರಿಸಬಹುದು.

ಮೇಲೆ ವಿವರಿಸಿದಂತೆ ಸಹಪಠ್ಯ ಚಟುವಟಿಕೆಗಳೇ ಶಿಕ್ಷಣದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ,

ಪ್ರಾಥಮಿಕ ಶಿಕ್ಷಣ ಪ್ರಪಂಚ

ಎಪ್ರಿಲ ೧೯೫೫

ದೇಣಿಗೆ

ನಾವಳ್ಳಿ (ನವಲಗುಂದ ೧) :- ಇಲ್ಲಿಯ ಸಾಲೆಯು ಪ್ರಗತಿಪರ ಕೆಲಸವನ್ನೂ ಹಾಗೂ ಸಾಲೆಯಲ್ಲಿ ಸ್ಥಾಪಿತವಾಗಿರುವ "**ಆದರ್ಶ ವಿದ್ಯಾರ್ಥಿ ಸಂಘ**" ವನ್ನೂ ನೋಡಿ ಧಾರವಾಡ ಜಿಲ್ಲಾ ಆರ್.ಡಿ. ಬೋರ್ಡಿನ ಚೇರಮನ್‌ರಾದ ಜಿಲ್ಲಾಧಿಕಾರಿಗಳು ಈ ಸಂಘಕ್ಕೆ ಕನ್ನಡಿ, ಗಡಿಯಾರ ಮತ್ತು ತೂಕದ ಪೆಟ್ಟಿಗೆಗಳನ್ನು ಕೊಂಡು ಕೊಳ್ಳಲು **ರೂ. ೧೫೫**|- ಗಳನ್ನು ಮಂಜೂರ ಮಾಡಿರುವರು.

ಇಲ್ಲಿ ಸ್ಥಾಪಿತವಾದ **ಶ್ರೀ ಕಲ್ಮೇಶ್ವರ ವಾಚನಾಲಯ** ಕ್ಕೆ ಒಂದು ಕಪಾಟವನ್ನು ಕೊಂಡು ಕೊಳ್ಳಲು ಜಿಲ್ಲಾಧಿಕಾರಿಗಳು **ರೂ. ೭೫**-| ಗಳನ್ನು ಮಂಜೂರ ಮಾಡಿರುವರು. ಶ್ರೀಶೈಲ ಜಗದ್ಗುರುಗಳು ಇವರಿಂದ ರೂ ೫|- ಗಳು ಬಂದಿರುವವು.

ಊರವರು ವಾಚನಾಲಯಕ್ಕೆ ೬೦ ಪುಸ್ತಕಗಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಲ್ಲದೆ ಶಾಲೆಗೆ ಒಂದು ಗ್ಲೋಬ ಕೊಡಿಸಿರುವರು.

ಸಭೆ ಸಮ್ಮೇಲನಗಳು

ಅಣ್ಣೀಗೇರಿ :- ೧೨ ಇಲ್ಲಿಯ ನಾಲ್ಕೂ ಸಾಲೆಗಳ ಗುರು-ಶಿಷ್ಯರ ಬಳಗವು ಪಾನಪ್ರತಿಬಂಧ ಸಪ್ತಾಹದ ಅಂಗವಾಗಿ ಇಂದು ಪ್ರಭಾತಫೇರಿಯನ್ನು ಮುಗಿಸಿ ಶ್ರೀ **ನಿಜಲಿಂಗಪ್ಪನವರು ಹುಬ್ಬಳ್ಳಿ** ಇವರ ಹಿರಿಯತನದಲ್ಲಿ ಮಕ್ಕಳ ಮನರಂಜನೆ-ಭಾಷಣ-ಗೀತೆ ಮುಂತಾದವುಗಳು ಜರುಗಿದವು.

ಕೊಂಡಿಕೊಪ್ಪ (ನವಲಗುಂದ):- ೧೭ ಇಲ್ಲಿಯ ಕ. ಗಂ. ಸಾಲೆಯ ವಾರ್ಷಿಕೋತ್ಸವ ಸಮಾರಂಭವು ಧಾರವಾಡ ಜಿಲ್ಹೆಯ ಉಪಶಿಕ್ಷಣಾಧಿಕಾರಿಗಳಾದ **ಶ್ರೀ. ವ್ಹಿ. ಜೆ. ಡೇವಿಡ್** ರವರ ಹಿರಿಯತನದಲ್ಲಿ ಸಾಂಗವಾಯಿತು. ಶಾಲಾ **ಬಾಲಕರ** ಶಾರೀರಿಕ **ಚಟುವಟಿಕೆಗಳು** ಪ್ರಶಂಸನೀಯವಾಗಿದ್ದವು.

ಅಸುಂಡಿ (ಗದಗ) :-೨೪ ಇಲ್ಲಿಯ ಕ. ಗಂ. ಶಾಲೆಯಲ್ಲಿ ಗದಗ ನಗರ ಸಭೆಯ **ಶಾಲಾ** ಸಮಿತಿಯ ಚೇರಮನ್‌ರಾದ **ಶ್ರೀ. ಸಿ. ಎಸ್. ಪಾಟೀಲ** ಇವರ ಆಧ್ಯಕ್ಷತೆಯಲ್ಲಿ ಪಾಲಕರ ದಿನವನ್ನು ಆಚರಿಸಲಾಯಿತು. ಶ್ರೀ. ಎಮ್. ಬಿ. ಹಿರೇಮಠ ಅ. ಡೆ. ಎ. ಇ. ಧಾರ-ವಾಡ ಇವರು ಉದ್ಘಾಟಕರಾಗಿದ್ದರು. ಶಾಲಾ **ಬಾಲ-ಬಾಲಿಕೆಯರಿಂದ ವಿವಿಧ** ವಿನೋದಾವಳಿ ಹಾಗು ನಾಟಕ ನಡೆದವು.

ಧಾರವಾಡ ೨೫:- ಇಲ್ಲಿಯ ಗಂಡು ಮಕ್ಕಳ ಸರಕಾರಿ ಟ್ರೇನಿಂಗ **ಕಾಲೇಜದಲ್ಲಿ** ಬಸವಜಯಂತಿ ಉತ್ಸವವನ್ನು **ಶ್ರೀ. ಎನ್.ಕೆ. ದೀಕ್ಷಿತ** ಇವರ **ಅಧ್ಯಕ್ಷತೆಯಲ್ಲಿ** ಆಚರಿಸಲಾಯಿತು. ಅಧ್ಯಕ್ಷರ ಹಸ್ತದಿಂದ " ವಚನ ಸ್ಪರ್ಧೆ " ಯಲ್ಲಿ ಮೊದಲಿನ ಮೂರು ಕ್ರಮಾಂಕಗಳನ್ನು ಪಡೆದ ಶಿಕ್ಷಕ ವಿದ್ಯಾರ್ಥಿಗಳಿಗೂ ಪ್ರಾ್ಯ. ಸ್ಕೂಲಿನ **ಬಾಲಕರಿಗೂ** ಬಹುಮಾನಗಳನ್ನು ಕೊಡಿಸಲಾಯಿತು.

೩೦:— ೧೯೫೪-೫೫ನೆಯ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸ ಮಾಡುತ್ತಿದ್ದ ಶಿಕ್ಷಕ ವಿದ್ಯಾರ್ಥಿಗಳು ಸೂತ್ರಯಜ್ಞ, ಮುಂಜಾವಿನ ಪ್ರಾರ್ಥನೆ ಹಾಗೂ ಸಾಂಘಿಕ ಜೀವನಗಳಲ್ಲಿ ಉತ್ತಮ ಹಾಜರಿ ಮತ್ತು ಪ್ರಗತಿಯನ್ನು ತೋರಿಸಿದ ವರ್ಗಗಳಿಗೆ ಬಹುಮಾನ ಕೊಡುವದಕ್ಕಾಗಿ ಕಾಣಿಕೆಯಾಗಿ ಕೊಟ್ಟ ಮೂರು ಶೀಲ್ಡುಗಳನ್ನೂ

ಮನದಟ್ಟು ಮಾಡಿಕೊಟ್ಟರೆ, ಒಳ್ಳೆಯ ಪರಿಣಾಮವಾಗುತ್ತದೆ. ಕಾರಣ ಶಕ್ಯವಿದ್ದಾಗಲೆಲ್ಲ ಬಾಲಕರ ಶೈಕ್ಷಣಿಕ ಪ್ರವಾಸ ಕೈಕೊಳ್ಳಬೇಕು.

ಹಬ್ಬ-ಹುಣ್ಣಿವೆ ದಿನಾಚರಣೆಗಳು— ಸ್ವಾಭಾವಿಕವಾಗಿ ಹಬ್ಬ ಹುಣ್ಣಿವೆಗಳ ದಿನಗಳಲ್ಲಿ ಸಾಲೆಗೆ ಬಿಡುವು ಇರುವದು. ಬಿಡುವು ಎಂದು ಕೂಡಲೇ ಶಾಲೆಗೆ ಭದ್ರವಾದ ಬೀಗ ಮುದ್ರೆ ಒತ್ತುವದಿಲ್ಲ. ಅಂದೂ ಕೂಡ ಬಾಲಕರಿಗೆ ಕಲಿಸತಕ್ಕ ಅನೇಕ ಸಂಗತಿಗಳು ಇರುತ್ತವೆ. ಯಾವದೇ ಹಬ್ಬ ಇಲ್ಲವೆ ದಿನಾಚರಣೆಗಳನ್ನು ಸಾಲೆಯಲ್ಲಿ ಯೋಗ್ಯ ರೀತಿಯಿಂದ ಆಚರಿಸಿ, ಅವುಗಳ ಬಗ್ಗೆ ಕಲ್ಪನೆ ಮಾಡಿಕೊಟ್ಟರೆ ಬಾಲಕರಿಗೆ ಆನಂದದ ಜೊತೆಗೆ ಅಭ್ಯಾಸದ ಭಾಗದಲ್ಲಿಯ ಎಷ್ಟೋ ವಿಷಯಗಳನ್ನು ಕಲಿಸಿದಂತೆ ಆಗುವದು. ಆದ್ದರಿಂದ ಶಾಲೆಗಳಲ್ಲಿ ಆಯಾ ಹಬ್ಬ-ಹುಣ್ಣಿವೆ ಜಯಂತಿಗಳನ್ನು ಆಚರಿಸಿ, ಅಂದಿನ ದಿನದ (ಸೂಟಿಯ) ಯೋಗ್ಯ ಲಾಭ ಮಾಡಿಕೊಳ್ಳಬೇಕು.

ಪ್ರದನರ್ಶಗಳು ಮತ್ತು ವಸ್ತುಸಂಗ್ರಹಾಲಯಗಳು– ಇವುಗಳ ಉಪಯೋಗ ಕೂಡ ಶಿಕ್ಷಣಕ್ಷೇತ್ರದಲ್ಲಿ ಸಾಕಷ್ಟು ಇದೆ. ಮಕ್ಕಳು ಕೃತಿಪ್ರೇಮಿಗಳಿರುತ್ತಾರೆ. ಅವರು ಯಾವಾಗಲೂ ಒಂದಿಲ್ಲೊಂದು ಕೈ ಕೆಲಸಗಳಲ್ಲಿ ತೊಡಗಿರುವದನ್ನು ನಾವು ಕಾಣುತ್ತೇವೆ. ಈ ಅವರ ಸ್ವಾಭಾವಿಕ ಒಲವನ್ನೇ ನಾವು ಸ್ವಲ್ಪ ತಿದ್ದಿ, ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡಿದರೆ ಅನೇಕ ಉತ್ತಮ ಕೈಗಾರಿಕೆಗಳನ್ನು ಹೊರಡಿಸಬಹುದು. ಹೀಗೆ ಅವರು ಮಾಡಿದ ಕೃತಿಗಳನ್ನು ಇತರರು ನೋಡಿ ಮೆಚ್ಚಿದರೆ ಇಲ್ಲವೆ ಇತರರು ಮಾಡಿದ ಉತ್ತಮ ಕೃತಿಗಳನ್ನು ಬಾಲಕರು ನಿರೀಕ್ಷಿಸಿದರೆ, ಬಾಲಕರ ಕೃತಿ ಪ್ರೇಮವು ಇನ್ನೂ ಹೆಚ್ಚಾಗುವದು. ಅಲ್ಲದೆ ಬಾಲಕರು ಉತ್ತಮ ಕೃತಿಗಳನ್ನು ಮಾಡಲು ಶಕ್ತರಾಗುತ್ತಾರೆ ಹೀಗೆ ಪ್ರದರ್ಶನಗಳನ್ನು ಏರ್ಪಡಿಸುವದರಿಂದ ಪ್ರದರ್ಶನಗಳ ಸಂದರ್ಶನದಿಂದ ಬಾಲಕರಿಗೆ ತುಂಬಾ ಲಾಭವಾಗುವದು. ಇನ್ನು ಬಾಲಕರಲ್ಲಿ ಸಂಗ್ರಹ ಪ್ರವೃತ್ತಿ ಇರುತ್ತದೆ. ಅದನ್ನೇ ಉತ್ತಮವಾದ ಚಟಗಳಲ್ಲಿ (Hobbies) ಮಾರ್ಪಡಿಸಿದರೆ ಉತ್ತಮವಾಗುವದು. ಇದರಿಂದ ಶಾಲೆಯಲ್ಲಿ ಕೂಡ ಒಂದು ಸಣ್ಣ ಉತ್ತಮ ವಸ್ತು ಸಂಗ್ರಹಾಲಯ ತಯಾರಿಸಬಹುದು.

ಮೇಲೆ ವಿವರಿಸಿದಂತೆ ಸಹಪಠ್ಯ ಚಟುವಟಿಕೆಗಳೇ ಶಿಕ್ಷಣದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ,

ಪ್ರಾಥಮಿಕ ಶಿಕ್ಷಣ ಪ್ರಪಂಚ

ಎಪ್ರಿಲ ೧೯೫೫

ದೇಣಿಗೆ

ಸಾವಳ್ಳಿ (ನವಲಗುಂದ ೧) :- ಇಲ್ಲಿಯ ಸಾಲೆಯ ಪ್ರಗತಿಪರ ಕೆಲಸವನ್ನೂ ಹಾಗೂ ಸಾಲೆಯಲ್ಲಿ ಸ್ಥಾಪಿತವಾಗಿರುವ **" ಆದರ್ಶ ವಿದ್ಯಾರ್ಥಿ ಸಂಘ "** ವನ್ನೂ ನೋಡಿ ಧಾರವಾಡ ಜಿಲ್ಲಾ ಆರ್. ಡಿ. ಬೋರ್ಡಿನ ಚೇರಮನ್‌ರಾದ ಜಿಲ್ಲಾಧಿಕಾರಿಗಳು ಈ ಸಂಘಕ್ಕೆ ಕನ್ನಡಿ, ಗಡಿಯಾರ ಮತ್ತು ತೂಕದ ಪೆಟ್ಟಿಗೆಗಳನ್ನು ಕೊಂಡು ಕೊಳ್ಳಲು **ರೂ. ೧೨೫/-** ಗಳನ್ನು ಮಂಜೂರ ಮಾಡಿರುವರು.

ಇಲ್ಲಿ ಸ್ಥಾಪಿತವಾದ **ಶ್ರೀ ಕಲ್ಮೇಶ್ವರ ವಾಚನಾಲಯ** ಕ್ಕೆ ಒಂದು ಕಪಾಟವನ್ನು ಕೊಂಡು ಕೊಳ್ಳಲು ಜಿಲ್ಲಾಧಿಕಾರಿಗಳು ರೂ. ೭೫-/ ಗಳನ್ನು ಮಂಜೂರ ಮಾಡಿರುವರು. ಶ್ರೀಶೈಲ ಜಗದ್ಗುರುಗಳು ಇವರಿಂದ ರೂ ೫/- ಗಳು ಬಂದಿರುವವು.

ಊರವರು ವಾಚನಾಲಯಕ್ಕೆ ೬೦ ಪುಸ್ತಕಗಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಲ್ಲದೆ ಶಾಲೆಗೆ ಒಂದು ಗ್ಲೋಬ ಕೊಡಿಸಿರುವರು.

ಸಭೆ ಸಮ್ಮೇಲನಗಳು

ಅಣ್ಣೀಗೇರಿ :- ೧೨ ಇಲ್ಲಿಯ ನಾಲ್ಕೂ ಸಾಲೆಗಳ ಗುರು-ಶಿಷ್ಯರ ಬಳಗವು ಪಾನಪ್ರತಿಬಂಧ ಸಪ್ತಾಹದ ಅಂಗವಾಗಿ ಇಂದು ಪ್ರಭಾತಪೇರಿಯನ್ನು ಮುಗಿಸಿ ಶ್ರೀ **ನಿಜಲಿಂಗಪ್ಪನವರು ಹುಬ್ಬಳ್ಳಿ** ಇವರ ಹಿರಿಯತನದಲ್ಲಿ ಮಕ್ಕಳ ಮನರಂಜನೆ-ಭಾಷಣ-ಗೀತೆ ಮುಂತಾದವುಗಳು ಜರುಗಿದವು.

ಕೊಂಡಿಕೊಪ್ಪ (ನವಲಗುಂದ):- ೧೭ ಇಲ್ಲಿಯ ಕ. ಗಂ. ಸಾಲೆಯ ವಾರ್ಷಿಕೋತ್ಸವ ಸಮಾರಂಭವು ಧಾರವಾಡ ಜಿಲ್ಹೆಯ ಉಪಶಿಕ್ಷಣಾಧಿಕಾರಿಗಳಾದ **ಶ್ರಿ. ವ್ಹಿ. ಜೆ. ಡೆವಿಡ್** ರವರ ಹಿರಿಯತನದಲ್ಲಿ ಸಾಂಗವಾಯಿತು. ಶಾಲಾ ಬಾಲಕರ ಶಾರೀರಿಕ ಚಟುವಟಿಕೆಗಳು ಪ್ರಶಂಸನೀಯವಾಗಿದ್ದವು.

ಅಸುಂಡಿ (ಗದಗ) :-೨೪ ಇಲ್ಲಿಯ ಕ. ಗಂ. ಶಾಲೆಯಲ್ಲಿ ಗದಗ ನಗರ ಸಭೆಯ ಶಾಲಾ ಸಮಿತಿಯ ಚೇರಮನ್‌ರಾದ **ಶ್ರೀ. ಸಿ. ಎಸ್. ಪಾಟೀಲ** ಇವರ ಅಧ್ಯಕ್ಷತೆಯಲ್ಲಿ ಪಾಲಕರ ದಿನವನ್ನು ಆಚರಿಸಲಾಯಿತು. ಶ್ರೀ. ಎಮ್. ಬಿ. ಹಿರೇಮಠ ಅ. ಡೆ. ಎ. ಇ. ಧಾರವಾಡ ಇವರು ಉದ್ಘಾಟಕರಾಗಿದ್ದರು. ಶಾಲಾ ಬಾಲ-ಬಾಲಿಕೆಯರಿಂದ ವಿವಿಧ ವಿನೋದಾವಳಿ ಹಾಗು ನಾಟಕ ನಡೆದವು.

ಧಾರವಾಡ ೨೫:- ಇಲ್ಲಿಯ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಬಸವಜಯಂತಿ ಉತ್ಸವವನ್ನು **ಶ್ರೀ. ಎಸ್. ಕೆ. ದೀಕ್ಷಿತ** ಇವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಅಧ್ಯಕ್ಷರ ಹಸ್ತದಿಂದ " ವಚನ ಸ್ಪರ್ಧೆ " ಯಲ್ಲಿ ಮೊದಲಿನ ಮೂರು ಕ್ರಮಾಂಕಗಳನ್ನು ಪಡೆದ ಶಿಕ್ಷಕ ವಿದ್ಯಾರ್ಥಿಗಳಿಗೂ ಪ್ರ್ಯಾ. ಸ್ಕೂಲಿನ ಬಾಲಕರಿಗೂ ಬಹುಮಾನಗಳನ್ನು ಕೊಡಿಸಲಾಯಿತು.

೩೦:— ೧೯೫೪-೫೫ನೆಯ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸ ಮಾಡುತ್ತಿದ್ದ ಶಿಕ್ಷಕ ವಿದ್ಯಾರ್ಥಿಗಳು ಸೂತ್ರಯಜ್ಞ, ಮುಂಜಾವಿನ ಪ್ರಾರ್ಥನೆ ಹಾಗೂ ಸಾಂಘಿಕ ಜೀವನಗಳಲ್ಲಿ ಉತ್ತಮ ಹಾಜರಿ ಮತ್ತು ಪ್ರಗತಿಯನ್ನು ತೋರಿಸಿದ ವರ್ಗಗಳಿಗೆ ಬಹುಮಾನ ಕೊಡುವದಕ್ಕಾಗಿ ಕಾಣಿಕೆಯಾಗಿ ಕೊಟ್ಟ ಮೂರು ಶೀಲ್ಡುಗಳನ್ನೂ

ಜಾನೇವಾರಿ ೧೦ನೆಯತಾರೀಖಿನಿಂದ ಅಲ್ಪಾವಧಿ **ತರಬೇತಿಗಾಗಿ** ಬಂದ **ಹಿಂದಿ-ಶಿಕ್ಷಕ** ವಿದ್ಯಾರ್ಥಿಗಳು ಪ್ರತಿ ವರ್ಷದಲ್ಲಿ ಕಾಲೇಜದ ಭೋಜನಾಲಯದಲ್ಲಿ ತಿಂಗಳ ಖರ್ಚನ್ನು ಕಡಿಮೆ ತರುವ ಮಂತ್ರಿಮಂಡಳದವರಿಗೆ ಬಹುಮಾನವನ್ನು ಕೊಡುವದ ಕ್ಕಾಗಿ ಕಾಣಿಕೆಯಾಗಿ ಕೊಟ್ಟ ಶೀಲ್ಡನ್ನು ಕಾಲೇಜದ ವರ್ಷಾಂತ್ಯದ **ಕಾರ್ಯಕ್ರಮ** **ವಾದ** ಬೀಳ್ಕೊಡುವ **ಹಾಗೂ** ದೀಕ್ಷಾವಿಧಿಯ ಸಮಾರಂಭದ ಅಧ್ಯಕ್ಷ ಸ್ಥಾನವನ್ನ ಲಂಕರಿಸಿದ ಪ್ರಿ. ವ್ಹಿ. **ಕೆ. ಗೋಕಾಕ** ಇವರ ಹಸ್ತದಿಂದ **ಕೊಡಿಸಲಾಯಿತು.** ಈ ಶುಭ ಪ್ರಸಂಗದಲ್ಲಿ ಅವರು ಮಾಡಿದ ಭಾಷಣದ ಸಾರವನ್ನು ಪ್ರತ್ಯೇಕವಾಗಿ ಕೊಡಲಾಗಿದೆ.

ಸ್ಕಾಲರಶಿಪ್ ಪರೀಕ್ಷೆಗಳ ಪರಿಣಾಮ

ಕುರುಬಗೊಂಡ: ೨೬— ಪ್ರತಿ ವರುಷದಂತೆ ಈ ಸಲವೂ ಇಲ್ಲಿಯ ಶಾಲೆಯಿಂದ ಹಾಯಸ್ಕೂಲ ಸ್ಕಾಲರ ಶಿಪ್ ಪರೀಕ್ಷೆಗೆ ಕುಳಿತ ೬ ವಿದ್ಯಾರ್ಥಿಗಳಲ್ಲಿ ೫ ವಿದ್ಯಾರ್ಥಿಗಳು; ಮಿಡ್ಲಸ್ಕೂಲ ಸ್ಕಾಲರಶಿಪ್ ಪರೀಕ್ಷೆಗೆ ಕುಳಿತ ೬ ವಿದ್ಯಾರ್ಥಿಗಳಲ್ಲಿ ೪ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ವಿಜಯಪುರ: ೨೭— ಕ. ಗಂ. ಸಾಲೆ ನಂ. ೭ರಿಂದ ಹಾಯಸ್ಕೂಲ ಸ್ಕಾಲರಶಿಪ್ ಪರೀಕ್ಷೆಯಲ್ಲಿ **ಶಿವಾಜಿ ಬಾಳು ಪವಾರ** ಮತ್ತು ಮಿಡಲ್‌ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯಲ್ಲಿ **ಮಾರುತಿ ವ್ಯೆಂಡರಗಿ** ಇವರು ಪಾಸಾಗಿದ್ದು ಹಿಂದುಳಿದ ಭಾಗದಲ್ಲಿರುವ ಈ ಸಾಲೆಯ ಪ್ರಗತಿಯ ನಿದರ್ಶನವಾಗಿದೆ.

ತೇರಗಾಂವ ೨೭:— ಇಲ್ಲಿಯ ಎ. ಬಿ. ಸ್ಕೂಲದ ವಿದ್ಯಾರ್ಥಿ—**ಗೋಪಾಲ ನಾರಾಯಣ ಹೆಗಡೆ ಕಟ್ಟೆ** ಈತನು ಕಾರವಾರ ಕೇಂದ್ರದಲ್ಲಿ ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯಲ್ಲಿ ಮುನಸಿ ಪಲ್ ಶಾಲೆಗಳ ಹೊರಗಿನ ವಿದ್ಯಾರ್ಥಿಗಳಲ್ಲಿ ಜಿಲ್ಹೆಗೆ ಮೂರನೆಯ ಕ್ರಮಾಂಕವನ್ನು ಪಡೆದಿರುವನು.

ತಪಾಪೂರ ೨೭:- ಇಲ್ಲಿಯ ಕ. ಮು. ಸಾಲೆ ನಂ. ೮ ರಲ್ಲಿಯ ವಿದ್ಯಾರ್ಥಿಗಳಾದ **ಹಾಲಭಾವಿ. ಬ. ಫ.** ಮತ್ತು **ಹಾಲಭಾವಿ. ಈ. ಫ.** ಈ ಅಣ್ಣತಮ್ಮಂದಿರು ಹಾಯ್‌ಸ್ಕೂಲ ಹಾಗೂ ಮಿಡ್ಲಸ್ಕೂಲ ಸ್ಕಾಲರಶಿಪ್ ಪರೀಕ್ಷೆಯಲ್ಲಿ ಅನುಕ್ರಮವಾಗಿ ಬೆಳಗಾವ ಕೇಂದ್ರಕ್ಕೆ ಮೊದಲನೆಯ ನಂಬರುಗಳನ್ನು ಪಡೆದಿರುವರು.

ಧಾರವಾಡ ೨೯:— ಇಲ್ಲಿಯ ಸರಕಾರಿ ಟ್ರೇನಿಂಗ ಕಾಲೇಜದ ಪ್ರಾ. ಸ್ಕೂಲಿನ ವಿದ್ಯಾರ್ಥಿಗಳಾದ (೧) **ಸಂಗಪ್ಪ ಶಾಂತವೀರಪ್ಪ** ಛಾಪೀ**ಕಟ್ಟಿ**; (೨) **ಬಸವರಾಜ ನೀಲಕಂಠಪ್ಪ** ಮಾಳಗಿ ಮತ್ತು (೩) **ನೀಲಕಂಠ ಬಸಪ್ಪ ನವಲಗುಂದ** ಇವರು ಹಾಯಸ್ಕೂಲ ಸ್ಕಾಲರಶಿಪ್ ಪರೀಕ್ಷೆಯಲ್ಲಿಯೂ **ರಜನೀಕಾಂತ ಸಂಗಮೇಶ ಗೋದಿ** ಈತನು ಮಿಡ್ಲಸ್ಕೂಲ ಸ್ಕಾಲರಶಿಪ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರು.

ಆಳಗವಾಡಿ ೨೯:
(ನವಲಗುಂದ) ಇಲ್ಲಿಯ ಸಾಲೆಯಿಂದ ಹಾಯಸ್ಕೂಲ ಸ್ಕಾಲರಶಿಪ್ ಪರೀಕ್ಷೆಗೆ ಕುಳಿತ **ಶಿವಪ್ಪ ಕಲ್ಲಪ್ಪ ಕಾಲವಾಡ** ಮತ್ತು **ಭೀಮಪ್ಪ ಬಸಪ್ಪ ಸವದತ್ತಿ** ಇವರಿಬ್ಬರೂ ತೇರ್ಗಡೆ ಹೊಂದಿದ್ದಾರೆ.

ಡ್ರಾಯಿಂಗ ಪರೀಕ್ಷೆಯ ಪರಿಣಾಮ

ಆಳಗವಾಡಿ ೨೯:— ಗದಗ ಕೇಂದ್ರದಲ್ಲಿ ೧೯೫೪ನೆಯ ಅಕ್ಟೋಬರ ತಿಂಗಳಲ್ಲಿ ಜರುಗಿದ ಡ್ರಾಯಿಂಗ ಗ್ರೇಡ ಪರೀಕ್ಷೆಯಲ್ಲಿ ಈ ಸಾಲೆಯಿಂದ ಎಲಿಮೆಂಟರಿ ಗ್ರೇಡ ಪರೀಕ್ಷೆಗೆ ಕುಳಿತ ೯ ವಿದ್ಯಾರ್ಥಿ ಗಳಲ್ಲಿ ೫ ವಿದ್ಯಾರ್ಥಿಗಳೂ ಇಂಟರ ಮೀಡಿಯೇಟ ಪರೀಕ್ಷೆಗೆ ಕುಳಿತ ಒಬ್ಬ ವಿದ್ಯಾರ್ಥಿ ಪಾಸಾಗಿದ್ದಾರೆ.

ಮೆ ಡಾಯರೆಕ್ಟರ ಆಫ್ ಎಜ್ಯುಕೇಶನ್, ಪೂನಾ ಇವರಿಂದ ಮಂಜೂರ ಮಾಡಲ್ಪಟ್ಟ ಪಠ್ಯ ಪುಸ್ತಕಗಳು

೧ ನೆಯ ಇಯತ್ತೆಯಿಂದ ೭ ನೆಯ ಇಯತ್ತೆಯವರೆಗೆ — ಕನ್ನಡ — ೧ ನೆಯ ಜೂನ ೧೯೫೫ ರಿಂದ ೩೧ ನೆಯ ಮೇ ೧೯೫೮ ರ ವರೆಗೆ

ಇಯತ್ತೆ	ಪುಸ್ತಕದ ಹೆಸರು	ಲೇಖಕರು	ಪ್ರಕಾಶಕರು	ಕೊನೆಯದಾಗಿ ನಿರ್ಧರಿಸಿದ ಕ್ರಯ	ಶರಾ
		ಭಾಷಾ		ರೂ. ಆ. ಪೈ.	
೫	ಅಭಿನವ ವಾಚನ ಮಾಲೆ ಐದನೆಯ ಪುಸ್ತಕ, ೧೯೫೫ ಮುದ್ರಣ	ಸಾಸನೂರ ಜಿ. ಶಾಮರಾಯ ಮತ್ತು ಹೋಳಿಕಟ್ಟಿ	ಆರ್. ಜಿ. ಹುಕ್ಕೇರಿ ಪ್ರಕಾಶಕರು, ಮಾಳಮಡ್ಡಿ ಧಾರವಾಡ	೧-೧೦-೬	
೬	ಅಭಿನವ ವಾಚನ ಮಾಲೆ ಆರನೆಯ ಪುಸ್ತಕ, ೧೯೫೫ ಮುದ್ರಣ	,, ...	,,	೧-೧೫-೬	
೭	ಅಭಿನವ ವಾಚನಮಾಲೆ ಏಳನೆಯ ಪುಸ್ತಕ, ೧೯೫೫ ಮುದ್ರಣ	,, ...	,,	೨-೨-೦	
೫	ಗೌರೀಶ ವಾಚನ ಮಾಲೆ ಐದನೆಯ ಪುಸ್ತಕ, ಪ್ರಥಮ ಮುದ್ರಣ ೧೯೫೫	ಭೂಸನೂರಮಠ, ಹಿರೇಮಠ ಬಿ. ಕೃಷ್ಣ ಶರ್ಮಾ ಮತ್ತು ಮಲಕಾಯಿ	ಎಸ್. ಎಸ್. ಕುಲಕರ್ಣಿ ಪ್ರಕಾಶಕರು, ಧಾರವಾಡ	೧-೧೧-೦	
೬	ಗೌರೀಶ ವಾಚನ ಮಾಲೆ ಆರನೆಯ ಪುಸ್ತಕ, ಪ್ರಥಮ ಮುದ್ರಣ, ೧೯೫೫	,, ...	,,	೨-೨-೦	
೭	ಗೌರೀಶ ವಾಚನ ಮಾಲೆ ಏಳನೆಯ ಪುಸ್ತಕ, ಪ್ರಥಮ ಮುದ್ರಣ, ೧೯೫೫	,, ...	,,	೨-೭-೦	
೫	ವಿಜಯ ವಾಚನ ಮಾಲೆ ಐದನೆಯ ಇಯತ್ತೆಗಾಗಿ, ಪ್ರಥಮ ಮುದ್ರಣ ೧೯೫೪....	ಟಿ. ಶಾಮರಾಯರು, ಹುಣಶ್ಯಾಳ, ಹುಯಿಲಗೋಳ ಮತ್ತು ಕುಲಕರ್ಣಿ	ಆಯ್. ಆರ್. ಅಕಳವಾಡಿ ಅ್ಯಂಡ ಸನ್ಸ, ರಾಮಾಶ್ರಯ ಬುಕ್ ಡಿಪೋ ಧಾರವಾಡ	೧-೧೪-೩	
೬	ವಿಜಯ ವಾಚನ ಮಾಲೆ ಆರನೆಯ ಇಯತ್ತೆಗಾಗಿ, ಪ್ರಥಮ ಮುದ್ರಣ ೧೯೫೪....	,, ...	,,	೨-೨-೩	
೭	ವಿಜಯ ವಾಚನ ಮಾಲೆ ಏಳನೆಯ ಇಯತ್ತೆಗಾಗಿ, ಪ್ರಥಮ ಮುದ್ರಣ ೧೯೫೫....	,, ...	,,	೨-೪-೦	

ತ್ರೈ	ಪುಸ್ತಕದ ಹೆಸರು	ಲೇಖಕರು	ಪ್ರಕಾಶಕರು	ಕೊನೆಯದಾಗಿ ನಿರ್ಧರಿಸಿದ ಕ್ರಯ
		ಇತಿಹಾಸ		
	ಐತಿಹಾಸಿಕ ಮಹಾವ್ಯಕ್ತಿಗಳ ಜೀವನ ಕಥೆಗಳು ನಾಲ್ಕನೆಯ ಇಯತ್ತೆಗಾಗಿ, ೧೯೫೪ ಮುದ್ರಣ	.... ಲಕ್ಕುಂಡಿ ಮತ್ತು ಶರ್ಮಾ	ಮ್ಯಾಕ್ಮಿಲನ ಮತ್ತು ಕಂ. ಲಿಮಿ-ಟೆಡ್, ೨೭೬ ಹಾರ್ನಬಿ ರೋಡ, ಮುಂಬಯಿ. ೧	೧-೭-೦
	ಮಹಾಪುರುಷರ ಕಥೆಗಳು ನಾಲ್ಕನೆಯ ಇಯತ್ತೆಗಾಗಿ, ೧೯೫೫ ಮುದ್ರಣ	.... ಪಿ. ನರೇಗಲ್ಲ	ಎಸ್. ಜಿ. ಬಾಪಟ ಮದಿಹಾಳ, ಧಾರವಾಡ	೧-೧೨-೦
	ಐತಿಹಾಸಿಕ ಕಥೆಗಳು ಪ್ರಥಮ ಮುದ್ರಣ, ೧೯೫೫	.... ಅಂಗಡಿ ಮತ್ತು ಯರಗಟ್ಟಿ	ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ	೧-೧೨-೦
	ಆದರ್ಶ ವಿಭೂತಿಗಳು ಪ್ರಥಮ ಮುದ್ರಣ; ೧೯೫೫	.... ಸಿ. ಎಸ್. ಕುಲಕರ್ಣಿ	ಆಯ್. ಆರ್. ಆಕಳವಾಡಿ ರಾಮಾಶ್ರಯ ಬುಕ್ ಡಿಪೋ, ಧಾರವಾಡ	೧-೮-೦
1	ವಿಶಾಲ ಭಾರತ ಇತಿಹಾಸ; ಪ್ರವೇಶ ಪ್ರಥಮ ಸೋಪಾನ ಪ್ರಥಮ ಮುದ್ರಣ, ೧೯೫೪	.... ಶರ್ಮಾ ಮತ್ತು ಕರ್ಕಿ	ಓರಿಯೆಂಟ ಲಾಂಗಮನ್ಸ ಲಿಮಿಟೆಡ್, ನಿಕೊಲ್‌ರೋಡ, ಬಲ್ಲಾರ್ಡ ಇಸ್ಟೇಟ, ಮುಂಬಯಿ. ೧	೧-೬-೦
೬	ವಿಶಾಲ ಭಾರತ ಇತಿಹಾಸ ದ್ವಿತೀಯ ಸೋಪಾನ ಪ್ರಥಮ ಮುದ್ರಣ, ೧೯೫೪	,,	.... ,,	೨-೨-೬
೭	ವಿಶಾಲ ಭಾರತ ಇತಿಹಾಸ ಪ್ರವೇಶ, ತೃತೀಯ ಸೋಪಾನ, ಪ್ರಥಮ ಮುದ್ರಣ, ೧೯೫೪	,,	.... ,,	೨-೦-೦
*	ಭಾರತೀಯ ಇತಿಹಾಸ ಪ್ರಕಾಶ, ಪುಸ್ತಕ ೧ ೧೯೫೫ ಮುದ್ರಣ	.... ಆರ್. ಕೆ. ಲಕ್ಕುಂಡಿ	ಆರ್. ಜಿ. ಹುಕ್ಕೇರಿ ಪ್ರಕಾಶಕರು ಮಾಳಮಡ್ಡಿ ಧಾರವಾಡ	೦-೧೪-೬

(ಮುಂದುವರೆ

* ಕಲ್ಯಾಣ ಕ್ರಾಂತಿ

ಹನ್ನೆರಡನೆಯ ಶತಕ
ಪಲ್ಲಿ ಕ್ರಾಂತಿಯ ಪಥಕ
ಶಿವನಾಜ್ಞೆಯಿಂ ತಳೆದು ಕೈಲಾಸದಿಂದಿಳಿಯಿತಿಳೆಯ ತಡಿಗೆ;
ಸುವಿಚಾರಸಾಗರನು
ಸುವಿವೇಕಜಾಗರನು
ಶಿವಭಕ್ತಿಭಾಂಡಾರಿ ಬಸವಣ್ಣ ತಾನಿದ್ದ ಮುಂದಣೆಡೆಗೆ
ವ್ಯರ್ಥಪುಸ್ತಕಜ್ಞಾನ
ಶುಷ್ಕ ಮಸ್ತಕಜ್ಞಾನ
ಆಚಾರವೇ ಸ್ವರ್ಗವೆಂದರಿದು ಬಸವಣ್ಣ ಭಕ್ತಿಸಿಂಧು
ಆಚಾರ ವೈಭವದ
ಅನುಭವದ ಮಂಟಪದ
ಸ್ಥಾಪನೆಯ ಮಾಡಿದನು ಭವದಲ್ಲಿ ದಿವವನ್ನು ಕಟ್ಟಲೆಂದು.
ಅರಿವಿನಾರಾಧನೆಯ
ಭಕ್ತಿಸಂವೇದನೆಯ
ಸತ್ಯಸಂಶೋಧನೆಯ ಶೂನ್ಯಸಂಪಾದನೆಯ ಸಿದ್ಧಿಗಾಗಿ
ಜ್ಞಾನಕ್ರಿಯಾಬಲವ
ಶಿವಶರಣಸಂಕುಲವ
ನೆರಹಿದನು ಕಲ್ಯಾಣದೊಳು ಲೋಕ ಕಲ್ಯಾಣವೃದ್ಧಿಗಾಗಿ
ನುಡಿದಂತೆ ನಡೆಯುವುದು
ನಡೆದಂತೆ ನುಡಿಯುವುದು
ಬಸವಾದಿಗಳ ಹಾದಿ, ಇವರಿಂದ ಸತ್ಯಜೀವನದ ಕಾಂತಿ
ಅವರ ಭಕ್ತಿಯ ಆಟ
ಅನುಭಾವರಸದೂಟ
ನಮ್ಮ ಬಾಳಿಂಗಳದಿ ಮತ್ತೆ ಮೈದೋರಲ್ಕೆ ಬೇಕು ಕ್ರಾಂತಿ !

ಗಂಗಪ್ಪ ವಾಲಿ,
ಹುಬ್ಬಳ್ಳಿ

* " ಕಲ್ಯಾಣ ಕ್ರಾಂತಿ " ಪುಸ್ತಕದಿಂದ ಆಯ್ದುಕೊಂಡುದು.

Regd No B.5376

ಹೊರಬಿದ್ದಿದೆ ! ಬೆಳಕು ಕಂಡಿದೆ !!

೨ನೆಯ ಆವೃತ್ತಿ | **ಶೈಕ್ಷಣಿಕ ಮನೋವಿಜ್ಞಾನ** | ಪುಟ ೩೦೦

ಬರೆದವರು : **ಡಾ|| ವಿ. ಕೊ. ಜವಳಿ,** M. Ed. Ph. D. M. A. (ಕೊಲಂಬಿಯಾ)

ಬೆಲೆ: ಎರಡು ರೂಪಾಯಿ ಮಾತ್ರ

ಶಿಕ್ಷಣದಲ್ಲಿ ಮತ್ತು ಮನೋವಿಜ್ಞಾನದಲ್ಲಿ ಹೊಸ ಹೊಸ ಸಂಶೋಧನೆಗಳಿಂದ ಕೂಡಿದೆ ಕನ್ನಡಿಗರಿಗೆ ಮತ್ತು ವಿಶೇಷವಾಗಿ ಕನ್ನಡ ಪ್ರಾಥಮಿಕ ಶಿಕ್ಷಕರಿಗೆ ಅತ್ಯುಪಯುಕ್ತ! ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಕೈದೀವಿಗೆ ! ಶೈಕ್ಷಣಿಕ ಅಭ್ಯಾಸಪತ್ರಿಕೆಯ ಎಲ್ಲ ವಿಷಯಗಳೂ ಇದರಲ್ಲಿ ಬಂದಿವೆ. **ತಿಳಿಯಾದ ಸುಂದರ ಶೈಲಿ!** ಈ ಶೈಕ್ಷಣಿಕ ಮನೋವಿಜ್ಞಾನದ ಬಗೆಗೆ ಸ್ವತಂತ್ರವಾಗಿ ಬರೆಯಲ್ಪಟ್ಟ ೩೦೦ ಪುಟಗಳು ಮತ್ತು ೧೧ ಅಧ್ಯಾಯಗಳನ್ನೊಳಗೊಂಡ ಪುಸ್ತಕ ಕನ್ನಡದಲ್ಲಿ ಇದೊಂದೇ

ಪುಸ್ತಕವು ಪ್ರಕಟವಾಗಿದೆ.

ಪ್ರಕಾಶಕರು :

ಆಕಳವಾಡಿ ಬುಕ್ ಡಿಪೋ, ಧಾರವಾಡ

ಅವರಿಗೆ ಬರೆದು ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ಪುಟ ೨೮೦) **ಮೂಲ ಶಿಕ್ಷಣ** (**ಬೆಲೆ: ೩-೦-೦**

ಲೇಖಕರು : **ಶ್ರೀ. ಮ. ಗು. ಹಂದ್ರಾಳ,** ಬಿ. ಎ., (ಆನರ್ಸ) ಬಿ. ಟಿ.

(ಪ್ರಿನ್ಸಿಪಾಲ, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ)

ಮೂಲ ಶಿಕ್ಷಣದ ಸಮಗ್ರ ವಿಚಾರಗಳನ್ನೊಳಗೊಂಡ ಅಪೂರ್ವ ಗ್ರಂಥವು ಇದೊಂದೇ. ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯಗಳಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗಂತೂ ಇದು ಹಸ್ತಕ ಹೊತ್ತಿಗೆಯಾಗಿದೆ. **ಮೂಲ** ಶಿಕ್ಷಣದ ಬಗೆಗೆ ತಿಳಿದುಕೊಳ್ಳಲು ಅಪೇಕ್ಷಿಸುವ ಶಿಕ್ಷಣ-ಪ್ರೇಮಿಗಳಿಗೆ ಕೈಗನ್ನಡಿಯಾಗಿದೆ. ಈಗಾಗಲೇ ಅನೇಕ ಶಿಕ್ಷಣ ತಜ್ಞರ ಮೆಚ್ಚುಗೆಗೆ ಪಾತ್ರವಾಗಿದೆ. ಇಂದೇ ಕೆಳಗಿನವರಿಗೆ ಬರೆದು ತರಿಸಿರಿ, ಅನುಭವಾಮೃತವನ್ನು ಸವಿಯಲು ಸಜ್ಜಾಗಿರಿ.

ಆಕಳವಾಡಿ ಬುಕ್ ಡಿಪೋ, ಧಾರವಾಡ

Printed by M. A. Kamat B. Sc. at Jai Hind Art Press Dharwar. Edited and Published by S. P. Patil B. M. Shintri, S. R. Tatti, & Smti. P. A. Bhaskar. at the Kannada Prathamik Shikshan Office. Govt. Training College for Men, Dharwar.

1955-56

ಸ್ಥಾಪನೆ : ೧೮೬೫

ಸಂಸ್ಥಾಪಕರು:



ಜೀವನ ಶಿಕ್ಷಣ ಪತ್ರಿಕೆಯ
ಶತಮಾನೋತ್ತರ ಬೆಳ್ಳಿ ಹಬ್ಬದ
ಪುಸ್ತಕ ಪ್ರದರ್ಶನ ೧೯೬೯

1955 56
ಶತಮಾನೋತ್ತರ ಬೆಳ್ಳಿ ಹಬ್ಬ
(ಏಪ್ರಿಲ್ ೧೯೬೯ ರಿಂದ)
ವರ್ಷ 1955

ಕೆ. ಚನ್ನಬಸಪ್ಪನವರು
(೧೮೩೩-೧೮೮೧)
ನೆಲದ ಸಂಪುಟ

ಕನ್ನಡ
ಪ್ರಾಥಮಿಕ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯುಟಿ ಚನ್ನಬಸಪ್ಪ ವೃತ್ತ, ರೋಡ್ಡರಸ್ತೆ, ಧಾರವಾಡ - ೮

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು: **ಶ್ರೀ ಎಸ್. ಪಿ. ಪಾಟೀಲ**



ಶ್ರೀ ಶಿವರಾಮ ಕಾರಂತರು

೩೭ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರು.

ಬಿಡಿ ಪತ್ರಿಕೆ
೦—೬—೦

ಜೂನ ೧೯೫೫

ವಾ. ಚಂದಾ
೪—೦—೦

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಲ:

ಸಂಚಾಲಕರು: **ಶ್ರೀ ಎಚ್. ಎಮ್. ಕಾಳಿ**, ಬಿ.ಎ., (ಆನರ್ಸ) ಬಿ.ಟಿ., ಡಿ.ಪಿ.ಇಡಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು: **ಶ್ರೀ ಎಸ್. ಪಿ ಪಾಟೀಲ**, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಸಹಸಂಪಾದಕರು:

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ., ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ.
ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೧ | **ಜೂನ, ೧೯೫೫** | **ಸಂಚಿಕೆ ೧**

ಪರಿವಿಡಿ

೧. ಸಂಪಾದಕೀಯ ೧
೨. ಶಿಕ್ಷಣ ಮತ್ತು ಮನಸ್ಸಿನ ಶಾಸ್ತ್ರ: ಶ್ರೀ ತಟ್ಟಿ ಶಾಮರಾಯರು ೫
೩. ಮನೆಗೆಲಸದ ಹಾಡುಗಳು:- ಡಾ. ಬಿ. ಎಸ್. ಗದ್ದಗಿಮಠ ೮
೪. ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಪ್ರಕಟನೆ ೧೪
೫. ಶ್ರೀ ಕುವೆಂಪು ಅವರ ಶುಭಾಶಯ ೧೫
೬. ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ: ಶ್ರೀ ಶಿಂತ್ರಿ ಬಸಪ್ಪನವರು ೧೬
೭. ಸಮಾಜ ವಿಕಾಸ ಕೇಂದ್ರಗಳು: ಶ್ರೀ ಫ. ಚ. ಉಣಕಲ್ಲ ೧೯
೮. ಮಂಜೂರಾದ ಪಠ್ಯಪುಸ್ತಕಗಳು ೨೧
೯. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೭

ಸಂಪಾದಕೀಯ

“ಪ್ರಾಥಮಿಕ ಶಿಕ್ಷಣ”ದ ಹೊಸ ವರುಷ

ಇಂದಿಗೆ **ಪ್ರಾಥಮಿಕ ಶಿಕ್ಷಣವು** ತನ್ನ ದೀರ್ಘಾಯುಷ್ಯದ ೯೦ ವರುಷಗಳನ್ನು ದಾಟಿ ೯೧ನೆಯ ವರುಷದಲ್ಲಿ ಕಾಲಿಡುತ್ತದೆ. ನಮ್ಮ ಸಂಸ್ಥೆಯು ಬೆಳಗಾವಿಯಲ್ಲಿದ್ದಾಗ ೧೮೭೫ ನೆಯ ಸಾಲಿನ ಮೇ ತಿಂಗಳಲ್ಲಿ “ಮಠಪತ್ರಿಕೆ” ಎಂಬ ಹೆಸರಿನಿಂದ ಈ ಪತ್ರಿಕೆಯು ಜನ್ಮ ತಾಳಿತು. ಮುಂದೆ ಎರಡು ವರುಷಗಳ ನಂತರ ಹೆಸರಿನಲ್ಲಿ ಬದಲಾವಣೆಯಾಗಿ “**ಕನ್ನಡ ಶಾಲಾಪತ್ರಿಕೆ**” ಎಂದು ಕರೆಯಲ್ಪಡಹತ್ತಿತು. ಇದೇ ಹೆಸರು ೧೯೨೯ ರ ವರೆಗೆ ಉಳಿದು ಅಂದಿನಿಂದ ಈ ಪತ್ರಿಕೆಗೆ “**ಕನ್ನಡ ಪ್ರಾಥಮಿಕ ಶಿಕ್ಷಣ**” ಎಂಬ ಈಗಿನ ಹೆಸರು ಕೊಡಲ್ಪಟ್ಟಿತು. ಮೊದಲಿನ ೬. ವರುಷಗಳ ವರೆಗೆ ಈ ಪತ್ರಿಕೆಯು ಲಿಥೊ ಪದ್ಧತಿಯಿಂದ ಕೈಯಿಂದಲೇ ಬರೆಯಲ್ಪಟ್ಟು ಮುದ್ರಿತವಾಗುತ್ತಿತ್ತು. ೧೮೮೧ ನೆಯ ಸಾಲಿನ ಅಕ್ಟೋಬರದಿಂದ ಈಗಿನಂತೆ ಛಾಪಿಸಲ್ಪಡಹತ್ತಿ ೧೮೮೭ ರಿಂದ ಇಲ್ಲಿಯೇ ಪ್ರಸಿದ್ಧಿಸಲ್ಪಡಹತ್ತಿತು. ಈ ರೀತಿಯಾಗಿ ಈ ಪತ್ರಿಕೆಯು ನಮ್ಮ ಸಂಸ್ಥೆಯ ಮುಖ್ಯ ಘಟಕವಾಗಿ ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಆಶ್ರಯದಲ್ಲಿ ೯೦ ವರುಷಗಳ ದೀರ್ಘಕಾಲದವರೆಗೆ ಕನ್ನಡ ನಾಡು ನುಡಿಗಳ ಸೇವೆಯನ್ನೂ ಪ್ರಾಥಮಿಕ ಶಿಕ್ಷಕರಿಗೆ ಮಾರ್ಗದರ್ಶನವನ್ನೂ ಮಾಡುತ್ತ ಬಂದಿದೆ. ಹಿಂದಿನ ಹಿರಿಯರು ತೋರಿಸಿಕೊಟ್ಟ ದಾರಿಯಲ್ಲಿಯೇ ನಾವು ಸಹ ಮುಂದುವರೆಯುವೆವು. ಈ ಪತ್ರಿಕೆಯು ನಮ್ಮ ಕಡೆಗೆ ಬಂದು ಒಂದು ವರುಷವಾಯಿತು. ಕಳೆದ ವರುಷದಲ್ಲಿ ನಾವು ಇಟ್ಟುಕೊಂಡ ಕೆಲವು ಉದ್ದೇಶಗಳು ಸಫಲವಾಗಿವೆಯೆಂದು ಓದುಗರಿಗೆ ತಿಳಿಸಲು ನಮಗೆ ಸಂತೋಷ. ಇದೆಲ್ಲಕ್ಕೂ ಶೈಕ್ಷಣಿಕ ಸಂಸ್ಥೆಗಳೂ ಶಿಕ್ಷಣಕಾರ್ಯದಲ್ಲಿ ತೊಡಗಿದ ಶಿಕ್ಷಕರೂ ಕಾರಣರು. ಯಾಕಂದರೆ ಪತ್ರಿಕೆಗಳ ಆಗುಹೋಗುಗಳು ಆರ್ಥಿಕ ಪರಿಸ್ಥಿತಿಯನ್ನೂ ಹಾಗು ಲೇಖಕರ ಸಹಕಾರಗಳನ್ನೂ ಅವಲಂಬಿಸಿವೆ. ಈ ಎರಡೂ ದೃಷ್ಟಿಯಿಂದ ಕಳೆದ ವರ್ಷದಲ್ಲಿ ನಮಗೆ ಸಹಾಯ ಸಹಕಾರಗಳು ದೊರೆತುದು ನಮ್ಮ ಭಾಗ್ಯ. ನಮ್ಮ ಪತ್ರಿಕೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ದೃಷ್ಟಿಯಿಂದ ಕರ್ನಾಟಕದ ಬೇರೆ ಬೇರೆ ಜಿಲ್ಹೆಗಳ ಶಾಲಾ ಸಮಿತಿಗಳ ಸಂಚಾಲಕರಿಗೆ ಬಿನ್ನಹ ಮಾಡಿದ ಪ್ರಕಾರ ಸಹೃದಯ ಅಧಿಕಾರಿಗಳೂ, ಸಂಚಾಲಕರೂ ನಮ್ಮ ವಿನಂತಿಯನ್ನು ಮನ್ನಿಸಿ ಹೆಚ್ಚು ಪ್ರತಿಗಳನ್ನು ತರಿಸಲು ಒಪ್ಪಿದ್ದರಿಂದ ನಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಿಸಿತು. ಎಂದಿಗಿಂತಲೂ ಹೆಚ್ಚು ಪ್ರತಿಗಳು ಶಾಲೆಗಳಿಗೆ ಹೋಗುತ್ತವೆ. ಈಗ ೩೦೦೦ ಪ್ರತಿಗಳು ಛಾಪಿಸಲ್ಪಟ್ಟರೂ ಈ ಪತ್ರಿಕೆಯನ್ನು ತರಿಸದ ಅನೇಕ ಶಾಲೆಗಳು ಉಳಿದಿವೆ. ಅಂಥ ಶಾಲೆಗಳಿಂದ ಬೇಡಿಕೆಗಳು ಬರಹತ್ತಿವೆ. ಈ ರೀತಿಯಾಗಿ ನಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಿಸಿದ್ದರಿಂದ ಹೊದಿಕೆಯ ಹಾಗು ಒಳಗಿನ ಪುಟಗಳ ಬಗ್ಗೆ ಹೆಚ್ಚು ಹಣವನ್ನು ಖರ್ಚುಮಾಡಲು ಸಾಧ್ಯವಾಯಿತು. ಪತ್ರಿಕೆಯು ಹೆಚ್ಚು ಸುಂದರ

ವಾಗಿ ಕಾಣಿಸಹತ್ತಿತು. ಲೇಖಕರಿಗೆ ತಕ್ಕಮಟ್ಟಿಗೆ ವೇತನವನ್ನು ಕೊಡಲು ಸಾಧ್ಯವಾಯಿತು. ಲೇಖಕರಿಗೆ ಯೋಗ್ಯ ರೀತಿಯಲ್ಲಿ ವೇತನವನ್ನು ಕೊಟ್ಟರೆ ನಾಮಾಂಕಿತ ಬರೆಹಗಾರರೂ, ಅನುಭವಿಕ ಶಿಕ್ಷಕರೂ, ಶಿಕ್ಷಣ ತಜ್ಞರೂ, ತಮ್ಮ ಅಮೌಲ್ಯವಾದ ವೇಳೆಯನ್ನು ಖರ್ಚುಮಾಡಿ ಲೇಖಗಳನ್ನು ಬರೆಯಲು ಮುಂದೆ ಬರಬಹುದೆಂಬ ಭರವಸೆ ನಮಗುಂಟು. ಈ ಗುರಿಯನ್ನು ಈ ವರ್ಷ ಸಾಧಿಸಲು ಪ್ರಯತ್ನಿಸುವೆವು. ನಮ್ಮ ಪತ್ರಿಕೆಯ ಸಲುವಾಗಿ ಶಿಕ್ಷಕ-ಶಿಕ್ಷಕಿಯರು ಒಳ್ಳೆ ಆತುರತೆಯಿಂದ ದಾರಿ ನೋಡುವಷ್ಟು ಉಪಯುಕ್ತತೆಯನ್ನು ತಂದುಕೊಡುವ ಹೊಣೆ ನಮ್ಮದಾಗಿದ್ದರೂ ಲೇಖಕರ ಪರಿಶ್ರಮವಿಲ್ಲದೆ ನಮಗಾವುದೂ ಸಾಧಿಸದು. ಈ ದೃಷ್ಟಿಯಿಂದ ಜಿಲ್ಹಾ ಹಾಗೂ ನಗರಸಭೆಯ ಶಾಲಾ ಸಮಿತಿಗಳ ಸಂಚಾಲಕರ ಆರ್ಥಿಕ ನೆರವನ್ನು ಬೇಡುವಂತೆ ಲೇಖಕರ ಅನುಭವದ ಲಾಭ ವನ್ನೂ ಬಯಸುವೆವು. ಈ ಬಗ್ಗೆ ಅವರ ಸೂಚನೆಗಳನ್ನೂ ಗಮನಿಸುವೆವು. ಹಲವಾರು ಶಿಕ್ಷಣ ತಜ್ಞರು ನೂರಾರು ಶಿಕ್ಷಣಾಧಿಕಾರಿಗಳೂ ಸಾವಿರಾರು ಶಿಕ್ಷಕ ಶಿಕ್ಷಕಿಯರೂ ಶಿಕ್ಷಣ ಕಾರ್ಯದಲ್ಲಿ ತೊಡಗಿದಾಗ ತಿಂಗಳಲ್ಲಿ ಮೂರು ನಾಲ್ಕು ಉತ್ತಮ ಲೇಖಗಳು ಸಹ ಬರದಿರುವದು ಶಿಕ್ಷಣಕ್ಕೆ ಒಪ್ಪದು, ಶಿಕ್ಷಕರಿಗೆ ಸಲ್ಲದು. ಆದ್ದರಿಂದ ದಯಾಳುಗಳಾದ ಲೇಖಕರಿಗೆ ಮತ್ತೊಮ್ಮೆ ಒಳ್ಳೆ ಕಳಕಳಿಯಿಂದ ಬಿನ್ನವಿಸಿ ಅವರಿಂದ ಉತ್ತಮ ಲೇಖಗಳನ್ನು ಬೇಡಿ ಬಯಸುತ್ತೇವೆ. ಕಳೆದ ವರುಷ ನಮ್ಮ ಪತ್ರಿಕೆಯ ಆರ್ಥಿಕ ಪರಿಸ್ಥಿತಿಯು ಬಹುಮಟ್ಟಿಗೆ ಸುಧಾರಿಸುವಂತೆ ಅನುಕೂಲ ಮಾಡಿಕೊಟ್ಟ ಶಾಲಾ ಸಮಿತಿಗಳಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಶ್ರೀ ಶಿವರಾಮ ಕಾರಂತರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು

ಇದೇ ತಿಂಗಳ ದಿನಾಂಕ ೧೦, ೧೧ ಹಾಗು ೧೨ ರಂದು ಮೈಸೂರಿನಲ್ಲಿ ಸೇರಲಿರುವ ೩೭ ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಪದಕ್ಕೆ ಶ್ರೇಷ್ಠ ಸಾಹಿತಿಗಳಾದ ಶ್ರೀ ಶಿವರಾಮ ಕಾರಂತರು ಆಯ್ಕೆ ಹೊಂದಿದ್ದುದು ಕನ್ನಡಿಗರಿಗೆಲ್ಲ ತುಂಬಾ ಸಂತೋಷದ ಸಂಗತಿಯಾಗಿರಲು ಸಾಕು. ಕನ್ನಡ ಸಾಹಿತ್ಯದಲ್ಲಿ ಈ ಮಹನೀಯರ ಸ್ಥಾನ ವಿಶಿಷ್ಟವಾದುದು. ಮೂವತ್ತಕ್ಕೂ ಮೀರಿದ ವರುಷಗಳಿಂದ ಕನ್ನಡ ನಾಡಿನ ಸಾಹಿತ್ಯ ಸಂಸ್ಕೃತಿ ಗಳ ಬೆಳವಣಿಗೆಗೆ ನಾನಾರೀತಿಯಿಂದ ದುಡಿದಿದ್ದಾರೆ. ಅವರನ್ನು ಅರಿಯದ ಕನ್ನಡಿಗರು ತೀರವಿರಳ. ಮೇಲಾಗಿ ತಾವೇ ತಮ್ಮ ಪರಿಚಯವನ್ನು 'ಹುಚ್ಚು ಮನಸ್ಸಿನ ಹತ್ತುಮುಖಗಳು' ಎಂಬ ಪುಸ್ತಕದಿಂದ ಓದುಗರೆಲ್ಲರಿಗೂ ತಮ್ಮ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಮಂಗಳೂರ ಜಿಲ್ಹೆಯ ಕುಂದಾಪೂರ ತಾಲೂಕಿನಲ್ಲಿ ಹುಟ್ಟಿ ಮಂಗಳೂ ರಲ್ಲಿ ಶಿಕ್ಷಣ ಹೊಂದಿ ಪುತ್ತೂರಿನಲ್ಲಿ ನೆಲೆಸಿ ಸಾಹಿತ್ಯ, ಶಿಕ್ಷಣ ಹಾಗೂ ಸಂಸ್ಕೃತಿಗಳ ಬೆಳವಣಿಗೆಯ ಮುಖಾಂತರ ಸಮಾಜೋದ್ಧಾರದ ಪವಿತ್ರವಾದ ಸೇವೆಯಲ್ಲಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದಾರೆ. ಅವರ ಬರಹ ಬಹು ಬಗೆಯಿಂದ ಕೂಡಿದೆ. ಕತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ ಹರಟೆ ಮುಂತಾದವುಗಳಿಂದ ಕನ್ನಡ ಮ್ಮನ ಭಾಂಡಾರವನ್ನು ವೃದ್ಧಿಗೊಳಿಸಿದ್ದಾರೆ. ವಿಶ್ವವನ್ನು ಸುತ್ತಾಡಿ ವಿಶ್ವದ ಚಿತ್ರ ವಿಚಿತ್ರಗಳನ್ನು ಮನಗಂಡು ಮಕ್ಕಳಿಸಲುವಾಗಿ **ಬಾಲಪ್ರಪಂಚ**ವನ್ನು ಸೃಷ್ಟಿಸಿದ ಮಹನೀಯರು ಶಿಕ್ಷಣ ಕ್ಷೇತ್ರದಲ್ಲಿಯೂ ಸಹ ಪ್ರವೇಶಿಸಿ ಪಠ್ಯ ಪುಸ್ತಕಗಳನ್ನೂ ನಿಘಂಟನ್ನೂ ರಚಿಸಿದರು. ನಾಟ್ಯ, ನೃತ್ಯ, ಹಾಗು ಸಂಗೀತ ಮುಂತಾದ ಲಲಿತ ಕಲೆಗಳಲ್ಲಿಯೂ ಖ್ಯಾತಿ ಹೊಂದಿದರು. ಮಾಸಪತ್ರಿಕೆಯ ಸಂಪಾದಕತ್ವವನ್ನೂ ವಹಿಸಿದ್ದರು. ರಾಷ್ಟ್ರೀಯ ಚಳುವಳಿಯಲ್ಲಿಯೂ ಧುಮುಕಿದರು. ಸಮಾಜ ಸುಧಾರಕರಾಗಿಯೂ ಮಾರ್ಗದರ್ಶನ ಮಾಡಿದರು. ಈ ಪ್ರಕಾರ ಸಾಹಿತ್ಯ ದೇವಿಯ ಸರ್ವಾಂಗಗಳಿಗೂ ಸುಂದರವಾದ ಆಭರಣಗಳನ್ನಿಟ್ಟು ದೇವಿಯ ಸೌಂದರ್ಯವನ್ನು ಬೆಳೆಯಿಸಿ ಕೀರ್ತಿಪಡೆದ ಅಗ್ರಗಣ್ಯ ಸಾಹಿತಿ ಶ್ರೀ ಕಾರಂತರು ಈ ಸಾರೆ ಜರುಗುವ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಗಾದಿಯನ್ನೇರುವದು ಯಾರಿಗೆ ತಾನೇ ಹೆಮ್ಮೆಯ ವಿಷಯವಾಗದು? ಅವರ ಆಯ್ಕೆಯನ್ನು ಕನ್ನಡ ಕುಲವೆಲ್ಲವೂ ಆದರ ವಿಶ್ವಾಸಗಳಿಂದ ಸ್ವಾಗತಿ ಸದಿರದು, ಅವರ ಮಾರ್ಗದರ್ಶನದಲ್ಲಿ ಕನ್ನಡ ಸಾಹಿತ್ಯ ರಥೋತ್ಸವವು ವಿಜೃಂಭಣೆಯಿಂದ ಸಾಗಲೆಂದು ಈ ಪತ್ರಿಕೆಯು ಹಾರೈಸುತ್ತದೆ.

ಪ್ರಾಥಮಿಕ ಶಿಕ್ಷಣ

ಶಿಕ್ಷಣ ತಜ್ಞರ ಅಭಿಪ್ರಾಯಗಳು

ಹೋದ ತಿಂಗಳ ದಿನಾಂಕ ೨೮ ರಂದು ಕುಲಮನಿ ನಗರ (ಪುರಿ)ದಲ್ಲಿ ಅಖಿಲ ಭಾರತದ ಪ್ರಾಥಮಿಕ ಶಿಕ್ಷಕರ ಸಂಘದ ಎರಡನೆಯ ಅಧಿವೇಶನವನ್ನು ಉದ್ಘಾಟಿಸುತ್ತ ನಮ್ಮ ರಾಜ್ಯದ ಹಿಂದಿನ ಮುಖ್ಯ ಹಾಗೂ ಶಿಕ್ಷಣ ಮಂತ್ರಿಗಳಾದ **ಶ್ರೀ ಬಿ. ಜಿ. ಖೇರರವರು** ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸಭೆಗೆ ಸೂಚಿದಸಿರು. ಹದಿನಾಲ್ಕು ವಯಸ್ಸಿನೊಳಗಿದ್ದ ಮಕ್ಕಳ ಪುಕ್ಕಟೆ ಹಾಗೂ ಒತ್ತಾಯದ ಶಿಕ್ಷಣದ ವಿಷಯದಲ್ಲಿ ನಿರ್ದಿಷ್ಟವಾದ ಗುರಿ ಹಾಗೂ ಐಕ್ಯತೆಗಳಿಂದ ಕೂಡಿದ ಸುಸ್ಪಷ್ಟವಾದ ರಾಷ್ಟ್ರೀಯ ಧೋರಣೆಯು ಇಲ್ಲದಾಗಿದೆಯೆಂದು ತಿಳಿಸಿದರು. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಹಣ ಮೀಸಲಾಗಿಡಬೇಕೆಂದು ಒಕ್ಕೂಟ ಸರಕಾರಕ್ಕೆ ಕೇಳಿಕೊಂಡರು. ಶಿಕ್ಷಣವು ರಾಜ್ಯ ಸರಕಾರಗಳಿಗೆ ಸಂಬಂಧಿಸಿದ್ದರೂ ಕೇಂದ್ರ ಸರಕಾರವು ಪ್ರಾಥಮಿಕ ಶಿಕ್ಷಣದ ಕ್ಷೇತ್ರವನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ಪ್ರತಿಯೊಬ್ಬ ಮಗುವಿಗೆ ಅತಿ ಕಡಿಮೆಯೆಂದರೆ ಎಷ್ಟು ಶಿಕ್ಷಣಬೇಕೆಂಬುದನ್ನು ನಿರ್ಧರಿಸಬೇಕು ಮತ್ತು ಅಷ್ಟನ್ನು ಪಡೆಯುವ ಹಕ್ಕು ಪ್ರತಿಯೊಬ್ಬ ಮಗುವಿಗೆ ಇರುವಂತೆ ನೋಡಿಕೊಳ್ಳಬೇಕೆಂದು ಹೇಳಿದರು. ವ್ಯಾಪಾರಿ ಕೂಟಗಳಂತೆ ಹೆಚ್ಚು ಪಗಾರ ಕಡಿಮೆ ಕೆಲಸವೆಂಬ ಭಾವನೆಯಿಂದ ಮಾತ್ರ ಶಿಕ್ಷಕರು ದುಡಿಯ ಬಾರದು. ಜೀವನಕ್ಕೆ ಅತ್ಯವಶ್ಯವಾದ ವೇತನ ಹಾಗೂ ನೌಕರಿಗೆ ಅನುಕೂಲವಾದ ಪರಿಸ್ಥಿತಿ ಬೇಡಿದರೂ ತಾವು ಕೇವಲ ಕೂಲಿಕಾರರಾಗಿರದೆ ರಾಷ್ಟ್ರದ ನಿರ್ಮಾಪಕರೆಂಬುದನ್ನು ಶಿಕ್ಷಕರು ಮರೆಯಬಾರದೆಂದರು. ರಾಷ್ಟ್ರ ಹಾಗೂ ಮಾನವನ ಹಿತದೃಷ್ಟಿಯಿಂದ ಲೋಕ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸುವ ಕಾರ್ಯದಲ್ಲಿ ಶಿಕ್ಷಕರ ಸಂಘವು ತೊಡಗಬೇಕೆಂದು ಸೂಚಿಸಿದರು. ಹಳ್ಳಿ ಹಾಗೂ ಪಟ್ಟಣಗಳಲ್ಲಿಯ ಶಿಕ್ಷಣ ಕ್ರಮವು ಬೇರೆ ಬೇರೆಯಾಗಿರುವದು ನಿರ್ವಿವಾದವಾಗಿದೆಯೆಂದು ಹಳ್ಳಿಗಳಲ್ಲಿಯ ಮಕ್ಕಳಿಗೆ ನೈತಿಕ ಹಾಗೂ ಆಧ್ಯಾತ್ಮಿಕ ಜ್ಞಾನವನ್ನು ಮಾಡಿಕೊಡಲಿಕ್ಕೆ ವರ್ಧಾಯೋಜನೆಯು ಅತ್ಯಾನುಕೂಲವಾಗಿದೆಯೆಂದೂ ಹೇಳಿ ಜೀವನ ಶಿಕ್ಷಣ ಶಾಲೆಗಳು ಯಶಸ್ವಿ ರೀತಿಯಿಂದ ನಡೆಯಬೇಕಾದರೆ ಕೆಳಗಿನ ಸಂಗತಿಗಳು ಅವಶ್ಯವಾಗಿ ಪೂರೈಸಲ್ಪಡಬೇಕೆಂದರು.

೧) ಪ್ರಾಥಮಿಕ ಶಿಕ್ಷಣದ ಸಲುವಾಗಿ ಸರಕಾರವು ಅಧಿಕ ಧನವನ್ನು ವೆಚ್ಚಮಾಡಬೇಕು.

೨) ಸದೃಢರೂ, ಬುದ್ಧಿವಂತರೂ ಹಾಗೂ ಪ್ರಾಮಾಣಿಕರಾದ ಮಕ್ಕಳು ಸ್ವಚ್ಛವಾದ ಮನೆ ಅಗಲವಾದ ರಸ್ತೆ ಪೂಲು ಹಾಗೂ ಆಣೆ ಕಟ್ಟುಗಳಿಗಿಂತ ಕಡಿಮೆಯೆಂದು ತಿಳಿಯಬಹುದೇ ?

೩) ಜೀವನ ಶಿಕ್ಷಣ ಶಾಲೆಗಳಿಗೆ ಯೋಗ್ಯವಂತರೂ ಸಾಮರ್ಥ್ಯವುಳ್ಳವರೂ ಆದ ಶಿಕ್ಷಕರನ್ನೇ ಆರಿಸಬೇಕು. ಶಿಕ್ಷಕರಿಗೆ ಚಿಕ್ಕಪುಟ್ಟ ಪೋಲಿಸ ನೌಕರರಿಗಿಂತಲೂ ಹೆಚ್ಚಿನ ಗೌರವ, ಕಾರಕೂನರಿಗಿಂತ ಹೆಚ್ಚಿನ ಸಂಬಳ ಸಿಗಬೇಕು. ಶಿಕ್ಷಕರನ್ನು ಆರಿಸುವಾಗ ಜಾತಿ ಪಂಥ ಹಾಗೂ ಪಕ್ಷಗಳ ಕಡೆಗೆ ನೋಡದೇ ಅವರ ವಿದ್ಯಾಸ್ವಭಾವ ಹಾಗೂ ಸಾಮರ್ಥ್ಯಗಳನ್ನೇ ಮಾತ್ರ ನೋಡಬೇಕು. ಸಮಾಜ ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ ಶಿಕ್ಷಕರಾಗಿ ದುಡಿಯಲು ಸಾಧ್ಯವಿದ್ದ ಮಟ್ಟಿಗೆ ಹೆಣ್ಣುಮಕ್ಕಳನ್ನು ನೇಮಿಸಬೇಕೆಂದು ಸೂಚಿಸಿದರು.

ಕೇಂದ್ರ ಸರಕಾರದ ಶಿಕ್ಷಣ ಶಾಖೆಯ ಕಾರ್ಯದರ್ಶಿಗಳಾದ **ಪ್ರೊ. ಹುಮಾಯೂನ ಕಬೀರರು** ಹೋದ ತಿಂಗಳ ದಿನಾಂಕ ೨೮ರಂದು ಅದೇ ಸಭೆಯಲ್ಲಿ ಭಾಷಣಮಾಡುತ್ತ ಪ್ರಾಥಮಿಕ ಶಿಕ್ಷಕರ ಪಗಾರದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದರು. ಸಮಾಜದಲ್ಲಿ ನಿಜವಾದ ಪ್ರಗತಿಯಾಗಬೇಕಾದರೆ ಶಿಕ್ಷಕರಿಗೆ ಯೋಗ್ಯ ಗೌರವವು ಸಲ್ಲುವದು ಅವಶ್ಯವೆಂದೂ ಅಂಥ ಗೌರವವು ಇಲ್ಲದಿರುವದಕ್ಕೆ ಈಗಿನ ಅವರ ಕಡಿಮೆ ಪಗಾರವೇ ಕಾರಣವೆಂದು ಅವರು ಸೂಚಿಸಿದರು. ತಂದೆ ತಾಯಿಗಳೂ ಪಾಲಕರೂ ಶಿಕ್ಷಕರನ್ನು ತುಚ್ಛೀಕರಿಸಿ ನೋಡುವಾಗ ಮಕ್ಕಳ ಶಿಕ್ಷಣವು ಸರಿಯಾಗಿ ಸಾಗಲಾರದೆಂದು ಅವರು ಹೇಳಿದರಲ್ಲದೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ

ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಿಕ್ಷಕರಿಗೆ ೫೦ ರೂ. ಗಿಂತಲೂ ಹೆಚ್ಚು ವೇತನ ದೊರೆಯಬೇಕೆಂತಲೂ ಆಶಿಸಿದರು. ಹಿಂದಿನ ಕಾಲದಲ್ಲಿ ಶಿಕ್ಷಕರಿಗೆ ಸಮಾಜದಲ್ಲಿ ಒಳ್ಳೆಯ ಗೌರವಸ್ಥಾನವಿತ್ತೆಂದೂ ಆದರಿಂದ ಮಕ್ಕಳ ತನ್ಮೂಲಕ ಸಮಾಜದ ಶಿಕ್ಷಣದ ಮೇಲೆ ಸುಪರಿಣಾಮವಾಗುತ್ತಿತ್ತೆಂದೂ ಹಿಂದುಸ್ತಾನದ ಶಿಕ್ಷಣದ ಇತಿಹಾಸವನ್ನು ಓದಿದವರೆಲ್ಲರಿಗೂ ಗೊತ್ತುಂಟು. ಸಮಾಜ ಹಾಗೂ ಸರಕಾರ ದಹಿರಿಯ ವ್ಯಕ್ತಿಗಳು ಪ್ರಾಥಮಿಕ ಶಿಕ್ಷಕರ ಸಂಬಳವನ್ನು ಹೆಚ್ಚಿಸುವ ಬಗ್ಗೆ ಮಾತನಾಡುತ್ತಿರುವದು ಸಹಾನುಭೂತಿಯ ದ್ಯೋತಕವಾಗಿದ್ದರೂ ಶಿಕ್ಷಕರಾದವರೆಲ್ಲರೂ ಪಗಾರವನ್ನು ಹೆಚ್ಚಿಸುವದರಿಂದ ಶಿಕ್ಷಕರಿಗೆ ಸಮಾಜದಲ್ಲಿ ನಿಜವಾದ ಗೌರವವೆಷ್ಟು ಹೆಚ್ಚಾಗುವದೆಂಬುದನ್ನು ಸುಸ್ಪಷ್ಟವಾಗಿ ತಿಳಿದುಕೊಳ್ಳುವದತ್ಯಗತ್ಯ. ವ್ಯಕ್ತಿಯ ಗೌರವವನ್ನು ತಾನುಗಳಿಸುವ ಪಗಾರದ ಅಳೆಗೋಲಿನಿಂದ ನೋಡುವವರನೇಕರಿದ್ದರೂ ನಿಜವಾದ ಗೌರವವು ಎಲ್ಲಿರುವದು, ಎಂತು ಲಭಿಸುವದು ಎಂಬ ಜಟಿಲ ಸಮಸ್ಯೆಗಳನ್ನು ಶಿಕ್ಷಕರಾದವರೇ ಬಿಡಿಸುವದು ವಿಹಿತವೆಂದು ಕಾಣುತ್ತದೆ. ತಮ್ಮ ಕಾರ್ಯಕದಲ್ಲಿ ಶಿಕ್ಷಕರಿಗೆ ಇರುವ ಶ್ರದ್ಧೆ, ತಾವು ತೋರಿಸುವ ಆಸಕ್ತಿ. ಮಾಡುವ ಪ್ರಯತ್ನ ಮಡಿಯುವ ರೀತಿನೀತಿಗಳ ಪರಿಣಾಮವಾಗಿ ದೊರಕುವ ಗೌರವವು ನಿಜವಾದ ಗೌರವವೆಂಬುದನ್ನು ಯಾವ ಶಿಕ್ಷಕರೂ ಅಲ್ಲಗಳೆಯಬಾರದು.

ಮುಖ್ಯ ಪ್ರಧಾನರಿಗೆ ನಮ್ಮ ಹಾರ್ದಿಕ ಶುಭಾಶಯಗಳು

ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ಜವಾಹರಲಾಲ ನೆಹರೂರವರು ರಶಿಯಾ ಹಾಗೂ ಇನ್ನಿತರ ಪೂರ್ವಯುರೋಪ ದೇಶಗಳ ಸಂದರ್ಶನಕ್ಕಾಗಿ ಇದೇ ತಿಂಗಳ ದಿನಾಂಕ ೫ ರಂದು ತಮ್ಮ ಪರಿವಾರ ದೊಂದಿಗೆ ಮುಂಬಯಿಯಿಂದ ಹೊರಟರು. ಅವರನ್ನು ಮುಂಬಯಿ ರಾಜ್ಯದ ರಾಜ್ಯಪಾಲರೂ, ಮುಖ್ಯ ಮಂತ್ರಿಗಳೂ ಹಾಗೂ ಇನ್ನಿತರ ಮಂತ್ರಿ ಉಪಮಂತ್ರಿಗಳೂ ದೇಶ ವಿದೇಶಗಳ ರಾಯಭಾರಿಗಳೂ, ಸೈನ್ಯ ಹಾಗೂ ಉಳಿದ ಉಚ್ಚ ಅಧಿಕಾರಿಗಳೂ ವಿಮಾನ ನಿಲ್ದಾಣದಲ್ಲಿ ಬೀಳ್ಕೊಟ್ಟರು. ವಿಮಾನವನ್ನು ಏರಿ ಅಲ್ಲಿ ನೆರೆದ ಜನಸಮೂಹದ ನಿರೂಪಣೆಯನ್ನು ತೆಗೆದುಕೊಳ್ಳುವಾಗ ತಾವು ಭಾರತದ ಶಾಂತಿ ಸಂದೇಶವನ್ನು ಯುರೋಪ ದೇಶಗಳಿಗೆ ಮುಟ್ಟಿಸುವೆನೆಂದೂ, ಭಾರತವು ಪ್ರಗತಿಗೊಳ್ಳುತ್ತಿರುವದನ್ನು ವಿದೇಶಗಳಿಗೆ ತಿಳಿಸುವೆನೆಂದೂ ಹೇಳಿದರು. ಸುಮಾರು ೫ ವಾರಗಳ ವರೆಗೆ ರಶಿಯಾ, ಪೋಲಂಡ, ಯುಗೋಸ್ಲಾವಿಯಾ, ಇಜಿಪ್ತ, ಮೊದಲಾದ ದೇಶಗಳಲ್ಲಿ ಸಂಚರಿಸಿ ವಿದೇಶಗಳಲ್ಲಿರುವ ಭಾರತದ ರಾಯಭಾರಿಗಳ ಸಭಾಧ್ಯಕ್ಷತೆಯನ್ನು ವಹಿಸಿ ಸ್ವದೇಶಕ್ಕೆ ಮರಳುವರು. ಅತ್ಯಂತ ಮಹತ್ವವಾದ ಅವರ ಈ ಸಂಚಾರವು ಅವರಿಗೂ ಅವರ ಪರಿವಾರದವರಿಗೂ ಸುಖಮಯವಾಗಲೆಂದು ನಾವು ಹಾರ್ದಿಕವಾಗಿ ಹಾರೈಸುತ್ತೇವೆ.

ಶಿಕ್ಷಣ ಮತ್ತು ಮನಸ್ಸಿನ ಶಾಸ್ತ್ರ

ಲೇಖಕರು:— **ಶ್ರೀ ತಟ್ಟಿ ಶಾಮರಾಯರು, ಧಾರವಾಡ**

ಗಿಡಗಂಟಿಗಳಲ್ಲಿ, ಪಶುಪಕ್ಷಿಗಳಲ್ಲಿ, ಇತರ ಪ್ರಾಣಿಗಳಲ್ಲಿ, ಮನುಷ್ಯನಲ್ಲಿ ಪ್ರಾಣ, ಉಸಿರು, ಜೀವ ಇರುವದಷ್ಟೇ; ಇದೆಲ್ಲ ಸಜೀವದೃಷ್ಟಿ. ಈ ಎಲ್ಲ "ಪ್ರಾಣಿ"ಗಳಲ್ಲಿರುವ ಪ್ರಾಣವು ತನ್ನ ಅಸ್ತಿತ್ವದ ಗುರುತನ್ನು ತೋರಿಸುತ್ತದೆ; ಮತ್ತು ಕ್ರಮೇಣ ತನ್ನ ಸಾಮರ್ಥ್ಯವನ್ನು ಹೆಚ್ಚು ಹೆಚ್ಚಾಗಿ ವ್ಯಕ್ತಮಾಡುತ್ತದೆ. ಮನುಷ್ಯನಲ್ಲಿ ಅದು ತರ್ಕ, ಆಲೋಚನೆ, ವಿಚಾರ, ವಿಮರ್ಶೆಯಲ್ಲಿಯೂ ಭಾಷೆಯ ಮೂಲಕ ಅದನ್ನು ವ್ಯಕ್ತಪಡಿಸುವದರಲ್ಲಿಯೂ, ಮಾನವ ಸಮಾಜಕ್ಕೆ ಹೊಂದಿಕೊಂಡು ಹೋಗುವದರಲ್ಲಿಯೂ ತನ್ನ ಹಾಗು ಸಾಮಾಜಿಕರ ಸುಖವನ್ನು ಹೆಚ್ಚಿಸಿ ದುಃಖವನ್ನು ನಿವಾರಿಸುವದಕ್ಕಾಗಿ ಸೃಷ್ಟಿಯ ಶಕ್ತಿಗಳನ್ನು ಉಪಯೋಗಿಸಿಕೊಳ್ಳುವದರಲ್ಲಿಯೂ, ಕಲಾವಸ್ತುನಿರ್ಮಿತಿ ಹಾಗು ಅವುಗಳಿಂದ ರಸಾನುಭವವನ್ನು ಪಡೆಯುವದರಲ್ಲಿಯೂ— ಹೀಗೆ ಅನೇಕ ಉಚ್ಚ ಉಚ್ಚತರ ವ್ಯಾಪಾರಗಳಲ್ಲಿ ವ್ಯಕ್ತವಾಗುತ್ತದೆ. ಮಾನವನಲ್ಲಿ ಹೀಗೆ ವ್ಯಕ್ತವಾಗುವ ಪ್ರಾಣಶಕ್ತಿಗೇ ಮನಸ್ಸೆಂಬ ಹೆಸರು.

ಕ್ರಿಯಾತ್ಮಕತೆಯೇ ಜೀವನದ ಮೂಲಭೂತವಾದ ಪ್ರಮೇಯವು. ನಾವು ವಿಚಾರಮಾಡುವದು ಏನಾದರೊಂದು ಮಾಡುವದಕ್ಕಾಗಿಯೇ. ಎಲ್ಲ ಜ್ಞಾನ ವಿಜ್ಞಾನವೂ ಇದೊಂದು ವಿಷಯಕ್ಕೆ ಸಂಬಂಧಿಸಿರುತ್ತದೆ— "ಏನು ಮಾಡಬೇಕು." ಮನೋವಿಜ್ಞಾನಕ್ಕಂತೂ ಈ ವಿಷಯದ ಸಾಕ್ಷಾತ್ ಸಂಬಂಧವಿರುತ್ತದೆ.

ಮಾನವನ ವೈಜ್ಞಾನಿಕ ಪ್ರಗತಿಯಲ್ಲಿ ಮೂರು ಅವಸ್ಥೆಗಳನ್ನು ಮಾಡಬಹುದು.

ಒಂದನೆಯದು. ಈ ಅವಸ್ಥೆಯಲ್ಲಿ ಮನುಷ್ಯನಿಗೆ ಸೃಷ್ಟಿಯಬಗೆಗೆ **ತಿಳಿವಳಿಕೆ ಕಡಿಮೆ**; ಏನಾದರೊಂದು ತರ್ಕ-ವಿತರ್ಕ ಮಾಡುತ್ತ ಹೋಗುವನು. ವೈದ್ಯನು ಯಾವುದೋ ಒಂದು ವನಸ್ಪತಿಯನ್ನು ಕಾಣುವನು. ಅದರ ಎಲೆಯ ಆಕಾರವು ದೇಹದಲ್ಲಿ ರೋಗಗ್ರಸ್ತವಾದ ಒಂದು ಭಾಗದಂತೆ ಇರುವದೆಂದು ಅದರಿಂದ ಗುಣವಾಗುವದೆಂದೂ ತಿಳಿಯುವನು. ಮನೋವಿಜ್ಞಾನವು ಆಗ ಒಂದು ಮಂತ್ರ ವಿದ್ಯೆಯಾಗಿರುವದು. ತನ್ನ ಸ್ಮರಣಶಕ್ತಿಯನ್ನು ಸುಧಾರಿಸಿಕೊಳ್ಳಬೇಕೆಂದು ವ್ಯಕ್ತಿಯು ಒಂದು ತಾಯಿತವನ್ನು ಕಟ್ಟಿಕೊಳ್ಳುವನು; ಹುಚ್ಚು ಬಿಡಿಸುವದಕ್ಕಾಗಿ ಗುಣುಗುಣು ಮಂತ್ರವನ್ನು ಉಚ್ಚರಿಸುವನು. ತನ್ನ ಮಗುವು ಒಳ್ಳೆಯದಾಗಿ ಚುರುಕಾಗಿ ಬೆಳೆಯಬೇಕೆಂದು ಇನ್ನೊಬ್ಬನು ಔಷಧಿಗಳನ್ನು ಸುಡುವನು.

ಎರಡನೆಯದು. ಈ ಅವಸ್ಥೆಯಲ್ಲಿ ಮನುಷ್ಯನು ತನ್ನ ಸುತ್ತಲೂ ಕಾಣುವ ವಸ್ತುಗಳಿಗೆ ಹೆಸರಿಡುವದರಲ್ಲಿ ತೊಡಗುವನು— ಪದಾರ್ಥಗಳ ನಾಮಕರಣ, ವರ್ಗೀಕರಣ, ಸಂಖ್ಯಾನ ಅಥವಾ ಎಣಿಕೆ. "ವಿದ್ಯುತ್ತೆಂದರೇನು?" ಅದೊಂದು ಪ್ರಕಾಶ, ಪ್ರವಾಹ, ಶಕ್ತಿ; ಹೀಗೆಯೇ— "ಮನಸ್ಸೆಂದರೇನು?" ಜ್ಞಾನ, ಇಚ್ಛಾ, ಕ್ರಿಯಾಶಕ್ತಿ. ಇದರಿಂದ ಕೆಲಮಟ್ಟಿಗೆ ಪ್ರಯೋಜನವಿದ್ದೇ ಇದೆ. ನನ್ನ ಮಗನು ಏನೇನು ಮಾಡಬಲ್ಲನು, ಮುಂದಿನ ಜೀವನದಲ್ಲಿ ಯಾವ ಕೆಲಸವನ್ನು ಮಾಡಬಹುದು ಎಂಬುದು ನನಗೆ ತಿಳಿದಿದ್ದರೆ ಅವನನ್ನು ಮುಂದಿನ ಜೀವನಕ್ಕೆ ನಾನು ಸಿದ್ಧಮಾಡಬಹುದು. ಈ ಮಧ್ಯ ಕಾಲದಲ್ಲಿ ಮನಸ್ಸಿನ ಬಗೆಗೆ ಒಂದು ತಿಳಿವಳಿಕೆ ಇತ್ತು— ಅದು ಅನೇಕ ಬೇರೆ ಬೇರೆ ಶಕ್ತಿಗಳ ಗಂಟು— ಎಂದು. ಆದ್ದರಿಂದ ಶಿಕ್ಷಣದಲ್ಲಿ ಹುಡುಗರಿಗೆ ಗಣಿತವನ್ನು ಕಲಿಸುವದರಿಂದ ವಿಚಾರ ಶಕ್ತಿಯು ಬೆಳೆಯುತ್ತದೆ

ಕವಿತೆಯನ್ನು ಕಲಿಸುವದರಿಂದ ಕಲ್ಪನಾ ಶಕ್ತಿಯು ಬೆಳೆಯುತ್ತದೆ. ಹೀಗೆಲ್ಲ ಒಂದಾನೊಂದು ಕಾಲಕ್ಕೆ ತಿಳಿಯುತ್ತಿದ್ದರು. ಹುಡುಗರು ಮುಂದೆ ಯಾವ ಉದ್ಯೋಗವನ್ನು ಮಾಡಬೇಕೆನ್ನುವರೋ ಅದಕ್ಕೆ ತಕ್ಕ ಶಿಕ್ಷಣವನ್ನು ಕೊಡಬೇಕು. ಸಾಮಾನ್ಯವಾದ ಬುದ್ಧಿಯ ಬೆಳವಣಿಗೆ ಎನ್ನುವದರಲ್ಲಿ ಈಗ ನಾವು ನಂಬುವದಿಲ್ಲ. ಆದರೂ ಇನ್ನೂ ಈ ಹಳೆಯ ವಿಚಾರದ ಪ್ರಭಾವವು ಪೂರ್ಣವಾಗಿ ಹೋಗಿಲ್ಲವೆನ್ನಬೇಕು. ಇಲ್ಲದೆ ಹೋದರೆ ಪ್ರಾಥಮಿಕ ಸಾಲೆಯ ಒಂದು ವರ್ಗದಲ್ಲಿದ್ದ ೪೦ ಹುಡುಗರೂ ಪ್ರತಿ ದಿವಸ ಒಂದೇ ವಿದ್ಯೆಯನ್ನು ಕಲಿಯುವರ ಅರ್ಥವೇನು? ಅವರಲ್ಲಿ ಕೆಲವರು ಅಂಗಡಿಕಾರರ ಮಕ್ಕಳಿರಬಹುದು. ಕೆಲವರು ಒಕ್ಕಲಿಗರ ಮಕ್ಕಳಿರಬಹುದು. ಕೆಲವರು ಯಂತ್ರಗಳನ್ನು ನೋಡಿಕೊಳ್ಳುವವರ ಮಕ್ಕಳಾಗಿರಬಹುದು. ಅವರೆಲ್ಲರೂ ದೊಡ್ಡವರಾದ ಮೇಲೆ ಏನೇನು ಮಾಡಬೇಕಾಗುವದೋ. ಯಾವ ಯಾವ ಕೆಲಸಗಳಲ್ಲಿ ಜಾಣರಾಗಬೇಕಾಗಿರುವದೋ. ಯಾವ ಯಾವ ಜವಾಬದಾರಿಯನ್ನು ನಿರ್ವಹಿಸಬೇಕಾಗಿರುವದೋ ಅದೆಲ್ಲದಕ್ಕೂ ಅವರನ್ನು ತರಬೇತಿಗೊಳಿಸಬೇಕು.

ಮೂರನೆಯ ಅವಸ್ಥೆ. ಈ ಅವಸ್ಥೆಯಲ್ಲಿ ಮನುಷ್ಯನು ಪ್ರತಿಯೊಂದಕ್ಕೂ ಕಾರಣವನ್ನು ಹುಡುಕುವನು. ಅಫೀಮನ್ನು ನಿದ್ರೆ ಬರುವ ಔಷಧವೆಂದಿಷ್ಟೇ ಕರೆಯದೆ ಅಫೀಮಿನಿಂದ ನಿದ್ರೆಯು ಏಕೆ ಬರುವದು ಎಂಬದನ್ನು ತಿಳಿದುಕೊಳ್ಳಲೆತ್ನಿಸುವನು. ಹಾಗೆಯೇ ಮನಸ್ಸಿನ ಶಕ್ತಿಗಳಿಗೆ ಸ್ಮರಣೆ, ಕಲ್ಪನೆ, ಭಾವನೆ ಎಂದು ಬರಿಯ ಹೆಸರುಗಳನ್ನು ಇಡುತ್ತ ಹೋಗದೆ ಮನಸ್ಸು ಏಕೆ ನೆನಪಿನಲ್ಲಿಡುವದು, ಏಕೆ ಆಲೋಚಿಸುವದು, ಏಕೆ ಕಲ್ಪಿಸುವದು ಇತ್ಯಾದಿ ಕಾರಣದ ಮೀಮಾಂಸೆಯನ್ನು ಮಾಡುವನು.

ಆದರೆ ಇದು ಸಮಂಜಸವೆಂದು ಹೇಳಲಾಗದು. ವೈಜ್ಞಾನಿಕರ ಕೆಲಸವು ಕಾರಣಗಳನ್ನು ಹುಡುಕುವದಷ್ಟೇ ಏನು? ವಿಜ್ಞಾನವೆಂದರೇನು? ಅದರ ಸ್ವರೂಪವೇನು? ಸಾಮಾನ್ಯ ಅನುಭವಕ್ಕೆ ತಿಳಿಯದೇ ಇದ್ದ ಸಂಗತಿಗಳನ್ನು ಸೂಕ್ಷ್ಮವಾಗಿ ವಿವರಿಸುವದು— ಸರಿಯಾಗಿ ಮತ್ತು ದಕ್ಷತೆಯಿಂದ ಆಗಬೇಕಾಗಿದ್ದ ಕಾರ್ಯಕ್ಕೆ ಬೇಕಾಗುವ ಸುಸಂಘಟಿತವಾದ ಯಥಾರ್ಥವಾದ ಜ್ಞಾನ ಸಂಗ್ರಹವಲ್ಲವೇ? ಶಾಸ್ತ್ರೀಯ ವಿಷಯವು ಹುಟ್ಟುವದು ಹೇಗೆ? ತಿಳಿಯಬೇಕೆಂಬ ಇಚ್ಛೆಯ ಫಲವಾಗಿ ತಿಳಿದುಕೊಳ್ಳಲು ಏಕೆ ಬಯಸುವದು?

ಓಣಿಯಲ್ಲಿ ನೀವು ಆಕಸ್ಮಿಕವಾಗಿ ಒಂದು ಅಚ್ಚನೀಲಿ ಬಣ್ಣದ ಕುದುರೆಯನ್ನು ನೋಡಿದಿರೆಂದು ತಿಳಿಯೋಣ. ನಿಮ್ಮಲ್ಲಿ ಕುತೂಹಲವು ಜನಿಸುವದು— ಅಥವಾ ಜಿಜ್ಞಾಸೆ, ತಿಳಿದುಕೊಳ್ಳುವ ಇಚ್ಛೆ. ಕುತೂಹಲ ಅಥವಾ ಜಿಜ್ಞಾಸೆಯು ಭಯಕ್ಕೆ ನಿಕಟ ವರ್ತಿಯಾಗಿರುವದು. ಆಗಿನ ನಮ್ಮ ಭಾವನೆಯನ್ನು ಬಗೆದು ನೋಡಿದರೆ ಹೀಗಿರುವದು; "ನನಗೆ ಈ ಓಣಿಯಲ್ಲಿಯ ಎಲ್ಲ ವಸ್ತುಗಳೂ ಗೊತ್ತಿವೆ— ಎಂತಲೇ ಅವನ್ನು ನಾನು ಲಕ್ಷ್ಯಕ್ಕೆ ಹಾಕಿಕೊಳ್ಳುವದಿಲ್ಲ. ಇದರ ವಿಷಯಕ್ಕೆ ಮಾತ್ರ ನನಗೇನೂ ತಿಳಿಯದು." ಇದು ಶೂನ್ಯ. ನಿಮ್ಮ ಅನುಭವದಲ್ಲಿ ಒಂದು ಕುಂದು. ಕೊರತೆ. ಈ ಹೊಸ ವಿಷಯವು, ಅಪರಿಚಿತ ವಿಷಯವು ನಿಮ್ಮನ್ನೇಕೆ ಕೆರಳುವದು? ಅದು ಕತ್ತಲೆಯಲ್ಲಿದ್ದ ಕಂಟಕದಂತೆ ನಿನಗೆ ಗೊತ್ತಿದ್ದ ಅನ್ಯವಸ್ತುಗಳಿಗೆಲ್ಲ ನೀನು ಹೇಗೆ ನಡೆದುಕೊಳ್ಳಬೇಕೆಂಬದನ್ನು ನೀನು ಬಲ್ಲೆ. ಕುದುರೆಗಳನ್ನು ಸಾಮಾನ್ಯವಾಗಿ ನೀನು ಅನೇಕ ಸಲ ಕಂಡಿರುವೆ; ಅವುಗಳ ಸ್ವಭಾವದಿಂದ ಅವನ್ನು ಹೇಗೆ ಉಪಚರಿಸಬೇಕೆಂಬದನ್ನೂ ನೀನು ತಿಳಿದಿರುವೆ; ಈ ಕುದುರೆಯೊಡನೆ ನೀನು ಹೇಗಿರಬೇಕೆಂಬದನ್ನು ನೀನು ಅರಿತಿಲ್ಲವಾದ್ದರಿಂದ ನಿನಗೆ ಆ ಜ್ಞಾನವು ಬೇಕು.

ಏನು ಮಾಡಬೇಕೆಂಬದನ್ನು ತಿಳಿದುಕೊಳ್ಳುವದೇ ಮನುಷ್ಯನ ಆಸೆ. ಕಾರಣವನ್ನು ಹುಡುಕುವ ಇಚ್ಛೆಯಿಂದಲೇ ಶಾಸ್ತ್ರವು ಅಥವಾ ವಿಜ್ಞಾನವು ಹುಟ್ಟುವದಿಲ್ಲ. 'ಸಿಡಿಲು' ಎಂದರೇನು? ಅದು ಕೇಳಿಸಿದಾಗ ನಾನು ಏನು ಮಾಡಬೇಕು? ಓಡಿ ಹೋಗುವದೇ ಇಲ್ಲವೆ ಅಡಗಿಕೊಳ್ಳುವದೇ? ಎಲ್ಲಿ ಅಡಗುವದು? ಮುಖ್ಯವಾಗಿ ಆಗ ಬೇಕಾದ ಮಾತಾವದು? ಸದ್ದಲ್ಲ. ಏಕೆಂದರೆ ಬರಿಯ ಸೂಚಕವು, ಫಲವು, ಆಳು. ಯಜಮಾನನು, ಪ್ರಭುವು ಯಾರು? ನಿಜವಾದ ವಸ್ತುವಾವದು? ವಿದ್ಯುತ್ತು. ವಿದ್ಯುತ್ತಿನೊಡನೆ ನಾನು ವ್ಯವಹಾರಮಾಡಿದ್ದೇನೆ; ಏನು ಮಾಡಬೇಕೆಂಬದನ್ನು ನಾನು ಬಲ್ಲೆನು; ನನಗೆ ಸಮಾಧಾನವಾಯಿತು.

ಆಧುನಿಕ ವಿಜ್ಞಾನದ ಲಕ್ಷಣವೆಂದರೆ ಅದು 'ಏನು ಮಾಡಬೇಕು' ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವದಾಗಿರುತ್ತದೆ. ಶಾಸ್ತ್ರಜ್ಞನು ವಿಚಾರಿಸಿಕೊಳ್ಳುತ್ತಾನೆ. "ನಾನು ವಿಜ್ಞಾನಿ ಈ ದೃಷ್ಟಿಯಿಂದ ಈ ಅಪೂರ್ವ ಘಟನೆಗೆ ನನ್ನ ಪ್ರತಿಕ್ರಿಯೆ ಏನಿರಬೇಕು?" ಲೌಕಿಕ ವ್ಯಕ್ತಿಯು ಕೇಳಿಕೊಳ್ಳುತ್ತಾನೆ– "ವ್ಯವಹಾರದ ಮನುಷ್ಯನಂತೆ ನನ್ನ ಪ್ರತಿಕ್ರಿಯೆ ಇದಕ್ಕೆ ಏನಿರಬೇಕು?"

ಹೀಗೆಯೇ ಶಿಕ್ಷಕನು ಕೇಳಿಕೊಳ್ಳುತ್ತಾನೆ– ಶಿಕ್ಷಕನೆಂಬ ಸ್ಥಾನದಿಂದ ಮನಸ್ಸು ಎನ್ನುವದರೊಡನೆ ನನ್ನ ಸಂಬಂಧವೇನಿರಬೇಕು? ನಾನು ಏನು ಮಾಡಬೇಕು?

ಅಂತೂ ಜ್ಞಾನಕ್ಕಾಗಿ ಜ್ಞಾನವೆಂಬ ಮಾತು ಸುಳ್ಳು. ಸಮುದ್ರಯಾನದಲ್ಲಿ ನೌಕಾ ಪ್ರವಾಸದಲ್ಲಿ ವಿದ್ಯುತ್ತಿನ ಅಗತ್ಯ ಉಂಟಾಯಿತು; ಆರೋಗ್ಯ ರಕ್ಷಣೆಗಾಗಿ ರಸಾಯನ ಶಾಸ್ತ್ರವು ಹುಟ್ಟಿತು. ಇದರಿಂದ ನಾವು ಎರಡು ಸಂಗತಿಗಳನ್ನು ಲಕ್ಷ್ಯದಲ್ಲಿಡಬೇಕು.

೧. ಜ್ಞಾನವನ್ನು ಅಥವಾ ವಿಜ್ಞಾನವನ್ನು ನಾವು ಹುಡುಗರಿಗೆ ಕೇವಲ ಜ್ಞಾನ ವಿಜ್ಞಾನಗಳಿಗಾಗಿಯೇ ಕಲಿಸದೆ ಅದರ ಪ್ರಯೋಜನದ ದೃಷ್ಟಿಯಿಂದ ಕಲಿಸಬೇಕು. ಅವರಿಗೆ ನಾವು ಹೇಗೆ ಇರಬೇಕು ಹೇಗೆ ನಡೆಯಬೇಕು ಎಂಬದನ್ನು ಕಲಿಸಬೇಕು. ಮತ್ತು ಆ ನಡತೆಗಾಗಿ ಮಾತ್ರ ಜ್ಞಾನವನ್ನು ಕಲಿಸಬೇಕು.

೨. ನಾವು ಬರಿಯ ಮಾನಸಶಾಸ್ತ್ರವನ್ನು ಕಲಿಯಬಾರದು; ಆದರೆ ಶಿಕ್ಷಕರೆಂದು ನಾವು ಮಗುವಿನ ಮನಸ್ಸಿನೊಡನೆ ಯಾವ ವೃತ್ತಿಯನ್ನು ಇಟ್ಟುಕೊಳ್ಳಬೇಕು— ಎಂಬದನ್ನು ಅಭ್ಯಾಸಿಸಬೇಕು.

ಶಾಸ್ತ್ರೀಯ ವಿಷಯವೆಂದರೆ ಕಾರ್ಯಾಚರಣೆಗಾಗಿ ಸಂಘಟಿತವಾದ ಯಥಾರ್ಥ ಜ್ಞಾನ ಭಾಂಡಾರ. ಎಲ್ಲ ವಿಜ್ಞಾನದ ಒಟ್ಟು ತಾತ್ಪರ್ಯವು— ನಾವು ಬದುಕಿ ಬಾಳಬೇಕಾದರೆ ನಾವು ನೋಡಿದ್ದರೊಡನೆಲ್ಲ ಯಾವ ರೀತಿ ಇರಬೇಕು ಯಾವ ರೀತಿ ನಡೆಯಬೇಕು ಎಂಬದನ್ನು ಕಲಿಸುವದಾಗಿರುತ್ತದೆ.

ಈ ಮಗುವು ಹೇಗಿದೆ ಇವನಲ್ಲಿ ಬೀಜರೂಪವಾಗಿ ಯಾವ ಶಕ್ತಿಗಳಿವೆ ಮತ್ತು ಅದಕ್ಕನುಗುಣವಾಗಿ ಅವನು ಮುಂದೆ ಏನಾಗಬಲ್ಲನು ಎಂಬದನ್ನು ಅಭ್ಯಸಿಸಲಿಕ್ಕೆ ಮಾನಸಶಾಸ್ತ್ರವು ಕಲಿಸುವದು; ಮತ್ತು ಎಲ್ಲ ಮಾನವ ವ್ಯಕ್ತಿಗಳಿಗೂ ಅನ್ವಯಿಸುವ ನಿಯಮಗಳನ್ನು ನಾವು ಅನುಸರಿಸುವದರಿಂದ ಆ ಮಗುವಿನಲ್ಲಿದ್ದ ಶಕ್ತಿಗಳನ್ನು ಹೇಗೆ ಬೆಳಿಸಬೇಕೆಂಬದನ್ನು ಕಲಿಸುವದು. ಆದರೂ ಮನೋವಿಜ್ಞಾನದ ಈ ಉತ್ತರವೂ ಇನ್ನೂ ಪೂರ್ಣ ಸಮರ್ಪಕವಾದುದಲ್ಲ. ವಿದ್ಯಾಭ್ಯಾಸಂಗದ ಪ್ರಯೋಜನವು ಮಗುವಿನ ಸುಪ್ತ ಶಕ್ತಿಗಳನ್ನು ಅದರ ಸಹಜವಾದ ಹರಿಗಳೊಡನೆ ವೃದ್ಧಿಗೊಳಿಸುವದಿಷ್ಟೇ ಅಲ್ಲ.

ಮಗುವಿನ ಶಕ್ತಿಗಳನ್ನೇನೂ ನಾವು ತಗ್ಗಿಸಬಾರದು, ನಿಜ. ಅವುಗಳನ್ನು ಆದಷ್ಟು ಹೆಚ್ಚು ಪೂರ್ಣತೆಗೆ ತರಲೇಬೇಕು. ಆದರೆ ಮಗುವು ಸಮಾಜದ ಒಂದು ಅಂಗವಾಗಿ ಜನಿಸಿದೆಯಷ್ಟೆ; ನಾವು ಅದಕ್ಕೆ ಕೊಡುವ ವಿದ್ಯೆಯು ಸಮಾಜದಿಂದ ಏರ್ಪಟ್ಟಿದೆ; ಆದ್ದರಿಂದ ಮಗುವನ್ನು ಆ ಸಮಾಜದ ಕಟ್ಟುಪಾಟಿಗೆ ಹೊಂದಿಕೆಯಾಗುವಂತೆ ಆತನ ಮನೋಧರ್ಮವನ್ನು ರೂಪಿಸಬೇಕು.

ತಿದ್ದುಪಡಿ

ಕಳೆದ ತಿಂಗಳ ಸಂಚಿಕೆಯಲ್ಲಿ 'ಕೈ. ವಾ. ಗಂಗಾಧರ ಮಡಿವಾಳೇಶ್ವರ ತುರಮರಿ' ಈ ಬರೆಹದಲ್ಲಿ ಮುಂದೆ ಅವರು (ತುರಮರಿಯವರು) ಪುಣೆಗೆ ಹೋಗಿ ಇಂಗ್ಲೀಷ ಮೇಲ್ತರಗತಿಯ ಶಿಕ್ಷಣ ಪಡೆದು ಬಂದರು' ಎಂದು ಇದ್ದುದನ್ನು 'ಶ್ರೀ ತುರಮರಿಯವರು ಸ್ವಂತ ಪರಿಶ್ರಮದಿಂದ ಇಂಗ್ಲೀಷ ಕಲಿತರು' ಎಂದು ತಿದ್ದಿಕೊಂಡು ಓದಬೇಕಾಗಿ ವಿನಂತಿ.

—ಪ್ರ. ಸಂ.

ಮನೆಗೆಲಸದ ಹಾಡುಗಳು

(ಒಂದು ಕುಂಚು)

ಲೇಖಕರು : **ಡಾ. ಬಿ. ಎಸ್. ಗದ್ದಗಿಮಠ.** ಎಂ. ಎ., ಪಿಎಚ್. ಡಿ., ಲಕ್ಷ್ಮೇಶ್ವರ.

ಇರುಳಿನ ಕೊನೆಯ ಜಾವದಲ್ಲಿ ಬೆಳಗಿನ ಕೋಳಿಯು ಕೂಗುವ ಮುನ್ನ ಹಳ್ಳಿಯ ಹೆಣ್ಣಿನ ಮನೆಗೆಲಸಗಳು ಆರಂಭವಾಗುತ್ತವೆ. ನಿತ್ಯ ಪ್ರಪಂಚದ ಜೊಂಜಾಟದ ಭಾರವನ್ನು ಇಳಿಸಲು ಹಳ್ಳಿಯ ಹೆಣ್ಣು ಬೆಳಗಿನ ಆ ಪ್ರಶಾಂತ ಸಮಯದಲ್ಲಿ ತನ್ನ ಕುಲದೇವತೆಯನ್ನಾಗಲಿ, ಮನದೇವತೆಯನ್ನಾಗಲಿ ನೆನೆದು ಮೈಮುರಿದು ಎದ್ದು ಮುಖದೊಳೆದುಕೊಂಡು ತನ್ನ ಕೆಲಸಕ್ಕೆ ಕೈಹಾಕುವಳು. ಬೀಸುವುದೇ ಅವಳ ಮನೆಗೆಲಸಕ್ಕೆ ಮೊದಲಾಗುವುದು.

ಗಂಡನ ಮನೆಯಲ್ಲಿದ್ದ ಹೆಣ್ಣಿಗೆ ತವರುಮನೆ, ಗೆಳತಿಯರು, ಮನೆಗೆಲಸ, ಸತಿ-ಪತಿಯರಾಟ ಮೊದಲಾದ ಜೀವನ ಸನ್ನಿವೇಶಗಳೂ ನಾಡಮೇಲಿನ ವೀರಗಲಿಗಳ ಹಾಗೂ ಶಿವಶರಣರ ಚರಿತ್ರೆಗಳೂ ಆಗಾಗ ಒಂದರ ಮೇಲೊಂದು ನೆನಪಾಗುವುದು ಸಹಜ. ಇವೆಲ್ಲವುಗಳನ್ನು ಮರೆಯಲಸಾಧ್ಯವಾಗಲು ಆವೇಶ ತುಂಬಿದಾಗ ಹಾಡಿ ತನಗಾದ ಬೇಸರವನ್ನು ನೀಗಿಸಿಕೊಳ್ಳುವಳು. ಅವಳು ಹಾಡುವ ಸಮಯವೆಂದರೆ ನಿತ್ಯ ಬೀಸುವಾಗ; ಕುಟ್ಟುವಾಗ. ಹಳ್ಳಿಯ ಹೆಣ್ಣು ಬೀಸುವಕಲ್ಲ-ಸಪ್ಪಳ-ಕೈಬಳೆಗಳ ಝಣತ್ಕಾರ ಕೂಡಿಸಿ, ನಾದ ಕಿವಿತುಂಬಲು ತಲೆ ಹಾಕಿ ಹಾಕಿ ಗತ್ತಿನೊಡನೆ ರಾಗವೆತ್ತಿ ಹಾಡ ಹತ್ತಿದಳೆಂದರೆ ಬೀಸುವಕಾಳು ಮುಗಿಯುವ ವರೆಗೆ ಅವಳಿಗೆ ಬೇರೊಂದು ಪರವೆಯೇ ಇರುವುದಿಲ್ಲ. ಅದರಲ್ಲಿ ಲೀನಳಾಗಿ ತನ್ನನ್ನು ತಾನೇ ಮರೆಯುವಳು. ಮನತುಂಬಲು ಆವೇಶವುಕ್ಕಿ ಕಾವ್ಯವು ಒಂದೇ ಸವನೇ ಹರಿಯಹತ್ತುವುದು. ಅವಳಿಗೆ ಒಂದರ ಮೇಲೊಂದು ಬಾಳಿನ ಚಿತ್ರಗಳು ಹೊಳೆದು ಕಾವ್ಯ ಸಾಗರದಲ್ಲಿಯೇ ತೇಲಹತ್ತುವಳು.

ಪ್ರಪಂಚದಲ್ಲಿ ಗಂಡ-ಹೆಂಡಿರ ಪಿಡಿಮಿಡಿ ಸನ್ನಿವೇಶಗಳನ್ನು ನೆನೆದು —

ಗಂಡಹೆಂಡರ ಜಗಳಾ, ಗಂಧ ತೀಡಿದಾಂಗ
ನಿಂಗಕ ನೀರು ಎರೆದಾಂಗ । ಹಿರಿಹೊಳೆಯ
ಗಂಗವ್ವ ಸಾಗಿ ಹರಿದಾಂಗ ॥

ಎಂದು ಸದಾ ಹೊಸದಾದ ಕಾವ್ಯಝರಿಯನ್ನೇ ಹರಿಸುವಳು. ಜಗಳವಿಲ್ಲದ ಪ್ರಪಂಚ ಹಳಸುವುದೆಂದು ಅವಳ ಭಾವನೆ. ಅದು ಮುಂದೆ ಸಾಗಬೇಕಾದರೆ ಆಗಾಗ ಕಿಡಿಗಳು ಕಾಣಲೇಬೇಕು. ಕಿಡಿ ಕಂಡರೂ ಅವಳಿಗೆ ಗಂಡನ ಮನೆಯೇ ಲೇಸು. ಒಡೆತನ, ಬಡತನವೆಂಬ ಚಿಂತೆಯಿಲ್ಲ. ಮುತ್ತೈದಿತನವೊಂದೇ ಅವಳಿಗೆ ಸಕಲ ಸೌಭಾಗ್ಯ. ಮಕ್ಕಳೇ ಸರ್ವ ಸಂಪತ್ತು.

ಮಕ್ಕಳ ಕುಡು ಶಿವನೆ, ಮತ್ತೊಂದು ನಾ ಒಲ್ಲೆ
ಹೆತ್ತು ಮಂದ್ಯಾಗ ಹರು ನೀರು । ತರುವಂಥ
ಮುತ್ತೈದಿತನವ ಕೊಡು ಶಿವನೆ ॥

ಹೀಗೆಂದು ಶಿವನನ್ನು ಪ್ರಾರ್ಥಿಸಿದ್ದಾಳೆ.

ಗಂಜೀಯ ಕುಡಿದರು, ಗಂಡನ ಮನಿಲೇಸ
ಅಂದಣದ ಮ್ಯಾಲೆ ಚವುರವ । ಸಾರಿದರ
ಹಂಗೀನ ತವರ ಮನಿಸಾಕ ॥

ಎಂದು ಬಡವ ಗಂಡನೇ ಲೇಸೆಂದೂ ಚೌರಿಯ ಬೀಸುವ ತವರು ಹಂಗಿನದೆಂದೂ ನಿರಾಕರಿಸಿದ್ದಾಳೆ. ಅದರೂ ಅವಳು ತವರಿಗೆ ಕೇಡು ಬಯಸುವುದಿಲ್ಲ.

ಹಾಲುಂಡ ತವರೀಗೆ, ಏನೆಂದು ಹಾಡಲೆ
ಹೊಳೆ ದಂಡಿಲಿರುವ ಕರಕೀಯ । ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ ॥

ಎಂದು ಹಾಡಿ ಹರಸಿದ್ದಾಳೆ; ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸಿದ್ದಾಳೆ.

ಅಕ್ಕನ ಕಕ್ಕುಲತೆಯು ತಮ್ಮ ತಂಗಿಯರ ಮೇಲೆ ಬಹಳ. ಬೀಸುವಾಗಾಗಲಿ, ಕುಟ್ಟುವಾಗಾಗಲಿ ಅವರನ್ನು ಹಾಡದೆ ಬೀಸುವ ಕಡೆಮುಕ್ಕೂ, ಕುಟ್ಟುವ ಕೊನೆಯೊಬ್ಬೆಯೂ ಕೊನೆಗೊಳ್ಳುವಂತಿಲ್ಲ. ಅಕ್ಕನು ಗಂಡನ ಮನೆಯಲ್ಲಿದ್ದರೆ ತಮ್ಮ ತಂಗಿಯರೊಡನೆ ಆಡಿ ಬೆಳೆದ ಅವಳ ಜೀವನವು ಅವರನ್ನು ಮೇಲಿಂದಮೇಲೆ ನೆನೆಸುವುದು. ಅವಳಿಗೆ ಸಮಯ ಸಿಕ್ಕರೆ ಆನಂದ ತುಂಬಿ ತಮ್ಮನ ಗುಣಗಾನ ಮಾಡಿ ಹಾಡುತ್ತಾಳೆ; ತಂಗಿಯ ರೂಪ ಲಾವಣ್ಯಗಳನ್ನು ಬಣ್ಣಿಸುತ್ತಾಳೆ. ಈ ಹಾಡುಗಳು ಬಾಂಧವ್ಯದ ಒಲವನ್ನು ತೋರುವುವಲ್ಲದೆ ಕೌಟುಂಬಿಕ ಜೀವನದ ಒಕ್ಕಟ್ಟನ್ನೂ ಸೂಚಿಸುವವು.

ಅಕ್ಕ ತಂಗೆರು ಮೇಲ, ಮುತ್ತು ಮಾಣಿಕ ಮೇಲ
ಉತ್ತುರು ಸಾತಿ ಮಳಿಮೇಲ | ನನ ತಮ್ಮ
ನೀ ಮೇಲ ನನ್ನ ಬಳಗಾಗ ||

ಎಂದು ಚಿಕ್ಕ ತಮ್ಮನು, ಒಕ್ಕಲಿಗನಿಗೆ ಉತ್ತರಿ–ಸ್ವಾತಿ–ಮಳೆಯಂತೆ ಬಳಗಕ್ಕೆ ಆಗಿದ್ದಾನೆ. ಚಿಕ್ಕವನೆಂಬ ಪ್ರೇಮವೂ ಕಡೆಯವನೆಂಬ ಲಾಲನೆಯೂ ಎಲ್ಲರಲ್ಲೂ ಹುಟ್ಟುವಂತೆ ಅಕ್ಕನಲ್ಲಿಯೂ ಹುಟ್ಟಿ ಆಕೆಗೆ ಹೆಚ್ಚಿನ ಆಶೆ–ಆಕಾಂಕ್ಷೆಗಳು ಒಂದರ ಮೇಲೊಂದು ತಮ್ಮನ ಸಂಬಂಧ ಹುಟ್ಟತೊಡಗುವವು.

ಸರದಾರ ಬರುವಾಗ, ಸುರಿದಾವ ಮಲ್ಲೀಗಿ
ಧೊರೆ ನನ್ನ ತಮ್ಮ ಬರುವಾಗ | ಯಾಲಕ್ಕಿ
ಗೊನಿಬಾಗಿ ಹಾಲ ಸುರಿದಾವ ||

ಎಂದು ತಮ್ಮನ ಬರುವಿಕೆಯನ್ನು ಹಾಡಿದ್ದಾಳೆ. ಆತನು ದಿನ–ದಿನಕೆ ಬೆಳೆದು ಪ್ರಾಯ ತುಂಬಲು ಅಕ್ಕನ ಹಿರಿಯಾಸೆಯು ಹಿಗ್ಗಹತ್ತುವುದು. ತಮ್ಮನು ಬಲು ಚೆಲುವ. ಹೆತ್ತ ಮಗಳನ್ನು ಕೊಡಬೇಕೆಂದಿದ್ದ ಅವಳಿಗೆ ಪ್ರತಿಫಲಿಸಿದಂತಾಗಿ —

ಮುನವಳ್ಳಿ ಮುಂದೀನ, ವನವ ಕಂಡೀರಕ್ಕಾ
ತನವೀಗಿ ಅಳ್ಳ್ಯಾವ ಹೂಮಗ್ಗಿ | ನನ ಚೆಲುವ
ತಮ್ಮಗೊಡೆದಾವ ಮೊಕಮೀಸಿ ||
ಬಾವೂಲಿ ಇಟಗೊಂಡು, ಕಾವೂಲಿ ತಿದ್ದುವ
ಗಾಳಿ ಬಂದತ್ತ ಬಳಕೂವ | ನನ ತಮ್ಮ
ಬಾಳಿಯೆಲಿಗಿಂತ ಬಲು ಚಲುವ ||

ಹೀಗೆ ಅವನಿಗೆ ಬರುವ ಯೌವನವನ್ನೂ ತುಂಬುವ ಚೆಲುವಿಕೆಯನ್ನೂ ನೋಡಿ ಬಾಯಿ ಬಿಚ್ಚಿ ಆಡದೆ ತಮ್ಮನು ಪ್ರಸಂಗಕ್ಕೆ ತನ್ನ ಮನೆಗೆ ಬಂದಾಗ —

ಆಡಿಕೊಂಬವನಲ್ಲ, ಆಲಿಸಿ ಕೇಳವನಲ್ಲ
ಗಾಡೀಗನಲ್ಲ ನನ ತಮ್ಮ | ನಿನ್ನಂತ
ಬೀಗನು ಬೇಕೊ ನನ ಮನಿಗೆ ||

ಎಂದು ಹುದುಗಿದ ತನ್ನ ಮನಸ್ಸಿನ ಒಲವನ್ನೂ ಹವ್ಯಾಸವನ್ನೂ ಹಾಡಿ ಸೂಚಿಸುವಳು. 'ನನ ತಮ್ಮ ಎಲಿಗೊಂದು ಮಾತ ಒಗೆದಾನ' ಮೊದಲಾದ ಅವನ ಮಾತಿನ ಚಾಣಾಕ್ಷತೆಯನ್ನು ಕೇಳಿ ಬೆರಗಾಗುವಳು.

ಬಸರಾದರ ತೊಡಬೇಕ, ಹಸಿರ ತಾಬುತಿ ಕುಬುಸ
ಹಸರ್ಯೇಲಿ ಒಳಗ ಉಣಬೇಕ | ನನ ತಮ್ಮ
ಹೊಸ ಬೀಗನಾಗಿ ಬರಬೇಕ ||

ಎಂದು ತಾನು ಬಸಿರು ಬಯಕೆ ಹೊರಬೇಕು; ತಮ್ಮನು ಹೊಸ ಬೀಗನಾಗಿ ತನ್ನ ಮನೆಗೆ ಬರಬೇಕು ಎಂಬ ಪಂಥವನ್ನು ತೊಡುವಳು.

ಕುಂತಾಡು ಮಗಳೀಗೆ, ಕೂದಲ ಬಿಟ್ಟೇನ
ನಗರದ ಚೌರಿ ತರಸೇನ | ಮನಿಯಾನ
ತಮ್ಮಗ ಧಾರಿ ಎರೆದೇನ ||

ಹೀಗೆ ಅಕ್ಕನು ತನ್ನ ಚಿಕ್ಕ ಮಗಳನ್ನು ಸಿಂಗಾರಮಾಡಿ ತಮ್ಮನಿಗೆ ಮದುವೆಯ ಮಾಡಲು ಬಯಸುತ್ತಾಳೆ.

ತಮ್ಮನಂತೆ ತಂಗಿಯೂ ಅಕ್ಕನ ಪ್ರೇಮಕ್ಕೆ ಪಾತ್ರಳಾಗುತ್ತಾಳೆ.

ಆಡೀನ ಮಲಿಹಂಗ, ಜೋಡ ನಾವಿಬ್ಬರ
ಆಡಬ್ಯಾಡ ತಂಗಿ ಕದನವ | ಜಗಳಕ
ಜೋಡೀನ ಹಕ್ಕಿ ಅಗಲ್ಯಾವ ||

ಹೀಗೆ ಅಕ್ಕನು ಅಗಲದವರಂತೆ ಬೆಳೆದ ಅಕ್ಕ ತಂಗಿಯರ ಇರುವನ್ನು ಹಾಡಿದ್ದಾಳೆ. ಚಿಕ್ಕ ತಂಗಿಯು ತಿಳಿಯದೆ ಕದನ ಹೂಡಿದರೆ ಹಾಗೆ ಮಾಡಬಾರದೆಂದು ತಿಳಿಹೇಳಿ ಸಮಾಧಾನ ಮಾಡುತ್ತಾಳೆ. ತಂಗಿಗೆ ಮಂಗಲವಾಗಿ ಸುಖವಾಗಲೆಂದು ಬಗೆಸುವ ಕಾಲದಲ್ಲಿ —

ಹನ್ನೆರಡು ವರುಷಕ್ಕ, ಕನ್ನೆ ಮೈನೆರೆದಾಳ
ನಾನೇನ ಒಯ್ಲೆ ಕೊಡವೀಗಿ | ತಂಗೀಗಿ
ಕನ್ನಡಿ ಕುಬುಸ ನನೆದಂಡಿ ||

ಎಂದು ಆಶೀರ್ವದಿಸಲು ಒಯ್ಯುತ್ತಾಳೆ. ಋತುಮತಿ ದಿನವು ಹೆಣ್ಣಿನ ಆಯುಷ್ಯದಲ್ಲಿ ಅತಿ ಮಹತ್ವದ್ದು. ಅವಳು ಅಂದೇ ನಿಜವಾಗಿ ಹೆಣ್ಣೆನಿಸುವಳು. ಈ ಮೈನೆರೆಯು ವುದು ಹೆಣ್ಣಿನ ಪ್ರಪಂಚದಲ್ಲಿ ಹೆಣ್ಣಾಗಿ ಬಾಳಲು ನಿಸರ್ಗದ ಸನದು ಸಿಕ್ಕಂತೆ. ಅವಳು ಮದುವೆಯಾಗಿ ಫಲವತಿಯಾ ಗುವಳೆಂದು ಇದು ಆಶೆ ಭರವಸೆಗಳನ್ನು ಸೂಚಿಸುತ್ತದೆ. ಆಗ ಆಕೆಗೆ ಹಸರು ಬಳೆ, ನನೆದಂಡೆ ಮೊದಲಾದ ಮಾಂಗಲ್ಯಗಳೇ ಮುಂಬರುವ ಶುಭ ಚಿನ್ಹಗಳನ್ನು ನೋಡುವವರಿಗೆ ಕೋರದಿರವು. ತಂಗಿಯ ಚೆಲುವು ಅವಳ ಕಣ್ಣನ್ನೇ ಕುಕ್ಕುವುದು.

ಹಂಪೀಯ ತೇರೀಗೆ, ಹೊಂದಿ ನಿಂತವಳ್ಯಾರ
ಚೆಂದಾಳದ ಗೊಂಬಿ ನನ ತಂಗಿ | ನಿಂತಾರ
ಚೆಂದಪ್ಪಗ ಛಾಯ ಹಿಡಿಧಾಂಗ

ಅವಳ ಚೆಲುವಿಕೆಯು ಚಂದ್ರನ ಚೆಲುವಿಕೆಯನ್ನು ಹೀಯಾಳಿಸುವುದೆಂದು ಹಾಡಿದ್ದಾಳೆ. 'ತಂಗಿ ತಂಗೀ ಬಾರ, ತಂಬೂಲ ತುಟಿಬಾರ' 'ನನ ತಂಗಿ ನಡದರ | ರದ್ದರನ ತೇರ ಎಳೆಧಾಂಗ' ಎಂಬ ಇವೇ ಮಾತುಗಳು ಅಕ್ಕನು ತಂಗಿಯ ಚೆಲುವಿಕೆಯನ್ನುಂಡು ಆಡಿದ ಸವಿ ನುಡಿಗಳಾಗಿವೆ.

ಸಂತೋಷದ ಸುದ್ದಿ, ಸಂತ್ಯಾಗ ಕೇಳೀನಿ
ಕೆಂಚಿ ನನ ತಂಗಿ ಬಸರಂತ | ಹೇಳ್ಯಾನ
ಹಂಪಿ ಸಾಗರದ ಬಣಜೀಗ ||

ತಂಗಿ ಬಸಿರಿರುವ ಸಂತೋಷದ ಸುದ್ದಿಯನ್ನು ಕೇಳಿ ಅಕ್ಕನ ಪ್ರೀತಿಯು ಅವಳಿಗೆ ಬಸಿರೂಟವನ್ನು ಒಯ್ಯ-ಲಿಚ್ಛಿಸುವುದು.

ಸಜ್ಜೀಯ ರುಚಿರೊಟ್ಟಿ, ಸಜ್ಜಕದ ಹೋಳೀಗಿ
ಗಜ್ಜೂರಿ ಚಿಟ್ಟ ಎಳ್ಳೆಣ್ಣಿ | ತಂಗೆವ್ವ
ಗುಜ್ಜಿ ನಿನ ಬಂಗಿ ತಿಳಿಯಾನ ||

ಹೀಗೆ ಒಯ್ದ ಬಯಕೆಯೂಟವು ತಂಗಿಯ ಹೊಟ್ಟೆಯಲ್ಲಿ ಬೆಳೆಯುವ ಎಂಥ ಕೂಸಿಗೆ ?

ಬಂಗಾರ ಬಳಿಯೊತ್ತಿ, ದುಂಡ ಕಂಕಣವೊತ್ತಿ
ಗೊಂಡೇವ ಒತ್ತಿ ಮಲಗ್ಯಾಳ | ನನ ತಂಗಿ
ದಂಡನಾಳವನ ಬಂಕೇಲಿ ||

ಎಂದು ತಂಗಿಯ ಬಸಿರು ಅರಸಾಗಿ ಹುಟ್ಟಲೆಂದು ಆಶಿಸು ತ್ತಾಳೆ. ತಂಗಿಯು ಶೀಲವಂತ ಶಿವಶರಣೆ. ಅವಳ ಭಾವಕ್ಕೆ ಶಿವನೂ ಸದರಿಳಿಯುವನು.

ಸೀತಾಳ ಕೊಡಪಾನ, ಶಿವಮೊಗ್ಗಿ ಪಾವೂಡ
ಸೀಲವಂತೆವ್ವ ನನ ತಂಗಿ | ಬರುವಾಗ
ಶಿವ-ತನ್ನ ಸದರ ಇಳಿದಾನ ||

ಎಂದು ಹಾಡಿ ಹೊಗಳಿದ್ದಾಳೆ. ಅವಳ ಭಕ್ತಿಗೆ ಶಿವನು ಒಲಿದು ಅವಳಿಗೆ ಸಕಲ ಸಂಪತ್ತು ಕೊಟ್ಟಿರುವನೆಂದು

ವರನುಳ್ಳ ಒಗತನ, ಒಳಗ ಸೇದೀಬಾವಿ
ಹಲಗಿ ತೊಟ್ಟೀಲ ಹಸಗೂಸು | ನನ ತಂಗಿ
ಪಡೆದು ಬಂದೀದಿ ಶಿವನಲ್ಲಿ ||

ಎಂದು ಹಾಡಿ ಆನಂದಬಟ್ಟಿದ್ದಾಳೆ —

ಸರಸ ವಿರಸಗಳ ಸಮ್ಮಿಲನವಾದ ಈ ಬಾಳಿನಲ್ಲಿ ಹಳ್ಳಿಯ ಹೆಣ್ಣಿಗೆ ತನ್ನ ಬಾಲ್ಯದ ಜೀವನವು ನೆನಪಾಗಿ ತವರೂರ ಗೆಳತೆಯನ್ನು ನೆನೆಸುವಳು.

ಮನಿಯ ಮುಂದಿನ ಗೆಳದಿ, ದನಿಯ ಕೂಡಿಸಬಾರ
ದನಿಸುದ್ದ ನಿನ್ನ ಗುಣಸುದ್ದ | ಗೆಳೆದೆವ್ವ
ಗುಣಕ ಕಟ್ಟೇನಿ ಗೆಳೆತನ ||

ಚೆಲುವಿಕೆಗೆ ಗೆಳೆತನ ಕಟ್ಟಿಲ್ಲ. ನಿನ್ನ ಗುಣಕ್ಕೆ ನಾನು ಗೆಳತಿಯಾಗಿರುವೆ, ಎಂದು ಹಾಡುತ್ತಾಳೆ. ಗೆಳತಿಯು ಸೌಭಾಗ್ಯದಲ್ಲಿ ತಾನೂ ಭಾಗವಹಿಸುವಳು. ಅವಳಿಗೆ ತನ್ನ ಗೆಳತಿಯು ಮಗನ ತಾಯಿಯೆಂದು ಬಲು ಹೌಸು; ಒಂದು ಆನಂದ. ಕಂಕುಳಲ್ಲಿ ಮಗುವನ್ನೆತ್ತಿಕೊಂಡು ರಾತ್ರಿಯ ವಸ್ತಿಗೆ ತನ್ನ ಮನೆಗೆ ಬಂದ ಗೆಳತಿಯನ್ನು ಕಂಡು ಹಿಗ್ಗಿ

ಎಳ್ಳಹೂವಿನ ಸೀರಿ, ಕೊರಳಾಗ ಚಿತ್ತಾಕ
ಇರಳ ಬಂದೆತ್ತ ಇಳದಾಳ | ನನ ಗೆಳದಿ
ಅರಳೇಲಿ ಮಗನ ಹೆಸರೇನ ||

ಎಂದು ಪ್ರೇಮಾದರಗಳಿಂದ ಕೇಳುತ್ತಾಳೆ. ಗೆಳತೆಯು ಮಗನ ಹೆಸರು ಕೇಳಿ ಮುದ್ದಾಡಬೇಕೆಂಬ ಹಿರಿಯಾಶೆ -

ಗಂಡನ ಮನೆಗೆಲಸವೆಂದರೆ ಅರಿಕೆಯಿಲ್ಲದ ದುಡಿಮೆ. ಎಷ್ಟು ದುಡಿದರೂ ಆ ಮನೆಗೆ ಕಣ್ಣೇ ಇಲ್ಲ.

ಮಾತ್ತೀಗಿ ಮಲಕಿಲ್ಲ, ರೀತಿಗಿ ತೊಡಕಿಲ್ಲ
ಸಾಸೀವಿ ಕಾಳೆ ಹುಳಕಿಲ್ಲ | ಅತ್ತೀಗಿ
ಸೋಸಿ ನಡೆದರ ಅರಕಿಲ್ಲ ||

ಎಂದು ತನ್ನ ದಿನದ ದುಡಿಮೆಯನ್ನು ಸ್ಮರಿಸಿ ಹಾಡಿ, ಸೋತು ಉದ್ಗಾರ ತೆಗೆದಿದ್ದಾಳೆ. ಪ್ರಪಂಚದಲ್ಲಿ ಅವಳಿಗೆ ಮನಸ್ತಾಪವಾಗುವುದೂ ಉಂಟು. ಪ್ರೇಮ ಪುತ್ಥಳಿ ಮನೆಯಲ್ಲಿದ್ದರೆ ಸಾಕು. ಅವಳು ಏನೂ ಲೆಕ್ಕಕ್ಕೆ ತಾರಳು.

ಕೂಲಿ ಮಾಡಿದರೇನ, ಕೋರಿ ಹೊತ್ತರೇನ
ನಮಗ ನಮರಾಯ ಬಡವೇನ | ಬಂಗಾರ
ಮಾಲ ಇದ್ದಾಂಗ ಮನಿಯಾಗ ||

ಅಂತೆಯೇ ಹೆಣ್ಣು ಗಂಡಿನ ಕೈಹಿಡಿದು ತಾಯಿಯು ಬಿಟ್ಟು ಗಂಡನ ಬೆನ್ನುತ್ತಿ ಬೇರೆ ಮನೆಯನ್ನೇ ಸಂಪಾದಿಸುವಳು. ಇರುತಿರುತ ಅವಳಿಗೆ ಮಕ್ಕಳ ಚಿಂತೆಯಾಗಿ 'ಬಂಜೆಂಬ ಶಬುದ' ಈ ಜನುಮದಲಿ ಬೇಡೆಂದು ದೇವರಿಗೆ ಬೇಡಿಕೊಳ್ಳುವಳು.

ಕಂದನ ಕುಡು ಶಿವನೆ, ಬಂಧನ ಬಿಡಲಾರೆ
ಹಂಗೀನ ಬಾನ ಉಣಲಾರೆ | ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ ||

ಕೊಟ್ಟ ಮನೆ ಬೆಳಗಿಸುವುದು, ಕುಡಿದೀಪ ಅಮರಜ್ಯೋತಿಯಾಗಿ ಕುಲವೇ ಉದ್ಧಾರವಾಗುವುದು ಹೆಣ್ಣಿನಿಂದಲ್ಲವೇ? ಮಕ್ಕಳಿಲ್ಲದ ಜೀವ ವ್ಯರ್ಥವೆಂದು ಬೇಸೊತ್ತು ಹೆಣ್ಣಿನ ಜೀವವು ಮನಸ್ಸಿನಲ್ಲಿ ಏನೇನೊ ಬಯಸುವುದು.

ಆಡುಮಕ್ಕಳ ಕಂಡು, ಬೇಡಿತ್ತ ನನ ಜೀವ
ಕೇಳಿದ್ದನೇನ ಶಿವರಾಮ | ಹೊಟ್ಯಾಗ
ಮೂಡಿದ್ದನೇನ ಮಗರಾಮ ||

ಎಂದು ಬಸಿರು ಬಯಕೆಯ ಹಂಬಲವು ಮನದಲ್ಲಿ ಸುಳಿದಾಡಿ ಹೆಣ್ಣು ಗೊನೆ ಹೊತ್ತು ತೃಪ್ತಿಯಾಗುವುದು.

ಪ್ರಪಂಚದ ಎಲ್ಲ ಸನ್ನಿವೇಶಗಳನ್ನು ತೋಡಿ ತೋಡಿ ಹಾಡುವ ಹೆಣ್ಣು ನಾಡಗಲಿಗಳ ಹಾಗೂ ಶಿವಶರಣರ ಚರಿತೆಗಳನ್ನು ಮರೆಯಬಹುದೇ? ಕಿತ್ತೂರ ಮರಂತವನ್ನೂ ನರಗುಂದ ಕನಿಕರ ಸ್ಥಿತಿಯನ್ನೂ ಹಾಡಿ ಕಣ್ಣೀರು ಸುರಿಸುವಳು. ಬೆಳುವಲ ಒಕ್ಕಲಿಗನು ಕುಮಾರರಾಮನಿಗೆ 'ಕೋಮರಾಮ'ನೆಂದು ಕರೆದು ಹಂತಿಯ ಹೊಡೆದಿದ್ದರೆ ಹೆಣ್ಣು 'ಕರ್ನಾಟಕ ಕಂದ' ಎಂದು ಕರೆದು ಅವನಿಗೆ ಬಂದ ಹೆರಲಿಯನ್ನು ಹಾಡಿ ದುಃಖಿಸಿದ್ದಾಳೆ. ಈ ಬೀಸುವ ಹಾಡು ಎಲ್ಲರೂ ಕನಿಕರಪಡುವಂಥದಾಗಿದೆ. ಈ ಹಾಡನ್ನು ಕೇಳಿದ ಹೆಂಗರಳು ಮಮ್ಮಲ ಮರುಗಿ ಕಂಬನಿ ಸುರಿಸಿ ಅತ್ತೇಬಿಡುವುದು ಹಾಡಿನಲ್ಲಿ ಬಂದ ಕಥೆ ಅರಮನೆಯಲ್ಲಿ ಕುಮಾರರಾಮನ ಮೇಲೆ ಬಂದ ಹರಲಿ. ಹಾಡು ಕೇಳುವುದಕ್ಕೆ ಬಲು ಇಂಪಾಗಿದೆ. ಬೆಳುವಲದ ಹೆಣ್ಣು ಬೀಸುವಾಗ ಈ ಹಾಡವನ್ನು ಬಲು ಮನರಂಜಕವಾಗಿ ಹಾಡುವಳು.

ಕರನಾಟ ಕಂದಗ ಹೆರಲೀಯ ಕೊಡಲಾರೆ, ||ಪ||
ಹೆರಲೀಯ ಕೊಡಲಾರೆ, ಕರನಾಟ ಕಂದಗ
ವರಬೊಲ್ಲ ತಂದ ಕೊಮರಾಗ | ಕಣದಾಗ
ತುರುಕರ ಗೆದ್ದ ವೀರಾಗ ||
ಕಥೆಯ ಕೇಳರಿ ಜನರೆ, ಮುತಿಯಿಟ್ಟು ತೂಗುತಲಿ
ಸುತಗ ಮನಸೋತ ಕಲಿಯುಗದ | ಮಲತಾಯಿ
ಬತವ ಹಾಡೇವ ನಿಜಗಥೆಯ ||
ಅರಸ ಕಂಪಿಲರಾಯ, ಸರಸ ಬ್ಯಾಟೆಗೆ ಹೋದ
ಅರಸಿ ರತ್ನಾಲಿ ಮನಿಯಾಗ | ಮೋಹಿಸಿದ
ಎರಕ ಕೊಮರಾಮ ಎದಿಯಾಗ ||

ಇಂಥ ಅನೇಕ ಪದ್ಯಗಳುಳ್ಳ ಐತಿಹಾಸಿಕ ವೀರಗಲಿಗಳ ಹಾಡುಗಳನ್ನಲ್ಲದೆ ಶಿವಭಕ್ತಿ ಸಂಪನ್ನೆಯಾದ ಈ ಹೆಣ್ಣು ಅನೇಕ ಶಿವಶರಣರ ಹಾಡುಗಳನ್ನು ಹಾಡಿ ಬೀಸುವಳು. ಅವಳು ಹಾಡುವ ಅನೇಕ ಹಾಡುಗಳಲ್ಲಿ 'ಕಲ್ಯಾಣ' ಹಾಡು ಎಲ್ಲರ ಮನವನ್ನು ಸೆಳೆಯದಿರದು.

ಸಾಗಿ ಸದ್ಗುರು ಯೋಗಿ ಬಂದರ ಹೋಗಿ
ನೋಡುಣ |
ಗುರುಮೋಕ್ಷವ ಬೇಡುಣ || ಪ ||
ಕಲ್ಯಾಣ ಮನಿಯಾಗ, ಎಲ್ಲ ಶರಣರ ಕಂಡೆ
ಬಲ್ಲಿದನ ಕಂಡೆ ಬಸವಣ್ಣನ || ಗುರುವೆ || ಪಾದಕ
ಚೆಲ್ಯಾಡಿ ಬಂದೆ ನನ ಮನವ ||ಗು|| ಸಾಗಿ........
ಶರಣರ ನೆನೆದಾರ, ಸರಗೀಯ ಇಟ್ಟಂಗ
ಅರಳ ಮಲ್ಲೀಗಿ ಮುಡಿದಂಗ ||ಗು|| ಕಲ್ಯಾಣ
ಶರಣರ ನೆನೆಯೊ ಎಲೆಮನವ ||ಗು||ಸಾ||

ಹೂವಾಗಿ ಅರಳ್ಯಾರ, ಆವಾಗಿ ಕರೆದಾರ
ದೇವರಿಗೆ ಮಿಗಿಲ ಕಲ್ಯಾಣ ||ಗು|| ಶರಣರಿಗೆ
ಯಾವ ಬಗೆಯಿಂದ ನೆನೆಬೇಕ ||ಗು||ಸಾ||
ಅಂಗಳದ ಮಂಟಪಕ, ಲಿಂಗ ಬೆಳದಿಂಗಳವ
ಜಂಗ ನುಡಿಸಿದರ ಕಲ್ಯಾಣ ||ಗು|| ಜಂಗಮರ
ಸಂಗ ಶಿವಬೆಳಕು ನಿಜಪದಕ ||ಗು||ಸಾ||
ಓಂ ಶಿವನೆ ಬಸವಣ್ಣ, ಓಂ ಶಿವನೆ ಪ್ರಭುದೇವ
ಓಂ ಶಿವನ ಶಕ್ತಿ ಚನಬಸವ ||ಗು|| ಕಲ್ಯಾಣ
ಓಂ ಶಿವನೆ ಶರಣು ಶರಣರಿಗೆ ||ಗು||ಸಾ||

ಹೀಗೆ ಕಲ್ಯಾಣ ಶರಣರನ್ನು ಹಾಡಿಕೊಂಡಾಡಿದ್ದಾಳೆ. ಈ ಪ್ರಕಾರ ಅವಳ ಮನವು ಪರಿಪಕ್ವವಾಗಿ ಇಡಿ ಪ್ರಪಂಚವನ್ನು ಪರಮಾತ್ಮನೊಡನೆ ಬೆರಿಸಿ ಹಾಡುವುದು. ಬೀಸುವ ಕಡೆ-ಮುಕ್ಕನ್ನರಿತು ನೋಡಲು ಬೆಳಗಿನ ಬೆಳ್ಳಿಯು ಮೂಡಿ ಮೇಲೆ ಬಂದದ್ದನ್ನು ಕಂಡು,

ಬೆಳ್ಳಗೆ ಬೆರಗಾಗಿ, ಬೆಳ್ಳಿ ಮೂಡಲವಾಗಿ
ಒಳ್ಳೊಳ್ಳೆ ಮೀನ ಗರಿತಗೆದು | ಆಡ್ಯಾವ
ಗರತಿ ಗಂಗಮನ ಉಡಿಯಾಗ ||

ಎಂದು ಅವಳಿಗೆ ಹೊರಗಿನ ಅರುವಾಗಿ ನಿಸರ್ಗದ ಒಂದು ಎಂದೂ ಮಾಸದ ಬೆಳಗಿನ ಸುಂದರವಾದ ಚಿತ್ರವನ್ನೇ ಚಿತ್ರಿಸುವಳು. ಬೆಳಗಾಯಿತು. ಮತ್ತೆ !ಪ್ರಪಂಚ-ಪರ್ಯಟನಕ್ಕೆ ಅನುವಾಯಿತು. ತಾನು ಮೈಮರೆತು ಹಾಡುವ ರಸಾವೇಶಗಳು ಇನ್ನೂ ಉಳಿದವೆಂದು ಅರಿತು

ಆದಾವ ನಮ ಜೋಳ, ತೀರಾವ ನಮ ಹಾಡ
ಸಾಕ ಗೌರವ್ವ ಕೈ ಬೀಡ | ನನ ಮನಿಯ-
ಗ್ಯಾನದತ್ತೆವ್ವ ಬೈದಾಳ ||
ಆಗೂವ ಮುಕ್ಕೀಗೆ, ನಾ ಯಾರ ನೆನೆಯಾಲೆ
ರಾಜೀವ ಸಲುವ ಬಸವಣನ | ಹೇಣೂತಿ
ನೀಲವನ ಹಾಡಿ ನಿಲಸೇವ ||

ಎಂದು ಮುಕ್ತಾಯಮಾಡಿ ಕಡೆ-ಮುಕ್ಕು ಜಾಡಿಸಿ ಕಲ್ಲು ನಿಲ್ಲಿಸುವಳು. ಹಗಲಿನಲ್ಲಿ ತನಗಾದ ಪ್ರಪಂಚದ ಭಾರವನ್ನು ಬೀಸುತ್ತ ಹಾಡಿ ಕಷ್ಟ-ನಷ್ಟಗಳನ್ನು ಮರೆತು ಬೆಳಗು ಹರಿಯಲು ಹೊಸಬಳಾಗಿ ಹಸನ ಮನಸಿನಿಂದ ಮತ್ತೆ ಪ್ರಪಂಚಕ್ಕೆ ಹೆಣ್ಣು ಧುಮುಕುವುದು.

ಹೆಣ್ಣಿನ ಪಾಲಿಗೆ ಮಕ್ಕಳ ಲಾಲನೆ-ಪಾಲನೆಯು ಅತಿ ಮಹತ್ವವಾದ ಮನೆಗೆಲಸ. ಗೊನೆ ಹೊತ್ತ ಹೆಣ್ಣು ಫಲವತಿಯಾದ ಮೇಲೆ ಮಗುವೆತ್ತಿ ' ಲಾಲನೆ ಪಾಲನೆ ಮಾಡುವುದು ಅವಳ ಪಾಲಿಗೆ ಒಂದು ಹಿಗ್ಗು; ಆನಂದ.

ತೊಟ್ಟಿಲದಾಗೊಂದು, ತೊಳೆದ ಮುತ್ತನ ಕಂಡೆ
ಹೊಟ್ಟೆ ಮ್ಯಾಲಾಗಿ ಮಲಗ್ಯಾನ | ಕಂದೈಗ
ಮುತ್ತಿನ ದೃಷ್ಟಿ ತಗೆದೇನ ||

ಅವಳಿಗೆ ಮಗನ ಲಾಲನೆ-ಪಾಲನೆಯ ಸೊಗಸೇ ಸೊಗಸು.

ಕಂದನ ಕಿರಿಕಿರಿ, ಇಂದೇನು ಹೇಳಲಿ
ಬಿಂದೀಗಿ ಹಾಲ ಸುರುವಂದ | ಭೆಂಜೀಯ
ಚಂದ್ರಮನ ತಂದು ನಿಲಿಸೆಂದಾ ||
ಹಾಲ ಬೇಡ್ಯತ್ತಾನ, ಕೋಲುಬೇಡಿ ಕುಣದಾನ
ಮಸರ ಬೇಡಿ ಕೆಸರು ತುಳಿದಾನ | ಕಂದಯನ
ಕುಸಲದ ಗೆಜ್ಜಿ ಕೆಸರಾಯ್ತು ||

ಎಂದು ಬೆಳೆಯುವ ಕಂದನ ಹಟಮಾರಿತನವನ್ನು ಹಾಡಿ ತಾಯಿಯು ಆನಂದಬಟ್ಟಿದ್ದಾಳೆ. ಅದಾವ ಕಾರಣವೊ ಮಗು ಮಲಗದೆ ಅಳಹತ್ತಲು ಹಡೆದ ಹೊಟ್ಟೆ ತಳಮಳಿಸಿ ದೇವರಿಗೆ ಹರಕೆ ಹೊರುವುದು; ಮುಡುಪು ಕಟ್ಟುವುದು.

ಅಳುಬಂದು ಅತ್ತರಿಯ, ಹಸ್ತು ಬಂದುಂಡರಿಯ
ಎತ್ತಿಕೊಳ್ಳೆಂಬ ಹಟವರಿಯ | ನನ ಕಂದ
ಆಳದಾತ ಅತ್ತ ಬಗೆಯೇನ ||

ಆದರೆ ಇಂದು ಅವಳಿಗೆ ಎಲ್ಲವೂ ಸೋಜಿಗವು. ಮಗು ಕಾರಣವಿಲ್ಲದೆ ವಿಪರೀತವಾಗಿ ಕಾಡಹತ್ತಿದೆ; ಅಳಹತ್ತಿದೆ.

ಜೋಗೂಳ ಹಾಡಿದರ, ಆಗಳೇ ಕೇಳ್ಯಾನ
ಹಾಲ ಹಂಬಲ ಮರತಾನ | ಕಂದೈಗ
ಜೋಗೂಳದಾಗ ಅತಿ ಮುದ್ದ ||

ಎಂದು ತೊಟ್ಟಿಲಲ್ಲಿ ಹಾಕಿ ಗಲ್ಲಿಸಿ ಜೋಗುಳವಾಡುವಳು.

ಜೋ ಜೋ| ಜೋಯೆನ್ನ ಚೆನ್ನಮಾಯಿ
ಜೋ ಜೋ ||ಪ
ಭೂಮಿ ಹೊತ್ತಾಳ್ಯಾನ ಭೂಮಿ ಹೊತ್ತಿಳಿವ್ಯಾನ
ಜೋ ಜೋ
ಕಲ್ಯಾಣ ಚನಬಸವೆಂದು ಹೆಸರಿಡರೆವ್ವ
ಜೋ ಜೋ
ಬೊಟ್ಟು ಕುಂಕುಮದವರು ಉಡಿಯಕ್ಕಿ ತುಂಬಿ
ಜೋ ಜೋ

ರನ್ನ ಮುತ್ತೈದೇರು ಗಲ್ಲೀಸಿ ಜೋಗಳ
ಜೋ ಜೋ ||
ಗಾಳಿ ಹಗ್ಗಮಾಡಿ ಭೂಮಿ ತೊಟ್ಟಿಲಮಾಡಿ
ಜೋ ಜೋ |
ಆಕಾಶ ದೊಂಕೀಗೆ ಕಟ್ಟಿದರವ್ವ ಜೋ ಜೋ||
ಮಡದಿ ನೀಲಮ್ಮ ಬಸವಯ್ಯ ತಾ ಬಂದು
ಜೋ ಜೋ|
ಅಳಿಯ ಚಿನಬಸವೆಂದು ಹೆಸರಿಟ್ಟು ತೂಗ್ಯಾರ
ಜೋ ಜೋ||

ಎಂದು ಚಿನ್ನಬಸವನ ಜೋಗುಳ ಹಾಡಿ ಗಲ್ಲಿಸುವಳು. ಮಗು ಶಾಂತವಾಗದೆ ಕಿರಿ ಕಿರಿ ಮಾಡಹತ್ತಲು ಮತ್ತೆ

ನಾಗಗನ್ನೇರೆಲ್ಲ ಬಂದೀರಿ ಕೂಡಿ
ದೇವಗನ್ನೇರೆಲ್ಲ ಇಂದ ನಲಿದಾಡಿ
ನಾಗ ಮುಕ್ಕುಂದ ನಾಮ ಕೊಂಡಾಡಿ| ಹಿಂಗ
ಜೈಯೆಂದು ಪಾಡಿರಿ ಶ್ರೀಕೃಷ್ಣನೆಂದು ಜೋ ಜೋ||
ಮನಗ್ಯಾನೊ ಕಂದ ಮಾತಿನ ಗಿಣಿಯೆ
ಹತ್ತು ದಿಕ್ಕಿಗೊಪ್ಪು ಮುತ್ತಿನ ತೆನಿಯೆ
ಮತ್ತ ಪೇಳಿದರ ರತ್ನದ ಕಣಿಯೆ| ಹರೀ
ಇಂದ್ರಂಬ್ರದೊಳೊಪ್ಪು ಅಮೃತ ಧನಿಯೆ||
ಜೋ ಜೋ||

ಎಂದು ಜೋಹಾಡಿ ಮಗುವನ್ನು ಮಲಗಿಸಲು ಯತ್ನಿಸುವಳು. ಆದರೆ ಅವಳ ಯತ್ನವು ಸಫಲವಾಗದೆ ಮಗು ತನ್ನ ರಂಭಾಟವನ್ನೆಬ್ಬಿಸಲು ಹಡೆದ ತಾಯಿ ಗಾಬರಿಯಾಗಿ ತೊಟ್ಟಿಲದ ಕೂಸನ್ನೆತ್ತಿಕೊಂಡು ತೊಡೆಯ ಮೇಲೆ ಹಾಕಿ ಚಪ್ಪರಿಸಿ ಹಾಡಹತ್ತುವಳು.

ಜೈ ಜೈ ಜೈ ಚಿರಗುಬ್ಬಿ|
ಚಿಕನಮ ಕಂದನ ಕಂಡೀರಿ|
ಕಂಡವರ್ಯಾತಕ ಬಿಟ ಬಂದಿರಿ ||ಪ||
ಬಣ್ಣಬಣ್ಣದಾ ಬೋರಂಗಿ
ಬನಕೆ ಹಾರುತ ಹೋಗುತಲಿ
ಹಿಡಿಯಲು ಕಾಡನು ಸೇರಿದನ
ಕಾಡಿಗೆ ಮೆಚ್ಚಿದನ||
ಆನೆಯ ಕೊಡುವೆನು ಬಾಯೆಂದೆ
ಒಂಟಿಯ ಕೊಡುವೆನು ಬಾಯೆಂದೆ
ಮುತ್ತಿನಂಥ ಹೆಣ್ಣ ಕೊಡುವೆನು
ಬಾಯೆಂದು ಕೂಗಿದೆ||

ಎಂದು ಹಾಡಿ ಚಪ್ಪರಿಸಲು ತಾಯಿಯ ಅಂಗ ಸಂಪರ್ಕದಿಂದ ಮಗು ನಿರ್ಭಯವಾಗಿ ನಿದ್ದೆ ಹೋಗುವುದನ್ನು ಜೀವನದಲ್ಲಿ ಕಣ್ಣಾರೆ ಕಾಣಬಹುದು. ಇಂತಹ ಸಂಗೀತ ಸಂಯೋಗದಲ್ಲಿ ಅರು ಮೈಮರೆಯಲಿಕ್ಕಿಲ್ಲ?

ಪ್ರಪಂಚ ನೌಕೆಗೆ ಈ ಸಂಸಾರ ಸಾಗರದಲ್ಲಿ ಹೆಣ್ಣೇ ಚುಕ್ಕಾಣಿ. ಅವಳನ್ನುಳಿದು ಗಂಡಿಗೆ ಗತಿಯಿಲ್ಲ. ಅನೇಕ ಎಡರು ತೊಡರು ಬಂದರೂ ಪ್ರಪಂಚದ ಭಾರವನ್ನು ಹೊರಲು ಗಂಡು–ಹೆಣ್ಣಿನ ಮನವು ಅವುಗಳನ್ನು ಎದುರಿಸಿ ಮಸೆದು ಮತ್ತಿಷ್ಟು ಹದನಾಗುವುದು. ಪ್ರಪಂಚವು ಸುಲಲಿತವಾಗಿ ಸಾಗಲೇಬೇಕು; ಆದದ್ದನ್ನು ಮರೆತು ಬರುವುದನ್ನು ಸ್ವಾಗತಿಸಲೇಬೇಕು. ಒಬ್ಬರು ಎಡವಿದರೆ ಮತ್ತೊಬ್ಬರು ಎತ್ತಿ ನಿಲ್ಲಿಸಲೇಬೇಕು. ಹುಟ್ಟಿದ ಮನೆ ಬಿಟ್ಟು, ಕೊಟ್ಟ ಮನೆಯನ್ನು ಸೇರುವ ಹೆಣ್ಣು ಆ ಮನೆಯ ವಾತಾವರಣಕ್ಕೆ ಹೊಂದಿಕೊಂಡು ಹೋಗಲೇಬೇಕು. ಗಂಡು ಬಿರುಸಾದರೂ ಹೆಣ್ಣು ಕೋಮಲ ಹೃದಯದವಳಾಗಿ ಗಂಡಿನೊಡನೆ ನಕ್ಕು ಪ್ರಪಂಚ ಸಾಗಿಸಲೇಬೇಕು. ಅಂತೆಯೇ ನಮ್ಮ ಬಾಳು ನಗೆ ಹೊಗೆಗಳ ಸುಳುವುಳ್ಳ ಮನೋಹರ ರಂಗಶಾಲೆ.

ಹೆಣ್ಣಿನ ಈ ರಸಾವೇಶಗಳು ಅವಳು ಉಂಡು ಅರಗಿಸಿದ ಬಾಳಿನ ಎಂದೂ ಮಾಸದ ಚಿತ್ರಗಳು. ಬಾಳಿದು ಅವಳಿಗೆ ಕೇವಲ ಕಸಸಲ್ಲ. ಪ್ರೇಮಿಗಳು, ತುಂಬಿ ಹರಿಸುವ ರಸನಿಮಿಷಗಳ ಸಂಗಮ. ಕೆಲಕಾಲ ಸುಕ್ಕುವುದೂ ಉಂಟು; ಕೆಲಕಾಲ ಉಕ್ಕುವುದೂ ಉಂಟು. ಹೇಗಿದ್ದರೂ ಬಾಳು ಬದುಕ ಬೇಕಲ್ಲವೇ? ಅಂತೆಯೇ ಜಗತ್ತಿನಲ್ಲಿ ನಾವು ಕೈಕೊಳ್ಳುವುದು ಸಂಸಾರ ಯಾತ್ರೆ! ಈ ರಸಾವೇಶದ ಹಾಡುಗಳನ್ನು ಹಾಡುವ ನಮ್ಮ ಹಳ್ಳಿಯ ಹೆಣ್ಣು ಮಕ್ಕಳು ರಸಿಕರಲ್ಲವೇ? 'ಕಾವ್ಯಕ್ಕೆ ರಸವೇ ಕಣ್ಣು' ಎಂಬಂತೆ ಈ ಹೆಣ್ಣು ಮಕ್ಕಳ ಬೀಸುವ ಹಾಡುಗಳು ಬಿಡಿ ಪದ್ಯಗಳಿದ್ದರೂ ರಸಾತ್ಮಕವಾದ ಕಾವ್ಯದ ಬಿಡಿ ಮುತ್ತುಗಳಲ್ಲವೇ? ಈ ಎಲ್ಲ ಹಾಡನ್ನು ಕೇಳುವ ನಮಗೆ ಜಾನಪದವು ವಸಂತ ಮಾಸದಲ್ಲಿ ಹಾರಾಡಿ ಹಾಡುವ ಕೋಗಿಲೆ ಏನೋ ಎಂಬಂತೆ ಭಾಸವಾಗದಿರದು.

ಪ್ರ ಕ ಟ ನೆ

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ

ಪರೀಕ್ಷೆಯ ಫೀಯನ್ನು ಕಳುಹಿಸುವ ಕ್ರಮ

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಉಪನಿಯಮಾವಳಿಗಳ ೯ನೆಯ ನಿಯಮದನ್ವಯ ಶಾಲೆಗಳ ಮುಖ್ಯಾಧ್ಯಾಪಕರು ತಮ್ಮ ಶಾಲೆಗಳಿಂದ ಪರೀಕ್ಷೆಗೆ ಕೂಡ್ರ ಬಯಸುವ ವಿದ್ಯಾರ್ಥಿಗಳಿಂದ ಪರೀಕ್ಷೆಯ ಫೀಯನ್ನು ಸ್ವೀಕರಿಸಬಹುದು. ಮತ್ತು ಈ ಪ್ರಕಾರ ವಸೂಲ ಮಾಡಿದ ಹಣವನ್ನು ಅತಿ ಸಮೀಪದಲ್ಲಿಯ ಸರಕಾರಿ ಟ್ರೇಝುರಿಯಲ್ಲಿ—"೨೬ ಎಜ್ಯುಕೇಶನ್"—ಬಜೆಟ್ ಸದರಿಗೆ ಭರಣಾ ಮಾಡಬಹುದು. ಮತ್ತು/ಇಲ್ಲವೆ ಅಂಚೆಯ ಮುಖಾಂತರ ಸಂಬಂಧಪಟ್ಟ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಕೇಂದ್ರಾಧ್ಯಕ್ಷರಿಗೆ ನೇರವಾಗಿ ಕಳುಹಿಸಬಹುದು. ಟ್ರೇಝುರಿಯಲ್ಲಿ ಹಣವನ್ನು ಭರಣಾ ಮಾಡಿದ ಬಗ್ಗೆ ಚಲನಗಳನ್ನು ಸಂಬಂಧಪಟ್ಟ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಕೇಂದ್ರಾಧ್ಯಕ್ಷರಿಗೆ ಉಮೇದವಾರರ ಅರ್ಜಿಗಳೊಂದಿಗೆ ಕಳುಹಿಸಿಕೊಡಬೇಕು. ಅದರಂತೆಯೇ ಕೆಳಗೆ ನಿರ್ದಿಷ್ಟ ಪಡಿಸಲಾದ ಪತ್ರಿಕೆಯನ್ನೂ ಕಳುಹಿಸಿಕೊಡಬೇಕು:—

(೧) ಶಾಲೆಯ ಹೆಸರು...............

(೨) ಶಾಲೆಯ ಪೂರ್ಣ ಅಂಚೆಯ ವಿಳಾಸ...............

(೩) ಶಾಲೆಯಿಂದ ಪರೀಕ್ಷೆಗೆ ಕಳುಹಲ್ಪಟ್ಟ ನಿಯಮಿತ ವಿದ್ಯಾರ್ಥಿಗಳ ಸಂಖ್ಯೆ :—

  (ಅ) ಹಿಂದುಳಿದ ವರ್ಗದವರಲ್ಲದ ವಿದ್ಯಾರ್ಥಿಗಳು...............

  (ಬ) ಹಿಂದುಳಿದ ವರ್ಗದ ವಿದ್ಯಾರ್ಥಿಗಳು...............

(೪) ಹೊರಗಿನಿಂದ ಕೂಡ್ರುವ ಹಾಗೂ ಖಾಸಗಿ ವಿದ್ಯಾರ್ಥಿಗಳ ಸಂಖ್ಯೆ :—

  (ಅ) ಹಿಂದುಳಿದ ವರ್ಗದವರಲ್ಲದ ವಿದ್ಯಾರ್ಥಿಗಳು...............

  (ಬ) ಹಿಂದುಳಿದ ವರ್ಗದ ವಿದ್ಯಾರ್ಥಿಗಳು...............

(೫) ಪರೀಕ್ಷೆಗೆ ಕೂಡ್ರಲು ಕಳುಹಲ್ಪಟ್ಟ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ...............

(೬) ಟ್ರೇಝುರಿಯಲ್ಲಿ ಭರಣಾ ಮಾಡಿದ ಫೀ ಹಣ...............

(೭) ಅಂಚೆಯ ಮುಖಾಂತರ ಕಳುಹಿಸಿದ ಫೀ ಹಣ...............

[**ಸೂಚನೆ :-** ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಫೀ ಪ್ರತಿಯೊಬ್ಬ ವಿದ್ಯಾರ್ಥಿಗೆ ರೂಪಾಯಿ ೧ (ಒಂದು) ಮತ್ತು ಉಳಿದವರಿಗೆ ಪ್ರತಿಯೊಬ್ಬ ವಿದ್ಯಾರ್ಥಿಗೆ ರೂಪಾಯಿ ೩ (ಮೂರು) ಇರುತ್ತದೆ.]

ಮೇಲೆ ಸೂಚಿಸಲಾದ ಕ್ರಮವು ೧೯೫೬ ರಲ್ಲಿ ಜರುಗುವ ಪರೀಕ್ಷೆಯಿಂದ ಅಮಲಿನಲ್ಲಿ ಬರುವದು.

ಸಹಿ x x x x
ಡಾಯರೆಕ್ಟರ ಆಫ್ ಎಜ್ಯುಕೇಶನ್
ಅವರ ಪರವಾಗಿ

ಸಂ. S-೬೨ (g) ೩೦೭-D (P.SC.)
ದಿನಾಂಕ ೨೬—೪—೧೯೫೫

ಕವಿವರ್ಯ 'ಕುವೆಂಪು' ಅವರ ಶುಭಾಶಯ

ಮೈಸೂರ ವಿಶ್ವವಿದ್ಯಾಲಯ

೪೪೬ / ೨೯—೪—೫೫

ಮಹಾರಾಜಾ ಕಾಲೇಜ, ಮೈಸೂರು;
ದಿನಾಂಕ:- ೨೯—೪—೧೯೫೫.

ಮಾನ್ಯರೆ,

ನಂ. ೪೦೧ | ೨೨—೪—೧೯೫೫ ರ ತಮ್ಮ ಕಾಗದವು ಬಂದು ಮುಟ್ಟಿತು. ಅಭಿನಂದನಕ್ಕಾಗಿ ವಂದನೆಗಳು.

ತಮ್ಮ ಪತ್ರಿಕೆಯು ೧೮೭೩ರಿಂದ ನಡೆಯುತ್ತಿರುವುದು ಸಂತೋಷಕರವಾದದ್ದು. ತಮ್ಮ ಪತ್ರಿಕೆಯು ಇತೋಽಪ್ಯತಿಶಯ-ವಾಗಿ ಪ್ರಾಥಮಿಕ ಶಿಕ್ಷಕರ ದೈನಂದಿನ ಕಾರ್ಯದಲ್ಲಿ ಬೆಳಕು ನೀಡಲೆಂದು ಹಾರೈಸುತ್ತೇನೆ.

ಇತಿ ನಮಸ್ಕಾರಗಳು.

ಕುವೆಂಪು.

ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ

ಅನುವಾದಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ. ಎ., ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ ಹಾಗೂ ಗೌರವ ಕಾರ್ಯದರ್ಶಿ
ಮತ್ತು ಲಾಯಿಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

೬ನೆಯ ಪ್ರಕರಣ

:: ಸಂಘಟನೆ (೧) ::

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವೈಯಕ್ತಿಕವಾದ ಶಿಕ್ಷಣ

ಹಳೆಯ ಪದ್ಧತಿಯ ಸಾಲೆಗಳಲ್ಲಿ ವೈಯಕ್ತಿಕ ಶಿಕ್ಷಣವು ಬಳಿಕೆಯಲ್ಲಿತ್ತು. ಶಿಕ್ಷಕನು ಪ್ರತಿಯೊಂದು ಮಗುವನ್ನು ತನ್ನ ಹತ್ತರ ಕರೆದು ಓದು-ಬರಹ-ಗಣಿತಗಳನ್ನು ಆದರ ಯೋಗ್ಯತೆಗನುಸರಿಸಿ ವೈಯಕ್ತಿಕವಾಗಿ ಕಲಿಸುತ್ತಿದ್ದನು. ೨೦ ಇಲ್ಲವೆ ೩೦ ಮಕ್ಕಳುಗಳುಳ್ಳ ಸಣ್ಣ ಹಳ್ಳಿಯ ಸಾಲೆಯಲ್ಲಿ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನು ವೈಯಕ್ತಿಕವಾಗಿ ಕಲಿಸುವ ಹಳೆಯ ಪದ್ಧತಿಯನ್ನೇಕೆ ರೂಢಿಯಲ್ಲಿ ತರಬಾರದು? ಪ್ರಗತಿಪರ ಶಿಕ್ಷಣದಲ್ಲಿ ವೈಯಕ್ತಿಕವಾಗಿ ಕಲಿಸುವದಕ್ಕೆ ವಿಶೇಷ ಮಹತ್ವವಿದೆ. ಹಾಗೆ ಮಾಡುವದರಿಂದ ಒಬ್ಬನೇ ಶಿಕ್ಷಕನ ನೇತೃತ್ವದಲ್ಲಿ ಒಂದೇ ವೇಳೆಗೆ ಎಲ್ಲ ಮಕ್ಕಳು ದುಡಿಯುತ್ತಾರಲ್ಲದೆ ಪ್ರತಿಯೊಂದು ಮಗುವು ತನ್ನ ಉದ್ದೇಶ ಸಾಧನೆಗಾಗಿ ತನ್ನದೇ ಆದ ಗತಿಯಿಂದ ತನಗೆ ಒಗ್ಗುವ ರೀತಿಯಂತೆ ತನ್ನ ಮನಸ್ಸಿಗೆ ಬಂದ ಕೆಲಸವನ್ನು ಮಾಡುತ್ತಿದೆ. ವೈಯಕ್ತಿಕವಾಗಿ ಕಲಿಸುವ ಪದ್ಧತಿಯು ಸಾಮೂಹಿಕವಾಗಿ ಕೆಲಸ ಮಾಡುವದನ್ನು ಪ್ರತಿಬಂಧಿಸುವದಿಲ್ಲ. ಯಾಕಂದರೆ, ಸಾಮೂಹಿಕವಾಗಿ ಕೆಲಸ ಮಾಡುವದರಲ್ಲಿ ಮಕ್ಕಳಲ್ಲಿ ವೈಯಕ್ತಿಕವಾದ ಭಿನ್ನತೆಗಳಿರುವದು ಸ್ವಾಭಾವಿಕ. ಅವುಗಳ ಸಲುವಾಗಿ ತಕ್ಕ ವ್ಯವಸ್ಥೆಯನ್ನು ಸಾಲೆಯಲ್ಲಿ ಮಾಡಿಡಲು ಶಿಕ್ಷಕನು ಪ್ರಯತ್ನಿಸಬೇಕು.

ಹಿರೇಮಣಿಗಳು

ಸಣ್ಣ ಹಳ್ಳಿಯ ಸಾಲೆಯ ಕೆಲಸವನ್ನು ಸುಧಾರಿಸಲು ಮತ್ತೊಂದು ಉಪಯುಕ್ತ ಸೂಚನೆಯೆಂದರೆ ಹಿರೇಮಣಿಗಳನ್ನು ನೇಮಿಸುವ ಹಳೇ ಪದ್ಧತಿಯನ್ನು ಅಮಲಿನಲ್ಲಿ ತರುವದು. ಪ್ರತಿಯೊಂದು ಗುಂಪು ಇಲ್ಲವೆ ವರ್ಗದತ್ತ ಶಕ್ಯವಿದ್ದಷ್ಟು ಹೆಚ್ಚು ತನ್ನ ವೈಯಕ್ತಿಕ ಲಕ್ಷ್ಯವನ್ನು ಪೂರಯಿಸುವಂತೆ ತನ್ನ ನಿತ್ಯದ ಕೆಲಸದ ವ್ಯವಸ್ಥೆಯನ್ನು ಮಾಡಿಕೊಳ್ಳುವದು ಶಿಕ್ಷಕನ ದೊಡ್ಡದೊಂದು ಸಮಸ್ಯೆಯು. ಆದುದರಿಂದ ಆತನು ಹಿರೇಮಣಿಗಳ ಸಹಾಯವನ್ನು ಕೋರಿದರೆ ಅಷ್ಟು ಜನ ಶಿಕ್ಷಕರ ಸಹಾಯವನ್ನು ತಕ್ಕೊಂಡಂತಾಗುತ್ತದೆ.

ಗುರು-ಶಿಷ್ಯರ ಸಂಬಂಧವು ನಮ್ಮ ದೇಶದಲ್ಲಿ ವಿಶೇಷತಃ ಹಳ್ಳಿಗಾಡಿನಲ್ಲಿ ಭಕ್ತಿ ಪ್ರೇಮಾದರಗಳಿಂದ ಕಟ್ಟಲ್ಪಟ್ಟಿರುವದರಿಂದ ಎಲ್ಲ ಶಿಷ್ಯರು ಗುರುಗಳಿಗೆ ಸಹಾಯ-

...ವೆಗಳನ್ನರ್ಪಿಸಲು ಆತುರರಾಗಿರುವದುಂಟು. ಪ್ರತಿಯೊಂದು ಸಾಲೆಯಲ್ಲಿ ಗುರುಗಳ ಸಲುವಾಗಿ ಹೆಚ್ಚಿನ ಕೆಲಸವನ್ನು ನಲ್ಮೆಯಿಂದ ಮಾಡಲು ಮಕ್ಕಳು ಬದ್ಧ ಕಂಕಣರಾಗಿರುವದುಂಟು. ಕರೇ ಹಲಿಗೆಯನ್ನು ಸ್ವಚ್ಛ ಮಾಡುವದು, ಒಂದು ಗ್ಲಾಸು ನೀರನ್ನು ತಂದು ಕೊಡುವದು, ದೌತಿಗಳನ್ನು ಮಸಿಯಿಂದ ತುಂಬುವದು, ವರ್ಗದ ಕೋಣೆಯನ್ನು ಸ್ವಚ್ಛ ಹಾಗೂ ಓರಣದಿಂದ ಇಡುವದು ಮೊದಲಾದವುಗಳನ್ನು ಮಾಡಲು ಹುರುಪು-ಹುಮ್ಮಸಗಳಿಂದ ಅವರು ಮುಂದೆ ಬರುವದುಂಟು. ಅವರಲ್ಲಿ ಹಲವರು ಅಭ್ಯಾಸದಲ್ಲಿ ಮತ್ತು ಆಟದಲ್ಲಿ ಚನ್ನಾಗಿದ್ದು ಸಹಾಯ-ಸಹಕಾರಗಳ ಭಾವನೆಗಳು ಹಾಗೂ ಮುಂದಾಳುವಿನ ಲಕ್ಷಣಗಳು ಅವರಲ್ಲಿ ನೆಲಸಿದ್ದರೆ, ಅವರು ಶಿಕ್ಷಕನ ಹೆಚ್ಚಿನ ಕೆಲಸಗಳಲ್ಲಿ ಸಹಾಯಕರಾಗುವರಲ್ಲದೆ ಸಾಲೆಯಲ್ಲಿಯ ಶಿಕ್ಷಣದ ಕೆಲಸದಲ್ಲಿಯೂ ನೆರವಾಗುವರು. ನಮ್ಮ ಪ್ರಾಥಮಿಕ ಸಾಲೆಗಳಲ್ಲಿ ವಿಶೇಷತಃ ಹಳ್ಳಿಗಾಡದ ಸಾಲೆಗಳಲ್ಲಿ ಇಂತಹ ಹಿರೇಮಣಿಗಳನ್ನು ಉಪಯೋಗಿಸಿಕೊಳ್ಳುವ ರೂಢಿಯು ಹಿಂದಿನ ಕಾಲದಲ್ಲಿತ್ತು. ತಮಗೆ ಒಪ್ಪಿಸಿ ಕೊಟ್ಟ ಹಗುರಾದ ಕೆಲಸಗಳನ್ನು ಶಿಕ್ಷಕನಷ್ಟೇ ಉತ್ತಮ ರೀತಿಯಿಂದ ಅವರು ಮಾಡುತ್ತಿದ್ದರು. ಹಾಗೆ ಮಾಡುತ್ತಿದ್ದಾಗ ಅವರ ಅಭ್ಯಾಸವು ಎಂದೂ ಹಿಂದೆ ಬೀಳುತ್ತಿದ್ದಿಲ್ಲ. ತನ್ನ ವರ್ಗವು ಗುರುಗಳಿಂದ ಅಭ್ಯಾಸವನ್ನು ಹೇಳಿಸಿಕೊಳ್ಳುತ್ತಿದ್ದಾಗ ಹಿರೇಮಣಿಯು ತನ್ನ ವರ್ಗವನ್ನು ಬಿಟ್ಟು ಹೋಗುತ್ತಿದ್ದಿಲ್ಲ. ತನಗೆ ಚನ್ನಾಗಿ ಗೊತ್ತಿದ್ದ ವಿಷಯಗಳು ಅಂದರೆ ಡ್ರಿಲ್ಲು, ಶಾರೀರಿಕ ಶಿಕ್ಷಣ, ಮೊದಲಾದವುಗಳನ್ನು ತನ್ನ ವರ್ಗಕ್ಕೆ ಇದ್ದಾಗ, ಆತನು ಕೆಳಗಿನ ವರ್ಗದ ಮೇಲ್ವಿಚಾರಣೆಯನ್ನು ಮಾಡುತ್ತ ಕಲಿಸುತ್ತಿದ್ದನು. ಇಂತಹ ಅನುಭವದಿಂದ ಆತನಿಗೂ ಒಳಿತಾಗುತ್ತಿತ್ತು. ಕೆಳಗಿನ ವರ್ಗದಲ್ಲಿ ಅವನ ಕಲಿಸುವಿಕೆಯು ಪರಿಣಾಮಕಾರಿಯಾಗಿದ್ದರೆ, ಅದರ ಫಲವು ಆ ವರ್ಗಕ್ಕೆ ಸಿಕ್ಕುತ್ತಿತ್ತಲ್ಲದೆ, ಆತನಿಗೂ ಅದರಷ್ಟೇ ಲಾಭವು ದೊರೆಯುತ್ತಿತ್ತು. ಆತನು ಪ್ರಯಾಸಬಟ್ಟು ಕಲಿಸುತ್ತಿದ್ದಾಗ ಆತನ ಜ್ಞಾನವು ಮನದಟ್ಟಾಗಿ ಒಂದು ನಿಶ್ಚಿತ ಸ್ವರೂಪವನ್ನು ಹೊಂದುತ್ತಿತ್ತು. ತನ್ನ ನಿತ್ಯದ ಕೆಲಸವನ್ನು ಚನ್ನಾಗಿ ಜರುಗಿಸಿದ್ದರೆ ತನ್ನ ಜ್ಞಾನವು ಹೆಚ್ಚೆಚ್ಚು ಮನದಟ್ಟಾಗುತ್ತ ಒಂದು ಮೂರ್ತ ಸ್ವರೂಪವನ್ನು ಹೊಂದುವದೆಂಬುದನ್ನು ಪ್ರತಿಯೊಬ್ಬ ಅನುಭವಿಕ ಶಿಕ್ಷಕನು ಮನಗಂಡಿರಬೇಕು. ಮತ್ತು ಅದೇ ಮಾತು ಹಿರೇಮಣಿಗೂ ಅನ್ವಯಿಸುವದು. ಎರಡನೆಯ ಲಾಭವೆಂದರೆ, ಸಾಲೆಯಲ್ಲಿಯ ಸಾಂಘಿಕ ಜೀವನದ ವಾತಾವರಣವು ಚನ್ನಾಗಿದ್ದರೆ, ಮಕ್ಕಳು ಶಿಕ್ಷಕನಿಗಿಂತ ತಮ್ಮ ಸಹಪಾಠಿಗರಿಂದ ಹೆಚ್ಚು ಕಲಿಯುತ್ತಾರೆ. ಯಾಕಂದರೆ, ಅವರಲ್ಲಿ ಯಾವ ತರಹದ ಸಂಕೋಚ-ನಿರ್ಬಂಧಗಳಿರದೆ ಮನಬಿಚ್ಚಿ ಹೇಳುವದೂ ಕೇಳುವದೂ ನಡೆಯುತ್ತಿವೆ. ಕೊನೆಯ ಲಾಭವೆಂದರೆ, ಚಿಕ್ಕ ಪುಟ್ಟ ಅಧಿಕಾರದ ಹಾಗೂ ಹೊಣೆಗಾರಿಕೆಯ ಅನುಭವವು ಮುಂದೆ ತಮ್ಮ ಜೀವನದಲ್ಲಿ ಹೊರಬೇಕಾಗುವ ಹೊಣೆಗಾರಿಕೆಯ ಅನುಭವವು ಮುಂದೆ ತಮ್ಮ ಜೀವನದಲ್ಲಿ ಹೊರಬೇಕಾಗುವ ಹೊಣೆಗಾರಿಕೆಗಳ ಸಲುವಾಗಿ ಚಿಕ್ಕ ಮಕ್ಕಳಿಗೆ ಉತ್ತಮೋತ್ತಮವಾದದೊಂದು ತರಬೇತಿಯನ್ನು ಕೊಡುತ್ತಿದೆ.

ಆಸ್ಟ್ರೇಲಿಯದಂಥ ಹಲವು ದೇಶಗಳಲ್ಲಿ ಹಿರೇಮಣಿ ಪದ್ಧತಿಯು ಜಾರಿಯಲ್ಲಿದೆ. ಹಿರೇಮಣಿಗಳಿಲ್ಲದೆ ಒಂಟಿಗನಾಗಿ ಕೆಲಸ ಮಾಡುವ ಶಿಕ್ಷಕನ ಸಾಲೆಯನ್ನು ನಡಿಸುವದು ಅವಶ್ಯವೆಂದೂ ಆ ಸಾಲೆಯ ಯಶಸ್ವೀ ಸಂಘಟನೆಗೆ ಅವರ ಉಪಯೋಗವು ಅತ್ಯಾವಶ್ಯಕವೆಂದೂ ಆ ದೇಶಗಳಲ್ಲಿಯ ಜನತೆಯ ಅಭಿಪ್ರಾಯವಾಗಿದೆ. ಹಿರೇಮಣಿಗಳನ್ನು ಮೂರು ತೆರನಾಗಿ ಉಪಯೋಗಿಸಿಕೊಳ್ಳಬಹುದು:—

(ಅ) ಸಾಲೆಯ ಕೋಣೆಯನ್ನು ಸ್ವಚ್ಛ ಹಾಗೂ ಓರಣದಿಂದಿಡುವದು, ಹಾಳಿ ಮತ್ತು ಮಸಿಯನ್ನು ಪೂರೈಸುವದು, ಕೋಣೆಯನ್ನು ಸಿಂಗರಿಸುವದು, ತೋಟ ಮತ್ತು ಆಟಗಳನ್ನು ಮೇಲ್ವಿಚಾರಿಸುವದು, ಪುಸ್ತಕಾಲಯದ ಪುಸ್ತಕಗಳನ್ನು ವರ್ತಮಾನ ಪತ್ರಗಳನ್ನು ಮತ್ತು ವಾಚನ ಪುಸ್ತಕಗಳನ್ನು ಹಂಚುವದು, ಮೊದಲಾದ ಕೆಲಸಗಳನ್ನು ಮಾಡಲು ಸಹಾಯಕನಾಗಿರುವದು.

(ಆ) ತನ್ನ ವರ್ಗದ ಶುದ್ಧ ಲೇಖನ, ಕವಿತೆ, ವಾಚನ, ಅಂಕಿ-ಮಗ್ಗಿಗಳು, ಮೊದಲಾದವುಗಳನ್ನು ಹೇಳಲು ಹಾಗೂ ಒಪ್ಪಿಸಿಕೊಳ್ಳಲು ಹಿರೇಮಣಿಯಾಗಿ ಕೆಲಸ ಮಾಡುವದು.

(ಇ) ಕೆಳಗಿನ ವರ್ಗಗಳಲ್ಲಿ ಸಹಾಯಕ ಶಿಕ್ಷಕನಾಗಿ ಕೆಲಸ ಮಾಡುವದು. ಅತಿ ಕೆಳಗಿನವೆರಡು ವರ್ಗಗಳಲ್ಲಿಯ ಚಿಕ್ಕ ಮಕ್ಕಳಿಗೆ ಸತತವಾದ ಮೇಲ್ವಿಚಾರಣೆಯು ಅತ್ಯಾವಶ್ಯಕವಿರುವದರಿಂದ ಸಹಾಯಕ ಶಿಕ್ಷಕನಾಗಿ ಕೆಲಸ ಮಾಡುವ ಹಿರೇಮಣಿಯ ಸಹಾಯವು ಆ ವರ್ಗಗಳಿಗೆ ಬಹಳಷ್ಟಾಗುವದು.

ಏನು ಕಲಿಸಬೇಕು ಮತ್ತು ಹೇಗೆ ಕಲಿಸಬೇಕೆಂಬುದರ ನಿಚ್ಚಳವಾದ ಕಲ್ಪನೆಯನ್ನು ಕಲಿಸುವ ಹಿರೇಮಣಿಗಳಿಗೆ ಮೊದಲೇ ಮಾಡಿಕೊಡಬೇಕು. ಕೆಳಗೆ ಹೇಳಿದ ಕೆಲಸಗಳನ್ನು ಅವರು ಮಾಡಬಲ್ಲರು:—

(ಅ) ಪ್ರಾರಂಭದ ವರ್ಗದಲ್ಲಿ ಅಂಕಿಗಳು

(ಆ) ಎಲ್ಲ ವರ್ಗಗಳ ವಾಚನ ಓದಿಸಿಕೊಳ್ಳುವದು.

(ಇ) ಎಲ್ಲ ವರ್ಗಗಳ ಶುದ್ಧ ಲೇಖನ

(ಈ) ಕವಿತೆಯನ್ನು ಅನ್ನಿಸಿಕೊಳ್ಳುವದು

(ಉ) ಕೆಳಗಿನ ವರ್ಗಗಳಲ್ಲಿ ಕಥೆಗಳು.

(ಊ) ೧, ೨ನೆಯ ವರ್ಗಗಳಲ್ಲಿ ಬರೆಯಿಸುವದು.

(ಎ) ೧, ೨ನೆಯ ವರ್ಗಗಳಲ್ಲಿ ಕೈಕೆಲಸ.

ಶಿಕ್ಷಕನು ಮಾಡತಕ್ಕ ಕೆಲಸದಲ್ಲಿ ಮೇಲೆ ಹೇಳಿದಷ್ಟು ಕೆಲಸವು ಕಡಿಮೆಯಾಯಿತೆಂದರೆ, ಅವನ ಶಿಕ್ಷಣದ ಕಾರ್ಯವು ಪರಿಣಾಮಕಾರಿಯಾಗಲು ಮತ್ತು ಹೊಸ ಯೋಜನೆಗಳನ್ನು ಕಲ್ಪಿಸಲು ಅನುವಾಗುತ್ತದೆ. ಕಲಿಸುವ ಹಿರೇಮಣಿಗಳಿಗೆ ಕೆಲಸವನ್ನು ಚನ್ನಾಗಿ ಪ್ರಾರಂಭಮಾಡಿಕೊಟ್ಟನಂತರ ಶಿಕ್ಷಕನು ತಾನು ಕಲಿಸುವ ವರ್ಗದತ್ತ ಸಾಗಬೇಕು. ಮತ್ತು ಮೇಲಿಂದ ಮೇಲೆ ಅವರ ಕೆಲಸದ ಮೇಲ್ವಿಚಾರಣೆಯನ್ನು ಮಾಡುತ್ತಿರಬೇಕು. ಅವಧಿಯು ಮುಗಿದದ್ದನ್ನು ಮನಸ್ಸಿಗೆ ಖಾತ್ರಿ ಮಾಡಿಕೊಳ್ಳಬೇಕು. ಹೀಗೆ ಮಾಡುತ್ತಿದ್ದ ಕೆಲಸವನ್ನು ಗುರುಗಳು ಕಣ್ಣಲ್ಲಿ ಕಣ್ಣಿಟ್ಟುಕೊಂಡು ನೋಡುತ್ತಿರುವರು ಹಾಗೂ ಬೇಕಾದಾಗ ಸಹಾಯಕ್ಕೆ ಬರುವರು ಎಂಬ ಭಾವನೆಯು ಮಕ್ಕಳಲ್ಲಿಯೂ ಕಲಿಸುವ ಹಿರೇಮಣಿಗಳಲ್ಲಿಯೂ ಹುಟ್ಟುತ್ತಿದೆ. ಶಿಕ್ಷಕನ ಮಾರ್ಗದರ್ಶನವು ಅತ್ಯವಶ್ಯವಿದೆ. ಅದನ್ನು ತಕ್ಕ ಸಮಯಕ್ಕೆ ಹಾಗೂ ತಕ್ಕಷ್ಟು ಕೊಡುತ್ತಿದ್ದರೆ, ಸಹಕಾರ-ಮಮಕಾರಗಳ ಭಾವನೆಗಳು ಆ ಸಾಲೆಯಲ್ಲಿ ವಿಕಾಸಗೊಳ್ಳುತ್ತಿವೆ. ಹಿರೇಮಣಿ ಪದ್ಧತಿಯು ಚಿಕ್ಕ ಮಕ್ಕಳಲ್ಲಿ ಉತ್ತಮ ಸಾಮಾಜಿಕ ಭಾವನೆಯ ಬೀಜವನ್ನು ಊರುತ್ತಿದೆ. ಅವರು ಶಿಸ್ತಿನಿಂದ ಕೆಲಸ ಮಾಡುವ ಗುಣವನ್ನೂ ಮುಂದಾಳುವಾಗಲು ಬೇಕಾಗುವ ಯೋಗ್ಯತೆಯನ್ನು ಪಡೆಯಬಹುದು.

ಪ್ರಾಥಮಿಕ ಶಿಕ್ಷಣ ಪ್ರಪಂಚ (೨೮ನೆಯ ಪುಟದಿಂದ ಮುಂದುವರಿದುದು)

ನೆಲ್ಲಿಕೇರಿ(ಕುಮಟಾ) ೨೩ :— ಕಳೆದ ೧೫ ದಿನಗಳಿಂದ ಇಲ್ಲಿಯ ಶಾಲೆಯಲ್ಲಿ ನಡೆದ ಜೀವನ ಶಿಕ್ಷಣದ ಅಲ್ಪಾವಧಿ ತರಬೇತಿ ವರ್ಗದ ಸಮಾರೋಪ ಸಮಾರಂಭವು ಜಿಲ್ಹಾ ಶಿಕ್ಷಣಾಧಿಕಾರಿಗಳಾದ **ಶ್ರೀ ದಳವಾಯಿ** ಅವರ ಹಿರಿತನದಲ್ಲಿ ನೆರವೇರಿಸಲ್ಪಟ್ಟಿತು. ಮಾನ್ಯ ಅಧ್ಯಕ್ಷರು ಪ್ರಶಸ್ತಿ ಪತ್ರದ ವಿತರಣೆ ಮಾಡಿ ಜೀವನ ಶಿಕ್ಷಣದ ತಿರುಳನ್ನು ವಿವರಿಸಿದರು.

ಮು. ಶಾ. ಹುಬ್ಬಳ್ಳಿ : ೨೬ :— ದಿನಾಂಕ ೧೭ ರಿಂದ ಪ್ರಾರಂಭವಾದ ಜೀವನ ಶಿಕ್ಷಣದ ಅಲ್ಪಾವಧಿ ತರಬೇತಿ ವರ್ಗದ ಮುಕ್ತಾಯ ಸಮಾರಂಭವು ಶ್ರೀ ಮೆಟಗುಡ್ಡ, ಎಮ್. ಎಲ್. ಎ. ಇವರ ಹಿರಿಯತನದಲ್ಲಿ ನೆರವೇರಿತು.

ಆಲೂರ(ಮುದ್ದೇಬಿಹಾಳ) ೨೪:- ಇಲ್ಲಿಯ ಶಾಲೆಯ ಉಪಯೋಗಕ್ಕಾಗಿ **ಶ್ರೀ ಸಿ. ಶಿ. ಪಾಟೀಲ** ನಾಲತವಾಡ ಇವರು ಒಂದು ನೀರಿನ ಟಾಕಿಯನ್ನೂ **ಶ್ರೀ ಬ. ಪ. ಜಾಲಿವಾದಿಗಿ** ಇವರು ಒಂದು ಗ್ಲೋಬನ್ನೂ ಕಾಣಿಕೆಯಾಗಿ ಕೊಟ್ಟಿದ್ದಾರೆ.

ಸಮಾಜ ವಿಕಾಸ ಕೇಂದ್ರಗಳು

ಲೇಖಕರು :— **ಶ್ರೀ ಫ. ಚ. ಉಣಕಲ್ಲ,** ಬಿ. ಎ., ಬಿ. ಟಿ, ಡಿ. ಬಿ ಇ., ಡಿ. ಪಿ. ಇಡಿ., ಧಾರವಾಡ.

(ಎಪ್ರಿಲ ಸಂಚಿಕೆಯಿಂದ ಮುಂದುವರೆದುದು)

ಕಾರ್ಯನಿರ್ವಹಣೆ ಕೇಂದ್ರವು ಊರ ಜನರ ಹಾರ್ದಿಕ ಸಹಕಾರದಿಂದ ಜರುಗಿಸಬಹುದಾದ ಕಾರ್ಯಕ್ರಮವನ್ನು ಮಾರ್ಗದರ್ಶನಕ್ಕಾಗಿ ಇಲ್ಲಿ ಕೊಡಲಾಗಿದೆ. ಸ್ಥಾನಿಕ ಪರಿಸ್ಥಿತಿಗನುಸರಿಸಿ ಅದರಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು ಮತ್ತು ಕಾರ್ಯವು ಸುಗಮವಾಗಿ ಸಾಗುವಂತೆ ನೋಡಿಕೊಳ್ಳಬೇಕು :-

ಕಾರ್ಯಕ್ರಮ

ಮುಂಜಾನೆ:

೬—೩೦	ರಿಂದ	೭—೦	ನಗರ ಸಂಕೀರ್ತನ (ರಾಷ್ಟ್ರೀಯ ಹಾಡುಗಳೊಂದಿಗೆ)
೭—೦	,,	೭—೩೦	ಧ್ವಜವಂದನೆ (ಪ್ರತಿಷ್ಠಿತ ಜನರನ್ನೊಳಗೊಂಡು) ಹಾಗೂ ಮಾಲಾರ್ಪಣೆ.
೭—೩೦	,,	೯—೩೦	ಗ್ರಾಮಸ್ವಚ್ಛತೆ (ಹರಿಜನಕೇರಿ ಸಹಿತವಾಗಿ), ಸಾರ್ವಜನಿಕ ರಸ್ತೆ ಹಾಗೂ ಕಟ್ಟಡಗಳ ರಿಪೇರಿ (ಬೇರೆ ಬೇರೆ ಗುಂಪುಗಳನ್ನು ಮಾಡಿ ಕೆಲಸ ಹಂಚಿ ಕೊಡಬೇಕು).
೯—೩೦	ರಿಂದ	೧೦—೦	ವಿಶ್ರಾಂತಿ.
೧೦—೦	,,	೧೧—೦	ನೂಲುವ ಸ್ಪರ್ಧೆ (ಜೀವನ ಶಿಕ್ಷಣ ಹಾಗೂ ಮೂಲೋದ್ಯೋಗ ಶಾಲೆ ಗಳಿಗಾಗಿ)

ಮಧ್ಯಾಹ್ನ : ಭಾಷಣಗಳ ಸ್ಪರ್ಧೆ (ಸಾದಾ ಶಾಲೆಗಳಿಗಾಗಿ)
(ವಿಚಾರ ಸಂಕೀರಣ ಗಾಂಧೀಜಿಯವರ ಬಗೆಗೆ)

೩—೦	ರಿಂದ	೩—೩೦	ಪ್ರದರ್ಶನದ ಉದ್ಘಾಟನೆ (ಪ್ರತಿಷ್ಠಿತ ವ್ಯಕ್ತಿಯಿಂದ)
೩—೩೦	,,	೪—೩೦	ಹರಿಜನರೊಡನೆ ಮಂದಿರ ಪ್ರವೇಶ ಹಾಗೂ ಸಾಮೂಹಿಕ ಫಲಾಹಾರ (ಸಾಧ್ಯವಿದ್ದಲ್ಲಿ, ಊರ ಜನರ ಅನುಮತಿ ಇದ್ದಲ್ಲಿ ಮಾತ್ರ ಇದನ್ನು ನೆರವೇರಿಸತಕ್ಕದ್ದು.)
೪—೩೦	,,	೫—೩೦	ಶಾರೀರಿಕ ಶಿಕ್ಷಣ ಚಟುವಟಿಕೆಗಳು.
೫—೩೦	,,	೭—೩೦	ಸಭೆಯ ಕಾರ್ಯಕ್ರಮಗಳು :

(೧) ಪ್ರಾರ್ಥನೆ ಮತ್ತು ಸ್ವಾಗತ ಪದ್ಯ.
(೨) ಅಧ್ಯಕ್ಷರನ್ನು ಆರಿಸುವದು (ಸೂಚನೆ, ಅನುಮೋದನ)
(೩) ಕೇಂದ್ರದ ಪ್ರಧಾನ ಗುರುಗಳಿಂದ ಪ್ರಾಸ್ತಾವಿಕ ಭಾಷಣ.
(೪) ಪ್ರತಿಯೊಂದು ವರ್ಗದವರು ಮಾಡಿದ ಕೆಲಸದ ವಿವರಗಳನ್ನೊಳಗೊಂಡ ಚಿಕ್ಕ ವರದಿ (ವಿದ್ಯಾರ್ಥಿ ಪ್ರತಿನಿಧಿಯಿಂದ).

(೫) ಮುಂಜಾನೆ ನೂಲುವ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ಶ್ರೇಷ್ಠ ಸ್ಥಾನಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪಾರಿತೋಷಕ ವಿತರಣ (ಅಧ್ಯಕ್ಷರ ಹಸ್ತದಿಂದ).

(೬) ಜಯಂತಿಯ ಮಹತ್ವವನ್ನು ಕುರಿತು ಪ್ರತಿಷ್ಠಿತ ಜನರ, ಶಿಕ್ಷಕ–ಶಿಕ್ಷಕಿಯರ ಹಾಗೂ ವಿದ್ಯಾರ್ಥಿಗಳ ಭಾಷಣ; ಕಾವ್ಯಗಾಯನ, ಭಜನೆ, ದೀಪೋತ್ಸವ ಇತ್ಯಾದಿ ಕಾರ್ಯಕ್ರಮಗಳು.

(೭) ಅಧ್ಯಕ್ಷರ ಸಮಾರೋಪಣೆ.

(೮) ಆಭಾರಮನ್ನಣೆ (ನೆರವು ನೀಡಿದ ಎಲ್ಲ ಮಹನೀಯರ ಯಾದಿಮಾಡಿ ಅವರೆಲ್ಲರ ಆಭಾರಮನ್ನಿಸುವದು.)

(೯) ರಾಷ್ಟ್ರಗೀತೆ.

ಎಲ್ಲರೂ ಮನೆಗೆ ಹೋಗುವ ಮೊದಲು ಪ್ರದರ್ಶನವನ್ನು ನೋಡಿಕೊಂಡು ಹೋಗತಕ್ಕದ್ದು. ಕಾರ್ಯಕ್ರಮ ಮುಕ್ತಾಯವಾದ ಮೇಲೆ ಬೇರೆ ಬೇರೆ ಶಾಲೆಗಳಿಂದ ಅಥವಾ ಜನರಿಂದ ತಂದ ಯಾವತ್ತೂ ವಸ್ತುಗಳನ್ನು ಅವರವರಿಗೆ ಜತನದಿಂದ ಮುಟ್ಟಿಸತಕ್ಕದ್ದು. ಪ್ರದರ್ಶನದ ಸಾಮಾನುಗಳನ್ನಾಗಲಿ ಇಲ್ಲವೆ ಬೆಲೆಯುಳ್ಳ ಸಾಮಾನುಗಳನ್ನಾಗಲಿ ಮುಟ್ಟಿಸಿದ ಬಗೆಗೆ ಸಂಬಂಧಿಸಿದವರಿಂದ ಸಹಿ ತೆಗೆದುಕೊಳ್ಳುವದು ವಿಹಿತ.

ಪರಿಶೀಲನೆ:— ಜಯಂತಿಯ ಮರುದಿನ, ಜರಗಿದ ಕಾರ್ಯದ ಸಿಂಹಾವಲೋಕನ ಮಾಡಬೇಕು. ಅಂದರೆ, ಇಟ್ಟುಕೊಂಡ ಕೆಲಸದಲ್ಲಿ ಆದ ಕಾರ್ಮಿಕ ತಪ್ಪುತಡೆಗಳು ಹಾಗೂ ಅನಿರೀಕ್ಷಿತ ಘಟನೆಗಳು ಅವು ಉಂಟಾಗಲು ಕಾರಣಗಳು, ಅವು ಮುಂದಿನ ಸಲ ಆಗದಂತೆ ಯಾವ ದಕ್ಷತೆ ವಹಿಸಬೇಕು ಎಂಬುದರ ಬಗೆಗೆ ಪರಿಶೀಲನೆ ಮಾಡತಕ್ಕದ್ದು. ಜಯಂತಿಯ ಆಚರಣೆಯ ಬಗೆಗೆ ಒಂದು ಚಿಕ್ಕ ವರದಿಯನ್ನು ತಯಾರಿಸಿ ವೃತ್ತಪತ್ರಗಳಿಗೆ ಪ್ರಧಾನ ಗುರುಗಳಿಗೆ ತೋರಿಸಿ ಕಳುಹಿಸಿಕೊಡಬೇಕು.

ಕೊನೆಯ ಮಾತು:— ಇಂತಹ ಚಟುವಟಿಕೆಗಳನ್ನು ಸಮಾಜ ವಿಕಾಸ ಕೇಂದ್ರಗಳಲ್ಲಿ ಸಂಘಟಿಸುವದರಿಂದ ಮಕ್ಕಳಿಗೆ ಸುತ್ತಲಿನ ಪ್ರಪಂಚದ ಪರಿಜ್ಞಾನವುಂಟಾಗುತ್ತದೆ. ಕೇವಲ ಶಬ್ದಗಳನ್ನು ಕಲಿಸುವ ಶಾಲೆಗಿಂತ ವಸ್ತುಸ್ಥಿತಿಯ ಜ್ಞಾನಮಾಡಿಕೊಡುವ ಜಗತ್ತು ನಿಜವಾಗಿ ಹೆಚ್ಚು ಪ್ರಭಾವಿಯಾದ ಶಿಕ್ಷಣ ಕೊಡಬಲ್ಲದು ಮತ್ತು ಶಾಲೆ ಹಾಗೂ ಸುತ್ತಲಿನ ಜಗತ್ತು ಒಂದಕ್ಕೊಂದು ಪೂರಕವಾಗಿವೆಯೆಂದು ಅನುಭಾವಿಗಳು ಹೇಳುವದು ಅಕ್ಷರಶಃ ನಿಜವದೆ. ಕಾಯಕವೇ ಕೈಲಾಸವೆಂದು ನಡೆದಲ್ಲಿ ಗಾಂಧೀಜಿಯವರು ಬಯಸಿದ ಸುಸಂಸ್ಕೃತ ಸಮಾಜವನ್ನು ಸೃಷ್ಟಿಸಬಲ್ಲೆವು. ದುಡಿಮೆಯು ಪ್ರಕೃತಿಯೇ ಮನೋವಿಶ್ವಾಸವನ್ನೂ ಶಕ್ತಿಯನ್ನೂ ಹುರಿದುಂಬಿಸುವದು. ಕಾಯಕ (ದುಡಿಮೆ) ವನ್ನೂ ಶಿಕ್ಷಣವನ್ನೂ ಸಮರಸಗೊಳಿಸುವದೇ ಜೀವನ ಶಿಕ್ಷಣದ ವಿಧಾನವಾಗಿದೆ. ಇಂತಹ ಚಟುವಟಿಕೆಗಳಿಂದ ಮಕ್ಕಳಲ್ಲಿ ಸಹಕಾರ, ಶಿಸ್ತು, ಸಂಘಟನೆ, ಪರಸ್ಪರ ತಿಳುವಳಿಕೆ, ಕಾರ್ಯನಿರ್ವಹಣೆಯ ಹೊಣೆ, ಸೇವಾಭಾವ, ಸಮತೆ, ಸ್ವಾವಲಂಬನ, ಸಹಿಷ್ಣುತೆ — ಇತ್ಯಾದಿ ಗುಣಗಳು ಸ್ವಾಭಾವಿಕವಾಗಿ ಒಡಮೂಡಿ ಬರುವವು; ಅವರಿಗೆ ನಿಜವಾದ ತರಬೇತು ದೊರೆಯುವದು. ಶಿಕ್ಷಣಕ್ಕೂ ಜೀವನಕ್ಕೂ ನಿಕಟ ಸಂಬಂಧ ಬೆಳೆದು ಸುಸಂಸ್ಕೃತ ನಾಗರಿಕರಾಗುವಂತೆ ತರಬೇತು ದೊರೆಯುವದು. ಇಂತಹ ಶಿಕ್ಷಣವೇ ಗಾಂಧೀಜಿಯು ದಯಪಾಲಿಸಿದ ಜೀವನ ಶಿಕ್ಷಣ. ನಮ್ಮ ಸರಕಾರದವರು ಹೊಸದಾಗಿ ತೆರೆದ ಸಮಾಜವಿಕಾಸ ಕೇಂದ್ರಗಳಲ್ಲಿ ಇಂತಹ ಶಿಕ್ಷಣವು ಬೆಳೆದು ಬರಬೇಕಾಗಿದೆ; ಅಂದರೆ ಭಾರತದ ಸಂಜೀವ ಬಳ್ಳಿಗಳಂತಿರುವ ಹಳ್ಳಿಗಳ ಭಾಗ್ಯ ತೆರೆಯುವದು. ಈ ನಮ್ಮ ಆಸೆ ಈಡೇರಿದರೆ ನಮ್ಮ ರಾಷ್ಟ್ರಪಿತನಿಗೆ ನಾವು ನಿಜವಾದ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುವದು.

ಮೆ। ಡಾಯರೆಕ್ಟರ ಆಫ್ ಎಜ್ಯುಕೇಶನ್, ಪೂನಾ ಇವರಿಂದ ಮಂಜೂರ ಮಾಡಲ್ಪಟ್ಟ ಪಠ್ಯ ಪುಸ್ತಕಗಳು

೧ನೆಯ ಇಯತ್ತೆಯಿಂದ ೭ನೆಯ ಇಯತ್ತೆಯವರೆಗೆ — ಕನ್ನಡ — ೧ನೆಯ ಜೂನ ೧೯೫೫ ರಿಂದ ೩೧ ನೆಯ ಮೇ ೧೯೫೬ ರ ವರೆಗೆ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಇಯತ್ತೆ	ಪುಸ್ತಕದ ಹೆಸರು		ಲೇಖಕರು	ಪ್ರಕಾಶಕರು	ಕೊನೆಯದಾಗಿ ನಿರ್ಧರಿಸಿದ ಕ್ರಯ	ಶರಾ
			ಇತಿಹಾಸ		ರೂ. ಆ. ಪೈ.	
೬	ಭಾರತೀಯ ಇತಿಹಾಸ ಪ್ರಕಾಶ ಪುಸ್ತಕ ೨ — ೧೯೫೫ ಮುದ್ರಣ	....	ಆರ್. ಕೆ. ಲಕ್ಕುಂಡಿ	ಆರ್. ಜಿ. ಹುಕ್ಕೇರಿ ಪ್ರಕಾಶಕರು, ಮಾಳಮಡ್ಡಿ, ಧಾರವಾಡ	೧- ೩- ೦	
೭	ಭಾರತೀಯ ಇತಿಹಾಸ ಪ್ರಕಾಶ, ಪುಸ್ತಕ ೩ — ೧೯೫೫ ಮುದ್ರಣ	....	,,	,,	೧- ೨- ೦	
೫	ನಮ್ಮ ಭಾರತದ ಇತಿಹಾಸ-ಭಾಗ ೧ ಪ್ರಥಮ ಮುದ್ರಣ, ೧೯೫೪.	....	ಕೆ. ವ್ಹಿ. ಸುಬ್ರಾವ	ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ	೦-೧೪- ೦	
೬	ನಮ್ಮ ಭಾರತದ ಇತಿಹಾಸ-ಭಾಗ ೨ ಪ್ರಥಮ ಮುದ್ರಣ, ೧೯೫೪	....	,,	,,	೧- ೪- ೦	
೭	ನಮ್ಮ ಭಾರತದ ಇತಿಹಾಸ-ಭಾಗ ೩ ಪ್ರಥಮ ಮುದ್ರಣ, ೧೯೫೫.	....	,,	,,	೧- ೬- ೦	
೫	ಭಾರತದ ಇತಿಹಾಸ ಬೋಧಿನಿ ಭಾಗ ೧. ಪ್ರಥಮ ಮುದ್ರಣ, ೧೯೫೫	....	ಕಸ್ತೂರಿ ಮತ್ತು ರೊಹಿಡೇಕರ	ಎಸ್. ಎಸ್. ಕುಲಕರ್ಣಿ ಪ್ರಕಾಶಕರು, ಧಾರವಾಡ	೧- ೦- ೦	

ಇಯತ್ತೆ	ಪುಸ್ತಕದ ಹೆಸರು		ಲೇಖಕರು	ಪ್ರಕಾಶಕರು	ಕೊನೆಯದಾಗಿ ನಿರ್ಧರಿಸಿದ ಕ್ರಯ	ಶರಾ
೬	ಭಾರತದ ಇತಿಹಾಸ ಬೋಧಿನಿ ಭಾಗ ೨. ಪ್ರಥಮ ಮುದ್ರಣ	....	,,	,,	೧-೬-೦	
೭	ಭಾರತದ ಇತಿಹಾಸ ಬೋಧಿನಿ ಭಾಗ ೩. ಪ್ರಥಮ ಮುದ್ರಣ, ೧೯೫೫	....	,,	,,	೧-೧೨-೦	
	ಭೂಗೋಲ					
೪	ಅಭಿನವ ಭೂಗೋಲ ನಾಲ್ಕನೆಯ ಇಯತ್ತೆಗಾಗಿ ೧೯೫೫ ಮುದ್ರಣ	....	ಎಸ್. ಬಿ. ಗಜೇಂದ್ರಗಡ	ಎಸ್. ಜಿ. ಬಾಪಟ ಮದಿಹಾಳ, ಧಾರವಾಡ	೦-೧೨-೬	
೪	ಸಚಿತ್ರ ಸಾಮಾನ್ಯಜ್ಞಾನ ಭೂಗೋಲ ಹಾಗೂ ಆರೋಗ್ಯಶಾಸ್ತ್ರ ಪ್ರಥಮ ಮುದ್ರಣ, ೧೯೫೪	....	ಎಲ್. ಆಯ್. ಆಕಳವಾಡಿ	ಆಯ್. ಆರ್. ಆಕಳವಾಡಿ ಆ್ಯಂಡ ಸನ್ಸ ರಾಮಾಶ್ರಯ ಬುಕ್‌ಡಿಪೋ, ಧಾರವಾಡ	೧-೨-೦	
೪	ಭೂಮಂಡಲ ಬೋಧಿನಿ ಭಾಗ ೧ ಮತ್ತು ಸಾಮಾನ್ಯಜ್ಞಾನ, ಪ್ರಥಮ ಮುದ್ರಣ, ೧೯೫೫	....	ಕುಲಕರ್ಣಿ ಮತ್ತು ಮಲಕಾಯಿ	ಎಸ್. ಎಸ್. ಕುಲಕರ್ಣಿ, ಪ್ರಕಾಶಕರು, ಧಾರವಾಡ	೦-೧೫-೦	
೫	ಭೂಮಂಡಲ ಪರಿಚಯ ೫ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	ಎಲ್. ಆಯ್. ಆಕಳವಾಡಿ	ಆಯ್. ಆರ್. ಆಕಳವಾಡಿ ಆ್ಯಂಡ ಸನ್ಸ ರಾಮಾಶ್ರಯ ಬುಕ್‌ಡಿಪೋ, ಧಾರವಾಡ	೧-೨-೦	
೬	ಭೂಮಂಡಲ ಪರಿಚಯ, ೬ನೆಯ ಇಯತ್ತೆಗಾಗಿ, ಪ್ರಥಮ ಮುದ್ರಣ, ೧೯೫೪	....	,,	,,	೧-೮-೦	
೭	ಭೂಮಂಡಲ ಪರಿಚಯ ೭ನೆಯ ಇಯತ್ತೆಗಾಗಿ, ಪ್ರಥಮ ಮುದ್ರಣ ೧೯೫೫	....	,,	,,	೧-೧೩-೬	

ಇಯತ್ತೆ	ಪುಸ್ತಕದ ಹೆಸರು		ಲೇಖಕರು	ಪ್ರಕಾಶಕರು	ಕೊನೆಯದಾಗಿ ನಿರ್ಧರಿಸಿದ ಕ್ರಯ	ಶ
೫	ಭೂಮಂಡಲ ಬೋಧಿನಿ ಭಾಗ ೨ ಪ್ರಥಮ ಮುದ್ರಣ, ೧೯೫೫	....	ಕುಲಕರ್ಣಿ ಮತ್ತು ಮಲಕಾಯಿ	ಎಸ್. ಎಸ್. ಕುಲಕರ್ಣಿ ಪ್ರಕಾಶಕರು, ಧಾರವಾಡ	೧- ೧- ೬	
೬	ಭೂಮಂಡಲ ಬೋಧಿನಿ ಭಾಗ ೩ ಪ್ರಥಮ ಮುದ್ರಣ, ೧೯೫೫	....	,,	,,	೧- ೭- ೬	
೭	ಭೂಮಂಡಲ ಬೋಧಿನಿ, ಭಾಗ ೪ ಪ್ರಥಮ ಮುದ್ರಣ, ೧೯೫೫	....	ಕುಲಕರ್ಣಿ ಮತ್ತು ಮಲಕಾಯಿ	ಎಸ್. ಎಸ್. ಕುಲಕರ್ಣಿ ಪ್ರಕಾಶಕರು, ಧಾರವಾಡ	೧ -೯- ೬	
	ಗಣಿತ					
೪	ಹೊಸ ಅಂಕಗಣಿತ ಪ್ರಥಮ ಮುದ್ರಣ. ೧೯೫೪	....	ಎಮ್. ಆರ್. ಮಲ್ಯ	ಎಮ್. ಆರ್ ಮಲ್ಯ ಜಿ. ಎ. ಹಾಯಸ್ಕೂಲ ಬೆಳಗಾವ	೧- ೦-೦	
೪	ಗಣಿತ - ಬೋಧಿನಿ ಪ್ರಥಮ ಮುದ್ರಣ, ೧೯೫೪	....	ಎ. ಬಿ. ಮನಗೋಳಿ	ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ	೧- ೨-೦	
೪	ನೂತನ ಗಣಿತ ಪ್ರಥಮ ಮುದ್ರಣ, ೧೯೫೪	....	ಕೆ. ಕೆ. ಗಲಗಲಿ	ಕೆ. ಕೆ. ಗಲಗಲಿ ತೆಲ್ಲೂರ (ಜಿ. ಬೆಳಗಾವ)	೧- ೪-೦	
೪	ಅಂಕಗಣಿತ ಆನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	ಬಾಪಟ ಮತ್ತು ಮುಜುಮದಾರ	ಎಸ್. ಜೆ. ಬಾಪಟ ಮದಿಹಾಳ, ಧಾರವಾಡ	೧- ೨-೦	
೫	ಆಧುನಿಕ ಗಣಿತ ಭಾಗ ೧ ೧೯೫೪ ಮುದ್ರಣ	....	ಡಿ. ಸಿ. ಪಾವಟೆ	ಮ್ಯಾಕ್ಮಿಲನ್ ಅ್ಯಂಡ ಕಂ. ಲಿ., ೨೭೬, ಹಾರ್ನಬಿ ರೋಡ, ಮುಂಬಯಿ ೧.	೧- ೪-೬	
೬	ಆಧುನಿಕ ಗಣಿತ ಭಾಗ ೨ ೧೯೫೪ ಮುದ್ರಣ	....	,,	,,	೧- ೮-೦	

ಇಯತ್ತೆ	ಪುಸ್ತಕದ ಹೆಸರು		ಲೇಖಕರು	ಪ್ರಕಾಶಕರು	ಕೊನೆಯದಾಗಿ ನಿರ್ಧರಿಸಿದ ಕ್ರಯ	ಶರಾ
೭	ಆಧುನಿಕ ಗಣಿತ ಭಾಗ ೩ ೧೯೫೪ ಮುದ್ರಣ	....	,,	,,	೧– ೮–೬	
೫	ಹೊಸ ಗಣಿತ ೫ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	ಎಮ್. ಆರ್. ಮಲ್ಯ	ಎಮ್. ಆರ್. ಮಲ್ಯ ಜಿ. ಎ. ಹಾಯಸ್ಕೂಲ, ಬೆಳಗಾವ	೧– ೬–೬	
೬	ಹೊಸ ಗಣಿತ ೬ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	,,	,,	೧– ೮–೬	
೭	ಹೊಸ ಗಣಿತ ೭ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	,,	,,	೧–೧೨–೦	
೫	ಗಣಿತ ಬೋಧಿನಿ ಭಾಗ ೧ ಪ್ರಥಮ ಮುದ್ರಣ, ೧೯೫೪	....	ಎ. ಬಿ. ಮನಗೋಳಿ	ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ	೧– ೮–೦	
೬	ಗಣಿತ ಬೋಧಿನಿ ಭಾಗ ೨ ಪ್ರಥಮ ಮುದ್ರಣ ೧೯೫೪	....	,,	,,	೧–೧೨–೦	
೭	ಗಣಿತ ಬೋಧಿನಿ ಭಾಗ ೩ ಪ್ರಥಮ ಮುದ್ರಣ, ೧೯೫೪	....	,,	,,	೨– ೪–೦	
೫	ನೂತನ ಗಣಿತ ೫ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ ೧೯೫೪	....	ಕೆ. ಕೆ. ಗಲಗಲಿ	ಕೆ. ಕೆ. ಗಲಗಲಿ ಸವದತ್ತಿ ಜಿ. ಬೆಳಗಾವ	೨– ೦–೦	
೬	ನೂತನ ಗಣಿತ ೬ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	,,	,,	೨– ೨–೦	
೭	ನೂತನ ಗಣಿತ ೭ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	,,	,,	೨– ೦–೦	

ಇಯತ್ತೆ	ಪುಸ್ತಕದ ಹೆಸರು		ಲೇಖಕರು	ಪ್ರಕಾಶಕರು	ಕೊನೆಯದಾಗಿ ನಿರ್ಧರಿಸಿದ ಕ್ರಯ	ಶರಾ
	ವಿಜ್ಞಾನ					
೫	ಸಾಮಾನ್ಯವಿಜ್ಞಾನ ೫ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	ಎನ್. ಆರ್. ಮಲ್ಯ	ಎನ್. ಆರ್. ಮಲ್ಯ ಜಿ. ಎ. ಹಾಯಸ್ಕೂಲ, ಬೆಳಗಾವ	೦–೧೧–೬	
೬	ಸಾಮಾನ್ಯವಿಜ್ಞಾನ ೬ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	,,	,,	೧– ೪–೦	
೭	ಸಾಮಾನ್ಯವಿಜ್ಞಾನ ೭ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	,,	,,	೧– ೫–೦	
೫	ಅಭಿನವ ಸಾಮಾನ್ಯವಿಜ್ಞಾನ ಪ್ರಥಮ ಪುಸ್ತಕ, ೧೯೫೪ ಮುದ್ರಣ	....	ಜಿ. ಎಸ್. ಕುಲಕರ್ಣಿ	ಮ್ಯಾಕ್ಮಿಲನ್ ಆ್ಯಂಡ ಕಂ. ಲಿ., ೨೭೬, ಹಾರ್ನಬಿ ರೋಡ, ಮುಂಬಯಿ ೧.	೦–೧೫–೬	
೬	ಅಭಿನವ ಸಾಮಾನ್ಯವಿಜ್ಞಾನ ದ್ವಿತೀಯ ಪುಸ್ತಕ ೧೯೫೪ ಮುದ್ರಣ	....	,,	,,	೧– ೩–೬	
೭	ಅಭಿನವ ಸಾಮಾನ್ಯವಿಜ್ಞಾನ ತೃತೀಯ ಪುಸ್ತಕ, ೧೯೫೪ ಮುದ್ರಣ	....	,,	,,	೧– ೫–೦	
೫	ಸಚಿತ್ರ ಸಾಮಾನ್ಯವಿಜ್ಞಾನ ೫ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೪	....	ಎಲ್. ಆಯ್. ಆಕಳವಾಡಿ	ಆಯ್. ಆರ್. ಆಕಳವಾಡಿ ಆ್ಯಂಡ ಸನ್ಸ, ರಾಮಾಶ್ರಯ ಬುಕ್ ಡಿಪೋ, ಧಾರವಾಡ	೦–೧೨–೬	
೬	ಸಚಿತ್ರ ಸಾಮಾನ್ಯವಿಜ್ಞಾನ ೬ನೆಯ ಇಯತ್ತೆಗಾಗಿ, ಪ್ರಥಮ ಮುದ್ರಣ, ೧೯೫೪	....	,,	,,	೧– ೩–೦	

ಇಯತ್ತೆ	ಪುಸ್ತಕದ ಹೆಸರು		ಲೇಖಕರು	ಪ್ರಕಾಶಕರು	ಕೊನೆಯದಾಗಿ ನಿರ್ಧರಿಸಿದ ಕ್ರಯ
೭	ಸಚಿತ್ರ ಸಾಮಾನ್ಯವಿಜ್ಞಾನ ೭ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ ೧೯೫೪	....	,,	,,	೧- ೯-೦
೫	ನೂತನ ಸಾಮಾನ್ಯವಿಜ್ಞಾನ, ೫ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೫	....	ಕೆ. ವ್ಹಿ. ಕುಂದಣಗಾರ	ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ	೦-೧೪-೦
೬	ನೂತನ ಸಾಮಾನ್ಯವಿಜ್ಞಾನ ೬ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೫	....	,,	,,	೧- ೨-೦
೭	ನೂತನ ಸಾಮಾನ್ಯ ವಿಜ್ಞಾನ ೭ನೆಯ ಇಯತ್ತೆಗಾಗಿ ಪ್ರಥಮ ಮುದ್ರಣ, ೧೯೫೫	....	,,	,,	೧-೧೧-೦
	ಗೃಹವಿಜ್ಞಾನ (ಹೆಣ್ಣು ಮಕ್ಕಳಿಗಾಗಿ)				
೫	ಆರೋಗ್ಯಶಾಸ್ತ್ರ ಹಾಗೂ ಗೃಹವಿಜ್ಞಾನ ಪ್ರಥಮ ಭಾಗ, ಪ್ರಥಮ ಮುದ್ರಣ ೧೯೫೪	....	ಎನ್. ಬಿ. ನಾಡಗೀರ	ವ್ಹಿ. ಎಮ್. ಹೊಂಬಾಳಿ ಅರುಣ ಪ್ರಕಾಶನ, ಹುಬ್ಬಳ್ಳಿ	೦-೧೨-೦
೬	ಆರೋಗ್ಯಶಾಸ್ತ್ರ ಹಾಗೂ ಗೃಹವಿಜ್ಞಾನ ದ್ವಿತೀಯ ಭಾಗ, ಪ್ರಥಮ ಮುದ್ರಣ ೧೯೫೪	....	,,	,,	೦-೧೪-೦
೭	ಆರೋಗ್ಯಶಾಸ್ತ್ರ ಹಾಗೂ ಗೃಹವಿಜ್ಞಾನ ತೃತೀಯ ಭಾಗ, ಪ್ರಥಮ ಮುದ್ರಣ, ೧೯೫೪	....	,,	,,	೧-೧೨-೦

ಪ್ರಾಥಮಿಕ ಶಿಕ್ಷಣ ಪ್ರಪಂಚ

ಮೇ ೧೯೫೫.

ಸಭೆ, ಶಿಬಿರ ಮತ್ತು ಅಲ್ಪಾವಧಿ ತರಬೇತಿ ವರ್ಗಗಳು

ಚೆಂಡಿಯೆ (ಕಾರವಾರ) ೭ :— ಉತ್ತರ ಕನ್ನಡ ಜಿಲ್ಹೆಯ ಸಹಾಯಕ ಸೈನ್ಯ ಪಡೆಯ (ಎ. ಸಿ. ಸಿ.) ವಾರ್ಷಿಕ ಶಿಬಿರದ ಉದ್ಘಾಟನಾ ಸಮಾರಂಭವು **ಶ್ರೀ ಎಸ್. ಎನ್. ಕಾಯ್ಕಿಣಿ** ವಕೀಲರು, ಕಾರವಾರ ಇವರ ಹಸ್ತದಿಂದ ನೆರವೇರಿಸಲ್ಪಟ್ಟಿತು. ಮುಖ್ಯ ಅತಿಥಿಗಳು ಶಿಬಿರಗಳ ಮಹತ್ವವನ್ನು ವಿವರಿಸಿದರು. ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ **ಶ್ರೀ ಎ. ಎಚ್. ದಳವಾಯಿ**ಯವರು ಅಧ್ಯಕ್ಷರ ಭಾಷಣದ ಸಾರಾಂಶವನ್ನು ತಿಳಿಗನ್ನಡದಲ್ಲಿ ಮಕ್ಕಳಿಗೆ ತಿಳಿಹೇಳುತ್ತ ತಮ್ಮ ಆದರ್ಶ ಜೀವನವನ್ನು ಹಳ್ಳಿಗರ ಮುಂದೆ ಇಡುವಂತೆ ವರ್ತಿಸಲು ಉಪದೇಶಿಸಿದರು. ನಂತರ ಡಾ. ವಾಘ ಮತ್ತು ಶ್ರೀ ಬಿ. ಪಿ. ಕದಂರವರೂ ಶಿಬಿರದ ಮಹತ್ವವನ್ನು ಹೇಳಿದರು. ಶ್ರೀ ಶೇಣ್ವಿಯವರು ಆಭಾರವನ್ನು ಮನ್ನಿಸಿದರು.

ಜಮಖಂಡಿ— ೫—೧೮ :— ಇಲ್ಲಿಯ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಸಮಾಜ ಶಿಕ್ಷಣ ಕಾರ್ಯಕರ್ತರ ಅಲ್ಪಾವಧಿ ತರಬೇತಿ ವರ್ಗವು **ಡಾ. ದಾಮುಅಣ್ಣಾ ಹುಲ್ಯಾಳಕೆರರ** ಅಧ್ಯಕ್ಷತೆಯಲ್ಲಿ ಮಾನ್ಯ **ಶ್ರೀ ಬಿ. ಡಿ. ಜತ್ತಿ** : ಆರೋಗ್ಯಶಾಖೆಯ ಉಪಮಂತ್ರಿ, ಮುಂಬಯಿ ಸರಕಾರ ಇವರ ಅಮೃತ ಹಸ್ತದಿಂದ ಉದ್ಘಾಟಿಸಲ್ಪಟ್ಟಿತು. ಕಾರ್ಯಕರ್ತರಲ್ಲಿ ೨೯ ಶಿಕ್ಷಕರು, ೪ ಶಿಕ್ಷಿಕೆಯರು ಇದ್ದರು. ಈ ಅವಧಿಯಲ್ಲಿ ಬೇರೆ ಬೇರೆ ಖಾತೆಗಳ ಅಧಿಕಾರಿಗಳ ಭಾಷಣ ಏರ್ಪಡಿಸಲಾಗಿತ್ತು. ಹಳ್ಳಿಯ ೩ ದಿನಗಳ ವಾಸ್ತವ್ಯದಲ್ಲಿ ರಚನಾತ್ಮಕ ಕಾರ್ಯಕ್ರಮಗಳೊಂದಿಗೆ ವಿವಿಧ ವಿನೋದಾವಳಿಗಳನ್ನೂ ಇಡಲಾಗಿತ್ತು. ೧೮-೫-೫೫ರಂದು **ಡಾ. ಎಚ್. ಟಿ. ಸಾಸನೂರ**ರವರ ಅಧ್ಯಕ್ಷತೆಯಲ್ಲಿ ಮುಕ್ತಾಯ ಸಮಾರಂಭವು ಜರುಗಿತು. ಪ್ರಾ. **ಲಗಳಿ** ಇವರು ಮುಖ್ಯ ಅತಿಥಿಗಳಾಗಿದ್ದರು.

ಹಾವೇರಿ— ೧೭—೨೭ :— ಹಾವೇರಿ ತಾಲೂಕಿನ ಕರ್ಜಗಿ ಹಾಗೂ ಅಗಡಿ ಗ್ರಾಮಗಳಲ್ಲಿ ದಿನಾಂಕ ೧೭-೫-೫೫ ರಿಂದ ೨೭-೫-೫೫ ರ ವರೆಗೆ ಧಾರವಾಡ ಜಿಲ್ಹೆಯ ಪ್ರಾಥಮಿಕ ಶಿಕ್ಷಕರಿಗಾಗಿ ಜೀವನ ಶಿಕ್ಷಣ ಶಿಬಿರಗಳನ್ನು ತೆರೆಯಲಾಗಿತ್ತು. ಎರಡೂ ಶಿಬಿರಗಳಲ್ಲಿ ಕೂಡಿ ೭೩ ಪ್ರಾಥಮಿಕ ಶಿಕ್ಷಕರಿದ್ದರು. ಶಿಬಿರವಾಸಿಗಳಿಗೆ

ನೂಲುವದು, ನೇಯುವದು, ಕೈ ತೋಟದ ಕೆಲಸ ಹಾಗೂ ವಿಧಾಯಕ ಕಾರ್ಯಕ್ರಮ ಈ ವಿಷಯಗಳಲ್ಲಿ ತರಬೇತಿ ಹಾಗೂ ರೂಢಿಗಳನ್ನು ಒದಗಿಸ ಲಾಗಿತ್ತು. ಜಿಲ್ಹೆಯ ಉಪ ಶಿಕ್ಷಣಾಧಿಕಾರಿಗಳಾದ **ಶ್ರೀ ಶಿಗ್ಗಾಂವ** ಮತ್ತು ಇತರ ಸಹಾಯಕ ಶಿಕ್ಷಣಾಧಿಕಾರಿಗಳು ಶಿಬಿರಗಳಿಗೆ ಸಂದರ್ಶನವಿತ್ತು ಜೀವನ ಶಿಕ್ಷಣದ ಬಗೆಗೆ ವಿಚಾರ ಪರಿಪ್ಲುತ ಉಪನ್ಯಾಸಗಳನ್ನಿತ್ತರು. ಎರಡೂ ಶಿಬಿರಗಳಲ್ಲಿ ೮೧ ವಾರ ಖಾದಿ ಅರಿವೆ, ೮ ಗುಡಾರ ಪಟ್ಟಿ, ೪ ಆಸನ ಹಾಗೂ ೨ ಟಾವೆಲ್ಲಗಳನ್ನು ತಯಾರಿಸಲಾಯಿತು. ಪ್ರತಿನಿತ್ಯ ಸೂತ್ರ-ಯಜ್ಞವು ಸಾಗುತ್ತಿತ್ತು. ಗ್ರಾಮ ನಿವಾಸಿಗಳ ಸಹಕಾರದಿಂದ ರಸ್ತೆಯನ್ನು ನಿರ್ಮಿಸುವದು ಮತ್ತು ಪ್ರಾ. ಶಾಲೆಯ ಕಟ್ಟಡದ ಸುತ್ತಲೂ ಬೇಲೀ ಹಚ್ಚುವ ಕೆಲಸಗಳನ್ನು ಎರಡೂ ಶಿಬಿರಗಳು ಸಂಯುಕ್ತವಾಗಿ ಪೂರೈಸಿದವು, ಶಿಬಿರಗಳ ಮುಕ್ತಾಯ ಸಮಾರಂಭಗಳು **ಶ್ರೀ ಎಚ್. ಎಮ್. ಕಾಳೆ,** ಜಿಲ್ಹಾ ಶಿಕ್ಷಣಾಧಿಕಾರಿಗಳಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟವು.

ತಡವಲಗಾ (ತಾ. ಇಂಡಿ) ೧೬-೨೨ :- ಇಂಡಿ ಸಮಾಜವಿಕಾಸ ಯೋಜನೆಯ ಕ್ಷೇತ್ರದಲ್ಲಿರುವ ಒಂಬತ್ತು ಜೀವನ ಶಿಕ್ಷಣ ಶಾಲಾ ಗುರುಗಳ ಶಿಬಿರವು ದಿ. ೧೮-೫-೫೫ ರಿಂದ ದಿ. ೨೨-೫-೫೫ ರ ವರೆಗೆ ತಡವಲಗಾದಲ್ಲಿ ನಡೆಯಿತು. ಕೊನೆಯ ದಿವಸ ಪ್ರವಾಸವನ್ನು ಕೈಕೊಳ್ಳಲಾಗಿತ್ತು. ಉಳಿದ ಅವಧಿಯಲ್ಲಿ ವಿಧಾಯಕ ಕಾರ್ಯಕ್ರಮದ ಅಂಗವಾಗಿ ತಡವಲಗಾ ಶಾಲೆಗೆ ಹೊಂದಿ ಒಂದು ಜಳಕದ ಮನೆಯನ್ನು ಅಚ್ಚುಕಟ್ಟಾಗಿ ಕಟ್ಟಲಾಯಿತು. ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ **ಶ್ರೀ ಸಿ. ಎಸ್. ಬೆನ್ನೂರ** ರವರು ಶಿಬಿರದ ಸದಸ್ಯರೊಂದಿಗೆ ' ವ್ಹಾಲಿಬಾಲ ' ಆಟವನ್ನಾಡಿದರು. ೨೮ ಶಿಬಿರ ವಾಸಿಗಳೊಂದಿಗೆ ಪ್ರಾರ್ಥನೆ ಮಾಡಿ ಅವರೊಡನೆ ಚರ್ಚೆಯಲ್ಲಿ ಭಾಗವಹಿಸಿದರು. ಜಿಲ್ಹಾ ಸ್ಕೂಲಬೋರ್ಡ ಸದಸ್ಯರಾದ **ಶ್ರೀ ಪಿ. ಎಸ್.** ಪಾಟೀಲ ಮತ್ತು ಗ್ರಾಮ ನಿವಾಸಿಗಳು ಎಲ್ಲ ವಿಧದಿಂದಲೂ ಸಹಕರಿಸಿದರು.

ಕಮತಗಿ— ೧೮—೨೭ :— ವಿಜಾಪೂರ ಜಿಲ್ಹೆಯ ದಕ್ಷಿಣ ಭಾಗದ ಜೀವನ ಶಿಕ್ಷಣ ಶಾಲೆಗಳ ಶೈಕ್ಷಣಿಕ ಶಿಬಿರಕ್ಕೆ ೧೭ ಶಾಲೆಗಳಿಂದ ೫೪ ಜನ ಶಿಕ್ಷಕರು ಬಂದಿದ್ದರು. ಮೊದಲಿನ ಮೂರು ದಿನಗಳಲ್ಲಿ ಊರ ಹೊರಬದಿಯಲ್ಲಿರುವ ಪಾಯಖಾನೆಯ ದೊಡ್ಡದಾದ ಗೋಡೆಯನ್ನು ಕಟ್ಟಿದರು. ಉಳಿದ ದಿನಗಳಲ್ಲಿ ಶಾಲೆಯ ಆವಾರದ ಗೋಡೆಯನ್ನು ಕಟ್ಟುವದು ಇ. ರಚನಾತ್ಮಕ ಕಾರ್ಯಗಳನ್ನು ಮಾಡಿದರು. ೨೨ ರಂದು ' ಐಹೊಳ್ಳಿ ' ಪ್ರವಾಸವನ್ನು ಕೈಕೊಂಡಿದ್ದರು. ಶಿಬಿರಕ್ಕೆ ಜಿಲ್ಹೆಯ ಶಿಕ್ಷಣಾಧಿಕಾರಿಗಳಾದ **ಶ್ರೀ ಸಿ. ಎಸ್. ಬೆನ್ನೂರ** ಉಪ ಶಿಕ್ಷಣಾಧಿಕಾರಿಗಳಾದ **ಶ್ರೀ ಯಾರಗಲ್ಲ** ಮತ್ತು ಧಾರವಾಡ ಜಿಲ್ಹೆಯ ಉಪ ಶಿಕ್ಷಣಾಧಿಕಾರಿಗಳಾದ **ಶ್ರೀ ಶಿಗ್ಗಾಂವ**ರವರು ಹಾಗೂ ಇತರ ಗಣ್ಯ ವ್ಯಕ್ತಿಗಳು ಸಂದರ್ಶನವಿತ್ತು ಶೈಕ್ಷಣಿಕ ಸಮಸ್ಯೆ ಹಾಗೂ ಅಭ್ಯಾಸ ಪತ್ರಿಕೆಯ ಕುರಿತು ತಿಳಿಸಿ ಹೇಳಿದರು. ೨೭ ರಂದು ಜಿಲ್ಹಾ ಶಿಕ್ಷಣಾಧಿಕಾರಿಗಳ ಒಡೆಯತನದಲ್ಲಿ ಮುಕ್ತಾಯ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ೧೯೫೫.

(ಕಳೆದ ಎಪ್ರಿಲದಲ್ಲಿ ಜರುಗಿದ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ ಆ ಆ ಶಾಲೆಗಳ ಯಶಸ್ಸನ್ನು ಕುರಿತು ಮುಖ್ಯಾಧ್ಯಾಪಕರು ಕಳುಹಿದ ಸಂಗತಿಯನ್ನು ಸಂಗ್ರಹಿಸಿ ಕೊಡಲಾಗಿದೆ.)

ಶಾಲೆಯ ಹೆಸರು	ಪರೀಕ್ಷೆಗೆ ಕುಳಿತವರ ಸಂಖ್ಯೆ	ಪರೀಕ್ಷೆ ಪಾಸಾದವರ ಸಂಖ್ಯೆ	ವರ್ಗದ ಶಿಕ್ಷಕರು
ಉಡಿ (ರೋಣ)	೧೬	೧೫	ಶ್ರೀ ಬಿ. ಎ. ಕಳ್ಳೀಮಠ
ಬೆಳ್ಳೂರ (ರೋಣ)	೨೫	೨೧	ಶ್ರೀ ಲ. ಹ. ಮುಕ್ಕಣ್ಣವರ
ಕಾಲಗೋಡ (ಗೋಕಾಕ)	೨೨	೧೯	ಶ್ರೀ ವಾಯ್. ಬಿ. ಪಾಟೀಲ
ಕರೂರ (ರಾಣೇಬೆನ್ನೂರ)	೧೫	೧೩	ಶ್ರೀ ಜಿ. ಎಚ್. ಹಜಾರೆ
ಬೇಲೂರ (ಬಾದಾಮಿ)	೧೮	೧೪	ಶ್ರೀ ಬ. ಸಿ. ಅಕ್ಕಿ
ಜಮ್ಮನಕಟ್ಟಿ (ಬಾದಾಮಿ)	೧೪	೧೩	ಶ್ರೀ ಎಮ್. ಜಿ. ಅಂಗಡಿ
ಇಂಡಿ	೨೨	೧೯	ಶ್ರೀ ವ್ಹಿ. ಎಸ್. ನಾಡಗೌಡ
ಲಕ್ಷ್ಮೇಶ್ವರ ನಂ. ೧	೨೪	೨೦	ಶ್ರೀ ಜೋ. ವೀ. ಪಾಟೀಲ
ತಾಂಬೆ (ಇಂಡಿ)	೧೬	೧೨	ಶ್ರೀ ರೇ. ಗು. ನಿಂಬರಗಿ
ಕಮತಗಿ (ಬಾಗಲಕೋಟ)	೩೩	೨೫	ಶ್ರೀ ಯಲಬುರ್ಗಿ-ಶ್ರೀ ಜೋಶಿ
ರಡ್ಡೇರತಿಮ್ಮಾಪೂರ	೬	೬	ಶ್ರೀ ವಾಯ್. ಎನ್. ಕಾಮತ
ತಳಕವಾಡ	೧೦	೮	ಶ್ರೀ ಬ. ಬ. ನಡುವಿನಮನಿ
ಸಂಗ್ರೇಶಕೊಪ್ಪ (ಸವದತ್ತಿ)	೪	೪	ಶ್ರೀ ಲಿಂ. ಅ. ಜೀರಿಗವಾಡ
ಶಿರಶಾಡ (ಇಂಡಿ)	೧೧	೯	ಶ್ರೀ ಭೀ. ಗ. ಕುಲರ್ಣಿ
ಮೇಲ್ಮನಹಟ್ಟಿ (ಜಿ. ಬೆಳಗಾವ)	೧೦	೧೦	ಶ್ರೀ ಗು. ಶಿ. ಹಿರೇಮಠ
ಹಿರೇಬಿದರಿ (ರಾಣೇಬೆನ್ನೂರ)	೯	೭	—
ಹನ್ನಿಗಿ (ಮುಂಡರಗಿ)	೬	೫	—
ಕುರುಬಗೊಂಡ (ಹಾವೇರಿ)	೨೨	೨೦	—
ಹಿರೆ,ಕೊಪಗಲಿ (ಹುನಗುಂದ)	೭	೫	—
ಹಾಳಕುಸುಗಲ್ಲ (ನವಲಗುಂದ)	೬	೫	—
ಕಸಬಾ-ಹೊನ್ನಾವರ	೨೩	೧೭	—
ವಿಜಾಪೂರ ನಂ. ೭	—	೭	—
ಹಿರೇಲೋಣಿ (ವಿಜಾಪೂರ)	೧೭	೧೧	—
ಮುಷ್ಟಿಗೇರಿ (ಬಾದಾಮಿ)	೧೦	೯	—
ಹುನಕುಂಟಿ (ಮುದ್ದೇಬಿಹಾಳ)	೯	೮	—
ಕುಡಚಿ (ರಾಯಬಾಗ)	೯	೮	—
ಅಕ್ಕಿಆಲೂರ (ಹಾನಗಲ್ಲ)	೨೮	೨೧	—

Regd. No. B. 5375

"ಕನ್ನಡ ಪ್ರಾಥಮಿಕ ಶಿಕ್ಷಣ"

(ಪ್ರತಿ ತಿಂಗಳ ದಿನಾಂಕ ೧೫ ರಂದು ಪ್ರಕಟವಾಗುವದು)

ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಲೇಖನಗಳನ್ನು ಪ್ರಕಟಿಸುವ ಮಾಸಪತ್ರಿಕೆ ಇದೊಂದೇ. ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಶಿಕ್ಷಣ ತಜ್ಞರಿಂದ ಬರೆದುಬಂದ ಲೇಖನಗಳಿಗೆ ಪ್ರಾಶಸ್ತ್ಯ ಕೊಡಲಾಗುವದು. ಲೇಖಕರು ತಮ್ಮ ಬರೆಹಗಳ ಎರಡು ಪ್ರತಿಗಳನ್ನು ಕಳುಹಿಸಿಕೊಡಬೇಕು. ಸ್ವೀಕೃತವಾದ ಲೇಖನಗಳಿಗೆ ಯೋಗ್ಯ ಸಂಭಾವನೆ ಕೊಡಲಾಗುವದು ಮತ್ತು ಶೈಕ್ಷಣಿಕ ಪುಸ್ತಕಗಳ ಜಾಹೀರಾತುಗಳನ್ನು ಕೆಳಗೆ ತೋರಿಸಿದ ದರದಿಂದ ನಮ್ಮ ಮಾಸಪತ್ರಿಕೆಯಲ್ಲಿ ಪ್ರಕಟಿಸುವೆವು:—

ಪೂರ್ಣ	ಪುಟ	....	೧ ವರ್ಷಕ್ಕೆ	....	ರೂ.	೫೦—೦—೦
ಅರ್ಧ	ಪುಟ	....	,,	....	ರೂ.	೩೦—೦—೦
ಕಾಲು	ಪುಟ	....	,,	....	ರೂ.	೨೦—೦—೦
ಪೂರ್ಣ	ಪುಟ	....	೬ ತಿಂಗಳಿಗೆ	....	ರೂ.	೩೦—೦—೦
ಅರ್ಧ	ಪುಟ	....	,,	....	ರೂ	೨೦—೦—೦
ಕಾಲು	ಪುಟ	....	,,	....	ರೂ.	೧೫—೦—೦
ಪೂರ್ಣ	ಪುಟ	....	೧ ತಿಂಗಳಿಗೆ	....	ರೂ.	೧೦—೦—೦
ಅರ್ಧ	ಪುಟ	....	,,	....	ರೂ.	೫—೦—೦
ಕಾಲು	ಪುಟ	....	,,	....	ರೂ.	೨—೦—೦

ಸೂಚನೆ:— ಪ್ರಶ್ನೋತ್ತರ ಹಾಗೂ ಟಿಪ್ಪಣಿ ಪುಸ್ತಕಗಳ ಬಗ್ಗೆ ಬರುವ ಜಾಹೀರಾತುಗಳನ್ನು ಸ್ವೀಕರಿಸಲಾಗುವದಿಲ್ಲ.

ಹೆಚ್ಚಿನ ವಿವರಗಳಿಗೆ ಬರೆಯಿರಿ: **ಪ್ರಧಾನ ಸಂಪಾದಕರು,** ಕನ್ನಡ ಪ್ರಾಥಮಿಕ ಶಿಕ್ಷಣ, ಧಾರವಾಡ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ —

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ (Ideal Drawing)

ಶ್ರೀ. ಎಸ್. ಕೆ. ಜೋಶಿ ಮತ್ತು **ಶ್ರೀ ಜಿ. ಜಿ. ಮಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦,** ಅಂಚೆ ವೆಚ್ಚ ಪ್ರತ್ಯೇಕ. ಐದು ಮತ್ತು ಅದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ವಾಮನ್. ಜಿ. ರಾಣೆ

ಪ್ರಕಾಶಕರು, ೩೪೩, ಕಸಬಾಪೇಟೆ, ಪುಣೆ.

Printed by Shri S. F. Kattimani at Manohar Power Printing Press, Hubli. Edited andPublished by Sjts S. P. Patil, B. M. Shintri, S. R. Tatti & Smti. P. A. Bhaskar at the Kannada Prathamik Shikshan Office, Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಸ್. ಬಿ. ಪಾಟೀಲ

ಮೈಸೂರ ರಾಜಪ್ರಮುಖರು

೩೭ನೆಯ ಸಾಹಿತ್ಯ ಸಮ್ಮೇಲನದ ಉದ್ಘಾಟಕರು

ಪತ್ರಿಕೆ

ಜುಲೈ, ೧೯೫೫

ವಾ. ಚಂದಾ

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಕೆ. ಬಿ. ತೇರಗಾಂವಕರ,** ಬಿ.ಎಸ್ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

— ಸಹಸಂಪಾದಕರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ., ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೧ | **ಜುಲೈ, ೧೯೫೫** | **ಸಂಚಿಕೆ ೨**

ಪ ರಿ ವಿ ಡಿ

೧. ಸಂಪಾದಕೀಯ ೧
೨. ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ : ಶ್ರೀ ಶಿಂತ್ರಿ ಬಸಪ್ಪನವರು ೫
೩. ಶ್ರಮದಾನದಲ್ಲಿ ಶಿಕ್ಷಣಾಂಶ : ಶ್ರೀ ಎಸ್. ಎಸ್. ಮಠಪತಿ ೯
೪. ವಿವಿಧೋದ್ದೇಶ ಶಾಲೆಗಳು : ಶ್ರೀ ಮ. ಗು. ಹಂದ್ರಾಳ ೧೨
೫. ಮೂಲೋದ್ಯೋಗದ ಅಭ್ಯಾಸ ಪತ್ರಿಕೆ ೧೪
೬. ಗ್ರಂಥಾವಲೋಕನ ೨೫
೭. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೭
೮. ಪ್ರಾ. ಶಾ.ಪ್ರ. ಪರೀಕ್ಷೆಯ ಪರಿಣಾಮ .... ಕವರ ೩

ಮುಖಪುಟದ ಪಡಿಯಚ್ಚು '**ಜಯಕರ್ನಾಟಕ**'ದ ಕೃಪೆಯಿಂದ

ಸಂಪಾದಕೀಯ

ವಿಶ್ವಸಂಸ್ಥೆಯ ಹತ್ತನೆಯ ಹಬ್ಬ

ಯುಕ್ತರಾಷ್ಟ್ರ ಸಂಸ್ಥೆಯು ಜನ್ಮ ತಾಳಿ ಜೂನ ತಿಂಗಳ ೨೬ನೆಯ ದಿನಾಂಕಕ್ಕೆ ಹತ್ತು ವರುಷಗಳು ಮುಗಿದುವು. ಅಂದು ಯುಕ್ತರಾಷ್ಟ್ರ ಸಂಸ್ಥೆಯ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು ಅದರ ಹುಟ್ಟುನೆಲವಾದ ಸಾನ್-ಫ್ರಾನ್ಸಿಸ್ಕೋದಲ್ಲಿ ಹತ್ತನೆಯ ವಾರ್ಷಿಕೋತ್ಸವವನ್ನು ನಡೆಸಿದರು. ಅದನ್ನು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಾದ ಶ್ರೀ ಐಯಸೆನ್‌ಹಾವರರು ತೆರೆದರಲ್ಲದೆ ಜಗತ್ತಿನ ಪ್ರಮುಖ ಧುರೀಣರೂ ಹಿರಿಯ ಮುತ್ಸದ್ದಿಗಳೂ ಸಮಾರಂಭದಲ್ಲಿ ಭಾಗ ತೆಗೆದುಕೊಂಡಿದ್ದರು. ಈ ಹತ್ತು ವರುಷಗಳ ಹಿಂದೆ ಜಗತ್ತಿನ ೫೦ ರಾಷ್ಟ್ರಗಳ ಪ್ರತಿನಿಧಿಗಳು ಒಮ್ಮತದಿಂದ ಅಣಿಗೊಳಿಸಿದ ತಾಮ್ರಪಟದಲ್ಲಿ ಹೇಳಿದ ಮಹೋದ್ದೇಶಗಳು ಮಾನವ ಕೋಟಿಯ ಆಶೆಆಕಾಂಕ್ಷೆಗಳ ದ್ಯೋತಕವಾಗಿದೆ. ವಿಶ್ವಶಾಂತಿ, ಮನುಷ್ಯನ ಮೂಲಭೂತ ಸ್ವಾತಂತ್ರ್ಯಗಳು ಹಾಗು ಆರ್ಥಿಕ ಸೌಲಭ್ಯಗಳಲ್ಲಿ ಸಮಾನತೆ ಇವೇ ಮೊದಲಾದ ಗುರಿಗಳನ್ನು ಸಾಧಿಸಲು ಸರ್ವ ರಾಷ್ಟ್ರಗಳು ದುಡಿಯುತ್ತಿವೆಯಾದರೂ ಜಗತ್ತಿನ ನಿಶಸ್ತ್ರೀಕರಣ ಹಾಗು ಅಣು ಜಲಜನಕ ಸಿಡಿಗುಂಡುಗಳ ಹಿಡಿತವು ಪೂರ್ಣ ಸಾಧಿಸದ ಹೊರತು, ಆಕ್ರಮಣ ನಿಲ್ಲದು; ಯುದ್ಧದ ಭಯ ಬಯಲಾಗದು. ಆದುದರಿಂದ ಸದಸ್ಯರಾಷ್ಟ್ರಗಳೆಲ್ಲವೂ ವಿಶ್ವಸಂಸ್ಥೆಯ ಉಚ್ಚಧ್ಯೇಯಗಳನ್ನು ಪಾಲಿಸುವದರಲ್ಲಿ ತ್ರಿಕರಣಶುದ್ಧಿಯಿಂದ ದುಡಿದರೆ ಜಾಗತಿಕ ಶಾಂತಿ ಸ್ಥಾಪನೆಗೆ ಯಾವ ಅಡಚಣಿಗಳೂ ಬಂದೊದಗವು. ವಿಶ್ವಶಾಂತಿಯನ್ನು ಸಾಧಿಸಲು ವಿಶ್ವಸಂಸ್ಥೆಗಿಂತಲೂ ಮಿಗಿಲಾದುದು ಮತ್ತೊಂದಿಲ್ಲವೆಂದು ಎಲ್ಲ ರಾಷ್ಟ್ರಗಳೂ ಮನಗಾಣಬೇಕು.

ಉಚ್ಚಶಿಕ್ಷಣವೂ ವಿಶ್ವಶಾಂತಿಯೂ

ಅಮೇರಿಕೆಯ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾದ ಶ್ರೀ ಆಯ್‌ಸೆನ್‌ಹಾವರರು ಪೆನ್‌ಸಿಲ್ವಾನಿಯಾ ವಿಶ್ವವಿದ್ಯಾಲಯದಲ್ಲಿ ಮಾತಾಡುವಾಗ ಉಚ್ಚ ಶಿಕ್ಷಣದ ಆವಶ್ಯಕತೆಯನ್ನು ಒತ್ತಿಹೇಳಿ ಅದರಿಂದಲೇ ಫ್ರ್ಯಾಂಕಲಿನ್ ಹಾಗು ಲಿಂಕನ್ನರಂಥ ಮಾನವ ಮಣಿಗಳನ್ನು ನಿರ್ಮಿಸುವದು ಸಾಧ್ಯವಿದೆಯೆಂದು ಅಭಿಪ್ರಾಯಪಟ್ಟರು. ವಿಶೇಷ ಪಾಂಡಿತ್ಯವನ್ನು ಹೊಂದುವುದರ ಪರಿಣಾಮವಾಗಿ ಇತ್ತೀಚಿಗಿನ ವಿಶ್ವವಿದ್ಯಾಲಯಗಳು ಬೌದ್ಧಿಕ ಹಾಗು ಲೌಕಿಕ ಶಿಕ್ಷಣವನ್ನು ಬೇರ್ಪಡಿಸಿ ಕೆಲವೇ ತತ್ತ್ವಜ್ಞಾನಿಗಳನ್ನೂ ಅನೇಕ ಎಂಜಿನಿಯರರನ್ನೂ ಸಜ್ಜುಮಾಡುತ್ತಿರುವುವೇ ಹೊರತು ವಿದ್ಯಾಬುದ್ಧಿಗಳೆರಡನ್ನೂ ಸಮನ್ವಯಿಸುವಂಥ

ಸಾಕಷ್ಟು ಜನರನ್ನು ಸಿದ್ಧಗೊಳಿಸಿಲ್ಲ. ನಮ್ಮ ಅತಿ ಕಟ್ಟುನಿಟ್ಟಾದ ಬೇಡಿಕೆಯೆಂದರೆ ಒಬ್ಬೊಬ್ಬರಿಗೂ ಪೂರ್ಣತೆಯನ್ನು ಕೊಡುವ ಉದಾರವಾದ ಹಾಗು ಉಪಯುಕ್ತವಾದ ಶಿಕ್ಷಣವು ಲಭಿಸಬೇಕೆಂದು ಅವರು ಪ್ರತಿಪಾದಿಸಿದರು. ಮೈಕೈ-ಮೆದುಳುಗಳು ಕೂಡಿಯೇ ಕೆಲಸ ಮಾಡುವಂತೆ ಅವುಗಳ ಶಿಕ್ಷಣ ನಡೆದರೆ ಅದುವೇ ನಿಜವಾದ ಉಚ್ಚ ಶಿಕ್ಷಣದ ಅಡಿಗಲ್ಲೆಂದು ಹೇಳಿದರು. ಸಾಮಾನ್ಯ ಮಾನವತೆಯನ್ನು ಸಾಧಿಸಿ ನ್ಯಾಯ ಹಾಗು ಸ್ವಾತಂತ್ರ್ಯಗಳ ತಳಹದಿಯ ಮೇಲೆ ಚಿರಶಾಂತಿಯನ್ನು ಸ್ಥಾಪಿಸುವಂತಹ ನೈಜವಾದ ಶಿಕ್ಷಣ ಪಡೆದವರನ್ನು ಪ್ರತಿಯೊಂದು ದೇಶವು ತಯಾರಿಸಿದರಷ್ಟೇ ಸಾಲದು. ಉದಾರವಾದ ಹಾಗು ಸುವ್ಯವಸ್ಥಿತವಾದ ತಿಳುವಳಿಕೆಯಿಂದ ಸಾರ್ವಜನಿಕ ನಡೆವಳಿಗಳಲ್ಲಿ ತಮ್ಮ ವರ್ಚಸ್ಸನ್ನು ಬೀರುವ ಅವರ ಹಕ್ಕುಗಳನ್ನು ಮನ್ನಿಸಬೇಕು. ಸ್ವಾತಂತ್ರ್ಯವುಳ್ಳ ವ್ಯಕ್ತಿ ಹಾಗು ರಾಷ್ಟ್ರಗಳ ನಡುವೆ ಮಾತ್ರ ಪರಸ್ಪರ ತಿಳುವಳಿಕೆ ಹಾಗು ಪ್ರಾಮಾಣಿಕ ಸಹಕಾರಗಳು ಸಾಧ್ಯ. ತಮ್ಮಲ್ಲಿ ಹಾಗು ಹೆರವರೊಡನೆ ಶಾಂತಿಯನ್ನು ಕಾಯ್ದುಕೊಳ್ಳುವಂತಹ ಅನುಭವಿಕ ಮೇಧಾವಿಗಳನ್ನು ತಯಾರಿಸುವದೇ ಈ ಯುಗದ ಉಚ್ಚ ಶಿಕ್ಷಣದ ಗುರಿಯಾಗಿದೆಯೆಂದು ಸಲಹೆ ನೀಡಿದರು.

ಪಂಚವಾರ್ಷಿಕ ಯೋಜನೆಗಳೂ ಪ್ರಾಥಮಿಕ ಶಿಕ್ಷಣವೂ

ಹಿಂದುಸ್ತಾನದ ರಾಷ್ಟ್ರೀಯ ಸಭೆಯು ಮೊನ್ನೆ ಮೊನ್ನೆ ನಡೆದ ಆವಡಿಯ ಅಧಿವೇಶನದಲ್ಲಿ ಮುಖ್ಯ ಪ್ರಧಾನರಿಂದ ಸ್ವತಃ ಮಂಡಿಸಲ್ಪಟ್ಟ ಇನ್ನು ಹತ್ತುವರುಷಗಳ ಕಾಲದಲ್ಲಿ ಜೀವನ ಶಿಕ್ಷಣವೇ ಹಿಂದುಸ್ತಾನದ ಕ್ರಮಬದ್ಧವಾದ ರಾಷ್ಟ್ರೀಯ ಶಿಕ್ಷಣವಾಗಬೇಕೆನ್ನುವ ಗೊತ್ತುವಳಿಯನ್ನು ಸ್ವೀಕರಿಸಿದೆ. ಇಂತಹ ಶಿಕ್ಷಣದ ಅವಶ್ಯಕತೆಯನ್ನು ತಿಳಿದು ಈಗಾಗಲೇ ಎಲ್ಲ ರಾಜ್ಯ ಸರಕಾರಗಳು ಅನೇಕ ಪ್ರಾಥಮಿಕ ಶಾಲೆಗಳಲ್ಲಿ ಜೀವನ ಶಿಕ್ಷಣವನ್ನು ಮೊದಲು ಮಾಡಿರುವುವು. ಅರಾಷ್ಟ್ರೀಯವಾದ ಸದ್ಯದ ಶಿಕ್ಷಣವನ್ನು ತುದಿಮೊದಲಿನಿಂದ ಬದಲಾಯಿಸಬೇಕಾದರೆ ಜೀವನ ಶಿಕ್ಷಣ ಶಾಲೆಗಳ ಸಂಖ್ಯೆ ಅಧಿಕವಾಗಬೇಕು. ಇದನ್ನು ಸಾಧಿಸಲು ಕೇಂದ್ರ ಸರಕಾರದವರು ಮುಂಬರುವ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಯೋಗ್ಯ ಸ್ಥಾನ ಕೊಡಮಾಡಿರುವುದು ಸ್ತುತ್ಯವಾಗಿದೆ. ಈಗಿರುವ ಪ್ರಾಥಮಿಕ ಶಾಲೆಗಳ ಒಂದುಮೂರಾಂಶದಷ್ಟು ಮತ್ತು ಹೊಸದಾಗಿ ತೆರೆಯಲ್ಪಡುವ ಶಾಲೆಗಳಲ್ಲಿ ಅರ್ಧದಷ್ಟು ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಮಾರ್ಪಡಿಸುವದಕ್ಕೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಇಂಬನ್ನು ಕಲ್ಪಿಸಿದ್ದಾರೆಂದೂ ಮತ್ತು ತೃತೀಯ ಪಂಚವಾರ್ಷಿಕ ಯೋಜನೆಯು ಕಾರ್ಯರಂಗಕ್ಕಿಳಿದಾಗ ರಾಷ್ಟ್ರದ ಎಲ್ಲ ಶಾಲೆಗಳಲ್ಲಿಯೂ ಜೀವನ ಶಿಕ್ಷಣ ನಡೆದು ೬ರಿಂದ ೧೪ ವಯೋಮಾನದಲ್ಲಿರುವ ಮಕ್ಕಳೆಲ್ಲರಿಗೆ ಉಚಿತ ಹಾಗು ಕಡ್ಡಾಯ ಜೀವನ ಶಿಕ್ಷಣವು ದೊರೆಯಬೇಕೆಂಬ ಸಲಹೆಗಳನ್ನು ಕೇಂದ್ರ ಸರಕಾರದವರು ಮಾಡಿರುವರೆಂದು ತಿಳಿಯುತ್ತಿದೆ. ಜೀವನ ಶಿಕ್ಷಣವೇ ಭಾರತದ ಪರಿಸ್ಥಿತಿಗೆ ಹೊಂದಿಕೊಳ್ಳುವ ಶಿಕ್ಷಣವೆಂಬುದು ಜನಸಾಮಾನ್ಯತೆಗೆ ಶೀಘ್ರ ತಿಳಿದಷ್ಟು ಒಳಿತು.

ಜೀವನ ಶಿಕ್ಷಣದ ಮುನ್ನಡೆಗೆ ಆಚಾರ್ಯ ಭಾವೆಯವರ ಸಮಯೋಚಿತ ಸಲಹೆಗಳು

ದಿನಾಂಕ ೧೭-೪-೧೯೫೫ರಂದು ಓಡಿಸಾ ರಾಜ್ಯದಲ್ಲಿ ಸೇರಿದ ಶಿಕ್ಷಕರ ಸಭೆಯಲ್ಲಿ ಜೀವನ ಶಿಕ್ಷಣವನ್ನುದ್ದೇಶಿಸಿ ಆಚಾರ್ಯ ಭಾವೆಯವರು ಹೀಗೆಂದರು:— ಭಾರತದ ರಾಷ್ಟ್ರೀಯ ಸಭೆಯ ಹಾಗು ಪಂಚವಾರ್ಷಿಕ ಯೋಜನೆಗಳ ಗೊತ್ತುವಳಿಗಳನ್ವಯ ಮುಂದಿನ ಹತ್ತು ವರ್ಷಗಳ ಕಾಲದಲ್ಲಿ ರಾಷ್ಟ್ರದ ಎಲ್ಲ ಕಡೆಗೂ ಜೀವನ ಶಿಕ್ಷಣ ಶಾಲೆಗಳು ನಡೆಯುವವು. ಹೀಗೆಂದಮೇಲೆ ಸದ್ಯದ ಜೀವನ ಶಿಕ್ಷಣ ಶಾಲೆಗಳು ಮಾದರಿಯ ಸಂಸ್ಥೆಗಳಾಗಿರಬೇಕೆಂಬುದು ಸುಸ್ಪಷ್ಟವು. ಇಲ್ಲವಾದರೆ ಮುಂಬರುವ ಶಾಲೆಗಳಲ್ಲಿಯ ಶೈಕ್ಷಣಿಕ ಗೊತ್ತು ಹಾಗು ರೀತಿನೀತಿಗಳಲ್ಲಿ ಹೆಚ್ಚು ಕಡಿಮೆ ಉಂಟಾಗುವ ಸಂಭವವಿದೆಯೆಂದು ಎಚ್ಚರಿಕೆ ಕೊಟ್ಟಿದ್ದಾರೆ. ಹೀಗಾಗಬಾರದೆಂಬ ಉದ್ದೇಶವನ್ನು ನಮ್ಮೆದುರು ಇಟ್ಟುಕೊಂಡರೆ ಸದ್ಯದ ಜೀವನ ಶಿಕ್ಷಣ ಶಾಲೆಗಳನ್ನು ಮಾದರಿಯ ಶಾಲೆಗಳನ್ನಾಗಿ ನಡೆಸುವುದು ಅತಿ ಮಹತ್ವದ್ದಾಗುವದು. ಇದಲ್ಲಕ್ಕೂ ಮೊದಲು ಜೀವನ ಶಿಕ್ಷಣದಲ್ಲಿ ಅಡಕವಾಗಿರುವ

ಮೂಲ ತತ್ವಗಳ ಬಗೆಗೆ ನಮ್ಮಲ್ಲಿ ಸರಿಯಾದ ಕಲ್ಪನೆ ಇರುವುದು ಅತ್ಯವಶ್ಯಕವು. ಸಾಲೆಗಳಲ್ಲಿ ಒಕ್ಕಲುತನ ನೂಲುವದು ನೇಯುವದು ಇವೇ ಮುಂತಾದ ಕೆಲವು ದುಡಿಮೆಗಳ ಬಗೆಗೆ ಅಲ್ಪಸ್ವಲ್ಪ ಜ್ಞಾನ ಮಾಡಿಕೊಡುವುದೇ ಜೀವನ ಶಿಕ್ಷಣವೆಂಬ ತಪ್ಪು ಕಲ್ಪನೆಯು ಜನಸಾಮಾನ್ಯತೆಯಲ್ಲಿದ್ದಂತೆ ಕಂಡು ಬರುತ್ತಿದೆ. ಬೌದ್ಧಿಕ ಜ್ಞಾನವನ್ನು ಅಲಕ್ಷಿಸಿದಷ್ಟು ಒಳ್ಳೆಯದೆಂಬ ಕಲ್ಪನೆಯುಳ್ಳವರೂ ಕೆಲವರಿರಬಹುದು. ಕಲಿಯುವಿಕೆಗೂ ಕೈಗಾರಿಕೆಗೂ ಯಾವುದೊಂದು ಸಂಬಂಧವನ್ನು ಹೆಚ್ಚುವುದೇ ನಿಜವಾದ ಜೀವನ ಶಿಕ್ಷಣವೆಂದು ತಿಳಿದವರೂ ಕೆಲವರುಂಟು. ಇವೆಲ್ಲ ದೃಷ್ಟಿಗಳು ದೋಷಯುಕ್ತವಾಗಿವೆ. ಮಕ್ಕಳು ಅಲ್ಪಸ್ವಲ್ಪ ಕೈಗಾರಿಕೆಯನ್ನು ಕಲಿತರೆ ತೀರದು. ಅವರು ಅದರಲ್ಲಿ ನುರಿತವರಾಗಿ ಮೀನವು ನೀರಿನಲ್ಲಿ ಈಸುವಷ್ಟು ಸುಲಭವಾದ ರೀತಿಯಿಂದ ತಮ್ಮ ಕೆಲಸವನ್ನು ಮಾಡುವಷ್ಟು ಶಕ್ತರಾಗಬೇಕು. ವಿದ್ಯಾಭ್ಯಾಸ ಮುಗಿದ ಬಳಿಕ ತಾವು ಕಲಿತ ಕಾಯಕವನ್ನೇ ಮಾಡಿ ತಮ್ಮ ಉದರ ಪೋಷಣೆಯನ್ನು ನೀಗಿಸುವಷ್ಟು ಸಾಮರ್ಥ್ಯ ಅವರಿಗೆ ಬರಬೇಕು. ಹಳ್ಳಿಯ ಆಯಗಾರರು ಹೆಚ್ಚಿನ ಕುಶಲತೆಯನ್ನು ಪಡೆಯಲು ವಿದ್ಯಾರ್ಥಿಗಳ ನೆರವನ್ನು ಕೋರಬೇಕು. ಹೀಗೆಂದಾಕ್ಷಣಕ್ಕೆ ಬೌದ್ಧಿಕ ಬೆಳವಣಿಗೆಯನ್ನು ಅಲಕ್ಷಿಸಬೇಕೆಂದಲ್ಲ. ಇಂಥ ಸಾಲೆಗಳಲ್ಲಿ ಮಕ್ಕಳು ತಮ್ಮ ಮುಂದಿನ ಜೀವನಕ್ಕೆ ಉಪಯುಕ್ತವಾದ ಜ್ಞಾನವನ್ನು ನಿರ್ವಿವಾದವಾಗಿ ಪಡೆಯಲೇಬೇಕು. ಆದರೆ ಅನವಶ್ಯಕವಾದ ಜ್ಞಾನಾರ್ಜನೆಯ ಬೆನ್ನು ಹತ್ತಿ ಗ್ರಂಥಗಳ ರಾಶಿಯನ್ನೇ ಮುಗಿಸಿ ತಲೆಭಾರವನ್ನು ಬೆಳೆಸಿ ಕ್ರಿಯಾಶೂನ್ಯರಾಗಿ ನಿರುದ್ಯೋಗದ ಸಮಸ್ಯೆಯನ್ನು ಮತ್ತಷ್ಟು ಜಟಿಲವನ್ನಾಗಿ ಮಾಡುವುದು ದೋಷವಾಗಿದೆ. ಜೀವನಕ್ಕೆ ಆಧಾರವಾದ ತಾತ್ವಿಕ ವಿಚಾರಗಳೂ, ಧಾರ್ಮಿಕ ಕಲ್ಪನೆಗಳೂ ನೈತಿಕ ಭಾವನೆಗಳೂ ನಮ್ಮ ಮಕ್ಕಳಲ್ಲಿ ಮೂಡುವುದು ಅತ್ಯವಶ್ಯವು. ವಿಜ್ಞಾನದ ಮೂಲಭೂತ ತತ್ವಗಳೂ ಸಮಾಜದ ಬೆಳವಣಿಗೆಯ ಐತಿಹಾಸಿಕ ರೂಪರೇಷೆಗಳೂ ಅವರಿಗೆ ಗೊತ್ತಿರಬೇಕು. ಆಹಾರ ಆರೋಗ್ಯಗಳ ಬಗೆಗೆ ಸರಿಯಾದ ವಿಷಯ ಸಂಗ್ರಹ ಅವರಿಗೆ ಅಗತ್ಯ. ತಮ್ಮ ವಿಚಾರಗಳನ್ನು ಸುಸ್ಪಷ್ಟವಾದ ಬಗೆಯಲ್ಲಿ ವ್ಯಕ್ತಪಡಿಸುವ ಭಾಷಾಪರಿಚಯವಾಗಬೇಕು. ಸಾಹಿತ್ಯದ ಸವಿಯೂಟವನ್ನು ಅನುಭವಿಸಬೇಕು. ಈ ರೀತಿಯಾಗಿ ಜೀವನ ಶಿಕ್ಷಣ ಸಾಲೆಗಳಲ್ಲಿ ಮಕ್ಕಳ ಮುಂದಿನ ಜೀವನಕ್ಕೆ ಅತ್ಯಗತ್ಯವಿರುವ ಜ್ಞಾನಸಾಧನೆಯಲ್ಲಿ ಯಾವ ರೀತಿಯಿಂದಲೂ ಕೊರತೆಯಾಗಬಾರದು. ಇದೇ ಭಾರತದ ನವಶಿಕ್ಷಣದ ಸಾರ. ಸ್ವಾವಲಂಬನವೇ ಗುರಿ. ಸಮವಾಯ ಪದ್ಧತಿಯೇ ಸಾಧನ. ಇವೇ ಮುಂತಾದ ಹಲವಾರು ಸಮಯೋಚಿತ ಸಲಹೆಗಳನ್ನು ಆಚಾರ್ಯರು ಶಿಕ್ಷಕರ ಅವಗಾಹನೆಗೆ ತಂದರು.

ಇದೇ ವಿಷಯವನ್ನು ಕುರಿತು ಜೀವನ ಶಿಕ್ಷಣದ ಬಗೆಗೆ ನೇಮಿಸಲ್ಪಟ್ಟ ಸ್ಥಾಯಿಸಮಿತಿಯ ಅಧ್ಯಕ್ಷರಾದ ಶ್ರೀಮನ್ನಾರಾಯಣ ಹಾಗು ಕೇಂದ್ರ ಶಿಕ್ಷಣ ಶಾಖೆಯ ಹೆಚ್ಚಿನ ಕಾರ್ಯದರ್ಶಿಗಳಾದ ಶ್ರೀ ಕೆ. ಜಿ. ಸೈಯದೀನ ಇವರಿಬ್ಬರೂ ಕೂಡಿ ಜೂನ ೩೦ರಂದು ಹೇಳಿಕೆಯೊಂದನ್ನು ಕೊಟ್ಟಿದ್ದಾರೆ. ಅದರಲ್ಲಿ ಜೀವನ ಶಿಕ್ಷಣ ಯೋಜನೆಯು ಸಾಲೆಗೂ ಸಮಾಜಕ್ಕೂ ನಿಕಟ ಸಂಬಂಧವನ್ನು ಕಲ್ಪಿಸಿ ಶಿಕ್ಷಣವನ್ನೂ ಮಕ್ಕಳನ್ನೂ ಹೆಚ್ಚು ಸಾಮಾಜಿಕ ಸಹಕಾರಿ ದೃಷ್ಟಿಯುಳ್ಳವರನ್ನಾಗಿ ಮಾಡಬೇಕಾಗಿದೆಯೆಂದು ಹೇಳಿದ್ದಾರೆ. ಜೀವನ ಶಿಕ್ಷಣ ಸಾಲೆಯು ಮಕ್ಕಳಲ್ಲಿ ಸ್ವಾವಲಂಬನ, ಸಹಕಾರ ಹಾಗು ದುಡಿಮೆಯ ಗೌರವ ಮೊದಲಾದ ಸದ್ಗುಣಗಳನ್ನು ಮೂಡಿಸುವದಲ್ಲದೆ, ಸಜೀವ ಸಮಾಜದ ರಚನೆಯ ಕಾರ್ಯದಲ್ಲಿ ಅತಿ ಮಹತ್ವದ ಪಾತ್ರವನ್ನು ವಹಿಸುವದು. ಈ ಶಿಕ್ಷಣವು ಕೇವಲ ಹಳ್ಳಿಗಳ ಸಲುವಾಗಿ ಇರದೆ ಅದರ ಒಳಹೊಂದಿಕೆಯ ಮೂಲಕ ನಗರಗಳಲ್ಲಿ ಸಹ ಮೊದಲು ಮಾಡಲ್ಪಡಬೇಕು. ಮತ್ತು ಹಳ್ಳಿಯ ಮಕ್ಕಳಿಗಾಗಿ ಯೋಜಿಸಲ್ಪಟ್ಟ ಇದೊಂದು ಕಡಿಮೆ ತರದ ಶಿಕ್ಷಣವೆಂಬ ಭಾವನೆಯು ಕೂಡ ಬಯಲಾಗಬೇಕು.

ಶೀಲ ಸಂವರ್ಧನೆಯಿಲ್ಲದ ಶಿಕ್ಷಣವು ಅಪೂರ್ಣವಾದದ್ದು

ಕೇಂದ್ರ ಸಾರಿಗೆ ಹಾಗು ರೇಲ್ವೆಮಂತ್ರಿಗಳಾದ ಶ್ರೀ ಲಾಲಬಹಾದ್ದೂರ ಶಾಸ್ತ್ರಿಗಳು ಜೂನ ೨೮ ರಂದು ಬೆಳಗಾವಿಯ ಲಿಂಗರಾಜ ಕಾಲೇಜಿನ ಚರ್ಚಾಕೂಟವನ್ನು ತೆರೆಯುತ್ತ ಒಳ್ಳೆಯ ಶೀಲ ಹಾಗು ತಮ್ಮ ಕಾಯ

ಕವನ್ನು ದಕ್ಷರೀತಿಯಿಂದ ಮಾಡುವ ಗುಣಗಳೇ ವ್ಯಕ್ತಿ, ಸಮಾಜ ಹಾಗು ರಾಷ್ಟ್ರ ಇವುಗಳ ಅಭಿವೃದ್ಧಿಗೆ ತಳಹದಿಯಾಗಿವೆಯೆಂದು ಹೇಳಿ ಅವುಗಳನ್ನು ಒಬ್ಬೊಬ್ಬ ವಿದ್ಯಾರ್ಥಿಯೂ ಬೆಳೆಸಿಕೊಳ್ಳಬೇಕೆಂದು ಅಂತಃಕರುಣದ ಸಲಹೆಯನ್ನಿತ್ತರು. ಅವರು ತಮ್ಮ ಮಾತುಗಳನ್ನು ಮುಂದುವರಿಸಿ "ವಿದ್ಯಾರ್ಥಿಗಳು ಒಳ್ಳೆಯ ಮಾತುಗಾರರೂ ಆಡಳಿತಗಾರರೂ ರಾಜಕಾರಣಪಟುಗಳೂ ಆಗಬೇಕು. ಅಭ್ಯಾಸದ ಜೊತೆಗೆ ಅವರು ತಮ್ಮ ಶೀಲವನ್ನು ಬೆಳೆಸಿಕೊಳ್ಳಬೇಕು. ಅದಿಲ್ಲದೆ ಎಷ್ಟೊಂದು ಕಲಿತರೂ ವ್ಯರ್ಥ. ಶೀಲಸಂವರ್ಧನೆಯು ರಾಷ್ಟ್ರದ ಪ್ರಗತಿಯ ನೆಲೆಗಟ್ಟು. ಜೀವನದಲ್ಲಿ ಶಿಸ್ತು ಅಗತ್ಯ. ರಾಷ್ಟ್ರದ ಸಕಲ ಏಳಿಗೆಯ ಹೊಣೆಗಾರಿಕೆಯನ್ನು ಅರಿತ ನಾಗರಿಕರು ತಯಾರಾಗಬೇಕಾಗಿದೆ" ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಂಬನಿ

ದಿನಾಂಕ ೨೦-೬-೧೯೫೫ ರಂದು ಸಂಜೆಯ ೫ ಗಂಟೆಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರೂ, ಕರ್ನಾಟಕ ವಿಶ್ವವಿದ್ಯಾಲಯದ ಪ್ರಥಮ ಚುನಾಯಿತ ಉಪಕುಲಪತಿಗಳೂ ಆದ ಶ್ರೀ ಸಿ. ಸಿ. ಹುಲಕೋಟಿಯವರು ಹೃದಯ ವಿಕಾರದಿಂದ ಆಕಸ್ಮಿಕವಾಗಿ ನಿಧನ ಹೊಂದಿದರೆಂಬ ಸುದ್ದಿಯು ಎಲ್ಲರಿಗೆ ಖೇದವನ್ನುಂಟು ಮಾಡಿತು. ಶ್ರೀಯುತರು ಧಾರವಾಡ ಜಿಲ್ಲೆಯ ಹುಲಕೋಟಿ ಗ್ರಾಮದಲ್ಲಿ ಜನಿಸಿ, ಉಚ್ಚ ಶಿಕ್ಷಣ ಪಡೆದು, ಪ್ರಸಿದ್ಧ ವಕೀಲರಾಗಿ, ಧಾರವಾಡ ಜಿಲ್ಲೆಯ ಪ್ರಪ್ರಥಮ ಚುನಾಯಿತ ಲೋಕಲ್ ಬೋರ್ಡ್ ಅಧ್ಯಕ್ಷರಾಗಿಯೂ ಧಾರವಾಡ ನಗರ ಸಭೆಯ ಮತ್ತು ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿಯ ಅಧ್ಯಕ್ಷರಾಗಿಯೂ ಮುಂಬಯಿ ಲೆಜಿಸ್ಲೇಟಿವ್ಹ ಕೌನ್ಸಿಲದ ಸದಸ್ಯರಾಗಿಯೂ ಕೆಲಸ ಮಾಡಿದರು. ತಮ್ಮ ಜಾಣ್ಮೆ, ಪಾಂಡಿತ್ಯಗಳಿಂದ ಇವರು ಸರಕಾರೀ ನ್ಯಾಯಖಾತೆಯಲ್ಲಿ ಸೇರಿ ಹೆಸರಾಂತ ಜಿಲ್ಹಾ ನ್ಯಾಯಾಧೀಶರೆಂಬ ಕೀರ್ತಿಗೆ ಪಾತ್ರರಾದರು. ಸೇವಾ ನಿವೃತ್ತಿಯ ನಂತರ ಬಾಲ್ಯಾವಸ್ಥೆಯಲ್ಲಿದ್ದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಉಪಕುಲಪತಿಗಳೆಂದು ಚುನಾಯಿತರಾಗಿ ೬ ವರ್ಷಗಳ ಕಾಲ ಅದರ ಸರ್ವಾಂಗೀನ ಉನ್ನತಿಗಾಗಿ ಶ್ರಮಿಸಿದರು. ಇವರು ಕೆಲಕಾಲ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರೂ ಆಗಿದ್ದರು. ಹೀಗೆ ಹಲವು ಮುಖವಾಗಿ ನಾಡಿಗೆ ಸೇವೆ ಸಲ್ಲಿಸಿದ ಶ್ರೀ ಹುಲಕೋಟಿಯವರ ನಿಧನದಿಂದ ತುಂಬಿಬಾರದ ಹಾನಿಯಾಗಿದೆ. ದೈವೇಚ್ಛೆಯನ್ನು ಮೀರುವವರಾರು ? ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ

ಅನುವಾದಕರು: **ಶ್ರೀ ಶಿಂತ್ರಿ ಬಸಪ್ಪನವರು,** ಬಿ. ಎ., ಬಿ. ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣಭಾಗ, ಧಾರವಾಡ ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಿಬ್ರೇರಿಯನ್ ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

೫ನೆಯ ಪ್ರಕರಣ

:: ಸಂಘಟನೆ (ಬ) ::

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಅಭ್ಯಾಸದ ಅವಧಿ

ಒಬ್ಬ ಶಿಕ್ಷಕನ ಶಾಲಿಗೆ ಮೂರು ಇಲ್ಲವೆ ನಾಲ್ಕು ಕ್ಲಾಸುಗಳಿದ್ದರೆ, ಯಾವ ಕ್ಲಾಸಿಗೂ ಹೆಚ್ಚೆಂದರೆ ೧೦೦ಕ್ಕೆ ೨೦ ರಷ್ಟು ಶಿಕ್ಷಕನ ವೇಳೆಯು ಸಿಗಬಹುದು, ಮತ್ತು ಉಳಿದ ೮೦ ರಷ್ಟು ವೇಳೆಯನ್ನು ಮಕ್ಕಳು ಶಿಕ್ಷಕನ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಕಲಿಯಬೇಕಾಗುವದು ಅರ್ಥಾತ್, ದಿವಸಕ್ಕೆ ಐದು ತಾಸುಗಳ ವರೆಗೆ ಸಾಲೆಯು ನಡೆಯುತ್ತಿದ್ದರೆ, ಪ್ರತಿಯೊಂದು ಕ್ಲಾಸಿಗೆ ಶಿಕ್ಷಕನ ಒಂದು ತಾಸು ಸಿಗುತ್ತದೆಂದಂತಾಯಿತು ಮತ್ತು ಉಳಿದ ತಾಸುಗಳಲ್ಲಿ ಮಕ್ಕಳು ಶಿಕ್ಷಕನ ಮೇಲ್ವಿಚಾರಣೆಯಿಲ್ಲದೆ ತಮ್ಮಷ್ಟಕ್ಕೆ ತಾವೇ ಕೆಲಸ ಮಾಡಬೇಕಾಗುವದು. ಮಕ್ಕಳು ತಮ್ಮಷ್ಟಕ್ಕೆ ತಾವೇ ತಿಳಿದು ಮಾಡುವಂತಹ, ಅವರಿಗೆ ಕೆಲಸ ಮಾಡಲು ಸ್ಫೂರ್ತಿಯನ್ನು ತಂದು ಕೊಡುವಂತಹ ಮತ್ತು ಅವರ ಮನಸ್ಸನ್ನು ಸೆಳೆಯುವಂತಹ ಚಟುವಟಿಕೆಗಳನ್ನೆಲ್ಲ ಜಾಣತನದಿಂದಲೂ ಎಚ್ಚರಿಕೆಯಿಂದಲೂ ಮೊದಲೇ ವಿಚಾರ ಮಾಡಿ ಆಯ್ದುಕೊಂಡಿಟ್ಟಿರದಿದ್ದರೆ, ವೇಳೆಯು ಅಪವ್ಯಯವಾಗುವದಲ್ಲದೆ ಮಕ್ಕಳಿಗೆ ಬೇಸರಿಕೆಯನ್ನುಂಟು ಮಾಡಿ. ಅವರಿಗೆ ಆಲಸ್ಯವನ್ನೂ ವ್ಯೈಗಳ್ಳತನವನ್ನೂ ಕಲಿಸಿದಂತಾಗುತ್ತಿದೆ.

ಇಂತಹ ವೇಳೆಯನ್ನು ಕುಳಿತಲ್ಲಿಯೇ ಕುಳಿತು ಕಲಿಯುವದಕ್ಕಾಗಿ ಉಪಯೋಗಿಸುವದು ಮೊದಲಿನ ಸಂಪ್ರದಾಯವಾಗಿತ್ತು. ಸಂಗತಿಗಳನ್ನು ಕುರಿತು ಮಾಹಿತಿಯನ್ನು ಹೇಳುವದು ಮತ್ತು ಅದನ್ನು ಮಕ್ಕಳ ಕಡೆಯಿಂದ ಮುಖಪಾಠ ಮಾಡಿಸುವದು ಇವೇ ಆಗ ಸಾಲೆಯ ಮುಖ್ಯ ಉದ್ದೇಶಗಳಾಗಿದ್ದವು. ಯಾವದೊಂದು ಗೊತ್ತು–ಗುರಿಯಿಲ್ಲದೆ ತನ್ನ ಮನಸ್ಸಿಗೆ ಬಂದಷ್ಟು ಪಾಠಗಳನ್ನು ಮಾಡಲು ಮಕ್ಕಳಿಗೆ ಶಿಕ್ಷಕನು ಅಳತೆಗೆಟ್ಟು ಕೊಡುತ್ತಿದ್ದನು– "ನಿಮ್ಮ ಸ್ಥಳಗಳಿಗೆ ಹೋಗಿ ಮೂರನೆಯ ಪಾಠವನ್ನು ಕಲಿಯಿರಿ ಇಲ್ಲವೆ ನಿಬಂಧವನ್ನು ಬರೆಯಿರಿ"– ಎಂದು ಶಿಕ್ಷಕನು ಆಗಾಗ ಒದರಿ ಹೇಳುತ್ತಿದ್ದನು. ಇಂತಹ ಯುಕ್ತಿಗಳಿಂದ ಮಕ್ಕಳನ್ನು ಕೆಲಸದಲ್ಲಿ ತೊಡಗಿಸಿ ಶಾಂತತೆಯನ್ನು ಇರಿಸಬಹುದಾಗಿತ್ತು; ಆದರೆ ಆ ಕೆಲಸದ ಮೇಲೆ ಮಕ್ಕಳ ಒಲವೂ ಇರುತ್ತಿರಲಿಲ್ಲ ಮತ್ತು ಅದು ವೇಳಾಪತ್ರಿಕೆಗೆ ಅನುಸರಿಸಿಯೂ ಇರುತ್ತಿರಲಿಲ್ಲ. ಕಲಿಯುವ ಹಿಡಿತವನ್ನು ಸಾಧಿಸಿಕೊಂಡಂತಹ ಪ್ರೌಢ

ವಿದ್ಯಾರ್ಥಿಗಳಿಗೆ ಮಾತ್ರ ಮೇಲೆ ಹೇಳಿದಂತಹ ಆದೇಶಗಳನ್ನು ಕೊಡುವ ವಾಡಿಕೆಯಿತ್ತಾದರೂ ಚಿಕ್ಕ ಮಕ್ಕಳಿಗೆ ಅವುಗಳನ್ನು ಕೊಟ್ಟಾಗ ಅದರ ಪರಿಣಾಮವು ಚನ್ನಾಗಿ ಆಗುತ್ತಿರಲಿಲ್ಲ. ಹಲವು ಚಿಕ್ಕ ಮಕ್ಕಳು ನೂರರ ವರೆಗೆ ಅಂಕಿಗಳನ್ನು ಬರೆಯುವದರಲ್ಲಿ, ಹಲವರು ಪಾಟಿಯ ಮೇಲೆ ಮನಸ್ಸಿಗೆ ಬಂದದ್ದನ್ನು ಗೀಚುವದರಲ್ಲಿ ಕಾಲ ಹರಣ ಮಾಡುತ್ತಿದ್ದರು. ಅಂತಹ ಚಟುವಟಿಕೆಗಳಿಗೆ ಶೈಕ್ಷಣಿಕ ಬೆಲೆಯು ಎಳ್ಳಷ್ಟೂ ಇರದೆ ವೇಳೆಯ ಅಪವ್ಯಯವು ಮಾತ್ರ ಆಗುತ್ತಿತ್ತು. ಗೊತ್ತುಗುರಿಗಳಿಲ್ಲದ ಆ ಚಟುವಟಿಕೆಗಳಲ್ಲಿ ಗುರುಗಳು ಹಾಗೂ ಮಕ್ಕಳು ಆಸ್ಥೆ ವಹಿಸುತ್ತಿರಲಿಲ್ಲ.

ಸಂಗತಿಗಳನ್ನು ಕಲಿಯುವದಷ್ಟೇ ಆಧುನಿಕ ಶಿಕ್ಷಣದ ಉದ್ದೇಶವಲ್ಲ; ಆದರೆ ಮಗುವು ಸ್ವತಃ ಚಟುವಟಿಕೆಯನ್ನು ಮಾಡಿ ಗಳಿಸಿದ ಅನುಭವದಿಂದ ರೂಪಿಸಲ್ಪಟ್ಟ ವಿಕಾಸವೇ ಅದರ ಗುರಿ. ಅಭ್ಯಾಸದ ಅವಧಿಯಲ್ಲಿಯ ಕೆಲಸವು ಮಕ್ಕಳ ಬೇಡಿಕೆಗಳಿಗೆ ಹಾಗೂ ಹಿತಗಳಿಗೆ ಹೊಂದಿಕೊಂಡಿರಬೇಕು ಮತ್ತು ಅದು ಮಕ್ಕಳ ಹಾಗೂ ಶಿಕ್ಷಕರ ಮೆಚ್ಚುಗೆಯನ್ನು ಪಡೆದಿರಬೇಕು. ಅದಕ್ಕೆ ಎರಡು ತೆರನಾದ ಉದ್ದೇಶಗಳಿರಬೇಕು. ಮೊದಲನೆಯದು, ಚಿಕ್ಕ ಮಕ್ಕಳ ಬೇಡಿಕೆಗಳಿಗನುಗುಣವಾಗುವಂತೆ ಯೋಜನೆಯನ್ನು ತಯಾರಿಸಬೇಕು. ಎರಡನೆಯದು, ದೊಡ್ಡ ಮಕ್ಕಳ ಹೆಚ್ಚಿನ ಬೇಡಿಕೆಗಳಿಗೂ ಅದು ಹೊಂದಿಕೊಂಡಿರಬೇಕು.

ಐದು ವರ್ಷಗಳಿಂದ ಒಂಬತ್ತು ವರ್ಷಗಳ ವರೆಗಿನ ಮಕ್ಕಳು ಚಿಕ್ಕ ಮಕ್ಕಳೆಂದು ಗಣಿಸಲ್ಪಡುವದುಂಟು. ಇಂತಹ ಚಿಕ್ಕ ಮಕ್ಕಳಿಗೆ ನಿಯಮಿತತನದಿಂದ ಕಲಿಯುವ ಚಟವೂ ಇರುವದಿಲ್ಲ; ನಾಲ್ಕು ಮಂದಿಯಲ್ಲಿದ್ದಾಗ ಹೇಗೆ ವರ್ತಿಸಬೇಕೆಂಬುದೂ ಗೊತ್ತಿರುವದಿಲ್ಲ. ಶಿಕ್ಷಕನ ಸಹಾಯ–ಮೇಲ್ವಿಚಾರಣೆಗಳಿಲ್ಲದೆ ಅವರು ಕೆಲಸಮಾಡುವದು ಶಕ್ಯವಿಲ್ಲ. ಅವರಿಗೆ ಚನ್ನಾಗಿ ಓದಲು ಬರುವ ವರೆಗೆ ಶಿಕ್ಷಕನು ಅವರಿಗಾಗಿ ಹೆಚ್ಚು ವೇಳೆ ಹಾಗೂ ಹೆಚ್ಚು ಲಕ್ಷ್ಯವನ್ನು ಪೂರೈಸಬೇಕಾಗುವದು. ಅವರು ಸ್ವತಂತ್ರವಾಗಿ ಕಲಿಯಲು ಹತ್ತಿದರೆಂದರೆ, ಅವರ ಅಭ್ಯಾಸದ ವೇಳೆಯನ್ನು ಕಡಿಮೆ ಮಾಡಿ ಮೇಲ್ವಿಚಾರಣೆಯನ್ನು ಹೆಚ್ಚಿಸಬೇಕು.

ಮತ್ತೊಂದು ಸಮಸ್ಯೆಯೆಂದರೆ ತಕ್ಕ ಉಪಕರಣಗಳ ಪೂರೈಕೆ. ಚಿತ್ರಗಳ, ಕಥೆಗಳ, ಹಾಡುಗಳ ಮೊದಲಾದ ಸಣ್ಣ ಸಣ್ಣ ಸುಲಭ ಪುಸ್ತಕಗಳು ಸಾಲೆಯಲ್ಲಿ ಸಾಕಷ್ಟಿರಬೇಕು. ಈ ವ್ಯವಸ್ಥೆಯಿದ್ದರೆ, ಮಕ್ಕಳು ತಮ್ಮ ಮನಸ್ಸಿಗೆ ಬಂದದ್ದೊಂದು ಪುಸ್ತಕವನ್ನು ತಕ್ಕೊಂಡು ಓದುತ್ತ ಕೂಡ್ರುವರು. ನೆರೆಹೊರೆಯಲ್ಲಿ ಅಗ್ಗವಾಗಿ ಸಿಗುವ ವಸ್ತುಗಳಿಂದ ಕೈಕೆಲಸ, ಮತ್ತು ಅಲ್ಲಿ ಸಿಗಬಹುದಾದ ಆಟಿಗೆಗಳಿಂದ ಸುಸಜ್ಜಿತವಾದೊಂದು ಸಣ್ಣ ಆಟದ ಬೈಲು, ಇವು ಚಿಕ್ಕ ಮಕ್ಕಳನ್ನು ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸುತ್ತಿವೆ. ಈ ಚಟುವಟಿಕೆಗಳಿಗೆ ಶಿಕ್ಷಕನ ಇಲ್ಲವೆ ಹಿರೇಮಣಿಯ ಮಾರ್ಗದರ್ಶನವು ಮಾತ್ರ ಅಗತ್ಯವಾಗಿರಬೇಕು.

ಸಾಲೆಯಲ್ಲಿಯ ಚಿಕ್ಕ ಮಕ್ಕಳ ಗುಂಪಿಗೆ ಶಿಕ್ಷಕನು ಹೆಚ್ಚು ವೇಳೆಯನ್ನು ಸಲ್ಲಿಸಬೇಕಾಗುತ್ತಿದೆ. ಯಾಕಂದರೆ, ಅವರಲ್ಲಿ ಅಭ್ಯಾಸಮಾಡುವ ಚಟಗಳಿರುವದಿಲ್ಲ. ವೇಳೆಯ ಉಪಯೋಗವನ್ನು ಮಿತದಿಂದ ಹೇಗೆ ಮಾಡಿಕೊಳ್ಳಬೇಕು, ನಿಯಮಿತತನದಿಂದ ಅಭ್ಯಾಸವನ್ನು ಹೇಗೆ ಮಾಡಬೇಕು, ಬೇರೆಯವರಿಗೆ ತ್ರಾಸಾಗದಂತೆ ಹೇಗೆ ಕೆಲಸ ಮಾಡಬೇಕು ಮುಂತಾದವುಗಳನ್ನು ಅವರು ಇನ್ನೂ ಕಲಿತುಕೊಳ್ಳಬೇಕಾಗಿದೆ. ಸಣ್ಣ ಹಳ್ಳಿಯ ಸಾಲೆಯಲ್ಲಿ ಸ್ಥಳದ ಅಭಾವದ ಮೂಲಕ ದೊಡ್ಡ ಹುಡುಗರ ಗುಂಪಿಗೆ ಕಲಿಸುವಾಗ ಸಣ್ಣ ಮಕ್ಕಳನ್ನು ಹೇಗೆ ಸುಮ್ಮನಿರಿಸಬೇಕೆಂಬುದೊಂದು ದೊಡ್ಡ ಸಮಸ್ಯೆಯೇ ಆಗಿದೆ. ಮೇಲಾಗಿ, ಸಾಲೆಯ ಅವಧಿಯು ಸಣ್ಣ ಮಕ್ಕಳಿಗೆ ಬಹಳ ದೊಡ್ಡದಾಗುವದರಿಂದ ಅವು ದಣಿದು ಬೇಸರಿಯುವವು. ಈ ತೊಂದರೆಗಳನ್ನು ನೀಗಲು ಚಿಕ್ಕ ಮಕ್ಕಳಿಗೋಸ್ಕರ ಸಾಲೆಯ ಅವಧಿಯನ್ನು ಕಡಿಮೆ ಮಾಡಬಹುದು ಇಲ್ಲವೆ ಬಿಡುವಿನ ಅವಧಿಗಳನ್ನು ಹೆಚ್ಚಿಸಬಹುದು. ಆ ಬಿಡುವಿನ ಅವಧಿಗಳಲ್ಲಿ ಚಿಕ್ಕ ಮಕ್ಕಳು ಸಾಲೆಯ ಹೊರಗೆ ಹೋಗಿ ಬೈಲಿನಲ್ಲಿ ಆಡಬಹುದು ಇಲ್ಲವೆ ಆವುದಾದರೊಂದು ರಚನಾತ್ಮಕ ಚಟುವಟಿಕೆಯಲ್ಲಿ ತೊಡಗಬಹುದು. ದೊಡ್ಡ ಹುಡುಗರು ಅಭ್ಯಾಸಮಾಡುವ ಅವಧಿಯ ಬಗೆಗೆ ಅಡಚಣೆಯು ಉದ್ಭವಿಸಲಾರದು. ಯಾಕಂದರೆ, ಅಷ್ಟರೊಳಗಾಗಿ ಅವರಲ್ಲಿ ಅಭ್ಯಾಸದ ಚಟಗಳು ನೆಲಸಿರುವದರಿಂದ ತಮ್ಮ ವಿಷಯಗಳನ್ನು ತಾವೇ ಕಲಿತುಕೊಳ್ಳಲು ಶಕ್ತರಾ

ಗಿರುವದುಂಟು. ಹಳ್ಳಿಯ ಸಾಲೆಯೊಳಗಿನ ದೊಡ್ಡ ಹುಡುಗರು ತಮ್ಮ ಅಭ್ಯಾಸವನ್ನು ತಾವೇ ಮನಸ್ಸಿಗೆ ಹಚ್ಚಿಕೊಂಡು ಕಲಿಯುವದುಂಟು. ಕೊಟ್ಟ ಪಾಠಗಳನ್ನು ಮುಗಿಸಲು ಇಲ್ಲವೆ ನಿಬಂಧವನ್ನು ಬರೆಯಲು ಅಭ್ಯಾಸದ ಅವಧಿಯು ಸಾಕಾಗುವದಿಲ್ಲವೆಂದು ಅವರಲ್ಲಿ ಕೆಲವರಿಗೆ ಅನಿಸಬಹುದು. ಅಂತಹವರಿಗೆ ಮನೆಯಲ್ಲಿ ಅಭ್ಯಾಸ ಮಾಡಲು ಸೌಕರ್ಯಗಳಿರುವದಿಲ್ಲವಾದುದರಿಂದ ಸಾಲೆಯ ಪಾಠಗಳನ್ನು ಸಾಲೆಯ ಅವಧಿಯಲ್ಲಿಯೇ ಇಲ್ಲವೆ ಸಾಲೆಯು ಬಿಟ್ಟ ನಂತರ ಸಾಲೆಯಲ್ಲಿಯೇ ಕುಳಿತು ಮಾಡಬೇಕಾಗುತ್ತಿದೆ. ಆ ಪ್ರಕಾರ ಸಂಸ್ಥೆಯಿಂದ ಕಲಿಯುವ ಹುಡುಗರಿಗೆ ಮೇಲಿಂದ ಮೇಲೆ ಗುರುಗಳ ಸಲಹೆಗಳನ್ನು ಕೇಳುವದಿರುವದರಿಂದ ಗುರುಗಳು ಅವರಿಗೆ ಯೋಗ್ಯ ಸಲಹೆಗಳನ್ನು ಕೊಟ್ಟು ಆ ವೇಳೆಯ ಸದುಪಯೋಗವನ್ನು ಮಾಡಿಕೊಳ್ಳಬೇಕು. ಆ ಹುಡುಗರಿಗೆ ಒಂದು ಪುಸ್ತಕಾಲಯದ ಅವಶ್ಯಕತೆಯಿರುವದರಿಂದ ಜಾಣನಾದ ಶಿಕ್ಷಕನು ಚಲೋ ಪುಸ್ತಕಗಳ ಸಂಗ್ರಹವೊಂದನ್ನು ಶಕ್ಯವಿದ್ದ ಮಟ್ಟಿಗೆ ಮಾಡಿಟ್ಟುಕೊಳ್ಳಬೇಕು. ಶಿಕ್ಷಣ ಖಾತೆಯವರೂ ಅಧಿಕಾರಸ್ಥರೂ ಅನುಮತಿಯನ್ನಿತ್ತರೆ ಪುಸ್ತಕಾಲಯವನ್ನು ರಚಿಸಿಕೊಳ್ಳಲು ಶಕ್ಯವಿದೆ. ಚಲೋ ಪುಸ್ತಕಗಳ ಮಹತ್ವವನ್ನು ಮನದಂದು ಅವರು ಅನುಮತಿಯನ್ನೀಯುವದೊಳಿತು.

ಆಟ

ಆಟವು ಮಕ್ಕಳ ಸ್ವಾಭಾವಿಕ ಮತ್ತು ಮೂಲ ಬೇಡಿಕೆಯಾಗಿರುವದರಿಂದ ಆಟವಾಡಲು ವೇಳೆ ಸಿಕ್ಕಾಗೆಲ್ಲ ಅವರು ಪ್ರೀತಿಯಿಂದ ಆಡುವದುಂಟು. ಮನೆಯಿಂದ ಸಾಲೆಗೆ ಹೋಗುತ್ತಿರುವಾಗ, ಸಾಲೆಯಿಂದ ಮನೆಗೆ ಮರಳುತ್ತಿರುವಾಗ, ಬಿಡುವಿನ ವೇಳೆಯಲ್ಲಿ ಹಾಗೂ ಗುರುಗಳು ಇಲ್ಲದಾಗ ಅವರು ಆಡುತ್ತಿರುತ್ತಾರೆ. ಹಳ್ಳಿಗಾಡದಲ್ಲಿ ಮಕ್ಕಳು ಹೊಲಗೆಲಸವನ್ನು ಮಾಡುವದರಿಂದ ಬೈಲು ಹವೆಯಲ್ಲಿಯ ಶಾರೀರಿಕ ವ್ಯಾಯಾಮವು ಅವರಿಗೆ ಬಹಳಷ್ಟು ಸಿಕ್ಕುತ್ತಿದೆ. ಸಾಧಾರಣವಾಗಿ ಹೊಲಗೆಲಸ ಮಾಡುವದರಿಂದ ಸಾಧ್ಯವಾಗಲಾರದ ಅಂದವಾದ ಮೈಕಟ್ಟು, ಚುರುಕುತನ, ಸಾಂಘಿಕ-ಭಾವನೆ ಇವುಗಳನ್ನು ಹುಟ್ಟಿಸುವಂತಹ ಶಿಸ್ತಿನ ಆಟಗಳ ಅವಶ್ಯಕತೆಯು ಅವರಿಗಿದೆ. ಹಳ್ಳಿಗಾಡದಲ್ಲಿ ಮಕ್ಕಳ ಆಟಕ್ಕೆ ಬೇಕಾಗುವ ಸಾಮಾನುಗಳನ್ನು ಪೂರೈಸುವ ಹೊಣೆಯು ಸಾಲೆಯ ಮೇಲಿದೆ. ಬಿಡುವಿನ ಅವಧಿಯನ್ನು ಹಲವರು ಹರಟೆ ಕೊಚ್ಚುವದರಲ್ಲಿಯೋ, ಹಲವರು ಉಪಹಾರಕ್ಕಾಗಿ ಮನೆಗೆ ಓಡುವದರಲ್ಲಿಯೋ, ಹಲವರು ಅತ್ತಿತ್ತ ವ್ಯರ್ಥ ತಿರುಗಾಡುವದರಲ್ಲಿಯೋ ಕಳೆಯುವದುಂಟು. ಸಂಜೆಯಲ್ಲಿ ಒಂದು ತಾಸನ್ನು ಸಂಘಟಿತ ಆಟಗಳನ್ನು ಆಡುವದಕ್ಕೋಸ್ಕರ ಮೀಸಲಾಗಿಡಬಹುದು. ಒಬ್ಬ-ಶಿಕ್ಷಕ ಶಾಲೆಗಳಲ್ಲಿ ಬಹುತರವಾಗಿ ಆಟಕ್ಕೆ ಬೇಕಾಗುವ ಉಪಕರಣಗಳಿರುವದಿಲ್ಲ ಮತ್ತು ಮಕ್ಕಳ ಆಟಗಳಲ್ಲಿ ಶಿಕ್ಷಕರು ಭಾಗವಹಿಸುವದಿಲ್ಲ. ಆಟದ ಬೈಲಿನಲ್ಲಿ ಶಿಸ್ತನ್ನು ಕಾಯುವದಷ್ಟೇ ತಮ್ಮ ಕೆಲಸವೆಂದು ತಿಳಿದಿರುತ್ತಾರೆ. ಮಕ್ಕಳನ್ನು ಸೂಕ್ಷ್ಮ ರೀತಿಯಿಂದ ಅಭ್ಯಸಿಸಲು ಹಾಗೂ ಅವರಲ್ಲಿ ಸಾಂಘಿಕ-ಭಾವನೆಗಳನ್ನು ಹುಟ್ಟಿಸಿ ಬೆಳೆಯಿಸಲು ಆಟದ ಬೈಲು ಎಂತಹ ಸುಪ್ರಸಂಗಗಳನ್ನು ಒದಗಿಸಿ ಕೊಡುತ್ತದೆಂಬುದನ್ನು ಮನದಂದು ಶಿಕ್ಷಕನು ಆಟದ ವೇಳಾಪತ್ರಿಕೆಯನ್ನು ಹಂಚಿಕೆಯಿಂದಲೂ ಜಾಣತನದಿಂದಲೂ ತಯಾರಿಸಬೇಕು. ಮಕ್ಕಳು ಆಟವನ್ನು ಅನಿರ್ಬಂಧವಾಗಿ ಆಡುವದು ನಿಜವಾಗಿ ಇಷ್ಟವಿದೆಯಾದರೂ, ಸಾಂಘಿಕ ಆಟಗಳಲ್ಲಿ ಮುಂದಾಳುತನವನ್ನು ವಹಿಸಿ ಕೆಲಸ ಮಾಡಲೋಸುಗ ಮಕ್ಕಳಿಗೆ ತರಬೇತಿಯನ್ನು ಕೊಡುವದು ಅವಶ್ಯವಿದೆ. ಆಟಗಳನ್ನು ಸಂಘಟಿಸುವ ಹಾಗೂ ಅವುಗಳನ್ನು ನಡೆಸುವ ಹೊಣೆಯನ್ನು ಹೊರಲು ಮಕ್ಕಳಿಗೆ ಹುರಿದುಂಬಿಸಿ ಶಿಕ್ಷಕನು ಮಾರ್ಗದರ್ಶನ ಮಾಡುತ್ತಿರಬೇಕು. ಆಟದ ಅವಧಿಯ ಉಪಯೋಗವನ್ನು ಹೇಗೆ ಚನ್ನಾಗಿ ಮಾಡಿಕೊಳ್ಳಬೇಕೆಂಬುದನ್ನು ಕುರಿತು ಕೆಲವು ಸೂಚನೆಗಳನ್ನು ಕೆಳಗೆ ಕೊಡಲಾಗಿದೆ :—

(ಅ) ಹವೆಯು ಅನುಕೂಲವಿದ್ದರೆ, ಆರೋಗ್ಯದಿಂದಿದ್ದ ಎಲ್ಲ ಮಕ್ಕಳು ಸಂಘಟಿತ ಆಟದಲ್ಲಿ ಭಾಗವಹಿಸಬೇಕು. ವ್ಯಾಯಾಮಗಳ ಹಾಗೂ ಆಟಗಳ ವೇಳಾಪತ್ರಿಕೆಯೊಂದನ್ನು ತಯಾರಿಸಿ ಅದರಂತೆ ಇಡೀ ವರುಷ ನಿಯಮಿತತನದಿಂದ ಕೆಲಸ ಮಾಡಬೇಕು. ಮಕ್ಕಳು ಮುಂದಾಳುತನದ ಹೊಣೆಯನ್ನು ಹೊತ್ತು ಕೆಲಸ ಮಾಡುವದನ್ನು ಅರಿತುಕೊಳ್ಳುವ ವರೆಗೆ ಶಿಕ್ಷಕನು ತಾನೇ ಆಟದಲ್ಲಿ ಭಾಗವಹಿಸಬೇಕು.

(ಅ) ಚಿಕ್ಕ ಮಕ್ಕಳಿಗೆ ಸರಿಹೋಗುವ ಆಟಗಳನ್ನು ಆಡಲು ಅವರಿಗೆ ವ್ಯವಸ್ಥೆಯಿರಬೇಕು. ಸಹಕಾರ, ಸಾಂಘಿಕ ಭಾವನೆಗಳು, ಆಟಗಾರಿಕೆಯ ಗುಣಗಳು ಇವುಗಳನ್ನು ಹುಟ್ಟಿಸಿ ಬೆಳೆಯಿಸುವ ಸಾಂಘಿಕ ಆಟಗಳನ್ನು ಆಡಲು ದೊಡ್ಡ ಮಕ್ಕಳಿಗೋಸ್ಕರ ವ್ಯವಸ್ಥೆಯನ್ನು ಮಾಡಿಟ್ಟಿರಬೇಕು.

(ಇ) ತಾವು ಆಡುವ ಆಟಗಳ ಪೂರ್ವ ತಯಾರಿಯನ್ನೂ ಸಂಘಟನೆಯನ್ನೂ ತಾವೇ ಮಾಡಿಕೊಂಡು ಆಡಲು ಮಕ್ಕಳಿಗೆ ಪ್ರೋತ್ಸಾಹಿಸಬೇಕು. ತಮ್ಮೊಳಗಿನ ಒಬ್ಬ ಮುಖ್ಯಸ್ಥನ ಹಿರಿಯತನದಲ್ಲಿ ಸುವ್ಯವಸ್ಥಿತವಾಗಿ ಆಡುವರೆಂದು ಮನಗಂಡ ಮೇಲೆ ಆಟದ ವೇಳಾಪತ್ರಿಕೆಯಂತೆ ಆಡಲು ಅವರಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಬೇಕು.

(ಈ) ಸರಿಯಾಗಿ ಓಡಾಡುವ, ನಡೆದಾಡುವ, ನಿಲ್ಲುವ, ಕೂಡ್ರುವ ಮೊದಲಾದ ದೈಹಿಕ ಕೌಶಲ್ಯಗಳು ಹಳ್ಳಿಗಾಡದ ಮಕ್ಕಳಿಗೆ ಗೊತ್ತಿರುವದಿಲ್ಲ. ಆ ದೈಹಿಕ ಕೌಶಲ್ಯಗಳನ್ನು ಹೆಚ್ಚಿಸುವ ಆಟಗಳನ್ನೇ ಅವರಿಗೆ ಆಡಿಸಬೇಕು. ಸಾಂಘಿಕ ವ್ಯಾಯಾಮಗಳನ್ನು ಮಾಡುವಾಗ ಮಕ್ಕಳು ತಾಳಬದ್ಧವಾಗಿ ಚಂದ ಕಾಣುವಂತೆ ತಮ್ಮ ಕೈಕಾಲು ಮೊದಲಾದ ಅವಯವಗಳ ಚಲನ-ವಲನಗಳನ್ನು ಒಂದೇ ವೇಳೆಗೆ ಮಾಡುವದರತ್ತ ವಿಶೇಷ ಕಾಳಜಿಯನ್ನು ತಕ್ಕೊಳ್ಳಬೇಕು.

(ಉ) ಹೊಸ ಆಟಗಳ ಪ್ರಯೋಗ ಮಾಡಿ ನೋಡಲು ಮಕ್ಕಳಿಗೆ ಹುರಿದುಂಬಿಸಬೇಕು. ಹಳ್ಳಿಗಾಡದಲ್ಲಿ ರೂಢಿಯಲ್ಲಿದ್ದ ಆಟಗಳನ್ನು ತಮಗೆ ಹೊಂದಿಕೆಯಾಗುವ ಹಾಗೆ ಆಡಲು ಸೂಚಿಸುತ್ತಿರಬೇಕು. ದೇಶೀಯ ಹಾಗೂ ಪಾಶ್ಚಿಮಾತ್ಯ ಆಟಗಳ ಸಂಕಲನವನ್ನು ಮಾಡಿ ಹೊಸ ಹೊಸ ಆಟಗಳನ್ನು ಕಲ್ಪಿಸಿಕೊಂಡು ಪ್ರಯೋಗ ಮಾಡಿ ನೋಡಲು ಅವರಿಗೆ ಅವಕಾಶವನ್ನೀಯಬೇಕು.

ಮುಂಜಾನೆಯ ಸಾಮೂಹಿಕ ಪ್ರಾರ್ಥನೆ

ಸಾಲೆಯ ಕೆಲಸವು ಮುಂಜಾನೆಯ ಸಾಮೂಹಿಕ ಪ್ರಾರ್ಥನೆಯಿಂದ ಪ್ರಾರಂಭವಾಗುತ್ತಿದೆ. ಅದರಲ್ಲಿ ಎಲ್ಲ ವರ್ಗಗಳ ಮಕ್ಕಳು ಭಾಗವಹಿಸುವದುಂಟು. ಪ್ರಾರ್ಥನೆಗಾಗಿ ಕಲೆತ ಆ ಸಭೆಯು ಶೈಕ್ಷಣಿಕ ದೃಷ್ಟಿಯಿಂದ ಬಹಳ ಉಪಯುಕ್ತವಿದೆ. ಮನಸ್ಸಿಲ್ಲದೆ ಬಿಟ್ಟೀ ಬೇಸರಿಕೆಯಿಂದ ಅದನ್ನು ಮಾತ್ರ ಮಾಡಕೂಡದು. ಆಗ ಶಿಕ್ಷಕನು ಎಲ್ಲ ವರ್ಗಗಳ ಮಕ್ಕಳಿಗೆ ಸಂಬಂಧಿಸಿದ ವಿಷಯಗಳ ಬಗೆಗೆ ಕೆಲವು ಮಾತುಗಳನ್ನು ಹೇಳಬಹುದು. ಮಕ್ಕಳಿಗೆ ಪ್ರಶ್ನೆಗಳನ್ನು ಕೇಳಲು ಅವಕಾಶ ಕೊಟ್ಟು ಅವುಗಳಿಗೆ ಉತ್ತರಗಳನ್ನು ಕೊಡಬಹುದು; ದಿನದ ಕಾರ್ಯಕ್ರಮವನ್ನು ಕುರಿತು ಚರ್ಚಿಸಬಹುದು; ಆರೋಗ್ಯ ಹಾಗೂ ನಡತೆಯ ಬಗೆಗೆ ಹಲವು ವ್ಯವಹಾರಿಕ ಸೂಚನೆಗಳನ್ನು ಮಾಡಬಹುದು; ಉಗುರು, ಹಲ್ಲು, ಕಣ್ಣು, ಕಿವಿ, ಮುಂತಾದವುಗಳು ಸ್ವಚ್ಛವಾಗಿಯೂ ಆರೋಗ್ಯದಿಂದಲೂ ಇರುವವೆಂಬುದನ್ನು ತಪಾಸ ಮಾಡಿ ನೋಡಬಹುದು.

(ಮುಂದುವರಿಯುವದು)

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕೆ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧-೧೨-೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

‘ಶ್ರಮದಾನ’ದಲ್ಲಿ ಶಿಕ್ಷಣಾಂಶ

ಲೇಖಕರು : **ಶ್ರೀ ಎಸ್. ಎಸ್. ಮಠಪತಿ,** ಬಿ. ಎ. (ಆನರ್ಸ), ಡಿ. ಬಿ. ಇ. ಹುಬ್ಬಳ್ಳಿ.

ಬ್ರಿಟಿಶ ಪದ್ಧತಿಯು ಬುದ್ಧಿ ಪ್ರಧಾನ ಶಿಕ್ಷಣದಿಂದ ಭಾರತದ ಪೀಳಿಗೆಯ ಮೇಲೆ ಆಗಿರುವ ದುಷ್ಪರಿಣಾಮವನ್ನು ನೀಗಿಸಲು ಭಾರತೀಯ ಶಿಕ್ಷಣ ತಜ್ಞರು ವರ್ಷಗಳನೇಕ ದುಡಿದು ಭಾರತಕ್ಕೆ ಒಗ್ಗುವ ಶಿಕ್ಷಣ ಪದ್ಧತಿಯನ್ನು ಹೊಸ ತಳಪಾಯದ ಮೇಲೆ ಕಟ್ಟುತ್ತಿರುವುದರತ್ತ ಬ್ರಿಟಿಶ ಶಿಕ್ಷಣ ಪದ್ಧತಿಯ ಮೋಹ ಬಲೆಯಲ್ಲಿ ಬಿದ್ದವರ ಹಾಗೂ ಕೇವಲ ವಿದ್ಯಾ ಸಂಪಾದನೆಯೇ ಶಿಕ್ಷಣವೆಂದು ಅರ್ಥ ಮಾಡಿಕೊಂಡವರನೇಕರ ಚಿತ್ತ ಇನ್ನೂ ಹೋಗದಿರುವುದು ನಿಜವಾಗಿಯೂ ಶೋಚನೀಯವಾಗಿದೆ.

ಮಕ್ಕಳ ಬೌದ್ಧಿಕ ಪ್ರಗತಿಯೊಂದಿಗೆ ಮಾನಸಿಕ, ಶಾರೀರಿಕ ಪ್ರಗತಿಯೂ ಸಾಧಿಸಿ ಬಂದಾಗ ಅದು ಶಿಕ್ಷಣವೆಂದು ಸರ್ವ ಜನ ಸಮ್ಮತಿ ಪಡೆದಿದೆ. ಈ ಮೂರರಲ್ಲಿ ಒಂದಿಲ್ಲದಿದ್ದರೆ ಅದು ಶಿಕ್ಷಣವಲ್ಲವೆಂಬುದನ್ನು ಜಗತ್ತೇ ಒಪ್ಪಿಕೊಂಡಿರುವಾಗ ಮಕ್ಕಳ ಬೌದ್ಧಿಕ, ಮಾನಸಿಕ, ಶಾರೀರಿಕ ಪ್ರಗತಿಗೆ ಆಸ್ಪದವನ್ನೀಯುವಂತಹ ಶಿಕ್ಷಣಕ್ಕೀಗ ಭಾರತದಲ್ಲಿ ಬಹುವಾದ ಬೆಲೆ ಬರುತ್ತಿರುವುದಲ್ಲದೆ ಅದು ಬಲಿಯುತ್ತ ಸಾಗಿದೆ.

ಜೀವನ ಶಿಕ್ಷಣ

ಈ ಮುಮ್ಮುಖದ ಶಿಕ್ಷಣದೊಂದಿಗೆ ಮಕ್ಕಳು ಬಾಳನ್ನು ಕಲಿಯಬೇಕಾದುದು ಆವಶ್ಯಕವಾಗಿ ಪರಿಣಮಿಸಿದೆ. ಮಕ್ಕಳನ್ನು ಶಿಕ್ಷಣಾಲಯದಲ್ಲಿರುವಾಗಲೇ ಬಾಳಿನ ಆಳವನ್ನು ಅಳೆಯುವುದನ್ನು ಅಳವಡಿಸಿಕೊಳ್ಳಬೇಕಾದುದು ಅನಿವಾರ್ಯವೆಂದು ತೋರಿ ನಿಂತಿದೆ. ಆದರೆ ಹಳೆಯ ಶಿಕ್ಷಣದಲ್ಲಿ ಈಸಾಡಿ ಪಾರಂಗತರಾಗಿದ್ದೇವೆನ್ನುವ ಬಹುಸಂಖ್ಯಾಕರಿಗೆ ಬಾಳ ಬಟ್ಟೆಯ ನೆಲೆಯೇ ನಿಲುಕಿಲ್ಲವೆಂಬುದು ಈಗೀಗ ಸ್ಪಷ್ಟವಾಗುತ್ತಿದೆ. ಅಂತೆಯೇ ಜೀವನ ಶಿಕ್ಷಣವಿಂದು ತಲೆಯೆತ್ತಿ ಸುತ್ತೆಲ್ಲವೂ ಹಬ್ಬುತಿದೆ.

ಮಗುವು ವ್ಯಕ್ತಿಯಾಗುವುದರ ಜೊತೆಗೆ ಸಮಾಜದ ಸಹಾಯಕಾರೀ ಘಟಕವಾಗಿ ಬೆಳೆಯಬೇಕಾದರೆ ಮಹತ್ವದ ಗುಣಗಳಾದ ಸಹಕಾರ–ಸಹಾನುಭೂತಿ–ಸ್ವಾವಲಂಬನ–ಸತ್ಯ–ಪ್ರೇಮ–ನಿಷ್ಠೆ ಇವುಗಳು ಮಗುವಿನಲ್ಲಿ ಮೂಡಿಬರಬೇಕು. ಇವು ಕೇವಲ ಪುಸ್ತಕವನ್ನೋದಿದ ವಿದ್ಯಾರ್ಜನೆಯಿಂದ ಮೂಡಿಬರತಕ್ಕವುಗಳಲ್ಲ. ಒಂದು ವೇಳೆ ಬಂದರೂ ಬಹು ದಿನ ಬಾಳಿ ನಿಲ್ಲಲಾರವು. ಶಿಕ್ಷಣಾಲಯದ ಚೌಕಟ್ಟಿನಲ್ಲಿಯೇ ಈ ಗುಣಗಳ ಮೂಲವು ಮಕ್ಕಳಿಗೆ ಸಿಗಲಾರದು. ಅದಕ್ಕಾಗಿ ಮಕ್ಕಳು ಶಾಲೆಯ ಹೊರಗಿದ ನಿಸರ್ಗದಲ್ಲಿ, ಸುತ್ತಲಿನ ಸಮಾಜದಲ್ಲಿ ಬೆರೆತು, ನುರಿತು ಮಹಾಗುಣಗಳ ಮಹತ್ವವನ್ನು ಮನನ ಮಾಡಿಕೊಳ್ಳಲೇ ಬೇಕಾಗುವುದು. ಶಾಲೆಯೊಳಗಿನ ಮಕ್ಕಳೂ ಒಂದು ಸಮಾಜವಾಗಿರುವುದಾದರೂ ಅದು ನುರಿತ ಸಮಾಜವಲ್ಲ. ಹೊರಗಿನ ಸಮಾಜದಲ್ಲಿ ಸಿಗುವ ಲಾಭವು ಆ ಮಕ್ಕಳ ಸಮಾಜದಲ್ಲಿ ಮಕ್ಕಳಿಗೆ ಸಿಗಲಾರದು.

ಹೊರಗಿನ ಸಮಾಜದ ಅನುಭವ ಮಕ್ಕಳಿಗೆ ದೊರೆಯಲೆಂಬ ಸದುದ್ದೇಶದಿಂದ, ತಾವೂ ಸಮಾಜದ ವ್ಯಕ್ತಿಗಳೆಂಬ ಅರಿವು ಅವರಿಗಾಗಲೆಂಬ ಗುರಿಯಿಂದ ಹೊಸ ಶಿಕ್ಷಣದಲ್ಲಿ ಮಕ್ಕಳಿಗಾಗಿ ಔದ್ಯೋಗಿಕ, ಸಾಮಾಜಿಕ, ನೈಸರ್ಗಿಕ ಚಟುವಟಿಕೆಗಳ ಜ್ಞಾನಾನುಭವಕ್ಕೆ ಅವಕಾಶ ಹಾಕಿಕೊಡಲಾಗಿದೆ. ಈ ಅವಕಾಶದಿಂದ ಮಕ್ಕಳಿಗೆ ಮುಮ್ಮುಖ ಪ್ರಗತಿಯ ಲಾಭವು ಲಭಿಸುವುದಲ್ಲದೆ ಮಕ್ಕಳು ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿರುವಾಗಲೇ

ಸಮಾಜದಲ್ಲಿ ಬೆರೆಯುತ್ತಾರೆ; ಅನುಭವ ಪಡೆಯುತ್ತಾರೆ; ಆನಂದಬಡುತ್ತಾರೆ. ತನ್ಮೂಲಕ ಜೀವನ ಶಿಕ್ಷಣ ಪಡೆದು ಪ್ರತಿಭಾವಂತರಾಗಿ ಸಮಾಜ ಶಿಕ್ಷಣಕ್ಕೆ ನೆರವಾಗುತ್ತಾರೆ.

ಅಶಿಕ್ಷಿತರ ಅಭಿವೃದ್ಧಿ

ಶಿಕ್ಷಣದಲ್ಲಿ ಹಿಂದೆ ಬಿದ್ದಿರುವ ಭಾರತದಲ್ಲಿ ಇನ್ನೂ ನೂರಕ್ಕೆ ೮೦ ರಷ್ಟು ಅಶಿಕ್ಷಿತರಿರುವಾಗ ಅವರಿಗೂ ಶಿಕ್ಷಣವನ್ನು ಅದರಲ್ಲಿಯೂ ಜೀವನ ಶಿಕ್ಷಣವನ್ನು ಕೊಡಬೇಕಾದುದು ಸರಕಾರದ ಕರ್ತವ್ಯವಾಗಿ ನಿಂತಿದೆ. ಸಮಾಜದ ಕರ್ತವ್ಯವೂ ಆಗಿದೆ. ಇಷ್ಟೊಂದು ಜನರಿಗೆ ಶಿಕ್ಷಣ ಕೊಡುವುದು ಅಗಾಧವಾಗಿರುವಾಗ ಸರಕಾರವೊಂದೇ ಮುಂದೆ ಬಂದರೆ ಸಾಲದು. ಸುಶಿಕ್ಷಿತರಾಗಿರುವವರೆಲ್ಲರೂ ಮುಂಬರಬೇಕು. ಸಾಧ್ಯವಾದ ಸಹಾಯವನ್ನು ಸಲ್ಲಿಸಬೇಕು. ಸಮಾಜದ ಕಲ್ಯಾಣ ಕಟ್ಟಿಕೊಳ್ಳಬೇಕು. ಈ ಕಲ್ಯಾಣ ಕಟ್ಟಿಕೊಳ್ಳುವ ಹೊಣೆ ಶಿಕ್ಷಕರ ಮೇಲೆ ತನ್ಮೂಲ ವಿದ್ಯಾರ್ಥಿಗಳ ಮೇಲೆ ಹೆಚ್ಚಾಗಿ ಬೀಳುವುದು ಸಹಜವಾಗಿದೆ. ಅದಕ್ಕಾಗಿ ಸರಕಾರವೂ ಸಹಕಾರ-ಸಹಾಯ ನೀಡಲು ಸಿದ್ಧವಾಗಿ ನಿಲ್ಲಬೇಕಾಗಿದೆ.

ಅಂತೆಯೇ ಯೋಜನೆಗಳ ಮೇಲೆ ಯೋಜನೆಗಳು ತಲೆಯೆತ್ತಿ ಬರುತ್ತಿವೆ. ಬಂದವುಗಳು ಕಾರ್ಯಗತವಾಗಿ ಫಲಕಾರಿಯಾಗುತ್ತಲಿವೆ. ಅಶಿಕ್ಷಿತರಲ್ಲಿಯ ಅಜ್ಞಾನ-ಪರೆ ಇನ್ನೂ ಹರಿದಿಲ್ಲವಾದುದರಿಂದ ಫಲದ ಪ್ರಮಾಣ ಪ್ರಬಲವಾಗುತ್ತಿಲ್ಲ. ಅದಕ್ಕಿನ್ನೂ ಸಮಯ ಬೇಕು. ಈಗಾಗಲೇ ಬಂದಿರುವ ಯೋಜನೆಗಳಲ್ಲಿ ಪ್ರಮುಖವಾದವುಗಳಾದ ಸರ್ವೋದಯ, ಸಮಾಜ ಸೇವಾ ಸಂಘ, ಭೂದಾನ, ಶ್ರಮದಾನ, ಸಮಾಜ ವಿಕಾಸ, ರಾಷ್ಟ್ರೀಯ ವಿಸ್ತರಣೆ ಇವುಗಳಲ್ಲಿ ಸಮಾಜೋದ್ಧಾರವಿದೆ; ರಾಷ್ಟ್ರೋದ್ಧಾರವಿದೆ. ಇವುಗಳಲ್ಲಿಯ ಶ್ರಮದಾನ ಯೋಜನೆಗೆ ಶಿಕ್ಷಣಾಲಯಗಳು ನೆರವಾಗಬೇಕೆಂದು ಸರಕಾರವು ಪ್ರೇಮದಿಂದ ಒತ್ತಾಯಿಸುವಲ್ಲಿ ಶಿಕ್ಷಕರನ್ನು, ಮಕ್ಕಳನ್ನು ಅಡ್ಡದಾರಿಗೊಯ್ಯಬೇಕೆಂಬ ದುರುದ್ದೇಶವಿಲ್ಲ. ಅಭಿವೃದ್ಧಿಯನ್ನು ಕಾಣದ ಸಮಾಜದ ಬಹುಸಂಖ್ಯಾಕರನ್ನು ಅಭಿವೃದ್ಧಿಯತ್ತ ಸಾಗಿಸುವ ಸದುದ್ದೇಶವಿದೆ.

ಹಳ್ಳಿಯಲ್ಲಿ ಹೊಕ್ಕು ಹೊರಳಾಡಿ ನೋಡಿದವರಿಗೆ ಹಳ್ಳಿಯ ಹದದ ಅರಿವಾಗುವುದು. ಭಾರತದ ಒಂದು ಲಕ್ಷ ಹಳ್ಳಿಗಳ ಜನರಲ್ಲಿ ಸ್ವಚ್ಛತೆಯ ಅರಿವಿಲ್ಲ.; ಸಹಕಾರದ ತಿಳಿವಿಲ್ಲ, ಸಹಾನುಭೂತಿಯ ಸುಳಿವಿಲ್ಲ; ಸ್ವಾವಲಂಬನದ ಹಂಬಲವಿಲ್ಲ; ಸತ್ಯ-ಪ್ರೇಮ-ನಿಷ್ಠೆಗಳ ಗೊತ್ತುಗುರಿಯಿಲ್ಲ. ತಮ್ಮ ಮನೆಯ ಮುಂದಿನ ಹೊಲಸು ಅವರಿಗೆ ಅರಿತಿಲ್ಲ. ಮಂದಿಯ ಮನೆಯ ಮುಂದೆ ಮಲ ಮಾಡುವುದನ್ನು ಮರೆಯುವದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರಲ್ಲಿ ತಮ್ಮತನದ ತಿಳಿವು ತಲೆದೋರುವಂತೆ ಮಾಡಬೇಕಾದರೆ ತಿಳಿದವರು ಮುಂಬಂದು— ತುಸು ಕಷ್ಟವಾದರೂ, ಧನವನ್ನಲ್ಲದಿದ್ದರೂ ತನುಮನಗಳನ್ನಿತ್ತು— ಹಳ್ಳಿಗರು ತಲೆಯೆತ್ತುವಂತೆ ಮಾಡಬೇಕು. ಇದಕ್ಕಾಗಿಯೇ ಶ್ರಮ-ದಾನವು ಸಮಯ ಸಾಧಿಸಿ ಬಂದಂತಿದೆ.

ಶ್ರಮದಾನ ಶೈಕ್ಷಣಿಕ ಹಾದಿ

ಶಿಕ್ಷಕರೊಂದಿಗೆ ಹೋಗಿ ವಿದ್ಯಾರ್ಥಿಗಳು ಹಳ್ಳಿಗ-ಳಲ್ಲಿ ಶ್ರಮದಾನದಲ್ಲಿ ತೊಡಗಿದಾಗ, ಹೊಲಸಿನಲ್ಲಿ ಕುಳಿ-ತಿರುವ ಹಳ್ಳಿಗರು ಸ್ವಯಂಪ್ರೇರಣೆಯಿಂದ ಮುಂಬಂದು ಜೊತೆಗೂಡಿ ದುಡಿದಮೇಲೆ ತಮ್ಮದನ್ನು ತಾವೇ ಮಾಡಿಕೊಳ್ಳಬೇಕೆಂಬುದರ ಜ್ಞಾನವನ್ನು ಕಂಡುಕೊಂಡು ತಪ್ಪನ್ನು ಒಪ್ಪಿಕೊಂಡ ಉದಾಹರಣೆಗಳೂ ಉಂಟು. ಆ ದಿಶೆಯಲ್ಲಿ ಮುಂದೆ ಹಳ್ಳಿಗರು ದುಡಿದ ಸಂದರ್ಭಗಳು ಉಂಟು. ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಹೋಗಿ, ಹಳ್ಳಿಗರೊಡನೆ ಬೆರೆತು, ಹಳ್ಳಿಯ ಸಮಸ್ಯೆಗಳನ್ನರಿತು, ಅವುಗಳ ಬಗ್ಗೆ ವಿಚಾರಿಸಿ ಚರ್ಚಿಸಿದ ಅವಕಾಶಗಳೂ ಉಂಟು. ವಿದ್ಯಾರ್ಥಿಗಳಿಗೆ ಸಮಾಜದ ಸಂಪರ್ಕ ಬೆಳೆದು ತಾವೂ ಸಮಾಜದ ಘಟಕಗಳೆಂಬುದನ್ನು ಪ್ರತ್ಯಕ್ಷ ಅನುಭವಿಸಿದುದೂ ಉಂಟು. ಹೊರಗಿನವರು ಬಂದು ಶ್ರಮದಾನ ಮಾಡುವಾಗ ಅಶಿಕ್ಷಿತ ಹಳ್ಳಿಗರಲ್ಲಿ ನವ ಜ್ಞಾನೋದಯವಾಗಿ ಸಹಕಾರ—ಸಹಾನುಭೂತಿ—ಸ್ವಾವಲಂಬನಗಳ ಹಿರಿಮೆ ಹಳ್ಳಿಗರಿಗೆ ಹೊಳೆದು ಹೊಸದೊಂದು ಚೈತನ್ಯವು ಅವರಲ್ಲಿ ಚೇತರಿಸಿಕೊಂಡ ಸಂದರ್ಭಗಳೆಷ್ಟಿಲ್ಲ. ಆ ಚೇತನವು ಇನ್ನೂ ಬಲಿತು ಹಳ್ಳಿಯಲ್ಲಿ ಬಹಳಷ್ಟನ್ನು ಮಾಡಿಕೊಳ್ಳಬೇಕೆಂಬ ಸದ್ಬುದ್ಧಿ ಅವರಲ್ಲಿ ತಾನಾಗಿ ತಲೆದೋರುವುದು. ವಿದ್ಯಾರ್ಥಿಗಳ ಶ್ರಮದಾನದಿಂದ ಇಷ್ಟೊಂದು ಫಲ ಹಳ್ಳಿಗಳಲ್ಲಿ ಕಂಡುಬರುವಾಗ ಶ್ರಮದಾನದ ಹಿರಿಮೆ ಸಣ್ಣದೆ ?

ರಾಜಕಾರಣವಿಲ್ಲ

ಶ್ರಮದಾನದ ಮೂಲ ತತ್ವವನ್ನೇ ತಿಳಿದುಕೊಳ್ಳದೆ ಶ್ರಮದಾನವು ಒಂದು ಹೊಸ ರೋಗವೆಂದು ಕೂಗು ತರು. ಯಾವ ಅನುಭವದ ಆಧಾರವಿಟ್ಟುಕೊಂಡಿರುವರೊ ತಿಳಿಯದ ಮಾತು. ಶ್ರಮದಾನದಲ್ಲಿ ವಿದ್ಯಾರ್ಥಿಗಳ ವೇಳೆಯು ಎಂದೂ ವ್ಯರ್ಥ ಹೋಗದು. ವರ್ಷಕ್ಕೊಂದೆ ರಡು ಸಲ ಶ್ರಮವನ್ನು ದಾನ ಮಾಡುವಾಗ ಹಳ್ಳಿಗರಿಗೆ ಹಾಕಿಕೊಡುವ ಪಾಠದಲ್ಲಿ ಮಹತ್ವವಿದೆ. ಹಳ್ಳಿಯ ಜ್ಞಾನ ಮಾಡಿಕೊಳ್ಳುವ ಕಾರ್ಯದಲ್ಲಿ ಶಿಕ್ಷಣವಿದೆ. ಪ್ರತಿ ದಿನವೂ ಬಹುಕಾಲ ಶ್ರಮದಾನ ಮಾಡಿರೆಂದು ವಿದ್ಯಾರ್ಥಿ ಗಳಿಗೆ ಯಾರೂ ಹೇಳಿಲ್ಲ. ಹಾಗೆ ಯಾರೂ ಮಾಡಿಲ್ಲ. ಶ್ರಮದಾನದ ತತ್ವವೂ ಹಾಗೆ ಹೇಳುವುದಿಲ್ಲ. ಶ್ರಮದಾನ ದಲ್ಲಿ ಜ್ಞಾನಾರ್ಜನೆಯೊಂದಿಗೆ ಅನುಭವಾರ್ಜನೆಯೂ ಇದೆ. ಮಾನವೀಯತೆಯ ಮರ್ಮವೂ ಇದೆ. ಶಿಕ್ಷಕರೂ ವಿದ್ಯಾರ್ಥಿಗಳೂ ಕೈಕೊಳ್ಳುವ ಶ್ರಮದಾನವು ಶೈಕ್ಷಣಿಕ ವಾಗಿದೆಯೇ ಹೊರತು ಪಕ್ಷ-ಪಂಗಡಗಳ ರಾಜಕಾರಣ ವಿಲ್ಲ. ರಾಜಕೀಯ ಪಕ್ಷಗಳ ನೆರವಿನಲ್ಲಿ ಅದನ್ನಾರೂ ಕೈಕೊಳ್ಳುವದಿಲ್ಲ. ಕೈಕೊಳ್ಳಬಾರದು.

ಸಮಯೋಚಿತವಾಗಿ ಬರುವ ವಿದ್ಯಾರ್ಥಿಗಳ ಶ್ರಮ ದಾನವು ಅವರನ್ನು ಸಮಾಜದ ಕಲ್ಯಾಣದತ್ತ ಶೈಕ್ಷಣಿಕ ವಾಗಿ ಸಾಗಿಸುವುದು. ಅವರ ಸಹಜವಾದ ಯೌವನದಲ್ಲಿ ಚೇತನವನ್ನು ತುಂಬಿ ರಚನಾತ್ಮಕ ಕಾರ್ಯಗಳತ್ತ ಕಳ ಸುವುದು. ಒಂದೆರಡು ಸಲ ಸಲಿಕೆ-ಗುದ್ದಲಿ ಹಿಡಿದು, ಒಂದೆರಡು ಪುಟ್ಟಿ ಮಣ್ಣನ್ನು ಹೊತ್ತು ಹಾಕುವುದು ಕಾರ್ಯದ ಗಾತ್ರದೃಷ್ಟಿಯಿಂದ ಮಹತ್ವದ್ದಿಲ್ಲ. ಅಷ್ಟೊಂದು ಸಣ್ಣ ಕಾರ್ಯದಲ್ಲಿ ಕಂಡುಕೊಂಡ ಶ್ರಮ ಗೌರವದ ಹಿರಿಮೆಯನ್ನು ಅಳವಡಿಸಿಕೊಳ್ಳುವುದು ಮಹ ತ್ವದ್ದು. ಅಷ್ಟನ್ನು ವರ್ಷಕ್ಕೊಂದೆರಡು ಸಲ ಅಳವಡಿಸಿ ಕೊಂಡ ವಿದ್ಯಾರ್ಥಿಗಳು ಜೀವನದಲ್ಲಿ ಎಷ್ಟೊಂದು ಮಾಡ ಲಿಕ್ಕಿಲ್ಲ ? ಶ್ರಮದಾನದಲ್ಲಿ ಬಾಳಬಟ್ಟೆ ಪರಮಾಗಮವಿದೆ. ಸಮಾಜದ ಕಲ್ಯಾಣವಿದೆ. ರಾಷ್ಟ್ರದ ಅಭಿವೃದ್ಧಿಯಿದೆ. ವಿದ್ಯಾರ್ಥಿಗಳಿಗಾಗಿ ಜೀವನ ತರಬೇತಿಯಿದೆ.

ಶಿಕ್ಷಕರೂ, ವಿದ್ಯಾರ್ಥಿಗಳೂ ಶೈಕ್ಷಣಿಕವಾಗಿ ಕೈಕೊಳ್ಳುವ ಶ್ರಮದಾನಕ್ಕೆ ರಾಜಕೀಯ ಬಣ್ಣ ಬಳಿದು ಶ್ರಮದಾನವನ್ನೇ ಕೀಳುಮಾಡಿ ವಿದ್ಯಾರ್ಥಿಗಳ ಮನ ಸ್ಸನ್ನು ವಿಫಲಗೊಳಿಸುವವರ ಮನೋವೃತ್ತಿಯನ್ನು ಕಂಡು ಶ್ರಮದಾನಿಗೆ ನಿಜವಾಗಿಯೂ ವಿಷಾದವಾಗು ವುದು.

ಕೊಡುವ ಶ್ರಮದಾನದಲ್ಲಿ ಪ್ರಾಮಾಣಿಕತೆ ಇರ ಬೇಕು. ಅಂತಹ ಮಾರ್ಗವನ್ನು ಹಾಕಿಕೊಡುವವರು ಶಿಕ್ಷ ಕರು. ಇತರರೂ ಕೂಡ ಪ್ರಾಮಾಣಿಕ ಶ್ರಮದಾನಕ್ಕೆ ಪ್ರೋತ್ಸಾಹನೆ ಕೊಡಬೇಕೇ ಹೊರತು ಶ್ರಮದಾನವು ವಿದ್ಯಾರ್ಥಿ ಶಿಕ್ಷಣಕ್ಕೆ ಯೋಗ್ಯ ತಳಹದಿಯಲ್ಲವೆಂದೇ ಕೂಗುವದು ರಾಷ್ಟ್ರರಚನೆಯ ನವ ಕಾರ್ಯದಲ್ಲಿ ಅಡ್ಡ ಬಂದಂತೆಯೇ ಎಂದು ತಿಳಿದವರು ಭಾವಿಸುವುದು ಸಹಜ ವಿದೆ.

ವಿವಿಧೋದ್ದೇಶ ಸಾಲೆಗಳು

ಲೇಖಕರು :

ಶ್ರೀ ಮ. ಗು. ಹಂದ್ರಾಳ, ಪ್ರಿನ್ಸಿಪಾಲರು, ಪದವೀಧರರ ಜೀವನ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ.

ಸದ್ಯದ ಶಿಕ್ಷಣ ಕ್ರಮವು ದೋಷಯುಕ್ತವಾಗಿದೆ ಎಂದು ಅನೇಕರು ಆಡಿಕೊಳ್ಳುತ್ತಿದ್ದಾರೆ. 'ನೌಕರಿಗಾಗಿ–ಶಿಕ್ಷಣ'ವು ಎಂಬ ಕೂಗು ಇನ್ನೂ ಕೇಳಬರುತ್ತದೆ. ಇದು ಹಳೆಯ ವಿಚಾರವು; ಹಳಿಯಲರ್ಹವಾದ ವಿಚಾರವು; ಸ್ವಾತಂತ್ರ್ಯಪೂರ್ವ ಭಾರತದಲ್ಲಿಯ ಶಿಕ್ಷಣದ ಬೇಡಿಕೆ. ಈಗ ಭಾರತವು ಸ್ವತಂತ್ರ ದೇಶ. ತನ್ನದೇ ಆದ ವೈಶಿಷ್ಟ್ಯಪೂರಿತ ಶಿಕ್ಷಣ ಯೋಜನೆಯನ್ನು ಭಾರತದ ಸ್ವಾತಂತ್ರ್ಯಶಿಲ್ಪಿ ಪೂಜ್ಯ ಬಾಪೂಜಿಯವರ ವಿಚಾರ ಪ್ರಣಾಲಿಯ ಮೇಲೆ ಸಿದ್ಧಗೊಳಿಸಿದೆ. ಆಡಳಿತೆಯ ಅನುಕೂಲತೆಗಾಗಿ–ಕಾರಕೂನರನ್ನು ಇಲ್ಲವೆ ಮಧ್ಯಸ್ಥಗಾರರನ್ನು ತರಬೇತುಗೊಳಿಸುವದಕ್ಕಾಗಿ ಮೆಕಾಲೆಯ ಮೆದುಳಿನ ಕಿರಣವು ಭಾರತದಲ್ಲಿ ಬೆಳಗಿ, ಪರಕೀಯರಿಗಾಗಿ ನಮ್ಮ ಶಿಕ್ಷಣವು ರೂಪುಗೊಂಡು ನಮ್ಮವರಲ್ಲಿಯ ತನ್ನತನವನ್ನು ಹತ್ತಿಕ್ಕಿತು.

ಈಗ ಆ ಕಾಲವು ಅಳಿಯಿತು. ಗಾಂಧೀಜಿಯವರ ದರ್ಶನದ ಫಲವಾಗಿ 'ನವ ನಾಗರಿಕತೆಗಾಗಿ ಶಿಕ್ಷಣ' ಎಂಬ ನವ ಧ್ವನಿ ಕೇಳಬರುತ್ತಿದೆ. ಇದು ಹೊಸತು. ಭಾರತೀಯರು ಭಾರತೀಯರಾಗಿಯೇ ಬೆಳೆದು ಬಾಳಬೇಕು; ಬಾಳಿ ಬೆಳಗಬೇಕು ಎಂಬ ದೃಷ್ಟಿಯೇ ಜೀವನ ಶಿಕ್ಷಣದ ಜೀವಾಳವು. ರಾಷ್ಟ್ರದ ಮುಂದಾಳುಗಳು, ರಾಷ್ಟ್ರೀಯ ಶಿಕ್ಷಣದಲ್ಲಿ ಆಸ್ಥೆಯುಳ್ಳವರು ಭಾರತೀಯರಿಗೆ ಬೇಕಾದ ಶಿಕ್ಷಣ ಯೋಜನೆಯೊಂದನ್ನು ಡಾ. ಝಾಕೀರ ಹುಸೇನ ಅವರ ಅಧ್ಯಕ್ಷತೆಯಲ್ಲಿ ಸಿದ್ಧಗೊಳಿಸಿರುವರು. ಅದು ಈಗ ಪ್ರಯೋಗವಾಗಿದೆ, ಫಲಿತಾಂಶವು ಒಳ್ಳೆಯದಾಗಿ ಕಂಡುಬಂದಿದೆ. ಅಂತೆಯೇ ಕೇಂದ್ರ ಸರಕಾರವು ಅಖಂಡ ಭಾರತಕ್ಕೆ ಬೇಕಾದ ಒಂದೇ ಒಂದು ಶಿಕ್ಷಣ ಯೋಜನೆಯೆಂದರೆ ಇದೇ ಎಂದು ಸಾರಿದೆ.

ಈ ಹೊಸ ಶಿಕ್ಷಣವು ಮೂಲ ಶಿಕ್ಷಣ ಅಥವಾ ಜೀವನ ಶಿಕ್ಷಣ ಎಂಬ ಹೆಸರು ಗಳಿಸಿದೆ. ಇದರ ಹಿರಿಯ ವೈಶಿಷ್ಟ್ಯವೆಂದರೆ ಶಿಕ್ಷಣದಲ್ಲಿ ಉದ್ಯೋಗಗಳಿಗೆ ದೊರೆತ ಸ್ಥಾನವು. ಉದ್ಯೋಗಗಳು ಶಿಕ್ಷಣದ ಮಾಧ್ಯಮವಾಗಿ ಸೇರಿಕೊಂಡಿವೆ. ಸಾಮಾನ್ಯ ಜ್ಞಾನದ ವಾಹಕಗಳಾಗಿ ಹೆಣೆದುಕೊಂಡು ಬಂದಿವೆ. ಜೀವನದ ಮೂಲಭೂತ ಬೇಡಿಕೆಗಳನ್ನು— ಅನ್ನ, ಅರಿವೆ, ಆಶ್ರಯ —ಇವುಗಳನ್ನು ಪೂರೈಸುವ ಉದ್ಯೋಗಗಳನ್ನು ಆಯ್ದುಕೊಂಡು ಶಿಕ್ಷಣವನ್ನು ಜೀವನಕ್ಕೆ ನಿಕಟವಾಗಿ ಅನುಬಂಧಿಸಲಾಗಿದೆ. ಹಳೆಯ ಶಿಕ್ಷಣ ಕ್ರಮದಲ್ಲಿಯ ಮಹತ್ವದ ದೋಷವನ್ನು ದೂರಮಾಡಲು ನೆರವು ನೀಡುವದೆಂಬ ವಿಶ್ವಾಸವು ಬೆಳೆಯತೊಡಗಿದೆ.

ಶೈಕ್ಷಣಿಕ ತತ್ತ್ವಗಳ ದೃಷ್ಟಿಯಿಂದಲೂ ಮೂಲ ಶಿಕ್ಷಣಕ್ಕೆ ತಕ್ಕ ಆಧಾರ (Basis) ವಿದೆ. ಅದೆಂದರೆ ಕೃತಿ. ಮಗುವಿನ ಶಿಕ್ಷಣವು ಕೃತಿಮೂಲವಾಗಿರಬೇಕೆಂಬುದು ಆಧುನಿಕ ಶಿಕ್ಷಣ ತಜ್ಞರ ಮತ. ಆಧುನಿಕ ಪದ್ಧತಿಗಳೆಲ್ಲ ಕೃತಿಮೂಲವಾಗಿವೆ. ಹೊಸ ಶಿಕ್ಷಣದ ಹೊಸ ಕೂಗು ಇತ್ತೀಚೆಗೆ ಧ್ವನಿತವಾಗುತ್ತಿರುವುದೆಂದರೆ ಶಿಕ್ಷಣದಲ್ಲಿ ಕೃತಿಗೆ ಕೊಟ್ಟ ಅಗ್ರ ಸ್ಥಾನ. ಕೃತಿಯು ಮಗುವಿನಲ್ಲಿ ವೈಜ್ಞಾನಿಕ ದೃಷ್ಟಿಯನ್ನು ವಿಕಸಿಸುತ್ತದೆ. ಕೆಲಸದಲ್ಲಿ ಅಡಗಿದ ಕಾರ್ಯ–ಕಾರಣ ಭಾವವನ್ನೂ, ಸಾಧನ–ಸಾಮುಗ್ರಿಗಳ ಜ್ಞಾನವನ್ನೂ, ಕೃತಿಯ ಜೊತೆಗೆ ಹೆಣೆದುಕೊಂಡು ಬಂದ ಸಾಮಾನ್ಯ ಜ್ಞಾನವನ್ನೂ ಮಗುವು ಸುಲಭವಾಗಿ ಸ್ವೀಕರಿಸಬಲ್ಲನೆಂಬುದು ಅನುಭವಸಿದ್ಧವಾಗಿದೆ.

ಈ ಎಲ್ಲ ಕಾರಣಗಳ ಮೂಲಕ ಶಿಕ್ಷಣದಲ್ಲಿ ಉದ್ಯೋಗಗಳಿಗೆ ಉನ್ನತವಾದ ಸ್ಥಾನ ದೊರೆತಿ–

ಎಂಬುದು ಸ್ಪಷ್ಟ. ಮಾಧ್ಯಮಿಕ ಸಾಲೆಗಳಲ್ಲಿಯೂ ಈ ತತ್ತ್ವವನ್ನು ಅನುಸರಿಸಲಾಗುತ್ತಿದೆ. ಚಿತ್ರಕಲೆ, ಕೈಕೆಲಸಗಳಿಗೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಉದ್ಯೋಗಗಳನ್ನೂ ಸೇರಿಸಲಾಗಿದೆ. ಉದ್ಯೋಗಗಳಲ್ಲಿ ಬಲವನ್ನು ಹುಟ್ಟಿಸಲು ತೆರೆಯಲ್ಪಟ್ಟ ತಾಂತ್ರಿಕ ಸಾಲೆಗಳಲ್ಲಿ (Technical Schools) ಪ್ರಯೋಗ ವಿಭಾಗಗಳಾಗಿವೆ. ಇಂಜಿನಿಯರಿಂಗ ತುಸುಮಟ್ಟಿಗೆ ಕಲಿಸಲಾಗುವದು. ಕೆಲವು ಮಾಧ್ಯಮಿಕ ಸಾಲೆಗಳಲ್ಲಿ ವಾಣಿಜ್ಯ ವಿಷಯಗಳನ್ನು (Commercial Subjects) ಕಲಿಸಲಾಗುತ್ತದೆ. ಹೀಗೆ ಮಾಧ್ಯಮಿಕ ಸಾಲೆಗಳಲ್ಲಿ ಮೂರು ಪ್ರಕಾರಗಳಿವೆ:— (೧) ಸಾಮಾನ್ಯ ಸಾಲೆಗಳು, (೨) ತಾಂತ್ರಿಕ ಸಾಲೆಗಳು, (೩) ವಾಣಿಜ್ಯ ಸಾಲೆಗಳು ಈ ತ್ರಿವಿಧ ಸಾಲೆಗಳನ್ನು ಒಂದು ಮಟ್ಟಕ್ಕೆ ನಿಲ್ಲಿಸುವ ಯತ್ನದ ಫಲವಾಗಿ ವಿವಿಧೋದ್ದೇಶ ಸಾಲೆಗಳು (Multi-purpose Schools) ಮೂಡಿ ಬಂದಿವೆ. ಇಲ್ಲಿ ವಿವಿಧ ಉದ್ಯೋಗಗಳನ್ನು ಮಾತ್ರ ಕಲಿಸಲಾಗುವದು ಎಂದು ತಿಳಿಯುವದು ತಪ್ಪು. ಸಾಮಾನ್ಯ ಶಿಕ್ಷಣಕ್ಕೂ ತಕ್ಕಷ್ಟು ಬಹುಮಾನವನ್ನೇ ಕೊಡಲಾಗುವದು. ಶಿಕ್ಷಣದ ವಿವಿಧ ಉದ್ದೇಶಗಳನ್ನು ಸಮನ್ವಯಗೊಳಿಸಿ, ಮಕ್ಕಳ ವ್ಯಾವಹಾರಿಕ ಹಾಗು ನಾಗರಿಕತೆಯ ಶಿಕ್ಷಣವನ್ನು ಕೊಡಲಾಗುವದು; ವಿಶ್ವವಿದ್ಯಾಲಯಗಳಿಗೆ ಹೋಗಲು ಅನುವಾಗುವ ಆಧಾರ ವಿಷಯಜ್ಞಾನವನ್ನು ಒದಗಿಸಲಾಗುವದು.

ಕೇಂದ್ರ ಸರಕಾರವು ನಮ್ಮ ನಾಡಿನ ತುಂಬ ವಿವಿಧೋದ್ದೇಶ ಸಾಲೆಗಳನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿದೆ. ಪ್ರತಿ ಜಿಲ್ಹೆಗೆ ಒಂದೊಂದರಂತೆ ಅವು ಸ್ಥಾಪಿತವಾಗುವವು. ಮುಂಬಯಿ ರಾಜ್ಯವೂ ಈ ಕಡೆಗೆ ಓಗೊಟ್ಟಿದೆ. ಅಂಥ ಸಾಲೆಗಳು ಈಗ ಮೂಡಿವೆ. ಕೈಕೆಲಸದ ಬಾಯಿ ಮೊಸರು ಎಂಬುದು ಕಾರ್ಯರೂಪದಲ್ಲಿ ಬರಲಿದೆ. ವಿದ್ಯಾವಂತರಿಗೆ ಶ್ರಮದಾನದ ಅರಿವು ಆಗಲಿದೆ ದೈಹಿಕ ಶ್ರಮವು, ಬೌದ್ಧಿಕ ಜೀವನಣಿಗೆಯು, ನೈತಿಕ ಉನ್ನತಿಯು ಸಾಧನವೆಂಬುದು ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣ ಹಂತಗಳಲ್ಲಿ ಫಲಿಸಲಿದೆ. ಪುಸ್ತಕೀಯ ವಿದ್ಯೆಗೆ ನಿಷ್ಕ್ರಿಯ ಹಾಗು ಪ್ರಸಿದ್ಧ ಶಿಕ್ಷಣಕ್ಕೆ ಇನ್ನು ಶರಣು ಹೊಡೆದು, ಕ್ರಿಯಾತ್ಮಕ ಚೈತನ್ಯಗಳನ್ನು ಜೇತರಿಸಬಲ್ಲ ಆರ್ಥಿಕ ಸ್ವಾವಲಂಬನವನ್ನು ತರಬಲ್ಲ ನಾಡ ಹಿರಿಮೆಯನ್ನು ಹೆಚ್ಚಿಸಬಲ್ಲ ಸಜೀವ ಶಿಕ್ಷಣವನ್ನು ನಮ್ಮ ಮಕ್ಕಳು ಪಡೆಯಲಿ. ಅದರಲ್ಲಿಯೇ ಭಾರತದ ಉಜ್ವಲ ಭವಿಷ್ಯವು ಅಡಗಿದೆ ಎಂಬ ಅರಿವು ಉಂಟಾಗಲಿ.

ತಿದ್ದುಪಡಿ

ಕಳೆದ ತಿಂಗಳ ಸಂಚಿಕೆಯಲ್ಲಿ ಕವ್ಹರ ಪುಟ ೪ನೇಯದರಲ್ಲಿ ಕಾಲು ಪುಟದ ಜಾಹೀರಾತಿನ ದರ ೧ ತಿಂಗಳಿಗೆ ರೂ. ೭-೦-೦ ಎಂತೆ ಇದ್ದುದನ್ನು ರೂ. ೩-೦-೦ ಎಂದು ತಿದ್ದಿಕೊಂಡು ಓದಬೇಕಾಗಿ ವಿನಂತಿ.

—ಪ್ರ. ಸಂ.

ಕೇವಲ ೬ ರೂ. ಗಳಿಗೆ ೧೨ ಪುಸ್ತಕಗಳು

೧೦೦ — ೧೫೦ ಪುಟಗಳು

— ಪ್ರಕಟವಾಗಿವೆ —

ಗಗನಚಂದ್ರ ಕಾದಂಬರಿ
[ಶ್ರೀ ನಾಡಿಗೇರ] .... ೦—೮—೦

ಮುಂದೇನು ? ಕಾದಂಬರಿ
[ಶ್ರೀ ದೇವುಡು] .... ೦—೮—೦

ನೆವ್ವದ ಕಥೆಗಳು ಕಥೆಗಳು
[ಶ್ರೀ ಗೋಪಾಲಕೃಷ್ಣ ಅಡಿಗ] .... ೦—೮—೦

— ಅಚ್ಚಿನಲ್ಲಿ —

ಅತಿದೂರದ ಜಗತ್ತಿನಲ್ಲಿ ಕಥೆಗಳು
[ಶ್ರೀ ಹೆಗಡೆ ಬಂಧುಗಳು] .... ೦—೧೦—೦

ಕುಮಾರಿ ಸುನೇತ್ರಾ ಕಾದಂಬರಿ
[ಶ್ರೀ ರಂಗರಾಯ ತಲಚೇರಕರ] ೦—೧೦—೦

ದೇವತೆಗಳ ಆಕಾಶವಾಣಿ ಹಾಸ್ಯದ ಕಿಡಿಗಳು
[ಪ್ರೊ. ಬಿ. ಎಚ್. ಶ್ರೀಧರ] ....

— ಉತ್ಕೃಷ್ಟ ಪುಸ್ತಕಗಳನ್ನು ನಿರೀಕ್ಷಿಸಿರಿ —

: ಇಂದೇ ಚಂದಾದಾರರಾಗಿರಿ :

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ

[ಉ. ಕ.]

ಪ ರಿ ಪ ತ್ರ

ನಂ. ಎಸ್. : ೧೮೪ ಡ (ಬೇಸಿಕ್)
ಪುಣೆ, ೧. ೧೪-೬-೧೯೫೫

ವಿಷಯ :- . ಜೀವನ ಶಿಕ್ಷಣ ಮತ್ತು ಮೂಲೋದ್ಯೋಗ ಪ್ರಾಥಮಿಕ ಶಾಲೆಗಳ ಮೂಲೋದ್ಯೋಗದ ಅಭ್ಯಾಸ ಪತ್ರಿಕೆಯ ಪುನರಾವೃತ್ತಿ.

ಪಠ್ಯ ವಿಷಯಗಳ ಅಭ್ಯಾಸ ಪತ್ರಿಕೆಯ ಪುನರಾವೃತ್ತಿಯ ಪರಿಣಾಮವಾಗಿ ಒಂದನೆಯ ಇಯತ್ತೆಯಿಂದ ಏಳನೆಯ ಇಯತ್ತೆಗಳ ಮೂಲೋದ್ಯೋಗದ ಅಭ್ಯಾಸ ಪತ್ರಿಕೆಯು ಸಹ ಪುನರಾವೃತ್ತಿಯನ್ನು ಹೊಂದಿದೆ ಮತ್ತು ಎಲ್ಲ ಶಾಲೆಗಳ ಮಾಹಿತಿಗಾಗಿ ಇದರ ಲಗತ ಇಡಲ್ಪಟ್ಟಿದೆ. ಈ ಅಭ್ಯಾಸ ಪತ್ರಿಕೆಯು ಎಲ್ಲ ಮೂಲೋದ್ಯೋಗ ಹಾಗೂ ಜೀವನ ಶಿಕ್ಷಣ ಶಾಲೆಗಳಲ್ಲಿ ಈ ಚಾಲೂ ವರ್ಷದಿಂದ ಅಮಲಿನಲ್ಲಿ ಬರುವದು. ಎಲ್ಲಿ ನಿರ್ದಿಷ್ಟ ಗುರಿಗಳನ್ನು ನಿರ್ದೇಶಿಸಿಲ್ಲವೋ ಅಲ್ಲಿ ಅಂದರೆ ಒಕ್ಕಲತನ ಕಟ್ಟಿಗೆಯವರಂತೆ ನಿಯಮಿಸಿದ ಅಭ್ಯಾಸ ಪತ್ರಿಕೆಯ ಆಧಾರದ ಮೇಲಿಂದ ಅವುಗಳನ್ನು ನಿರ್ಧರಿಸಬೇಕು ಮತ್ತು ಸಂಬಂಧಿಸಿದ ಶಾಲೆಗಳ "ಆ್ಯಡ್ಮಿನಿಸ್ಟ್ರೇಟಿವ್ಹ" ಆಫೀಸರರಿಂದ ಮಂಜೂರ ಮಾಡಿಸಿಕೊಳ್ಳಬೇಕು.

೨. ಅಭ್ಯಾಸ ಪತ್ರಿಕೆಯನ್ನು ಬಳಕೆಯಲ್ಲಿ ತರುವಾಗ ನಿರೂಪಿಸಿದ ಗುರಿಗಳನ್ವಯ ಮೂಲೋದ್ಯೋಗಗಳು ಯೋಗ್ಯ ಉದ್ದಿಶ್ಯವನ್ನು ಮಕ್ಕಳಿಗೆ ಪೂರೈಸಬೇಕು. ಮಕ್ಕಳು ತಾವು ಮೂಲೋದ್ಯೋಗದಲ್ಲಿ ಮಾಡಿದ ಕೆಲಸದ ಪ್ರಾಮಾಣಿಕ ಅಂಕೆ-ಅಂಶಗಳನ್ನಿಡಬೇಕು ಮತ್ತು ನಿರ್ದಿಷ್ಟ ಪಡಿಸಿದ ಮಟ್ಟಗಳನ್ನು ಎಷ್ಟರಮಟ್ಟಿಗೆ ಮುಟ್ಟುವರೆಂಬದನ್ನು ನೋಡಬೇಕು.

೩. ಚಾಲೂ ವರ್ಷದಲ್ಲಿ ಜೀವನ ಶಿಕ್ಷಣ ಹಾಗೂ ಮೂಲೋದ್ಯೋಗ ಶಾಲೆಗಳಿಗೆಲ್ಲ ಒಂದೇ ತರದ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ನಡೆಯುವದು. ಇದರ ವಿವರವಾದ ಅಭ್ಯಾಸ ಪತ್ರಿಕೆಯು ಪ್ರತ್ಯೇಕವಾಗಿ ಪ್ರಕಟಿಸಲ್ಪಡುವದು. ಆರೋಗ್ಯ ಹಾಗೂ ಸಾಂಘಿಕ ಜೀವನದಲ್ಲಿಯ ತರಬೇತಿಯು ಹೆಚ್ಚಿನ ವಿಷಯಗಳಲ್ಲಿ ಒಂದಾಗಿದ್ದು ಅದನ್ನು ಮೂಲೋದ್ಯೋಗದ ಹಾಗೂ ಜೀವನ ಶಿಕ್ಷಣ ಶಾಲೆಗಳ ವಿದ್ಯಾರ್ಥಿಗಳು ಪ್ರಾ. ಶಾ. ಪ್ರ. ಪರೀಕ್ಷೆಗೆ ಕಟ್ಟಬೇಕಾಗುವದು.

ಸಾಂಘಿಕ ಜೀವನದ ಚಟುವಟಿಕೆಗಳ ವಿವರಗಳು ಜೊತೆಗಿರುವ ಅಭ್ಯಾಸ ಪತ್ರಿಕೆಯಲ್ಲಿ ನಮೂದಿತವಾಗಿದ್ದು ಶಾಲೆಗಳು ತಮ್ಮ ತಮ್ಮ ಪರಿಸರಕ್ಕೆ ಹಾಗೂ ಲಭ್ಯವಿರುವ ಅನುಕೂಲತೆಗಳಿಗೆ ಅನುಸರಿಸಿ ಅವುಗಳಲ್ಲಿ ಸಾಧ್ಯವಿದ್ದಷ್ಟು ಚಟುವಟಿಕೆಗಳನ್ನು ಸಂಘಟಿಸಬೇಕಾಗುವದು. ಒಂದು ವರ್ಷದ ಸಾಂಘಿಕ ಜೀವನದ ಕಾರ್ಯಕ್ರಮವನ್ನು ಆರಂಭದಲ್ಲಿ ತಯಾರಿಸಬೇಕು; ಮತ್ತು ಭಾಗವಹಿಸುವಂಥ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಂದ ಬರೆಯಿಸಿಡಬೇಕು.

೪. ಮೂಲೋದ್ಯೋಗ ಹಾಗೂ ಸಾಂಘಿಕ ಜೀವನ ಇವೆರಡು ವಿಷಯಗಳಲ್ಲಿ ವರ್ಷದ ಕೆಲಸವನ್ನು ಪರೀಕ್ಷಿಸಬೇಕು ಮತ್ತು ಗುಣಪತ್ರಿಕೆಗಳನ್ನು ಇಡಬೇಕು. ವರ್ಷದ ಕೆಲಸಕ್ಕೆ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ ಮನ್ನಣೆ ಕೊಡುವ ಕುರಿತು ವಿಚಾರ ನಡೆದಿದ್ದು ಈ ಬಗ್ಗೆ ಅವಶ್ಯವಿದ್ದ ಪರಿಪತ್ರವು ಸಕಾಲದಲ್ಲಿ ಹೊರಡಿಸಲ್ಪಡುವದು.

೫. ಇದನ್ನು ಸಂಬಂಧಿಸಿದವರೆಲ್ಲರ ಅವಗಾಹನೆಗೆ ತರಬೇಕು.

ಸಹಿ:- **ಡಿ. ವ್ಹಿ. ಚಿಕ್ಕರಮನೆ**
ಶಿಕ್ಷಣ ಖಾತೆಯ ಡಾಯರೆಕ್ಟರರ ಪರವಾಗಿ

ಮೂಲೋದ್ಯೋಗದ ಅಭ್ಯಾಸ ಪತ್ರಿಕೆ

ನೂಲುವದು ಮತ್ತು ನೇಯುವದು

೧ನೆಯ ಇಯತ್ತೆ

ಮಣ್ಣಿನ ಕೆಲಸ

ತಾತ್ವಿಕ

೧) ಮಣ್ಣಿನ ವಿವಿಧ ಬಣ್ಣಗಳನ್ನು ಗುರುತಿಸುವದು.

೨) ಮಣ್ಣಿನ ಉರುಟುತನವನ್ನು ಅಥವಾ ನುಣುಪನ್ನು ಗುರುತಿಸುವದು.

೩) ಹಸಿ ಮಣ್ಣು.

೪) ಮಣ್ಣಿನಲ್ಲಿ ಅತಿಯಾಗಿ ನೀರು ಕೂಡಿಸುವದರಿಂದ ಆಗುವ ಪರಿಣಾಮಗಳು.

೫) ನೆರಳಿನಲ್ಲಿ ಮತ್ತು ಸೂರ್ಯನ ಬಿಸಿಲಿನಲ್ಲಿ ಒಣಗಿಸುವದು. ಅದರ ಪರಿಣಾಮಗಳನ್ನು ನಿರೀಕ್ಷಿಸುವದು.

೬) ಹೊಲಗಳಿಂದ ಮಣ್ಣನ್ನು ತರುವದು. ಮಣ್ಣನ್ನು ಚೀಲಗಳಲ್ಲಿ ಸಂಗ್ರಹಿಸುವದು.

೭) ಜಿಗಟು ಮಾಡಲು ಮಣ್ಣಿನಲ್ಲಿ ಅಂಟು, ಸಕ್ಕರೆ, ಹತ್ತಿಯ ತಂತುಗಳು, ಹುಲ್ಲು ಅಥವಾ ಕಟ್ಟಿಗೆಯ ಪುಡಿಯನ್ನು ಕೂಡಿಸುವದು.

ಪ್ರಾಯೋಗಿಕ

೧. **ಕೆಳಗಿನಂತೆ ವಸ್ತುಗಳನ್ನು ತಯಾರಿಸುವದು.**
ಗುಂಡು, ಸಣ್ಣ ಗುಂಡುಗಳು, ಬಿಸಕಗಳು, ಮಣಿಗಳು ಇತ್ಯಾದಿ.

೨. **ಉರುಳಿಸುವದು**
ಶಂಖ್ವಾಕೃತಿಯ ಅಥವಾ ಊಳಕಾಕಾರದ (ಸಿಲೆಂಡರ) ಗಜ್ಜರಿ, ಮೂಲಂಗಿ, ಗೆಣಸು, ಬಾಳೆಯ ಹಣ್ಣು ಇತ್ಯಾದಿ ತಯಾರಿಸುವದು.

೩. **ಚಪ್ಪಟೆ ಮಾಡುವದು**
ಬಿಸ್ಕೀಟು, ಪೇಢೆ, ಚಪಾತಿ, ಗುಂಡಿ, ತಾಟು, ಹಂಚು ಇತ್ಯಾದಿ ತಯಾರಿಸುವದು.

೪ **ಸಾಮಾನ್ಯ ವಸ್ತುಗಳು**
ಮಾವು, ಪೇರಲ, ಸೇಬು, ಅಂಜೂರ, ದ್ರಾಕ್ಷಿ, ಮೊದಲಾದ ಹಣ್ಣುಗಳು. ಕಲ್ಲಂಗಡಿ ಹಣ್ಣಿನ ಹೋಳುಗಳು ಮತ್ತು ತತ್ತಿಗಳು.

೫. ಬೆರಳುಗಳಿಂದ ತಿಕ್ಕಿ ನುಣುಪು ಮಾಡುವದು ಮತ್ತು ಮಣ್ಣಿನ ಮೂಲ ಬಣ್ಣಗಳಿಂದ ಬಣ್ಣ ಕೊಡುವದು.

೬. **ಕಾಗದದ ಮುದ್ದೆಯ ವಸ್ತುಗಳು—**
ತಾಟು, ಬಟ್ಟಲು, ಕಾಜಿನ ಪಾತ್ರೆ ಇತ್ಯಾದಿ ಪಡಿಯಚ್ಚು ಉಪಯೋಗಿಸಬೇಕು. ವಸ್ತುಗಳು ರದ್ದೀ ಕಾಗದದ ಮುದ್ದೆಯಿಂದ ತಯಾರಿಸಲ್ಪಡಬೇಕು.

ನೂಲುವದು

ಸಮವಾಯಜ್ಞಾನ

೧) ಹತ್ತಿಯ ಉಪಯೋಗ.

೨) ಹತ್ತೀ ಸ್ವಚ್ಛಮಾಡುವ ಸರಿಯಾದ ಪದ್ಧತಿ.

ಪ್ರಾಯೋಗಿಕ

೧) ಕಚ್ಚಾ ಹತ್ತಿಯನ್ನು ಸ್ವಚ್ಛಮಾಡುವದು.

೨) ಮೇಲಿನ ಇಯತ್ತೆಗಳಲ್ಲಿರುವ ವಿದ್ಯಾರ್ಥಿಗಳಿಗೆ ನೂಲುವದರಲ್ಲಿ ಹಾಗೂ ನೇಯುವದರಲ್ಲಿ ಸಹಾಯ ಮಾಡುವದು.

ಸೂಚನೆ:— ಈ ಇಯತ್ತೆಗೆ ಉತ್ಪಾದನೆಯನ್ನು ನಿರ್ದಿಷ್ಟ ಪಡಿಸಿಲ್ಲ. ವಿದ್ಯಾರ್ಥಿಗಳು ಹತ್ತಿಯನ್ನು ಸ್ವಚ್ಛ ಮಾಡುವದರಲ್ಲಿ ಸಹಾಯ ಮಾಡಬಹುದು. ಈ ಕೆಲಸಕ್ಕಾಗಿ ಪ್ರತಿಯೊಂದು ಗುಂಪಿನಲ್ಲಿ ನಾಲ್ಕು ವಿದ್ಯಾರ್ಥಿಗಳು ಬರುವಂತೆ ಗುಂಪುಗಳನ್ನು ರಚಿಸಿ, ಮೇಲಿನ ಇಯತ್ತೆಗಳ ವಿದ್ಯಾರ್ಥಿಗಳಿಗೆ ಜೋಡಿಸಬೇಕು.

೨ನೆಯ ಇಯತ್ತೆ

ನೂಲುವದು

೧) ಹತ್ತಿಯನ್ನು ಬಿಡಿಸುವದು (ಹತ್ತಿ ಬೆಳೆಯುವಲ್ಲಿ) ಮತ್ತು ಕುಡ ಹಲಿಗೆಯಿಂದ ಅರೆಯುವದು.
೨) ಹಿಂಜುವದಕ್ಕಾಗಿ ಅರಳೆಯನ್ನು ಸ್ವಚ್ಛ ಮಾಡುವದು ಮತ್ತು ಸಿದ್ಧಗೊಳಿಸುವದು.
೩) ಸವ ತುನಾಯಿ.
೪) ಹಂಜೀ ಮಾಡುವದು.
೫) ತಕಲಿಯ ಮೇಲೆ ನೂಲುವದು.
೬) ಜೋಡೆಳಿ ಮಾಡುವದು,
೭) ಲಪೇಟದ ಮೇಲೆ ನೂಲನ್ನು ಸುತ್ತುವದು.

ಪಡೆಯಬೇಕಾದ ಮುಟ್ಟ

ಮೂಲೋದ್ಯೋಗದ ಕೆಲಸದ ದಿನಗಳು :— ೨೦೦
ತಕಲಿಯ ಮೇಲೆ ನೂಲುವ ಪ್ರತಿ ತಾಸಿನ ಸರಾಸರಿ ವೇಗ :— ೪೦ ಸುತ್ತುಗಳು.
ಓಟ್ಟು ಹುಟ್ಟುವಳಿ :— ತಕಲಿಯ ಮೇಲೆ ೬೪೦ ಸುತ್ತಿನ ಒಂಟೆಳೆಯ ೪ ಗುಂಡಿಗಳು.
ಸರಾಸರಿ ನಂಬರ :— ೮ ರಿಂದ ೧೦
ಸರಾಸರಿ ಶಕ್ತಿ :— ೧೦೦ಕ್ಕೆ ೫೦ ರಷ್ಟು
ಸರಾಸರಿ ಸಮಾನತೆ :— ೧೦೦ಕ್ಕೆ ೫೦ ರಷ್ಟು

ಸೂಚನೆ :— ಆರಂಭದಿಂದ ಮಕ್ಕಳು ಪರಿಮಾಣಕ್ಕಿಂತ ಯೋಗ್ಯತೆಗೆ ಹೆಚ್ಚು ಲಕ್ಷ್ಯಕೊಡುವಂತೆ ಕಲಿಸಲ್ಪಡಬೇಕು.

ಶಿಕ್ಷಕರು ವರ್ಗದ ಮೂಲೋದ್ಯೋಗದ ದೈನಿಕ ದಾಖಲೆಯನ್ನು ಇಡಬೇಕು.

ವಾಯ ಜ್ಞಾನ

೧) ಹತ್ತಿ ಬೆಳೆಯುವದರಿಂದ ಆರಂಭಿಸಿ ಅರಿವೆ ತಯಾರಾಗುವ ವರೆಗೆ, ಅರಿವೆ ತಯಾರಿಕೆಗೆ ಸಂಬಂಧಿತವಾಗುವ ಎಲ್ಲ ಕ್ರಿಯೆಗಳ ಸಂಪೂರ್ಣ ಜ್ಞಾನ.

೨) ಉತ್ತಮ ತಕಲಿಯ ಲಕ್ಷಣಗಳನ್ನು ಕಂಡು ಹಿಡಿಯುವದು.

೩) ಹಿಂಜುವಾಗ ಹಾಗೂ ನೂಲುವಾಗ ಉಪಯೋಗಿಸಲ್ಪಡುವ ವಿವಿಧ ಉಪಕರಣಗಳ ಹೆಸರು ಮತ್ತು ಉಪಯೋಗದ ಬಗ್ಗೆ ಜ್ಞಾನ ಮಾಡಿಕೊಳ್ಳುವದು.

೪) ಉತ್ತಮ ನೂಲಿನ ಲಕ್ಷಣಗಳನ್ನು ಕಂಡು ಹಿಡಿಯುವದು.

೫) ಒಂದು ದಿನದ ಕೆಲಸದ ಮೇಲಿಂದ ವಾರದ ನೂಲಿನ ಸುತ್ತುಗಳ ಸಂಖ್ಯೆಯನ್ನು ಕಂಡು ಹಿಡಿಯುವದು.

೬) ಬಿಲ್ಲಿನಿಂದ ಹಿಂಜುವದರ ಅವಶ್ಯಕತೆ.

೩ನೆಯ ಇಯತ್ತೆ

ಈ ವರ್ಗದ ಕೆಲಸದ ಕಾರ್ಯಕ್ರಮವು ಸಾಮಾನ್ಯವಾಗಿ ೨ನೆಯ ಇಯತ್ತೆಯಂತೆಯೇ ಇರಬೇಕು.

ತಕಲಿಯನ್ನು ತಿರುಗಿಸುವದರಲ್ಲಿ ಬಾಲಕರು ತಮ್ಮ ಜಾಣ್ಮೆಯನ್ನು ಕಾಯ್ದುಕೊಳ್ಳಬೇಕು ಹಾಗೂ ಬೆಳೆಸಬೇಕು ಅಂಕಿಯಲ್ಲಿ ದಿನದ ದಾಖಲೆಯನ್ನು ಅವರು ಇಡಬೇಕು. ವರ್ಷದ ಕೊನೆಯ ಹೊತ್ತಿಗೆ ಅವರು ನೂಲಿನ ನಂಬರು ಕಂಡು ಹಿಡಿಯಲು ಸಮರ್ಥರಾಗಬೇಕು.

ಪ್ರಗತಿಯ ಮಟ್ಟ

ಪ್ರತಿ ತಾಸಿಗೆ ತಕಲಿಯ ಮೇಲೆ ನೂಲುವ ಸರಾಸರಿ ವೇಗ :— ೬೦ ಸುತ್ತುಗಳು.
ಒಟ್ಟು ಹುಟ್ಟುವಳಿ :— ತಕಲಿಯ ಮೇಲೆ ೧೨ ಗುಂಡಿಗಳು.
ಸರಾಸರಿ ನಂಬರು :— ೧೦—೧೨
ಸರಾಸರಿ ಶಕ್ತಿ :— ೧೦೦ ಕ್ಕೆ ೬೦ರಷ್ಟು
ಸರಾಸರಿ ಸಮಾನತೆ :— ೧೮೦ ಕ್ಕೆ ೬೦ರಷ್ಟು

ಸಮವಾಯ ಜ್ಞಾನ

೧) ಸರಿಯಾಗಿ ಹಿಂಜದ ಅರಳೆಯನ್ನು ಗುರುತಿಸುವದು.

೨) ನೂಲಿನ ಶಕ್ತಿ ಹಾಗೂ ಸಮಾನತೆಗಳ ಮಹತ್ವವನ್ನು ಅರಿಯುವದು.

೪ನೆಯ ಇಯತ್ತೆ

ಈ ವರ್ಗದಲ್ಲಿ ರಾಟೆಯನ್ನೇ ಮುಖ್ಯವಾಗಿ ಉಪಯೋಗಿಸಬೇಕು. ಕೆಳಗಿನವುಗಳಲ್ಲಿಯ ಬೇಕಾದ ಒಂದು ನಮೂನೆಯ ರಾಟೆಯನ್ನು ಉಪಯೋಗಿಸಬಹುದು :—

(೧) ಕಿಸಾನ ಚರಖಾ (೨) ಯೆರವಡಾ ಚರಖಾ (೩) ಸ್ಥಾನಿಕ ನಮೂನೆಯ ಚರಖಾ.

ಪ್ರಗತಿಯ ಮಟ್ಟ

ರಾಟೆಯ ಮೇಲೆ ಪ್ರತಿ ತಾಸಿಗೆ ನೂಲುವ ಸರಾಸರಿ ವೇಗ :— ೧೦೦ ಸುತ್ತುಗಳು.

ಒಟ್ಟು ಹುಟ್ಟುವಳಿ :— ರಾಟೆಯ ಮೇಲೆ ೧೫—೨೦ ಗುಂಡಿಗಳು.

ಸರಾಸರಿ ನಂಬರು :— ೧೨—೧೪

ಸರಾಸರಿ ಶಕ್ತಿ :— ೧೦೦ ಕ್ಕೆ ೬೦ರಷ್ಟು

ಸರಾಸರಿ ಸಮಾನತೆ :— ೧೦೦ ಕ್ಕೆ ೬೦ರಷ್ಟು

ಸಮವಾಯ ಜ್ಞಾನ

೧) ನೂತ ನೂಲಿನ ನಂಬರನ್ನು ತೆಗೆಯಲು ಮಕ್ಕಳು ಕಲಿಯಲಿ.
೨) ಮಾಡಿದ ಕೆಲಸದ ದೈನಂದಿನ ಹಾಗೂ ಮಾಸಿಕ ಆಲೇಖವನ್ನು ಅವರು ಇಡಲಿ.
೩) ಅವರು ಸರಾಸರಿ ವೇಗ ಹಾಗೂ ನಂಬರುಗಳನ್ನು ತೆಗೆಯಲಿ.
೪) ಅವರು ಬೇರೆ ಬೇರೆ ಪ್ರಕಾರದ ಹತ್ತಿ ಹಾಗೂ ನೂಲಿನ ಯೋಗ್ಯತೆಗೆ ಅವುಗಳ ಸಂಬಂಧವನ್ನು ಗುರುತಿಸಲಿ.

೫ನೆಯ ಇಯತ್ತೆ

ಪ್ರತಿದಿನ ಸಾಮೂಹಿಕ ನೂಲುವದಕ್ಕಾಗಿ ಅರ್ಧ ತಾಸನ್ನು ಮೀಸಲಾಗಿರಿಸಬೇಕು.

ಪ್ರಾಯೋಗಿಕ

೧) ಹೊಲದಿಂದ ಹತ್ತಿಯನ್ನು ಬಿಡಿಸುವ ಕೆಲಸವನ್ನು ಮೊದಲು ಮಾಡಿಕೊಂಡು ನೇಯ್ಗೆಯ ವರೆಗಿನ ಎಲ್ಲ ಕ್ರಿಯೆಗಳನ್ನು ವರ್ಗದಲ್ಲಿ ಸಂಘಟಿಸಬೇಕು.
೨) ಬಿಲ್ಲಿನಿಂದ ಹಿಂಜಿ ಹಂಜಿ ತಯಾರಿಸುವದು.
೩) ರಾಟೆಯ ಕದರಿಗಾಗಿ ಮಾಲಾ ತಯಾರಿಸುವದು.
೪) ನೇಯ್ಗೆಗೆ ಸಂಬಂಧಿಸುವ ಗಂಟು ಹಾಕುವದು, ಕೆಚ್ಚುವದು, ಮುಂತಾದ ಸಾದಾ ಪ್ರಾರಂಭಿಕ ಕೆಲಸಗಳಲ್ಲಿ ರೂಢಿ ಮಾಡಿಸುವದು.
೫) ಆಸನಗಳನ್ನು ನೇಯುವದು :— ೧೮" × ೨ ಯಾರ್ಡುಗಳು ಅಥವಾ ಪ್ರತಿಯೊಂದು ೧೮"-೧೮" ಆಕೃತಿ ಇರುವ ೪ ಆಸನಗಳು.

ಮೂಲೋದ್ಯೋಗದ ಅಭ್ಯಾಸ ಪತ್ರಿಕೆ

ಪ್ರಗತಿಯ ಮಟ್ಟ

೧) ನೂಲುವದು :— ಮೇಲೆ ಹೇಳಿದ ಎಲ್ಲ ಕ್ರಿಯೆಗಳನ್ನು ಒಳಗೊಂಡು ೬೪೦ ಸುತ್ತಿನ **ಒಂಟೆಳೆಯ** ೧೧ ಗುಂಡಿಗಳು ಅಥವಾ ೬೪೦ ಸುತ್ತಿನ ಜೋಡೆಳೆಯ ೫ ಗುಂಡಿಗಳು.

೨) ರಾಟೆಯ ಮೇಲೆ ನೂಲುವ ಪ್ರತಿ ತಾಸಿನ ಸರಾಸರಿ ವೇಗ :— ೧೨೦ ಸುತ್ತುಗಳು.

೩) ಒಂಟೆಳೆ ನೂಲಿನ ಸರಾಸರಿ ನಂಬರು :— ೧೬—೧೮

೪) ಸರಾಸರಿ ಶಕ್ತಿ :— ೧೦೦ ಕ್ಕೆ ೬೦ರಷ್ಟು

೫) ಸರಾಸರಿ ಸಮಾನತೆ :— ೧೦೦ಕ್ಕೆ ೭೦ರಷ್ಟು

೬) ನೇಯುವದು :— ಆವಶ್ಯಕ ಕ್ರಿಯೆಗಳನ್ನೊಳಗೊಂಡು ೧೮"×೨ ಯಾರ್ಡು **ಆಸನ ಅಥವಾ** ಪ್ರತಿಯೊಂದು ೧೮"×೧೮" ಅಳತೆಯುಳ್ಳ ೪ ಆಸನಗಳು. ಪ್ರಾ**ರಂಭದಲ್ಲಿ** ಪ್ರತಿ ತಾಸಿನ ಪ್ರತ್ಯಕ್ಷ ನೇಯುವ ವೇಗವು ೩ ಫೂಟು ಇದ್ದದ್ದು **ವರ್ಷದ ಕೊನೆಗೆ** ೧ ಫೂಟಿಗೆ ಮುಟ್ಟಬೇಕು.

ಸಮವಾಯ ಜ್ಞಾನ

೧) ವಿವಿಧ ಕ್ರಿಯೆಗಳಲ್ಲಿಯ ವೇಗವನ್ನು ಸೂಚಿಸಲು ರೇಖಾಕೃತಿಗಳನ್ನು ಇಡುವದು.

೨) ನೂಲಿನ ಶಕ್ತಿಯನ್ನು ನಿರ್ಧರಿಸುವದು.

೩) ಉಪಯೋಗಿಸಿದ ಹತ್ತಿ ಹಾಗೂ ಅದರಿಂದ ನೂತ ನೂಲು ಇವುಗಳ ಪ್ರಮಾಣವನ್ನು **ಕಂಡು ಹಿಡಿ**ಯುವದು.

೪) ಸ್ಥಾನಿಕ ವಿವಿಧ ಹತ್ತಿಯ ಪ್ರಕಾರಗಳ ಜ್ಞಾನ ಮತ್ತು ಅವುಗಳನ್ನು **ಕಂಡು** ಹಿಡಿಯುವದು ಹಾಗೂ ಅವುಗಳ ಪರಸ್ಪರ ಗುಣದೋಷಗಳ ಜ್ಞಾನ.

೫) ಖಾದಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ತಿಳಿದುಕೊಳ್ಳುವಿಕೆ ಹಾಗೂ ಚರ್ಚೆ; ಖಾದಿಗೆ ಪ್ರಾಶಸ್ತ್ಯ ವೇಕೆ ?

೬) ಘರ್ಷಣೆ, ಕೀಲ, ಗತಿ, ಸವ್ಯ–ಅಪಸವ್ಯ ಇವುಗಳ ತತ್ವಗಳ ಬಗ್ಗೆ ಜ್ಞಾನ ಹಾಗೂ **ತಿಳಿವಳಿಕೆ.**

೬ನೆಯ ಇಯತ್ತೆ

ದಿನಾಲು ಅರ್ಧತಾಸನ್ನು ಸಾಮೂಹಿಕ ನೂಲುವಿಕೆಗೆ ಮೀಸಲಿಡಬೇಕು.

ಪ್ರಾಯೋಗಿಕ

೧) ನೂಲುವದರಲ್ಲಿ ಅಡಕವಾದ ಎಲ್ಲಾ ಕ್ರಿಯೆಗಳು ವಿಧಿತವಾಗುವಂತೆ ಚರಖಾದ **ಮೇಲೆ ನೂಲು**ವದು.

೨) **ನೇಯುವದು** :— ನೇಯಿಗೆಗೆ ಸಂಬಂಧಿಸಿದ ಕೆಳಗೆ ಕಾಣಿಸಿದ ಕ್ರಿಯೆಗಳನ್ನು ಮಾಡುವದು.
ನೂಲನ್ನು ತೋಡುವದು, ಅವಶ್ಯವಿದ್ದರೆ ಹುರಿ ಹಾಕುವದು, ಹಾಸು ತಯಾರಿಸುವದು, ಕಡಿ

ಮಾಡುವದು, ಕೆಚ್ಚುವದು, ಗಂಟು ಹಾಕುವದು, ಮಗ್ಗದ ಮೇಲೆ ಹಾಸನ್ನು ಜೋಡಿಸುವದು, ನೇಯಲಿಕ್ಕೆ ಕಂಡಿಕೆಯನ್ನು ಸುತ್ತುವದು, ನೇಯುವದು ಇತ್ಯಾದಿ.

೩) ಬಿದಿರಿನಿಂದ ಉಪಕರಣಗಳನ್ನು ತಯಾರಿಸುವದು.
ಉದಾ :— ಹಿಂಜುವ ಬಿಲ್ಲು, ಸುತ್ತುವ ಸ್ಟ್ಯಾಂಡ (ಡೋಲ), ಹೆಂಜಿಕಡ್ಡಿಗಳು ಇತ್ಯಾದಿ.

೪) ಸುಲಭ ಸಾದಾ ಕ್ರಿಯೆಗಳಿಂದ ನೂಲಿಗೆ ಬಣ್ಣ ಹಾಕುವದು.

ಮುಟ್ಟಬೇಕಾದ ಮಟ್ಟ

೧) ಚರಖಾದಿಂದ ಒಂಟಿಳೆಯ ಹತ್ತು ಗುಂಡಿ ನೂಲು ತೆಗೆಯುವದು ಅಥವಾ ೬೪೦ ಸುತ್ತಿನ ೫ ಗುಂಡಿ ಹುರಿಗಿಂಟಿನ ನೂಲನ್ನು ಚರಖಾದ ಮೇಲೆ ತೆಗೆಯುವದು.
೨) ಚರಖಾದಿಂದ ನೂಲುವದರ ಸರಾಸರಿ ವೇಗ :— ತಾಸಿಗೆ ೧೫೦ ಸುತ್ತುಗಳು.
೩) ಸರಾಸರಿಯ ನಂಬರು :— ೧೬ ರಿಂದ ೧೮
೪) ಸರಾಸರಿ ಶಕ್ತಿ :— ೧೦೦ ಕ್ಕೆ ೬೦ರಷ್ಟು
೫) ಸರಾಸರಿ ಸಮಾನತೆ :— ೧೦೦ ಕ್ಕೆ ೭೦ ರಷ್ಟು
೬) ೨೭" ಅಗಲವಾದ ನಾಲ್ಕು ಯಾರ್ಡು ಅರಿವೆಯನ್ನು ನೇಯುವದು. [ಜೋಡೆಳೆಯ ನೂಲಿನಿಂದ] ನೇಯುವ ವೇಗವು ಪ್ರಾರಂಭದಲ್ಲಿ ಪ್ರತಿ ತಾಸಿಗೆ ೩' ಇದ್ದು ವರ್ಷಾಂತ್ಯದಲ್ಲಿ ಅದು ೧'ನ ವರೆಗೆ ಮುಟ್ಟಬೇಕು.

ಸಮವಾಯ ಜ್ಞಾನ

೧) ನೇಯಿಗೆಗೆ ಸಂಬಂಧಪಟ್ಟ ಶಬ್ದಗಳ ಅರ್ಥ ಹಾಗೂ ಉಪಯೋಗ.
೨) ಮಗ್ಗದ ಭಾಗಗಳ ಹೆಸರುಗಳು, ಅರ್ಥ ಮತ್ತು ಉಪಯೋಗ.
೩) ಲಾವುಗನ್ನಡಿಯಿಂದ ಅರಿವೆಯ ನೇಯಿಗೆಯ ಸಾಂದ್ರತೆಯನ್ನು ನಿರೀಕ್ಷಿಸುವದು.
೪) ನೇಯಿದ ಖಾದೀ ಅರಿವೆಯನ್ನು ಚೌರಸ ಯಾರ್ಡಿನಲ್ಲಿ ಅಳೆದು ಲೆಕ್ಕ ಮಾಡುವದು.
೫) ಗಂಜಿಯ ಅವಶ್ಯಕತೆ ಮತ್ತು ಅದರ ಮಿಶ್ರಣವನ್ನು ತಯಾರಿಸುವ ಪದ್ಧತಿಗಳ ಅಭ್ಯಾಸ.
೬) ನೂಲನ್ನು ಒದ್ದೆಯಾಗಿ ಇಡುವದರ ಅವಶ್ಯಕತೆ. ಖಾದಿಯನ್ನು ನೇಯುವ ವಿವಿಧ ಕ್ರಿಯೆಗಳ ಮೇಲೆ ಹವಾಮಾನದಿಂದಾಗುವ ಪರಿಣಾಮಗಳು.
೭) ಖಾದಿಯ ತಯಾರಿಕೆಯಲ್ಲಿ ಅಡಕವಾದ ವಿವಿಧ ಕಾರ್ಯಗಳು:— ಹತ್ತಿಯನ್ನು ಅರೆಯುವದು, ಹಿಂಜುವದು, ನೂಲುವದು, ಉಂಕಿಮಾಡುವದು, ನೇಯುವದು. ನೂಲುವದರಲ್ಲಿ ಮತ್ತು ನೇಯುವದರಲ್ಲಿ ಆದ ಹಾಳನ್ನು ಕಂಡುಹಿಡಿಯುವದು. ವರ್ಷದಲ್ಲಿ ಒಬ್ಬನಿಗೆ, ಒಂದು ಕುಟುಂಬಕ್ಕೆ, ವರ್ಗಕ್ಕೆ, ಸಾಲೆಗೆ ಮತ್ತು ಹಳ್ಳಿಗೆ ಬೇಕಾಗುವ ಅರಿವೆಯ ಪರಿಮಾಣವನ್ನು ಕಂಡುಹಿಡಿಯುವದು.

ನೂಲಿಗೆ ಬಣ್ಣ ಹಾಕುವ ಪದ್ಧತಿ. ಬಣ್ಣಗಳು ಹಾಗು ವರ್ಣದ್ರವ್ಯಗಳು. ಹಳ್ಳಿಯ ಜೀವನದಲ್ಲಿ ಗೃಹೋದ್ಯೋಗಗಳ ಸ್ಥಾನವನ್ನು ಕುರಿತು ಅಭ್ಯಸಿಸುವದು.

———

ಮೂಲೋದ್ಯೋಗದ ಅಭ್ಯಾಸ ಪತ್ರಿಕೆ

೭ನೆಯ ಇಯತ್ತೆ

ದಿನಾಲು ಅರ್ಧ ತಾಸನ್ನು ಸಾಮೂಹಿಕ ನೂಲುವದಕ್ಕಾಗಿ ಮೀಸಲಾಗಿಡಬೇಕು.

ಪ್ರಾಯೋಗಿಕ

೧) ನೂಲುವದರಲ್ಲಿ ಅಡಕವಾಗಿರುವ ಎಲ್ಲ ಕ್ರಿಯೆಗಳ ಜ್ಞಾನವಾಗುವಂತೆ ಚರಖಾದಿಂದ ನೂಲುವದು.

೨) ನೇಯುವದು :— ಆರನೆಯ ಇಯತ್ತೆಗಾಗಿ ವಿವರಿಸಲಾದ ಎಲ್ಲ ಕ್ರಿಯೆಗಳು.
ಇದರ ಹೊರತಾಗಿ ಕೆಳಗೆ ಕಾಣಿಸಿದವುಗಳನ್ನು ಕಲಿಸತಕ್ಕದ್ದು.

ಅ) ನೇಯುವದಕ್ಕಾಗಿ ನೂಲನ್ನು ಆರಿಸುವದು.

ಬ) ನೇಯಿಗೆಯ ದರಗಳನ್ನು ಕಂಡು ಹಿಡಿಯುವದು ಮತ್ತು ನೇಯಿದ ಅರಿವೆಯ ಬೆಲೆಯನ್ನು ನಿರ್ಧರಿಸುವದು.

ಕ) ಖಾದಿಯನ್ನು ಒಗೆಯುವದು ಮತ್ತು ಮಡಿಕೆ ಹಾಕುವದು.

ಡ) ಪ್ರಾಯೋಗಿಕ ಕೆಲಸದ ಲೆಕ್ಕ ಇಡುವದು. ರೇಖಾ ಚಿತ್ರಗಳನ್ನು ತೆಗೆಯುವದು.

ಇ) ಬಣ್ಣ ಹಾಕುವ ಮುಂದುವರಿದ ಕ್ರಿಯೆಗಳು.

ಸಾಧಿಸಬೇಕಾದ ಮಟ್ಟ

೧) ಚರಖಾದಿಂದ ನೂಲುವದು :— ೬೪೦ ಸುತ್ತುಗಳ ಒಂಟೆಳೆಯ ೧೦ ಗುಂಡಿ ನೂಲು ಇಲ್ಲವೆ ಜೋಡು ಹುರಿಗಿಂಟಿನ ೫ ಗುಂಡಿ ನೂಲು.

೨) ಚರಖಾದಿಂದ ನೂಲುವದರ ಸರಾಸರಿ ವೇಗ :— ತಾಸಿಗೆ ೧೮೦ ಸುತ್ತುಗಳು.

೩) ಸರಾಸರಿ ನಂಬರು :— ೧೮ ರಿಂದ ೨೦

೪) ಸರಾಸರಿ ಶಕ್ತಿ :— ೧೦೦ ಕ್ಕೆ ೬೦ರಷ್ಟು

೫) ಸರಾಸರಿ ಸಮಾನತೆ :— ೧೦೦ ಕ್ಕೆ ೭೦ರಷ್ಟು

೬) ೩೦ ರಿಂದ ೩೬ ಇಂಚು ಅಗಲವಾದ ೬ ಯಾರ್ಡು ಅರಿವೆಯನ್ನು ನೇಯುವದು. ಆರಂಭದಲ್ಲಿ ನೇಯುವಾಗ ಪ್ರತಿ ತಾಸಿಗೆ ¾' ಇದ್ದು ವರ್ಷಾಂತ್ಯಕ್ಕೆ ೧' ಆಗತಕ್ಕದ್ದು.

ಸಾಮಾನ್ಯ ಜ್ಞಾನ

೧) ಕೊಟ್ಟ ಉದ್ದಳತೆ, ಅಗಲಳತೆ ಮತ್ತು ಸಾಂದ್ರತೆಯ ಖಾದಿ ಅರಿವೆಗೆ ಬೇಕಾಗುವ ನೂಲಿನ ಪ್ರಮಾಣವನ್ನು ಲೆಕ್ಕಮಾಡಿ ಕಂಡುಹಿಡಿಯುವದು.

೨) ಬೇರೆ ಬೇರೆ ಪ್ರಕಾರದ ಸಾಂದ್ರತೆಯ ಜ್ಞಾನ.

೩) ಗುಂಡಿಗಳನ್ನು ನೀರಿನಲ್ಲಿ ನೆನೆ ಹಾಕುವದರ ತುಲನಾತ್ಮಕ ಮಹತ್ವ.

೪) ಉಂಕಿ ಮಾಡುವದರಿಂದ ಅರಿವೆಯ ಮೇಲೆ ಆಗುವ ಪರಿಣಾಮಗಳು.

೫) ಜಮಾಖರ್ಚನ್ನು ಇಡುವದು.

೬) ಸ್ವದೇಶಿ ಚಳವಳಿ.

೭) ಮಹಾತ್ಮಾ ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮ ಹಾಗು ಖಾದಿ.

೮) ಘರ್ಷಣೆಯನ್ನು ಕಡಿಮೆ ಮಾಡಲು ಉಪಯೋಗಿಸುವ ಸಾಧನಗಳು.

೯) ಹಿಂಜುವ, ನೂಲುವ, ಮತ್ತು ನೇಯಿಗೆಯ ಹಳೆಯ ಹಾಗು ಹೊಸ ಉಪಕರಣಗಳ ಇತಿಹಾಸ.

ಸೂಚನೆ :— ವಸ್ತ್ರಸ್ವಾವಲಂಬನವನ್ನು ಪ್ರತಿಯೊಂದು ಸಾಲೆಯಲ್ಲಿ ಆರಂಭಿಸತಕ್ಕದ್ದು ಮತ್ತು ಅರಿವೆಯಲ್ಲಿ ಸ್ವಾವಲಂಬನವನ್ನು ಪಡೆಯಲು ವಿದ್ಯಾರ್ಥಿಗಳು ಸಾಲೆಯ ಅವಧಿಗಳನ್ನು ಬಿಟ್ಟು ಉಳಿದ ವೇಳೆಯಲ್ಲಿ ಪ್ರತಿ ತಿಂಗಳಿಗೆ ಪ್ರತಿಯೊಬ್ಬನು ಕನಿಷ್ಟ ೫ ಗುಂಡಿ ಒಂಟೆಳೆಯ ನೂಲನ್ನು ನೂಲುವಂತೆ ಉತ್ತೇಜನವೀಯಬೇಕು.

ಕೈತೋಟ ಮತ್ತು ಒಕ್ಕಲತನ

ಈಗಿದ್ದ ಅಭ್ಯಾಸ ಪತ್ರಿಕೆಯಲ್ಲಿ ಯಾವದೇ ಬದಲಾವಣೆಯಾಗಿಲ್ಲವಾದ್ದರಿಂದ ಅದನ್ನೇ ಎಲ್ಲ ವರ್ಗಗಳಲ್ಲಿ ಮುಂದುವರಿಸಬೇಕು.

ರಟ್ಟಿನಕೆಲಸ ಮತ್ತು ಕಟ್ಟಿಗೆಯ ಕೆಲಸ

ಈಗಿದ್ದ ಅಭ್ಯಾಸ ಪತ್ರಿಕೆಯಲ್ಲಿ ಯಾವದೇ ಬದಲಾವಣೆಯಾಗಿಲ್ಲವಾದ್ದರಿಂದ ಅದನ್ನೇ ಎಲ್ಲ ವರ್ಗಗಳಲ್ಲಿ ಮುಂದುವರಿಸಬೇಕು.

ಅಭ್ಯಾಸ ಪತ್ರಿಕೆಯಲ್ಲಿ ನಿರ್ದಿಷ್ಟಪಡಿಸದಿದ್ದರೂ ರಟ್ಟಿನ ಕೆಲಸ ಮತ್ತು ಕಟ್ಟಿಗೆಯ ಕೆಲಸದ ಸಾಲೆಗಳು ಸ್ಥಾನಿಕ ಬೇಡಿಕೆಗಳಿದ್ದ ಮತ್ತು ಸಹಜವಾಗಿ ಮಾರಬಹುದಾದ ವಸ್ತುಗಳನ್ನು ತಯಾರಿಸತಕ್ಕದ್ದು.

ಉಣ್ಣೆಯನ್ನು ನೂಲುವದು ಮತ್ತು ನೇಯುವದು

ಹತ್ತಿಯನ್ನು ನೂಲುವ ಮತ್ತು ನೇಯುವ ಅಭ್ಯಾಸ ಪತ್ರಿಕೆಯಲ್ಲಿ ನಿರ್ದಿಷ್ಟಪಡಿಸಿದ ಕೆಲಸದ ಮಟ್ಟವನ್ನು ಅನುಸರಿಸಬೇಕು. ಒಂದನೆಯ ಇಯತ್ತೆಯಲ್ಲಿ ಉಣ್ಣೆಯನ್ನು ಸ್ವಚ್ಛ ಮಾಡುವದನ್ನು ಹಾಗು ಮಣ್ಣಿನ ಕೆಲಸವನ್ನು ನಿರ್ದೇಶಿಸಿದಂತೆ ಆರಂಭಿಸತಕ್ಕದ್ದು.

ಸಾಂಘಿಕ ಜೀವನದ ಅಭ್ಯಾಸಕ್ರಮ

೧ ರಿಂದ ೭ ನೆಯ ಇಯತ್ತೆಗಳ ಸಲುವಾಗಿ

ಇಯತ್ತೆ ೧ ರಿಂದ ೪

೧] ಒಬ್ಬ ಇಲ್ಲವೆ ಹೆಚ್ಚು ವಿದ್ಯಾರ್ಥಿಗಳ ಜನ್ಮದಿನದ ಆಚರಣೆ.

೨] ಸ್ವಚ್ಛತೆಯ ದೈನಂದಿನ ಚಟುವಟಿಕೆಗಳು. ಉದಾ :— ವೈಯಕ್ತಿಕ ಸ್ವಚ್ಛತೆ; ವ್ಯಕ್ತಿಗತ ವಸ್ತುಗಳ ಸ್ವಚ್ಛತೆ, ವರ್ಗದ ಸ್ವಚ್ಛತೆ, ಸಾಲೆಯ ಸ್ವಚ್ಛತೆ, ಮೂತ್ರಿ, ಭಾವಿ ಮೊದಲಾದ ಸಾಮೂಹಿಕ ಸ್ಥಳಗಳ ಸ್ವಚ್ಛತೆ.

೩] ಕುಡಿಯಲಿಕ್ಕೆ ನೀರು ಸಂಗ್ರಹಿಸುವದು.

೪] ನಿತ್ಯದ ಪ್ರಾರ್ಥನೆಗಳು.

ಮೂಲೋದ್ಯೋಗದ ಅಭ್ಯಾಸ ಪತ್ರಿಕೆ

೫] ಧಾರ್ಮಿಕ, ಸಾಮಾಜಿಕ, ರಾಷ್ಟ್ರೀಯ, ಸಾಮಾಜಿಕ-ಧಾರ್ಮಿಕ ಹಾಗೂ ಋತುಮಾನಕ್ಕೆ ಅನುಸರಿಸಿ ಬರುವ ಹಬ್ಬಗಳ ಆಚರಣೆ.

೬] ಚಿಕ್ಕ ಪ್ರವಾಸಗಳು ಹಾಗೂ ವನಭೋಜನಗಳು.

೭] ವಿಶಿಷ್ಟ ದಿನಗಳ ಆಚರಣೆ. ಉದಾ :- (೧) ಪಾಲಕರ ದಿನ (೨) ಸಾಲೆಯ ದಿನ (೩) ಸ್ವಚ್ಛತೆಯ ದಿನ ಇತ್ಯಾದಿ.

೮] ಮನರಂಜನೆಯ ಕಾರ್ಯಕ್ರಮಗಳು, ಸರಳ ಸಂಭಾಷಣೆಗಳು, ಹಳ್ಳಿಯ ನೃತ್ಯ, ಜಾನಪದ ಗೀತೆಗಳು, ಹಳ್ಳಿಯ ಕಥೆಗಳು, ಶಿಬಿರಾಗ್ನಿಗಳು.

೯] ಪಂದ್ಯಾಟ ಕೂಟಗಳು.

೧೦] ಎತ್ತರ, ತೂಕ, ಎದೆ, ಇತ್ಯಾದಿ ಆರೋಗ್ಯದ ದಾಖಲೆಗಳು.

೧೧] ಪ್ರಥಮ ಚಿಕಿತ್ಸೆಯ ಆರಂಭದ ಜ್ಞಾನ.

೧೨] ವಿವಿಧ ಚಟುವಟಿಕೆಗಳನ್ನು ಹಾಗೂ ಸಾಂಘಿಕ ಜೀವನವನ್ನು ಸಂಘಟಿಸುವಲ್ಲಿ ಸ್ವಾಯತ್ತತೆ; ನಾಯಕತ್ವ, ಆಜ್ಞಾಧಾರಕತ್ವದಲ್ಲಿ ತರಬೇತು.

೧೩] ವರ್ಗದ ಕೋಣೆಯಲ್ಲಿ, ಆಟದ ಮೈದಾನದಲ್ಲಿ ಹಾಗೂ ಇಡೀ ಸಮಾಜದಲ್ಲಿ ಸಾಮಾಜಿಕ ಅರಿವು.

೧೪] ಆರೋಗ್ಯ ಹಾಗೂ ನೈರ್ಮಲ್ಯ ಚಟಗಳನ್ನು ಹಾಗೂ ಸಾಮಾಜಿಕ ಹೊಣೆಗಾರಿಕೆಯ ಅರಿವನ್ನು ಮೇಲಿನ ಕಾರ್ಯಕ್ರಮದಿಂದ ಬೆಳೆಸುವದು.

ಇಯತ್ತೆ ೫ ರಿಂದ ೭

೧] ಕೆಳಗೆ ಕೊಟ್ಟ ಚಟುವಟಿಕೆಗಳಲ್ಲದೆ ಒಂದರಿಂದ ನಾಲ್ಕನೆಯ ಇಯತ್ತೆಗಳಿಗಾಗಿ ವಿವರಿಸಿದ ಸಾಂಘಿಕ ಜೀವನದ ಕಾರ್ಯಕ್ರಮವನ್ನು ಅನುಸರಿಸಬೇಕು ಮತ್ತು ರೂಢಿ ಮಾಡಿಸಬೇಕು.

೨] ಗ್ರಾಮದ ಸ್ವಚ್ಛತೆ, ಸಂಗ್ರಹ ಕೋಣೆ, ಗುರುಗಳ ಹಾಗೂ ಮುಖ್ಯಗುರುಗಳ ಕೋಣೆಗಳ ಸ್ವಚ್ಛತೆ, ಕಸದ ಪೀಕದಾನಿಗಳ ಸ್ವಚ್ಛತೆ ಇತ್ಯಾದಿ.

೩] ಐತಿಹಾಸಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಧಾರ್ಮಿಕ ಮಹತ್ವದ ಸ್ಥಳಗಳಿಗೆ ಪ್ರವಾಸಗಳು. ಕಾಲುನಡಿಗೆಯ ಚಿಕ್ಕ ಪ್ರವಾಸಗಳು.

೪] ಋಷಿಗಳ, ಕವಿಗಳ, ಸಾಹಿತಿಗಳ, ವಿಜ್ಞಾನಿಗಳ, ಮಾನವ ಕಲ್ಯಾಣಕರ್ತರ ಪುಣ್ಯತಿಥಿ ಆಚರಣೆ.

೫] ವಿಶಿಷ್ಟ ದಿನಗಳ ಆಚರಣೆ:—
(೧) ಪಿಡುಗಿನ ದಿನ. (೨) ಮಾನವ ಹಕ್ಕು ಬಾಧ್ಯತೆಗಳ ದಿನ. (೩) ರಾಷ್ಟ್ರಸಂಘ (ಯುನೋ ದಿನ). (೪) ರಾಷ್ಟ್ರೀಯ ದಿನಗಳು. (೫) ಧ್ವಜದ ದಿನ ಇತ್ಯಾದಿ.

೬] ಕಲಾಪಥಕ, ಭಜನ, ನಾಟಕ ಮುಂತಾದವುಗಳ ಸಂಘಟನೆಯ ಮುಖಾಂತರ ಮನರಂಜನೆಯ ಕಾರ್ಯಕ್ರಮಗಳು.

೭] ಕುಸ್ತಿ.

೮] ಬಳಗದ ಮತ್ತು ಸ್ಥಾನಿಕ ವಿಭಾಗದ ಸಲುವಾಗಿ ಒಂದು ಸಹಕಾರಿ ಭಾಂಡಾರದ ಸಂಘಟನೆ.

೯] ಗ್ರಾಮದ ಅಥವಾ ಯಾವದೊಂದು ವಿಭಾಗದ ಯೋಜನೆ.

೧೦] ಸಮಾಜ ಸೇವಾ ಸಂಘ, ಗ್ರಾಮ ಸೇವಾ ದಳಗಳು.

೧೧] ಭಾಷಣಗಳು ಮತ್ತು ಚರ್ಚೆಗಳು.

೧೨] ಅಧ್ಯಯನ ಮಂಡಲ ಮತ್ತು ವಾಚನಾಲಯ.

೧೩] ಪ್ರದರ್ಶನಗಳು.

೧೪] ಪ್ರಚಲಿತ ಸಂಗತಿಗಳು, ಸುದ್ದಿಗಳ ಪತ್ರಿಕೆಗಳನ್ನು ಸಂಪಾದಿಸುವದು ಮತ್ತು ಮಾಸಿಕ ಹಾಗೂ ನಿಯತಕಾಲಿಕಗಳನ್ನು ತಯಾರಿಸುವದು.

೧೫] ಸಮಾಜ ಶಿಕ್ಷಣದ ಕಾರ್ಯ ಮತ್ತು ಗೃಹ ವರ್ಗಗಳು.

೧೬] ಶ್ರಮದಾನ.

೧೭] ಸರಕಾರದ ವಿವಿಧ ರಾಷ್ಟ್ರನಿರ್ಮಾಣ ಯೋಜನೆಗಳಲ್ಲಿ ಭಾಗವಹಿಸುವದು.
ಉದಾ :- ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಇತ್ಯಾದಿ.

೧೮] ಅಡಿಗೆ ಮಾಡುವದು ಮತ್ತು ಸಮಾಜಕ್ಕೆ ಆಹಾರ ಬಡಿಸುವದು. ಸಾಮಾಜಿಕ ಹಾಗೂ ಸ್ವಂತದ ಅಡಿಗೆಯ ಪಾತ್ರೆಗಳನ್ನು ತೊಳೆಯುವದು.

೧೯] ಸ್ಥಳೀಯ ಜಾತ್ರೆ ಮತ್ತು ಸಾರ್ವಜನಿಕ ಸಮಾರಂಭಗಳಲ್ಲಿ ಸ್ವಯಂ ಸೇವಕರೆಂದು ಹೋಗುವದು ಮತ್ತು ಸಮಾಜಕ್ಕೆ ಅವಶ್ಯ ಬಿದ್ದಾಗ ಉಪಯೋಗವಾಗುವದು.

೨೦] ಮಾಡಿದ ಕೆಲಸದ ದಿನಚರಿ ಮತ್ತು ವಿವರಗಳನ್ನು ಬರೆದಿಡುವದು.

"ಕನ್ನಡ ಪ್ರಾಥಮಿಕ ಶಿಕ್ಷಣ"

(ಪ್ರತಿ ತಿಂಗಳ ದಿನಾಂಕ ೧೫ ರಂದು ಪ್ರಕಟವಾಗುವದು)

ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಲೇಖನಗಳನ್ನು ಪ್ರಕಟಿಸುವ ಮಾಸಪತ್ರಿಕೆ ಇದೊಂದೇ. ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಶಿಕ್ಷಣ ತಜ್ಞರಿಂದ ಬರೆದುಬಂದ ಲೇಖನಗಳಿಗೆ ಪ್ರಾಶಸ್ತ್ಯ ಕೊಡಲಾಗುವದು. ಲೇಖಕರು ತಮ್ಮ ಬರೆಹಗಳ ಎರಡು ಪ್ರತಿಗಳನ್ನು ಕಳುಹಿಸಿಕೊಡಬೇಕು. ಸ್ವೀಕೃತವಾದ ಲೇಖನಗಳಿಗೆ ಯೋಗ್ಯ ಸಂಭಾವನೆ ಕೊಡಲಾಗುವದು ಮತ್ತು ಶೈಕ್ಷಣಿಕ ಪುಸ್ತಕಗಳ ಜಾಹೀರಾತುಗಳನ್ನು ಕೆಳಗೆ ತೋರಿಸಿದ ದರದಿಂದ ನಮ್ಮ ಮಾಸಪತ್ರಿಕೆಯಲ್ಲಿ ಪ್ರಕಟಿಸುವೆವು:—

ಅವಧಿ	ಪೂರ್ಣ ಪುಟ	ಅರ್ಧ ಪುಟ	ಕಾಲು ಪುಟ
೧೨ ತಿಂಗಳು	೪೦ ರೂ.	೩೦ ರೂ.	೨೦ ರೂ.
೬ ತಿಂಗಳು	೩೦ ರೂ.	೨೦ ರೂ.	೧೫ ರೂ.
೧ ತಿಂಗಳು	೧೦ ರೂ.	೫ ರೂ.	೩ ರೂ.

ಸೂಚನೆ :— ಪ್ರಶ್ನೋತ್ತರ ಹಾಗೂ ಟಿಪ್ಪಣಿ ಪುಸ್ತಕಗಳ ಬಗ್ಗೆ ಬರುವ ಜಾಹೀರಾತುಗಳನ್ನು ಸ್ವೀಕರಿಸಲಾಗುವದಿಲ್ಲ.

ಮಾಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆ

ಇದೇ ಅಚ್ಚಾಗಿದೆ. **ಬೆಲೆ ರೂ. ೦—೨—೬**

ಬೇಕಾದವರು ಬರೆದುಕೊಳ್ಳಬೇಕು.

ಹೆಚ್ಚಿನ ವಿವರಗಳಿಗೆ ಬರೆಯಿರಿ : **ಪ್ರಧಾನ ಸಂಪಾದಕರು,** ಕನ್ನಡ ಪ್ರಾಥಮಿಕ ಶಿಕ್ಷಣ, ಧಾರವಾಡ.

ಗ್ರಂಥಾವಲೋಕನ

ಪುಸ್ತಕದ ಹೆಸರು : ಸುಮಾಂಜಲಿ
ಬರೆದವರು : ಶ್ರೀ ವಿ. ಕೆ. ತೊರ್ಕೆ
ಪ್ರಕಾಶಕರು : ಶ್ರೀ ವಿ. ಕೆ. ತೋರ್ಕೆ
ಪುಟಗಳು : ೪೮. ಬೆಲೆ : ೧—೦—೦

೩೧ ಕವನಗಳ ಸಂಗ್ರಹವಿದು; ೩೧ ಹೂಗಳು ಅರಳಿ ನಿಂತಿರುವ ಒಂದು ಸುಂದರವಾದ ಮಲ್ಲಿಗೆಯ ಬಳ್ಳಿ ಇದು. ಮಳೆ, ಹಕ್ಕಿ, ಚಂದ್ರ, ಹೂ ಮೊದಲಾದವುಗಳಲ್ಲಿ ಅಡಗಿರುವ ಸಹಜ ರಮ್ಯತೆಯನ್ನು ಮಗುವಿನ ಸರಳ ದೃಷ್ಟಿಯಲ್ಲಿ ಶ್ರೀ ತೊರ್ಕೆಯವರು ಕಂಡು, ಕಂಡುದನ್ನು ತಮ್ಮ ಕಾವ್ಯ ವಾಣಿಯಿಂದ ನುಡಿದಿದ್ದಾರೆ. 'ತಾರಕರೆ', 'ಜೋಗುಳ' ಕವನಗಳು ತಾಯಂದಿರಿಗೆ ಅಚ್ಚು-ಮೆಚ್ಚಾಗುವಂತೆ ಇತರ ವಾಚಕರಿಗೆ ಅಷ್ಟೇ ಸೊಗಸಾಗಿ ಕಾಣುವವು. ಜಂಜಾಟದ ಜಗತ್ತಿನಲ್ಲಿ ಸೊಗವನ್ನು ಕಾಣುವ ದೃಷ್ಟಿಯನ್ನು 'ಜಗವಿದು ಸೋಗದಾಗರವೈ' ಈ ಕವನದಲ್ಲಿ ಕಾಣುವ ದೃಷ್ಟಿಯನ್ನು ನೋಡಬಹುದು. ಶ್ರೀ ತೊರ್ಕೆಯವರ ಕವನಗಳ ಶೈಲಿ ಸಹಜವಾಗಿದೆ; ಸರಳವಾಗಿದೆ; ಸುಲಭ ರೀತಿಯಿಂದ ಹಾಡಲು ಸಾಧ್ಯವಾಗಬಹುದಾಗಿದೆ. 'ತಿಂಗಳ ಸ್ವಾಮಿ', 'ಬೇಡನೂ ಹಕ್ಕಿಯೂ' 'ಕನ್ನಡ ನಮ್ಮದು', 'ಭಾರತ ರಾಷ್ಟ್ರಧ್ವಜ' ಈ ಕವನಗಳು ಮಕ್ಕಳಿಗೆ ಮನಮೋಹಕವಾಗುವದರಲ್ಲಿ ಸಂದೇಹವಿಲ್ಲ. ಬೆಡಗಿನ ಶೈಲಿಯುಳ್ಳ, ಕವಿತ್ವವನ್ನೊಳಗೊಂಡ ಶ್ರೀ ತೊರ್ಕೆಯವರು ನಾಡಿಗೆ ಇನ್ನೂ ಹೆಚ್ಚಿಗೆ ಕಾಣಿಕೆಗಳನ್ನು ನೀಡಲಿ. —ಪ್ರ. ಸಂ.

ಪುಸ್ತಕದ ಹೆಸರು : ಅಣೆಕಲ್ಲು
ಸಂಪಾದಕರು : 'ಸಿಸು'
ಪ್ರಕಾಶಕರು : 'ಹರಿಹರ' ಭಾರತೀ ಸಾಹಿತ್ಯ ಭಂಡಾರ, ಯರನಾಳ, ಜಿ. ವಿಜಾಪೂರ
ಪುಟ : ೧೨೪ ಬೆಲೆ : ೧—೧೨—೦

೪೪ ಸಣ್ಣ ಕಥೆಗಳ ಸಂಗ್ರಹವಿದು. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಹೆಸರಾಂತ ಲೇಖಕರ ಕಥೆಗಳನ್ನು ಇಲ್ಲಿ ಸಂಕಲನ ಮಾಡಿದ್ದನ್ನು ಕಾಣಬಹುದಾಗಿದೆ. ನಾ. ಕಸ್ತೂರಿ, ಬಿ. ಎಚ್. ಶ್ರೀಧರ 'ಪಾಪು', 'ಕಾವ್ಯಾನಂದ' ಮೊದಲಾದ ಕೀರ್ತಿವೆತ್ತ ಲೇಖಕರ ಕಥೆಗಳು ಕೂಡಿವೆ. ಕಥೆಗಳು ಸಣ್ಣವಿರುವದರಿಂದ ಕಥಾ ವಿಷಯವು ಪೂರ್ಣ ನೆನಪಿನಲ್ಲಿ ಉಳಿಯುತ್ತದೆ. ಒಂದು ಕಥೆಯನ್ನು ಓದಿದ ನಂತರ ಇನ್ನೊಂದನ್ನು ಓದುವ ಅಭಿಲಾಷೆ ಹುಟ್ಟುತ್ತದೆ. ಕೆಳಗಿನ ಇಯತ್ತೆಯ ಮಕ್ಕಳಿಗಿಂತ ಮೇಲಿನ ಇಯತ್ತೆಯವರಿಗೆ ಉಪಯುಕ್ತವೆನಿಸುವಂತೆ ತೋರುತ್ತವೆ ಇಲ್ಲಿಯ ಕಥೆಗಳು. ಇಲ್ಲಿಯ ಅಣೆಕಲ್ಲುಗಳು ಮಕ್ಕಳ ಮುಖದಲ್ಲಿ ತಮ್ಮಿಂದ ತಾವೇ ಕರಗಿ ಅವರ ನರ-ನಾಡಿಗಳಲ್ಲಿ ಹರಿದಾಡುವದರಲ್ಲಿ ಸಂದೇಹವೇನಿದೆ?

—ಪ್ರ. ಸಂ.

ಪುಸ್ತಕದ ಹೆಸರು : ಪರದೇಶಿ ಮತ್ತು ಇತರ ವಿನೋದಾವಳಿ.
ಲೇಖಕರು : 'ಮಾರ್ತಾಂಡಮಾಸ್ತರ' ಶಲವಡಿ, (ತಾ. ನವಲಗುಂದ)
ಪ್ರಕಾಶಕರು : ಎಸ್. ಜಿ. ಯಾಸಗಲ್ಲ ಶಲವಡಿ, (ತಾ. ನವಲಗುಂದ)
ಪುಟಗಳು : ೬೦ ಬೆಲೆ : ೦—೫—೦

ವಿನೋದಾವಳಿ ಹಾಗೂ ಶಿಬಿರಾಗ್ನಿಯ ಕಾರ್ಯಕ್ರಮಗಳಿಗೆ ಶಾಲೆಯಲ್ಲಿ ಮಹತ್ವದ ಸ್ಥಾನವಿರುವ ಇಂದಿನ ಕಾಲದಲ್ಲಿ ಉತ್ತಮ ವಿನೋದಾವಳಿಯ ವಿಷಯಗಳು ಅಗತ್ಯಇವೆ. ಶ್ರೀ ಮಾರ್ತಾಂಡ ಮಾಸ್ತರರು ಇಂದು ಪ್ರಚಲಿತದಲ್ಲಿರುವ ಜಾನಪದ ಸಾಹಿತ್ಯದ ರೀತಿಯನ್ನೇ ಆಧಾರವಾಗಿಟ್ಟುಕೊಂಡು ಕೆಲವು ಪದಗಳನ್ನು, ಗದ್ಯಭಾಗಗಳನ್ನು ತಾವೇ ರಚಿಸಿ ಇಲ್ಲಿ ರೂಪುಕೊಟ್ಟುದು ಸಂತಸದ

ಮಾತಾಗಿದೆ. ಶಿಬಿರಾಗ್ನಿ ಹಾಗೂ ವಿನೋದಾವಳಿಯ ವಿಷಯುಗಳು ಶೈಕ್ಷಣಿಕವಾಗಿರಬೇಕು; ಮಕ್ಕಳಿಗೆ ಮಾರ್ಗ ದರ್ಶನ ಮಾಡುವಂಥವಿರಬೇಕು. ಹಾಸ್ಯಜನಕವಾಗಿ ದ್ದರೂ ಬೋಧಪ್ರದವಾಗಿರಬೇಕು. ಇಂತಹ ಕೆಲವು ವಿನೋದಗಳು ಇಲ್ಲಿ ಸ್ಥಳದೊರಕಿಸಿದ್ದು ಯೋಗ್ಯವಿದೆ. ಶ್ರೀಯುತರು ಇನ್ನೂ ಹೆಚ್ಚಿನ ಉದಾತ್ತತೆಯತ್ತ ತಮ್ಮ ಬರೆಹ ಕಲೆಯನ್ನು ಸಾಗಿಸುವರೆಂದು ಹಾರೈಸುವೆವು.

—ಪ್ರ. ಸಂ.

ಪುಸ್ತಕದ ಹೆಸರು : ಪುಟಚೆಂಡು
ಸಂಪಾದಕರು : ' ಸಿಸು '
ಪ್ರಕಾಶಕರು : ' ಹರಿಹರ ' ಭಾರತೀ ಸಾಹಿತ್ಯ ಭಂಡಾರ, ಯರನಾಳ, ಜಿ. ವಿಜಾಪೂರ
ಪುಟಗಳು : ೧೦೦ ಬೆಲೆ : ೦—೧೨—೦

ಇದೊಂದು ೧೦೬ ಕವನಗಳ ಸಂಕಲನ. ಈ ೧೦೬ ಚೆಂಡುಗಳನ್ನು ನಾಡಿನ ಮಕ್ಕಳಿಗೆ ಪುಟಿಸಲಿಕ್ಕೆ ಕೊಟ್ಟವರು 'ಸಿಸು' ಅವರು. ಮಕ್ಕಳು ಈ ಚೆಂಡುಗಳನ್ನು ಪುಟಿಸಿ, ಪುಟಿಸಿ ನಲಿದಾಡುವದರಲ್ಲಿ ಸಂದೇಹವಿಲ್ಲ. 'ಕುವೆಂಪು', 'ನಾ ಕಸ್ತೂರಿ' ದಿನಕರ ದೇಸಾಯಿ, ರಂ. ಶ್ರೀ. ಮುಗಳಿ, ಈಶ್ವರ ಸಣಕಲ್ಲ, ಎಸ್. ಡಿ. ಇಂಚಲ, ಡಿ. ಎಸ್. ಕರ್ಕಿ, ಸಿಂಪಿ ಲಿಂಗಣ್ಣ, ವೀ. ಸಿ. ಮೊದಲಾದ ವರಕವಿಗಳ ಕವನಗಳು ಇಲ್ಲಿ ಕಾಣಿಸಿಕೊಂಡಿವೆ. ಅದರಂತೆ ಜಯದೇವಿಬಾಯಿ ಲಿಗಾಡೆ ಇತ್ಯಾದಿ ಕವಿಯಿತ್ರಿಯರ ಕವನಗಳೂ ಇವೆ. ನಾಡಿನ ಎಲ್ಲ ಭಾಗಗಳಿಂದ ಕವನಗಳನ್ನು ಶೇಖರಿಸಿವೆ. ಹೀಗೆ ಬಣ್ಣ ಬಣ್ಣದ, ವಿವಿಧ ಆಕಾರದ ಚೆಂಡುಗಳನ್ನು ಆಯ್ದು, ಸಂಕಲನಗೊಳಿಸಿ ಮಕ್ಕಳಿಗೆ ಪುಟಿಸಿ, ಕುಣಿಸಿ, ಆನಂದಿಸಲಿಕ್ಕೆ ಹಚ್ಚಿದ್ದು ಸಂತಸದ ಮಾತಾಗಿದೆ. ಸಂಪಾದಕರಿಂದ ಇಂತಹ ಸಂಕಲನಗಳು ಇನ್ನು ಮುಂದೆಯೂ ಹೊರಬೀಳಲಿ ಎಂದು ಹಾರೈಸುತ್ತೇವೆ

—ಪ್ರ. ಸಂ.

ಅಪೂರ್ವ ಯಶಸ್ಸು

ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲಿನಿಂದ ೧೯೫೫ನೆಯ ಎಪ್ರಿಲದಲ್ಲಿ ಜರುಗಿದ ಪ್ರಾ. ಶಾ. ಪ್ರ. ಪರೀಕ್ಷೆಗೆ ಕುಳಿತ ೫೮ ಬಾಲಕರಲ್ಲಿ ೪೮ ಬಾಲಕರು ಉತ್ತೀರ್ಣರಾಗಿದ್ದು ಮೊದಲಿನ ಏಳು ನಂಬರುಗಳನ್ನು ಈ ಶಾಲೆಯ ಬಾಲಕರೇ ದೊರಕಿಸಿರುವರು. **ಸಂ. ಶಾಂ. ಭಾವೀಕಟ್ಟಿ** ಈ ವಿದ್ಯಾರ್ಥಿಯು ಪ್ರಥಮಸ್ಥಾನವನ್ನು ಪಡೆದಿರುವನು.

ಗದಗ ತಾಲೂಕಿನ ಕುರ್ತಕೋಟೆಯಲ್ಲಿಯ ಶಾಲೆಯ ವಿದ್ಯಾರ್ಥಿಯಾದ **ಮಲ್ಲಿಕಾರ್ಜುನಪ್ಪ ಬಸಪ್ಪ ಬೆಂತೂರ** ಈತನು ಈ ಸಲದ ಹಾಯ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯಲ್ಲಿ ಇಡೀ ಜಿಲ್ಹೆಗೆ ದ್ವಿತೀಯ ಸ್ಥಾನವನ್ನೂ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ ೫೦೨ ಗುಣಗಳನ್ನು ದೊರಕಿಸಿ ಗದಗ ಕೇಂದ್ರಕ್ಕೆ ಪ್ರಥಮಸ್ಥಾನವನ್ನೂ ಪಡೆದಿರುವನು. ಇವನಿಗೆ ಬೋರ್ಡಿನ ಶಿಷ್ಯವೇತನವೂ ದೊರೆತಿರುವದು.

" ವ್ಯಕ್ತಿಯು ಸರ್ವತೋಮುಖವಾದ ಅಭಿವೃದ್ಧಿ ಸಾಧನೆಯಾಗಬೇಕಾದರೆ, ಉತ್ತಮ ಜೀವನ ನಡಸುವಂತಾಗಬೇಕಾದರೆ ಸರ್ವಾಂಗೀಣ ಶಿಕ್ಷಣವೀಯಬೇಕು. ಅವನ ದೇಹ ವೃದ್ಧಿಗೊಳ್ಳಬೇಕು. ಮನಸ್ಸು ಸಂಸ್ಕರಣಗೊಳ್ಳಬೇಕು. ವೃತ್ತಿ ನೈಪುಣ್ಯತೆ ಬರಬೇಕು. ಸಾಹಿತ್ಯ, ಕಲೆ-ಇವುಗಳ ಅಭಿರುಚಿಯೂ ಬೆಳೆಯಬೇಕು. ಸಮಾಜಜೀವನವನ್ನು ನಡಸುವ ಶಕ್ತಿ ಸಾಮರ್ಥ್ಯಗಳೂ ದೊರಕಬೇಕು. ಸಮಾಜದಲ್ಲಿ ಬಾಳಲು ಅನುಕೂಲಿಸುವ ಸಹಕಾರ, ಸದ್ಭಾವನೆ, ಸಹೃದಯತೆಗಳೂ ಬೆಳೆಯಬೇಕು. ಒಟ್ಟಿನಲ್ಲಿ ವ್ಯಕ್ತಿಯ ಮತ್ತು ಸಮಾಜದ ಜೀವನದ ಸುಖ ಶಾಂತಿಗಳ ತವರಾಗಿ ಪ್ರಗತಿಯನ್ನು ಸಾಧಿಸುವಂತೆ ಮಾಡುವದೇ ನಮ್ಮ ಶಿಕ್ಷಣದ ಗುರಿಯಾಗಬೇಕು. "

" ಶಿಕ್ಷಣ ತತ್ವದರ್ಶನ " ದಿಂದ

ಪ್ರಾಥಮಿಕ ಶಿಕ್ಷಣ ಪ್ರಪಂಚ

ಜೂನ ೧೯೫೫.

ಸಭೆ-ಸಮ್ಮೇಲನಗಳು

ಹೊಶಿ— ೧೩ :— ೩೫ ಶಿಕ್ಷಕರು ಹಾಜರಿದ್ದ ಗ್ರೂಪ್ ಶಿಕ್ಷಕರ ಸಭೆಯಲ್ಲಿ ಹೊಸ ಅಭ್ಯಾಸ ಪತ್ರಿಕೆಯ ಬಗೆಗೆ ಚರ್ಚೆ ಮಾಡಲಾಯಿತು. ಶ್ರೀ ಛಬ್ಬಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಚ. ಬ. ಪಾವಟೆಯವರ ನೇತೃತ್ವದಲ್ಲಿ ಇಲ್ಲಿಯ ಗಂಡು ಹಾಗೂ ಹೆಣ್ಣು ಮಕ್ಕಳ ಶಾಲೆಗಳ ಬಾಲ-ಬಾಲಿಕೆಯರ ಮನರಂಜನೆಯ ಕಾರ್ಯಕ್ರಮಗಳು ಜರುಗಿದವು.

ಹಳ್ಳೂರ— ೧೫ :— ಇಲ್ಲಿಯ ಹರಿಜನಕೇರಿಯಲ್ಲಿ ಮನರಂಜನೆಯ ಕಾರ್ಯಕ್ರಮಗಳನ್ನು ಶ್ರೀ ಖೋದಾನಪೂರ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಅವರು ಪ್ರೌಢಶಿಕ್ಷಣದ ಬಗ್ಗೆ ಮಾತನಾಡಿದರು.

ಸದಲಿ— (ನವಲಗುಂದ) ೧೫ :— ಇಲ್ಲಿಯ ಶಾಲೆಯಲ್ಲಿ ಹಿಂದುಳಿದ ಹಾಗೂ ಬಡಮಕ್ಕಳಿಗೆ ಸರಕಾರದವರಿಂದ ಕೊಡಲ್ಪಟ್ಟ ಪಾಟಿಪುಸ್ತಕಗಳು ಶ್ರೀ ಆರ್. ಎಚ್. ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ಹಂಚಲ್ಪಟ್ಟವು.

ಛಬ್ಬಿ— ೧೮ :— ಶ್ರೀ ಕೆ. ಎಸ್ ಕುಲಕರ್ಣಿಯವರು ಇಲ್ಲಿಯ ಶಾಲೆಯಲ್ಲಿಯ ಮೂಲೋದ್ಯೋಗದ ಕಾರ್ಯವನ್ನು ಉದ್ಘಾಟಿಸಿ ಒಂದು ಮಾದರಿ ಪಾಠವನ್ನು ಕೊಟ್ಟರು. ಶ್ರೀ ದೇಸಾಯಿಯವರು ಕೈತೋಟದ ಮಹತ್ವದ ಬಗ್ಗೆ ಹೇಳಿದರು. ಕುಮಾರ ಬ. ರು. ಭಾವಿಕಟ್ಟಿ ಮುಖ್ಯ ಮಂತ್ರಿ ಎಂದು ಆರಿಸಲ್ಪಟ್ಟಿರುವನು.

ಕಮತಗಿ— (ಹುನಗುಂದ) ೨೪ :— ಇಲ್ಲಿಯ ಜೀವನ ಶಿಕ್ಷಣ ಶಾಲೆಯಲ್ಲಿ ಕಮತಗಿ ಗ್ರೂಪಿನ ೨೦ ಕನ್ನಡ-ಉರ್ದು ಶಾಲೆಗಳ ಹಾಗೂ ಖಾಸಗಿ ಶಾಲೆಗಳ ಶಿಕ್ಷಕರ ಸಭೆಯಲ್ಲಿ ಶ್ರೀ ಖೋದಾನಪೂರ ಇವರ ಅಧ್ಯಕ್ಷತೆಯಲ್ಲಿ ಹೊಸ ಅಭ್ಯಾಸ ಪತ್ರಿಕೆಯ ಬಗ್ಗೆ ಚರ್ಚಿಸಲಾಯಿತು.

ಕಾಲವಾಡ— (ನವಲಗುಂದ) ೨೪ :— ಹಿಂದುಳಿದ ಹಾಗೂ ಬಡಮಕ್ಕಳ ಸಲುವಾಗಿ ಪುಕ್ಕಟೆಯಾಗಿ ಹಂಚಲು ಸರಕಾರದವರು ಕೊಟ್ಟ ಪಾಟಿ-ಪುಸ್ತಕಗಳನ್ನು **ಶ್ರೀ ಎನ್. ಡಿ. ಪಾಟೀಲ** ಅವರ ಅಧ್ಯಕ್ಷತೆಯಲ್ಲಿ ಹಂಚಲಾಯಿತು.

ಕೆರಡಿ— ೨೬ :— ಇಲ್ಲಿಯ ಶಾಲೆಯಲ್ಲಿ ಸುತ್ತಲಿನ ೨೫ ಹಳ್ಳಿಗಳ ಶಿಕ್ಷಕರ ಸಭೆಯು ಶ್ರೀ ಎಸ್. ಬಿ. ತಿಪ್ಪಣ್ಣವರ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಹೊಸ ಅಭ್ಯಾಸ ಪತ್ರಿಕೆಯ ಸಂಪೂರ್ಣ ಪರಿಚಯ ಮಾಡಿಕೊಡಲಾಯಿತು.

ಗದಗ— ೨೭:— ಧಾರವಾಡ ಹೊಂದಿಕೆಯ ಕ್ಷೇತ್ರದ ಗದಗ ಗ್ರೂಪ್ ಶಿಕ್ಷಕರ ೧೯೫೫-೫೬ನೆಯ ಸಾಲಿನ ಪ್ರಥಮ ಸಮ್ಮೇಲನವು ಇಲ್ಲಿಯ ಶಾಲೆಯಲ್ಲಿ ಶ್ರೀ ಕೆ. ಎಸ್. ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. "ಹೊಸ ಅಭ್ಯಾಸ ಪತ್ರಿಕೆ ಹಾಗೂ ಶಿಕ್ಷಕರಿಗೆ ಸೂಚನೆಗಳು" ಎಂಬ ಪುಸ್ತಕಗಳ ಬಗೆಗೆ ಚರ್ಚಿಸಲಾಯಿತು.

ನವಿಲಗುಂದ—೨೭:— ಸ್ಥಾನಿಕ ಮುಖ್ಯಾಧಿಕಾರಿಗಳ ಧರ್ಮಪತ್ನಿಯವರಾದ **ಶ್ರೀಮತಿ ಕಾವಿರಾಕ್ಷಿಬಾಯಿ (ನಾಯಕ)** ಅವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಹೆಣ್ಣು ಮಕ್ಕಳ ಶಾಲೆಯಲ್ಲಿಯ ವಿದ್ಯಾರ್ಥಿನಿಯರಿಗೆ ಪಾಟಿ-ಪುಸ್ತಕಗಳನ್ನು ಹಂಚಲಾಯಿತು.

ತಿಕೋಟಾ— ೨೯:— ಶ್ರೀ ಯಾರಗಲ್ ಡಿ. ಎ. ಇ. ಬಿಜಾಪೂರ ಇವರ ಅಧ್ಯಕ್ಷತೆಯಲ್ಲಿ ವಾರ್ಷಿಕ
(ವಿಜಾಪೂರ) ಪರೀಕ್ಷೆಯಲ್ಲಿ ಮೇಲ್ಪಂಕ್ತಿ ಪಡೆದ ವಿದ್ಯಾರ್ಥಿಗಳಿಗೆ ಗ್ರಾಮಪಂಚಾಯತಿಯವರು ಕೊಟ್ಟ ರೂ. ೫೦ ಹಾಗೂ ಮಿಠಾಯಿಗಳ ವಿತರಣ ಸಮಾರಂಭವು ನಡೆಯಿತು. ಶ್ರೀ ಕಾಸಾರರವರು ಹಾಜರಿದ್ದರು.

ಹೂವಿನಹಿಪ್ಪರಗಿ ೨೯:— ಶ್ರೀ ಕಟ್ಟಿಪ್ಪ ಪತ್ತಾರ ಇವರು ಪ್ರೆಸ್-ಫಳಿಯ ಮೇಲೆ ಕಡಿದು ಯಾವ ಪ್ರತಿಫಲ ವಿಲ್ಲದೆ ತಯಾರಿಸಿ ಕೊಟ್ಟ ೬ ಫೂಟು ಎತ್ತರದ ಪ್ರಧಾನಮಂತ್ರಿ ನೆಹರೂರವರ ಫೋಟೋದ ಅನಾವರಣ ಸಮಾರಂಭವು **ಶ್ರೀ ಆರ್. ಜಿ. ದುಭೆ** (ಎಂ. ಪಿ) ಅವರಿಂದ ನೆರವೇರಿಸಲ್ಪಟ್ಟಿತು.

೩೦:— ಶ್ರೀ ಶಂಕರಗೌಡ ಪಡಗಾನೂರ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಏಳು ಕೋಣೆಗಳ ಶಾಲಾಕಟ್ಟಡದ ಕೆಲಸವನ್ನು ತ್ವರಿತಗೊಳಿಸುವ ಬಗ್ಗೆ ಚರ್ಚಿಸಲಾಯಿತು.

ಪ್ರಾ. ಶಾ. ಪ್ರಮಾಣ ಪತ್ರ ವಿತರಣ

ಬೆಲ್ಲದಬಾಗೇವಾಡಿ— ೮:— ಶ್ರೀ ಎಮ್. ಆಯ್. ಕಣಗಲಿ ಇವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಜೀವನ ಶಿಕ್ಷಣ
(ಹುಕ್ಕೇರಿ) ಶಾಲೆಯಲ್ಲಿ ಪ್ರಮಾಣ ಪತ್ರ ವಿತರಣ ಸಮಾರಂಭವು ನೆರವೇರಿತು. ಶ್ರೀ ಕತ್ತಿ ಅವರ "ಚೆನ್ನಬಸವಮ್ಮ" ಪಾರಿತೋಷಕದ ರೂ. ೧೦ಗಳನ್ನೂ ಕೊಡಲಾಯಿತು.

ಕುಸೂಗಲ್ಲ— ೨೧:— ಕಳೆದ ವರ್ಷ **ಈ** ಶಾಲೆಯಿಂದ ತೇರ್ಗಡೆ ಹೊಂದಿದ ೯ ಹುಡುಗರಿಗೆ ಪ್ರಮಾಣ ಪತ್ರಗಳನ್ನು ಕೇಂದ್ರ ವಾಣಿಜ್ಯ ಮಂತ್ರಿಗಳಾದ **ಶ್ರೀ ದ. ಪ. ಕರಮರಕರ** ಅವರ ಹಸ್ತದಿಂದ ಹಂಚಲಾಯಿತು.

ನೇಸರಗಿ— ೨೨:— ಇಲ್ಲಿಯ ಸಾಲೆಯಲ್ಲಿ **ಶ್ರೀ** ಎತ್ತಿನಮನಿ ಸಬ್‌ಜಜ್‌ರ ಹಿರಿಯತನದಲ್ಲಿ ೧೯೫೪ರಲ್ಲಿ ಪಾಸಾದ ೧೫ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಹಂಚಲಾಯಿತು.

ಉದಾರ ದೇಣಿಗೆ

ನೇಗಿನಹಾಳ :— ಇಲ್ಲಿಯ ಕನ್ನಡ ಬಾಲಕರ ಶಾಲೆಗೆ ಶಾರೀರಿಕ ಶಿಕ್ಷಣ ಉಪಯೋಗಕ್ಕಾಗಿ ೧ **ಡೋಲು**, ೧ ಡ್ರಮ್ಮು ಹಾಗೂ ೧ **ಕೊಳಲು** ಹೀಗೆ ಒಟ್ಟಿಗೆ ೧೦೦ **ರೂ.** ಬೆಲೆ ಬಾಳುವ ಸಾಮಾನುಗಳನ್ನು ಕೊಟ್ಟು ಗ್ರಾಮ ಪಂಚಾಯತಿಯವರು ಸಹಾಯನೀಡಿರುವರು.

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ, ೧೯೫೫.

(ಕಳೆದ ಎಪ್ರೀಲದಲ್ಲಿ ಜರುಗಿದ ಪ್ರಾ. ಶಾ. ಪ್ರ ಪರೀಕ್ಷೆಯಲ್ಲಿ ಆ ಆ ಶಾಲೆಗಳ ಯಶಸ್ಸನ್ನು ಕುರಿತು ಮುಖ್ಯಾಧ್ಯಾಪಕರು ಇಲ್ಲವೆ ಶಾಲೆಯಲ್ಲಿ ಆಸ್ಥೆವುಳ್ಳವರು ಕಳುಹಿಸಿದ ಸಂಗತಿಗಳನ್ನು ಸಂಗ್ರಹಿಸಿ ಕೊಡಲಾಗಿದೆ.)

ಶಾಲೆಯ ಹೆಸರು	ಪರೀಕ್ಷೆಗೆ ಕುಳಿತವರ ಸಂಖ್ಯೆ	ಪರೀಕ್ಷೆ ಪಾಸಾದವರ ಸಂಖ್ಯೆ	ವರ್ಗದ ಶಿಕ್ಷಕರು
ಕೊರವಾರ (ತಾ. ಸಿಂದಗಿ)	೯	೬	ಶ್ರೀ ಜಿ. ಎಸ್. ಹಿರೇಮಠ
ವಣ್ಣೂರ	೮	೬	—
ಅಂಕಲಗಿ	೮	೭	ಶ್ರೀ ಘಾಟಿ
ಬಟ್ಟೂರ (ಶಿರಹಟ್ಟಿ)	೧೩	೯	ಶ್ರೀ ಫ. ಮ. ಬಾಳೀಹಳ್ಳಿಮಠ
ಎಲಿಮುನೋಳಿ (ತಾ. ಹುಕ್ಕೇರಿ)	೧೬	೧೧	ಶ್ರೀ ಎಲ್. ಬಿ. ಇಂಚಲ
ಹೊಸಕೋಟೆ (ತಾ. ರಾಮದುರ್ಗ)	೧೭	೧೭	ಶ್ರೀ ಕೆ. ಜಿ. ಭದ್ರಶಿಟ್ಟಿ
ಅಂತೂರ-ಬೆಂತೂರ	೧೬	೧೩	—
ಹಲಸಿ (ತಾ. ಖಾನಾಪೂರ)	೧೦	೭	ಶ್ರೀ ಲ. ಬ. ಕಾಲವಾಡ
ರಕ್ಕಸಗಿ (ತಾ. ಮುದ್ದೇಬಿಹಾಳ)	೧೬	೧೩	ಶ್ರೀ ಎಮ್. ಎಸ್. ಮಠ
ಆಲೂರ ,,	೮	೮	ಶ್ರೀ ಬ. ಸಿ. ಪಾಟೀಲ
ಅಮರಗೋಳ ,,	೭	೬	—
ತಂಗಡಗಿ ,,	೧೩	೯	ಶ್ರೀ ಶಿ. ಸ. ಹಿರೇಮಠ
ಬಳಬಟ್ಟಿ ,,	೧೨	೧೨	ಶ್ರೀ ಮೂಕೀಹಾಳ
ಇಂಗಳಗೇರಿ ,,	೩೨	೨೪	ಶ್ರೀ ಅ. ಸ. ಹಿಪ್ಪರಗಿ
ತಾಳಿಕೋಟಿ (ಹೆಣ್ಣುಮಕ್ಕಳ)	೫	೫	ಶ್ರೀ ಸ್ಥಾವರ
ತಾಳಿಕೋಟಿ	೧೪	೯	ಶ್ರೀ ಎಮ್. ಬಿ. ಧನ್ನೂರ
ಶಿಡೇನೂರ	೫	೫	—
ಹಲಸ್ನಳ್ಳಿ (ಸಿರ್ಸಿ)	೧೦	೭	ಶ್ರೀ ವ್ಹಿ. ಟಿ. ಭಟ್ಟ
ಕುಸೂಗಲ್ಲ	೭	೭	ಶ್ರೀ ಹ. ವೀ. ಕುಸೂಗಲ್ಲ
ಢವಳಗಿ (ಮುದ್ದೇಬಿಹಾಳ)	೧೨	೧೦	—
ಕೊಂಚಿಗೇರಿ (ಶಿರಹಟ್ಟಿ)	೩	೨	ಶ್ರೀ ರಾ. ಥ್ಯಾ. ದ್ಯಾಮನಗೌಡ
ಬೆಳಗಲಿ (ಮುಧೋಳ)	೫	೪	—
ಇಟಗಿ (ಖಾನಾಪೂರ)	೧೦	೯	ಶ್ರೀ ಬಿ. ಕೆ. ಕಲ್ಲಪ್ಪಗೌಡರ
ಹೊಸಸಿಡೇನೂರ (ರಾಣೆಬೆನ್ನೂರ)	೫	೫	ಶ್ರೀ ನಾ. ತಿ. ಪಾಟೀಲ

Regd. No. B.

ಸಹಜ ಸಾಹಿತ್ಯ ! ★ ಜ್ಞಾನರಸ ಸಾಹಿತ್ಯ ★ **ಶಾಶ್ವತ ಸಾ**

ಮಾಸಿದ ತಲೆಯನ್ನು ಮಡಿಮಾಡುವ ಪವಿತ್ರ ಸಾಹಿತ್ಯ !!

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

೧. ಪವಿತ್ರ ಜೀವನ (ಟಾಲಸ್ಟಾಯರಜ ಗದ್ವಿಖ್ಯಾತ ಕಥಾಸಂಗ್ರಹ) ೧-
೨. ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು) ೧-
೩. ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು) ೧-
೪. ದೀಪವರ್ತಿ (ಶ್ರೀ ಅಂವಿಂದರ ೨ ಉಜ್ವಲ ಕಥೆಗಳು) ೦-
೫. ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ) ೧-
೬. ಮುಗಿಲ ಜೀವನ (ಉತ್ಸಾಹದಾಯಕವಾದ ಕವನ ಸಂಕಲನ) ೧-
೭. ಪೂಜಾ (ನಿತ್ಯ ಪಠನೀಯವಾದ ಗದ್ಯಗೀತೆಗಳು) ೦-
೮. ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ) ೧-
೯. ಬೆಟ್ಟದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ) ೧-
೧೦. ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ) ೧-
೧೧. ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು) ೧-
೧೨. ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ) ೧-
೧೩. ಆರ್ಯದೇಶಭಕ್ತಿ (ಧ್ಯೇಯ ಜೀವಿಗೆ ಊರುಗುಂಬಳ) ೦-
೧೪. ಜೀವನ ದೃಷ್ಟಿ (ವಿವಿಧ ಪ್ರಬಂಧಗಳು) ೧-
೧೫. ದತ್ತ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ) ೧-

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ ಯೋಗ್ಯ ಬೆಲೆಗೆ ಸಿಗುತ್ತ
ರೂ.ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ.

— ಪ್ರತಿಯೊಬ್ಬ ಕನ್ನಡ ವಿದ್ಯಾರ್ಥಿಯೂ ಕಾದಿಡಬೇಕಾದ ಕೃತಿಗಳು —

ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥ ತೆರೆದ

ಭಾರತೀ ಸಾಹಿತ್ಯ ಭಂಡಾರ ಯರನಾಳ

ಅವರಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

ಜನರಲ್ ' ಕಥೆ-ಕವನ ಸಂಕಲನಗಳು ನಾಡಿನ ನಾಲ್ಕು ದಿಕ್ಕಿನಿಂದ ೨೫೦ ಸಾಹಿತಿಗಳ ಕೃತಿಗಳು ಹಾಗೂ ಪ
ದೊರೆಯುವ ಕೃತಿಗಳು ಮತ್ತೆ ಬೇರಿಲ್ಲ. ಹೊಸ ಪ್ರಯೋಗ

ಆಣೆಕಲ್ಲು [ಕಥಾಸಂಕಲನ] ಭಾಗ ೧ .... ೦—೧೨—೦ **ಪುಟಚೆಂಡು** [ಕವಿತಾ ಸಂಕಲನ] ಭಾಗ ೧....೦-
೧ ರಿಂದ ೪ ವರ್ಗಗಳಿಗಾಗಿ ೪೦ ಜನರ ಕಥೆಗಳು ೧ ರಿಂದ ೪ ವರ್ಗಗಳಿಗಾಗಿ ೧೨೪ ಜನರ ಕಥೆ
ಆಣೆಕಲ್ಲು ಭಾಗ ೨ .... ೦—೧೨—೦ **ಪುಟಚೆಂಡು** ಭಾಗ ೨ .... ೦-
೫ ರಿಂದ ೭ ವರ್ಗಗಳಿಗಾಗಿ ೩೬ ಜನರ ಕಥೆಗಳು. ೫ ರಿಂದ ೭ ವರ್ಗಗಳಿಗಾಗಿ ೧೦೪ ಜನರ ಕಥೆ

ವಿದ್ಯಾರ್ಥಿ ಸಹಕಾರಿ ಸಂಘಗಳಿಗೆ ವಿಶೇಷ ಸವಲತ್ತುಗಳಿವೆ.

ಭಾರತೀ ಸಾಹಿತ್ಯ ಭಂಡಾರ ೯
ಅಂಚೆ :— ಮನಗೂಳಿ— ಜಿ. ವಿ

Printed by Shri S. F. Kattimani at Manohar Power Printing Press, Hubli. Edited and P
by Sjts S. P. Patil, B. M. Shintri, S. R. Tatti & Smti. P. A. Bhaskar at the Kannada Pr
Shikshan Office. Govt. Training College for Men, Dharwar.

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ



ಕವಿಸಾಮ್ರಾಟ ರವೀಂದ್ರನಾಥ ಠಾಕೂರ

ಪತ್ರಿಕೆ
—೦

ಅಗಸ್ಟ ೧೯೫೫

ವಾ. ಚಂದಾ
೪—೦—೦

ನಮ್ಮ ರಾಷ್ಟ್ರಧ್ವಜ

ಸಖನೆ ನೋಡು ನೋಡು ನಮ್ಮನಾಡ ಗುಡಿಯಿದು |
ಅಖಿಲ ಲೋಕದಲ್ಲಿ ಕೀರ್ತಿ ಪೊಂದುತಿರುವದು ||

ಕೆಂಪು ಬಿಳಿದು ಹಸಿರಿನಿಂದ ಹೊಂದಿಕೊಂಡಿದೆ |
ತಂಪು ಕೊಡುವದಾತ್ಮಕಿಂದು ಶಾಂತಿ ತುಂಬಿದೆ ||

ಸತ್ಯ ನ್ಯಾಯ ನೀತಿಯನ್ನು ತೋರುತಿರುವದು |
ನಿತ್ಯ ಗಗನದಲ್ಲಿ ಹಾರಿ ಅಂದ ಸೂಸಿದೆ ||

ನಾಡ ಸಿರಿಯ ತೋರಿ ಜಗದಿ ಬೆಳಗು ತಿರುವದು |
ನೋಡು ಮಿತ್ರ ಹರುಷದಿಂದ ಹಾರುತಿರುವದು ||

ಮೂರು ಬಣ್ಣದಿಂದ ಮೆರೆವ ನಮ್ಮ ಗುಡಿಯಿದು |
ಮೂರು ಲೋಕದಲ್ಲಿ ಖ್ಯಾತಿ ಗಳಿಸುತಿರುವದು ||

ಶಾಂತಿ ಸಮತೆ ಧೀರ ತನದಿ ಮೆರೆಯುತಿರುವದು |
ಶಾಂತಿಯಿಂದ ಹೊಮ್ಮುತಿರುವ ನಾಡಗುಡಿಯಿದು ||

ಗೆಲುವ ತೋರಿ ನಲುಮೆ ಬೀರಿ ಹಾರುತಿರುವದು |
ಸಲುಗೆ ತೋರಿ ನಾಡನೊಂದು ಮಾಡುತಿರುವದು |

ಸೂರ್ಯನಂತೆ ಗಗನದಲ್ಲಿ ಬೆಳಗುತಿರುವದು |
ಕಾರ್ಯ ಧೈರ್ಯ ತೋರಿ ನನ್ನನುಡಿಯ ಕಲಿಪುದು ||

ನಮ್ಮ ಮಾತೆ ಪಿಡಿದ ರಾಷ್ಟ್ರಲಕ್ಷ್ಮಿ ಧ್ವಜವಿದು |
ನಮ್ಮ ಜೀವದಲ್ಲಿ ನೇಹ ತುಂಬುತಿರುವದು ||

ಧೀರ ಸಮತೆ ಮಮತೆಯಿಂದ ಧ್ವಜಕೆ ನಮಿಸುವಾ |
ತೋರುತಿರುವ ಶಾಂತಿಯನ್ನು ನಾಡಲಿರಿಸುವಾ ||

— ಶ್ರೀ ಎಚ್. ಆರ್. ಬಂಡೀವಡ್ಡರ ಆಲದಗೇರಿ

ಕನ್ನಡ ಪ್ರಾಥಮಿಕ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಕೆ. ಬಿ. ತೇರಗಾಂವಕರ,** ಬಿ.ಎಸ್‌ಸಿ. (ಆನರ್ಸ), ಬಿ.ಟಿ.,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

— ಸಹಸಂಪಾದಕರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ., ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೧ | **ಅಗಸ್ಟ, ೧೯೫೫** | **ಸಂಚಿಕೆ ೩**

ಪ ರಿ ವಿ ಡಿ

೧. ಸಂಪಾದಕೀಯ ೨

೨. ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ : ಶ್ರೀ ಶಿಂತ್ರಿ ಬಸಪ್ಪನವರು ೫

೩. ದಣಿವೂ ಶಾಲೆಯ ಸನ್ನಿವೇಶವೂ : .... ಶ್ರೀ ತಟ್ಟಿ ಶಾಮರಾಯರು ೯

೪. ಮಗುವಿನ ಸರ್ವಾಂಗೀಣ ಶಿಕ್ಷಣ . ... ಶ್ರೀ ಎಸ್. ಎಂ. ಹಳ್ಳಿಕೇರಿ ೧೨

೫. ಮೂಲಶಿಕ್ಷಣ ೧೪

೬. ಬಣ್ಣಹಾಕುವ ಕೇಂದ್ರ (ಪ್ರಕಟನೆ) ೧೫

೭. ಹಿಂದೀ ಕಾದಂಬರಿ ಸಮ್ರಾಟ ಪ್ರೇಮಚಂದ : .... ಶ್ರೀ ಗುರುನಾಥ ಜೋಶಿ ೧೭

೮. ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ೧೯೫೫ (ಬಹುಮಾನಗಳು) ೨೦

೯. ಜೀವನ ಶಿಕ್ಷಣದ ವಾರ್ತೆಗಳು ೨೧

೧೦. ಪ್ರಾಥಮಿಕ ಶಿಕ್ಷಣ ಪ್ರಪಂಚ ೨೫

ಹೊದಿಕೆ ಪುಟ

೧) **ಕವಿ ಸಾಮ್ರಾಟ ರವೀಂದ್ರನಾಥ ಠಾಕೂರ (ಪಡಿಯಚ್ಚು : ಜಯಕರ್ನಾಟಕದ ಕೃಪೆಯಿಂದ)**

೨) **ನಮ್ಮ ರಾಷ್ಟ್ರಧ್ವಜ (ಕವನ) :** ಶ್ರೀ ಎಚ್. ಆರ್. ಬಂಡೀವಡ್ಡರ

೩) **ಮೂಲ ಶಿಕ್ಷಣ ಪರಿಶೀಲನಾ ಸಮಿತಿಯ ಸಂದರ್ಶನದ ದೃಶ್ಯಗಳು**

ಸಂಪಾದಕೀಯ

ಪ್ರೇಮಚಂದ ಜಯಂತಿ

೧೮೮೦ ಜುಲೈ ತಿಂಗಳಿನ ದಿನಾಂಕ ೩೧ರಂದು ಹಿಂದೀ ಸಾಹಿತ್ಯ ಸಮ್ರಾಟ ಪ್ರೇಮಚಂದರ ಜನನವಾಯಿತು. ಬನಾರಸದ ಸಮೀಪ "ಲಮಹೀ" ಎಂಬದೊಂದು ಹಳ್ಳಿಯಲ್ಲಿ ಜನ್ಮನಾಮದಿಂದ ಧನಪತರಾಯರಾದ ಇವರಿಗೆ ಪ್ರೇಮಚಂದವೆಂಬುದು ಕಾವ್ಯನಾಮವಾಗಿ, ಬರಬರುತ್ತ ಅನ್ವರ್ಥಕವಾಗಿ ಪ್ರಾಪ್ತವಾಯಿತು. ಚಿಕ್ಕಂದಿನಲ್ಲಿಯೇ ತಾಯಿ ಆನಂದಿದೇವಿಯನ್ನು ಕಳೆದುಕೊಂಡ ಪ್ರೇಮಚಂದರು 'ದಾರಿದ್ರ್ಯ' ವಿಮಾತೆಯ ನಿಷ್ಕುರತೆ, ತಂದೆಯ ಉದಾಸೀನತೆಗಳಲ್ಲಿಯೂ ನಿರಾಶರಾಗದೆ ಶಿಕ್ಷಣವನ್ನು ಮುಂದುವರಿಸಿ ಅದೇ ಸಮಯದಲ್ಲಿಯೇ ಉರ್ದು ಹಾಗು ಹಿಂದೀ ಭಾಷೆಯಲ್ಲಿಯ ಕಥೆ ಮತ್ತು ಕಾದಂಬರಿ ಪ್ರಪಂಚವನ್ನೆಲ್ಲ ಅರಗಿಸಿಕೊಂಡು 'ಮುಕ್ತ ಪ್ರಕೃತಿಯಲ್ಲಿಯೇ ಮುಕ್ತತೆಯ ಪಾಠಗಳ'ನ್ನು ಪಡೆದು 'ಶಿಕ್ಷಣವು ಜೀವನದೊಡನೆ– ಜೀವನದ ವೈವಿಧ್ಯದೊಡನೆ–ಹಾಸುಹೊಕ್ಕಾಗಿ ನಡೆಯಬೇಕೆಂಬ' ಸುಂದರ ಭಾವನೆಯನ್ನು ತಾಳಿದರು. ಹದಿನೈದನೆಯ ವಯಸ್ಸಿನಲ್ಲಿ ವಿವಾಹದ ಬಂಧನದಿಂದ ಬಿಗಿಯಲ್ಪಟ್ಟ ಇವರು ಮರುವರ್ಷವೇ ತಂದೆಯನ್ನು ಕಳೆದುಕೊಂಡು 'ಅಷ್ಟಧಾತುವಿನ ಸಂಕೋಲೆ ಬಿಗಿದ ಕಾಲುಗಳಿಂದಲೇ ಪ್ರಪಂಚವೆಂಬ ಗೌರೀಶಂಕರವನ್ನು' ಏರಲಿಚ್ಛಿಸಿದರು. 'ವೇದನೆ-ಅನುರಾಗ-ಅಭಿರುಚಿಯುಳ್ಳ, ವಿಚಾರವಂತರಾದ' ಸಹೃದಯರಾದ, 'ನಾದಾ ಒಕ್ಕಲಿಗರ ಪ್ರತಿಬಿಂಬ'ವೇ ತಾವಾದ ಪ್ರೇಮಚಂದರು ಪ್ರೇಮಾ, ವರದಾನ, ಪ್ರತಿಜ್ಞಾ, ಸೇವಾಸದನ, ಪ್ರೇಮಾಶ್ರಮ, ನಿರ್ಮಲಾ, ರಂಗಭೂಮಿ, ಕಾಯಕಲ್ಪ, ಗಬನ್, ಕರ್ಮಭೂಮಿ ಮೊದಲಾದ ಕಾದಂಬರಿಗಳನ್ನು ಬರೆದು ಕಾದಂಬರಿ ಸಮ್ರಾಟರಾದಂತೆ 'ಧಾರ್ಮಿಕ, ರಾಜನೈತಿಕ ಹಾಗೂ ಸಾಮಾಜಿಕ ಜೀವನವನ್ನು ಚಿತ್ರಿಸುವ ಮುನ್ನೂರು ನಾನೂರು ಕಥೆಗಳನ್ನು ಬರೆದರು.' ಪೂಜ್ಯ ಗಾಂಧೀಜಿಯವರಿಂದ ಪುನೀತರಾದ ಇವರು "ತಮ್ಮ ಕಾದಂಬರಿಗಳಲ್ಲಿ ಗಾಂಧೀವಾದೀ ಭಾರತವನ್ನು ಚಿತ್ರಿಸಿದ್ದಾರೆ." "ಅವರ ಕಾದಂಬರಿಗಳು ನಮ್ಮ ರಾಷ್ಟ್ರೀಯ ಸಂಗ್ರಾಮದ ಭಾಷ್ಯಗಳಾಗಿವೆ; ಭಾರತೀಯ ಹಳ್ಳಿಗಳ ಪತನದ ಕೈಗನ್ನಡಿಗಳಾ"ಗಿವೆ. ಒಟ್ಟಾರೆ "ಅವರು ರಾಷ್ಟ್ರಭಾಷೆಯ ಮೊಟ್ಟ ಮೊದಲಿನ ಸಫಲ ಲೇಖಕರು." ಇಂತಹ ಪ್ರೇಮಚಂದರು ಮರಣ ಹೊಂದಿ ಇಂದಿಗೆ ೧೯ ವರ್ಷಗಳು ಗತಿಸಿವೆ. ಜಡ ದೇಹವು ಅಳಿದರೂ ಪ್ರೇಮಚಂದರ ಅಂತರಾತ್ಮವು ಮಾತ್ರ ಅವರು ರಚಿಸಿದ ಕೃತಿಗಳಲ್ಲಿ ಉಳಿದಿದೆ; ಸೂರ್ಯ-ಚಂದ್ರರಿರುವವರೆಗೆ ಉಳಿಯಲಿದೆ. ಭಾರತದ ವಿವಿಧ ಪ್ರಾಂತಗಳನ್ನು ಒಂದಾಗಿ ಕಟ್ಟಬಲ್ಲ ಹಿಂದೀ ಭಾಷೆಯಲ್ಲಿ ಅಗ್ರಸ್ಥಾನ ಗಳಿಸಿದ ಪ್ರೇಮಚಂದರ ಜಯಂತಿಯನ್ನು ದೇಶದಾದ್ಯಂತ ಆಚರಿಸುವದು ಯಥಾ–ಯೋಗ್ಯವಾಗಿದೆ. ಅವರು ಚಿತ್ರಿಸಿದ ಜೀವನ, ಆಚರಿಸಿದ ಬಾಳು, ವಿಚಾರಿಸಿದ ಉಚ್ಚಮಟ್ಟಗಳು ಭಾರತೀಯರೆಲ್ಲರಿಗೆ ಆದರ್ಶವಾಗಿ ನಿಲ್ಲಲಿ.

ಲೋಕಮಾನ್ಯರ ಪುಣ್ಯತಿಥಿ

೧೯೨೦ ಅಗಸ್ಟ ೧ನೆಯ ದಿನಾಂಕ 'ಸ್ವಾತಂತ್ರ್ಯವು ನನ್ನ ಜನ್ಮಸಿದ್ಧ ಹಕ್ಕು' ಎಂದು ಸಾರಿ ಅಂದಿನ ಆಳರಸರಲ್ಲಿ ನಡುಕನ್ನುಂಟು ಮಾಡಿದ ಲೋಕಮಾನ್ಯ ಬಾಳ ಗಂಗಾಧರ ಟಿಳಕರು ಇಹಲೋಕವನ್ನು ತ್ಯಜಿಸಿ ಪರಂಧಾಮವನ್ನು ಸೇರಿದ ದಿನ. ಅವರು ನಮ್ಮನ್ನಗಲಿ ೨೭ ವರ್ಷಗಳ ನಂತರ ರಾಷ್ಟ್ರವು ಸ್ವತಂತ್ರವಾಯಿತು. ಟಿಳಕರ ಕನಸು ನನಸಾಯಿತು. ಅಂದಿನ ದುರ್ಧರ ದಿನಗಳಲ್ಲಿ ಲೋಕಮಾನ್ಯರು ಸ್ವಂತ ಹಿತ-ಲಾಭ-ಗೌರವಗಳನ್ನು ತ್ಯಾಗಮಾಡಿ ತಾವೇ ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳು, ನಡೆಸುತ್ತಿದ್ದ ಕೇಸರಿ ಪತ್ರಿಕೆಯು, ಪ್ರಥಮ ಸಲವಾಗಿ ರೂಢಿಯಲ್ಲಿ ತಂದ ಗಣಪತಿ ಹಾಗೂ ಶಿವಾಜಿ ಉತ್ಸವಗಳು— ಇವೆಲ್ಲವುಗಳ ಮುಖಾಂತರ ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಯನ್ನು ಬಿತ್ತಿ, ಬೆಳೆಯಿಸಿ, ಪ್ರಜ್ವಲಗೊಳಿಸಿದರು. ಕಾಯದೆ ಕಾನೂನುಗಳಲ್ಲಿ ಮೇಧಾವಿಗಳಾಗಿ, ಗಣಿತ ಶಾಸ್ತ್ರದಲ್ಲಿ ಎತ್ತಿದ ಕೈಯಾಗಿ, ಉಜ್ವಲ ರಾಷ್ಟ್ರಾಭಿಮಾನಿಗಳಾಗಿ, ಸ್ವಾತಂತ್ರ್ಯಯೋಧರಾಗಿ ಲೋಕಮಾನ್ಯ ಟಿಳಕರು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪ್ರಪ್ರಥಮ ಸೇನಾ

ಪತಿಗಳ ಮಾಲಿಕೆಯಲ್ಲಿ ವಿರಾಜಮಾನರಾಗಿದ್ದಾರೆ. ದೇಶಕ್ಕಾಗಿ ಅನೇಕ ಸಲ ಸೆರೆಮನೆಯ ವಾಸವನ್ನು ಅನುಭವಿಸಿದರು; ಸೆರೆಮನೆಯಲ್ಲಿದ್ದಾಗ್ಗೆ 'ಗೀತಾ ರಹಸ್ಯ' ಮೊದಲಾದ ಕೆಲವು ಶ್ರೇಷ್ಠ ತರಗತಿಯ ಗ್ರಂಥಗಳನ್ನು ಬರೆದರು. ಕಾಂಗ್ರೆಸ್ಸಿನಲ್ಲಿ ಸೇರಿ ಅದರ ಅಂದಿನ ಧ್ಯೇಯ ಧೋರಣಗಳನ್ನು ಬದಲಿಸಿ ಅದರ ನಾಯಕರಾಗಿ ನಿಂತರು. ಹೀಗೆ ರಾಷ್ಟ್ರಸ್ವಾತಂತ್ರ್ಯದ ಉಜ್ವಲ ನಾಯಕರಾದ ಲೋಕಮಾನ್ಯ ಟಿಳಕರ ತತ್ವಗಳನ್ನು ತಿಳಿದುಕೊಳ್ಳುವದು, ತ್ಯಾಗಬುದ್ಧಿಯನ್ನು ಅರಗಿಸಿಕೊಳ್ಳುವದು, ರಾಷ್ಟ್ರಾಭಿಮಾನವನ್ನು ರಾಷ್ಟ್ರದ ಅಭ್ಯುದಯಕ್ಕಾಗಿ ವಿನಿಯೋಗಿಸುವದು, ಬುದ್ಧಿಚಾತುರ್ಯವನ್ನು ಅಭ್ಯಸಿಸುವದು, ಕೊರೆದ ದಾರಿಯಲ್ಲಿ ಸಾಗುವದು ಇಂದು ನಮ್ಮೆಲ್ಲರ ಕರ್ತವ್ಯವಾಗಿದೆ. ಇದುವೆ ಅವರ ಪುಣ್ಯದಿನವನ್ನು ಆಚರಿಸುವದರ ವೈಶಿಷ್ಟ್ಯ; ಮಹತಿ.

ಕವೀಂದ್ರ ರವೀಂದ್ರರು

ಅಗಸ್ಟ ೭ ಕವೀಂದ್ರ ರವೀಂದ್ರರ ಪುಣ್ಯದಿನ. ಭಾರತದಾದ್ಯಂತ ಅವರ ಈ ದಿನವನ್ನು ಆಚರಿಸಲಿಕ್ಕೆ ಸಾಕು. ಕವಿ ಸಮ್ರಾಟರಾದ ರವೀಂದ್ರನಾಥ ಠಾಕೂರರು ಬಂಗಾಲ ಪ್ರಾಂತದಲ್ಲಿ ಜನಿಸಿ, ಬೆಳೆದು ದೊಡ್ಡವರಾಗಿ ವಿದ್ವನ್ಮಣಿಗಳಿಗೆ ತಿಲಕಪ್ರಾಯರಾಗಿ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದರು. ಬಂಗಾಲ ಪ್ರಾಂತದ ಕವಿಗಳಾಗಿ ಮಾತ್ರ ಇರದೆ ಇಡಿಯ ವಿಶ್ವದ ಶ್ರೇಷ್ಠ ಕವಿಗಳ ಮಾಲಿಕೆಯಲ್ಲಿ ಶೋಭಿಸುತ್ತಿದ್ದಾರೆ. ವಿಶ್ವಕವಿಗಳೆಂದು ಕೀರ್ತಿವೆತ್ತಿದ್ದಾರೆ. ಅವರು ಬರೆದ ಗೀತಾಂಜಲಿಯು ಅವರಿಗೆ ನೋಬೆಲ್ ಪಾರಿತೋಷಕವನ್ನು ದೊರಕಿಸಿ ಕೊಟ್ಟು ರವೀಂದ್ರರ ತನ್ಮೂಲಕ ಭಾರತದ ಕೀರ್ತಿಯನ್ನು ದಿಗಂತದಲ್ಲಿ ಪಸರಿಸಿತು. ಕವಿಗಳಿದ್ದಂತೆ ರವೀಂದ್ರನಾಥರು ಶ್ರೇಷ್ಠ ಶಿಕ್ಷಣತಜ್ಞರೂ, ಕಲಾಭಿಜ್ಞರೂ ಆಗಿದ್ದರು. ನಿಸರ್ಗಸೌಂದರ್ಯದ ಉಪಾಸಕರಾದ ಅವರು ನಿಸರ್ಗದ ಮಧ್ಯದಲ್ಲಿ ಶಾಂತಿನಿಕೇತನವೆಂಬ ಸಂಸ್ಥೆಯನ್ನು ಸ್ಥಾಪಿಸಿ ಶಿಕ್ಷಣದಲ್ಲಿ ಹೊಸಹಾದಿಯನ್ನು ಹಾಕಿದರು. ಅವರು ಕಟ್ಟಿದ ಈ ಸಂಸ್ಥೆಯು ''ವಿಶ್ವಭಾರತಿ'' ಯೆಂದು ಖ್ಯಾತಿವೆತ್ತಿದೆ. ದೇಶವಿದೇಶಗಳಿಂದ ಶಿಕ್ಷಣ ಪಡೆಯಲು ಜನರು ಅಲ್ಲಿಗೆ ಹೋಗುತ್ತಾರೆ. ರವೀಂದ್ರರು ಕಲೋಪಾಸಕರು: ಕಲೆಯು ಜೀವನದಲ್ಲಿ ಅವಶ್ಯ; ಅದು ಜೀವನವನ್ನು ಮಾರ್ಗದರ್ಶಿಸಬಲ್ಲುದು; ಕಲೆಯು ಜೀವನವನ್ನು ಸುಖಮಯವಾಗಿ, ಶಾಂತಿಮಯವಾಗಿ ಮಾಡಬಲ್ಲದು.

ರವೀಂದ್ರರು ಉಜ್ವಲ ರಾಷ್ಟ್ರಭಕ್ತರೂ ಆಗಿದ್ದರು. ಅವರು ತಮ್ಮ ಸಮಕಾಲೀನ ದೇಶದ ನಾಯಕರ ಸಂಪರ್ಕವನ್ನಿಟ್ಟುಕೊಂಡಿದ್ದರು; ರಾಷ್ಟ್ರದ ಅಭ್ಯುದಯಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಯತ್ನಿಸಿ ದೇಶದ ಸೇವೆ ಮಾಡಿದರು.

ಹೀಗೆ ಶ್ರೇಷ್ಠ ಕವಿಗಳೂ, ಕಾದಂಬರಿಕಾರರೂ, ನಾಟಕಕಾರರೂ, ಶಿಕ್ಷಣತಜ್ಞರೂ, ಕಲಾಭಿರುಚಿಯುಳ್ಳವರೂ ಸೌಂದರ್ಯೋಪಾಸಕರೂ, ರಾಷ್ಟ್ರಾಭಿಮಾನಿಗಳೂ ಆದ ರವೀಂದ್ರನಾಥರ ಪುಣ್ಯದಿನವನ್ನು ಆಚರಿಸುವದು ಭಾರತೀಯರಾದ ನಮ್ಮೆಲ್ಲರ ಕರ್ತವ್ಯ. ಪ್ರತಿವರುಷ ಅಗಸ್ಟ ೭ರಂದು ಅವರ ಪುಣ್ಯದಿನವನ್ನು ಆಚರಿಸಿ ಅವರ ಸಾಹಿತ್ಯಸೇವೆಯನ್ನು ಹಾಗೂ ಇತರ ರಂಗಗಳ ಸೇವೆಯನ್ನು ಅರಿತು ಆಚರಣೆಯಲ್ಲಿ ತರುವದು ನಮ್ಮ ಪಾಲಿನ ಪವಿತ್ರ ಕರ್ತವ್ಯವೆಂದು ನಾವು ತಿಳಿದುಕೊಳ್ಳಬೇಕು.

ವನಮಹೋತ್ಸವ

ವರ್ಷ ಪರಂಪರೆಯಂತೆ ಈ ಸಲದ ವರ್ಷಾಕಾಲವು ದೇಶದಾದ್ಯಂತ ವನಮಹೋತ್ಸವವನ್ನು ಹರ್ಷದಿಂದ ಸ್ವಾಗತಿಸಿತು. ಆಯಾ ರಾಜ್ಯಗಳಿಗೆ ಹಾಗೂ ಆಯಾ ಜಿಲ್ಹೆಗಳಿಗೆ ಅನುಗುಣವಾಗುವಂತೆ ಮಳೆಗಾಲದ ಒಂದು ವಾರವನ್ನು ಗಿಡ ನೆಡುವದಕ್ಕೆ ಇಟ್ಟುಕೊಳ್ಳಲಾಯಿತು; ಗಿಡ ನೆಡುವ ಈ ಕಾರ್ಯವು ಒಂದು ವಾರಕ್ಕೇ ಮೀಸಲಾಗಿರಿಸಲ್ಪಟ್ಟಿದ್ದರೂ ಇಡೀ ಮಳೆಗಾಲವನ್ನೆಲ್ಲ ಇದಕ್ಕಾಗಿ ಉಪಯೋಗಿಸಲಡ್ಡಿಯಿಲ್ಲವೆಂದು ತಿಳಿಯಲಾಗಿದೆ.

ವನದಿಂದಲೇ ನಾಡು ನಿಜವಾದ ನಾಡಾಗಬಲ್ಲುದು; ಗಿಡಗಂಟೆಗಳಿಂದ ಅರ್ಥಾತ್ ಅರಣ್ಯದಿಂದಲ್ಲವೇ ಮಳೆಯು ಹೆಚ್ಚಾಗಿ ಸುರಿಯುವದು; ಬೆಳೆ ಬರುವದು ! ಬೆಳೆಗಳಿಂದ ನಾಡು ಸಮೃದ್ಧ ನಾಡಾಗುವದು !! ಗಿಡ ನೆಡುವ ಈ ಕೆಲಸಕ್ಕಾಗಿ ಸರಕಾರದವರು ಪುಕ್ಕಟೆಯಾಗಿ ಅಗಿಗಳನ್ನು ಕೊಡುವ ವ್ಯವಸ್ಥೆಯಿಟ್ಟಿರುವರು. ಮತ್ತು ಹೆಚ್ಚು ಗಿಡಗಳನ್ನು ನೆಟ್ಟು ಪೋಷಿಸಿದ ಹಳ್ಳಿಗಳಿಗೆ ಬಹುಮಾನಗಳನ್ನು ಕೊಡುವರು.

ಗಿಡ ನೆಡುವ ಈ ಉತ್ಸವವನ್ನು ರಾಜ್ಯದ ಜಿಲ್ಹೆಗಳಲ್ಲೆಲ್ಲ ಅತಿ ಸಂಭ್ರಮದಿಂದ ಆಚರಿಸಿರಲಿಕ್ಕೆ ಸಾಕು.

ಆಚರಿಸುವದು ನಡೆದಿರಲೂ ಸಾಕು. ನಮ್ಮ ಜನಹಿತ ಸರಕಾರದವರ ಇಂತಹ ಸ್ತುತ್ಯ ಕೆಲಸಗಳಲ್ಲಿ ನೆರವಾಗಿ, ಪಾಲುಗಾರರಾಗಿ ಭಾಗವಹಿಸಿ ನಾಡಿನ ಅಭ್ಯುದಯಕ್ಕೆ ಕಾರಣರಾಗೋಣ.

೯ ನೆಯ ಸ್ವಾತಂತ್ರ್ಯ ವರ್ಧಂತ್ಯುತ್ಸವ

ಅಗಸ್ಟ ೧೫ ನಮ್ಮ ಪತ್ರಿಕೆಯು ಪ್ರಕಟವಾಗಿ ಓದುಗರ ಬಳಿಗೆ ಹೊರಡುವ ದಿನ. ಭಾರತ ಸ್ವಾತಂತ್ರ್ಯ ದಿನ. ೧೯೪೭ ನೆಯ ಅಗಸ್ಟ ೧೫ ರಂದು ಭಾರತ ಮಾತೆಯು ದಾಸ್ಯ ಸಂಕೋಲೆಗಳನ್ನು ಹರಿದು ಬಂಧ ವಿಮುಕ್ತಳಾಗಿ ಸ್ವತಂತ್ರಳಾದಳು. ಅಂದಿನಿಂದ ಇಂದಿಗೆ ೮ ವರ್ಷಗಳು ಗತಿಸಿ ಇಂದು ೯ ನೆಯ ವರುಷದಲ್ಲಿ ನಾವೆಲ್ಲರೂ ಕಾಲಿಟ್ಟಿದ್ದೇವೆ; ೯ ನೆಯ ಸ್ವಾತಂತ್ರ್ಯ ಹಬ್ಬವನ್ನು ಆಚರಿಸುತ್ತಿದ್ದೇವೆ. ಅನಂತ ನೀಲ ಗಗನದಲ್ಲಿ ಕೇಸರಿ, ಬಿಳಿದು, ಹಸಿರು ಬಣ್ಣಗಳಿಂದ ಕೂಡಿ ಮಧ್ಯದಲ್ಲಿ ಅಶೋಕ ಚಕ್ರವನ್ನಿರಿಸಿಕೊಂಡು ರಾಷ್ಟ್ರಧ್ವಜವು ಹಾರಾಡುತ್ತಿದೆ. ಸ್ವಾತಂತ್ರ್ಯ ಗೀತೆಗಳ ಹೆಮ್ಮೇಳವು ಮಾರುಲಿಯುತ್ತಿದೆ; ಭೂಮಿ-ಆಕಾಶಗಳು ಪುಳಕ ಹೊಂದುತಿವೆ.

ಭಾರತವು ಸ್ವತಂತ್ರವಾದನಂತರದ ಎಂಟು ವರುಷಗಳಲ್ಲಿ ಸಾಧಿಸಿದ್ದೇನು ಎಂಬುದನ್ನು ೯ ನೆಯ ವರುಷದಲ್ಲಿ ಕಾಲಿಡುವ ನಾವು ಅರಿಯಬೇಕು. ತನ್ನದೇ ಆದ ರಾಜ್ಯ ಘಟನೆಯನ್ನು ನಿರ್ಮಿಸಿ, ಕೇಂದ್ರ ಹಾಗೂ ರಾಜ್ಯಗಳಲ್ಲಿ ಲೋಕನಿಯುಕ್ತ ಭದ್ರ ಸರಕಾರಗಳನ್ನೂ ಕಟ್ಟಿ, ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಯೋಜಿಸಿ ಅದರ ನ್ವಯ ಕಾರ್ಯಗಳನ್ನು ಹಮ್ಮಿ ಭಾರತವು ಇಂದು ಅಭಿವೃದ್ಧಿಯತ್ತ ಭರದಿಂದ ಸಾಗಿದೆ. ಇತರ ರಂಗಗಳಲ್ಲಿಯಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಸುಧಾರಣೆಯು ನಡೆದಿದೆ. ಅಂದಿನ ಪೊಳ್ಳು ಶಿಕ್ಷಣವು ಬಾಳು ಶಿಕ್ಷಣಕ್ಕೆ ಇಂದು ಎಡೆಕೊಡುತ್ತಿದೆ. ದೇಶದ ಸಂಸ್ಕೃತಿಯ ಅಡಿಗಲ್ಲು ಶಿಕ್ಷಣವೆಂಬುದನ್ನು ಜನನಾಯಕರು ಅರಿತು ಶಿಕ್ಷಣಕ್ಕೆ ಎಂದಿಲ್ಲದ ಮಹತ್ವವನ್ನು ಕೊಡುತ್ತಿರುವದು ಕಂಡುಬರುತ್ತಿದೆ. ಶಿಕ್ಷಣದ ವೆಚ್ಚವು ಇಂದು ಅಂದಿಗಿಂತ ಆರೇಳು ಪಟ್ಟು ಅಧಿಕವಾಗಿ ಅನೇಕ ಶಿಕ್ಷಣ ಸಮೀಕ್ಷಾ ಸಮಿತಿಗಳು ಏರ್ಪಟ್ಟು ತಮ್ಮ ಕಾರ್ಯವನ್ನು ನಿರ್ವಹಿಸುತ್ತವೆ.

ಆಹಾರ ರಂಗದಲ್ಲಿ ದೇಶವು ಇಂದು ಸ್ವಾವಲಂಬಿಯಾಗಿದೆ. ಅನ್ನ, ಅನ್ನವೆಂಬ ಅಂದಿನ ಆರ್ತನಾದವು ಇಂದು ಮಾಯವಾಗಿ, ನೀರಾವರಿ ಯೋಜನೆ ಮೊದಲಾದವುಗಳಿಂದ ಆಹಾರದಿಶೆಯಲ್ಲಿಯೂ ದೇಶವು ಸಮೃದ್ಧಿಯಾಗಿದೆ.

ಭಾರತದ ವಿದೇಶ ಧೋರಣೆಯಂತೂ ಶ್ಲಾಘನೀಯವಾಗಿದೆ. ಪ್ರಧಾನಾಮಾತ್ಯರಾದ ಭಾರತೀಯರ ಕಣ್ಮಣಿ ಶ್ರೀ ಜವಾಹರಲಾಲ ನೆಹರೂರವರ ನಾಯಕತ್ವದಲ್ಲಿ ನಮ್ಮ ರಾಷ್ಟ್ರವು ಅಂತರ್ರಾಷ್ಟ್ರೀಯ ವ್ಯವಹಾರದಲ್ಲಿ ಪ್ರಥಮ ಶ್ರೇಣಿಯನ್ನು ಪಡೆದಿದೆ. ಕೆಲ ವರುಷಗಳ ಹಿಂದೆ ಯುದ್ಧ ಹಾಗು ಅಸಂತೋಷಗಳ ಭಯದಿಂದ ಕೂಡಿದ ಪ್ರಪಂಚವು ಭಾರತದ ಇಂದಿನ ವಿದೇಶ ಧೋರಣೆಯ ಪರಿಣಾಮವಾಗಿ ಶಾಂತಿ—ಸಮಾಧಾನಗಳತ್ತ ಸಾಗಿದೆ. ಪೂಜ್ಯ ಜವಾಹರಲಾಲರ ಚೀನ, ಇಂಡೋನೇಶಿಯಾಗಳ ಸಂದರ್ಶನ, ರಶಿಯಾ ಮತ್ತು ಪಶ್ಚಿಮ ಯುರೋಪಗಳ ಸಂಚಾರ, ಬಾಂಡುಂಗ ಪರಿಷತ್ತು ಇವೇ ಮೊದಲಾದವು ಜಗತ್ತನ್ನು ಶಾಂತಿಯ ಕಡೆಗೆ ಒಯ್ಯುವ ವೈಶಿಷ್ಟ್ಯಗಳಾಗಿವೆಯೆಂದೂ ಭಾರತದ ಗೌರವವನ್ನು ಇನ್ನಿಷ್ಟು ಹೆಚ್ಚಿಸಲಿಕ್ಕೆ ಕಾರಣೀಭೂತವಾಗಿವೆಯೆಂದೂ ಹೇಳಬಹುದಾಗಿದೆ.

೯ನೆಯ ವರ್ಧಂತ್ಯುತ್ಸವವು ಭಾರತವು ಸಾಧಿಸಿದ ಇವೇ ಮೊದಲಾದುವನ್ನು ನೆನೆವ ದಿನ; ದೇಶವು ಹೆಜ್ಜೆ ಇಡಲಿರುವ ಈ ೯ನೆಯ ವರುಷವು ರಾಷ್ಟ್ರಕ್ಕೆ ಸುಖಮಯವಾಗಿ ಅಭ್ಯುದಯಯುಕ್ತವಾಗಿ ಪರಿಣಮಿಸಲೆಂದು ಹಾರೈಸೋಣ ಇಂದು ಈ ವರ್ಧಂತಿ ದಿನದಂದು.

ಹಳ್ಳಿಗಾಡಿನಲ್ಲಿಯ ಸಣ್ಣ ಶಾಲೆಗಳ ಶಿಕ್ಷಕರಿಗಾಗಿ ಸೂಚನೆಗಳ ಕೈಪಿಡಿ

ಅನುವಾದಕರು : ಶ್ರೀ ಶಿಂತ್ರಿ ಬಸಪ್ಪನವರು, ಬಿ.ಎ., ಬಿ.ಟಿ.
ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನ್ಸ್‌ಪೆಕ್ಟರ, ದಕ್ಷಿಣಭಾಗ, ಧಾರವಾಡ ಹಾಗೂ ಗೌರವ ಕಾರ್ಯದರ್ಶಿ ಮತ್ತು ಲಾಯಿಬ್ರೇರಿಯನ್, ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

೫ನೆಯ ಪ್ರಕರಣ

:: ಸಂಘಟನೆ (ಬ) ::

(ಕಳೆದ ಸಂಚಿಕೆಯಿಂದ ಮುಂದುವರಿದುದು)

ವೇಳಾಪತ್ರಿಕೆ

ಸಣ್ಣ ಹಳ್ಳಿಯ ಶಾಲೆಯಲ್ಲಿ ಯೋಗ್ಯ ವೇಳಾಪತ್ರಿಕೆಯನ್ನು ತಯಾರಿಸುವದು ಕಠಿಣವಿದೆ. ಬಹುಜನ ಶಿಕ್ಷಕರಿದ್ದ ಶಾಲೆಗಳಲ್ಲಿ ಸಹ ವೇಳಾಪತ್ರಿಕೆಯನ್ನು ತಯಾರಿಸುವದೆಂದರೆ ಅದೊಂದು ತಲೆತಿನ್ನುವ ಕೆಲಸವೇ ಸರಿ. ಒಬ್ಬ ಶಿಕ್ಷಕ ಶಾಲೆಯಲ್ಲಿ ಅದರ ಪಾಡನ್ನು ಕೇಳುವದೇ ಬೇಡ. ಮಿತಿ ಮೀರಿದ ತೊಂದರೆಗಳು ಥುತ್ತೆಂದು ಎದುರಿಗೆ ಬಂದು ನಿಲ್ಲುವವು. ತನ್ನ ವೇಳೆಯು ಎಲ್ಲ ವರ್ಗಗಳಿಗೆ ಸಮನಾಗಿ ಹಂಚಲ್ಪಟ್ಟಿದೆಯೋ ಹೇಗೆ, ಪ್ರತಿಯೊಂದು ವರ್ಗವು ಪ್ರಾರಂಭದಿಂದ ಕೊನೆಯ ವರೆಗೆ ಒಂದಿಲ್ಲೊಂದು ಪಾಠದಲ್ಲಿ ತೊಡಗಿರುವದೋ ಹೇಗೆ, ಅಭ್ಯಾಸ ಪತ್ರಿಕೆಯೊಳಗಿನ ಪ್ರತಿಯೊಂದು ವಿಷಯಕ್ಕೆ ಸಾಕಷ್ಟು ಗಮನವು ಕೊಡಲ್ಪಟ್ಟಿದೆಯೋ ಹೇಗೆ, ವರ್ಗಗಳನ್ನು ಕೂಡಿಸಿ ಕಲಿಸುವಾಗ ಪ್ರತಿಯೊಂದು ವರ್ಗದ ಅಭ್ಯಾಸವು ಅಭ್ಯಾಸ–ಪತ್ರಿಕೆಗನುಸರಿಸಿ ನಡೆದಿದೆಯೋ ಹೇಗೆ, ಈ ಎಲ್ಲ ಸಂಗತಿಗಳ ಬಗೆಗೆ ಶಿಕ್ಷಕನು ತನ್ನ ಮನಸ್ಸಿಗೆ ಖಾತ್ರಿ ಮಾಡಿಕೊಳ್ಳಬೇಕಾಗುವದು. ನಿರ್ದಿಷ್ಟವಾದೊಂದು ವಿಷಯವನ್ನು ಯಾವ ವೇಳೆಯಲ್ಲಿ ಎಲ್ಲ ವರ್ಗಗಳಿಗೆ ತಾನು ಕಲಿಸಬೇಕೆಂಬುದನ್ನೂ, ಯಾವ ವರ್ಗಕ್ಕೆ ತಾನು ಕಲಿಸಬೇಕೆಂಬುದನ್ನೂ, ಯಾವ ವರ್ಗಕ್ಕೆ ಹಿರೇಮಣಿಯು ಕಲಿಸಬೇಕೆಂಬುದನ್ನೂ, ಯಾವ ವರ್ಗವು ಯಾರೊಬ್ಬರ ಮೇಲ್ವಿಚಾರಣೆಯಿಲ್ಲದೆ ತನ್ನಷ್ಟಕ್ಕೆ ತಾನೇ ಕೆಲಸ ಮಾಡಬೇಕಾಗುತ್ತದೆಯೆಂಬುದನ್ನೂ ಬರೆದಿಟ್ಟುಕೊಳ್ಳಬೇಕು. ಹೀಗಾಗಿ, ವೇಳಾಪತ್ರಿಕೆಯನ್ನು ತಯಾರಿಸುವಾಗ ಶಿಕ್ಷಕನು ಚನ್ನಾಗಿ ವಿಚಾರ ಮಾಡಿ ತಕ್ಕ ಮುಂಜಾಗ್ರತೆಯನ್ನು ವಹಿಸಬೇಕಾಗುವದು. ರೂಢಿ ಇಲ್ಲವೆ ಪುನರಾವೃತ್ತಿ ಪಾಠಗಳು ನಡೆದಾಗ ಹಿರೇಮಣಿಯು ಬಹುತರವಾಗಿ ಇದ್ದೇ–ಇರುತ್ತಾನೆ. ಶಿಕ್ಷಕನು ಒಂದು ವರ್ಗಕ್ಕೆ ಕಲಿಸುತ್ತ ಕುಳಿತಾಗ ಉಳಿದ ವರ್ಗಗಳನ್ನು ಪೂರಾ ಮರೆಯತಕ್ಕದ್ದಲ್ಲ. ಎಲ್ಲ ವರ್ಗಗಳ ಕೆಲಸವನ್ನು ಸಾಗಿಸಿಕೊಂಡು ಹೋಗುವ ಜಾಣ್ಮೆಯನ್ನು ಪಡೆಯಬೇಕು.

ಮುಂಜಾನೆಯ ಪ್ರಾರ್ಥನೆಯು ಮುಗಿದ ಕೂಡಲೆ ಗಡಚಾದ ವಿಷಯಗಳನ್ನು ಇಟ್ಟುಕೊಳ್ಳಬೇಕು. ದೊಡ್ಡ ಹುಡುಗರಿಗಾಗಿ ೪೦ ನಿಮಿಷಗಳ ಅವಧಿಯನ್ನು ಮಾಡಿಟ್ಟುಕೊಂಡಿದ್ದರೆ, ಚಿಕ್ಕ ಮಕ್ಕಳಿಗಾಗಿ ಕಡಿಮೆ ವೇಳೆಯ

ಅವಧಿಗಳನ್ನು ಮಾಡಬೇಕು. ಯಾಕಂದರೆ ಅವರ ಅವಧಾನವು ದೀರ್ಘ ಅವಧಿಯ ವರೆಗೆ ತಡೆದು ನಿಲ್ಲಲಾರದು. ಶಿಕ್ಷಕನ ಸ್ವಾತಂತ್ರ್ಯವನ್ನೂ ಮಕ್ಕಳ ಸ್ವಾಭಾವಿಕ ಆಸಕ್ತಿಯನ್ನೂ ಅಪಹರಣ ಮಾಡುವಷ್ಟು ಕಟ್ಟುನಿಟ್ಟಾಗಿ ವೇಳಾಪತ್ರಿಕೆಯನ್ನು ಅನುಸರಿಸಬಾರದು. ಅನಿರೀಕ್ಷಿತವಾಗಿ ಉದ್ಭವಿಸುವ ಸಂದರ್ಭಗಳಿಗೋಸ್ಕರ ವೇಳಾಪತ್ರಿಕೆಯಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳಬೇಕು. ಋತುಮಾನದ ಬದಲಾವಣೆಯಾದಾಗ, ಸ್ಥಳೀಯ ಉತ್ಸವಗಳಿದ್ದಾಗ, ಜಾತ್ರೆ-ಉರುಸುಗಳಾಗುವಾಗ, ಇಲ್ಲವೆ ಎಲ್ಲ ಮಕ್ಕಳ ಮನಸಿಗೆ ಬಂದಂತಹ ಪ್ರಸಂಗದಲ್ಲಿ ಜಾಣರಾದ ಶಿಕ್ಷಕರು ವೇಳಾಪತ್ರಿಕೆಯಲ್ಲಿ ತಕ್ಕ ಹೆಚ್ಚು ಕಡಿಮೆಗಳನ್ನು ಕೂಡಲೆ ಮಾಡಿಕೊಳ್ಳುವದು ಲೇಸು. ಮುಂಜಾನೆಯ ಪ್ರಾರ್ಥನೆಯ ವೇಳೆಯಲ್ಲಿ ನಿತ್ಯದ ಕಾರ್ಯಕ್ರಮವನ್ನು ಚರ್ಚಿಸುವದು, ವಾರಕ್ಕೊಮ್ಮೆ ಆ ವೇಳೆಯಲ್ಲಿ ವಾರದ ಪ್ರಗತಿಯನ್ನು ಪುನರವಲೋಕನ ಮಾಡುವದು, ಇವೆರಡೂ ನಿಜವಾಗಿ ಉತ್ತಮ ಪದ್ಧತಿಗಳಾಗಿವೆ.

ಹಳ್ಳಿಗಾಡದ ಸಮಾಜವು

ಸಣ್ಣ ಹಳ್ಳಿಯಲ್ಲಿ ಸಾಲೆಯು ತಾನು ಸೇವೆಗೈಯ್ಯುತ್ತಿರುವ ಸಮಾಜದೊಂದು ಅಂಗವಾಗಿದೆಯಷ್ಟೆ. ಅದು ಸಮಾಜದ ಕೇಂದ್ರವಾಗಿ ಕೆಲಸ ಮಾಡಬೇಕಾಗುತ್ತಿದೆಯಾದುದರಿಂದ ಸಾಲೆಯು ಆ ಹಳ್ಳಿಯ ಶೈಕ್ಷಣಿಕ ಸಾಮಾಜಿಕ ಹಾಗೂ ಮನರಂಜನ ಕಾರ್ಯಕ್ರಮಗಳೆಲ್ಲವುಗಳ ಉಗಮ ಸ್ಥಾನವಾಗಿ ಶಿಕ್ಷಕನು ಅವುಗಳ ಚಾಲಕನಾಗಬೇಕು. ಸಾಲೆಯು ಆ ಹಳ್ಳಿಯ ದವಾಖಾನೆಯಂತೆ, ಪುಸ್ತಕಾಲಯದಂತೆ, ಓದುವ ಮನೆಯಂತೆ, ಹಾಗೂ ಪಂಚಾಯತಿಯ ಇಲ್ಲವೆ ಬೇರೆ ಸಭೆಗಳ ಸಭಾಸ್ಥಾನದಂತೆ ಇದ್ದುಕೊಂಡು ಕೆಲಸ ಮಾಡಬಹುದು. ಒಟ್ಟಿನಲ್ಲಿ, ಅದು ಆ ಹಳ್ಳಿಯ ಸಂತೋಷಕೂಟದ ಮನೆ (club–house)ಯಂತೆ ಇರಬಹುದು. ಹಳ್ಳಿಯಲ್ಲಿ ಬಹುತರವಾಗಿ ಶಿಕ್ಷಕನೊಬ್ಬನೇ ಸುಶಿಕ್ಷಿತನಿರುವದರಿಂದ ಸಮಾಜದ ಮುಖಂಡನಾಗಿ ಆತನು ಮಾರ್ಗದರ್ಶನ ಮಾಡಬೇಕಾಗುವದು. ಹಳ್ಳಿಗರು ಆತನೆಡೆಗೆ ಬಂದು ಕೇಳಿದಾಗೆಲ್ಲ ಸಲಹೆ-ಸೂಚನೆಗಳನ್ನೀಯಲು ಸದಾ ಸಿದ್ಧನಿರಬೇಕು.

ಸಾಲೆಯ ಮಕ್ಕಳ ಮನೆಯ ಹಾಗೂ ಮನೆತನ ಪರಿಸ್ಥಿತಿಯನ್ನು ಕುರಿತು ಹೆಚ್ಚಿನ ಜ್ಞಾನ ಮಾಡಿಕೊ ಲೋಸುಗ ಶಿಕ್ಷಕನು ಆಯಾ ಮಕ್ಕಳ ತಂದೆ-ತಾಯಿಗ ಇಲ್ಲವೆ ಪಾಲಕರ ಗೂಡ ನಿಕಟ ಸಂಬಂಧವನ್ನಿಟ್ಟುಕೊ ಳ್ಳಬೇಕು. ಶಿಕ್ಷಣವು ಅವ್ಯಾಹತವಾಗಿ ಸಾಗುವದೊಂದ ಕ್ರಮವಿದೆ; ಅದು ಸಾಲೆಯ ಒಳಗೂ ಹೊರಗೂ ನ ಯುತ್ತಿದೆ; ಅದರ ಹೊಣೆಯು ಶಿಕ್ಷಕನ ಮೇಲಿದ್ದಷ್ಟ ಸಮಾಜದ ಮೇಲೆಯೂ ತಂದೆ-ತಾಯಿಗಳ ಮೇಲೆಯ ಇರುವದರಿಂದ ಅವರೆಲ್ಲರೂ ಸಹಕರಿಸಬೇಕು; ಇವೆಲ್ಲ ಶಿಕ್ಷಣದ ಈಗಿನ ಪ್ರಗತಿಪರ ಧೋರಣಗಳಾಗಿವೆ. ಆದ ರಿಂದ, ಶಿಕ್ಷಕನು ಸಮಾಜದ ಮುಖಂಡನಾಗಿ ಸೇವೆಗೈ ಯುವ ಹೊಣೆಯನ್ನು ಹೊರಲು ಕಲಿಯಬೇಕು.

ಸಾಮೂಹಿಕ ಹಿತಗಳು, ನಿಕಟ ಋಣಾನುಬಂ ಗಳು, ಮೈತ್ರಿಯ ವ್ಯವಹಾರಗಳು, ಇವುಗಳಿಂದ ಹಳ್ಳಿಯ ಸಮಾಜವು ಮೈಗೊಂಡಿರುತ್ತಿದೆಯಾದುದರಿಂದ ಶಿಕ್ಷಕನ ಅವುಗಳಲ್ಲೆಲ್ಲ ಒಳಹೊಕ್ಕು ಭಾಗವಹಿಸಬೇಕು. ಜನ ನ್ನೆಲ್ಲ ಕರೆದು ವರ್ತಮಾನ ಪತ್ರಗಳನ್ನೋದಿ ತೋ ಸುದ್ದಿಗಳನ್ನು ಅವರ ಗೂಡ ಚರ್ಚಿಸಬಹುದು; ತಂದೆ-ತಾಯಿಗಳ ಇಲ್ಲವೆ ಪಾಲಕರ ಸಭೆಗಳನ್ನು ಕರೆದು ಸಾ ಯಲ್ಲಿ ತಲೆದೋರಿದ ತೊಂದರೆಗಳನ್ನು ಹಾಗೂ ಸಮಸ್ ಗಳನ್ನು ಕುರಿತು ಅವರ ಗೂಡ ಚರ್ಚಿಸಬಹುದು; ಸಾಮಾಜಿಕ ಸಭೆಗಳಲ್ಲಿ ಭಾಗವಹಿಸಿ ಹಳ್ಳಿಯ ಆರ್ಥಿ ಸಾಮಾಜಿಕ-ಆರೋಗ್ಯ-ಮನರಂಜನ ವಿಷಯಗಳಲ್ಲಿ ಅಡಚಣೆಗಳನ್ನು ಜನರಿಗೆ ತೋರಿಸಿ ಕೊಡಬಹುದು; ನಾಟಕಗಳನ್ನು, ಮಕ್ಕಳ ಕೈಕೆಲಸಗಳ ಪ್ರದರ್ಶನಗಳನ್ನು ಬೈಲಾಟದ ಕುಣಿತಗಳನ್ನು, ಆಟಗಳ ಇಲ್ಲವೆ ಪದಗ ಪಂದ್ಯಾಟಗಳನ್ನು ಏರ್ಪಡಿಸಬಹುದು; ಹಬ್ಬ-ಹುಣ್ಣಿಮೆ ಗಳನ್ನು ಸಾಮೂಹಿಕವಾಗಿ ಆಚರಿಸಲು ಸಹಾಯಕನಾ ಬಹುದು; ಸಾಲೆಯಲ್ಲಿಯ ದೊಡ್ಡ ಮಕ್ಕಳ ಸಹಾಯ ದಿಂದ ಹಳ್ಳಿಯಲ್ಲಿಯ ನಿರಕ್ಷರಿಗಳಾದ ಪ್ರೌಢರಿಗೆ ಕ ಸಲು ವರ್ಗಗಳನ್ನು ತೆಗೆಯಬಹುದು; ಹಳ್ಳಿಯ ಆರೋ ಗ್ಯವನ್ನೂ ಸ್ವಚ್ಛತೆಯನ್ನೂ ಕಾಪಾಡಲು ಸಾಲೆಯ ಮಕ್ಕಳ ತಂಡವೊಂದನ್ನು ಸಂಘಟಿಸಬಹುದು. ಇವೆಲ್ಲ ಗಳನ್ನು ಪ್ರತಿಯೊಬ್ಬ ಶಿಕ್ಷಕನು ಕೈಕೊಳ್ಳಬೇಕೆಂಬುದ ನಮ್ಮ ಉದ್ದೇಶವಲ್ಲ. ಆದರೆ, ತಂದೆ-ತಾಯಿಗಳ ಹಾಗ

ಕ್ಕಳ ಸಹಕಾರ ಪಡೆದು ಜಾಣನಾದ ಮತ್ತು ಸಮಾಜ ವೆ ಮಾಡಬೇಕೆಂಬ ಹಂಬಲವುಳ್ಳ ಶಿಕ್ಷಕನು ಎಷ್ಟು ರನಾಗಿ ಆ ಹಳ್ಳಿಯ ಸೇವೆಯನ್ನು ಮಾಡಬಲ್ಲನೆಂಬು ನ್ನು ಮೇಲೆ ವಿವರಿಸಲಾಗಿದೆ. ತನಗೆ ಶಕ್ಯವಿದ್ದಷ್ಟವುಗ ನ್ನು ಎತ್ತಿಕೊಂಡು ಅವುಗಳನ್ನಷ್ಟೇ ಕಾರ್ಯರೂಪಕ್ಕಿಳಿಸ ಹುದು. ದೊಡ್ಡ ದೊಡ್ಡ ಹಬ್ಬಗಳಲ್ಲಿ ಊರ ಜನರ ನಸರಂಜನವನ್ನು ಇಲ್ಲವೆ ಹಿತವನ್ನು ಕುರಿತು ಮೇಲೆ ಳಿದಂತಹ ಚಟುವಟಿಕೆಗಳ ಕಾರ್ಯಕ್ರಮಗಳನ್ನು ಚಿಸಿಕೊಳ್ಳಬಹುದು. ಒಟ್ಟಿನಲ್ಲಿ ಶಿಕ್ಷಕನು ಸಮಾಜದಲ್ಲಿ ರೆತು ಒಂದಾಗಿ ಅದರ ಸೇವೆ ಮಾಡುವ ಹೊಣೆಯನ್ನು ೊರಲು ಸಿದ್ಧನಿರಬೇಕು.

ಮೇಲೆ ಹೇಳಿದ್ದೆಲ್ಲ ಶಕ್ಯವಾಗಬೇಕಿದ್ದರೆ ಶಿಕ್ಷಕನು ದ್ರಿಯಂತೆ ತ್ಯಾಗ-ನಿಷ್ಠೆ ಭಾವನೆಗಳಿಂದಲೂ ಹುರುಪು ಮ್ಮಸಗಳಿಂದಲೂ ಕೆಲಸ ಮಾಡಲು ಸಿದ್ಧನಾಗಬೇಕು. ತ್ತು ಹಾಗೆ ಮಾಡುವದರಿಂದ ತನ್ನ ಮನಸ್ಸಿಗೆ ತೃಪ್ತಿ ಗುವದೆಂಬುದನ್ನು ನಂಬಿರಬೇಕು. ಹಳ್ಳಿಗಾಡದಲ್ಲಿ ಲಸ ಮಾಡುವ ಶಿಕ್ಷಕರನ್ನು ಅಧೈರ್ಯಗೊಳಿಸುವ ಸಂಗತಿ ಳು ವಿಪುಲವಾಗಿದ್ದಾಗ್ಯೂ ಬಹಳಷ್ಟು ಶಿಕ್ಷಕರು ಎಲ್ಲರು ದೆನ್ನುವ ಹಾಗೆ ಕೆಲಸ ಮಾಡಿ ಮಕ್ಕಳ ಹೃದಯಗ ನ್ನು ಜಯಿಸಿರುವರಲ್ಲದೆ ತಂದೆ-ತಾಯಿಗಳ ವಿಶ್ವಾಸಕ್ಕೆ ಾತ್ರರಾಗಿ ಸಮಾಜದಲ್ಲಿ ತಮ್ಮದೇ ಆದೊಂದು ವಿಶಿಷ್ಟ ಾಗೂ ಪೂಜ್ಯ ಸ್ಥಾನವನ್ನು ಪಡೆದುಕೊಂಡಿದ್ದಾರೆ. ೋಗ್ಯ ಧೋರಣೆ ಮತ್ತು ಕಾರ್ಯಕುಶಲತೆಯುಳ್ಳ ಪ್ರತಿ ೊಬ್ಬ ಶಿಕ್ಷಕನು ಹಳ್ಳಿಗಾಡದ ಜೀವನದ ಸುಧಾರಣೆ ೋಸ್ಕರ ಕೆಲಮಟ್ಟಿಗಾದರೂ ತನ್ನ ಪಾಲಿನ ಸೇವೆ ನ್ನು ಅರ್ಪಿಸಬಲ್ಲನು. ಶಿಕ್ಷಣಾಧಿಕಾರಿಗಳು ಹಳ್ಳಿಗಾಡ ಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಸಾಂಸ್ಕೃತಿಕ ಹಾಗೂ ಪ್ರಪಂಚಿಕ ಸೌಕರ್ಯಗಳನ್ನು ಒದಗಿಸಿಕೊಟ್ಟರೆ ಮಾತ್ರ ೇಲೆ ವಿವರಿಸಿದುದೆಲ್ಲ ಜರುಗಲು ಶಕ್ಯವಿದೆಯೆಂಬ ಾತನ್ನು ಪುನಃ ಹೇಳುವ ಅವಶ್ಯಕತೆಯಿಲ್ಲ.

ಾಲೆ

ಸಾಲೆಯಲ್ಲಿ ಮಕ್ಕಳಿಗೆ ಗಾಳಿ-ಚಳಿ-ಮಳೆ-ಬಿಸಿಲು ಳಿಂದ ಬಾಧೆಯು ತಟ್ಟಬಾರದು; ಮಕ್ಕಳು ಸಾಲೆಯನ್ನು ್ರವೇಶಿಸಿದ ಕೂಡಲೆ ಅಲ್ಲಿಯ ಸ್ವಚ್ಛತೆ-ಓರಣಗಳು ಅವ ಲ್ಲಿ ಹೊಸ ಉತ್ಸಾಹವನ್ನು ಹುಟ್ಟಿಸುವಂತಿರಬೇಕು; ಈ ವ್ಯವಸ್ಥೆಯನ್ನು ಸಾಧಿಸಲೋಸುಗ ಶಿಕ್ಷಕನೂ ಮಕ್ಕಳೂ ಪಾಲಕರೂ ಕೂಡಿಕೊಂಡು ಸಹಕಾರದಿಂದ ಹೆಣಗಾಡಬೇಕು. ಹಳ್ಳಿಗಾಡದಲ್ಲಿಯ ಪ್ರತಿ ಸಾಲೆಗೊಂದು ಕೈದೋಟವಿರಬೇಕು ಮತ್ತು ಸಾಲೆ-ಕೈದೋಟಗಳ ಸುತ್ತಲು ಒಂದು ಬೇಲಿಯಿರಬೇಕು. ಸಾಲೆಗೆ ತಕ್ಕ ಇಮಾರತಿಯು ಸಿಗದಿದ್ದ ಊರಲ್ಲಿ ಶಿಕ್ಷಕನು ಇಲ್ಲವೆ ಶಿಕ್ಷಣಾಧಿಕಾರಿಗಳು ಊರಿನ ಮಾನಕ್ಕನುಸರಿಸಿ ಒಂದು ಕೋಣೆಯ ಅಥವಾ ಎರಡು ಕೋಣೆಗಳ ಇಮಾರತಿಯೊಂದನ್ನು ಸುತ್ತು ಮುತ್ತಲು ಸಾಕಷ್ಟು ಬೈಲುಳ್ಳ ಸ್ಥಳದಲ್ಲಿ ಕಟ್ಟಿಸಲು ಆ ಊರ ಜನರ ಮನವೊಲಿಸಬೇಕು. ಹೊಸದಾಗಿ ಸಾಲೆಯನ್ನು ಪ್ರಾರಂಭಿಸುವದಾದರೆ, ಏನಿಲ್ಲೆಂದರೂ ಅವಶ್ಯವಾಗಿ ಬೇಕಾಗುವ ಹಲವು ಉಪಕರಣಗಳನ್ನು ಒದಗಿಸಿಕೊಡಬೇಕು. ಶಿಕ್ಷಕರಿಗೆ ಕುರ್ಚಿ ಮತ್ತು ಮೇಜು, ಮಕ್ಕಳಿಗೆ ತಟ್ಟಿನ ಇಲ್ಲವೆ ಚಾಪೆಯ ಆಸನಗಳು, ಇವುಗಳ ಹೊರತಾಗಿ ಪ್ರತಿ ಸಾಲೆಗೆ ಕೆಳಗಿನ ಉಪಕರಣಗಳು ಬೇಕಾಗುತ್ತಿವೆ:—

(೧) ಕರೇ ಹಲಿಗೆ ಮತ್ತು ಖಡು.
(೨) ಗುಂಡಿನ ಚೌಕಟ್ಟು.
(೩) ಜಿಲ್ಲೆಯ, ರಾಜ್ಯದ ಮತ್ತು ಹಿಂದುಸ್ತಾನದ ಒಂದೊಂದು ನಕಾಶ.
(೪) ಭೂಗೋಲ, ಸೃಷ್ಟಿನಿರೀಕ್ಷಣೆ, ಆರೋಗ್ಯ ಮುಂತಾದವುಗಳ ಕುರಿತು ಕೆಲ ಪಟಗಳು.
(೫) ಗ್ಲೋಬು ಮತ್ತು ನಕಾಶ ಪುಸ್ತಕ.
(೬) ಚಿಕ್ಕ ಮಕ್ಕಳ ಕೈಕೆಲಸ ಹಾಗೂ ಆಟಗಳಿಗೆ ಉಪಯೋಗ ಬೀಳುವ ಮತ್ತು ಪುಕ್ಕಟೆ ಸಿಗುವ ಸ್ಥಳೀಯ ವಸ್ತುಗಳು.
(೭) ಪುಸ್ತಕಾಲಯದ ಪುಸ್ತಕಗಳನ್ನು ಹಾಕಿಡಲೊಂದು ಪೆಟ್ಟಿಗೆ.

ಜಾಣತನದಿಂದ ಆರಿಸಿದ ಯೋಗ್ಯ ಹೊತ್ತಿಗೆಗಳ ಪುಸ್ತಕಾಲಯವೊಂದನ್ನು ಒದಗಿಸಿ ಕೊಡುವದರ ಮಹತ್ವವನ್ನು ಕುರಿತು ನಾವು ಒತ್ತಿ ಹೇಳಬಯಸುತ್ತೇವೆ. ನಮ್ಮ ದೇಶದ ಕೆಲವು ಭಾಗಗಳಲ್ಲಿ "ಪೆಟ್ಟಿಗೆ-ಪುಸ್ತಕಾಲಯ" ಪದ್ಧತಿಯು ಜಾರಿಯಲ್ಲಿದ್ದು ಆ ಪೆಟ್ಟಿಗೆಗಳನ್ನು ನಿಯಮಿತ ಕಾಲಾವಧಿಗೊಮ್ಮೆ ಸಮೀಪದಲ್ಲಿರುವ ಹಳ್ಳಿಯ ಸಾಲೆಗಳು ತಮ್ಮ ತಮ್ಮೊಳಗೆ ಅದಲು ಬದಲು

ಮಾಡಿಕೊಳ್ಳುತ್ತಿವೆ. ಅದು ಏನೇ ಇರಲಿ, ಪ್ರತಿಯೊಂದು
ಹಳ್ಳಿಯ ಸಾಲೆಗೊಂದು ಪುಸ್ತಕಾಲಯವಿರುವದೊಳಿತು.
ಪ್ರತಿ ವರುಷ ಪುಸ್ತಕಗಳನ್ನು ಕೊಳ್ಳಲು ಶಿಕ್ಷಕನಿಗೆ
ಯೋಗ್ಯ ಗ್ರಾಂಟನ್ನು ಕೊಡಬೇಕು. ಆ ಪುಸ್ತಕಾಲಯವು
ಸ್ಥಳೀಯ ಪ್ರೌಢರಿಗೂ ಉಪಯೋಗವಾಗುತ್ತಿದ್ದರೆ,
ಊರವರ ಕಡೆಯಿಂದ ಅದಕ್ಕೋಸ್ಕರ ಹಣವನ್ನು ಎತ್ತ
ಬಹುದು. ಮಕ್ಕಳ ಹಾಗೂ ಪ್ರೌಢರ ಸಾಂಸ್ಕೃತಿಕ ಬೇಡಿ
ಕೆಗಳನ್ನು ಹಳ್ಳಿಯ ಸಾಲೆಯು ಪೂರೈಸಬೇಕೆನ್ನುತ್ತಿದ್ದರೆ,
ಆರೋಗ್ಯ, ಸ್ವಚ್ಛತೆ, ಶಾಸ್ತ್ರೀಯ ವಿಷಯ, ಪ್ರವಾಸ,
ಪೌರನೀತಿ, ಭೂಗೋಲ, ಇತಿಹಾಸ, ಸಾಹಿತ್ಯ ಇವುಗ
ಳನ್ನು ಕುರಿತು ಸುಲಭವಾದ ಪುಸ್ತಕಗಳ ಪುಸ್ತಕಾಲ
ಯವೂ ಹಲವು ಸಚಿತ್ರ ಪತ್ರಿಕೆಗಳೂ ವರ್ತಮಾನ ಪತ್ರ
ಗಳೂ ಆ ಸಾಲೆಯಲ್ಲಿರುವದು ಲೇಸು. ಅವುಗಳಲ್ಲಿ ಹಲವು
ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಸಾಲೆಯ ಅವಧಿಯಲ್ಲಿ
ಮಕ್ಕಳ ಸಲುವಾಗಿ ಉಪಯೋಗಿಸಬಹುದು ಮತ್ತು
ಸಂಜೆಯಲ್ಲಿ ಓದಲಿಕ್ಕೆ ಕಲಿತ ಪ್ರೌಢರಿಗೋಸ್ಕರ ಉಪ
ಯೋಗಿಸಬಹುದು. ಪುಸ್ತಕಗಳನ್ನು ಮಕ್ಕಳು ಅನಿರ್ಬಂಧ
ವಾಗಿ ಉಪಯೋಗಿಸುತ್ತಿದ್ದರೆ, ಅದರಿಂದ ಅವರಿಗೆ ಶೈಕ್ಷ
ಣಿಕ ಪ್ರಯೋಜನವಿದೆ; ಅದರಲ್ಲಿ ಅವರ ಆಸಕ್ತಿಯು
ಹುಟ್ಟಿ ಓದುವ ಚಟವು ಹತ್ತುತ್ತಿದೆ; ಓದಿದ ವಿಚಾರಗ
ಳನ್ನು ಚನ್ನಾಗಿ ಅರಗಿಸಿಕೊಂಡು ಹೊತ್ತು ಬಂದಾಗ
ಅವುಗಳನ್ನು ಸ್ಪಷ್ಟವಾಗಿ ಅಂದು ತೋರಿಸುವದುಂಟು;
ಆನಂದದಿಂದ ಪುಸ್ತಕಗಳನ್ನು ಓದಿ ತಮಗೆ ಲಾಭ ಮಾಡಿ
ಕೊಳ್ಳುವದುಂಟು.

ಹೊಸ ಸಾಲೆಯನ್ನು ಜೋಡಿಸುವಾಗ ಒಂದು
ಮಾತನ್ನು ಮಾತ್ರ ನೆನಪಿನಲ್ಲಿಡಬೇಕು. ಒಮ್ಮೆತರವಾಗಿ
ಹಳ್ಳಿಯ ಬಗೆಗೆ ಗೊತ್ತಿಲ್ಲದ ಶಿಕ್ಷಕನೊಬ್ಬನು ಉಪಕರಣ
ವೇನೂ ಇಲ್ಲದೆ ಬಂದು ಎಲ್ಲಿಯೋ ಮೂಲೆಯಲ್ಲಿ ಕೆಲಸಕ್ಕೆ
ಬಾರದ ಒಂದು ಸಣ್ಣ ಕೋಣೆಯನ್ನಾಯ್ದುಕೊಂಡು
ಅಲ್ಲಿ ಮಕ್ಕಳನ್ನು ಕೂಡ ಹಾಕಿ ಸಾಲೆಯನ್ನು ಸರ್ವಥಾ
ಪ್ರಾರಂಭಿಸಕೂಡದು. ಹಳ್ಳಿಯಲ್ಲಿ ಹೊಸದಾಗಿ ಸಾಲೆ
ಯನ್ನು ಪ್ರಾರಂಭಿಸುವದೆಂದರೆ, ಆ ಹಳ್ಳಿಯ ಇತಿಹಾಸ
ದಲ್ಲಿ ಅದೊಂದು ಎಂದಿಗೂ ಮರೆಯಲಾಗದ ಸಂಗತಿಯಾ
ಗಬೇಕು ಹಾಗೂ ವೈಭವಯುತವಾದ ಸಮಾರಂಭ
ವೊಂದನ್ನು ವಿಜೃಂಭಣೆಯಿಂದ ಏರ್ಪಡಿಸಬೇಕು. ಅದಕ್ಕಾ

ಮೊದಲು ಶಿಕ್ಷಣಾಧಿಕಾರಿಗಳೂ ಮುಂದೆ ಅಲ್ಲಿ ಕೆ
ಮಾಡಬೇಕೆಂದಿರುವ ಶಿಕ್ಷಕನೂ ಆ ಹಳ್ಳಿಯ
ಮೇಲಿಂದ ಮೇಲೆ ಸಂದರ್ಶಿಸಿ ಜನರನ್ನು ಅದಕ್ಕೋಸ
ಹುರಿದುಂಬಿಸಬೇಕು; ಮಕ್ಕಳ ಗಣತಿಯನ್ನು ಕೈಕೊ
ಬೇಕು; ಪ್ರಚಾರದ ಮುಖಾಂತರ ಹಳ್ಳಿಗರ ಉತ್ಸಾ
ಯನ್ನು ಬಡಿದೆಬ್ಬಿಸಬೇಕು; ಆ ಸಮಾರಂಭಕ್ಕೋಸ
ಒಂದು ಹೊಸ ಇಮಾರತಿಯನ್ನು ಕಟ್ಟಬೇಕು; ಒಂ
ಚಲೋ ಇಮಾರತಿಯನ್ನು ಆರಿಸಿಟ್ಟಿದ್ದರೆ, ಅದ
ಸಮಾರಂಭದ ಸಲುವಾಗಿ ಸುಣ್ಣ-ಬಣ್ಣ ಹಚ್ಚಿ ಸಿಂಗ
ಮಾಡಬೇಕು; ಶಿಕ್ಷಕನಿಗೆ ಪುಸ್ತಕ, ಕುರ್ಚಿ, ಮೇ
ಕರೇಹಲಿಗೆ, ಆಟಕ್ಕೆ ಹಾಗೂ ಕೈಕೆಲಸಕ್ಕೆ ಬೇಕಾಗ
ವಸ್ತುಗಳು, ಮೊದಲಾದ ಉಪಕರಣಗಳನ್ನು ಒದ
ಕೊಡಬೇಕು. ಉದ್ಘಾಟನಾ ಸಮಾರಂಭವು ಸುಸಂಘ
ವಿದ್ದು ಊರವರೆಲ್ಲ ಅದರಲ್ಲಿ ಭಾಗವಹಿಸಬೇಕು.
ಪ್ರದೇಶದಲ್ಲಿಯ ಸನ್ಮಾನ್ಯ ಹಾಗೂ ಪ್ರತಿಷ್ಠಿತ ಗೃಹ
ಯೋರ್ವರನ್ನು ಅಧ್ಯಕ್ಷರನ್ನಾಗಿ ಆರಿಸಿಕೊಳ್ಳಬೇಕು. ಅ
ಅಧಿಕಾರಿಗಳಿದ್ದರೂ ಚಿಂತೆ ಇಲ್ಲ ಅಥವಾ ಅಧಿಕಾರೇತ
ದ್ದರೂ ಚಿಂತೆ ಇಲ್ಲ. ತನ್ನಲ್ಲಿ ಯಾವುದೋ ಒಂ
ಹೊಸ ಚೈತನ್ಯವು ಆ ದಿನ ಉದಯಿಸಿದೆಯೆಂದು
ಯೊಬ್ಬ ಹಳ್ಳಿಗನಿಗೆ ಅನ್ನಿಸುವಷ್ಟು ಅಂದಚಂದವಾಗಿ
ದಿನದ ಕಾರ್ಯಕ್ರಮವನ್ನು ಹಮ್ಮಿಕೊಂಡಿರಬೇಕು.
ಣದ ಹಾಗೂ ಜ್ಞಾನದ ಬೆಳಕು ಪ್ರಥಮ ಸಲ
ಯನ್ನು ಪ್ರವೇಶಿಸಿ ಬೆಳಗುವ ಸುಪ್ರಸಂಗವು ಪಿರಿದ
ಕಿರಿದಾಗಬಹುದೇ? ತಮ್ಮ ಜೀವಮಾನದ ಆಗು-ಹೋ
ಗಳೆಲ್ಲ ಆ ಹೊಸ ಕಾರ್ಯದ ಮೇಲೆ ಅವಲಂಬಿಸಿರುವ
ಬುದನ್ನು ಹಳ್ಳಿಗರೆಲ್ಲರು ಮನದಂದು ಸಾಲೆಯ ಬ
ಪೂರ್ಣ ಸಹಕಾರವನ್ನು ನೀಡಬೇಕಾಗುವದು. ಅವ
ಸಹಕಾರ ಭಾವನೆಯನ್ನು ಹುಟ್ಟಿಸಿ ಬೆಳೆಯಿಸ
ಹೊಣೆಯು ಶಿಕ್ಷಕನ ಮೇಲಿರುವದು ನಿಜ. ಆದಾಗ
ಪ್ರಾರಂಭೋತ್ಸವವು ಮಾತ್ರ ಚನ್ನಾಗಿರಬೇಕೆಂಬ ಮಾ
ಅತಿ ಮಹತ್ವದ್ದಿದೆ. ಇಮಾರತಿಯಿಲ್ಲದೆ ಅಥವಾ ಉ
ರಣಗಳಿಲ್ಲದೆ ಅಥವಾ ಊರ ಜನರ ಸಹಕಾರವಿ
ನಿರ್ಜೀವವಾಗಿಯೂ ಸಪ್ಪಗಾಗಿಯೂ ಸಾಲೆಯನ್ನು
ಯುವದಕ್ಕಿಂತ ಎಲ್ಲರ ಹಿತಕ್ಕೋಸ್ಕರ ಅವಶ್ಯ ಬೇಕ
ದ್ದೊಂದು ಶ್ರೇಷ್ಠ ಸಂಸ್ಥೆಯೆಂದು ಅದನ್ನು ತೆರೆಯಬೇ

ದಣಿವೂ ಶಾಲೆಯ ಸನ್ನಿವೇಶವೂ

ಶ್ರೀ ತಟ್ಟಿ ಶಾಮರಾಯರು

ಕೆಲಸ ಮಾಡುವ ಶಕ್ತಿಯು ಇಳಿಮುಖಕ್ಕೇ ದಣಿವೆಂಬ ಹೆಸರು. ಈ ಶಕ್ತಿಯು ಸ್ನಾಯುಗತವಾದದ್ದು. ಇಂದ್ರಿಯಗಳಿಗೆ ಸಂಬಂಧಿಸಿದ್ದು ಇಲ್ಲವೆ ಮಾನಸಿಕವಾಗಿರಬಹುದು. ಸ್ನಾಯುಗಳು ದಣಿದರೆ ನಾನು ನಡೆಯಲಾರೆನು, ಮನಸ್ಸು ದಣಿದರೆ ಆಲೋಚಿಸಲಾರೆನು, ಇಂದ್ರಿಯಗಳು ದಣಿದರೆ ಪದಾರ್ಥಗಳ ರೂಪ, ರುಚಿ ಮೊದಲಾದವುಗಳನ್ನು ತಿಳಿಯಲಾರೆನು. ಈ ದಣಿವು ವಿಶಿಷ್ಟವಾಗಿರಬಹುದು ಇಲ್ಲವೆ ಸರ್ವ ಸಾಧಾರಣವಾಗಿರಬಹುದು. ಒಟ್ಟಾಗಿ ನಾನು ಎಲ್ಲ ರೀತಿಯಿಂದಲೂ ದಣಿದಿರಬಹುದು. ಕಾಲುಗಳಲ್ಲಿ ಶಕ್ತಿಯು ಕಡಿಮೆಯಾದದ್ದು ಸಾಮಾನ್ಯ ದಣಿವಿನ ಒಂದು ಸೂಚಕಮಾತ್ರವಾಗಿರಬಹುದು. ಅಥವಾ ಉಳಿದೆಲ್ಲ ಅಂಶಗಳಲ್ಲಿ ಶಕ್ತಿಯು ಚೆನ್ನಾಗಿದ್ದು ಕಾಲುಗಳು ಮಾತ್ರ ದಣಿದಿರಬಹುದು. ಈ ದಣಿವು ತನ್ನ ಕೊನೆಯ ಘಟ್ಟವನ್ನು ಮುಟ್ಟಿರಬಹುದು ಅಥವಾ ಪರಿಮಿತವಾಗಿರಬಹುದು. ಸ್ನಾಯುಗಳು ದಣಿದಾಗ ನಾನು "ನಡೆಯಲಾರೆನು" ಎಂದೆನಷ್ಟೆ. ಇದರರ್ಥ ನಾನು ನಡೆಯಲೇ ಆರೆನು ಎಂದಲ್ಲ; ಸಾಧಾರಣವಾಗಿ "ಮೊದಲು ನಡೆಯುವಷ್ಟು ಚೆನ್ನಾಗಿ ಈಗ ನಡೆಯಲಾರೆನು" ಎಂದಾಗುವದಷ್ಟೇ. ಕೆಲಸವು ಪೂರಾ ನಿಂತುಹೋಗುವ ಕಡೆಗೆ ಸಾಗಿದ ಪ್ರವೃತ್ತಿಯೇ ದಣಿವು. ಅಂತೂ ದಣಿವಿನ ಲಕ್ಷಣವನ್ನು ಹೀಗೆ ಹೇಳಬಹುದು : ಹಿಂದೆ ಮಾಡಿದ ಕಾರ್ಯದ ಪರಿಣಾಮವಾಗಿ ಕೆಲಸಮಾಡುವ ಸಾಮರ್ಥ್ಯವು ತಾತ್ಕಾಲಿಕ ವಿಶಿಷ್ಟ ರೀತಿಯಲ್ಲಿ ಅಥವಾ ಸಾಮಾನ್ಯ ರೀತಿಯಲ್ಲಿ ಪುಟ್ಟಪೂರಾ ಹೋಗುವದು ಇಲ್ಲವೆ ಅಂಶತಃ ಕಡಿಮೆಯಾಗುವದು.

ಮಗುವು ಬಹಳ ದಣಿದಾಗ ಆಟವನ್ನು ಬಿಡುವದು. ಆಟದಿಂದ ಆನಂದವಾಗುವದೆಂದು ಅವನು ಆಡುವನು. ಅವನು ದಣಿದಾಗ ಆಟದಿಂದ ಆನಂದವಾಗುವದಿಲ್ಲ; ಇಷ್ಟೇ ಅಲ್ಲ ಆಟವನ್ನು ಹಾಗೇ ಮುಂದುವರಿಸಿದರೆ ವ್ಯಥೆಯೂ ಆಗಬಹುದು. ಅದಕ್ಕಾಗಿ ಅವನು ಆಟ ಬಿಡುವನು. ಇದು ಸ್ವಾಭಾವಿಕವಾದ ಮತ್ತು ಆರೋಗ್ಯಕರವಾದ ಪ್ರವೃತ್ತಿ. ಶಾಲೆಯಲ್ಲಿ ಕೆಲಸದ ಯೋಜನೆಯು ಸರಿಯಾಗಿದ್ದರೆ ಮಗುವು ಕೆಲಸ ಮಾಡುವಾಗ, ಕೆಲವೊಂದು ಆಳತೆಯ ವರೆಗೆ, ಅವನಿಗೆ ಸ್ವಭಾವಕ್ಕೆ ತಕ್ಕ ಅಭಿವ್ಯಕ್ತಿಗೆ ಅವಕಾಶದೊರೆತು ಆನಂದವಾಗುವದು. ಇದು ಅವನಿಗೆ ಹಿತ. ಇದು ಒಂದು ಹಂತವನ್ನು ಮೀರಿದರೆ ಅದು ಹಾನಿಕಾರಕವಾಗತೊಡಗುವದು; ಆಗ ಅವನು ಕೆಲಸವನ್ನು ನಿಲ್ಲಿಸಲಿಚ್ಛಿಸುವನು. ಶಿಕ್ಷೆಯ ಅಂಜಿಕೆಯಿಂದ ಅವನು ಅದನ್ನು ಮುಂದುವರಿಸುವಂತೆ ಆಗಬಾರದು.

ಕೆಲಸ ಮಾಡಬೇಕೆಂಬ ಆತುರ ಮಗುವಿನ ಮನಸ್ಸಿನಿಂದಲೇ ಬಂದದ್ದಾದರೆ ದಣಿವು ಬೇಗ ಉಂಟಾಗುವದಿಲ್ಲ. ಕೆಲಸದ ಪೂರ್ತಿಯಿಂದಾಗುವ ಆನಂದವು ದಣಿವಿನ ಕ್ಲೇಶವನ್ನು ಮೀರಿಸಬಹುದು.

ಮಕ್ಕಳ ವಿಷಯದಲ್ಲಿ ಉಪಾಧ್ಯಾಯನ ಕರ್ತವ್ಯವು ಅವರನ್ನು ಒಂದು ದಾರಿಗುಂಟ ನೂಕುತ್ತ ಹೋಗುವದಾಗಿರದೆ ಅವರಿಗೆ ಆ ದಾರಿಗುಂಟ ಹೇಗೆ ಹೋಗಬೇಕೆಂಬದನ್ನು ಕಲಿಸುವದಾಗಿರುತ್ತದೆ. ಹೇಗೆ ಕೆಲಸ ಮಾಡಬೇಕೆಂಬದನ್ನು ಕಲಿಸುವದೇ ಆತನ ಮುಖ್ಯ ಕರ್ತವ್ಯ. ಇದನ್ನು ಹೆಚ್ಚಾಗಿ ಹುಡುಗನೇ ಕಂಡುಕೊಳ್ಳಬೇಕು— ಯಾವಾಗ ಮತ್ತು ಹೇಗೆ ಆ ಕೆಲಸವನ್ನು ಅತ್ಯಲ್ಪ ಪರಿಶ್ರಮದಿಂದ ಮಾಡಬಹುದು ಮತ್ತು ಅದನ್ನು ನಿಲ್ಲಿಸುವದು ಉತ್ತಮ ಎಂಬದನ್ನು.

ದಿನದಲ್ಲಿ ಇಂತಿಷ್ಟು ಕೆಲಸವಾಗಬೇಕಾಗಿರುವದು. ಅದು ಆಗಿದೆಯೋ ಇಲ್ಲವೋ ಅಥವಾ ಚೆನ್ನಾಗಿ ಆಗಿದೆಯೋ ಎಂಬ ಮಾತು ನಾವು ನಮ್ಮ ಶಕ್ತಿಗಳನ್ನು ಹೇಗೆ

ನಾವು ಜಾಣತನದಿಂದ ಉಪಯೋಗಿಸುವೆವು ಎಂಬದನ್ನು ಅವಲಂಬಿಸಿರುತ್ತದೆ. ಅತ್ಯಂತಾವಶ್ಯಕವಾದ ಕೆಲಸಗಳನ್ನು ಅತಿನಿರಾಯಾಸವಾಗಿ ಮಾಡಿ ನಮ್ಮ ಶಕ್ತಿಯನ್ನು ಕಾದಿಡುವದರಲ್ಲಿಯೇ ನಾವು ಬಾಳುವ ಬಾಳಿನಿಂದ ಪರಮಾವಧಿಯ ಲಾಭ ಪಡೆಯುವ ಕಲೆಯ ರಹಸ್ಯವಿದೆ. ಈ ಕಲೆಯನ್ನು ಕಲಿಯಲಿಕ್ಕೆ ಎಷ್ಟೋ ವರ್ಷಗಳು ಹಿಡಿಯುವವು. ಈ ಕಲೆಯನ್ನು ನಮ್ಮಷ್ಟಕ್ಕೆ ನಾವೇ ಕಲಿತುಕೊಳ್ಳಬೇಕು. ಅದು ವೈಯಕ್ತಿಕ ವ್ಯವಸಾಯದ ರೀತಿ; ಒಂದೇ ಸವನೇ ಬಿಡದ ಹಾಗೆ ಕೆಲಸಕ್ಕೆ ಹತ್ತುವದು ಅಥವಾ ತಡತಡೆದು ವಿರಮಿಸಿ ಮತ್ತೆ ಮಾಡತೊಡಗುವದು; ಅತ್ಯುತ್ತಮ ಫಲ ಸಿಕ್ಕುವ ಸಮಯಗಳು; ಕೆಲಸದಲ್ಲಿ ಬರುವ ಆಲೋಚನೆಗಳಲ್ಲಿ ಸುವ್ಯವಸ್ಥೆಯನ್ನು ಕಲ್ಪಿಸಿಕೊಳ್ಳುವದು; ಹಿನ್ನಡೆಯಾಗಿದ್ದರೆ ಅಥವಾ ಪ್ರಯತ್ನವು ವ್ಯರ್ಥವಾದಾಗ ಅದನ್ನು ಸುಧಾರಿಸಿಕೊಳ್ಳುವದು; ಕೆಲಸವನ್ನು ಪರೀಕ್ಷಿಸುವ ರೀತಿ; ಸ್ವಲ್ಪದರಲ್ಲಿ ಹೇಳುವುದಾದರೆ ಸುಳ್ಳೇ ಗಡಿಬಿಡಿ ಮಾಡಿ ಕೈಲಿ ಕೆಲಸವಾಗದವನಿಗೂ ಸುವ್ಯವಸಾಯಿಯ ಅಭ್ಯಾಸಕ್ಕೂ ಇರುವ ಅಂತರವು ಈ ಕಲೆಯಲ್ಲಿ ತಿಳಿಯುವದು. ಹೆಸರಿಗೆ ಮಾತ್ರ ಇರುವ ಶಾಲೆಗಳು ಈ ಕಲೆಯನ್ನು ಕಲಿಸುವದೂ ಇಲ್ಲ ಮತ್ತು ಹುಡುಗರಿಗೂ ಕಲಿಯಗೊಡುವುದಿಲ್ಲ.

ಎಲ್ಲ ಮೇಲಿನ ಉಚ್ಚ ತರಗತಿಯ ಉದ್ಯೋಗಗಳಲ್ಲಿ ಪ್ರಪಂಚಕ್ಕೆ ಬೇಕಾಗಿರುವದು ಅಂಕಿಯಿಂದ ಅಳೆಯುವ ಪ್ರಮಾಣಕ್ಕಿಂತ ಫಲದ ಶ್ರೇಷ್ಠ ದರ್ಜೆಯು. ಹೊಚ್ಚ ಹೊದಿತಾದ ಉತ್ಸಾಹದಿಂದ ಮಾಡಿದ ಕೆಲಸವೇ ಶ್ರೇಷ್ಠತರಗತಿಯದಾಗಬಲ್ಲದು. ಎರಡನೆಯದಾಗಿ ಎಲ್ಲ ಶ್ರೇಷ್ಠ ಮಾದರಿ ಅಥವಾ ಗುಣ ನಮ್ಮ ಗುರಿಯಾಗಿಲ್ಲವೋ ಅಲ್ಲಿ ಸೂಕ್ಷ್ಮ ಯಥಾರ್ಥತೆಗೆ ಮುಖ್ಯ ಬೆಲೆಯಿರಬಹುದು; ಕೆಲಸಕ್ಕೆ ಬಹಳ ಬುದ್ಧಿಯೇನು ಬೇಕಾಗಿರಲಿಕ್ಕಿಲ್ಲ ಆದರೆ ತಪ್ಪುಗಳಾಗಕೂಡದು. ದಣಿದು ಮಾಡಿದ ಕೆಲಸದ ಮೊದಲನೇ ಫಲವೆಂದರೆ ತಪ್ಪುಗಳು. ಅಭ್ಯಾಸಕ್ಕೂ ಈ ಮಾತು ಅನ್ವಯಿಸುವದು. ಸ್ಮರಣವು ಎದುರಿಗಿರುವ ವಿಷಯಕ್ಕೆ ನಾವು ಕೊಡುವ ಅವಧಾನದ ಪ್ರಮಾಣವನ್ನು ಅವಲಂಬಿಸಿರುವದು; ದಣಿವಿನಿಂದ ಈ ಅವಧಾನವು ಕಡಿಮೆಯಾಗುವದು. ಮನಸ್ಸು ಹೊಸ ಉತ್ಸಾಹಸ್ಥಿತಿಯಲ್ಲಿದ್ದಾಗ ಇತ್ತ ಗಮನವು ಚಿರಸ್ಮರಣಕ್ಕೆ ಸಹಾಯಕಾರಿ. ಮನಸ್ಸು ದಣಿದಾಗ ನೋಡಿ ಕೇಳಿದ ಸಂಗತಿಗಳು ಕೂಡಲೇ ಮರೆತು ಹೋಗುವವು; ಬಹಳ ಕಾಲವಂತೂ ಸ್ಮರಣದಲ್ಲಿ ಉಳಿಯಲಾರವು. ಸಾಲೆಯಲ್ಲಿ ಕಲಿಸುವ ಕೆಲಸಗಳಿಗಂತೂ ಈ ಮಾತು ಮುಖ್ಯವಾಗಿ ಸಂಬಂಧಪಟ್ಟಿದೆ. ಮಗುವು ಅಲ್ಲಿಯ ಕೆಲಸಗಳನ್ನು ಮೊಟ್ಟಮೊದಲು ಮಾಡಲಿಕ್ಕೆ ಕಲಿಯುತ್ತಿರುವದು. ಆಗ ಅದರ ಮನಃಪಟಲದಲ್ಲಿ ಬಿಂಬಿಸಿದ ಸಂಸ್ಕಾರಗಳು ಅದರ ಮುಂದಿನ ಆಸಕ್ತಿ ಕಾರ್ಯದಕ್ಷತೆಗಳನ್ನು ನಿರ್ಣಯಿಸುವವು. ದಣುವಿನಿಂದಾಗುವ ಫಲವೆಂದರೆ ವಿಷಯವಿಮುಖತೆ, ಆಸಕ್ತಿಯ ಅಭಾವ ಮತ್ತು ಹಲವು ಬಗೆಯ ಪ್ರಮಾದಗಳು.

ಸಾಲೆಯಲ್ಲಿ ಆರೋಗ್ಯಕರವಾದ ಸನ್ನಿವೇಶದ ಮಹತ್ವವನ್ನು ವರ್ಣಿಸುವದು ಅನವಶ್ಯಕ. ಆದರೆ ಈ ಸನ್ನಿವೇಶದ ನಿರ್ದುಷ್ಟ ಪರಿಪೂರ್ಣತೆಯಿಂದಲೂ ಎರಡು ದೋಷಗಳು ಸಂಭವಿಸುವವು. ಒಂದನೆಯದಾಗಿ ಹುಡುಗರು ತಮ್ಮ ಕೆಲಸದ ಮಟ್ಟವು ಉಚ್ಚ ಆದರ್ಶವನ್ನು ವ್ಯಕ್ತಮಾಡುವ ಬಗೆಯದಾಗಿರಬೇಕೆಂಬ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವರು; ಇದರಿಂದಾಗಿ ಕಾರ್ಯನಿರ್ವಾಹಕ್ಕೆ ಹಲವು ಬಗೆಯ ಸನ್ನಿವೇಶವು ಅನಿವಾರ್ಯವೆಂದು ಭಾವಿಸುವನು; ಈ ಸನ್ನಿವೇಶಗಳನ್ನು ಮುಂದಿನ ತನ್ನ ಜೀವನದಲ್ಲಿ ಅವನು ಕಾಣುವದಿಲ್ಲ. ಎರಡನೆಯದಾಗಿ ಸುತ್ತಲಿನ ಸನ್ನಿವೇಶವು ಆದರ್ಶಪ್ರಾಯವಾಗಿರುವಾಗ ಕಾರ್ಯರೀತಿಯು ಸನ್ನಿವೇಶವನ್ನು ಲಕ್ಷಕ್ಕೆ ತೆಗೆದುಕೊಳ್ಳಬೇಕೆಂಬ ಸಂಗತಿಯನ್ನು ಹುಡುಗರಿಗೆ ಕಲಿಸಲಾಗುವದಿಲ್ಲ. ಪ್ರತಿಕೂಲ ಸನ್ನಿವೇಶದಲ್ಲಿಯೂ ತಕ್ಕ ಮಟ್ಟದ ಫಲವನ್ನು ಹೇಗೆ ಪಡೆಯಬೇಕೆಂಬ ಪಾಠವನ್ನು ಅವನು ಕಲಿಯುವದಿಲ್ಲ. ವ್ಯವಹಾರಿಕತೆಯನ್ನೂ ಆರೋಗ್ಯಕರವಾದ ಪರಿಸ್ಥಿತಿಯನ್ನೂ ಹೇಗೆ ಕಷ್ಟದಿಂದ ಉಂಟುಮಾಡಿಕೊಳ್ಳಬೇಕೆಂಬದನ್ನೂ ಆತನು ಕಲಿತುಕೊಳ್ಳುವದಿಲ್ಲ. ಆರೋಗ್ಯ ಸನ್ನಿವೇಶವು ಸ್ವತಃ ಸಿದ್ಧವಾದದ್ದಿರುವದರಿಂದ ಅದಕ್ಕಾಗಿ ನಾವು ಕಷ್ಟಪಡಬೇಕಾಗಿಲ್ಲ, ಅನಾರೋಗ್ಯ ಪರಿಸ್ಥಿತಿಯು ಮಾತ್ರ ಕಸಿಕರಪಡಬೇಕಾದುದು ಎಂಬ ಮನೋವೃತ್ತಿಯು ಉಂಟಾಗುವದು.

ಹುಡುಗನು ತನ್ನ ಕೆಲಸದಲ್ಲಿ ಪ್ರೀತಿಯುಳ್ಳವನಾಗಿದ್ದರೆ, ಆ ಕೆಲಸವು ಅವನ ನೈಜಸ್ವಭಾವವನ್ನು ವ್ಯಕ್ತ

ಮಾಡುವುದಕ್ಕೆ ಅವಕಾಶವನ್ನು ಒದಗಿಸಿದರೆ, ಇಂತಹ ಕೆಲಸವನ್ನು ಅವನು ತಪ್ಪಿಸಿಕೊಂಡರೆ ಆಟವನ್ನು ತಪ್ಪಿಸಿಕೊಂಡಷ್ಟೇ ಅವನು ಚಡಪಡಿಸುವನು. ತನ್ನಿಂದಲೇ ತನಗೆ ಸಾಧ್ಯವಿದ್ದಷ್ಟು ಉತ್ತಮ ಪ್ರಯೋಜನವು ದೊರೆಯುವ ಬಗೆಯಲ್ಲಿ ತನ್ನ ಜೀವನ ಕ್ರಮವನ್ನು ನಿರ್ಧರಿಸಿ ವ್ಯವಸ್ಥೆಗೊಳಿಸಲಿಕ್ಕೂ ಮತ್ತು ಯಾವಾಗಲಾದರೂ ತನ್ನ ಉತ್ಸಾಹವು ಇಳಿಮುಖವಾದರೆ ತನ್ನದೇ ತಪ್ಪೆನ್ನುವ ಹಾಗೆಯೂ ವಿದ್ಯಾರ್ಥಿಗೆ ಶಿಕ್ಷಣವು ಕೊಡಲ್ಪಡಬೇಕು.

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ "ಗ್ರಂಥಾವಲೋಕನ" ದಲ್ಲಿ **ಸುಮಾಂಜಲಿ ಪುಸ್ತಕ**ವನ್ನು ಬರೆದವರು ಹಾಗೂ ಪ್ರಕಾಶಕರು ಶ್ರೀ ವಿ. ಕೆ. ತೊರ್ಕೆ ಎಂತು ಇದ್ದುದನ್ನು ಶ್ರೀ ವಿ. ವೆ. ತೊರ್ಕೆ ಎಂದೂ **ಆಣೆಕಲ್ಲು ಪುಸ್ತ**ಕದ ಬೆಲೆ ರೂ. ೧-೧೨-೦ ಎಂದು ಇದ್ದುದನ್ನು ರೂ. ೦-೧೨-೦ ಎಂದು ತಿದ್ದಿಕೊಂಡು ಓದಬೇಕಾಗಿ ವಿನಂತಿ. —ಪ್ರ. ಸಂ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ, ಎಲಿಮೆಂಟರಿ ಮತ್ತು ಇಂಟರಮೀಡಿಯೇಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ. ಎಸ್. ಕೆ. ಜೋಶಿ, ಮತ್ತು
ಶ್ರೀ. ಜಿ. ಡಿ. ಮಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧-೧೨-೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐಯ್ದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ. ಇದು ಕನ್ನಡದಲ್ಲಿಯೂ ಸಿಗುತ್ತದೆ.

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟೆ, ಪುಣೆ.

ಭಾರತದ ಪರಿಸ್ಥಿತಿಗೆ ಯೋಗ್ಯ ಶಿಕ್ಷಣ

"ರಾಷ್ಟ್ರಪಿತನು ಪುರಸ್ಕರಿಸಿದ ಮೂಲ ಶಿಕ್ಷಣ ತತ್ವವು, ನಮ್ಮ ದೇಶದ ಸಾಂಸ್ಕೃತಿಕ ಪರಂಪರೆಗಳಲ್ಲಿ ಬೇರು ಬಿಟ್ಟಿರುವದರಿಂದ ನಮಗೆ ಅದು ಅತ್ಯಂತ ಯೋಗ್ಯವದೆ........ ಮೂಲ ಶಿಕ್ಷಣದಲ್ಲಿ ಮಗುವೇ ಕೇಂದ್ರ ಬಿಂದುವಿನಂತಿದೆ. ಎಲ್ಲೆಡೆ ಕಸಬುದಾರರನ್ನು ನಿರ್ಮಿಸುವದು ಅದರ ಉದ್ದೇಶವಿರದೆ ಕಸಬಿನ ಮೂಲಕ ಮಗುವಿನ ವ್ಯಕ್ತಿತ್ವದ ಸರಿಯಾದ ವಿಕಾಸಕ್ಕೆ ನೆರವಾಗುವದು ಇದೆ."

ಶ್ರೀಮತಿ ಇಂದುಮತಿ ಚಿಮಣಲಾಲ
ಧುಳೆ. ಶಿಕ್ಷಣಖಾತೆಯ ಉಪಮಂತ್ರಿ,
೧೭-೭-೫೫ ಮುಂಬಯಿ ರಾಜ್ಯ.

ಕೇವಲ ೬ ರೂ. ಗಳಿಗೆ ೧೨ ಪುಸ್ತಕಗಳು

೧೦೦ — ೧೫೦ ಪುಟಗಳು

— ಪ್ರಕಟವಾಗಿವೆ —

ಗಗನಚಂದ್ರ ಕಾದಂಬರಿ
[ಶ್ರೀ ನಾಡಿಗೇರ] .... ೦—೮—೦
ಮುಂದೇನು ? ಕಾದಂಬರಿ
[ಶ್ರೀ ದೇವುಡು] .... ೦—೮—೦
ದೆವ್ವದ ಕಥೆಗಳು ಕಥೆಗಳು
[ಶ್ರೀ ಗೋಪಾಲಕೃಷ್ಣ ಅಡಿಗ] .... ೦—೮—೦

— ಅಚ್ಚಿನಲ್ಲಿ —

ಅತಿದೂರದ ಜಗತ್ತಿನಲ್ಲಿ ಕಥೆಗಳು
[ಶ್ರೀ ಹೆಗಡೆ ಬಂಧುಗಳು] .... ೦—೧೦—೦
ಕುಮಾರಿ ಸುನೇತ್ರಾ ಕಾದಂಬರಿ
[ಶ್ರೀ ರಂಗರಾಯ ತಲಜೇರಕರ] ೦—೧೦—೦
ದೇವತೆಗಳ ಆಕಾಶವಾಣಿ ಹಾಸ್ಯದ ಕಿಡಿಗಳು
[ಪ್ರೊ. ಬಿ. ಎಚ್. ಶ್ರೀಧರ] ....

— ಉತ್ಕೃಷ್ಟ ಪುಸ್ತಕಗಳನ್ನು ನಿರೀಕ್ಷಿಸಿರಿ —
: ಇಂದೇ ಚಂದಾದಾರರಾಗಿರಿ :

ಸುಲಭ ಸಾಹಿತ್ಯ ಪ್ರಕಾಶನ, ಕುಮಟಾ. [ಉ. ಕ.]

ಮಗುವಿನ ಸರ್ವಾಂಗೀಣ ಶಿಕ್ಷಣ

ಲೇಖಕರು : ಶ್ರೀ ಎಸ್. ಎಂ ಹಳ್ಳಿಕೇರಿ, ಬಿ.ಎ., ಡಿ.ಬಿ.ಇ.; ಧಾರವಾಡ.

ಇತ್ತೀಚಿನ ವರುಷಗಳಲ್ಲಿ ಮಾಧ್ಯಮಿಕ ಶಿಕ್ಷಣದ ಧ್ಯೇಯ-ಗುರಿಗಳು ಬಹಳವಾಗಿ ವಿಸ್ತೃತವಾಗಿವೆಯೆಂದು ಕಂಡು ಬರುವದು. ದಿನಾಲು ಶಾಲೆಗಳಲ್ಲಿ ವ್ಯಾಕರಣ, ನಿಬಂಧ, ಗಣಿತ, ಇತಿಹಾಸ, ಭೂಗೋಲ ಮೊದಲಾದ ವಿಷಯಗಳ ಅಭ್ಯಾಸ ಹಾಗೂ ಬೇರೆ ಬೇರೆ ಕಲೆಗಳನ್ನು ಕಲಿಸುವದಾದರೂ, ಬಾಲ್ಯ ಹಾಗು ಪ್ರೌಢಾವಸ್ಥೆಗಳ ಮಧ್ಯಂತರ ಅವಧಿಯಲ್ಲಿ ನಡೆಯುವ ವಿಕಾಸ ಕ್ರಮದ ಮಹತ್ವದ ಭಾಗವು ಈ ಅವಧಿಯಲ್ಲಿಯೇ ಬರುವದು. ಈ ಅವಧಿಯು ಮಗುವಿನ ಮನಸ್ಸು ಇಲ್ಲವೆ ಆದರ ವಿಶಿಷ್ಟ ಕಾರ್ಯಕ್ಕಷ್ಟೇ ಸಂಬಂಧಿಸಿದ್ದೆಂದು ತಿಳಿಯದೇ, ಅದು ಈ ಬೆಳೆಯುವ ವ್ಯಕ್ತಿಯ ಸಮಗ್ರ ವಿಕಾಸ ಹಾಗು ಶೀಲ-ಸಂವರ್ಧನೆಗೆ ಅತ್ಯಂತ ಪೋಷಕವಾಗಿವೆನ್ನಬಹುದು.

ಮಾಧ್ಯಮಿಕ ಶಿಕ್ಷಣದ ಬದಲಾದ ವ್ಯಾಪ್ತಿಯನ್ನು ನೋಡಿದಲ್ಲಿ ಶಿಕ್ಷಕನ ಸಮಸ್ಯೆಗಳು ಹಾಗು ಹೊಣೆಗಾರಿಕೆಗಳು ಸಹ ಬಹಳೇ ಹೆಚ್ಚಾಗುವವು. ತಾನು ಮಕ್ಕಳಿಗೆ ಕೊಡುವ ಶಿಕ್ಷಣವು ಅದರಲ್ಲಿ ಎಷ್ಟರ ಮಟ್ಟಿಗೆ ಶೀಲವನ್ನು ಬೆಳಿಸುವದು ಹಾಗು ಅದು ಎಷ್ಟರ ಮಟ್ಟಿಗೆ ಶಿಕ್ಷಣದ ಆದರ್ಶಗಳನ್ನು ಕೃತಿಗಿಳಿಸುವದು ಎಂಬುದನ್ನು ಪ್ರತಿಯೊಬ್ಬ ಮಾಧ್ಯಮಿಕ ಶಿಕ್ಷಕನು ತನ್ನಷ್ಟಕ್ಕೆ ಆಲೋಚಿಸಿದಲ್ಲಿ, ತಾನು ಈಗ ಅನುಸರಿಸುವ ಶಿಕ್ಷಣ ಕ್ರಮ-ವಿಧಾನಗಳಲ್ಲಿ ಬದಲಾವಣೆಯಾಗುವದು ಅವಶ್ಯವೆಂದು ಹೊಳೆಯದಿರದು.

ಸದ್ಯದ ವರ್ಗದ ವಾತಾವರಣವು ಮಕ್ಕಳ ವಿಚಾರಗಳ ಆವಿಷ್ಕರಣಕ್ಕೆ ಎಷ್ಟರ ಮಟ್ಟಿಗೆ ಸಹಾಯಕವಾಗಿದೆ? ವರ್ಗದಲ್ಲಿ ಮಕ್ಕಳು ಸ್ವಾತಂತ್ರ್ಯದಿಂದ, ಆನಂದದಿಂದ ನಲಿದಾಡಿ ತಮ್ಮ ಒಡನಾಡಿಗಳಿಗೆ ಎಷ್ಟರ ಮಟ್ಟಿಗೆ ಸಹಾಯಕರಾಗಬಲ್ಲರು? ವರ್ಗದಲ್ಲಿಯ ಅನುಭವದಿಂದ ಮಕ್ಕಳಲ್ಲಿ ನಾಗರಿಕ ಹಕ್ಕು-ಕರ್ತವ್ಯಗಳ ಉದಾರ ಭಾವನೆಯು ಎಷ್ಟರ ಮಟ್ಟಿಗೆ ಒಡಮೂಡುವದು?

ವರ್ಗದಲ್ಲಿ ಮಕ್ಕಳು ಜೀವನ-ಪ್ರವೃತ್ತಿಗಳನ್ನು ಕಲಿಯುವದು ನಾಯಕನಾದ ವರ್ಗ-ಶಿಕ್ಷಕನ ಗುಣಗಳ ಅನುಕರಣೆಯಿಂದಲೇ ಎಂಬುದನ್ನು ಮರೆಯಲಾಗದು. ಮಕ್ಕಳ ಮನೆಯ ವಾತಾವರಣವು ಆದರ್ಶಕ್ಕಿಂತ ಕೆಳಗಿದ್ದರೂ, ಹೊರಗಿನ ಶಕ್ತಿಗಳು ಶಾಲೆಯ ವಾತಾವರಣಕ್ಕೆ ಮಾರಕವಾಗಿದ್ದರೂ ಸಹ ಶಿಕ್ಷಕನು, ವರ್ಗದಲ್ಲಿಯ ತನ್ನ ಕಲಿಸುವಿಕೆಯಿಂದ, ಮಕ್ಕಳಿಗೆ ಒಳ್ಳೇ ಆದರ್ಶವನ್ನು ಎಷ್ಟರ ಮಟ್ಟಿಗೆ ಹಾಕಿಕೊಡುವನೆಂಬುದನ್ನು ತನ್ನಷ್ಟಕ್ಕೆ ಆಲೋಚಿಸಬೇಕು. ಸಾಮೂಹಿಕ ಕಲ್ಯಾಣದ ಮಹತ್ವವನ್ನು ಅರಿತು ಮಕ್ಕಳು ಸಾಂಘಿಕ ಚಟುವಟಿಕೆಗಳಲ್ಲಿ ಸಹಕಾರ ಭಾವನೆಯಿಂದ ಸಹಕರಿಸಿದಾಗಲೇ ಅವರಲ್ಲಿ ನಿಜವಾದ ಆನಂದದ ಸೆಲೆಯೊಡೆಯುವದು. ಹೀಗೆ ಮಾಡುವಾಗ್ಗೆ ಅವರು ತಮ್ಮ ವೈಯಕ್ತಿಕ ನಿರ್ಣಯ ಬುದ್ಧಿ ಹಾಗು ಕರ್ತೃತ್ವ ಶಕ್ತಿಗಳಿಗೆ ತಿಲಾಂಜಲಿ ಕೊಡಬೇಕೆಂಬರ್ಥವಲ್ಲ. ಮಕ್ಕಳು ಅನುಭವಗಳಿಂದಲೇ ವಿಷಯಗಳ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳುವರು.

ಮಾನಸಿಕ ತರಬೇತಿಯೆಂದರೆ, ಮಕ್ಕಳು ಹೊಸ ಸಮಸ್ಯೆಗಳನ್ನು ಎದುರಿಸಿ ಅವುಗಳನ್ನು ನಿವಾರಿಸುವ ಬುದ್ಧಿ ಚಾತುರ್ಯ, ಪರಿಸ್ಥಿತಿಗಳಿಗೆ ಹೊಂದಿಕೊಂಡು ಹೋಗುವ ಹಾಗು ಪರಿಸ್ಥಿತಿಗಳನ್ನು ತಮ್ಮ ಉದ್ದೇಶಗಳಿಗೆ ಮಾರ್ಪಡಿಸುವ ಶಕ್ತಿ ಇವೇ ಮೊದಲಾದ ಗುಣಗಳನ್ನು ಬೆಳವಡಿಸಿಕೊಳ್ಳುವದು. ಮಕ್ಕಳು ತಮಗೊಪ್ಪಿಸಿದ ಕಾರ್ಯಗಳಲ್ಲಿ ಎಷ್ಟೊಂದು ಮನಸ್ಸು ಹಾಕಿ ದುಡಿಯುವರು? ಆ ಕಾರ್ಯಗಳು ಎಷ್ಟರಮಟ್ಟಿಗೆ ಅವರ ಕಲ್ಪನಾ ಶಕ್ತಿ ಹಾಗು ರಚನಾತ್ಮಕ ಪ್ರವೃತ್ತಿಗಳನ್ನು ಬೆಳಸುತ್ತವೆ

ಯೆಂಬುದನ್ನು ನೋಡಬೇಕು. ಇವೆಲ್ಲವುಗಳನ್ನು ಸಾಧಿಸ ಬೇಕಾದರೆ ಶಿಕ್ಷಕನ ವ್ಯಕ್ತಿತ್ವವು ಒಳ್ಳೇ ಪ್ರಭಾವಯುತವಾಗಿರಬೇಕು.

ಶಿಕ್ಷಕನ ನಿಯಂತ್ರಣವಿಲ್ಲದೆ ಮಕ್ಕಳು ಕಲಿಯುವಂತೆ ಉತ್ತೇಜಿತರಾಗುವದು ಅಷ್ಟೊಂದು ಸುಲಭವಾಗಿರದಿದ್ದರೂ, ಅಸಾಮಾನ್ಯ ಸಂಗತಿಯಾದರೂ, ಅತ್ಯಂತ ಅಪೇಕ್ಷಣೀಯವೆಂದು ಒಪ್ಪತಕ್ಕ ಮಾತು. ಶಿಕ್ಷಕರು ಪರಂಪರಾಗತವಾಗಿ ಬಂದ ಶಿಕ್ಷಣ ಕ್ರಮ-ವಿಧಾನಗಳನ್ನು ಅನುಸರಿಸುತ್ತ ಮಕ್ಕಳಿಗೆ ಕಲಿಸಿಬಿಟ್ಟರೆ ತಾವು ಹೇಳಿದ ಎಲ್ಲ ಸಂಗತಿಗಳನ್ನು ಮಕ್ಕಳು ತಿಳಿದುಕೊಂಡು ಬಿಡುವರೆಂದು ತಮ್ಮಷ್ಟಕ್ಕೆ ತಾವೇ ಹೊಗಳಿಕೊಂಡರೆ ಅದೊಂದು ತಪ್ಪು ಕಲ್ಪನೆ. ಮತ್ತು ತಾವು ಹೇಳಿದ್ದನ್ನು ತೆಗೆದುಕೊಳ್ಳದಿದ್ದರೆ ಅದು ಮಕ್ಕಳ ತಪ್ಪೆಂದು ಶಿಕ್ಷಕರು ತಮ್ಮ ಹೊಣೆಯನ್ನು ಹಾರಿಸಿಕೊಳ್ಳುತ್ತಾರೆ. ಆದರೆ ಬೇರೆ ಬೇರೆ ಹೊಸ ವಿಧಾನ ಹಾಗು ಪದ್ಧತಿಗಳನ್ನು ಅನುಸರಿಸಿ ಮಕ್ಕಳಲ್ಲಿ ಕಲ್ಪನಾ ಶಕ್ತಿಯನ್ನು ಬೆಳೆಯಿಸಿ ವಿಷಯದ ಬಗ್ಗೆ ಅವಲ್ಲಿ ಹೆಚ್ಚಿನ ಆಸಕ್ತಿಯನ್ನು ಹುಟ್ಟಿಸಿದಲ್ಲಿ ಅದಾವ ಅಪಾಧವಾಗಲಾರದು.

ಶಾಲೆಯಲ್ಲಿ ವಾಚನಾಲಯವಿದ್ದರೆ, ಮಕ್ಕಳು ಅದಲ್ಲಿ ಹೆಚ್ಚೆಚ್ಚಾಗಿ ಭಾಗವಹಿಸಿ ಅಪಾರವಾದ ಸಾಹಿತ್ಯ-ಜ್ಞಾನ ಭಾಂಡಾರದ ಲಾಭ ಪಡೆಯುವಂತೆ ಶಿಕ್ಷಕರು ಲಕ್ಷ್ಯವಹಿಸಬೇಕು. ಈಗಿನ ಪರಾವಲಂಬಿ ಹಾಗು ಬಹು ಸಮೀಪವಾಗಿರುವ ಜಗತ್ತಿನಲ್ಲಿ ಎಷ್ಟು ಬಾಲಕರಿಗೆ ಅನ್ಯ ಸಂಸ್ಕೃತಿ ಹಾಗು ಜನಾಂಗಗಳ ಬಗ್ಗೆ ಗೊತ್ತಿದೆ? ಇದನ್ನು ತಿಳಿಸಿಕೊಡುವದು ಶಿಕ್ಷಕನ ಕರ್ತವ್ಯವಲ್ಲವೇ? ಈಗಿನ ವಿಮಾನ ಪ್ರಯಾಣ ಹಾಗು ಸಾರಿಗೆ ಸಂಪರ್ಕಗಳ ಪರಿಣಾಮವಾಗಿ ಜಗತ್ತಿನ ವ್ಯವಹಾರಗಳು ಬಹಳವಾಗಿ ಬದಲಾವಣೆ ಹೊಂದಿದ್ದು, ಇಂತಹ ಬದಲಾದ ಪರಿಸ್ಥಿತಿಗೆ ತಕ್ಕಂತೆ ಇತಿಹಾಸ, ಭೂಗೋಲ ಮೊದಲಾದ ವಿಷಯಗಳನ್ನು ಕಲಿಸುವ ದೃಷ್ಟಿಯಲ್ಲಿ ಸಹ ಬದಲಾವಣೆ ಅವಶ್ಯ.

ಶಾಲೆಗಳಲ್ಲಿ ವ್ಯಾಯಾಮ ಹಾಗು ಶಾರೀರಿಕ ಶಿಕ್ಷಕ್ಕೆ ಸ್ಥಾನವಿದ್ದರೂ, ವರ್ಗದ ವಾತಾವರಣವು ಮಕ್ಕಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸುವಂತೆ ಆರೋಗ್ಯಕರವಾಗಿರಬೇಕು. ವರ್ಗದಲ್ಲಿ ಸೌಂದರ್ಯವನ್ನು ಹೆಚ್ಚಿಸುವ ಪ್ರಸಂಗಳಲ್ಲಿ ವಿದ್ಯಾರ್ಥಿಗಳೊಡನೆ ಚರ್ಚಿಸಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಕಾರ್ಯಮಾಡಿದಲ್ಲಿ, ಶಿಕ್ಷಕನ ಕಾರ್ಯವು ಸುಲಭವಾಗುವದಷ್ಟೇ ಅಲ್ಲದೆ ಮಕ್ಕಳಲ್ಲಿ ಕಲಾತ್ಮಕ ಕಲ್ಪನಾ ಶಕ್ತಿಯನ್ನು ಬೆಳೆಯಿಸಿ, ಶಿಕ್ಷಕ-ವಿದ್ಯಾರ್ಥಿಗಳ ಸಂಬಂಧವು ಪ್ರೇಮಮಯವಾಗುವದು.

ಮಕ್ಕಳಲ್ಲಿ ಹುದುಗಿರುವ ವೈಯಕ್ತಿಕ ಶಕ್ತಿಗಳ ವಿಕಾಸಕ್ಕೆ ತಕ್ಕ ಉತ್ತೇಜನ ಹಾಗು ಸಹಾಯಗಳು ವರ್ಗದಲ್ಲಿ ದೊರೆಯುವದವಶ್ಯ. ನಿರೀಕ್ಷಣಾ ಬುದ್ಧಿಯುಳ್ಳ ಶಿಕ್ಷಕನು ವಿಶೇಷ ಗುಣಗಳುಳ್ಳ ಹುಡುಗರನ್ನು ಗುರುತಿಸದಿರಲಾರನು. ಇಂಥ ಮಕ್ಕಳಲ್ಲಿ ವಿಶೇಷ ಪಾಂಡಿತ್ಯ ಹಾಗು ನಾಯಕತ್ವ ಮೊದಲಾದ ಗುಣಗಳಿದ್ದಲ್ಲಿ ಅವುಗಳನ್ನು ಶಿಕ್ಷಕನು ಹೊರಗೆಳೆದು, ಅವಶ್ಯವಿದ್ದಲ್ಲಿ ಶುದ್ಧೀಕರಿಸಿ, ಅವುಗಳು ಇನ್ನೂ ಹೆಚ್ಚೆಚ್ಚಾಗಿ ಬೆಳೆಯುವಂತೆ ಯೋಗ್ಯ ಸನ್ನಿವೇಶಗಳನ್ನು ಕಲ್ಪಿಸಿಕೊಡಬೇಕು.

ಎಲ್ಲವುಗಳಿಗಿಂತಲೂ ಮಹತ್ವದ್ದಾಗಿ ಹಾಗು ಮಕ್ಕಳಿಗೂ ಅವಶ್ಯವಾಗಿ ಬೇಕಾಗಿರುವದು ಶೀಲಸಂವರ್ಧನೆಯ ಶಿಕ್ಷಣ. ಈಗಾಗಲೇ ಸಾಕಷ್ಟು ಬೆಳೆದಿರುವ ಅನೇಕ ವಿಷಯಗಳಿಗೆ ಇದೊಂದು ಹೆಚ್ಚಿನ ವಿಷಯವೆಂದು ತಿಳಿಯಲಾಗದು. ಇದನ್ನು ಯಾವದೇ ವರ್ಗದಲ್ಲಿ ಇಲ್ಲವೆ ಯಾವದೇ ವಯೋಮಾನದ ಮಕ್ಕಳಿಗೆ ಕಲಿಸಲು ಬರುವದು. ಶೀಲ-ಶಿಕ್ಷಣವೆಂದರೆ ಕೆಲವು ನೀತಿಯ ಪಾಠಗಳನ್ನು ಕಲಿತರಾಯಿತೆಂದು ತಿಳಿಯುವದು ತಪ್ಪು ಕಲ್ಪನೆ. ನಿಜವಾದ ಶೀಲ-ಶಿಕ್ಷಣವು ಮಗುವಿನ ವರ್ಗದಲ್ಲಿನ ಜೀವನವನ್ನು ಉದಾತ್ತಗೊಳಿಸಿ ಅವನಲ್ಲಿ ಸ್ವಚ್ಛತೆ, ಅಚ್ಚುಕಟ್ಟುತನ, ನಿಯಮಿತತನ, ವಿನಯ, ಸ್ವಾಭಿಮಾನ ಮೊದಲಾದ ಮೂಲಭೂತ ಗುಣಗಳನ್ನು ಬೆಳೆಯಿಸಬೇಕು. ಈ ಗುಣಗಳು ಗೌಣವೆಂದು ತೋರಬಹುದಾದರೂ, ಅವುಗಳು ಮಕ್ಕಳಲ್ಲಿ ಅದ್ಭುತ ಆತ್ಮವಿಶ್ವಾಸ, ಜೀವನದ ಬಗ್ಗೆ ಆದರವನ್ನು ಹುಟ್ಟಿಸುವದಲ್ಲದೆ, ಪ್ರೌಢ ಜೀವನದಲ್ಲಿ ಅವಶ್ಯವಾಗಿ ಬೇಕಾಗುವ ಪ್ರವೃತ್ತಿಗಳಿಗೆ ಆಧಾರ ಸ್ತಂಭಗಳಂತಿರುವವು. ಆದ್ದರಿಂದ ಮಗುವಿನ ಸರ್ವಾಂಗೀಣ ವಿಕಾಸಕ್ಕೆ ಶೀಲ-ಶಿಕ್ಷಣವೇ ಮೂಲವಾದುದೆಂದು ಹೇಳುವದರಲ್ಲಿ ಯಾವ ಆಶ್ಚರ್ಯವಿಲ್ಲ.

(ಜೆ. ಇ. ಓವೆನ್ನರ ಇಂಗ್ಲಿಷ ಲೇಖನದ ಆಧಾರದಿಂದ ಬರೆದುದು.)

ಮೂಲ ಶಿಕ್ಷಣ

[ಅಖಿಲ ಭಾರತ ಮೂಲಶಿಕ್ಷಣ ಪರಿಶೀಲನಾ ಸಮಿತಿಯು ಧಾರವಾಡದ ಗಂ. ಮು. ಸರಕಾರಿ ಟ್ರೇನಿಂಗ ಕಾಲೇಜನ್ನು ದಿ. ೧೧-೬-೧೯೫೫ರಂದು ಸಂದರ್ಶಿಸಿದಾಗ ಶಿಕ್ಷಕ-ವಿದ್ಯಾರ್ಥಿಗಳನ್ನು ಕುರಿತು ಸಮಿತಿಯ ಚೇರಮನ್ ಶ್ರೀ ರಾಮಚಂದ್ರನ್ ಅವರು ಮಾಡಿದ ಭಾಷಣವನ್ನು ಇಲ್ಲಿ ಕೊಡಲಾಗಿದೆ. — ಪ್ರ. ಸಂ.]

ಮಹನೀಯರೇ,

ಕನ್ನಡ ಭಾಷೆಯನ್ನು ಅರಿಯದ ನಾನು ನಿಮ್ಮೆದುರಿನಲ್ಲಿ ಇಂಗ್ಲೀಷಿನಲ್ಲಿ ಮಾತನಾಡಬೇಕಾಗಿದೆ. ಬೆಳ್ಳಿಯ ಗಂಟೆಯ ಮಂಜುಳ ನಿನಾದದಂತೆ ಕನ್ನಡ ಮಾತುಗಳು ನನಗೆ ಹರ್ಷವನ್ನುಂಟು ಮಾಡಿವೆ. ಮಧುರ ಕನ್ನಡ ಭಾಷೆಯ ಮುಂದೆ ನಾನು ಈಗ ಮಾತನಾಡುವ ಆಂಗ್ಲ ಭಾಷೆಯು ರುಚಿಸಲಿಕ್ಕಿಲ್ಲ. ಆದರೂ ಅನಿವಾರ್ಯವಾಗಿ ಹಾಗೆ ಮಾತನಾಡಬೇಕಾಗಿದೆ.

ದಿಲ್ಲಿಯಿಂದ ಮುಂಬಯಿಗೆ ಆಗಮಿಸಿ ನಾವು ರಾಜ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಮುರಾರಜಿಯವರನ್ನು ಕಂಡಾಗ ಅವರು ಮೂಲಶಿಕ್ಷಣದ ಬಗ್ಗೆ ಮಾತನ್ನು ಪ್ರಾರಂಭಿಸಿದರು. ಕೇಂದ್ರ ಶಿಕ್ಷಣ ಶಾಖೆಯವರು ಮೂಲ ಶಿಕ್ಷಣವನ್ನು ಹತ್ತು ವರ್ಷಗಳಲ್ಲಿ ದೇಶದಾದ್ಯಂತ ಪ್ರಚುರಗೊಳಿಸುವವರಿದ್ದಾರೆಂದು ತಿಳಿಸಿದಾಗ ನಿಮ್ಮ ಮುಖ್ಯ ಮಂತ್ರಿಗಳು ಅದೇಕೆ, ಐದು ವರ್ಷಗಳಲ್ಲಿಯೇ ಅದನ್ನು ಅಮಲಿನಲ್ಲಿ ತರಬಹುದೆಂದು ತಿಳಿಸಿ ಮೂಲ ಶಿಕ್ಷಣದ ಬಗೆಗೆ ತಮಗಿರುವ ಆಸ್ಥೆಯನ್ನು ವ್ಯಕ್ತಗೊಳಿಸಿದರು.

ಶಿಕ್ಷಣದ ಮೂಲವು ಮೂಲ ಶಿಕ್ಷಣವಾದರೆ ಮೂಲೋದ್ಯೋಗವು ಮೂಲ ಶಿಕ್ಷಣದ ಮೂಲವಿರುತ್ತದೆ. ಹೀಗೆಂದ ಮಾತ್ರಕ್ಕೆ ಕೇವಲ ಪ್ರಾಜ್ಞರಾದ ಮೂಲೋದ್ಯೋಗದ ಶಿಕ್ಷಕರಾದರೆ ಪೂರ್ಣವಾಯಿತೆಂದು ಭಾವಿಸಬೇಡಿರಿ. ಅದರಂತೆ ವಿಷಯುಗಳಲ್ಲಿ ಪರಿಣತಿಯನ್ನು ಹೊಂದಿದರೂ ಪರಿಪೂರ್ಣರಾಗಲಿಲ್ಲ. ಪರಿಪೂರ್ಣ ಶಿಕ್ಷಕರಾಗಬೇಕಾದರೆ ವಿಷಯುಗಳನ್ನು ಮೂಲೋದ್ಯೋಗ ಹಾಗೂ ಇತರ ಪರಿಸರದಿಂದ ಹೊರಡಿಸಿ ಕಲಿಸುವವರಾಗಬೇಕು. ಒಂದು ಕಡೆ ಅಭ್ಯಾಸ ಪತ್ರಿಕೆ; ಇನ್ನೊಂದು ಕಡೆ ಪರಿಸ್ಥಿತಿ ಇವೆರಡನ್ನೂ ನೀವು ಅಭ್ಯಸಿಸಿರಿ; ಅವುಗಳ ಮೇಲೆ ನಿಮ್ಮ ಪ್ರಭುತ್ವವನ್ನು ಇಡಿರಿ. ಭಾವಿಯಿಂದ ನೀರನ್ನು ಜಗ್ಗುವಂತೆ ನೀವು ಮೂಲೋದ್ಯೋಗ ಹಾಗೂ ಇತರ ಚಟುವಟಿಕೆಗಳಿಂದ ಜ್ಞಾನವೆಂಬ ನೀರನ್ನು ಜಗ್ಗಿ ಮಕ್ಕಳಿಗೆ ಕುಡಿಸಲು ಯತ್ನಿಸಿರಿ. ಹೀಗೆ ಮಾಡಲು ಶಕ್ತರಾದಾಗ ಮಾತ್ರ ನೀವು ನಿಜವಾದ ಮೂಲ ಶಿಕ್ಷಣ ಶಿಕ್ಷಕರಾಗುವಿರಿ. ಇನ್ನು ಮೇಲೆ ಮೂಲ ಶಿಕ್ಷಣ ಶಿಕ್ಷಕರು, ಸಾಮಾನ್ಯ ಶಿಕ್ಷಕರು ಎಂಬ ಭೇದವು ಇರಲಾರದು. ಎಲ್ಲ ಸಾಲೆಗಳು ಮೂಲ ಶಿಕ್ಷಣ ಸಾಲೆಗಳಾಗುವವು.

ನಾವು ಗುಜರಾಥ ಮತ್ತು ಮಹಾರಾಷ್ಟ್ರಗಳಲ್ಲಿ ಸಂಚರಿಸಿ ಬಂದಿದ್ದೇವೆ. ಗುಜರಾಥದಲ್ಲಿ ಕೆಲವು ಒಳ್ಳೆಯ ಅಂಶಗಳನ್ನು ಮಹಾರಾಷ್ಟ್ರದಲ್ಲಿ ಬೇರೆ ಕೆಲ ಒಳ್ಳೆಯ ಅಂಶಗಳನ್ನು ಕಂಡಿದ್ದರೆ ಕರ್ನಾಟಕದಲ್ಲಿ ಈ ಎಲ್ಲ ಗುಣಗಳ ಸಮ್ಮಿಲನವನ್ನು ಕಂಡುಕೊಂಡೆವು. ಬಹುಶಃ ಕರ್ನಾಟಕದ ಅರ್ಥವಾದರೂ ಇದೇ ಇರಬಹುದು. ಮೈಸೂರು ಮತ್ತು ಉತ್ತರ ಕರ್ನಾಟಕವು ಒಂದಾದಾಗ ಈ ಪ್ರಾಂತವು ಅತ್ಯುಚ್ಚ ಪ್ರಾಂತವಾಗಬಹುದಾಗಿದೆ.

ನಿಮ್ಮ ಸಂಸ್ಥೆಯ ಅನೇಕ ಚಟುವಟಿಕೆಗಳನ್ನು ನೋಡಿ ಹರ್ಷಭರಿತರಾಗಿದ್ದೇವೆ. ಪ್ರ್ಯಾಕ್ಟಿಸಿಂಗ ಸ್ಕೂಲಿನ ಹಸನ್ಮುಖಿ ಮಕ್ಕಳನ್ನು ನೋಡಿ ಅವರು ಚಟುವಟಿಕೆ ಪ್ರಿಯರಾಗಿರುವದನ್ನು ಕಂಡು ಸಂತಸಪಟ್ಟೆವು. ವಿದ್ಯಾರ್ಥಿಗಳಲ್ಲಿ ಹಾಗೂ ನಿಮ್ಮಲ್ಲಿ ಜೀತನವು ತುಂಬಿ ತುಳುಕುತ್ತಿದೆ. ನೀವು ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಶುಭ್ರ ಖಾದಿಯ ಟೊಪ್ಪಿಗೆಗಳನ್ನು ಹಾಕಿಕೊಂಡು ಶಿಸ್ತಿನಿಂದ ಕುಳಿತಿರುವದು ಅಭಿಮಾನದ ಮಾತಾಗಿದೆ. ನಮ್ಮ ಸಂಚಾರದ ಇತರ ಕಡೆಗಳಲ್ಲಿ ೪೦, ೮೦, ೧೦೦ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ್ದರೆ ಇಲ್ಲಿ ೨೦೦ಕ್ಕಿಂತ ಹೆಚ್ಚು ಜನರೆದುರಿನಲ್ಲಿ ಮಾತನಾಡುವದು ಒಂದು ಆನಂದವೇ ಸರಿ. ನಿಮ್ಮ ಸಂಸ್ಥೆಯ ಕಾರ್ಯಕಲಾಪಗಳು ಶ್ಲಾಘನೀಯವಾಗಿವೆ; ನಿಮಗೆಲ್ಲರಿಗೆ ಸಮಿತಿಯ ಎಲ್ಲ ಸದಸ್ಯರ ಪರವಾಗಿ ನನ್ನ ಹಾರ್ದಿಕ ಅಭಿನಂದನೆಗಳು.

ಸಂಗ್ರಾಹಕರು : **ಶ್ರೀ ಆಯ್. ಎಸ್. ಬಿದರಿ**

ಬಣ್ಣ ಹಾಕುವ ಕೇಂದ್ರ

ಭರತ ಖಂಡವು ಸ್ವತಂತ್ರವಾದ ಈ ಎಂಟು ವರ್ಷಗಳ ಕಾಲಾವಧಿಯಲ್ಲಿ ನಮ್ಮ ಸರಕಾರವು ಕಲೆ–ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತ ಬಂದಿದೆ. ಯಾವ ಒಂದು ಕಲೆ–ಕೈಗಾರಿಕೆಯು ಆಕರ್ಷಣೀಯವಾಗಬೇಕಾದರೆ ಅದಕ್ಕೆ ವೈವಿಧ್ಯತೆಬೇಕೆಂದು ಬೇರೆ ಹೇಳಬೇಕಾಗಿಲ್ಲ. ಸದ್ಯಕ್ಕೆ ಹಲವು ಸಾಲೆಗಳಲ್ಲಿ ನೂಲುವ ನೇಯುವ ಮೂಲೋದ್ಯೋಗವು ಕಲಿಸಲ್ಪಡುತ್ತದೆ. ಅದು ಆಕರ್ಷಣೀಯವಾಗಬೇಕಾದರೆ ಅದರಲ್ಲಿಯ ಎಲ್ಲ ಉಪಕ್ರಿಯೆಗಳು ಕ್ರಮಬದ್ಧವಾಗಿ, ಶಾಸ್ತ್ರಬದ್ಧವಾಗಿ ಸಾಗಬೇಕು. ಅಲ್ಲದೆ ಮಣ್ಣಿನ ಮೂರ್ತಿಗೆ ಬಣ್ಣ ಕೊಟ್ಟು ಒಪ್ಪ ಹಾಕಿದಂತೆ ನೂಲಿಗೆ ಮತ್ತು ಬಟ್ಟೆಗಳಿಗೆ ಬಣ್ಣದ ಮೆರಗು ಬೇಕು. ಆದರೆ ಇದು ಬಹಳ ಖರ್ಚಿನದೂ ಶ್ರಮದಾಯಕವೂ ಇದುದರಿಂದ ಇದನ್ನು ಶಾಲೆಗಳಲ್ಲಿ ಸಾಧಿಸುವದು ಸದ್ಯದ ಪರಿಸ್ಥಿತಿಯಲ್ಲಿ ಬಹಳ ಕಷ್ಟವೆಂದೆನಿಸಿತು. ಅದಕ್ಕೆಂತೆಯೇ ಮುಂಬಯಿ ಸರಕಾರದವರು ರಾಜ್ಯದಲ್ಲಿ ಪ್ರಯೋಗಾರ್ಥವಾಗಿ ಪ್ರಾಥಮಿಕ ಶಾಲೆಗಳ ನೂಲಿಗೆ ಬಣ್ಣ ಹಾಕುವ ಮೂರು ಕೇಂದ್ರಗಳನ್ನು ತೆಗೆದಿದ್ದಾರೆ. ಅವುಗಳಲ್ಲಿ ನಮ್ಮ ಕಾಲೇಜದ ನೇತೃತ್ವದಲ್ಲಿ ನಡೆಯುತ್ತಿರುವ ಕೇಂದ್ರವೂ ಒಂದು. ಇದು ದಿನಾಂಕ ೧೫-೭-೫೫ರಿಂದ ಪ್ರಾರಂಭವಾಗಿದೆ. ಇಲ್ಲಿ ಧಾರವಾಡ ಜಿಲ್ಹೆಯ ಎಲ್ಲ ಮೂಲೋದ್ಯೋಗ ಶಾಲೆಗಳ ನೂಲಿಗೆ ಬಣ್ಣ ಹಾಕಿ ಕೊಡುವ ಯೋಜನೆ ಮಾಡಲಾಗಿದೆ. ಅವರ ಸಹಿಸಫಲವನ್ನು ಎಲ್ಲರೂ ಸವಿದು ಸಂತೋಷಪಡಬೇಕೆಂದು ನಮ್ಮ ಆಶೆ. ಆ ಬಗ್ಗೆ ಕೆಲವು ಸೂಚನೆಗಳನ್ನು ಮಾಡುವದು ವಿಹಿತವೆಂದು ಕಾಣುತ್ತದೆ.

ನಮ್ಮ ಕೇಂದ್ರದಲ್ಲಿ (೧) **ಡಾಯರೆಕ್ಟ ಕಲರ** (೨) **ಸಲ್ಫರ ಕಲರ** (೩) **ನೆಪ್ಥಾಲ ಕಲರ** (೪) **ಇಂಡಂತ್ರೀನ ಕಲರ** ಹೀಗೆ ನಾಲ್ಕು ಪ್ರಕಾರದ ಮೂಲ ದ್ರವ್ಯಗಳನ್ನು ಹಾಕಲಾಗುವದು. **ಡಾಯರೆಕ್ಟ ಬಣ್ಣ**ವನ್ನು ಸಾಮಾನ್ಯವಾಗಿ ಆಸನ, ಜಮಖಾನೆ, ಗುಡಾರ ಪಟ್ಟಿಯಲ್ಲಿ ಗೀರು ಹಾಕುವದು ಮುಂತಾದ ನೂಲಿಗೆ ಉಪಯೋಗಿಸುವದು ಯೋಗ್ಯ. ಯಾಕಂದರೆ ಈ ಬಟ್ಟೆಗಳು ಮೇಲಿಂದ ಮೇಲೆ ನೀರಿಗೆ ಬೀಳುವದಿಲ್ಲ. ಈ ಬಣ್ಣದ ಬಟ್ಟೆಗಳನ್ನು ಮೇಲಿಂದ ಮೇಲೆ ನೀರಿನಲ್ಲಿ ಒಗೆಯುವದರಿಂದ ಬಣ್ಣ ಹೋಗುವದು. **ಸಲ್ಫರ ಬಣ್ಣವು** ಇದಕ್ಕೂ ಸ್ವಲ್ಪ ನೆಟ್ಟಗೆ. ನೆಪ್ಥಾಲ ಜಾತಿಯ ಬಣ್ಣಗಳು ಗಟ್ಟಿಯಾದವುಗಳಿದ್ದು ಬರಿಯ ಒಗೆತಕ್ಕೆ ಬಣ್ಣ ಕಡಿಮೆ ಆಗುವದಿಲ್ಲ. ಬಟ್ಟೆಗಳನ್ನು ಗಂಜಿಗೆ ಕೊಟ್ಟರೆ ಮಾತ್ರ ಕ್ರಮೇಣ ಸ್ವಲ್ಪ ಕಡಿಮೆಯಾಗುವವು. ಈ ಜಾತಿಯ ಬಣ್ಣಗಳು ಸೀರಿ, ಪತ್ತಲ, ಮುಂತಾದವುಗಳಿಗೆ ನೆಟ್ಟಗೆ. ಎಲ್ಲ ಬಣ್ಣಗಳಲ್ಲಿ ಶ್ರೇಷ್ಠವಾದದ್ದೆಂದರೆ **ಇಂಡಂತ್ರೀನ**. ಇದು ನೂಲಿಗೆ ಹತ್ತಿಕೊಂಡರೆ ತೀರಿತು, ಅರಿವೆ ಹರಿದರೂ ಅದರ ಕಾಂತಿ ಹೊಳಪು ಕಡಿಮೆಯಾಗುವದಿಲ್ಲ. ಈ ಜಾತಿಯ ಬಣ್ಣಗಳು ಬಹಳ ತುಟ್ಟಿ. ಮೇಲ್ಕಾಣಿಸಿದ ಜಾತಿಯ ಬಣ್ಣಗಳಲ್ಲಿ ಬೇಕಾದುದನ್ನು ಹಾಕಿಸಿಕೊಳ್ಳಬಹುದು. ಆಯಾ ಜಾತಿಗಳಲ್ಲಿ ಕೆಳಗಿನ ಬಣ್ಣಗಳನ್ನು ಹಾಕಿ ಕೊಡಲು ಸರಕಾರವು ನಮಗೆ ಸೂಚನೆ ಇತ್ತಿದೆ.

ಡಾಯರೆಕ್ಟ ಬಣ್ಣಗಳು :—

(೧) ಕೆಂಪು (೨) ಹಸಿರು (೩) ಕಿತ್ತಳಿ (೪) ಕಪ್ಪು (೫) ಜಾಂಬಳಿ.

ಸಲ್ಫರ ಬಣ್ಣಗಳು :—

(೧) ಹಸರು (೨) ಹಳದಿ (೩) ನೀಲಿ (೪) ಕಂದು.

ನೆಪ್ಥಾಲ ಬಣ್ಣಗಳು :—

(೧) ನೀಲಿ (೨) ಕೆಂಪು (೩) ಕಿತ್ತಳಿ (೪) ಹಳದಿ.

ಇಂಡಂತ್ರೀನ ಬಣ್ಣಗಳು ;—

(೧) ನೀಲಿ (೨) ಹಸಿರು (೩) ಕಂದು (೪) ಹಳದಿ.

ಸಾಮಾನ್ಯ ಸೂಚನೆಗಳು :—

(೧) ಸಾಲೆಯ ನೂಲಿಗೆ ಬಣ್ಣ ಹಾಕಿಸಿಕೊಳ್ಳು ವವರು ತಮ್ಮ ತಮ್ಮ ಸಾಲೆಗಳ ಬೀಟ ಆಫೀಸರರ ಮುಖಾಂತರ ನೂಲನ್ನು ಕಳಿಸಿಕೊಡಬೇಕು ಮತ್ತು ಅವರ ಮುಖಾಂತರವಾಗಿಯೇ ಮರಳಿ ತರಿಸಿಕೊಳ್ಳಬೇಕು.

(೨) ಕತ್ತರಿ ಪ್ರಕಾರದಿಂದ ಸುತ್ತಿದ ನೂಲಿಗೆ ಬಣ್ಣ ಚೆನ್ನಾಗಿ ಅಂಟಿಕೊಳ್ಳುವದಿಲ್ಲ. ಕಾರಣ ದುಂಡ ಬಳಿ (ಲಡಿ)ಗಳನ್ನೇ ಕಳಿಸಬೇಕು.

(೩) ಲಡಿಗಳಲ್ಲಿಯ ಚಿಟಕುಗಳನ್ನು ಸೊಳ್ಳಾಗಿ ಕಟ್ಟಬೇಕು.

(೪) ಉತ್ತಮವಾದ ನೂಲನ್ನೇ ಆರಿಸಿ ಕಳುಹಿಸ ಬೇಕು.

(೫) ಶಕ್ಯವಿದ್ದಷ್ಟು ಒಂದೇ ನಂಬರಿನ ಲಡಿಗಳು ಇರಬೇಕು.

(೬) ಕಳುಹಿಸುವ ನೂಲಿಗೆ ಯಾವ ಜಾತಿಯ ಲ್ಲಿಯ ಯಾವ ಪ್ರಕಾರದ ಬಣ್ಣ ಹಾಕಬೇಕು ಎಂಬದನ್ನು ಸ್ಪಷ್ಟವಾಗಿ ಬರೆಯಬೇಕು. ಸಾಧ್ಯವಿದ್ದರೆ ಮಾದರಿಗಾಗಿ ಸ್ವಲ್ಪ ಕಳುಹಿಸಿಕೊಡಬೇಕು.

(೭) ಹುರಿ ಹಾಕಿದ ನೂಲಿಗೆ ಬಣ್ಣ ಹಾಕಿಸುವ ದಿದ್ದಲ್ಲಿ ಆ ನೂಲು ತೀರ ಕಟುಹುರಿಯಾಗಿರಬಾರದು. ಅಂಥ ನೂಲಿಗೆ ಬಣ್ಣ ಚೆನ್ನಾಗಿ ಹತ್ತುವದಿಲ್ಲ. ತೀರ ಅಲ್ಪ ಹುರಿಯಾಗಿಯೂ ಇರಬಾರದು. ಅದು ನೇಯಿಗೆಯ ಕೆಲ ಸಕ್ಕೆ ತಾಳಿಕೆ ಬರುವದಿಲ್ಲ.

(೮) ಬಣ್ಣಹಾಕುವದರ ಬೆಲೆಯನ್ನು ಮೇ. ಕ್ರ್ಯಾಪ್ಟ ಆರ್ಗನಾಯಿಜರ, ದಕ್ಷಿಣ ಭಾಗ, ಧಾರವಾಡ ಇವರೊಡನೆ ಚರ್ಚಿಸಿ ನಿರ್ಣಯಿಸಲಾಗುವದು. ಆ ಪ್ರಕಾರ ಹಣ ಆಕಾರ ಮಾಡಲಾಗುವದು.

ಮೇಲಿನ ನಿಯಮಗಳನ್ನು ತಪ್ಪದೆ ಪಾಲಿಸಿದ ಬಣ್ಣ ಹಾಕುವ ಕೆಲಸವು ಯಶಸ್ವಿಯಾಗಿ ಸಾಗುವದು ಮತ್ತು ನೇಯಿಗೆಯ ಕೆಲಸವು ಸುಗಮವಾಗಿ ಸಾಗುವದ ಅಲ್ಲದೆ ಆಕರ್ಷಣೀಯವಾಗುವದು. ನೂಲಿಗೆ ಬಣ್ಣ ಹಾಕುವ ಕಾರ್ಯವು ಚೆನ್ನಾಗಿ ನಡೆದು ಯಶಸ್ವಿಯಾದ ಬಟ್ಟೆಯು ಮಾರಾಟವಾಗಬಹುದೆಂದು ಆಶಿಸಲಾಗಿದೆ.

೧-೮-೧೯೫೫

ಪ್ರಿನ್ಸಿಪಾಲರು,
ಸರಕಾರಿ ಟ್ರೇನಿಂಗ ಕಾಲೇಜ
ಧಾರವಾಡ

ಪ್ರ ಕ ಟ ನೆ

೧೯೫೫ನೆಯ ಸಪ್ಟಂಬರ ತಿಂಗಳಿನಿಂದ **'ಪ್ರಾಥಮಿಕ ಶಿಕ್ಷಣ'**ದ ಸಂಚಿಕೆಗಳಲ್ಲಿ **'ನಮ್ಮ ಸಮಸ್ಯೆಗಳು'** ಎಂಬ ಹೊಸ ವಿಭಾಗವನ್ನು ತೆರೆಯಬೇಕೆಂದು ಯೋಚಿಸಿದ್ದೇವೆ. ಈ ವಿಭಾಗದಲ್ಲಿ ಪ್ರಾಥಮಿಕ ಶಿಕ್ಷಕರು ತಮ್ಮ ನಿತ್ಯದ ಶಾಲೆಯ ಕೆಲಸದಲ್ಲಿ ಕಾಣಬಹುದಾದ ಅಡೆ-ತಡೆಗಳು, ವಿವಿಧ ವಿಷಯುಗಳನ್ನು ಸಮರ್ಥನೀಯವಾಗಿ ಕಲಿಸುವ ಉಪಾಯುಗಳು, ಕಲಿಸುವ ಸಾಧನ-ಸಲಕರಣೆಗಳು, ಇತ್ಯಾದಿಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದರೆ ಅವುಗಳಿಗೆ ಸಾಧ್ಯವಿದ್ದಷ್ಟು ಸಮಾಧಾನಕರ ಉತ್ತರಗಳನ್ನು ಕೊಡಲು ಯತ್ನಿಸಲಾಗುವದು. ಹೀಗೆ ಕೇಳಬಹುದಾದ ಪ್ರಶ್ನೆಗಳು ಪ್ರತ್ಯಕ್ಷ ಅನುಭವಜನ್ಯವಿರಬೇಕು; ಚಿಕ್ಕ ಹಾಗು ನಿರ್ದಿಷ್ಟವಾಗಿಯೂ ಸಂಕ್ಷಿಪ್ತ ರೂಪದಲ್ಲಿ ಉತ್ತರ ಪಡೆಯ ಬಲ್ಲವೂ ಪ್ರಾಥಮಿಕ ಶಿಕ್ಷಕ ವರ್ಗಕ್ಕೆ ಸಾಮಾನ್ಯವಾಗಿ ಉಪಯುಕ್ತದಾಯಕವಾಗಿಯೂ, ಶಿಕ್ಷಣ ಕಾರ್ಯದ ಮೇಲೆ ಪ್ರಕಾಶವನ್ನು ಬೀರುವಂತಹಗಳೂ, ಆಡಳಿತೆಗೆ ಸಂಬಂಧಪಡದಂತಹವೂ ಇರಬೇಕು.

ಇದಕ್ಕಾಗಿ 'ಪ್ರಾಥಮಿಕ ಶಿಕ್ಷಣ'ದಲ್ಲಿ ಒಂದು ಪುಟವನ್ನು ಮಾತ್ರ ಮೀಸಲಿರಿಸಿದ್ದು ಕಾಲಕಾಲಕ್ಕೆ ಉತ್ತರಗಳನ್ನು ಬರೆಯುತ್ತ ಹೋಗುವೆವಾದರೂ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಲೇಬೇಕೆಂದು ಓದುಗರು ನಮ್ಮಿಂದ ನಿರೀಕ್ಷಿಸದಷ್ಟು ದಯೆ ತೋರಬೇಕು. ಅದ ರಂತೆ ಉತ್ತರಗಳ ಮೇಲೆ ವಾದ-ವಿವಾದ ನಡೆಸಲು ಸಹ ಉತ್ತೇಜನ ದೊರೆಯದು.

—ಪ್ರ. ಸಂ.

ಹಿಂದೀ ಕಾದಂಬರಿ ಸಮ್ರಾಟ ಪ್ರೇಮಚಂದ

ಲೇಖಕರು :— **ಶ್ರೀ ಗುರುನಾಥ ಜೋಶಿ,** ಧಾರವಾಡ.

[ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಇದೇ ಜುಲೈ ೧ನೆಯ ತಾರೀಖಿನಿಂದ ೪ ತಿಂಗಳ ಅಲ್ಪಾವಧಿ ಹಿಂದೀ ತರಬೇತಿ ವರ್ಗ (೨ನೆಯದು) ಪ್ರಾರಂಭವಾಗಿದೆ. ಹಿಂದೀ ಸಾಹಿತ್ಯದಲ್ಲಿ ಕಾದಂಬರಿ ಮತ್ತು ಕಥೆಗಳಿಂದ ಕ್ರಾಂತಿಯನ್ನು ಮಾಡಿ ಭಾರತೀಯ ಹಾಗು ವಿಶ್ವಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನ ಗಳಿಸಿದ ದಿವಂಗತ ಪ್ರೇಮಚಂದರ ಜಯಂತಿಯನ್ನು ಕೋರ್ಸಿನವರು ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಪ್ರೇಮಚಂದರಂತಹ ಸಾಹಿತ್ಯೋಪಾಸಕರ ಪರಿಚಯವು ನಮ್ಮ ಪತ್ರಿಕೆಯ ವಾಚಕರಿಗೆ ಆಗುವದು ಉಚಿತವೆನಿಸಿದ್ದರಿಂದ—ಪ್ರೇಮಚಂದರು ಶಿಕ್ಷಕ ವೃತ್ತಿಯಿಂದಲೇ ಜೀವನ ಪ್ರಾರಂಭಿಸಿದ್ದರು—ಅವರ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಕೊಡಲಾಗದೆ. —ಪ್ರ. ಸಂ.]

ಮೊದಲು ಮಾತು

ಮಾನವನು ಅನಂತ ಕಾಲದಿಂದ ಚಿತ್ರ, ಮೂರ್ತಿ, ಸಂಗೀತ, **ಕವಿತೆಗಳ ಮುಖಾಂತರ** ತನ್ನ ಭಾವಗಳನ್ನು ವ್ಯಕ್ತಗೊಳಿಸುತ್ತ ಬಂದಿದ್ದಾನೆ. ಈ ಭಾವಾಭಿವ್ಯಕ್ತಿಗೆ ಅಥವಾ ಆವಿಷ್ಕರಣಕ್ಕೆ ಕಲೆಯೆನ್ನುತ್ತಾರೆ. ಸಾಹಿತ್ಯವೂ ಒಂದು ಕಲೆಯೇ. ಅದು ಮಾನವನ ಜಿಜ್ಞಾಸು ಪ್ರವೃತ್ತಿಯನ್ನು ಶಾಂತಗೊಳಿಸುವದಲ್ಲದೆ ಮಾನವನ ಮನಸ್ಸನ್ನು ಸುಖಿಯನ್ನಾಗಿ ಮಂಗಲಕಾರಿಯನ್ನಾಗಿ ಮಾಡಬಯಸುತ್ತದೆ. ಪೌರ್ವಾತ್ಯರ ದೃಷ್ಟಿಯಲ್ಲಿ ಕಾವ್ಯವೂ ಸಾಹಿತ್ಯವೇ, ಕಾವ್ಯದಲ್ಲಿ ದೃಶ್ಯ ಮತ್ತು ಶ್ರವ್ಯ ಎಂಬ ಎರಡು ಬಗೆಗಳು ಉಂಟು. ಶ್ರವ್ಯಕಾವ್ಯದಲ್ಲಿ ಪದ್ಯ, ಗದ್ಯ ಮತ್ತು ಮಿಶ್ರ ಎಂದು ಮೂರು ಭಾಗಗಳನ್ನು ಮಾಡುವರು. ಪ್ರೇಮಚಂದರು ಹಿಂದೀ ಗದ್ಯವನ್ನು ತಮ್ಮ ಲೇಖನಿಯ ಚಮತ್ಕೃತಿಯಿಂದ ಬೆಳಗಿದರು. ವಿಶೇಷವಾಗಿ ಅವರು ಬರೆದುದು ಕತೆ ಹಾಗೂ ಕಾದಂಬರಿಗಳನ್ನು. ಅವರ ಕೃತಿಗಳು ಇಂದು ನಮ್ಮ ದೇಶದ ಇತರ ಭಾಷೆಗಳಲ್ಲೂ ವಿದೇಶೀ ಭಾಷೆಗಳಲ್ಲಿಯೂ ಇಳಿದಿವೆ. ಜಾಗತಿಕ ಸಾಂಸ್ಕೃತಿಕ ಮಂಡಳದವರು ಸಹ ಪ್ರೇಮಚಂದರ ಅಮರ ಕೃತಿಯಾದ **ಗೋದಾನ** ಎಂಬ ಕಾದಂಬರಿಯು ಪ್ರಪಂಚದ ಸಮಸ್ತ ಭಾಷೆಗಳಲ್ಲಿ ಅನುವಾದವಾಗಲು ಯೋಗ್ಯವಾದುದು ಎಂದು ಒಪ್ಪಿದ್ದಾರೆ. ಇದೂ ಅಲ್ಲದೆ ಅವರ ಪ್ರತಿಯೊಂದು ಕೃತಿಗಳಲ್ಲಿ ಗಾಂಧೀಯುಗದ ಸುರಧ್ವನಿಯು ಮಿಡಿಯುತ್ತಿದೆ ಮತ್ತು ಭಾರತದ ರಾಜನೀತಿಯಲ್ಲಿ ಗಾಂಧೀಯವರಿಗೆ ಯಾವ ಸ್ಥಾನವಿದೆಯೋ ಅದೇ ಸ್ಥಾನವು ಪ್ರೇಮಚಂದರಿಗೆ ಹಿಂದೀ ಸಾಹಿತ್ಯದಲ್ಲಿ ಇದೆಯೆಂದೂ ಅನೇಕರು ಒಪ್ಪಿದ್ದಾರೆ. ಅದು ಏಕೆ? ಪ್ರೇಮಚಂದರ ಕೃತಿಗಳಲ್ಲಿ ಮಾನವತೆಯು ಮೈವೆತ್ತು ನಿಂತಿದೆ. ಅವರ ಕೃತಿಗಳನ್ನು ಕುರಿತು ಅಲಹಾಬಾದ ವಿಶ್ವವಿದ್ಯಾಲಯದ ಇಂಗ್ಲಿಷ ಪ್ರಾಧ್ಯಾಪಕರಾದ **ರಘುಪತಿ ಸಹಾಯ** ಉರ್ಫ್ **ಫಿರಾಕ ಗೋರಖಪುರಿ** ಅವರು ಹೀಗೆ ಬರೆಯುತ್ತಾರೆ— 'ಪ್ರೇಮಚಂದರ ಕೃತಿಗಳನ್ನು ಓದುವಾಗ ಭಾರತಮಾತೆಯು ನಮ್ಮನ್ನು ತನ್ನ ತೊಡೆಯ ಮೇಲೆ ಎತ್ತಿಕೊಂಡಿದ್ದಾಳೋ ಏನೋ ಎಂಬ ಹಾಗೆ ಅನುಭವವುಂಟಾಗುವದು. ಪ್ರೇಮಚಂದರ ಧ್ವನಿಯಲ್ಲಿ ನಾವು ನಮ್ಮ ಎದೆಯ ಮಿಡಿತಗಳನ್ನು ಆಲಿಸುತ್ತೇವೆ; ಭಾರತದ ಕಂಬನಿ, ಭಾರತದ ಅಸ್ತಿತ್ವ, ಭಾರತದ ಸ್ವಭಾವ, ಭಾರತದ ಸುಖ-ದುಃಖ, ಭಾರತದ ಭಾಗ್ಯ, ಅದರ ಸೌಭಾಗ್ಯ ಮುಂತಾದವು ಪ್ರೇಮ

ಚಂದರ ಕೃತಿಗಳ ಜಾದುವಿನಿಂದ ತುಂಬಿದ ಪುಟಗಳಲ್ಲಿ ಸಿಗುವಷ್ಟು ಇನ್ನೆಲ್ಲಿಯೂ ಸಿಕ್ಕುವದಿಲ್ಲ. ಅಂತೆಯೇ ನಮ್ಮ ಹಿಂದೀ ಮತ್ತು ಉರ್ದು ಸಾಹಿತ್ಯಕಾರರಲ್ಲಿ ಪ್ರೇಮ ಚಂದರೊಬ್ಬರೇ ಕೇವಲ ರಾಷ್ಟ್ರೀಯವಷ್ಟೇ ಅಲ್ಲ, ಅಂತ-ರ್ರಾಷ್ಟ್ರೀಯ ಖ್ಯಾತಿಯನ್ನೂ ಪಡೆದಿದ್ದಾರೆ." ಇಂತಹ ಸಾಹಿತ್ಯಕಾರರ ಜೀವನದ ಪರಿಚಯವು ನಮಗಿರುವದು ಯೋಗ್ಯತಾನೆ?

ಜನ್ಮ, ಬಾಲ್ಯ ಹಾಗೂ ಜೀವನ

ಭಾರತದ ಅಮರ ಕಥಾಕಾರರಾದ ಪ್ರೇಮಚಂದರ ಜನ್ಮವು ಕಾಶಿಯ ಬಳಿಯಲ್ಲಿ ಲಮಹೀ ಎಂಬ ಚಿಕ್ಕ ಹಳ್ಳಿಯಲ್ಲಿ ೧೮೮೦ ಜುಲೈ ೩೧ರಂದು ಮಧ್ಯಮ ವರ್ಗದ ಕಾಯಸ್ಥ ಕುಲದಲ್ಲಾಯಿತು. ಅವರ ತಂದೆಯವರು ಮುಂಶಿ ಅಜಾಯಬಲಾಲರು. ಅವರು ಪೋಸ್ಟ ಖಾತೆಯಲ್ಲಿ ಕಾರಕೂನರಾಗಿದ್ದರು. ಅವರು ಪ್ರೇಮಚಂದರಿಗೆ ಧನಪತರಾಯ ಎಂಬ ಹೆಸರಿಟ್ಟರು, ಆದರೆ ಪ್ರೀತಿಯಿಂದ ನವಾಬರಾಯನೆಂದು ಕರೆಯುತ್ತಿದ್ದರು. ಪ್ರೇಮಚಂದರು ಏಳುವರ್ಷದವರು ಇರುವಾಗಲೆ ತಾಯಿಯನ್ನು ಕಳೆದು ಕೊಂಡರು. ಮಲತಾಯಿಯು ಮನೆಗೆ ಬಂದಳು. ಈ ಘಟನೆಗಳು ಅವರ ಜೀವನದಲ್ಲಿ ದುಃಖವನ್ನು ತಂದುವು.

ಮನೆತನದ ಪರಂಪರೆಗೆ ಅನುಸಾರವಾಗಿ ಪ್ರೇಮ ಚಂದರ ಪ್ರಾರಂಭಿಕ ಶಿಕ್ಷಣವು ಉರ್ದು–ಫಾರಸಿಯಿಂದ ಸುರುವಾಯಿತು. ಹದಿಮೂರನೆಯ ವರುಷದವರು ಇರುವಾಗಲೇ ತಂದೆಯವರ ಸಂಪಾದನೆಗೆ ನೆರವಾಗುವುದಕ್ಕಾಗಿ ೫ ರೂಪಾಯಿ ಟ್ಯೂಶನ್ನಿಗಾಗಿ ಮೂರು ಮೈಲು ದೂರದ ಹಳ್ಳಿಗೆ ಹೋಗಿ ಬರುತ್ತಿದ್ದರು ಮತ್ತು ಆ ಕಾಲದಲ್ಲಿಯೇ ರತನನಾಥ ಸರಶಾರ, ಶರರ, ರೆನಾಲ್ಡರ ಕಾದಂಬರಿಗಳನ್ನು ಓದಿಬಿಟ್ಟಿದ್ದರು. ಹದಿನೈದನೆಯ ವರುಷದಲ್ಲಿ ಇನ್ನೂ ಒಂಭತ್ತನೆಯ ಇಯತ್ತೆಯಲ್ಲಿರುವಾಗ ಮದುವೆಯಾಯಿತು ಮತ್ತು ತಂದೆಯವರು ಪರಲೋಕವಾಸಿಯಾದರು. ಇಡೀ ಮನೆತನದ ಭಾರವು ಇವರ ಮೇಲೆ ಬಿದ್ದಿತು. ಇದರಿಂದಾಗಿ ಅವರ ಎಷ್ಟೋ ಆಕಾಂಕ್ಷೆಗಳು ಮಣ್ಣುಗೂಡಿದವು. ಅವರು ತಮಗೆ ದೊರೆತ ಒಂದು ಮನೆಯಲ್ಲಿ ಕುದುರೆ ಕಟ್ಟುವ ಮನೆಯಲ್ಲಿ ಕುದುರೆಯಾಳಿನೊಂದಿಗೆ ಇರಬೇಕಾಯಿತು. ಜೀವನದಲ್ಲಿ ಒಂದೇ ಒಂದು ಬಲ್ಲಿಯ ಕಡಲೆ ಕೊಂಡು ತಿಂದು ಇರುವ ಪ್ರಸಂಗಗಳು ಬಂದವು. ಒಂದು ಬಾರಿ ಮೂರು ದಿನಗಳ ವರೆಗೆ ಉಪವಾಸದಿಂದ ಇರುವ ಪ್ರಸಂಗವೂ ಬಂದಿತು. ಆದರೆ ಕಾಶಿಯಲ್ಲಿರುವಾಗ ಅವರು ತಮ್ಮ ಬಳಿ ಉಳಿದ ಏಕಮಾತ್ರ ಸಂಪತ್ತಾಗಿದ್ದ ಗಣಿತ ಪುಸ್ತಕವನ್ನು ಮಾರಹೋದಾಗ ಓರ್ವ ಹೆಡ್ ಮಾಸ್ತರರು ಅವರನ್ನು ಕಂಡು, ಕರುಣೆದೋರಿದರು. ಅವರ ಕೃಪೆಯಿಂದಾಗಿ ಅವರು ಕೆಲವು ಅನುಕೂಲತೆಗಳನ್ನು ಪಡೆದು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಬಳಿಕ ಒಂದು ಶಾಲೆಯಲ್ಲಿ ಹದಿನೆಂಟು ರೂಪಾಯಿ ಸಂಬಳದ ಮೇಲೆ ಅಧ್ಯಾಪಕರಾಗಿ ಕಾರ್ಯ ಮಾಡತೊಡಗಿದರು. ಅಧ್ಯಾಯನ ಮಾಡುತ್ತ ಬಿ.ಎ., ಪರೀಕ್ಷೆಯ ಅಭ್ಯಾಸವನ್ನೂ ಮಾಡಿ ಉತ್ತೀರ್ಣರಾದರು. ಬಳಿಕ ಅಲಹಾಬಾದ ಟ್ರೇನಿಂಗ ಕಾಲೇಜದಲ್ಲಿ ಜೆ. ಟಿ. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮಾಡೆಲ್ ಸ್ಕೂಲಿನಲ್ಲಿ ಹೆಡ್‌ಮಾಸ್ತರರಾದರು. ಕಾನಪುರದಲ್ಲಿ ಶಿಕ್ಷಕರಾಗಿ ಕೆಲಸ ಮಾಡಿ, ಬುಂದೇಲಖಂಡದಲ್ಲಿ ಡೆಪ್ಯೂಟಿ ಇನಸ್ಪೆಕ್ಟರರಾಗಿ ಕಾರ್ಯ ಮಾಡಿದರು. ಹೀಗೆ ನೌಕರಿಯನ್ನು ಮಾಡುತ್ತ ಸಾಹಿತ್ಯ ಸೇವೆಯನ್ನೂ ಮಾಡುತ್ತಿದ್ದರು. ಆಗ ಅವರು ಬರೆದ ಕೃತಿಗಳನ್ನು ಇಂದಿಗೂ ಲಕ್ಷಾಂತರ ಜನರು ಪ್ರೀತಿಯಿಂದ ಎದೆಗಪ್ಪಿಕೊಂಡು ಓದುತ್ತಾರೆ. **ನವನಿಧಿ**ಯಲ್ಲಿಯ ಕತೆಗಳು ಡೆಪ್ಯೂಟಿ ಇನಸ್ಪೆಕ್ಟರರಾಗಿದ್ದಾಗ ಬರೆದುವು. ದೇಶಪ್ರೇಮದಿಂದ ತುಂಬಿದ 'ಸೋಜೋವತನ' ಎಂಬ ಕಥಾಸಂಗ್ರಹವು ಸರಕಾರದ ಕೋಪದುರಿಗೆ ಆಹುತಿ ಸಹ ಆಯಿತು. ಈ ಸಮಯದಲ್ಲಿ ಅವರ ಪತ್ನಿಯು ಕೂಡ ಅವರಿಗೆ ಅನುಕೂಲವಾಗಿ ನಡೆಯದ್ದರಿಂದ ಆಕೆಯನ್ನು ತವರು ಮನೆಗೆ ಕಳಿಸಿದರು. ಕೆಲವು ವರ್ಷಗಳ ನಂತರ ಶಿವರಾನಿದೇವಿಯೆಂಬ ಬಾಲವಿಧವೆಯನ್ನು ಮದುವೆಯಾದರು. ಅವರಿಂದ ಪ್ರೇಮಚಂದರ ಸಾಹಿತ್ಯ ಸೇವೆಗೆ ಪ್ರೋತ್ಸಾಹವು ದೊರೆಯಿತು.

೧೯೨೧ರಲ್ಲಿ ಅಸಹಕಾರ ಆಂದೋಲನವು ಏಳತೊಡಗಿತ್ತು. ಆಗ ತಮ್ಮ ನೌಕರಿಯನ್ನು ಬಿಟ್ಟು ಪ್ರೇಮ-ಚಂದರು ಸಾಹಿತ್ಯ ಸೇವೆಯನ್ನೇ ತಮ್ಮ ಜೀವನದ ಮಾರ್ಗವನ್ನಾಗಿ ಕೈಕೊಂಡು ಒಂದೊಂದಾಗಿ ತಮ್ಮ ಅಮೂಲ್ಯ ಕೃತಿಗಳನ್ನು ಬರೆದರು. ಅವರು ತಮ್ಮ ಜೀವನದಲ್ಲಿ ಅನೇಕರಿಗೆ ಅನೇಕ ಪತ್ರಗಳನ್ನು ಬರೆದಿದ್ದಾರೆ, ಅನೇಕ ಲೇಖಕ

ರಿಗೆ ಮಾರ್ಗದರ್ಶನ ಮಾಡಿದ್ದಾರೆ. ಅವರ ಪತ್ರಗಳನ್ನು ಓದಿದರೆ, ಅವರಿಂದ ಪ್ರಕಾಶ ಪಡೆದ ಹಾಗೂ ಅವರ ಸಂಪರ್ಕದಲ್ಲಿ ಬಂದವರು ಬರೆದ ಸಂಸ್ಮರಣೆಗಳನ್ನು ಓದಿದರೆ ಪ್ರೇಮಚಂದರು ಪಟ್ಟಷ್ಟು ಕಷ್ಟವನ್ನು ಯಾರೂ ಪಟ್ಟಿಲ್ಲ ಎಂದೂ ಹಿಂದೀ ಜನತೆಯು ಅವರನ್ನು ಹಸಿವೆಯಿಂದ ಬಳಲಿಸಿ ಕೊಂದಿತೆಂದೂ ಮನವು ನುಡಿಯದೇ ಇರದು.

ಕಥಾಕಾರ ಪ್ರೇಮಚಂದರು

೩೦೦ಕ್ಕೆ ಮೇಲ್ಪಟ್ಟ ಕತೆಗಳನ್ನು ಬರೆದಿದ್ದಾರೆ. ಕೆಲವು ಕತೆಗಳು ಇನ್ನೂ ದೊರೆತಿಲ್ಲ, ಲುಪ್ತವಾಗಿ ಹೋಗಿವೆ. **ಸಪ್ತಸರೋಜ, ಪ್ರೇಮಪಚ್ಚೀಸಿ, ಪ್ರೇಮಪೂರ್ಣಿಮಾ, ಪ್ರೇಮದ್ವಾದಶಿ, ಪ್ರೇಮಬತ್ತೀಸಿ, ಗ್ರಾಮ್ಯ ಜೀವನ ಕೀ ಕಹಾನಿಯಾ** ಎಂಬ ಹೆಸರಿನಲ್ಲಿ ಕಥಾ ಸಂಗ್ರಹಗಳು ಅಚ್ಚಾಗಿದ್ದವು. ಅವು ಈಗ **ಮಾನಸರೋವರದ** ಎಂಟು ಭಾಗಗಳಲ್ಲಿ ಸಂಗ್ರಹಿಸಲ್ಪಟ್ಟು ಅಚ್ಚಾಗಿವೆ. ಅವರ ಉತ್ಕೃಷ್ಟ ಕತೆಗಳಲ್ಲಿ **ಈದಗಾಹ, ಕಫನ್. ಶತರಂಜ ಕೆ ಖಿಲಾಡಿ, ಆತ್ಮಾರಾಮ, ಮುಕ್ತಿಯ ಮಾರ್ಗ, ಬಡೆಘರಕೀ ಬೇಟೀ, ಪಂಚಪರಮೇಶ್ವರ, ಶಂಖನಾದ, ದುರ್ಗಾಮಂದಿರ, ರಾನೀ ಸಾರಂಧಾ, ರಾಜಾ ಹರದೌಲ, ಮಂದಿರ–ಮಸಜಿದ್, ಮಂತ್ರ** ಮುಂತಾದವೂ ಸುರುಚಿಪೂರ್ಣ ಹಾಸ್ಯದ ಕತೆಗಳಲ್ಲಿ **ಸತ್ಯಾಗ್ರಹ, ವಿನೋದ, ಮೋಟೇ ರಾಮಕೀ ಡಾಯರಿ, ಬೂಢೀ ಕಾಕಿ** ಶ್ರೇಷ್ಠವಾದುವೂ ಇವೆ. ಇವರ ಕತೆಗಳು ವಿಶೇಷವಾಗಿ ಆತ್ಮವಿಶ್ವಾಸ, ಆತ್ಮ-ಸಂತೋಷ ಮತ್ತು ಮಾನವತೆಯ ವಿಜಯದಲ್ಲಿ ಕೊನೆಗೊಳ್ಳುತ್ತವೆ.

ಕಾದಂಬರಿ ಸಮ್ರಾಟ ಪ್ರೇಮಚಂದರು ಒಟ್ಟು ಹನ್ನೊಂದು ಕಾದಂಬರಿಗಳನ್ನು ಬರೆದಿದ್ದಾರೆ:— **ಪ್ರೇಮಾ ಅಥವಾ ಪ್ರತಿಜ್ಞೆ, ವರದಾನ, ಸೇವಾಸದನ, ಪ್ರೇಮಾಶ್ರಮ, ನಿರ್ಮಲಾ, ರಂಗಭೂಮಿ, ಕಾಯಾಕಲ್ಪ, ಗಬನ್, ಕರ್ಮಭೂಮಿ, ಗೋದಾನ ಮಂಗಲಸೂತ್ರ**(ಅಪೂರ್ಣ). ಇವುಗಳಲ್ಲಿ ಪ್ರೇಮಚಂದರು ಅನುಕ್ರಮವಾಗಿ ವಿಧವೆಯರ ಸಮಸ್ಯೆ, ರಾಜಕೀಯ ಆಂದೋಲನ, ವೇಶ್ಯಾ–ವರದಕ್ಷಿಣೆಯ ಸಮಸ್ಯೆ, ಒಕ್ಕಲಿಗರ ಆರ್ಥಿಕ ಶೋಷಣ ಹಾಗು ಅದನ್ನು ತಡೆದ ಬಗೆ, ವರದಕ್ಷಿಣೆ ಹಾಗೂ ವಿಷಮ ವಿವಾಹ, ಔದ್ಯೋಗಿಕ ಶೋಷಣ ಹಾಗೂ ರಾಜಕೀಯ ದಾಸ್ಯ ಮತ್ತು ಅಂತರ್ಜಾತೀಯ ವಿವಾಹ ಸಮಸ್ಯೆ, ಮಧ್ಯ–ವಿತ್ತವುಳ್ಳವರ ಬಾಳ್ವೆ, ಕೆಳದರ್ಜೆಯ ಮಧ್ಯಮ ವರ್ಗದವರ ಸೌಂಸಾರಿಕ ಸಮಸ್ಯೆ, ಕ್ರಾಂತಿಕಾರೀ ಆಂದೋಲನ, ಒಕ್ಕಲಿಗರ ಹಾಗೂ ಅಸ್ಪೃಶ್ಯತೆಯ ಆಂದೋಲನಕ್ಕೆ ಸಹಾನುಭೂತಿ, ಭಾರತೀಯ ಒಕ್ಕಲಿಗರ ಜೀವನ ಕತೆ, ಸಾಹಿತ್ಯ ಸಾಧನೆಯಲ್ಲಿ ಬರುವ ಕಷ್ಟಗಳ ಮರ್ಮಸ್ಪರ್ಶಿ ವರ್ಣನೆ, ಮುಂತಾದ ವಿಷಯಗಳನ್ನು ಸುಂದರವಾದ, ಮನಸೆಳೆಯುವ, ಪಡೆನುಡಿಗಳಿಂದ ಭೂಷಿತವಾದ, ಬಿಗುವಿನ ಪರಿಣಾಮಕಾರೀ ಶೈಲಿಯಲ್ಲಿ ಚಿತ್ರಿಸಿದ್ದಾರೆ.

ಈ ಕೃತಿಗಳಲ್ಲದೆ ಪ್ರೇಮಚಂದರು ಜೀವನ ಚರಿತ್ರೆಗಳನ್ನೂ ನಾಟಕಗಳನ್ನೂ ವಿಮರ್ಶಾತ್ಮಕ ಲೇಖಗಳನ್ನೂ ಸಾಹಿತ್ಯ ಪ್ರಬಂಧಗಳನ್ನೂ, ಮಕ್ಕಳ ಸಾಹಿತ್ಯವನ್ನೂ ನಿರ್ಮಿಸಿದ್ದಾರಲ್ಲದೆ ಕೆಲವು ಗ್ರಂಥಗಳ ಅನುವಾದವನ್ನೂ ಮಾಡಿದ್ದಾರೆ.

ಉಪಸಂಹಾರ

ಹಿಂದೀ ಸಾಹಿತ್ಯದ ಅಮರ ಕಾದಂಬರಿ ಸಮ್ರಾಟರಾದ ಪ್ರೇಮಚಂದರು **ಹಂಸ** ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರು. ಅದರ ಮತ್ತು ತಮ್ಮ ಸಾಹಿತ್ಯ ಪರಂಪರೆಯ ಬಗೆಗೆ ಹಿಂದೀ ಸಾಹಿತ್ಯದಲ್ಲಿ ಶ್ರೇಷ್ಠ ಕಥಾಕಾರರಲ್ಲೊಬ್ಬರಾದ ಜೈನೇಂದ್ರ ಕುಮಾರರೊಂದಿಗೆ ಚಿಂತನೆಯ ಮಾತುಗಳನ್ನು ಆಡುತ್ತ ೧೯೩೬ ಅಕ್ಟೋಬರರಂದು ಕಣ್ಮರೆಯಾದರು. ಅವರು ಗತಿಸಿದ ಬಳಿಕ ಹಿಂದೀ ಜನತೆ ಅತ್ತಿತು, ಗೋಳಿಟ್ಟಿತು, ಅವರ ಕೃತಿಗಳಿಗೆ ಮನ್ನಣೆ ಕೊಡತೊಡಗಿತು, ವಿಶೇಷ ಸಂಚಿಕೆಗಳನ್ನು ಹೊರಡಿಸಿ ಅವರ ವ್ಯಕ್ತಿತ್ವ ಹಾಗು ಅವರ ಕೃತಿತ್ವ ಮತ್ತು ಅವರ ಮಾನವತಾ ದೃಷ್ಟಿಯನ್ನು ಕುರಿತು ಅನೇಕ ಹೊತ್ತಿಗೆಗಳನ್ನು ಪ್ರಕಟಿಸಿತು. ಪ್ರೇಮಚಂದರು ಜೀವಿಸಿದ್ದಾಗ ಹಿಂದೀ ಜನತೆಯಿಂದ ಅವರಿಗೂ ಅವರ ಕೃತಿಗಳಿಗೂ ಸಲ್ಲಬೇಕಾದ ಮಾನ-ಮರ್ಯಾದೆ, ಸಹಾಯ-ಸಹಾನುಭೂತಿ ದೊರೆಯಲಿಲ್ಲ! ಎಂತಹ ವಿಧಿ-ವಿಡಂಬನೆ! ಪ್ರೇಮಚಂದರು ಹಣದ ಬಲೆಗೆ ಎಂದೂ ಸಿಕ್ಕಲಿಲ್ಲ, ಜಳ್ಳು ಮರ್ಯಾದೆಯ ಮೋಹಕೆ ಎಂದೂ ಬಲಿಬೀಳಲಿಲ್ಲ.

ಅವರ ಹೃದಯ ಸದಾ ಬಡವರ ಕಡೆಗೆ ಇರುತ್ತಿತ್ತು. ಅಂತೆಯೇ ಅವರು ತಮ್ಮ ಹಿತಚಿಂತಕರಾದ ಶ್ರೀ ನಿಗಮ ಅವರಿಗೆ ಒಂದು ಪತ್ರದಲ್ಲಿ ಬರೆದಿದ್ದಾರೆ— 'ಶೋಷಕ ಹಣವಂತರಿಂದ ದೂರವಿಟ್ಟು ಬಡವರ ಕೈವಾರಿಯಾಗಿರು ವಲ್ಲಿ ನನಗೆ ಆಧ್ಯಾತ್ಮಿಕ ತೃಪ್ತಿಯು ದೊರೆಯುತ್ತದೆ' ಈ ವಿಚಾರ ಪ್ರಣಾಲಿಯೇ ಪ್ರೇಮಚಂದರನ್ನು ಅಮರ ಸಾಹಿತಿಯನ್ನಾಗಿ, ಮಾನವತೆಯ ಪೂಜಾರಿಯನ್ನಾಗಿ ಮಾಡಿದುದು. ಇದುವೇ ಸಾಹಿತ್ಯಕಾರನಲ್ಲಿ ಇರಬೇಕಾದ ಗುಣ. ಈ ಗುಣದಿಂದಲೇ ಹಿಂದೀ ಕಾದಂಬರಿ ಸಮ್ರಾಟ ರಾದ ಪ್ರೇಮಚಂದರು ಅಮರರಾಗಿದ್ದಾರೆ.

ಇದೇ ಅಚ್ಚಾಗಿದೆ

ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆ

(ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೭ನೆಯ ಇ.ಗಳಿಗಾಗಿ)

ಬೆಲೆ : ೦—೧—೬

ಅಂಚೆವೆಚ್ಚ ರೂ. ೦—೧—೦ ಪ್ರತಿಯೊಂದಕ್ಕೆ

ಬರೆಯಿರಿ :

ಪ್ರಧಾನ ಸಂಪಾದಕರು **ಕನ್ನಡ ಪ್ರಾಥಮಿಕ ಶಿಕ್ಷಣ ಧಾರವಾಡ.**

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ, ೧೯೫೫

ಮೇ|| ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಇವರು ೧೯೫೫ನೆಯ ಜುಲೈ ೨ರ ಪತ್ರ ನಂ. P./PSC/೫೫–೯೦೦ನೇದರ ಪ್ರಕಾರ ೧೯೫೫ನೆಯ ಎಪ್ರಿಲ ತಿಂಗಳಲ್ಲಿ ಜರುಗಿದ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯಲ್ಲಿ ಧಾರವಾಡ ಜಿಲ್ಲೆಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಪಡೆದ ಕೆಳಗಿನ ಉಮೇದವಾರರಿಗೆ ಅವರ ಹೆಸರಿನ ಮುಂದೆ ತೋರಿಸಲಾದ ಹಣವನ್ನು ಬಹುಮಾನವೆಂದು ಸರಕಾರದಿಂದ ಕೊಡಲಾಗಿದೆ.

ಸ್ಥಾನ	ಕೇಂದ್ರದ ಹೆಸರು	ಪರೀಕ್ಷೆ ಕ್ರಮಾಂಕ	ಉಮೇದವಾರನ ಹೆಸರು	ಶಾಲೆಯ ಹೆಸರು	ಬಹುಮಾನದ ಹಣ
೧	**ಹುಬ್ಬಳ್ಳಿ**	೪೬೫	ಶ್ರೀ ಬಾಬು ತುಕಾರಾಮ ಮೋರೆ	೧ನೆಯ ನಂ. ಮರಾಠಿ ಗಂ. ಮ. ಶಾಲೆ, ಹುಬ್ಬಳ್ಳಿ	**ರೂ. ೨೫/–**
೧	**ಹಾವೇರಿ**	೫೬	ಕುಮಾರ ಚಂದ್ರಶೇಖರ ಬಸವರಾಜ ಪಾಟೀಲ	ನಗರ ಸಭೆಯ ಮಾಧ್ಯಮಿಕ ಶಾಲೆ, ಹಾವೇರಿ	**ರೂ. ೧೫/–**
೩	**ರೋಣ**	೮೯೬	ಕುಮಾರ ಪ್ರಕಾಶ ಬಾಜೀರಾವ ಕುಲಕರ್ಣಿ	ಕನ್ನಡ ಗಂಡು ಮಕ್ಕಳ ಶಾಲೆ, ರೋಣ	**ರೂ. ೧೫/–**

ಜೀವನ ಶಿಕ್ಷಣದ ವಾರ್ತೆಗಳು

(ಜೀವನ ಶಿಕ್ಷಣದ ಬಗೆಗೆ ಮುಂಬಯಿ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಬಂದ ವಾರ್ತೆಗಳನ್ನು ಕೆಳಗೆ ಕೊಡಲಾಗಿದೆ.)

ಪ್ರ. ಸಂ.

ಅನುವಾದಕರು :— **ಶ್ರೀ ವ್ಹಿ. ಎ. ಉಮರಾಣಿ,** ಬಿ.ಎ., ಬಿ.ಟಿ., ಡಿ.ಬಿ.ಇ., ಧಾರವಾಡ.

೧. ಪರಿಶೀಲನಾ ಸಮಿತಿಯ ಸಂದರ್ಶನ

ಕಾಂಗ್ರೆಸದ ಆವಡಿ ಅಧಿವೇಶನದಲ್ಲಿ ಸ್ವೀಕೃತವಾದ ಗೊತ್ತುವಳಿಯನ್ವಯ ಮೂಲ ಶಿಕ್ಷಣದ ಪ್ರಗತಿಯನ್ನು ಅಭ್ಯಸಿಸಿ ಅದರ ಶೀಘ್ರವಾದ ಪ್ರಸರಣಕ್ಕಾಗಿ ಉಪಾಯಗಳನ್ನು ಸೂಚಿಸಲು ಭಾರತ ಸರಕಾರವು ಸ್ಥಾಯಿ ಹಾಗೂ ಪರಿಶೀಲನಾ ಎಂಬ ಎರಡು ಸಮಿತಿಗಳನ್ನು ನೇಮಿಸಿದೆ. ರಾಜ್ಯಗಳಲ್ಲಿ ಸಂಚರಿಸಿ ಅಲ್ಲಿಯ ಮೂಲ ಶಿಕ್ಷಣದ ಪ್ರಗತಿಯನ್ನು ಪರಿಶೀಲಿಸುವದು ಪರಿಶೀಲನಾ ಸಮಿತಿಯ ಕಾರ್ಯ. ಪರಿಶೀಲನಾ ಸಮಿತಿಯಲ್ಲಿ ಐವರು ಸದಸ್ಯರಿದ್ದು ಗಾಂಧೀ ಗ್ರಾಮದ **ಶ್ರೀ ರಾಮಚಂದ್ರನ್** ಅವರು ಅಧ್ಯಕ್ಷರಾಗಿದ್ದಾರೆ. **ಶ್ರೀ ಆರ್. ಎಸ್. ಉಪಾಧ್ಯಾಯ,** ಹಿಂದಿನ ಡೆಪ್ಯೂಟಿ ಡಾಯರೆಕ್ಟರ ಆಫ್ ಎಜ್ಯುಕೇಶನ್, ಬಿಹಾರ; **ಶ್ರೀ ಫ್ರಾಂಕಲಿನ್,** ಸಾಮಾಜಿಕ ಯೋಜನೆಯ ಆಡಳಿತದಾರರ ಶೈಕ್ಷಣಿಕ ಸಲಹೆಗಾರರು; **ಶ್ರೀ ಸಯ್ಯದ ಅನ್ಸಾರಿ,** ಪ್ರಿನ್ಸಿಪಾಲ, ಟ್ರೇನಿಂಗ ಕಾಲೇಜ, ಜಾಮಿಯಾ ಮಿಲಿಯಾ ಮತ್ತು **ಶ್ರೀ ಜೆ. ಸಿ. ಬೋಸ,** ಭಾರತ ಸರಕಾರದ ಶೈಕ್ಷಣಿಕಾಧಿಕಾರಿ—ಕಾರ್ಯದರ್ಶಿ, ಹೀಗೆ ನಾಲ್ವರು ಅದರ ಸದಸ್ಯರಿರುವರು. ಈ ಸಮಿತಿಯವರು ಮುಂಬಯಿ ರಾಜ್ಯದಲ್ಲಿ ದಿನಾಂಕ ೩-೭-೧೯೫೫ ರಿಂದ ೧೧-೭-೧೯೫೫ರ ವರೆಗೆ ಸಂಚರಿಸಿದರು. ಈ ಅವಧಿಯಲ್ಲಿ ಅವರು ಸುರತ ಜಿಲ್ಹೆಯ ವಾಲೋದ, ಪೂರ್ವ ಖಾನದೇಶ ಜಿಲ್ಹೆಯ ಪರೋಳಾ ಹಾಗೂ ಧಾರವಾಡ ಜಿಲ್ಹೆಯ ಮೂಲ ಶಿಕ್ಷಣದ ಹೊಂದಿಕೆಯ ಕ್ಷೇತ್ರಗಳನ್ನು ಸಂದರ್ಶಿಸಿದರು. ಆಯಾ ಭಾಗಗಳಲ್ಲಿಯ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳನ್ನೂ ಧುಳೆ ಹಾಗೂ ಧಾರವಾಡಗಳಲ್ಲಿಯ ಪದವೀಧರರ ಜೀವನ ಶಿಕ್ಷಣ ಕೇಂದ್ರಗಳನ್ನೂ ಸಂದರ್ಶಿಸಿದರು. ಸಮಿತಿಯ ಸದಸ್ಯರು ಈ ರಾಜ್ಯದಲ್ಲಿ ಮೂಲ ಶಿಕ್ಷಣವು ರೂಢಿಯಲ್ಲಿ ತರಲ್ಪಟ್ಟ ರೀತಿ ನೀತಿಗಳನ್ನು ಕುರಿತು, ತಾವು ಸಂದರ್ಶಿಸಿದ ಸಂಸ್ಥೆಗಳಲ್ಲಿಯ ಅಧ್ಯಾಪಕರು ಹಾಗೂ ಅಲ್ಲಿಯ ಶಿಕ್ಷಣಾಧಿಕಾರಿಗಳೊಂದಿಗೆ ಸ್ನೇಹಭಾವದ ಚರ್ಚೆ ನಡೆಸಿದರು.

೨. ಧುಳೆಯ ಸಭೆ

೧೯೫೫ನೆಯ ಜುಲೈ ೧೭ ಮತ್ತು ೧೮ರಂದು ಮೊದಲಿನ ನಾಶಿಕ ಭಾಗದ ಐದೂ ಜಿಲ್ಹೆಗಳ ಮೂಲೋದ್ಯೋಗ ಸಾಲೆಗಳ ಅಸಿಸ್ಟಂಟ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಸಭೆಯು ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಉಪಮಂತ್ರಿ **ಶ್ರೀಮತಿ ಇಂದುಮತಿ ಚಿಮಣಲಾಲ** ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಭೆಯ ಅಂಗವಾಗಿ ಆಯಾ ಜಿಲ್ಹೆಗಳ ಮೂಲೋದ್ಯೋಗ ಶಾಲೆಗಳಲ್ಲಿ ತಯಾರಾದ ವಸ್ತುಗಳ ಪ್ರದರ್ಶನವನ್ನೇರ್ಪಡಿಸಲಾಗಿತ್ತು. ಖಾದಿ ಅರಿವೆ, ಆಸನಗಳು, ವಸ್ತ್ರಗಳು, ಕಟ್ಟಿಗೆಯ ಸಾಮಾನುಗಳು ಮತ್ತು ಆ ಜಿಲ್ಹೆಗಳಲ್ಲಿಯ ಮೂಲ ಶಿಕ್ಷಣದ ಪ್ರಗತಿಯನ್ನು ತೋರಿಸುವ ಪಟಗಳು ಹಾಗೂ ಚಿತ್ರಗಳು ಪ್ರದರ್ಶನದಲ್ಲಿ ಇಡಲ್ಪಟ್ಟಿದ್ದವು. ಪ್ರದರ್ಶನಕ್ಕಿಡಲಾದ ಅರಿವೆ ವಿಶೇಷ ಸುಧಾರಣೆಯನ್ನು ತೋರಿಸಿದ್ದಲ್ಲದೆ ಖಾದಿ ಭಾಂಡಾರಗಳ ಅರಿವೆಗೆ ಸರಿಗಟ್ಟು

ವಂತಹದಿದ್ದಿತು. ಈ ಸಭೆಯು ನಾಲ್ಕು ಸಲ ಸೇರಿತು. ಹುಟ್ಟುವಳಿ, ಉಪಕರಣ, ಮಾರಾಟ, ಬೋಧನ ಪದ್ಧತಿಗಳು ಮತ್ತು ಚಟುವಟಿಕೆಗಳು— ಈ ಪ್ರಕಾರ ವಿಷಯ ಪಟ್ಟಿಯನ್ನು ಐದು ಭಾಗಗಳಲ್ಲಿ ವಿಂಗಡಿಸಿ ಅವುಗಳನ್ನು ಐದು ಸಮಿತಿಗಳು ಪ್ರತ್ಯೇಕವಾಗಿ ವಿಚಾರಿಸಿದುವು. ಸಮ್ಮೇಲನಕ್ಕೆ ಆಗಮಿಸಿದ ಪ್ರತಿನಿಧಿಗಳಿಗೆ ಊಟ ಹಾಗೂ ವಸತಿಗಳ ವ್ಯವಸ್ಥೆಯನ್ನು ಧುಳೆಯ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಮಾಡಲಾಗಿತ್ತು ಮತ್ತು ಆ ಸಭೆಯ ಕೊನೆಯ ಅಂಗವಾಗಿ ಸ್ಥಾನಿಕ ಸಂಸ್ಥೆಗಳ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಭೆಯ ಕಾರ್ಯಕಲಾಪಗಳ ವಿವರಗಳನ್ನು ಬೇರೆ ಕಡೆ ಕೊಡಲಾಗಿದೆ.

೩. 'ಸಮವಾಯ'ದ ನೂತನ ದೃಷ್ಟಿ

ಈ ಸಭೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದ ಮಹತ್ವದ ವಿಷಯವೆಂದರೆ ಸಮವಾಯ ಪದ್ಧತಿಯ ಬೋಧನೆಯ ನೂತನ ದೃಷ್ಟಿಯು. ಚಟುವಟಿಕೆಯೇ ಮುಖ್ಯ ಘಟಕವಾಗಿರುವ ಈಗಿನ ಸಮವಾಯ ಪಾಠವು ಅದೊಂದು ಕಟ್ಟುನಿಟ್ಟುಳ್ಳ ತಂತ್ರವಾಗಿ ಪರಿಣಮಿಸಿದೆ. ಸಾದಾಪಾಠವು ಮಕ್ಕಳ ಮೂಲೋದ್ಯೋಗ, ಸಾಮಾಜಿಕ ಹಾಗೂ ನೈಸರ್ಗಿಕ ಪರಿಸ್ಥಿತಿಗಳಿಗೆ ಸಮವಾಯವಾಗುವಂತಿದ್ದರೆ ಅದೂ ಸಹಸಮವಾಯ ಪಾಠವೆಂದೆನಿಸಬಲ್ಲದೆಂಬುದನ್ನು ಆ ಸಭೆಯಲ್ಲಿ ನಿರ್ದೇಶಿಸಲಾಯಿತು. ಒಂದು ಬದಿಗೆ ಅಭ್ಯಾಸ ಪತ್ರಿಕೆ; ಮತ್ತೊಂದು ಬದಿಗೆ ಮಾಧ್ಯಮಗಳು—ಮೂಲೋದ್ಯೋಗ ಮತ್ತು ಪರಿಸರ. ಶಾಲಾ ಅಭ್ಯಾಸಪತ್ರಿಕೆಯನ್ನು ಈ ಮಾಧ್ಯಮಗಳ ಮುಖಾಂತರ ಕಲಿಸಬೇಕು. ಇದನ್ನು ಕ್ರಮಾನುಸಾರವಾದ ಚಟುವಟಿಕೆಗಳ ಮುಖಾಂತರ ಮಾಡಬಹುದು. ಮತ್ತು ಪ್ರತಿಯೊಂದು ಚಟುವಟಿಕೆಯ ಹಿನ್ನೆಲೆಯಲ್ಲಿ ಸಾದಾರೀತಿಯಿಂದ ಅಂದರೆ ಹರ್ಬಾರ್ಟನ ಪದ್ಧತಿಯ ಪ್ರಕಾರ ಕೊಡುವ ಅನೇಕ ಪಾಠಗಳಿರಬಹುದು. ಈ ಪಾಠಗಳನ್ನು ಕೂಡ ಸಮವಾಯ ಪಾಠಗಳೆಂದು ತಿಳಿಯಬಹುದು. ಒಂದೇ ಒಂದು ಉದಾಹರಣೆಯನ್ನು ತೆಗೆದುಕೊಂಡರೆ, ನೂಲುವದರಲ್ಲಿ ಹತ್ತಿ, ನೂಲು, ಹತ್ತೀಕಾಳು ಇತ್ಯಾದಿಗಳನ್ನು ತೂಕ ಮಾಡಬೇಕಾಗುವದು. ಆದರೆ ತೂಕ ಮಾಡಲು ತೂಕಗಳ ಕೋಷ್ಟಕವನ್ನು ತಿಳಿಯಬೇಕು. ನಾವು ಆ ಉದ್ದೇಶದಿಂದ ಕೋಷ್ಟಕಗಳನ್ನು ಕಲಿತರೆ ಇದನ್ನೇ ನಾವು ಸಮವಾಯ ಪದ್ಧತಿಯ ಬೋಧನೆಯೆಂದು ಕರೆಯಬಹುದು. ದಿನನಿತ್ಯದ ಜೀವನಕ್ಕೆ ಅಥವಾ ಮೂಲೋದ್ಯೋಗಕ್ಕೆ ಸಂಬಂಧವಿಲ್ಲದೆ ಕೇವಲ ಪರೀಕ್ಷೆಯ ಇಲ್ಲವೆ ಅಭ್ಯಾಸ ಪತ್ರಿಕೆಯ ವಿಷಯಗಳೆಂದು ಈ ಕೋಷ್ಟಕಗಳು ಕಲಿಸಲ್ಪಟ್ಟರೆ ಇಂಥ ಬೋಧನೆಯು ಅಸಮವಾಯವಾಗುವದು.

೪. ಗಂಡು ಮಕ್ಕಳ ಟ್ರೇನಿಂಗ ಕಾಲೇಜುಗಳಲ್ಲಿ 'ಮ್ಯಾಟ್ರಿಕ್' ವರ್ಗದ ವಿಶೇಷ ವೇಳಾಪತ್ರಿಕೆ

ಮ್ಯಾಟ್ರಿಕ್ ಅಥವಾ ಎಸ್. ಎಸ್. ಸಿ. ಪರೀಕ್ಷೆ ಪಾಸಾದವರಿಗೆ ತರಬೇತಿ ಅವಧಿಯಲ್ಲಿ ಒಂದು ವರ್ಷದ ರಿಯಾಯಿತಿಯು ಸದ್ಯಕ್ಕೆ ದೊರಕುತ್ತದೆ. ಅವರಿಗೆ ಒಮ್ಮೆಲೇ ೨ನೆಯ ವರ್ಷದ ವರ್ಗಕ್ಕೆ ಪ್ರವೇಶ ಕೊಡಲಾಗುವದು. ಆದರೂ ಅವರ ಅಭ್ಯಾಸ ಪತ್ರಿಕೆಯು ೨ನೆಯ ವರ್ಷದ ವರ್ಗದ ಅಭ್ಯಾಸ ಪತ್ರಿಕೆಯಿಂದ ಭಿನ್ನವಾಗಿರುವದು. ಉಳಿದವರು ಎರಡು ವರ್ಷಗಳಲ್ಲಿ ಪೂರ್ತಿಗೊಳಿಸುವ ಎಲ್ಲ ಕೆಲಸವನ್ನು ಇವರು ಒಂದೇ ವರ್ಷದಲ್ಲಿ ಮುಗಿಸಬೇಕಾಗುವದು. ಎರಡು ವರ್ಷಗಳಲ್ಲಿಯ ಶಿಕ್ಷಣ ಹಾಗೂ ಮೂಲೋದ್ಯೋಗಗಳ ಪ್ರಾಯೋಗಿಕ ಪಾಠಗಳ ದೊಡ್ಡ ಹೊರೆಯನ್ನು ಒಂದೇ ವರ್ಷದಲ್ಲಿ ಮುಗಿಸಬೇಕಾಗುವದು. ಹೀಗಾಗಿ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ಪಾಸಾಗಿ ಬಂದು ೧ನೆಯ ವರ್ಷ ಮುಗಿಸಿ ೨ನೆಯ ವರ್ಷಕ್ಕೆ ಬಂದ ವಿದ್ಯಾರ್ಥಿಗಳೊಂದಿಗೆ ಇವರಿಗೆ ೨ನೆಯ ವರ್ಷದ ವರ್ಗಕ್ಕೆ ಪ್ರವೇಶ ಸಿಗುವದರಿಂದ ಇವರ ಹಿತವನ್ನು ಅಲಕ್ಷಿಸಬಹುದು. ಆದ್ದರಿಂದ ಸಾಧ್ಯವಿದ್ದಲ್ಲಿ ಮ್ಯಾಟ್ರಿಕ್ ಪಾಸಾದವರಿಗೆ ಪ್ರತ್ಯೇಕ ವರ್ಗಗಳನ್ನು ಪ್ರಾರಂಭಿಸಿ ಅವರಿಗೆ ಪ್ರತ್ಯೇಕ ವೇಳಾ ಪತ್ರಿಕೆಗಳನ್ನು ಅನುಸರಿಸಬೇಕೆಂಬುದು ಸರಕಾರದ ಇಚ್ಛೆ. ಈ ವೇಳಾ ಪತ್ರಿಕೆಗಳಲ್ಲಿ ಅವರು ಮಾಧ್ಯಮಿಕ ಶಾಲೆಗಳಲ್ಲಿ ಕಲಿಯದ ಶಿಕ್ಷಣ ಮತ್ತು ಮೂಲೋದ್ಯೋಗಗಳ ತಾತ್ವಿಕ ಹಾಗು ಪ್ರಾಯೋಗಿಕಗಳಿಗೆ ಅವರು ಕಲಿತ ಇನ್ನಿತರ ವಿಷಯಗಳಿಗಿಂತ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕಾಗುವದು. 'ಮ್ಯಾಟ್ರಿಕ್'ದವರ ವರ್ಗಕ್ಕೆ ನಿರ್ದಿಷ್ಟಪಡಿಸಲಾದ ವೇಳೆಯ ಹಂಚುವಿಕೆಯ ಮಾದರಿಯನ್ನು ಶಿಕ್ಷಣ ಖಾತೆಯವರು ಪೂರೈಸಿದ್ದಾರೆ ಮತ್ತು ಅದನ್ನು ಅನುಸರಿಸಿದಲ್ಲಿ ಮ್ಯಾಟ್ರಿಕ್ ಪಾಸಾದವರ ತರಬೇತಿಯು ಹೆಚ್ಚು ಕ್ರಮಬದ್ಧ ಹಾಗೂ ಪರಿಣಾಮಕಾರಿಯಾಗುವದು.

೫. ಸುಲಭವಾದ ಸುಧಾರಿಸಿದ ಮೂಲೋದ್ಯೋಗದ ಅಭ್ಯಾಸ ಪತ್ರಿಕೆ

ಪ್ರಾಥಮಿಕ ಶಾಲೆಗಳ ೧ರಿಂದ ೭ನೆಯ ಇಯತ್ತೆ ವರೆಗಿನ ಅಭ್ಯಾಸ ಪತ್ರಿಕೆಯು ತಿದ್ದುಪಡೆಯಾದ ಕೂಡಲೆ ಅದಕ್ಕನುಗುಣವಾಗುವಂತೆ ಮೂಲೋದ್ಯೋಗದ ಅಭ್ಯಾಸ ಪತ್ರಿಕೆಯಲ್ಲಿ ಸಹ ತಿದ್ದುಪಡೆಯಾಗಬೇಕಾಯಿತು. ಈಗ ಶಿಕ್ಷಣ ಖಾತೆಯವರು ನೂಲು–ನೇಯುವದರಲ್ಲಿ ಸುಲಭವಾದ ಸುಧಾರಿಸಿದ ಅಭ್ಯಾಸ ಪತ್ರಿಕೆಯನ್ನು ಪ್ರಕಟಿಸಿರುವರು. ಈ ಅಭ್ಯಾಸ ಪತ್ರಿಕೆಯು ಪ್ರಚಲಿತ ಅಭ್ಯಾಸ ಪತ್ರಿಕೆಗಿಂತ ಹೆಚ್ಚು ಸುಧಾರಿಸಲ್ಪಟ್ಟಿದೆ. ಮತ್ತು ಹಳೆಯ ಅಭ್ಯಾಸ ಪತ್ರಿಕೆಯನ್ನು ಕಾರ್ಯಗತ ಮಾಡುವಾಗ ಕಂಡು ಬಂದ ಅನುಭವಗಳ ಪರಿಣಾಮವಾಗಿ ಮೂಲೋದ್ಯೋಗದ ವರ್ಗಗಳಿಗೆ ನಿರ್ದಿಷ್ಟ ಪಡಿಸಲ್ಪಟ್ಟ ಮಟ್ಟವನ್ನು ತಿದ್ದಲಾಗಿದೆ. ಯಾವದೇ ಅಭ್ಯಾಸ ಪತ್ರಿಕೆಯನ್ನು ಕಾರ್ಯಗತ ಮಾಡುವ ಹೊಣೆಯನ್ನು ಹೊತ್ತ ಜನರು ಎರಡು ಸಂಗತಿಗಳನ್ನು ಲಕ್ಷ್ಯದಲ್ಲಿಡುವದು ಆವಶ್ಯ. ಅವುಗಳಲ್ಲಿ ಅಭ್ಯಾಸ ಪತ್ರಿಕೆಯ ಬಗ್ಗೆ ಯೋಗ್ಯ ಪ್ರೇರಣೆಯು ಮೊದಲನೆಯದು. ಇದು ಅಭ್ಯಾಸ ಪತ್ರಿಕೆಯಲ್ಲಿಯ ಬೇರೆ ಯಾವದೇ ವಿಷಯಕ್ಕೆ ಅನ್ವಯಿಸುವಷ್ಟೇ ಮೂಲೋದ್ಯೋಗಕ್ಕೂ ಅನ್ವಯಿಸುತ್ತದೆ. ಅಭ್ಯಾಸ ಇಲ್ಲವೆ ಕೆಲಸಕ್ಕೆ ಯೋಗ್ಯ ಪ್ರೇರಣೆ ದೊರಕದಿದ್ದಲ್ಲಿ ಕೆಲಸವು ಯಾಂತ್ರಿಕ ದುಡಿತವಾಗುವದು. ಯೋಗ್ಯತೆಯನ್ನು ಕಳೆದುಕೊಳ್ಳುವದು. ಇತಿಹಾಸ, ಭೂಗೋಲ, ಭಾಷೆ ಇಲ್ಲವೆ ಗಣಿತ ಮತ್ತು ಮೂಲೋದ್ಯೋಗಗಳಿಗೂ ಸಹ ಹಾಗೆಯೇ. ಶಿಕ್ಷಕನು ಅವಶ್ಯಕ ಪ್ರೇರಣೆಗಳನ್ನು ಪೂರೈಸುವದು ಗೊತ್ತಾದರೆ, ಮೂಲೋದ್ಯೋಗದ ಶಿಕ್ಷಣದಲ್ಲಿ ಅಭಿರುಚಿ ಹುಟ್ಟುವಂತೆ ಮಾಡಬಲ್ಲನು. ಮೂಲೋದ್ಯೋಗ ಅಭ್ಯಾಸ ಪತ್ರಿಕೆಯಲ್ಲಿಯ ಹುಟ್ಟುವಳಿಯ ಮಟ್ಟಿನ ನಿರ್ದಿಷ್ಟತೆಗಳು, ವಿದ್ಯಾರ್ಥಿಗಳು ಅವುಗಳ ಅವಶ್ಯಕತೆಯನ್ನು ತಿಳಿದುಕೊಂಡರೆ, ಪರಿಣಾಮಕಾರಿ ಧ್ಯೇಯಗಳಾಗುವವು. ಅಲ್ಪ ಪ್ರಯತ್ನದಿಂದ ಶಿಕ್ಷಕರು ಧ್ಯೇಯಗಳನ್ನು ಪೂರೈಸಿ ಶಾಲೆಯ ಇತರ ವಿಷಯಗಳಂತೆ ಬೇಕಾದ ಮೂಲೋದ್ಯೋಗಗಳಲ್ಲಿಯ ಕೆಲಸವನ್ನು ಹೆಚ್ಚಾಗಿ ರುಚಿಸುವಂತೆ ಹಾಗೂ ಸಜೀವವಾಗಿರುವಂತೆ ಮಾಡಬಹುದೆಂಬುದನ್ನು ಕಂಡುಕೊಳ್ಳಬಹುದು; ಮತ್ತು ಮೂಲೋದ್ಯೋಗದಲ್ಲಿ ಪ್ರೇರಣೆಯು ಹಗುರಾಗಿರುವದು. ಲಕ್ಷ್ಯದಲ್ಲಿಡಬೇಕಾದ ಇನ್ನೊಂದು ಸಂಗತಿಯೆಂದರೆ ಸರಿಯಾದ ಚಟಗಳ ಮುಖಾಂತರ ನಿಪುಣತೆಯನ್ನು ಪಡೆಯುವದು ನಿಪುಣತೆಯನ್ನು ಪಡೆಯುವದು ಮೂಲೋದ್ಯೋಗಗಳಲ್ಲಿಯಂತೆ ಎಲ್ಲ ಶಾಲಾ ವಿಷಯಗಳಲ್ಲಿಯೂ ಅವಶ್ಯವಿರುತ್ತದೆ. ಅವು ಪ್ರಗತಿಯ ವೇಗೋತ್ಕರ್ಷಕ್ಕೆ ಸಾಧನಗಳಾಗಿವೆ. ಮೂಲೋದ್ಯೋಗಗಳಲ್ಲಿ, ನೂಲುವ ಮತ್ತು ನೇಯುವದರಲ್ಲಿಯ ಕಲೆಗಳ ಪ್ರಭುತ್ವವನ್ನು ಪಡೆಯಬೇಕಾಗುವದು. ಆದರೆ ಒಮ್ಮೆ ಅವುಗಳಲ್ಲಿ ಪರಿಣಾಮಕಾರಿಯಾದ ಪ್ರಭುತ್ವವನ್ನು ದೊರಕಿಸಿದರೆ ವಿದ್ಯಾರ್ಥಿಗಳು ಕೆಲಸದಲ್ಲಿ ಬೇಸರ ಪಡುವದಿಲ್ಲ. ಆದರೆ ಈ ನೈಪುಣ್ಯತೆಗಳ ಸಹಾಯದಿಂದ ಅವರು ಉತ್ಪಾದನೆಯಲ್ಲಿ ತೋರಿಸುವ ಶೀಘ್ರ ಪ್ರಗತಿಯಿಂದಲೂ ಮತ್ತು ತಮ್ಮ ಗುರಿಗಳನ್ನು ತೀವ್ರವಾಗಿ ಮುಟ್ಟುತ್ತಿರುವ ರೀತಿಯಿಂದಲೂ ಅವರಿಗೆ ನಿಜವಾದ ಆನಂದದ ಅನುಭವವಾಗುತ್ತದೆ.

೬. ಜೀವನ ಶಿಕ್ಷಣ ಹಾಗೂ ಇತರ ಸಾಲೆಗಳು

ಜೀವನ ಶಿಕ್ಷಣ ಸಾಲೆಯು ಇತರ ಸಾಲೆಗಿಂತ ಹೇಗೆ ಭಿನ್ನವಾಗಿರುವದು? "ಮೂಲೋದ್ಯೋಗದಲ್ಲಿ ಚಟುವಟಿಕೆಯ ಕಾರ್ಯಕ್ರಮವನ್ನು ಪ್ರೇರೇಪಿಸುವಲ್ಲಿ ಮತ್ತು ಸಾಲೆಯ ಕೆಲಸದ ಜೊತೆಗೆ ಮಗುವಿನ ಜೀವನ ಮತ್ತು ಮೂಲೋದ್ಯೋಗಗಳ ಸಮವಾಯ ಮಾಡಿ ಬೋಧನದ ಕಾರ್ಯಕ್ರಮವನ್ನು ರೂಢಿಯಲ್ಲಿ ತರುವದರಲ್ಲಿ –ಈ ಮೂರು ಸಂಗತಿಗಳಲ್ಲಿ ಭಿನ್ನವಾದುದು" ಎಂದು ನೀವು ಹೇಳುವಿರಿ. ಮೊದಲಿನದು ಇತರ ಸಾಲೆಗಳಲ್ಲಿ ಸಾಧ್ಯವಾಗದೆ ಇರಬಹುದು; ಯಾಕಂದರೆ ಮೂಲೋದ್ಯೋಗವನ್ನು ಆರಂಭಿಸಲು ಉಪಕರಣ, ಸ್ಥಳ ಮತ್ತು ತರಬೇತಿ ಹೊಂದಿದ ಶಿಕ್ಷಕರು ಬೇಕಾಗುತ್ತಾರೆ. ಆದರೆ ಉಳಿದವೆರಡುಗಳನ್ನು ಸುಲಭವಾಗಿ ಸಾಧಿಸಬಹುದು. ಎಲ್ಲ ಸಾದಾ ಸಾಲೆಗಳು ತಮ್ಮ ಚಟುವಟಿಕೆಯ ಕಾರ್ಯಕ್ರಮಗಳನ್ನು ಮೂರು ದಿಶೆಗಳಲ್ಲಿ ಪ್ರೇರೇಪಿಸಬಹುದು. ಅವು ಜೀವನ ಶಿಕ್ಷಣ ಸಾಲೆಗಳಲ್ಲಿ ನಡೆಯುವ ನಿತ್ಯದ ಕಾರ್ಯಕ್ರಮಗಳನ್ನು ಅನುಸರಿಸಬಹುದು, ಎರಡನೆಯದಾಗಿ ದಿನಾಚರಣೆಗಳು ಮತ್ತು ಕಾಲಕಾಲಕ್ಕೆ ಬರುವ ಉತ್ಸವಗಳನ್ನು ಸಂಘಟಿಸುವದು ಮತ್ತು ಮೂರನೆಯದಾಗಿ, ಅವು

ಸಮಾಜಸೇವಾ ಚಟುವಟಿಕೆಗಳ ಮುಖಾಂತರ ಸುತ್ತಲಿನ ಹಳ್ಳಿಯ ಸಮಾಜ ಜೀವನದಲ್ಲಿ ಭಾಗವಹಿಸಬಹುದು. ಚುರುಕು ಬುದ್ಧಿಯುಳ್ಳ ಹಾಗೂ ಉತ್ಸುಕತೆಯುಳ್ಳ ತರಬೇತಿ ಪಡೆದ ಶಿಕ್ಷಕನು ಸಮವಾಯ ಬೋಧನ ಕ್ರಮವನ್ನು ತನ್ನ ಕೆಲಸದಲ್ಲಿ ರೂಢಿಸಬಲ್ಲನು. ಅವನು ತನ್ನ ನಿತ್ಯದ ಕಾರ್ಯದ ಯೋಜನೆಯನ್ನು ವಿದ್ಯಾರ್ಥಿಗಳ ಸಾಲೆಯ ಜೀವನವು—ಅವರ ಸಾಮಾಜಿಕ ಮತ್ತು ನೈಸರ್ಗಿಕ ಪರಿಸರ—ಈ ಎರಡು ಕೇಂದ್ರಗಳಿಗೆ ಸಂಬಂಧಪಡುವಂತೆ ಯೋಜಿಸಬೇಕು. ಈ ಎರಡೂ ಕೇಂದ್ರಗಳಿಗೆ ಸಂಬಂಧಪಡುವ ಅನೇಕ ಚಟುವಟಿಕೆಗಳನ್ನು ಅವನು ಸಂಘಟಿಸಬಹುದು. ಜೀವನ ಶಿಕ್ಷಣ ಸಾಲೆಗಳೆಂದು ಸಾರುವ ವರೆಗೆ ಈ ವಿಷಯಗಳನ್ನು ರೂಢಿಯಲ್ಲಿ ತರಲಿಕ್ಕೆ ಸಾದಾ ಸಾಲೆಗಳು ತಡೆಯಬಾರದೆಂದು ಅಪೇಕ್ಷಿಸಲಾಗಿದೆ. ಈಗಲೇ ಅವುಗಳನ್ನು ಅಳವಡಿಸಿಕೊಳ್ಳಬೇಕ ಮತ್ತು ಜೀವನ ಶಿಕ್ಷಣ ಸಾಲೆಗಳ ಸ್ಥಿತಿ-ಗತಿಯನು ಮುಟ್ಟಲು ಪರಿಪಕ್ವವಾಗಬೇಕು.

"ಕನ್ನಡ ಪ್ರಾಥಮಿಕ ಶಿಕ್ಷಣ"

(ಪ್ರತಿ ತಿಂಗಳ ದಿನಾಂಕ ೧೫ ರಂದು ಪ್ರಕಟವಾಗುವದು)

ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಲೇಖನಗಳನ್ನು ಪ್ರಕಟಿಸುವ ಮಾಸಪತ್ರಿಕೆ ಇದೊಂದೇ. ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಶಿಕ್ಷಣ ತಜ್ಞರಿಂದ ಬರೆದುಬಂದ ಲೇಖನಗಳಿಗೆ ಪ್ರಾಶಸ್ತ್ಯ ಕೊಡಲಾಗುವದು. ಲೇಖಕರು ತಮ್ಮ ಬರೆಹಗಳ ಎರಡು ಪ್ರತಿಗಳನ್ನು ಕಳುಹಿಸಿಕೊಡಬೇಕು. ಸ್ವೀಕೃತವಾದ ಲೇಖನಗಳಿಗೆ ಯೋಗ್ಯ ಸಂಭಾವನೆ ಕೊಡಲಾಗುವದು ಮತ್ತು ಶೈಕ್ಷಣಿಕ ಪುಸ್ತಕಗಳ ಜಾಹೀರಾತುಗಳನ್ನು ಕೆಳಗೆ ತೋರಿಸಿದ ದರದಿಂದ ನಮ್ಮ ಮಾಸಪತ್ರಿಕೆಯಲ್ಲಿ ಪ್ರಕಟಿಸುವೆವು:—

ಅವಧಿ	ಪೂರ್ಣ ಪುಟ	ಅರ್ಧ ಪುಟ	ಕಾಲು ಪುಟ
೧೨ ತಿಂಗಳು	೫೦ ರೂ.	೩೦ ರೂ.	೨೦ ರೂ.
೬ ತಿಂಗಳು	೩೦ ರೂ.	೨೦ ರೂ.	೧೫ ರೂ.
೧ ತಿಂಗಳು	೧೦ ರೂ.	೫ ರೂ.	೩ ರೂ.

ಸೂಚನೆ :— ಪ್ರಶ್ನೋತ್ತರ ಹಾಗೂ ಟಿಪ್ಪಣಿ ಪುಸ್ತಕಗಳ ಬಗ್ಗೆ ಬರುವ ಜಾಹೀರಾತುಗಳನ್ನು ಸ್ವೀಕರಿಸಲಾಗುವದಿಲ್ಲ.

ಹೆಚ್ಚಿನ ವಿವರಗಳಿಗೆ ಬರೆಯಿರಿ : **ಪ್ರಧಾನ ಸಂಪಾದಕರು,** ಕನ್ನಡ ಪ್ರಾಥಮಿಕ ಶಿಕ್ಷಣ, **ಧಾರವಾಡ.**

ಪ್ರಾಥಮಿಕ ಶಿಕ್ಷಣ ಪ್ರಪಂಚ

ಜುಲೈ ೧೯೫೫.

ಸಭೆ-ಸಮ್ಮೇಲನಗಳು

ಸುಗ್ನಳ್ಳಿ— ೨:— (ಶಿರಹಟ್ಟಿ) ಹಿಂದುಳಿದ ಹಾಗೂ ಇತರ ಬಡಮಕ್ಕಳಿಗೆ ಸರಕಾರದಿಂದ ಮಂಜೂರಾದ ಪಾಟಿ ಪುಸ್ತಕಗಳನ್ನು ಹಂಚಲಾಯಿತು. **ಶ್ರೀ ಗುರುನಾಥ ದೇವಜಿ ದೇಶಪಾಂಡೆ** ಇವರು ರೂ. ೫ ಗಳ ಟೊಪ್ಪಿಗೆಗಳನ್ನು ಬಡ ವಿದ್ಯಾರ್ಥಿಗಳಿಗೆ ಹಂಚಿದರು.

ಗೊಜನೂರ— ೨:— (ಶಿರಹಟ್ಟಿ) ಇಲ್ಲಿಯ ಶಾಲೆಯಿಂದ ಪಾಸಾಗಿ ಹೋದ ಕುಮಾರ ಕೃಷ್ಣಮೂರ್ತಿ ತಂಗೋಡ ಈತನು ಕರ್ನಾಟಕದ ವಿಶ್ವವಿದ್ಯಾಲಯದ ಬಿ.ಎ. (ಆನರ್ಸ) ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಮೊದಲಿಗನಾಗಿ ಉತ್ತೀರ್ಣನಾದ ಬಗ್ಗೆ ಸತ್ಕಾರ ಸಮಾರಂಭವನ್ನು ಮಾಡಲಾಯಿತು.

ಯಮಕನಮರಡಿ ೨:– ಇಲ್ಲಿಯ ಜೀವನ ಶಿಕ್ಷಣ ಶಾಲೆಯಲ್ಲಿ ದ. ಭಾ. ಹಿಂದೀ ಪ್ರಚಾರ ಸಭೆಯ ಪ್ರಮಾಣ ಪತ್ರಗಳ ವಿತರಣ ಸಮಾರಂಭವು ಹುಣಸಿಕೊಳ್ಳದ ಮಠದ ಸ್ವಾಮಿಗಳ ಅಮೃತ ಹಸ್ತದಿಂದ ನೆರವೇರಿಸಲ್ಪಟ್ಟಿತು. ಮತ್ತು ಪ್ರಾಥಮಿಕ ಶಾಲಾ ಪ್ರಮಾಣ ಪತ್ರಗಳನ್ನು **ಶ್ರೀ ಎನ್. ಕೆ. ಇಂಚಲ**ರವರ ಹಿರಿಯತನದಲ್ಲಿ ಹಂಚಲಾಯಿತು.

ಬಟ್ಟೂರ— ೪:— (ಶಿರಹಟ್ಟಿ) ಇಲ್ಲಿಯ ಗ್ರಾಮಪಂಚಾಯತಿಯ ಸರಪಂಚರು ಹಾಗೂ ಶಾಲಾ ಸಮಿತಿಯ ಚೇರಮನ್ನರ ಕಡೆಯಿಂದ ಹಿಂದುಳಿದ ಹಾಗೂ ಬಡ ಮಕ್ಕಳಿಗೆ ೪೦ ಪಾಟಿ ಮತ್ತು ೪೦ ಪುಸ್ತಕಗಳನ್ನು ಹಂಚಿಸಲಾಯಿತು.

ಬಿದರಹಳ್ಳಿ— ೪:— (ಗದಗ) ಇಲ್ಲಿಯ ಕನ್ನಡ ಗಂ. ಶಾಲೆಯ ವತಿಯಿಂದ ಪ್ರಾರಂಭಿಸಲ್ಪಟ್ಟ ಸಮಾಜ ಶಿಕ್ಷಣ ವರ್ಗದ ಉದ್ಘಾಟನಾ ಸಮಾರಂಭವು **ಶ್ರೀ ಗುರುಬಸಪ್ಪಣ್ಣ ಯಳಮಲಿ** ಇವರ ಹಿರಿಯತನದಲ್ಲಿ ನಡೆಯಿತು.

ಇಳಕಲ್ಲ— ೫:— ಇಲ್ಲಿಯ ಸುಪ್ರಸಿದ್ಧ ಶೀರೆಯ ವ್ಯಾಪಾರಿಗಳಾದ **ಶ್ರೀ ನಾಗಪ್ಪ ಸಪ್ಪರದ** ಇವರು ಉರ್ದು ಗಂಡು ಮಕ್ಕಳ ಸಾಲೆಗೆ ಕಲ್ಲು ಫರಸಿ ಮಾಡಿಸಲು ರೂಪಾಯಿ ೧೦೦ ಗಳ ಕಾಣಿಕೆ ಇತ್ತಿರುವರು.

ಹುಯಿಲಗೋಳ ೫:– ಇಲ್ಲಿಯ ಕನ್ನಡ ಶಾಲಾ ಗುರುಗಳು ಪಾಲಕರ ದಿನವನ್ನಾಚರಿಸಿದರು. ಆಗ ಶ್ರೀ ಬಿ. ಪಿ. ಪಾಟೀಲ ಇವರಿಂದ ಸ್ಕೂಲಬೋರ್ಡದಿಂದ ಫುಕ್ಕಟೆ ದೊರೆತ ೨೨ ಪಾಟಿ ೨೨ ಪುಸ್ತಕಗಳು ಹಂಚಲ್ಪಟ್ಟವು.

ಜಮಖಂಡಿ— ೬:— ಇಲ್ಲಿಯ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ **ಶ್ರೀ ಪಿ. ಎ. ಗುಡಿಸಾಗರ** ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿ **ಶ್ರೀ ಕೆ. ಎ. ಗಾಜರೆ** ಇವರು ಬಿ. ಸಿ. ಜಿ. ಚುಚ್ಚುಮದ್ದು

ಹಾಗೂ ವಿಜಾಪೂರ ಜಿಲ್ಹಾ ಸಹಕಾರಿ ಉಳಿತಾಯ ಸಂಘ ಇವುಗಳ ಮಹತ್ವವನ್ನು ಕುರಿತು ಮಾತನಾಡಿದರು. ಇತರ ಪ್ರಾಧ್ಯಾಪಕರು ಅವಶ್ಯಕತೆಯನ್ನೂ ಮಹತ್ವವನ್ನೂ ಕುರಿತು ಮಾತನಾಡಿದರು.

ನಿಂಬಾಳ— ೧೦:— ಶ್ರೀ ಪಾವಟಿ ಚಿನ್ನಪ್ಪನವರ ಹಿರಿತನದಲ್ಲಿ ಗ್ರೂಪ್ ಶಿಕ್ಷಕರ ಸಭೆ ಸೇರಿ ಅಭ್ಯಾಸ ಪತ್ರಿ ವೇಳಾಪತ್ರಿಕೆ ಬಗೆಗೆ ಚರ್ಚಿಸಲಾಯಿತು. ರಾತ್ರಿ **ಶ್ರೀ ನಾಡಗೌಡ** ಅವರ ಅಧ್ಯಕ್ಷ ಯಲ್ಲಿ ಪ್ರೌಢರ ಹಾಗೂ ಶಾಲಾ ಬಾಲಕರ ಮನರಂಜನ ಕಾರ್ಯಕ್ರಮುಗಳು ಜರುಗಿದವು

ಕೆರಡೀಕೊಪ್ಪ ೧೧:— (ಹುಬ್ಬಳ್ಳಿ) ಇಲ್ಲಿಯ ಶಾಲೆಯಲ್ಲಿ ಇಂದು ಊರ ಜನರ ಸಹಾಯ ಧನದಿಂದ ಶ್ರೀ ಬಸವೇಶ್ವ ವಾಚನಾಲಯವು ಸ್ಥಾಪಿತವಾಯಿತು. ಇವರಲ್ಲಿ ಶ್ರೀ ಲ. ಫ. ಹುಬ್ಬಳ್ಳಿ ಇವರು ೧೧ ರೂ. ಕೊಡುವ ವಾಗ್ದಾನ ಮಾಡಿದರು. ಶ್ರೀಯುತರಾದ **ಕ. ಗೌ. ಧಾರವಾಡ ರೂ** ೫; ಬ. ಪೀ. **ಬಾಬಣ್ಣ**ವರ ರೂ. ೪; ದ್ಯಾ. ರು. ಬಡಿಗೇರ ೨ರೂ; ಹೆ. ಮ. ಮುದ ಗಣ್ಣವರ ೨ರೂ; ದ. ಫ. ಕುಡದರೆಪ್ಪನವರ ೨ರೂ. ರೋಖ ಸಹಾಯ **ಮಾಡಿದ್ದಾ**

ಕುಂದಗೋಳ ೧೨:— ಇಲ್ಲಿಯ ಕ. ಗಂ. ಶಾಲೆಯಲ್ಲಿ **ಶ್ರೀಮಂತ ನಾನಾಸಾಹೇಬ ನಾಡಗೀರ** ಅವ ಹಸ್ತದಿಂದ ಜಿಲ್ಹಾ ಶಾಲಾ ಸಮಿತಿಯಿಂದ ಬಂದ ಪಾಟಿ ಪುಸ್ತಕಗಳನ್ನು ಹಿಂದುಳಿ ಹಾಗೂ ಬಡ ಮಕ್ಕಳಿಗೆ ಹಂಚಲಾಯಿತು.

ಲೋಣಿ— ೧೭:— (ವಿಜಾಪೂರ) ಇಲ್ಲಿಯ ಶಾಲೆಗೆ ತೆರಲಾದ ಬಾನುಲಿ ಹಾಗೂ ಗಡಿಯಾರಗಳ ಉದ್ಘಾಟನೆಯು ಮತ್ತು ರಾಷ್ಟ್ರೀಯ ಮಹಾಪುರುಷರ ಭಾವಚಿತ್ರಗಳ ಅನಾವರಣವು ಇಂದು **ಶ್ರೀ ದುಂಡಪ್ಪಣ್ಣ ಉಪಾಸೆ** ಅವರ ಹಸ್ತದಿಂದ ನೆರವೇರಿತು. ಶಾಲೆಯ ಪ್ರಗತಿಗೆ ಮೆಚ್ಚಿ ಉದ್ಘಾಟಕರು ರೂ ೩೦ ಬೆಲೆ ಬಾಳುವ ಬೆಳ್ಳಿಯ ಶೀಲ್ಡು **ಕೊಡುವದಾಗಿ ತಿಳಿಸಿದರು.**

ಹೆಬ್ಬಾಳ— ೧೮:— (ಶಿರಹಟ್ಟಿ) ಶಾಲಾ ಸಮಿತಿಯಿಂದ ಬಂದ ಪಾಟಿ ಪುಸ್ತಕಗಳನ್ನು ಶ್ರೀ ಎಚ್. ವ್ಹಿ. **ಮುಂಡವಾ** ಇವರ ಹಸ್ತದಿಂದ ಹಂಚಲಾಯಿತು. ಅವರು ಶಾಲೆಗೆ ಧ್ವಜವನ್ನೇರಿಸಲು ಒಂದ ಕಂಬ ಹಾಗೂ ಅದನ್ನು ಕಟ್ಟಿಸಿ ಕೊಡುವ ವಾಗ್ದಾನ ಮಾಡಿದರು. ಶ್ರೀ ಹಾಲಪ್ಪ ನ ಎಡಚಪ್ಪನವರು ಮತ್ತು ಶ್ರೀ ಸಿಂಗಪ್ಪ ಭ. ಕೂರಗುಂದ ಇವರು ಇದೇ ಶಾಲೆಯಿಂ ಪ್ರಥಮ ಶ್ರೇಣಿಯಲ್ಲಿ ಪ್ರಾ. ಶಾ. ಪ್ರ. ಪರೀಕ್ಷೆಯಲ್ಲಿ ಪಾಸಾಗುವ ವಿದ್ಯಾರ್ಥಿಗೆ **ರೂ** ೫ ಹಾಗೂ ರೂ. ೧೦ ಗಳನ್ನು ಬಹುಮಾನವಾಗಿ ಇಟ್ಟಿರುವರು. ಶ್ರೀ ಶಿವರಾಮಪಂ ಜೋಶಿಯವರು ಮಕ್ಕಳಿಗೆ ರೂ. ೨ ಗಳ ಪೇಢೆ ಹಂಚಿದರು.

ಚಿನ್ನಮುಳಗುಂದ ೧೮:— ಇಲ್ಲಿಯ ಶಾಲೆಯಲ್ಲಿ ಹಂಪೆಯ ಶ್ರೀ ವಿದ್ಯಾರಣ್ಯ ಪೀಠದ ಗುರುಗಳಾದ ಶ್ರೀ ಶ್ರೀ ಶಿವಪ್ಪಯ್ಯನವರು ಮಹಾಪುರುಷರವರ ಅಧ್ಯಕ್ಷತೆಯಲ್ಲಿ ಹಿಂದುಳಿದ ಹಾಗೂ **ಬಡ ಮಕ್ಕ**ಳಿಗೆ ಪಾಟಿ ಪುಸ್ತಕಗಳನ್ನು ಹಂಚಲಾಯಿತು.

ಮಕುದ್ದೇಬಿಹಾಳ ೧೮:— ಇಲ್ಲಿಯ ಉರ್ದು ಸಾಲೆಯಲ್ಲಿ ಪ್ರಾ. ಶಾ. ಪ್ರ. ಪರೀಕ್ಷೆಯ ಉತ್ತಮ ಪರಿಣಾಮ ಬಗ್ಗೆ ಸಭೆ ಸೇರಿದಾಗ **ಶ್ರೀ ಸಂಗಪ್ಪ ಚಿನಿವಾರ** ಇವರು ಶಾಲೆಯ ಫರ್ಸಿ ಮಾಡಿಸಲು ಒಪ್ಪಿದರು. **ಶ್ರೀ ಬಸಪ್ಪ** ಕೋಲಿ ಒಂದು ಘಡಿಯಾರವನ್ನು **ಶ್ರೀ ಎಸ್. ಎನ್. ಜಿರ್ಲಿ**ಯವರು ಒಂದು ಘಂಟೆಯನ್ನು ಕೊಟ್ಟರು. **ಶ್ರೀ ಗೋಕಾಕ ಶೇದಜೀಯವರು** ಕನ್ನಡ ಶಾಲೆಗೆ ರೂ. ೨೦೧ ಹಾಗೂ ಇತರ ಮಹನಿಯರು **ರೂ.** ೩೫೦ ದೇಣಿಗೆ ಕೊಟ್ಟರು.

ಹೂವಿನಶಿಗ್ಲಿ ೧೮:— (ಶಿಗ್ಗಾಂವ) **ಶ್ರೀ ರಾಯಪ್ಪನವರು** ಅವರ ಹಿರಿಯತನದಲ್ಲಿ ಶಾಲೆಯ ಬಾಲಕರಿಗಾಗಿ ಸಹಕಾರಿ ಅಂಗಡಿಯನ್ನು ಉದ್ಘಾಟಿಸಲಾಯಿತು.

ಇಲಾಳ— ೧೮:— (ಹುನಗುಂದ) ಶ್ರೀ ಎಸ್. ಕೆ. ಖೋದಾನಪೂರ ಅವರ ಹಿರಿಯತನದಲ್ಲಿ ವಿದ್ಯಾರ್ಥಿಗಳ ಹಾಗೂ ಪ್ರೌಢರ ವಿವಿಧ ವಿನೋದಾವಳಿಗಳು ಜರುಗಿದವು.

ತಮದಡ್ಡಿ— ೧೯:— (ಮುದ್ದೇಬಿಹಾಳ) ಇಲ್ಲಿಯ ಶಾಲೆಯಿಂದ ಪ್ರಾ. ಶಾ. ಪ್ರ. ಪರೀಕ್ಷೆಗೆ ಕುಳಿತ ೧೧ ವಿದ್ಯಾರ್ಥಿಗಳಲ್ಲಿ ೭ ವಿದ್ಯಾರ್ಥಿಗಳು ಪಾಸಾಗಿರುವರು. ಹೆಡ್ ಮಾಸ್ತರರಾದ ಶ್ರೀ ಲಿಂ. ಸಿ. ಹಿರೇಮಠ ರವರು ವರ್ಗದ ಶಿಕ್ಷಕರಿದ್ದರು.

ಶ್ರೀ ಅಯ್ಯನಗೌಡ ಹೊರಪ್ಯಾಟಿ ಇವರ ಹಸ್ತದಿಂದ ವನಮಹೋತ್ಸವ ನಿಮಿತ್ತ ಗಿಡಗಳನ್ನು ನೆಡುವ ಕಾರ್ಯಗಳು ಜರುಗಿದವು.

ಶಿರಶಾಡ— ೨೧:— (ಇಂಡಿ) ಇಲ್ಲಿಯ ಕ. ಹೆ. ಮ. ಶಾಲೆಯಲ್ಲಿ ಕುಮಾರಿ ಬಿ. ಬಿ. ಶಿಗ್ಲಿ ಸಮಾಜ ಶಿಕ್ಷಣ ಸಂಘಟಕರು, ಇಂಡಿ ಅವರ ಅಧ್ಯಕ್ಷತೆಯಲ್ಲಿ ಗ್ರೂಪ್ ಮೀಟಿಂಗ ಸೇರಿ ಹೊಸ ಅಭ್ಯಾಸ ಪತ್ರಿಕೆ ಕುರಿತು ಚರ್ಚಿಸಲಾಯಿತು.

ಗುತ್ತಲ— ೨೧:— (ಹಾವೇರಿ) ಶ್ರೀ ಸಂಗಪ್ಪ ಬ. ಆರೇಮಲ್ಲಾಪೂರ, ಸ್ಥಾನಿಕ ಸ್ಕೂಲ ಕಮೀಟಿ ಚೇರಮನ್ ಇವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಕನ್ಯಾ ಶಾಲೆಯಲ್ಲಿ ಹಿಂದುಳಿದ ಹಾಗೂ ಬಡ ವಿದ್ಯಾರ್ಥಿಗಳಿಗೆ ಪಾಟಿ ಪುಸ್ತಕಗಳನ್ನು ಹಂಚಲಾಯಿತು.

ಗುಡೂರ— ೨೨:— **ಶ್ರೀ ಎಸ್. ಎಸ್. ಹಿರೇಮಠ** ಅಮೀನಗಡದ ಮಾಧ್ಯಮಿಕ ಶಾಲೆಯ ಹೆಡ್ ಮಾಸ್ತರರ ಅಧ್ಯಕ್ಷತೆಯಲ್ಲಿ ಪಾಲಕರ ದಿನವನ್ನು ಆಚರಿಸಲಾಯಿತು. ಈ ಸಭೆಯಲ್ಲಿ **ಶ್ರೀ ಜಂಪಣ್ಣ ಜಿತೂರಿ** ಇವರು ತಮ್ಮ ತಾಯಿಯ ಸ್ಮರಣಾರ್ಥವಾಗಿ ರೂ. ೮೦ ಗಳ ಒಂದು ದೊಡ್ಡ ಗಡಿಯಾರವನ್ನೂ, ಗ್ರಾಮಪಂಚಾಯತಿಯವರು ೧ ನೀರಿನ ಟಾಕಿ, ೧ ಬಕೆಟ್ಟು, ೧ ಬಿಂದಿಗೆ, ೧ ತಂಬಿಗೆ, ೪ ವಾಟಿ ಮತ್ತು ಒಂದು ದೊಡ್ಡ ಕನ್ನಡಿಯನ್ನೂ **ಶ್ರೀ ಶ್ರೀಕಾಂತಸಾ ಪಾಟೀಲರು** ೧೦ ಪಾಟಿಗಳನ್ನು ಶಾಲಾ ಮಕ್ಕಳ ಉಪಯೋಗಕ್ಕಾಗಿ ಕೊಟ್ಟರು.

ಸವನಹಳ್ಳಿ— ೨೩:— ಇಲ್ಲಿಯ ಶಾಲೆಯಲ್ಲಿ ಶ್ರೀ ಸರಸ್ವತಿ ಪೂಜೆಯನ್ನು ಅತಿ ವಿಜೃಂಭಣೆಯಿಂದ ನೆರವೇರಿಸಲಾಯಿತು. ಶ್ರೀ ವೆಂ. ಜಿ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ೫ ರಿಂದ ೭ನೆಯ ಇಯತ್ತೆಗಳ ವಿದ್ಯಾರ್ಥಿಗಳ ವಾದವಿವಾದ ಮಂಡಳವನ್ನು ಉದ್ಘಾಟಿಸಲಾಯಿತು. "ಹಳ್ಳಿ ಮತ್ತು ಪಟ್ಟಣದ ಜೀವನಗಳ ಮೇಲ್ಮೆ" ಕುರಿತು ನಡೆದ ಚರ್ಚೆಯಲ್ಲಿ ೧೬ ಬಾಲಕರು ಭಾಗವಹಿಸಿದ್ದರು.

ಕತಕನಹಳ್ಳಿ ೨೩:— ಶ್ರೀ ಶಾರದಾ ಮಹೋತ್ಸವವನ್ನು ಇಲ್ಲಿಯ ಶಾಲೆಯ ಬಾಲಕರು ಊರ ಹಿರಿಯರೊಡನೆ ಒಳ್ಳೇ ವಿಜೃಂಭಣೆಯಿಂದ ಆಚರಿಸಿದರು. ಇದೇ ಕಾಲಕ್ಕೆ ಬಡ ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗೆ ಊರ ಹಿರಿಯರಿಂದ ಪಾಟಿ ಪುಸ್ತಕಗಳನ್ನು ಹಂಚಲಾಯಿತು. ರಾತ್ರಿ ಶ್ರೀ ಎಸ್. ಎಸ್. ಬಗಲಿಯವರು ಬರೆದ (೧) ನಾಗನ ಪೂಜೆ (೨) ಬೀರನ ಹೇಳಿಕೆ ಎಂಬ ಏಕಾಂಕ ನಾಟಕಗಳನ್ನು ಅಭಿನಯಿಸಿದರು.

ಮೂಡಲಗಿ ೨೩:— (ಗೋಕಾಕ) ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದೊಡಗೂಡಿ ಶ್ರೀ ಶಾರದಾಂಬೆಯ ಪೂಜಾ ಮಹೋತ್ಸವವನ್ನು ನೆರವೇರಿಸಲಾಯಿತು. ಶಾಲಾ ಮಕ್ಕಳಿಂದ "ಮನಿಹಾಳ ವಕೀಲರು", "ಅಜ್ಞಾನದ ಅದ್ಭುತ" ಏಕಾಂಕ ಪ್ರಹಸನಗಳನ್ನು ಆಡಿ ತೋರಿಸಲಾಯಿತು.

ಅಮಲಝರಿ ೨೩;— (ಬೀಳಗಿ) ಇಲ್ಲಿಯ ಶಾಲೆಯಲ್ಲಿ ಶ್ರೀ ಶಾರದಾ ದೇವಿಯ ಪೂಜೆಯನ್ನು ಶಿಕ್ಷಕರು ವಿದ್ಯಾರ್ಥಿಗಳು ಊರ ಪ್ರತಿಷ್ಠಿತ ಜನರೊಂದಿಗೆ ಮಾಡಿದರು.

ಬಾಗಲಕೋಟೆ ೨೪:— ಇಲ್ಲಿಯ ೨ನೆಯ ಉರ್ದು ಗಂಡು ಮಕ್ಕಳ ಶಾಲೆಯಲ್ಲಿ ಬಾಗಲಕೋಟೆಯ ಭಾಗದ ಪ್ರಾಂತ ಆಫೀಸರರ ಅಧ್ಯಕ್ಷತೆಯಲ್ಲಿ ವನಮಹೋತ್ಸವವನ್ನು ಒಳ್ಳೇ ವಿಜೃಂಭಣೆಯಿಂದ ಆಚರಿಸಲಾಯಿತು.

ಗೊಲಗೇರಿ– ೨೫:— (ಸಿಂದಗಿ) ಹೊಸದಾಗಿ ಕಟ್ಟಲ್ಪಟ್ಟ ಶಾಲೆಯ ಕಟ್ಟಡದ ಉದ್ಘಾಟನಾ ಸಮಾರಂಭವು ಶ್ರೀ. ಸಿ. ಜೆ. ಅಂಬಲಿ ಅಧ್ಯಕ್ಷರು, ಕೆ. ಪಿ. ಸಿ. ಸಿ. ಇವರ ಅಮೃತ ಹಸ್ತದಿಂದ ನೆರವೇರಿಸಲ್ಪಟ್ಟಿತು. ಶ್ರೀ ಆರ್. ಎಸ್. ಬುಲಗೌಡರು ಅಧ್ಯಕ್ಷತೆ ವಹಿಸಿದ್ದರು. ಪ್ರಾ. ಬಿ. ಟಿ. ಹಾಗೂ ಎಚ್. ಟಿ. ಸಾಸನೂರ, ಲಗಳಿ ಮತ್ತು ರಾಮಾಚಾರ್ಯ ಇ. ಯವರು ವಿವಿಧ ವಿಷಯಗಳ ಮೇಲೆ ಮಾತನಾಡಿದರು- **ಶ್ರೀ ಹೊಳೆಪ್ಪ ಮಹಲಿಂಗಪ್ಪ ಹುರಕಡ್ಲಿ** ಇವರು ರೂ. ೮೦ ಬೆಲೆ ಬಾಳುವ ೧ ಘಡಿಯಾರ ಹಾಗೂ ರೂ. ೧೭-೫-೦ಯ ೧ ಝೂಂಗಟಿಯನ್ನು ಉದಾರ ಕಾಣಿಕೆಯಾಗಿ ಶಾಲೆಗೆ ಅರ್ಪಿಸಿದರು. ಶ್ರೀ ಬಾಳಪ್ಪ ಹುಕ್ಕೇರಿ ಇವರಿಂದ ಗಾಯನ ಹಾಗೂ ವಂದೇ ಮಾತರಮ್ ಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಹಾಳಕುಸುಗಲ್ಲ:— (ನವಲಗುಂದ) ಈ ಶಾಲೆಯಿಂದ ಪ್ರಾಥಮಿಕ ಶಾಲಾ. ಪ್ರಮಾಣ ಪತ್ರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ೫ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಹಂಚಲಾಯಿತು.

ಅಬ್ಬಿಗೇರಿ— ೨೭:— (ರೋಣ) ಡಾ. ಎಸ್. ಎಸ್. ಪಾಟೀಲರ ಹಿರಿಯತನದಲ್ಲಿ ೧೪ ಪ್ರಾಥಮಿಕ ಶಾಲಾ ಪ್ರಮಾಣ ಪತ್ರಗಳನ್ನು ಹಂಚಲಾಯಿತು. ನೂರಕ್ಕೆ ನೂರರಷ್ಟು ಪರಿಣಾಮಕ್ಕೆ ಕಾರಣರಾದ ಶ್ರೀ ಕಂ. ಮು. ಜಾಲಿಹಾಳ ವರ್ಗದ ಶಿಕ್ಷಕರಿಗೆ **ರೂ. ೫** ಗಳನ್ನು ಅಧ್ಯಕ್ಷರು ಬಹುಮಾನ ಕೊಟ್ಟರು.

ಕಡಿವಾಲ— ೨೮:— (ಹುನಗುಂದ) ಶ್ರೀ ಎಸ್. ಕೆ. ಖೋದಾನಪೂರ ಅವರ ನೇತೃತ್ವದಲ್ಲಿ ಇಲ್ಲಿಯ ಚಾವಡಿಯಲ್ಲಿ ಶಾಲಾ ಬಾಲಕರಿಂದ ಹಾಗೂ ಪುರ ಜನರಿಂದ ಮನರಂಜನ ಕಾರ್ಯಕ್ರಮಗಳು ನಡೆದವು. ಸಭೆಯ ನಂತರ **ವಿದ್ಯಾರ್ಥಿ ವಾಚನಾಲಯ** ವನ್ನು ಸ್ಥಾಪಿಸುವದನ್ನು ನಿರ್ಧರಿಸಲಾಯಿತು. ರೂ. ೩೩ ಗಳು ರೋಖು ಕೂಡಿದವು.

ಕಿರಸೂರು— ೨೯:— (ಜಿ. ವಿಜಾಪೂರ) ಇಲ್ಲಿಯ ಜೀವನ ಶಿಕ್ಷಣ ಶಾಲೆಯಲ್ಲಿ ವಿಧಾಯಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಉದ್ದೇಶದಿಂದ ೨೪ ಬಾಲಕರ **ಸ್ವಯಂಸೇವಕ ಪಥಕ**ವನ್ನು ಸ್ಥಾಪಿಸಲಾಯಿತು. ಗ್ರಾಮದ ಬೇರೆ ಬೇರೆ ಭಾಗಗಳಲ್ಲಿ ಪ್ರಾರ್ಥನೆ ಜರುಗಿಸಿ ಅದರ ಬಗ್ಗೆ ಶ್ರದ್ಧೆಯನ್ನು ಹೆಚ್ಚಿಸಲು **ಪ್ರಾರ್ಥನೆ ಸಮಾಜ**ದ ಯೋಜನೆಯನ್ನೂ ಶ್ರೀ ನಾಗನಗೌಡರು ಪಾಟೀಲ ಅವರ ಹಿರಿಯತನದಲ್ಲಿ ಅಂಗೀಕರಿಸಲಾಯಿತು.

ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಕ್ಕೆ ಮೂಲ ಶಿಕ್ಷಣ ಪರಿಶೀಲನಾ ಸಮಿತಿಯ ಸಂದರ್ಶನ

ದಿನಾಂಕ: ೧೧—೭—೧೯೫೫

ಸಮಿತಿಯ ಸದಸ್ಯರೊಂದಿಗೆ ಮುಂಬಯಿ ರಾಜ್ಯದ ಹಾಗು ಸ್ಥಾನಿಕ ಶಿಕ್ಷಣಾಧಿಕಾರಿಗಳು.

ಸಮಿತಿಯ ಅಧ್ಯಕ್ಷರು ವನಮಹೋತ್ಸವದ ಉದ್ಘಾಟನೆ ಮಾಡುತ್ತ ಗಿಡ ನೆಡುವದು.

ಸಮಿತಿಯ ಅಧ್ಯಕ್ಷರು ಪ್ರ್ಯಾ. ಸ್ಕೂಲಿನಲ್ಲಿ ಗಿಡವನ್ನು ನೆಡುತ್ತಿರುವದು.

Regd. No. B.

ಜ ಸಾಹಿತ್ಯ ! ★ ಜ್ಞಾನರಸ ಸಾಹಿತ್ಯ ★ ಶಾಶ್ವತ ;

ಮಾಸಿದ ತಲೆಯನ್ನು ಮಡಿಮಾಡುವ ಪವಿತ್ರ ಸಾಹಿತ್ಯ !!

ಪ್ರತಿಯೊಂದು ವಾಚನಾಲಯದ ಬೆಲೆಯನ್ನು ಹೆಚ್ಚಿಸುವ ಪ್ರಭಾವೀ ಗ್ರಂಥಗಳು.

ಪವಿತ್ರ ಜೀವನ (ಟಾಲಸ್ಟಾಯರ ಜಗತ್ಪ್ರಖ್ಯಾತ ಕಥಾಸಂಗ್ರಹ) .... [illegible]
ಸುಂದರ ಕಥೆಗಳು (ಪಾಂಡಿಚೇರಿ ಆಶ್ರಮದ ಶ್ರೀ ತಾಯಿಯವರು ಹೇಳಿದವು) .... [illegible]
ಸಪ್ತಪದಿ (ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಏಕಾಂಕಗಳು) .... [illegible]
ದೀಪವರ್ತಿ (ಶ್ರೀ ಅರವಿಂದರ ೭ ಉಜ್ವಲ ಕಥೆಗಳು) ....
ಶ್ರೀ ಅರವಿಂದರು (ಅಂತರ್ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಸತ್ಯ [illegible]) ..
ಮುಗಿಲ ಜೀವನ (ಉತ್ಸಾಹದಾಯಕವಾದ ಕವನ ಸಂಕಲನ) .. .. [illegible]
ಪೂಜಾ (ನಿತ್ಯ ಪಠಣೀಯವಾದ ಗದ್ಯಗೀತೆಗಳು) .... [illegible]
ಭಾರತದ ಭವಿಷ್ಯತ್ತು (ನೂತನ ದೃಷ್ಟಿದಾಯಕವಾದ ಇತಿಹಾಸ [illegible]) .... [illegible]
ಬಿಚ್ಚಿದ ಹೊಳೆ (ಪ್ರಗತಿಗಾಮಿಯಾದ ಕಾದಂಬರಿ) .... [illegible]
ಸ್ವರ್ಗದೋಲೆಗಳು (ಕರ್ನಾಟಕ ಸಂಸ್ಕೃತಿಯ ಕನ್ನಡಿ) .... [illegible]
ಕನ್ನಡ ಕುಲದೀಪ ಬಸವಣ್ಣ (ಉದಿತ ಜೀವನಕ್ಕೆ ಕೈಗೋಲು) .... [illegible]
ಗರತಿಯ ಬಾಳು (ನಿತ್ಯ ಜೀವನದ ರಸಘಟ್ಟಿ) .... [illegible]
ಆರ್ಯಮಹಿಳಭಕ್ತಿ (ಧ್ಯೇಯ ಜೀವಿಗೆ ಊರುಗೋಲು) .... [illegible]
ಜೀವನ ದೃಷ್ಟಿ (ವಿವಿಧ ಪ್ರಬಂಧಗಳು) .... [illegible]
ದಿವ್ಯ ಸಾಹಿತ್ಯ (ಶ್ರೀ ಬೇಂದ್ರೆ ಸಾಹಿತ್ಯ ಪರಿಚಯ) .... [illegible]

ಇವಲ್ಲದೆ ಶ್ರೀ ಅರವಿಂದ ಮಹಾಯೋಗಿಗಳ ವಿವಿಧ ಸಾಹಿತ್ಯ ಗ್ರಂಥಗಳೂ ನಮ್ಮಲ್ಲಿ [illegible] ಸಿಗುತ್ತ[illegible] [illegible]ಗಿಂತ ಹೆಚ್ಚಿನ ಬೆಲೆಯ ಪುಸ್ತಕ ಕೊಂಡುಕೊಳ್ಳುವವರ ಅಂಚೆ ವೆಚ್ಚವನ್ನು ನಾವೇ ನೋಡಿಕೊಳ್ಳುವೆವು.

ಶ್ರೀ ಅರವಿಂದ ಗ್ರಂಥಾಲಯ [illegible] ಚದಚಣ [illegible]

— ಪ್ರತಿಯೊಬ್ಬ ಕನ್ನಡ ವಿದ್ಯಾರ್ಥಿಯೂ ಕಾದಿಡಬೇಕಾದ ಕೃತಿಗಳು —

ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥ ತೆರೆ[illegible]

ಭಾರತೀ ಸಾಹಿತ್ಯ ಭಂಡಾರ ಯರನಾ[illegible]

ಅವರಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ತಯಾರ

'ಜನರಲ್' ಕಥೆ-ಕವನ ಸಂಕಲನಗಳು ನಾಡಿನ [illegible] ಕೃತಿಗಳು [illegible]
ಮೊರೆಯುವ ಕೃತಿಗಳು ಮತ್ತೆ ಬೇರಿಲ್ಲ. ಹೊಸ ಪ್ರಯೋಗ

ನೆಕಲ್ಲು [ಕಥಾಸಂಕಲನ] ಭಾಗ ೧ .... ೦—[illegible]—೦ ಪುಟಚೆಂಡು [ಕವಿತಾ ಸಂಕಲನ] ಭಾಗ ೧....೦
೧ ರಿಂದ ೪ ವರ್ಗಗಳಿಗಾಗಿ ೪೦ ಜನರ ಕಥೆಗಳು [illegible] ರಿಂದ [illegible] ವರ್ಗಗಳಿಗಾಗಿ [illegible] ಜನರ ಕ[illegible]
ನೆಕಲ್ಲು ಭಾಗ ೨ .... ೦ [illegible]—೦ ಪುಟಚೆಂಡು ಭಾಗ ೨ .... ೦
೫ ರಿಂದ ೭ ವರ್ಗಗಳಿಗಾಗಿ ೬೬ ಜನರ ಕಥೆಗಳು. ೫ ರಿಂದ ವರ್ಗಗಳಿಗಾಗಿ ೧೦[illegible] ಜನರ ಕ[illegible]
[illegible]

— [illegible] —

ಭಾರತೀ ಸಾಹಿತ್ಯ ಭಂಡಾರ ಯ[illegible]
ಅಂಚೆ :— ಮನಗೂಳಿ — ಜಿ ವಿ.

Printed by Shri S. F. Kattimani at Manohar Power Printing Press, Hubli. Edited and Pu[illegible] y Sjts S. P. Patil, B.M. Shintri, S. R. Tatti & Smti. P. A. Bhaskar at the Kannada Pra[illegible] hikshan Office, Govt. Training College for Men, Dharwar.